# ಸಿರ್ಯಾ ಸೀಮೆ
# ಜಾನಪದೀಯ ಅಧ್ಯಯನ

**ಡಾ. ಚಿಕ್ಕಣ್ಣ ಯಣ್ಣೆಕಟ್ಟೆ**

**ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ**

ಎಸ್.ಕೆ. ಸಿದ್ದಣ್ಣ ಕಟ್ಟಡ, ಕಾಳಿದಾಸನಗರ,

ಸಿರಾ, ತುಮಕೂರು ಜಿಲ್ಲೆ

Sirya Seeme Janapadeeya Adhyayana - research work by Dr.Chikkanna Yennekatte, Professor and Ph.D. Guide, GFGC, Sira. Published by Gadinada Janapada Samparkadhyana Kendra Pratishtana, Kalidasa Nagara, Sira, Tumkur Dist.

ಮೊದಲ ಮುದ್ರಣ: 2011

ಪುಟ : 269

ಬೆಲೆ : **ರೂ.150-00**

ಹಕ್ಕುಗಳು : ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ

ಪ್ರಕಾಶಕರು : ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ
ಎಸ್.ಕೆ.ಸಿದ್ದಣ್ಣ ಬಿಲ್ಡಿಂಗ್, ಕಾಳಿದಾಸನಗರ
ಸಿರಾ-572137, ತುಮಕೂರು ಜಿಲ್ಲೆ
ದೂ.9945975509, 958135 276243

# ನಮ್ಮ ಸಂಸ್ಕೃತಿ - ನಮ್ಮ ಹೆಮ್ಮೆ

ಸಿರಾ ಸೀಮೆಯ ಸಾಂಸ್ಕೃತಿಕ, ಸಾಹಿತ್ಯಿಕ, ಇತಿಹಾಸ ಇವುಗಳಿಗೆ ವರ್ತಮಾನದ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿರುವ ಗಡಿನಾಡ ಜಾನಪದ ಸಂಪರ್ಕಾಧ್ಯಯನ ಕೇಂದ್ರ, ಬಹು ದೊಡ್ಡ ಸಾಂಸ್ಕೃತಿಕ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಸಮೃದ್ಧವಾಗಿರುವ ಜಾನಪದ ಸಂಸ್ಕೃತಿ, ಸಾಹಿತ್ಯ ಪರಂಪರೆ, ಐತಿಹಾಸಿಕ ಹಿನ್ನೆಲೆಯ ಸಿರಾ ಸೀಮೆಗೆ ಚಾರಿತ್ರಿಕವಾಗಿಯೂ ಮಹತ್ವವಿದೆ. ಈ ಬಗೆಯ ಮಹತ್ವದ ಸಂಗತಿಯನ್ನು ಸಮಕಾಲೀನ ಸಂದರ್ಭದ ಒಳಗೆ ಸಮುದಾಯದೊಂದಿಗೆ ಸಂವಹನಗೊಳಿಸುವ ಕ್ರಿಯೆ ಸುಲಭ ಸಾಧ್ಯವಲ್ಲ. ನಮ್ಮೊಳಗಿನ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ವರ್ತಮಾನದಲ್ಲಿ ನಿಂತು, ಕಳೆದ ಆ ದಿನಗಳತ್ತ ಕಣ್ಣಾಡಿಸಿದರೆ ರೋಮಾಂಚನಗೊಳಿಸುತ್ತದೆ. ಆದರೆ ಆ ಸಂಗತಿಯನ್ನು, ಅದರ ಇತಿಹಾಸ, ಜಾನಪದ ಮಹತ್ವ ತಿಳಿಯಬೇಕಲ್ಲವೆ? ಈ ಬಗೆಯ ಕಳೆದ ಆ ದಿನಗಳ ಸಾಂಸ್ಕೃತಿಕ, ಸಾಹಿತ್ಯಕ, ಐತಿಹಾಸಿಕ ಈ ಮೂರೂ ನೆಲೆಯಲ್ಲಿ ಕೆಲಸ ಮಾಡುತ್ತಾ ಬರುತ್ತಿರುವ, ಸಿರಾದ ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ, ನಮ್ಮೊಳಗಣ ಮಹತ್ವದ ಸಾಂಸ್ಕೃತಿಕ ಸಂಸ್ಥೆ. ಶುದ್ಧ ಸಂಸ್ಕೃತಿ ಸಂವರ್ಧನೆಯ ಈ ಕೇಂದ್ರದ ಕೆಲಸಗಳು ನಾಡು ಮೆಚ್ಚುವಂತಹವು, ಈ ನೆಲದ ಸಂಸ್ಕೃತಿಯ ದೀಪದಂತೆ ಬೆಳಗುತ್ತಿರುವುದು ಅಭಿನಂದನಾರ್ಹ ಸಂಗತಿ.

ಸಿರಾ ಸೀಮೆ ಜಾನಪದ ಸಂಸ್ಕೃತಿಯ ಕಣಜ. ಅಪೂರ್ವ ಜಾನಪದ ಮಹಾಕಾವ್ಯಗಳು ಇಲ್ಲಿನ ಮೌಖಿಕ ಪರಂಪರೆಯಲ್ಲಿ ಪ್ರಕಟವಾಗುತ್ತಿವೆ. ಈ ಎಲ್ಲವೂ ಅಭಿಜಾತ ಪರಂಪರೆಯ ವಾದವುಗಳಾಗಿರುವುದರಿಂದ, ಇಲ್ಲಿನ ಹಾಡುವ ಕಲೆ ಬಹುತೇಕ ಅನಕ್ಷರಸ್ಥರದ್ದೇ ಆಗಿರುವುದರಿಂದ ಇವರನ್ನು ಕೇಳುವ, ಅವರ ಸಾಹಿತ್ಯ, ಸಂಸ್ಕೃತಿಯನ್ನು ದಾಖಲಿಸುವ ಕಯಾಲಿ ಯಾರಿಗಿರುತ್ತದೆ? ಇಂಥ ವಿರಳ ಸಂದರ್ಭದ ಒಳಗೆ ಗಡಿನಾಡ ಜಾನಪದ ಕೇಂದ್ರ ಹಲವಾರು ಜಾನಪದ, ಚರಿತ್ರೆ, ಸಂಸ್ಕೃತಿಯ ಗ್ರಂಥಗಳನ್ನು ಪ್ರಕಟಿಸಿದೆ. ಹಾಗಾಗಿ ಏಕಕಾಲದಲ್ಲಿ ಕಲಾ ಸಂಘಟನೆ, ಸಂಸ್ಕೃತಿ ಪ್ರಸಾರ, ಪ್ರಕಟಣೆಯ ಕಡೆಗೂ ಗಮನ ಹರಿಸಿ ಮಹತ್ವದ ಗ್ರಂಥಗಳನ್ನು ಪ್ರಕಟಿಸಿದೆ. ಮಾತ್ರವಲ್ಲ ಇಲ್ಲಿ ಪ್ರಕಟವಾದ ಗ್ರಂಥಗಳು ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿರುವುದಲ್ಲದೆ, ತನ್ನ ಶ್ರೇಷ್ಠತೆಯನ್ನೂ ಕಾಯ್ದುಕೊಂಡಿವೆ. ಈ ಕೇಂದ್ರ ಪ್ರಕಟಿಸಿದ ಪುಸ್ತಕಗಳಿಗೆ, ಪ್ರತಿಷ್ಠಿತ ಜಾನಪದ ಅಕಾಡೆಮಿಯ ಶ್ರೇಷ್ಠ ಪುಸ್ತಕ ಬಹುಮಾನವೂ ಸೇರಿದಂತೆ, ಹಲವು ಗೌರವಕ್ಕೆ ಪಾತ್ರರಾಗಿರುವುದು ಹೆಮ್ಮೆಯ ಸಂಗತಿಯಾಗಿದೆ. ಈ ಮೂಲಕ ಗಡಿನಾಡ ಜಾನಪದ ಕೇಂದ್ರ. ಕರ್ನಾಟಕದ ಪ್ರಮುಖ ಸಂಸ್ಕೃತಿ ಸಂವರ್ಧನೆಯ ಕೇಂದ್ರವಾಗಿಯೂ ಕಾರ್ಯ ನಿರ್ವಹಿಸುತ್ತಿರುವುದು ಪ್ರಶಂಸಾರ್ಹ

ಕೆಲಸವಾಗಿದೆ.

2009-10 ನೇ ಸಾಲಿನ ದಶಮಾನೋತ್ಸವದ ಅಂಗವಾಗಿ ಪ್ರತಿ ವರ್ಷ ಹಿರಿಯ ಕಲಾವಿದರೊಬ್ಬರಿಗೆ, ಅದರಲ್ಲೂ ತನ್ನ ಹೆಸರಿಗೆ ತಕ್ಕಂತೆ ಗಡಿನಾಡಿನ ಕಲಾವಿದರಿಗೆ ಮೀಸಲಿಟ್ಟಂತೆ, ಗಡಿನಾಡ ಕಲಾಸಂಪನ್ನ ಪ್ರಶಸ್ತಿ ನೀಡುತ್ತಿರುವುದು ಈ ಕೇಂದ್ರದ ಜನ ಮೆಚ್ಚುವ ಕೆಲಸವಾಗಿದೆ. 'ಕೆರೆಯ ನೀರನು ಕೆರೆಗೆ ಚೆಲ್ಲಿ' ಅನ್ನುವಂತೆ, ಈ ಕೇಂದ್ರಕ್ಕೆ ಪುಸ್ತಕ ಪ್ರಕಟಣೆ, ಗೌರವ ಪುರಸ್ಕಾರಗಳಿಂದ ಬಂದ ಹಣವನ್ನು ಜನಪದ ಕಲಾಮೇಳ, ಕಲೋತ್ಸವಗಳಿಗೆ ಮೀಸಲಿಡುತ್ತಾ ಕಾರ್ಯನಿರ್ವಹಿಸುತ್ತಾ ಬರುತ್ತಿರುವ ಈ ಕೇಂದ್ರದ ಒಂದು ಜಾತಿ, ವರ್ಗಕ್ಕೆ ಮೀಸಲಾಗದೆ, ಆಸಕ್ತರನ್ನೊಳಗೊಂಡ ಒಂದು ರಾಷ್ಟ್ರೀಯ ಪ್ರತಿಷ್ಠಾನವನ್ನಾಗಿಸಿ, ತುಮಕೂರು ಜಿಲ್ಲೆಯ ಹೆಮ್ಮೆಯ ಜಾನಪದ ಪ್ರತಿಷ್ಠಾನವಾಗಿ, ಪ್ರಜಾಪ್ರಭುತ್ವ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ಅತ್ಯಂತ ಹೆಮ್ಮೆ ಪಡುವ ಸಂಗತಿಯಾಗಿದೆ. ಈ ಮಾತನ್ನು ನಾನು ಸಭೆ, ಸಮಾರಂಭಗಳಲ್ಲಿ ಹಲವು ಬಾರಿ ಹೇಳುತ್ತಾ ಬಂದಿದ್ದೇನೆ. ಈ ಬಗೆಯ ಶುದ್ಧ ಸಂಸ್ಕೃತಿಯ ಪ್ರಸಾರ, ಪ್ರಕಟಣೆ, ಕಲಾ ಸಂಘಟನೆ, ಕಲಾವಿದರಿಗೆ ಒತ್ತಾಸರೆಯಾಗಿ ಕೆಲಸ ಮಾಡುತ್ತಾ, ನಿಜದ ನೆಲೆಯಲ್ಲಿ ಒಂದು ಸೌಹಾರ್ದ ವಾತಾವರಣ ನಿರ್ಮಿಸುತ್ತಾ, ಸ್ಥಳೀಯ ಸಂಸ್ಕೃತಿಯ ಸಂವರ್ಧನೆಯಲ್ಲಿ ತೊಡಗಿಸಿಕೊಂಡಿರುವ, ಗಡಿನಾಡ ಜಾನಪದ ಕೇಂದ್ರದ ಸಾರ್ಥಕ ಬದುಕನ್ನು ಅಭಿನಂದಿಸುತ್ತೇನೆ.

ಸಿರಾ ಸೀಮೆ ಜಾನಪದೀಯ ಅಧ್ಯಯನ, ಹೆಸರೇ ಸೂಚಿಸುವಂತೆ ಈ ತಾಲ್ಲೂಕು ಪರಿಸರದೊಳಗಿನ ಜಾನಪದ ಕಾವ್ಯ, ಕಲೆ, ಸಂಸ್ಕೃತಿ ಗ್ರಾಮ ವಿಕಾಸದೊಳಗೆ ಜಾನಪದ ಮೂಲ ಕಲಾವಿದರು, ಜನಪದ ಆಟ, ಈ ಮೊದಲಾದ ಮೌಲಿಕ ಸಂಗತಿಗಳನ್ನು ತುಂಬಾ ರಸವತ್ತಾಗಿ ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ ಪರಿಚಯಿಸಿದ್ದಾರೆ. ಸಿರಾ ತಾಲ್ಲೂಕಿನ ಜನತೆಗೆ ಸಂಸ್ಕೃತಿಪ್ರಿಯರಿಗೆ, ಅಧ್ಯಾಪಕರಿಗೆ, ಸಂಶೋಧಕರಿಗೆ ಇದೊಂದು ಮಾರ್ಗದರ್ಶಿ ಕೃತಿ ಎಂಬುದು ಹೇಳಲೇಬೇಕಾದ ಮಾತು. ಸದಾ ಸ್ನೇಹಮಯಿ ಚಿಕ್ಕಣ್ಣ ಸೌಹಾರ್ದತೆಗೆ ಸದಾ ತುಡಿಯುವ ಮನುಷ್ಯ. ಆತನ ಸಾಧನೆಯೂ ಹೆಮ್ಮೆ ಪಡುವಂಥದ್ದು. ಈ ಹಿರಿಮೆಗಾಗಿ ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ ಅವರನ್ನು ಅಭಿನಂದಿಸುತ್ತೇನೆ.

***ಟಿ.ಬಿ.ಜಯಚಂದ್ರ,***

*ಶಾಸಕರು, ಹಾಗೂ ಮಾಜಿ ಸಚಿವರು, ಸಿರಾ*

*ಗೌ|| ಅಧ್ಯಕ್ಷರು, ದಶಮಾನೋತ್ಸವ ಆಚರಣಾ ಸಮಿತಿ, ಗಡಿನಾಡ ಜಾನಪದ ಸಂಪರ್ಕ ಅಧ್ಯಯನ ಕೇಂದ್ರ ಪ್ರತಿಷ್ಠಾನ, ಸಿರಾ*

# ಸಿರಾ ಸಂಸ್ಕೃತಿಗೆ ಸುವರ್ಣದ ಚೌಕಟ್ಟು

ಸಂಸ್ಕೃತಿ ಮನುಷ್ಯನ ಅಂತಃಸತ್ವದ ಅಭಿವ್ಯಕ್ತಿ. ಆಂತರಿಕವಾಗಿ ಮನುಷ್ಯನ ಸ್ಥಿತಿಗತಿಗಳನ್ನು ಹೇಳುತ್ತದೆ. ಡಿವಿಜಿಯವರು ಹೇಳುವಂತೆ ಅಂತರಂಗದ ನೆಲೆಯಲ್ಲಿ ಸಂಸ್ಕೃತಿಯನ್ನು ಕಾಣುವ ದೃಷ್ಟಿ ಮತ್ತು ಹಳೆಯ ಆಕೃತಿಗಳ ನಡುವಣ ನೇರ ಸಂಬಂಧದ ಅಂತರಾತ್ಮದ ಶೋಧನೆ ಆಗಿದೆ. ಇಂತಹ ಸಂಸ್ಕೃತಿಯ ಬೀಜ ನಮ್ಮ ಜಾನಪದ ಸಂಸ್ಕೃತಿಯನ್ನೇ ಆವರಿಸಿದೆ. ಮನುಷ್ಯನು, ಕಾಲ ಘಟ್ಟಗಳಲ್ಲಿ ತಮ್ಮದೇ ಆದ ಸ್ವರೂಪಗಳಲ್ಲಿ ಬದುಕಿನ ಸ್ವೋಪಜ್ಞತೆಯನ್ನು ಹೊರಚೆಲ್ಲಿದ್ದಾನೆ.

ಜನರ ಜೀವನ ವಿಚಾರ-ಆಚಾರ, ನಡೆ-ನುಡಿ, ವೇಷ-ಭೂಷಣಗಳು, ಕಲೆಗಳು, ಊಟೋಪಚಾರಗಳು, ಆಟ-ಪಾಠಗಳು, ಹಬ್ಬ-ಹರಿದಿನಗಳು, ಜಾತ್ರೆಗಳು, ಮದುವೆ-ಮುಂಜಿಗಳು, ರೂಢಿ-ಸಂಪ್ರದಾಯಗಳು ಇತ್ಯಾದಿಗಳ ಸಮಗ್ರ ಸಂಗಮವೇ ಜನಪದ ಸಂಸ್ಕೃತಿ.

ಭಾರತದ ಬಹುಮುಖಿ ಸಂಸ್ಕೃತಿಯು ಬಹಳ ಅರ್ಥಗರ್ಭಿತ ಹಾಗೂ ಅಷ್ಟೇ ಸಾರಾಮೃತದಿಂದ ಕೂಡಿದೆ. ಇಲ್ಲಿ ಅನೇಕ ರಾಜಮನೆತನಗಳು, ತಮ್ಮ ತಮ್ಮದೇ ಪ್ರಾದೇಶಿಕ ಆಳ್ವಿಕೆಯಲ್ಲಿ ತಮ್ಮದೇ ಆದ ಕಲೆ, ಸಂಸ್ಕೃತಿಯ ಜೀವನ ಹೆಜ್ಜೆ ಗುರುತುಗಳನ್ನು ಶಾಶ್ವತವಾಗಿ ಬೇರೂರುವಂತೆ ಮಾಡಿವೆ. ಇವು ವಿವಿಧ ಜಾತಿ, ಧರ್ಮ, ಜನ ಸಂಸ್ಕೃತಿಯ ಪ್ರತಿಬಿಂಬಗಳಾಗಿ ಜನಪದ ಸಂಸ್ಕೃತಿಯಲ್ಲಿ ಸೇರಿವೆ. ಕಾಲಾಂತರದಲ್ಲಿ ಸಂಸ್ಕೃತಿಯ ಚಲನಶೀಲತ್ವ ಗುಣ, ವಿಧಾನಗಳಿಂದ, ಜನಜೀವನಗಳಲ್ಲೂ, ಸಂಸ್ಕೃತಿಯಲ್ಲೂ ಬದಲಾವಣೆಯಾಗಿದೆ. ಇದರಲ್ಲೇ ಬದುಕಿನ ಮೂಲಗುಣಗಳ ಚರ್ವಿತಚರ್ವಣ ಹುದುಗಿರುವುದು, ಆ ಭೂತದ ಪಾತ್ರ ಮಾದರಿಗಳೇ ವರ್ತಮಾನದ ಜೀವನ ದಾರಿಯ ಸೋಪಾನಗಳು. ಇಂತಹ ವಿಶಿಷ್ಟ ಸಂಸ್ಕೃತಿ ಜಗತ್ತಿನ ಪರಂಪರೆ ಇಡೀ ವಿಶ್ವ ಸಂಸ್ಕೃತಿಯಲ್ಲೇ ಆಕರ್ಷಣೀಯ ಹಾಗೂ ಆದರಣೀಯವೂ ಕೂಡ ಆಗಿದೆ.

ಅದೇ ರೀತಿ ಕರ್ನಾಟಕ ಜಾನಪದ ಸಂಸ್ಕೃತಿಯೂ ಕೂಡ ಭಾರತೀಯ ಸಂಸ್ಕೃತಿಯಲ್ಲಿ ಉತ್ಕೃಷ್ಟ ಸ್ಥಾನಮಾನ ಪಡೆದಿದೆ. ಕನ್ನಡ ಜನಪದ ಸಂಸ್ಕೃತಿಯು ಜಗತ್ತಿನ ಸಾಹಿತ್ಯ ಸಂಸ್ಕೃತಿಯಲ್ಲಿ ವಿಶಿಷ್ಟತೆ ಪಡೆದಿದೆ. ಇಲ್ಲಿ ರಾಜ-ಮಹಾರಾಜರು, ಮಹಾಕವಿಗಳು, ಸಾಧು-ಸಂತರು, ಕಲಾಕಾರರು, ಕರ್ನಾಟಕ ನಾಡು-ನುಡಿಗೆ ಅಪಾರ ಕೊಡುಗೆ ನೀಡಿದ್ದಾರೆ. ಇಲ್ಲಿನ ಜನಪದ ಜೀವನ ಪರಂಪರೆಯು ಬಹಳ ವೈವಿಧ್ಯಮಯದಿಂದ ಕೂಡಿದೆ.

ಕಾವೇರಿಯಿಂದ ಗೋದಾವರಿಯವರೆಗೆ ಕನ್ನಡ ನಾಡಜನಗಳು ಸರಳ, ಸಜ್ಜನಿಕೆಗೆ ಹೆಸರಾದವರು. ದಾನಧರ್ಮಗಳಲ್ಲಿ ಮುಂಚೂಣಿಯಲ್ಲಿ ಇದ್ದವರು ಉತ್ತಮ ಕಲಾಕಾರರು, ಕಲಾ ಪೋಷಕರೂ ಆಗಿದ್ದರು. ನೀತಿಪಾಠಗಳ ಚಿರಾಮೃತ್ವವನ್ನು ನಾಡಿಗೆ ಧಾರೆ ಎರೆದಿದ್ದಾರೆ.

ಇಂತಹ ಕನ್ನಡ ನಾಡಿನಲ್ಲಿ ಗಂಗರು, ಹೊಯ್ಸಳರು, ವಿಜಯನಗರ ಅರಸರು, ನೊಳಂಬರು, ಮೈಸೂರು ಅರಸರು, ಟಿಪ್ಪು ಸುಲ್ತಾನರು, ಮಧುಗಿರಿ-ಶಿರಾ ನಾಡ ಪ್ರಭುಗಳು, ಪಾಳೆಯಗಾರರು ನೆಲೆಸಿ, ಕಲೆ, ಸಂಸ್ಕೃತಿಗೆ ಉತ್ತಮ ಕೊಡುಗೆ ನೀಡಿರುವ ತುಮಕೂರು ಪ್ರಾಂತ್ಯದ, ಸಿರಾ ಸೀಮೆಯಲ್ಲಿ ಕೂಡ ಜಾನಪದ ಕಲಾ ಸಾಮ್ರಾಜ್ಯದಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಪಡೆದಿದೆ. ಇಂತಹ ಸಾಂಸ್ಕೃತಿಕ ಸಾರ್ವಭೌಮತೆಯ ಪರಾಕಾಷ್ಠೆಯನ್ನು ಮುಗಿಲೆತ್ತರದಷ್ಟು ಬಿಂಬಿಸುವ ಪ್ರಾತಿನಿಧಿಕ ಕೃತಿ ಸಿರಾ ಸೀಮೆಯ ಜಾನಪದೀಯ ಅಧ್ಯಯನ ಆಗಿದೆ. ಒಂದು ಪ್ರದೇಶಿಕತೆಯನ್ನು ಗುರಿಯಾಗಿರಿಸಿಕೊಂಡು, ಅದರ ಸಮಗ್ರ ಚಿತ್ರಣವನ್ನು ಕೊಡುವಲ್ಲಿ ಕೃತಿಕಾರರು ಯಶಸ್ವಿಯಾಗಿದ್ದಾರೆ. ವ್ಯಷ್ಠಿಪ್ರಜ್ಞೆ, ಸಮಷ್ಠಿ ಪ್ರಜ್ಞೆಯಾಗಿ, ಗ್ರಾಮದ, ಸಮಾಜದ, ಜನಾಂಗದ ಜೀವನ ವಿಧಾನ, ಕಲೆಗಳು, ಧಾರ್ಮಿಕ ಆಚರಣೆಗಳು, ಸಂಪ್ರದಾಯಗಳು, ಲೋಕರೂಢಿಗಳು, ಸಾಮಾಜಿಕ ಕಟ್ಟುಪಾಡುಗಳು, ರೀತಿ-ನೀತಿಗಳು, ಒಟ್ಟಾರೆ ಜಾನಪದ ಸಂಸ್ಕೃತಿಯನ್ನು, ಪ್ರಾದೇಶಿಕವಾಗಿ ಸವಿಸ್ತಾರವಾಗಿ ಬಹಳಷ್ಟು ಅರ್ಥಗರ್ಭಿತವಾಗಿ ಈ ಕೃತಿ ಕಟ್ಟಿಕೊಟ್ಟಿದೆ. ಸಿರಾ ಭೂಗೋಳಿಕ ಪರಿಸರದ ಜಾನಪದ ಸಮಸ್ತ ಅಂಶಗಳನ್ನು ಖಚಿತವಾದ ನೆಲೆಯಲ್ಲಿ, ವಿವರಿಸುವ ಈ ಕೃತಿ, ಕರ್ನಾಟಕ ಜಾನಪದ ಸಂಸ್ಕೃತಿಗೆ ಸಿರಾ ಸೀಮೆಯ ಕೊಡುಗೆ ಏನು ಎಂಬುದನ್ನು ಅರ್ಥಪೂರ್ಣವಾಗಿ ವಿವರಿಸಿರುವುದು ಈ ಕೃತಿಯ ವಿಶೇಷವಾಗಿದೆ.

ಸಿರಾ ಸೀಮೆಯ ಇತಿಹಾಸ, ಪರಂಪರೆ, ಅದರ ಹುಟ್ಟು, ಬೆಳವಣಿಗೆಗಳ ವಿಶ್ಲೇಷಣೆಯಿದೆ. ತುಮಕೂರು ಭೌಗೋಳಿಕ ವ್ಯಾಪ್ತಿಯ ಹಿನ್ನೆಲೆಯಲ್ಲಿ ಜಿಲ್ಲೆಯಾಗಿದ್ದು, ನಾನಾ ತಾಲ್ಲೂಕುಗಳಾಗಿ ಅಸ್ತಿತ್ವ ಪಡೆದ ಬಗ್ಗೆ ವಿವರವಿದೆ. ಇದಕ್ಕಿಂತಲೂ ಬಹಳ ಉಪಯುಕ್ತ ಮಾಹಿತಿಯೆಂದರೆ ತಾಲ್ಲೂಕಿನ 485 ಗ್ರಾಮಗಳ ಸ್ಥಳ ಮಹಿಮೆ, ಅದರ ಹಿನ್ನೆಲೆ, ಅದು ಒಳಗೊಂಡ ದೇವರು, ಧರ್ಮ, ಪುರಾಣವ್ಯಕ್ತಿ, ಪ್ರಕೃತಿ, ಜಾತಿ, ವರ್ಗ, ಪ್ರಾಣಿ ಕೇಂದ್ರಿತವಾಗಿ ತನ್ನದೇ ಆದ ಪಾರಂಪರಿಕ, ಸಾಂಸ್ಕೃತಿಕ ಪರಂಪರೆ, ಇತಿಹಾಸಗಳನ್ನು ಸೂಚಿಸುವಂತಹ, ಅಂಶಗಳತ್ತ ವಿಶೇಷ ಬೆಳಕು ಚೆಲ್ಲುತ್ತಿದೆ. ಈ ಬಗೆಯ ತರ್ಕಬದ್ಧ ಹಾಗೂ ವಸ್ತುನಿಷ್ಠ ಚಿಂತನೆಗಳು ಕೃತಿಕಾರರಲ್ಲಿ ಆವಿರ್ಭವಿಸಿ, ಕೃತಿಯಲ್ಲಿ ಹಾಸುಹೊಕ್ಕು ಅರಿವಿನ ಬೆಳಕು ಚೆಲ್ಲಿರುವುದು ಮನನೀಯವಾಗಿದೆ. ಹಾಗೆಯೇ ಹಳ್ಳಿ ಹಟ್ಟಿ, ಪುರ, ಗೆರೆ ಇತ್ಯಾದಿ ಹಲವು ವರ್ಗಗಳಲ್ಲಿ ವರ್ಗೀಕರಿಸಿರುವುದು ಜನಸಾಮಾನ್ಯರೂ ಕೂಡ ಚರಿತ್ರೆ

ಅರಿಯಲು ಸುಲಭ ಸರಳವಾಗಿ ಅರ್ಥ ಮಾಡಿಕೊಳ್ಳಲು ಉಪಯುಕ್ತ ಕೈಪಿಡಿಯಾಗಿದೆ. ಒಟ್ಟಾರೆ ಸಿರಾ ಸಿರಿ ಸಂಪತ್ತಿನ ಪ್ರತೀಕದ ನಾಡ ಸುಭಿಕ್ಷವಾದ ಸಂದರ್ಭಗಳ, ಸರಳ ಪ್ರತೀಕದ ಪ್ರತಿಪಾದನೆ ಇಲ್ಲಿದೆ. ಆದರೆ ವೈವಿಧ್ಯತೆ, ವೈಶಿಷ್ಟ್ಯತೆ ಈಗ ಬರದವಡೆಗೆ ಸಿಲುಕಿರುವುದು ವಿಪರ್ಯಾಸವೇ ಸರಿ.

ಈ ಕೃತಿಯಲ್ಲಿನ ಬಹು ಪ್ರಮುಖ ಹೃದಯಭಾಗ ಈ ಸೀಮೆಯಲ್ಲಿದ್ದ ಸಾಂಸ್ಕೃತಿಕ ಮಹಾಪುರುಷರ ಇತಿಹಾಸ ಮನೋಜ್ಞವಾಗಿದೆ. ಜನಪದ ಮಹಾಕಾವ್ಯಗಳಾದ ಮಲೆಯ ಮಹದೇಶ್ವರ, ಮಂಟೇಸ್ವಾಮಿ ಕಾವ್ಯ, ಮೈಲಾರಲಿಂಗ, ಕೋಟಿ ಚನ್ನಯ್ಯ ಕಾವ್ಯಗಳ ಸಾಲಿಗೆ ತುಮಕೂರು ಬಯಲುಸೀಮೆಯ ಜಾನಪದ ಜಗತ್ತಿನ ಬಹುಮುಖ ವ್ಯಕ್ತಿತ್ವದ ಸಾಕಾರ ಮೂರ್ತಿಯಾದ ಜುಂಜಪ್ಪ, ಕಾಡುಗೊಲ್ಲರ ಸಾಂಸ್ಕೃತಿಕ ನಾಯಕನ ಕಥೆಯನ್ನು ಒಳಗೊಂಡ ಜನಪದ ಮಹಾಕಾವ್ಯವು ಕೂಡ ಆಗಿದೆ. ಜನಪದ ಸಂಸ್ಕೃತಿಗೆ, ನಮ್ಮ ಸಿರಾ ಸೀಮೆಯ ಅಭೂತಪೂರ್ವ ಕೊಡುಗೆಯಾಗಿದೆ.

ಚಿತ್ರದೇವರು, ಕಾಡುಗೊಲ್ಲರ ಆರಾಧ್ಯದೈವದ ಬಗ್ಗೆ ಕಾಟಲಿಂಗ, ಎತ್ತಪ್ಪ ದೇವರುಗಳ ಕಥೆ, ಅವರ ಇತಿಹಾಸ, ಸಾಂಸ್ಕೃತಿಕ ಹೋರಾಟಗಳ ಹಿನ್ನೆಲೆ, ಮುನ್ನೆಲೆಗಳ ವಿರಾಟ ಸ್ವರೂಪ ಬಹಳ ರಂಜನೀಯವಾಗಿ ಬಂದಿದೆ.

ಹಾಗೆಯೇ ಮಾಗೋಡು ಕಂಬದರಂಗನ ಜನಪದ ಕಾವ್ಯ. ಜಲಧಿ ಬೊಪ್ಪರಾಯ ರೇವಣಸಿದ್ದರ ಬಗ್ಗೆ ವಿಸ್ತೃತ ವಿವರಣೆಯಿದೆ. ಈ ಸಾಂಸ್ಕೃತಿಕ ಕರ್ತೃಗಳ ಹುಟ್ಟು, ಬೆಳವಣಿಗೆ, ಹೋರಾಟಗಳ ವೀರೋಚಿತ ವಿಶ್ಲೇಷಣೆಯಿದೆ. ಈ ಎಲ್ಲಾ ದೇವರುಗಳಿಗೆ ಹಲವು ಜಾತಿಗಳ ಜನರು ಎರಡು ಪ್ರದೇಶದ ಗಡಿಭಾಗದ ಜನರು ನಡೆದುಕೊಳ್ಳುವುದು ಗಡಿಭಾಷಿಕರ ಸಾಮಾನ್ಯ ಸಂಸ್ಕಾರಗಳ ಪ್ರತೀಕವಾಗಿರುವುದನ್ನು ಕಾಣಬಹುದು.

ಹಾಗೆಯೇ ಜನಪದ ಆಚರಣೆಯಲ್ಲಿ ನಗರ ಹಾಗೂ ಗ್ರಾಮೀಣ ಸಂಸ್ಕೃತಿಯ ವಿಹಂಗಮ ನೋಟಗಳು, ಕೃತಿಯಲ್ಲಿ ನಿರೂಪಿತಗೊಂಡಿವೆ. ಜೋಕುಮಾರಸ್ವಾಮಿಯ ಆಚರಣೆ, ಆತನ ಹುಟ್ಟು, ಬೆಳವಣಿಗೆಯ ವಿವರಣೆಯಿದೆ. ಅಲ್ಲದೇ ವೈಷ್ಣವ ಧಾರ್ಮಿಕ ಪದ್ಧತಿಯ ಆಚರಣೆಗಳನ್ನು ಕೂಡ, ಕೃತಿಕಾರರು ಬಹಳ ಅಚ್ಚುಕಟ್ಟಾಗಿ ಚಿತ್ರಿಸಿದ್ದಾರೆ. ಮಣೇವು ಹಾಕುವುದು, ದೋಣಿ ಸೇವೆ, ಕೊಂತಮ್ಮ, ಹರಿಗೆ ಸೇವೆಗಳು, ಜನರ ಮನದಾಳದ ಭಕ್ತಿ ಪರಾಕಾಷ್ಠೆಯನ್ನು ಅಭಿವ್ಯಕ್ತಿಸುತ್ತವೆ. ಹೀಗೆ ಬುಡಕಟ್ಟು ಸಂಸ್ಕೃತಿಯಲ್ಲಿ ತಮ್ಮ ತಮ್ಮ ಅಸ್ತಿತ್ವಗಳಾಗಿ ತಮ್ಮದೇ ಪ್ರಾದೇಶಿಕ ರೀತಿ ರಿವಾಜುಗಳಿಗೆ ಅನುಗುಣವಾಗಿ ಒಂದೊಂದು ಪರಂಪರೆಗಳಿಗೆ, ಅಡಿಪಾಯ ಹಾಕಿಕೊಂಡು ಇಂದಿಗೂ ಸಾಂಸ್ಕೃತಿಕ ದಾರಿದೀವಿಗೆಗಳೆಂಬಂತೆ

ಸಮಾಜದಲ್ಲಿ ಬಿಂಬಿತಗೊಂಡಿವೆ.

ತಮ್ಮ ಜಾತಿ, ಮತ, ಕುಲಗಳ ಆರಾಧ್ಯ ಮೂರ್ತಿಗಳನ್ನು ಧಾರ್ಮಿಕ ವಿಧಿ, ವಿಧಾನಗಳ ಸಂಪ್ರದಾಯಗಳ, ರೂಢಿಗಳ ಹಾಗೂ ಇನ್ನಿತರ ಕಟ್ಟು ಕಟ್ಟಳೆಗಳ ಹಿನ್ನೆಲೆಯಲ್ಲಿ ಪೂಜಿಸುವುದು, ಆರಾಧಿಸುವುದು ಸಹಜ. ಅವುಗಳನ್ನು ಹಬ್ಬ-ಹರಿದಿನಗಳು, ಜಾತ್ರೆಗಳು, ರಥೋತ್ಸವಗಳಲ್ಲಿ ವಿಶೇಷ ಭಕ್ತಿಭಾವಗಳ ಹಿನ್ನೆಲೆಯಲ್ಲಿ ಜನರು ಆಚರಿಸುತ್ತಾರೆ.

ಸಿರಾ ತಾಲ್ಲೂಕಿನಲ್ಲಿರುವ ಪ್ರವಾಸಿ ತಾಣಗಳೆಂದರೆ ಜನಪದ ಮಹಾಕಾವ್ಯಗಳು ಹಾಗೂ ಬುಡಕಟ್ಟು ಸಂಸ್ಕೃತಿಯ ನಾಯಕರುಗಳ ಧಾರ್ಮಿಕ ಕೇಂದ್ರಗಳಾಗಿ ನೆಲೆಯಾಗಿರುವ ಗ್ರಾಮಗಳು, ನಗರಗಳು ಆಗಿರುವುದನ್ನು ಈ ಕೃತಿಯಲ್ಲಿ ಬಹು ವಿಸ್ತ ೃತವಾಗಿ ವರ್ಣಿಸಿರುವುದನ್ನು ಕಾಣಬಹುದು. ಆ ಸ್ಥಳದ ಹಿನ್ನೆಲೆ, ಐತಿಹ್ಯ ಹಾಗೂ ಇನ್ನಿತರ ಎಲ್ಲಾ ಮಾಹಿತಿಗಳನ್ನು ಲೇಖಕರು ಸ್ಪಷ್ಟವಾಗಿ, ನಿಖರವಾಗಿ ನಿರೂಪಿಸಿದ್ದಾರೆ. ಮುಂದುವರಿದಂತೆ ಸಿರಾ ಸೀಮೆಯಲ್ಲಿ ರೂಢಿಗತವಾಗಿ, ಬಹಳ ಹೆಸರುವಾಸಿ ಪಡೆದಿರುವ ಕಲೆಗಳು, ಹಾಗೂ ಬಹುಮುಖ ವ್ಯಕ್ತಿತ್ವದ ಕಲಾವಿದರು, ವಿವಿಧ ಕಲೆಗಳಲ್ಲಿ ಹೇಗೆ ಪರಿಣಿತರಾಗಿದ್ದರು ಎಂಬುದನ್ನು ಪೂರ್ಣ ಪರಿಚಯಾತ್ಮಕ ನೆಲೆಗಟ್ಟಿನಲ್ಲಿ ಉಲ್ಲೇಖಿಸಿರುವುದು, ಅಂತಹ ಕಲಾ ನೈಪುಣ್ಯತೆಯ ಹಿರಿಮೆ-ಗರಿಮೆಗಳನ್ನು ಸಾದರಪಡಿಸಿದ ಕಲಾಮುಕುಟಮಣಿಗಳನ್ನು ಗುರುತಿಸುವಲ್ಲಿ, ಕೃತಿಕಾರ ಕ್ಷೇತ್ರಕಾರ್ಯದಲ್ಲಿನ, ಶ್ರಮಿಕ ಕಾರ್ಯಕತ್ವ ನಿಜಕ್ಕೂ ಮೆಚ್ಚುವಂಥದ್ದಾಗಿದೆ. ಜನಪದ ಸಂಸ್ಕೃತಿಯ ಆರಾಧಕರೆಲ್ಲರೂ ಕೃಷಿ ಕಾಯಕದವರು. ಭೂಮಿತಾಯಿಯ ಬಗ್ಗೆ ತೋರುವ ಭಯ, ಭಕ್ತಿ, ನಿಷ್ಠೆಗಳು ಮೆಚ್ಚುವಂತಹದ್ದು. 'ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ| ಎಳ್ಳು ಜೀರಿಗೆ ಬೆಳೆಯೋಳ ಭೂತಾಯ ಎದ್ದೊಂದು ಘಳಿಗೆ ನೆನೆದೇನು' ಎಂಬುವ ರೈತ, ತನ್ನ ತನು-ಮನದಲ್ಲೆಲ್ಲ ತುಂಬಿರುವುದು, ಕೃಷಿಕತ್ವದ ಕಾಯಕತ್ವವನ್ನು ಸಂಕೇತಿಸುತ್ತದೆ. ಅದರ ಸಂಬಂಧಿಯಾಗಿ ಕೃಷಿ ಆರಂಭದಿಂದ ಒಕ್ಕಣೆಯಾಗಿ ಧಾನ್ಯ ಮನೆ ಸೇರುವವರಿಗೆ ಹಳ್ಳಿಗಳಲ್ಲಿ ಮನೆ ಮಾಡಿರುವ ರೂಢಿ ಸಂಪ್ರದಾಯಗಳು, ಆಚರಣೆಗಳು, ಕ್ರೀಡಾಕೂಟಗಳು, ಪೂಜೆ-ಪುರಸ್ಕಾರಗಳು ಹತ್ತು ಹಲವು ಮಜಲುಗಳಲ್ಲಿ, ಜಾನಪದ ಸಂಸ್ಕೃತಿಯ ಸುತ್ತಮುತ್ತ ಹರಡಿಕೊಂಡಿರುವುದನ್ನು ಈ ಕೃತಿಯಲ್ಲಿ ರಸೋಜ್ಞವಾಗಿ ಚಿತ್ರಿಸಿರುವುದು, ಕೃತಿಕಾರರ ಗ್ರಾಮ್ಯ ಪ್ರತಿಭೆಯು ಮೂಲ ಸ್ವರೂಪದಲ್ಲೇ ಪಡಿಯಚ್ಚುಗೊಂಡಿದೆ. ಹಾಗೆಯೇ ದೇಶದ ಬೆನ್ನೆಲುಬಾದ ರೈತನಿಗೆ ಮಳೆಯೊಂದಿಗೆ ನಿತ್ಯ ಜೂಜಾಡುವ, ಪರಿಸ್ಥಿತಿ ಅನಿವಾರ್ಯವಾಗಿದೆ. ಮಳೆಗಾಗಿ ರೈತ ಪರಿತಪಿಸುವ ರೀತಿ, ವೇದನೆ, ನೋವು-ನಲಿವುಗಳ, ದೈನ್ಯತೆಗಳ ಮನೋವೈರಾಗ್ಯ ಸ್ಥಿತಿಗತಿಗಳು, ಹೇಳಲು ಸಾಧ್ಯವಾಗದಂತಹದು.

ಗ್ರಾಮೀಣ ಸಂಸ್ಕೃತಿಯಲ್ಲಿ 'ಮಳೆ' ಕುರಿತ ಚಿತ್ರವು ಈ ಕೃತಿಯಲ್ಲಿ ಸುಭಿಕ್ಷವಾಗಿ ವ್ಯಕ್ತವಾಗಿದೆ. ಹೀಗೆ ಕಾದಾಡಿ ಬೆಳೆದ ಆಹಾರಗಳನ್ನು ತನ್ನ ಅಭಿರುಚಿಯ ಬಗೆಬಗೆಯ ಭಕ್ಷ್ಯಭೋಜನಗಳನ್ನು ತಯಾರಿಸುವ ರೀತಿ ಬಗೆಬಗೆ ರುಚಿಗಳ ತಾರ್ಕಿಕ ಚಿತ್ರಣವು ಕೃತಿಯಲ್ಲಿರುವುದು ಓದುಗರಿಗೆ ವಿಶಿಷ್ಟ ರುಚಿ ಸಿಕ್ಕಂತೆಯಾಗಿದೆ.

ಕೊನೆಯದಾಗಿ ಕೃತಿಯಲ್ಲಿ ಸಿರಾ ನಗರ ಜೀವನ ಸಂಸ್ಕೃತಿಯನ್ನು ಪರಾಮರ್ಶಿಸುತ್ತಾ ಆಧುನೀಕರಣ ಮಂತ್ರ ತಂತ್ರಜ್ಞಾನಗಳ ಬಹುಭಾಷಿಕ ವ್ಯವಸ್ಥೆ ಮತ್ತು ವರ್ಣರಂಜಿತ ದೃಶ್ಯಮಾಧ್ಯಮಗಳ ಸಂಕೀರ್ಣ ಸಂಕ್ರಮಣದಲ್ಲೂ ತನ್ನ ದೇಸಿತನದ ಸಾಂಸ್ಕೃತಿಕ ವೈಭವತೆಯನ್ನು ಉಳಿಸಿಕೊಳ್ಳುವ ವಿವಿಧ ಆಚರಣೆಯ, ಕಸರತ್ತುಗಳು, ನಿರಂತರವಾಗಿ ನಡೆಯುವುದನ್ನು ಲೇಖಕರು ತಾರ್ಕಿಕ ಪ್ರಜ್ಞೆಯಿಂದ ಉವಾಚಿಸಿದ್ದಾರೆ. ವಿಜಯನಗರದ ಸಾಮ್ರಾಜ್ಯದ ಸಮಕಾಲೀನ ಪಾಳೇಗಾರರಾದ ಕಸ್ತೂರಿ ರಂಗಪ್ಪನಾಯಕನ ಆಡಳಿತ, ಕೋಟೆಯ ನಿರ್ಮಾಣ ಅಲ್ಲಿನ ಕಲಾವೈಭವಗಳ ರಕ್ಷಣೆ, ಸಂಸ್ಕೃತಿಗಳ ಬಗೆಗೆ ತೋರಿದ ಕಾಳಜಿಗಳು ಅಪಾರ ಶತ್ರುಗಳ ವಿರುದ್ಧ ಮಾಡಿದ ಹೋರಾಟ, ತ್ಯಾಗ ಬಲಿದಾನಗಳ ಹಿನ್ನೆಲೆಯಲ್ಲಿ ಪ್ರಾದೇಶಿಕ ಜನಪದ ಸಾಂಸ್ಕೃತಿಕ ಪಳೆಯುಳಿಕೆಗಳು ಉಳಿದು ಇಂದಿಗೂ ನಮ್ಮೆಲ್ಲರಿಗೂ ಗೋಚರಿಸುತ್ತಿರುವುದರ ಹಿಂದಿನ ಹೆಜ್ಜೆಗಳನ್ನು, ಕೃತಿಕಾರರು ನಿರೂಪಿಸುತ್ತಿರುವುದನ್ನು ಕಾಣಬಹುದು. ಅಲ್ಲದೆ ಊಟಕ್ಕೆ ಉಪ್ಪಿನಕಾಯಿಯಂತೆ ಅನುಬಂಧಗಳಲ್ಲಿ ಜನಪದ ಸಂಸ್ಕೃತಿಯ ಕೆಲವು ಗಾದೆ, ಒಗಟು, ನಂಬಿಕೆ, ಬೈಗುಳಗಳ ಶಬ್ದಕೋಶ, ಮಾಹಿತಿದಾರರ ವಿವರಗಳ ತುಣುಕುಗಳು, ಜಾನಪದ ಸಾಹಿತ್ಯ ಸವಿಯನ್ನು ಹೆಚ್ಚಿಸಿರುವುದರ ಜೊತೆಗೆ, ಕ್ಷೇತ್ರಕಾರ್ಯದ ವ್ಯಾಪಕತೆಯನ್ನು ತೋರಿಸುತ್ತದೆ.

ಒಟ್ಟಿನಲ್ಲಿ ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ ಇವರ 'ಸಿರ್ಯಾ ಸೀಮೆ ಜನಪದೀಯ ಅಧ್ಯಯನ' ಕೃತಿಯು ಈ ಪ್ರದೇಶದ ಸಮಗ್ರ ಸಾಂಸ್ಕೃತಿಕ ಚಿತ್ರಣವನ್ನು ನೀಡುವಲ್ಲಿ ಯಶಸ್ವಿಯಾಗಿದೆ. ಅವರ ಕ್ಷೇತ್ರಕಾರ್ಯ, ಕಲೆ-ಕಲಾವಿದರ ಬಗ್ಗೆ ವಿಷಯ ಸಂಗ್ರಹಣೆ, ಶೋಧನೆ, ಸಂಶೋಧನೆಗಳಲ್ಲಿನ ಸಾಂಸ್ಕೃತಿಕ-ಸಾಮಾಜಿಕ ಕಾಳಜಿ, ಕಳಕಳಿ ಮೆಚ್ಚುವಂತಹದ್ದಾಗಿದೆ. ಇವರ ಸಂಸ್ಕೃತಿಯ ಬಗೆಗಿನ ಶಿಸ್ತು, ಸಂಯಮ, ತಾಳ್ಮೆ ವಿಸ್ಮಯಕರವಾಗಿದ್ದು. ಎಲ್ಲರಿಂದಲೂ ಇಂಥ ಕೆಲಸ ನಿರೀಕ್ಷಿತವಲ್ಲ ಎಂಬುದನ್ನು ಈ ಕೃತಿಯನ್ನು ಓದಿಯೇ ಹೇಳಬೇಕಾಗುತ್ತದೆ. ಈತನ ಈ ಗ್ರಂಥದ ಒಂದೊಂದು ಅಧ್ಯಾಯದಲ್ಲೂ ಎದ್ದು ಕಾಣುತ್ತದೆ. ಹಳ್ಳಿಯ, ಕಲೆಯ ಕಲಾವಿದರ, ಸಾಂಸ್ಕೃತಿಕ ವಿವರಗಳನ್ನು ಹೆಕ್ಕಿ ಹೊರತೆಗೆಯುವಲ್ಲಿನ ಅವರ ಭೌತಿಕ ಹಾಗೂ ಮನೋಸಾಮರ್ಥ್ಯ ಶಕ್ತಿಯುಕ್ತಿ ಪ್ರಬುದ್ಧವಾಗಿದೆ. ಸಿರಾ ಸೀಮೆಯ ಜಾನಪದ ಸಂಸ್ಕೃತಿಯ ವಿಶ್ವವಿದ್ಯಾನಿಲಯದ, ಕುಲಾಧಿಪತಿಗಳಂತೆ ಗುರುತಿಸಿಕೊಂಡು, ಅವುಗಳ

ಸಮಗ್ರ ಜವಾಬ್ದಾರಿ, ಹೊಣೆಗಾರಿಕೆಗಳ ಹಿನ್ನೆಲೆಯಲ್ಲಿ, ಈ ಭಾಗದ ಜನಪದದ ಅಮೂಲ್ಯ ಚಿತ್ರಣಗಳ ಸಾಕಾರಾತ್ಮಕತೆಯನ್ನು, ಪುಟಕ್ಕಿಟ್ಟ ಚಿನ್ನದಂತೆ ಬಹಳಷ್ಟು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ ಎಂಬುದು ಹೇಳಲೇಬೇಕಾದ ಮಾತು. ಆದ್ದರಿಂದ ಈ ಭಾಗದ ಜಾನಪದ ಜನಮನದಾಳದಲ್ಲಿ ಅಚ್ಚಾಗಿ ಉಳಿಯುವ, ಅವಿಸ್ಮರಣೀಯವಾಗಿ ಉಳಿಯುವ, ಡಾ॥ ಚಿಕ್ಕಣ್ಣ ಈ ಕ್ಷೇತ್ರದ ಮುತ್ತಿನ ಹರಳು. ಅವರ ದಾಖಲಾರ್ಹ ಜನಪದ ಕ್ಷೇತ್ರದ ಸೇವೆ ಪ್ರಶಂಸನೀಯವಾಗಿದೆ, ಅಭಿನಂದನಾರ್ಹವಾಗಿದೆ.

**ಜಿ.ಎಚ್.ನಾಗಹನುಮಯ್ಯ,** ಎಂ.ಎ (ಸಾ) ಕೆ.ಎ.ಎಸ್
ತಹಸೀಲ್ದಾರ್, ಸಿರಾ ತಾಲ್ಲೂಕು



# ಪ್ರಸ್ತಾವನೆ

ಸಿರಾ ಬಹುಸಂಸ್ಕೃತಿಯ ಸಂಕೀರ್ಣ ಪ್ರದೇಶ. ಇಲ್ಲಿ ಹಲವು ದೇವಾಲಯಗಳಿವೆ. ಕೋಟೆ, ದರ್ಗಾ ಮಸೀದಿಗಳಿವೆ. ಇದಕ್ಕೆ ಪೂರಕವಾಗಿ ಜಾತ್ರೆ, ಪರಿಷೆ, ಉತ್ಸವ ನಡೆಯುತ್ತವೆ. ಆಚರಣೆ ನಂಬಿಕೆಯ ಒಂದು ಭಾಗವಾಗಿ ಸದಾ ಮುನ್ನಡೆಯುತ್ತಿದೆ. ಪಾಳೆಯಗಾರರು, ನೊಳಂಬವಾಡಿಯ ಅರಸು ಮನೆತನದವರು, ಬಿಜಾಪುರದ ಸುಲ್ತಾನರು, ಸಿರಾದ ನವಾಬರು, ಹೈದರ್, ಟಿಪ್ಪು, ಔರಂಗಜೇಬ್, ಶಿವಾಜಿ ಮಹಾರಾಜ, ಮೈಸೂರ ಅರಸರು ಈ ಎಲ್ಲ ರಾಜಾಧಿರಾಜರ ಆಡಳಿತಕ್ಕೆ ಒಳಪಟ್ಟ ಸಿರಾ ಬಹುಸಂಸ್ಕೃತಿಯಿಂದಾಗಿ ಇದರ ಆಚರಣೆಯೂ ಸಂಕೀರ್ಣವಾಗಿದೆ. ಇದೆಲ್ಲಕ್ಕಿಂತ ಹೆಚ್ಚು ಪ್ರಸ್ತಾಪಗೊಳ್ಳಲೇಬೇಕಾದ ಧಾರ್ಮಿಕ ನೆಲೆ ವೀರ ಜುಂಜಪ್ಪನದು. ಪಶು ಸಂಬಂಧಿ ಕಥನಗಳೊಂದಿಗೆ ಬೆಳೆದ ಜುಂಜಪ್ಪ ಸಿರಾದ ಸಂಸ್ಕೃತಿಯ ಒಂದು ಪ್ರಮುಖ ಭಾಗ. ಮೌಖಿಕ ಪರಂಪರೆಯಲ್ಲಿ ಜುಂಜಪ್ಪನನ್ನು ಕುರಿತು ಕತೆ, ಕಾವ್ಯ ಈ ಎರಡೂ ಪ್ರಕಾರದಲ್ಲಿ ಸಾಹಿತ್ಯ ಲಭ್ಯವಿದೆ. (ಗಮನಿಸಿ: ಕಥೆ ಪರಂಪರೆ, ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ, ಕಾವ್ಯ ಸಂಗ್ರಹ : ಚೆಲುವರಾಜು, ಕೆಂಬಾಳು ಸಿದ್ದಗಂಗಯ್ಯ ಅವರ ಪುಸ್ತಕಗಳು ಈಗಾಗಲೇ ಪ್ರಕಟವಾಗಿವೆ)

ಕರ್ನಾಟಕ ಮೌಖಿಕ ಪರಂಪರೆಯಲ್ಲಿ ಅತಿ ದೀರ್ಘವೂ, ವಿಸ್ತಾರವೂ ಆದ ಕಾವ್ಯ ಕಥೆಯನ್ನು ಜುಂಜಪ್ಪನ ಕಥೆಯಲ್ಲಿ ಮಾತ್ರ ಕಾಣಬಹುದು. ಬೇರೆ ಯಾವುದೇ ಮೌಖಿಕ ಸಾಂಸ್ಕೃತಿಕ ನಾಯಕರ ಬದುಕಿನಲ್ಲಿ ಈ ವಿಚಾರವನ್ನು ಕಾಣಲಾಗುವುದಿಲ್ಲ. ಅಂಥ ನಾಯಕನ ನೆಲೆ, ಕಾರ್ಯಕ್ಷೇತ್ರ ಪ್ರಕಟವಾಗುವುದು, ಸಿರಾ ತಾಲ್ಲೂಕಿನ ಒಳಗೆ ಹಾಗೂ ಪೂರಕವಾಗಿ ಈ ಭೌಗೋಳಿಕ ವ್ಯಾಪ್ತಿಯ ಹೊರಗೂ ಕಾಣಬಹುದಾಗಿದೆ. ಕಳುವೋರಹಳ್ಳಿ, ಮರಡಿಗುಡ್ಡ, ಪರಸವ್ವನ ಕೆರೆ, ಚಂಗಾವರ, ಬೇವಿನಹಳ್ಳಿ, ಹುಲಿಕುಂಟೆ, ಸಿರಾ, ಚಿಕ್ಕಸಂದ್ರದ ಕಾವಲು, ಮೊಸರುಕುಂಟೆ, ಮದ್ದಕ್ಕನಹಳ್ಳಿ, ಗೌಡಗೆರೆ, ಗುಂಗರಮೆಳೆ, ಹಾಲ್ಕೂರು. ಬಿಜ್ಜಂಬೆಳ್ಳ ಈ ಮುಂತಾದ ಭೂಗೋಳಿಕ ಪ್ರದೇಶ ಜುಂಜಪ್ಪನ ಕಾವ್ಯದಲ್ಲಿ ಅನುಸಂಧಾನವಾಗಿ ಪ್ರಕಟಗೊಳ್ಳುತ್ತದೆ. ಈ ಸ್ಥಳಗಳೂ ಒಂದೊಂದು ಘಟನೆಗೆ ಪೂರಕವಾಗಿ ಮೌಖಿಕ ಇತಿಹಾಸ ಸೃಷ್ಟಿಸಿಬಿಡುತ್ತವೆ. ಮಾತ್ರವಲ್ಲ ಸಿರಾವನ್ನು ಆಳಿದ ಪಾಳೆಯಗಾರರ ಕುರಿತ ವಿವರವೂ, ಮೌಖಿಕ ಪರಂಪರೆಯಲ್ಲಿ ಲಭ್ಯವಾಗುವುದು, ಜುಂಜಪ್ಪನ ಕಥೆಯಲ್ಲಿ ಮಾತ್ರ. ಸಾಧಾರಣವಾಗಿ ಜನಪದ ಕಥೆಗಳಲ್ಲಿ, ಕೋಲುಪದಗಳಲ್ಲಿ ಸಿರ್‍ಯಾದ ರಂಗಣ್ಣನ ವಿವರ ಮೂರ್‍ನಾಲ್ಕು ತ್ರಿಪದಿಗಳಲ್ಲಿ ಬರುತ್ತದೆ. ಆ ಸಂಬಂಧಿ ಸಾಹಿತ್ಯವನ್ನು 'ಬಂಡಿ ಬಂದಾವೆ ಬಾಳೆ ವನದಾಗೆ' ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ ಅವರ ಕಥನ ಗೀತೆಗಳ ಸಂಕಲನದಲ್ಲಿ

ಕೊಡಲಾಗಿದೆ. ಆದರೆ ಕಸ್ತೂರಿ ರಂಗಪ್ಪನಾಯಕನ ಚಾರಿತ್ರಿಕ ಬದುಕಿನೊಂದಿಗೆ ಮುಖಾಮುಖಿಯಾಗಿ ಒಬ್ಬ ಸಾಂಸ್ಕೃತಿಕ ನಾಯಕ ಪ್ರಕಟವಾಗುವುದು ಜುಂಜಪ್ಪನ ಕಾವ್ಯದ ವಿಶೇಷವಾಗಿದೆ.

ಜುಂಜಪ್ಪ ಒಬ್ಬ ಸಾಂಸ್ಕೃತಿಕ ನಾಯಕ ಮಾತ್ರ. ಅವನು ದನಗಾಹಿ. ತನ್ನ ಪಶುಗಳಿಗೆ ಹುಲ್ಲು ನೀರಿಗಾಗಿ ಅರಣ್ಯ ರಕ್ಷಣೆ, ಪರಿಸರದ ಅಭಿವೃದ್ಧಿಗೆ ಶ್ರಮಿಸಿದವನು. ಅದಕ್ಕೆ ವಿರೋಧ ಎದುರಿಸಿದ, ಸಿರಾದ ಪಾಳೆಯಗಾರ ರಂಗಪ್ಪನಾಯಕ, ಚೇಳೂರಿನ ರಂಗಪ್ಪನಾಯಕ ಇವರುಗಳು ಜುಂಜಪ್ಪನೊಂದಿಗೆ ಆರಂಭಕ್ಕೆ ಕದನಕ್ಕಿಳಿದರೂ, ನಂತರ ಜುಂಜಪ್ಪನ ಸಾಮರ್ಥ್ಯದ ಮುಂದೆ ಸೋಲಬೇಕಾಗುತ್ತದೆ. ಚೇಳೂರನ್ನು ರಂಗಪ್ಪನಿಂದ ಗೆದ್ದು, ಆರು ತಿಂಗಳು ಚೇಳೂರನ್ನು ಆಳಿದ ಜುಂಜಪ್ಪ, ಚೇಳೂರ ಕೆರೆಯೂ ಸೇರಿದಂತೆ ಅಲ್ಲಿನ ಮರಳು ಬಸವೇಶ್ವರ ದೇವಾಲಯ, ಚೇಳೂರ ಬಾವಿ ಮೊದಲಾದ ಜಾನಪದ ಕಾರ್ಯಗಳನ್ನು ರಂಗಣ್ಣನ ಕೆಲಸಗಾರರಿಂದಲೇ ಜುಂಜಪ್ಪ ಮಾಡಿಸಿದನೆಂಬ ದಟ್ಟ ವಿವರಣೆ ಜುಂಜಪ್ಪನ ಕಾವ್ಯದಲ್ಲಿ ಪ್ರಕಟವಾಗುತ್ತದೆ. ಮಾತ್ರವಲ್ಲ ಸಿರಾದ ರಂಗಪ್ಪ, ಜುಂಜಪ್ಪನ ದನಗಳನ್ನು ಹಿಡಿದು, ಅವುಗಳನ್ನು ಹರಾಜು ಹಾಕುವುದು ಅಥವಾ ಸಾಕುವವರು, ತಿಂಬುವವರು ಹೊಡೆದುಕೊಂಡು ಹೋಗಬಹುದೆಂಬ ಡಂಗೂರವನ್ನೂ ಪಾಳೆಯಗಾರ ಹೊಡೆಸುತ್ತಾನೆ. ಆದರೆ ಜುಂಜಪ್ಪನ ನೈತಿಕ ಸಾಮರ್ಥ್ಯದ ಮುಂದೆ ಅಪಾರ ಸಂಖ್ಯೆಯ ಬಲದ ರಂಗಪ್ಪನ ಸೇನೆ ಸೋತು, ಹಿಮ್ಮೆಟ್ಟಬೇಕಾಗುತ್ತದೆ. ಮಾತ್ರವಲ್ಲ ಸ್ವತಃ ಸಿರ್‍ಯಾದ ರಂಗಪ್ಪನಾಯಕನೂ ಜುಂಜಪ್ಪನ ಮಾಯದ ಪೆಟ್ಟು ತಿಂದು, ತತ್ತರಿಸಿ, ಜುಂಜಪ್ಪನಿಗೆ ಶರಣಾಗುವುದು ಮಾತ್ರವಲ್ಲದ ಶಾಶ್ವತವಾಗಿ ಜುಂಜಪ್ಪನ ಮೆರವಣಿಗೆಯಲ್ಲಿ ಜಾತ್ರೆ, ಉತ್ಸವಗಳಲ್ಲಿ ಕೋಲು ಹಿಡಿದು ಜನಗಳನ್ನು ಸುಧಾರಿಸುತ್ತಾ, ದೇವರ ಉತ್ಸವಕ್ಕೆ ಅಣಿಗೊಳಿಸುವ 'ಕೋಲುಕಾರ' ವೃತ್ತಿ ಸೇವೆಯನ್ನು ಮಾಡಲು ಒಂದು ಪರಂಪರೆಗೆ ಕಾರಣನಾಗುತ್ತಾನೆ.

ಇದೊಂದು ಹಲವು ಚಮತ್ಕಾರಿಕ ಮಾಹಿತಿಯಾಗಿದ್ದು ಜುಂಜಪ್ಪನ ಕಾಲ ನಿರ್ಣಯದ ಸಂದರ್ಭಕ್ಕೆ ಬಹು ಒಳ್ಳೆಯ ಆಕರವಾಗಿದೆ. ಮಾತ್ರವಲ್ಲ ಜುಂಜಪ್ಪ ಕೇವಲ ಕಾಲ್ಪನಿಕ ವ್ಯಕ್ತಿ ಮಾತ್ರವಾಗದೆ ಆತನೊಬ್ಬ ಸಿರಾ ಸೀಮೆಯಲ್ಲಿ ಬಾಳಿ ಬದುಕಿದ್ದ, ಸಾಮಾನ್ಯತ್ವದಿಂದ ಅಸಾಮಾನ್ಯದ ಕಡೆಗೆ ವಾಲಿದ, ಸಾಂಸ್ಕೃತಿಕ ವೀರ ಎಂಬುದೂ ತಿಳಿದುಬರುತ್ತದೆ. ಹಾಗಾಗಿ ಜುಂಜಪ್ಪ ಸಿರಾ ನಗರವನ್ನು ಆಳಿದ ರಂಗಪ್ಪನಾಯಕ (1580), ಇಮ್ಮಡಿ ರಂಗಪ್ಪನಾಯಕ (1612), ಮುಮ್ಮಡಿ ರಂಗಪ್ಪನಾಯಕ (1626) ಇವರ ಕಾಲ ಘಟ್ಟದಲ್ಲಿಯೇ ಬಾಳಿ ಬೆಳೆದ ವ್ಯಕ್ತಿಯಾಗಿರಬೇಕೆಂಬ, ಚಾರಿತ್ರಿಕ ಕಾಲನಿರ್ಣಯಕ್ಕೆ ಮಹತ್ವದ ದಾಖಲೆಯೂ

ಲಭ್ಯವಾಗುವುದು ಜುಂಜಪ್ಪನ ಕಾವ್ಯದಲ್ಲಿಯೇ. ಕೊಂಕಿ ಜೆರಿಮಲೆ ಈಗಿನ ಕೂಡ್ಲಿಗಿ ತಾಲ್ಲೂಕಿನ ಒಂದು ಗ್ರಾಮ. ಆ ಮೂಲದವರಾದ ಜುಂಜಪ್ಪನ ಪೂರ್ವಜರು, ಪಶುಪಾಲನಾ ಕಾರಣದಿಂದಾಗಿ ಹುಲ್ಲು-ನೀರಿಗೆ ವಲಸೆ ಬಂದಿರುವ ಕಾರಣದಿಂದಾಗಿ ಜುಂಜಪ್ಪನ ಅಪ್ಪ, ಕುಂಚಿಟಿಗರ ಹೊನ್ನಟ್ಟಿ ಆಲೇಗೌಡ ಕಳುವರಹಳ್ಳಿಯಲ್ಲಿ ಬೆಳೆದು, ಕುಂಚಿಟಿಗರ ಮನೆಯ ಹುಡುಗನಾದರೂ ಕಾಡುಗೊಲ್ಲರ ಸಂಸ್ಕಾರಗಳೊಂದಿಗೆ ಬೆಳೆದ ಈ ಮೂಲಕ ಕಾಡುಗೊಲ್ಲರಿಗೂ ಕುಂಚಿಟಿಗ ಜನಾಂಗಕ್ಕೂ ಸೋದರತ್ವ ಸಂಬಂಧ ಕಲ್ಪಿಸುವ ಮೂಲಕ, ಜುಂಜಪ್ಪ ಸಮನ್ವಯ ನಾಯಕನಾಗಿಯೂ ಬೆಳೆಯುವುದು ಸಿರಾ ಸೀಮೆಯಲ್ಲಿ ವ್ಯಾಪಕವಾಗಿರುವ ಕಾಡುಗೊಲ್ಲರು, ಕುಂಚಿಟಿಗರ ನಡುವೆ ಸಮನ್ವಯದ ರೂಪವಾಗಿಯೂ ಜುಂಜಪ್ಪನ ಗುಡ್ಡೆ ಸಾಕ್ಷಿ ರೂಪವಾಗಿದೆ. ಸಮನ್ವಯ, ಸೌಹಾರ್ದತೆಯ ಪ್ರತಿರೂಪವಾಗಿ ಇಂದಿಗೂ ಈ ಎರಡೂ ಜನಾಂಗದವರ ಆರಾಧನೆಗೆ ಒಳಗಾಗಿರುವುದು ಜುಂಜಪ್ಪನ ಚಾರಿತ್ರಿಕ ಬದುಕಿಗೆ ಖಚಿತ ಆಕರವಾಗಿದೆ.

ಇದರ ಸ್ವರೂಪದಲ್ಲಿಯೇ ಪ್ರಕಟವಾಗುವ ಈ ಭಾಗದ ಮತ್ತೊಬ್ಬ ಸಾಂಸ್ಕೃತಿಕ ನಾಯಕ ವೀರಬೊಪ್ಪರಾಯ, ಜಲಧಿ ಬೊಪ್ಪರಾಯ, ಬೊಪ್ಪರಾಯ, ಬೊಪ್ಪರಾಯಪ್ಪ, ಜಲದೇರಪ್ಪ ಮೊದಲ ವ್ಯಕ್ತಿ ನಾಮಗಳಿಗೆ ಪ್ರೇರಕವಾಗಿರುವ ಸಾಂಸ್ಕೃತಿಕ ನಾಯಕನ ನೆಲೆ ಸಿರಾ ತಾಲ್ಲೂಕಿನ ಬೆಜ್ಜಿಹಳ್ಳಿ, ಜಲದೇನೂರ ಕುಲಮನೆದೈವ. ಸಿರಾ, ಪಾವಗಡ, ಕೊರಟಗೆರೆ, ಹಿರಿಯೂರು, ಚಳ್ಳಕೆರೆ, ಧರ್ಮಪುರ - ಈ ಭಾಗಗಳ ಕುಂಚಿಟಿಗ ಒಕ್ಕಲಿಗರು ಸಿರಾ ತಾಲ್ಲೂಕಿನ ಬೆಜ್ಜಿಹಳ್ಳಿಯ ಬೊಪ್ಪರಾಯನಿಗೆ ಒಕ್ಕಲಾಗಿದ್ದಾರೆ. ಹಾಗೆಯೇ ಬರಗೂರು, ಹಿಂದೂಪುರ, ಮಡಕಶಿರಾ ಈ ಭಾಗದ ಕುರುಬರು ಬೊಪ್ಪರಾಯಪ್ಪನಿಗೆ ನಡೆದುಕೊಳ್ಳುವ ಪರಂಪರೆಯಿದೆ. ಇಂತಹ ಕುರುಬರ, ಕುಂಚಿಟಿಗರ ಸಾಂಸ್ಕೃತಿಕ ಸಂಬಂಧ ಬೀರುವ, ಕುಲಮೂಲಗಳನ್ನು ಬೆಸೆಯುವ ಮೂಲಕ ಸೋದರತ್ವ ಬಿಂಬಿಸುವ ಜಲಧಿ ಬೊಪ್ಪರಾಯನ ಚಾರಿತ್ರಿಕ ಅಧ್ಯಯನವೂ ನಡೆಯಬೇಕಿದೆ. ಇದರ ಸೂಕ್ಷ್ಮ ವಿವರಗಳನ್ನು ಮಾತ್ರ ಈ ಅಧ್ಯಯನದಲ್ಲಿ ನೀಡಲು ಸಾಧ್ಯವಾಯಿತು.

ಸಿರಾ ಬಹುಧರ್ಮದ ಬೀಡು. ಇಲ್ಲಿ ಮುಸಲ್ಮಾನರಿದ್ದಾರೆ, ಗೊಲ್ಲರಿದ್ದಾರೆ. ಕುಂಚಿಟಿಗರಿದ್ದಾರೆ, ಕುರುಬರಿದ್ದಾರೆ. ಹಾಗೆಯೇ ನೆಲಮೂಲ ಸಂಸ್ಕೃತಿಯ ಹಲವಾರು ಧರ್ಮೀಯರು ಒಟ್ಟಿಗೆ ಬಾಳುವ, ಸೌಹಾರ್ದತೆ ಕಟ್ಟಿಕೊಂಡ ತನ ಇದೆಯಲ್ಲ ಅದೊಂದು ಅಪೂರ್ವವಾದ ಸಂದರ್ಭ. ಬೇರೆಡೆ ಕಾಣಲಾರದ ಸಾಂಸ್ಕೃತಿಕ ಬೆಸುಗೆಯಾಗಿದೆ. ಹಿಂದೂ ಮುಸ್ಲಿಮರ ಸಮನ್ವಯದ ಒಡನಾಟವಿರುವ ಇಲ್ಲಿನ ಗಂಡಿಹಳ್ಳಿ ಮಠ, ಕರ್ನಾಟಕ ಧಾರ್ಮಿಕ ಚರಿತ್ರೆಯಲ್ಲಿಯೇ ವಿಶಿಷ್ಟವಾದ ಕ್ಷೇತ್ರ. ಇಲ್ಲಿನ ದೇವಸ್ಥಾನದ ಸ್ವರೂಪ ದರ್ಗಾ ಮಾದರಿ

ದೇವರು ಬಾಬಾಬುಡನ್‌ಗಿರಿಯ ದತ್ತಾತ್ರೇಯ ಆರಾಧನೆ ಮುಸ್ಲಿಂ ಸಂಪ್ರದಾಯದ ರೀತಿ ಸಕ್ಕರೆ ಓದಿಸುವುದು, ಅಲ್ಲಾನ ಪ್ರಾರ್ಥನೆ, ಹಸ್ತದ ಮಾದರಿಯ ದೇವರ ಪ್ರಾರ್ಥನೆ ಇವುಗಳ ನಡುವೆ ಪ್ರಾರ್ಥನೆಯ ಕಾಲಕ್ಕೆ ಎರಡು ಬೃಹತ್ ನಗಾರಿ ಬಾರಿಸುವುದು ಮುಸ್ಲಿಂ ದೇವರಿಗೆ ಗೊಲ್ಲ ಜನಾಂಗದ ಅರ್ಚಕ, ಆತನ ವೇಷಭೂಷಣ, ಸಂಸ್ಕಾರ, ಭೋಜನ ಕ್ರಮಗಳೆಲ್ಲವೂ ಮುಸ್ಲಿಂ ಮಾದರಿ. ಹಂದಿ ಹಾಗೂ ಆ ಸಂಬಂಧಿ ಪ್ರಾಣಿಗಳ ಮಾಂಸದ ಹೆಸರು ಕೇಳುವುದೂ ಇವರಿಗೆ ಅಪರಾಧ. ಇವರಲ್ಲಿ ಮುಂಜಿಯ ಸಂಪ್ರದಾಯವೂ ಇದೆ ಎಂದು ಕೇಳಿದ್ದೇನೆ. ಹಿಂದೂ-ಮುಸ್ಲಿಂ ಎರಡೂ ವರ್ಗದ ಜನರು ಇಲ್ಲಿನ ಭಕ್ತರು. ಕರ್ನಾಟಕ, ಆಂಧ್ರ ಈ ಎರಡೂ ಕಡೆಯಿಂದಲೂ ಜನ ಭಾಗವಹಿಸುತ್ತಾರೆ, ಸಕ್ಕರೆ ಓದಿಸುತ್ತಾರೆ, ನಮಾಜು ಮಾದರಿಯಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಹಲಾಲು ಮಾಡಿದ ಪ್ರಾಣಿಯ ಮಾಂಸ ಸ್ವೀಕಾರ ಇಲ್ಲಿನ ಕ್ರಮವಾಗಿದೆ.

ಅಪ್ಪಟ ಕನ್ನಡ ನೆಲ, ದಟ್ಟ ಹಿಂದೂ ಧರ್ಮಕೇಂದ್ರ ನೆಲೆ. ಇಲ್ಲಿ ಇಸ್ಲಾಂ ಧಾರ್ಮಿಕ ವಿಧಿವಿಧಾನ ಹೇಗೆ ಅನೂಚಾನವಾಗಿ ಯಾವುದೇ ಘರ್ಷಣೆ, ಬೇಧಭಾವಕ್ಕೆ ಆಸ್ಪದವಿಲ್ಲದಂತೆ ಸಮನ್ವಯವಾಗಿ ನಡೆದುಕೊಂಡು ಬರುತ್ತಿದೆ ಎಂಬುದಕ್ಕೆ ಕರ್ನಾಟಕ ಸಂಸ್ಕೃತಿಗೆ ಚೋದ್ಯವಾಗಿ, ಇಂದಿಗೂ ಕಂಡುಬರುತ್ತಿದೆ. ಈ ಬಗೆಯ ಆಚಣೆಯ ವೈಶಿಷ್ಟ್ಯತೆ ಕರ್ನಾಟಕದಲ್ಲಿ ಮತ್ತೆಲ್ಲಿಯೂ ಕಂಡುಬರುವುದು ಕಾಣಲಾಗುವುದಿಲ್ಲ. ಮತ್ತೆ ಇಲ್ಲಿಂದ ಆರಂಭವಾಗುವ ಪೀರಲು ಹಬ್ಬದ ಮಾದರಿಯ ಬಾಬಯ್ಯನ ಜಲದಿ, ಕರ್ನಾಟಕಾಂಧ್ರ ಗಡಿನೆಲದ ಗುಂಟಾ ಅಚಾನಕವಾಗಿ, ಜಾತ್ಯಾತೀತವಾಗಿ ನಡೆದು ಪ್ರದರ್ಶನ, ಜನಪದ ಕಲಾತ್ಮಕ ರೂಪ ಪಡೆದುಕೊಂಡು ಹಿಂದೂ ಮುಸ್ಲಿಂ ಮಧುರ ಭಾವೈಕ್ಯತೆಗೆ ಈ ಗಂಡಿಹಳ್ಳಿ ಮಠ ಪ್ರೇರಕವಾಗಿದೆಯೆ ಅನ್ನುವ ಮಟ್ಟಿಗೆ ಸಾಂಸ್ಕೃತಿಕ ಹೆಜ್ಜೆ ಗುರುತುಗಳನ್ನು ಸಿರಾ ಸೀಮೆಯ ಗಡಿಗೆ ಆತುಕೊಂಡಿರುವ ಗಂಡಿಹಳ್ಳಿಯ ಆಚರಣೆಯಲ್ಲಿ ಕಾಣಬಹುದಾಗಿದೆ. ಇಲ್ಲಿಂದ ಉತ್ತರಕ್ಕೆ ಈ ಭಾಗಗಳಲ್ಲೂ ಗಂಡಿಹಳ್ಳಿಯ ಸಾಂಸ್ಕೃತಿಕ ಎಲ್ಲೆಗಳು ಪುರಾತನ ಸೂಫಿ ಸಂಪ್ರದಾಯದ ದಟ್ಟ ಪಳೆಯುಳಿಕೆಗಳಂತೆ ಕಂಡುಬರುತ್ತದೆ.

ಗಂಗಾಜಲ, ಗಂಗಾಪೂಜೆ, ಜನಪದರ ಬದುಕಿನ ಒಂದು ಅವಿಭಾಜ್ಯ ಅಂಗವೆನ್ನುವಂತೆ ನಡೆದುಕೊಳ್ಳಲಾಗುತ್ತದೆ. ಹೆಣ್ಣುಮಕ್ಕಳು, ಮಕ್ಕಳ ಬಯಕೆ, ಮುಟ್ಟಿನ ಸಮಸ್ಯೆ ಮುಂತಾದ ಕಾರಣಗಳ ಹಿನ್ನೆಲೆಯಿಂದ ಪಾರಂಪರಿಕವಾಗಿ ನಿರ್ದಿಷ್ಟ ಕೆರೆಗೆ ಹೊಸ ಸೀರೆ, ಹಸಿ ಅಕ್ಕಿಯ ತಂಟ, ಹಣ್ಣು ಕಾಯಿ ಅರ್ಪಿಸುವ ಸಂಪ್ರದಾಯವಿದೆ. ಹೊಸದಾಗಿ ತುಂಬಿದಾಗಲೂ ಇದೇ ಮಾದರಿಯ ಬಾಗಿನ ಅರ್ಪಣೆಯೂ ಇದರ ಭಾಗವಾಗಿಯೇ ಜನಪದ ಸಂಸ್ಕೃತಿಯಲ್ಲಿದೆ.

ಸಿರಾ ಸಮೀಪದ ಪರಸಮ್ಮನ ಕೆರೆ ಇದಕ್ಕೆ ಭಿನ್ನವಾದರೂ, ಅದೇ ಮಾದರಿಯ ಆಚರಣೆಗೆ ಹೆಸರುವಾಸಿ. ಸಿರಾದಿಂದ 12 ಕಿ.ಮೀ. ದೂರದ ಹುಳಿಯಾರು-ಸಿರಾ ಮಾರ್ಗದಲ್ಲಿ ಮರಡಿ ರಂಗಪ್ಪನ ಗುಡ್ಡಕ್ಕೆ ಆತುಕೊಂಡಿರುವ ಪರಸವ್ವನ ಕೆರೆ, ಸಿರಾ ಭಾಗದ ಭಕ್ತಿ ಭಾವದ ನೆಲೆಯಾಗಿ ಪುಣ್ಯಜಲವೆಂದೇ ಹೆಸರು. ಕರ್ನಾಟಕದ ಕಾಡುಗೊಲ್ಲರ ಸಂಸ್ಕೃತಿಯಲ್ಲಿ ವಿಶೇಷ ಸ್ಥಾನಮಾನ ಪಡೆದಿರುವ ಜೆನ್ನಿಗೆ ಹಾಕುವುದು, ಹೊಳೆ ತೆಗೆಯುವುದು, ಪುಣ್ಯವದನೆ ಈ ವಿಶಿಷ್ಟ ಆಚರಣೆಯ ರೂಪವಾಗಿ, ಪರಸವ್ವನ ಕೆರೆ ಪ್ರಕಟವಾಗುತ್ತದೆ. ಕಾಡುಗೊಲ್ಲರಿಗೆ ಸಂಬಂಧಿಸಿದಂತೆ ಅಂಟುಮುಟ್ಟು, ಮೈಲಿಗೆ, ಸೂತಕ ಈ ವಿಚಾರಗಳಿಗೆ ಸಂಬಂಧಿಸಿದಂತೆ ಪರಸಕ್ಕನ ಕೆರೆಯ ತೀರ್ಥದಿಂದ ಶುಭ್ರವಾಗುವ, ಪಾವನತೆಯ ಪರಿಕಲ್ಪನೆ ಇದೆ. ಜನಪದ ಗಂಗಾಪೂಜೆಯ ಹಿನ್ನೆಲೆಯಲ್ಲಿ ಪರಸವ್ವನ ಕೆರೆಯ ಅಧ್ಯಯನಕ್ಕೆ ಆಸ್ಪದವಿದೆ.

ಸಿರಾ ತಾಲ್ಲೂಕು ವಿಭಿನ್ನ ಸಂಸ್ಕೃತಿಯ ನೆಲ. ಸಿರಾ ನಗರ ಕೇಂದ್ರದಿಂದ ಉತ್ತರಕ್ಕೆ ಹೇಮಾವತಿ ಇದೆ. ಕ್ರಿ.ಶ. 6 ನೇ ಶತಮಾನದಿಂದ 13ನೇ ಶತಮಾನದವರೆಗೆ ನೊಳಂಬರ ಸಂಸ್ಕೃತಿಯ ವೈಭವ ಇಲ್ಲಿ ಅನಾವರಣಗೊಂಡಿದ್ದು ಇದೊಂದು ಪ್ರಮುಖವಾಗಿ, ಕಾಪಾಲಿಕರ ನೆಲೆ. ಅದರ ಅವಶೇಷಗಳು ಅನ್ನುವಂತೆ ಈ ಭಾಗದ ಗಡಿಗೆ ಅಂದರೆ ಕರ್ನಾಟಕ-ಆಂಧ್ರದ ಎರಡೂ ಭಾಗದ ದ್ವಿಭಾಷಿಗರು, ಕಾಪಾಲಿಕ, ಕಾಳಾಮುಖ ಪಂಥದ ಜೊತೆಗೆ ಅವಧೂತ ಪರಂಪರೆಗೆ ಉತ್ತೇಜನ ನೀಡಿದವರು. ಹಾಗಾಗಿ ಈ ಗಡಿನೆಲದಲ್ಲಿ ಗೊರವರು, ಸಾಧುಗಳು, ಸಿದ್ಧರು, ಇವರುಗಳ ಜೊತೆಗೆ ಅವಧೂತರೂ ಕಂಡುಬರುತ್ತಾರೆ. ಸಿರಾ ತಾಲ್ಲೂಕಿನ ಪಟ್ಟನಾಯಕನಹಳ್ಳಿ ಅವಧೂತ ಪರಂಪರೆಯ ಉನ್ನತ ಕೇಂದ್ರ. ಜಾತ್ಯಾತೀತವಾಗಿ ಸಂಪೂರ್ಣ ಲೌಕಿಕ ಬದುಕಿನಿಂದ ಮುಕ್ತವಾಗಿ, ಕಠಿಣ ದೃಷ್ಟಿ, ಜಪ-ತಪ ಎಲ್ಲವನ್ನೂ ವರ್ಜಿಸುವ ಮಾದರಿಯ ಬದುಕಿನ ಅವಧೂತರು, ಯಾವುದೇ ರೀತಿಯ ರಿವಾಜಿಗೆ ಒಳಗಾದವರಲ್ಲ. ಒಂದು ರೀತಿಯ ಪವಾಡಪುರುಷರು ಶಾಂತಿಗೆ, ಸ್ನೇಹಕ್ಕೆ, ಸೌಹಾರ್ದತೆಗೆ ಇವರು ಅಗ್ರಗಣ್ಯರು. ಅಷ್ಟೇ ಉಗ್ರ ಕೋಪಿಷ್ಠರು. ಸ್ತ್ರೀ ಸಂಪರ್ಕದಿಂದ ದೂರ ಉಳಿದವರು. ಸಂಗ್ರಹ ಗುಣಕ್ಕಿಂತ ತಿರಸ್ಕಾರ, ಜಂಗಮ ರೂಪಕ್ಕೆ ಮಹತ್ವ ನೀಡಿರುವುದು, ಅವಧೂತ ಸಂಸ್ಕೃತಿಯ ಪ್ರಧಾನ ಗುಣ. ಈ ಬಗೆಯ ನೆಲೆಗಳು ಪಟ್ಟನಾಯಕನಹಳ್ಳಿ, ಗಂಡಿಹಳ್ಳಿ, ಬೆಟ್ಟಪ್ಪನಹಳ್ಳಿ, ಹನುಮನಹಳ್ಳಿ, ಲಕ್ಕನಹಳ್ಳಿ, ಪೂಜಾರ್ ಮುದ್ದನಹಳ್ಳಿ ಈ ಊರುಗಳಲ್ಲಿ ಅವಧೂತ ಪರಂಪರೆಯ ಮಠ, ಆಶ್ರಮಗಳು ಇಂದಿಗೂ ಇವೆ. ಇಲ್ಲೆಲ್ಲಾ ತಂಬೂರಿ ಸಂಪ್ರದಾಯದ ಹಾಡು, ಭಜನೆ, ತತ್ವಪದಗಳ ಮೂಲಕ ಆಧ್ಯಾತ್ಮ ಬೋಧಿಸುವ ಅಮಾವಾಸ್ಯೆ ಪೂರ್ಣಿಮೆಯ ಸಂದರ್ಭಗಳಲ್ಲಿ ವಿಶೇಷ ಪೂಜೆ, ಭಜನೆಯಲ್ಲಿ ತೊಡಗಿಕೊಂಡಿರುವುದು ಕಂಡುಬರುತ್ತದೆ. ಸಿರಾದ ಸಿರಾ, ಹಿರಿಯೂರು ರಸ್ತೆಯ ಬದಿಗೆ ಈ ಬಗೆಯ ಒಂದು ಆಶ್ರಮವಿದ್ದು ತತ್ವಪದಕಾರರು, ಭಜನೆಯವರು ಸಂಘಟನಾತ್ಮಕವಾಗಿ ಇಲ್ಲಿ ಪ್ರತಿ

ಅಮಾವಾಸ್ಯೆ, ಪೌರ್ಣಿಮೆಯ ದಿನಗಳಲ್ಲಿ ಕಾರ್ಯಕ್ರಮ ನೀಡುತ್ತಾ ಬರುತ್ತಿದ್ದಾರೆ.

ಮೂಡಲಪಾಯ ಯಕ್ಷಗಾನ ಸಿರಾ ಸೀಮೆಯ ಪ್ರಮುಖ ಜಾನಪದ ಕಲಾಪ್ರಕಾರ. ಶ್ಯಾಗದಡುವಿನ ಕಾಲುವೆ ರಂಗಯ್ಯ, ಬಂದಕುಂಟೆ ಗೋಪಾಲಗೌಡ, ಕರಿರಾಮನಹಳ್ಳಿ ಕಣಿಮಣ್ಣ ಈ ಬಗೆಯ ಯಕ್ಷಗಾನ ಭಾಗವತರು, ಪಾರಂಪರಿಕ ಕಲೆಯ ಪ್ರಸಾರದಲ್ಲಿ ವ್ಯಾಪಕ ಕೆಲಸ ಮಾಡಿದ್ದಾರೆ. ಈ ಪರಂಪರೆ ಇಂದು ಈಡಿಗರ ದಾಸರಹಳ್ಳಿಯಲ್ಲಿ ಮುಂದುವರಿದು, ಒಂದು ಕುಟುಂಬ ಯಕ್ಷಗಾನ ಕಲೆಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡು ಬರುತ್ತಿದ್ದಾರೆ. ರಮಾನಂದ ಹಾಗೂ ಅವರ ಸೋದರರು, ಮಕ್ಕಳು ಕೂಡಿಕೊಂಡು ಕರಿಭಂಟ, ದೇವಿ ಮಹಾತ್ಮೆ, ದಕ್ಷಯಾಗ, ಇಂದ್ರಜಿತ್ ಕಾಳಗ ಈ ಮೊದಲಾದ ಸುಮಾರು 15 ಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳನ್ನು ಕಲಿಸುವ, ಕಥೆ ಮಾಡುವ ಸಂಪ್ರದಾಯ ಇಂದಿಗೂ ಮುಂದುವರಿದಿದೆ. ಉಳಿದಂತೆ ಕೋಲಾಟ, ಪ್ರತಿ ಗ್ರಾಮಗಳಲ್ಲೂ ಇದ್ದು ಅವಸಾನದ ಹತ್ತಿರಕ್ಕೆ ಸರಿದಿದೆ. ಸೋಮನ ಕುಣಿತ, ಸಾಕ್ಷಿಹಳ್ಳಿ, ಸೋರೇಕುಂಟೆ, ಕಡವಿಗೆರೆ ಇಲ್ಲಿ ಮಾತ್ರ ಕಂಡುಬರುತ್ತದೆ. ಶ್ಯಾಗದಡುವಿನಲ್ಲೂ ಸೋಮನ ಕುಣಿತದ ಕಲಾವಿದರು ಇದ್ದಾರೆ. ಮುಖವೀಣೆ ಮೂಡಲಪಾಯ ಯಕ್ಷಗಾನ ಕಲೆಯ ಅಗತ್ಯ ವಾದನ. ಒಂದೇ ಒಂದು ಗೇಣು ಉದ್ದದ ಈ ವಾದನ ರೋಮಾಂಚನ, ಮಾಧುರ್ಯವನ್ನು ಮೂಡಿಸುತ್ತದೆ. ಇದು ಮೂಡಲಪಾಯ ಯಕ್ಷಗಾನದ ಅಗತ್ಯ ವಾದನ. ಇದರ ಹೆಸರಾಂತ ಕಲಾವಿದರ ಪರಿಚಯವನ್ನು ಇಲ್ಲಿ ವಿವರಿಸಲಾಗಿದೆ. ಜನಪದ ಕಾವ್ಯ ಹಾಡುಗಾರರು, ಬೇರೆ ಬೇರೆ ಕಲಾವಿದರೂ ಸಿರಾ ಸೀಮೆಯ ಕಲಾ ಸಂಪನ್ನರಾಗಿದ್ದಾರೆ. ಅವರ ಸೂಕ್ಷ್ಮ ಪರಿಚಯವನ್ನು ಸಾಧ್ಯವಾದಷ್ಟು ನೀಡಲಾಗಿದೆ. ಜಾನಪದ ಸಾಹಿತ್ಯ ಅಧ್ಯಯನ, ಸಂಶೋಧನೆಯ ಕೆಲಸಗಳ ವಿವರ ಒಂದು ಮಿತಿಯ ಒಳಗೆ ನಡೆದಿದೆ.

ಇಲ್ಲಿನ ಸಂಶೋಧನೆಯ ಕೆಲಸದ ಕಾಲ ಆರೇಳು ವರ್ಷಗಳದ್ದು. ಇದರ ನಡುವೆ, ಹಲವು ಕಾವ್ಯಗಳನ್ನು ನಾನು ಸಂಗ್ರಹಿಸಿದ್ದೇನೆ. ಬೇರೆ ಕಾಲ ಘಟ್ಟದಲ್ಲಿ ಇಲ್ಲಿನ ಸಂಶೋಧನೆಗೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ನನ್ನ ಕ್ಷೇತ್ರಕಾರ್ಯದಲ್ಲಿ ಹಲವರು ನೆರವಾಗಿದ್ದಾರೆ. ಅವರನ್ನೆಲ್ಲಾ ವಿಶೇಷವಾಗಿ ನೆನೆಯುತ್ತೇನೆ.


ಓದುಗರ ಅಭಿಪ್ರಾಯ, ಅನಿಸಿಕೆಗೆ ಸ್ವಾಗತ.

**ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ**
ಪ್ರಾಧ್ಯಾಪಕ, ಸರ್ಕಾರಿ ಪ್ರ.ದ. ಕಾಲೇಜು
ಸಿರಾ, ತುಮಕೂರು ಜಿಲ್ಲೆ


# ಪರಿವಿಡಿ


| | | |
|---|---|---|
| ಅಧ್ಯಾಯ-ಒಂದು | ಸಂಶೋಧನೆಯ ಉದ್ದೇಶ, ವ್ಯಾಪ್ತಿ | ೧ |
| ಅಧ್ಯಾಯ-ಎರಡು | ಸಿರಾ ಸೀಮೆ ಜನಪದ ಸಂಬಂಧಿ ನಡೆದಿರುವ ಕೆಲಸ | ೭ |
| ಅಧ್ಯಾಯ-ಮೂರು | ಸಿರಾ ಸೀಮೆಯ ಸ್ಥಳನಾಮಗಳು ಮತ್ತು ಸಾಂಸ್ಕೃತಿಕ ನೋಟ | ೧೫ |
| ಅಧ್ಯಾಯ-ನಾಲ್ಕು | ಸಿರಾ ಸೀಮೆಯ ಸಾಂಸ್ಕೃತಿಕ ನಾಯಕರು | ೨೫ |
| ಅಧ್ಯಾಯ-ಐದು | ಸಿರಾ ಸೀಮೆಯ ಜನಪದ ಆಚರಣೆ | ೮೦ |
| ಅಧ್ಯಾಯ-ಆರು | ಸಿರಾ ಸೀಮೆಯ ಪ್ರವಾಸಿ ನೆಲೆಗಳು, ಜಾತ್ರೆ, ತೇರುಗಳು | ೯೦ |
| ಅಧ್ಯಾಯ-ಏಳು | ಸಿರಾ ಸೀಮೆಯ ಜನಪದ ಕಲೆ | ೧೬೦ |
| ಅಧ್ಯಾಯ-ಎಂಟು | ಸಿರಾ ಸೀಮೆಯ ಕೃಷಿ ಸಂಬಂಧಿ ಜಾನಪದ | ೧೯೮ |
| ಅಧ್ಯಾಯ-ಒಂಬತ್ತು | ಸಿರಾ ನಗರ ಸಂಬಂಧಿ ಜನಪದ | ೨೧೭ |
| ಅಧ್ಯಾಯ-ಹತ್ತು | ಅನುಬಂಧ ೧-೭ | ೨೩೬-೨೪೯ |



ದೊಡ್ಡಬಾಣಗೆರೆ
ಯಾಪಲಡಕು
ಬರಗೂರು
ಅಗ್ರಹಾರ
ಬೊಪ್ಪನಹಳ್ಳಿ
ಪುಲಿಕುಂಟೆ
ಕೊಟ್ಟ
ಹೊನ್ನೇನಹಳ್ಳಿ
ರಂಗನಹಳ್ಳಿ
ಕುಂಬಾರಹಳ್ಳಿ
ಗೌಡಗೆರೆ
ಬಂಡ್ಲಕುಂಟೆ
ದ್ವಾರಾಳು
ಸಿರಾ
ಗಿರಿಪಾಥನಹಳ್ಳಿ
ಮೇಕೆರಹಳ್ಳಿ
ಮೂಗನಹಳ್ಳಿ
ರತ್ನಸಂದ್ರ
ದೊಡ್ಡಗುಳ
ಚಿಕ್ಕಗುಳ
ಹುಲೀವಹಳ್ಳಿ
ತಾಳಗುಂದ
ಕಳ್ಳಂಬೆಳ್ಳ
ತರೂರು
ಬ್ರಹ್ಮಸಂದ್ರ
ಯಲದಬಾಗಿ
ಹುಂಜನಾಳು
ಕುರುಬರಹಳ್ಳಿ
ಶಂಕರವಹಳ್ಳಿ
ರಂಗನಹಳ್ಳಿ
ಬೆಂಚೆ
ಚಿಕ್ಕಅಗ್ರಹಾರ
ಕರೇಮಾದನಹಳ್ಳಿ



ಹೇಮಾವತಿ ಹರಿದು ನಿಂತ ಸಿರಾದ ದೊಡ್ಡಕೆರೆ
ಬಿಸಿಲ ನಾಡಿಗೆ ಬಯಸಿ ಬಂದ ಜಲದೇವತೆ

# ಅಧ್ಯಾಯ – ಒಂದು
# ಸಂಶೋಧನೆಯ ಉದ್ದೇಶ, ವ್ಯಾಪ್ತಿ

ಸೀರ್ಯಾದ ಕೆರೆ ಮೇಲೆ ಸಿರಿಗಂಧ ಮರುಹುಟ್ಟಿ
ರತ್ನಗಿರಿತನಕ ಗಮ್ಮೆಂದು । ಆನೆಗುಂದಿ
ತನಕ ಆನೆ ಸಾಲುಗಟ್ಟಿ । ಪಾಳೆಗಾರ ದೊರೆಯೆ[1]

ಇದು ಸಿರಾ ಸೀಮೆಯ ಹಿರಿಮೆ ಗರಿಮೆಯನ್ನು ಸಾರ್ಥಕವಾಗಿ ಪ್ರತಿನಿಧಿಸುವ ಒಂದು ಜನಪದ ಗೀತೆ. ಸಿರಾವನ್ನು ಆಳಿದ ಪಾಳೆಯಗಾರರ ಕಾಲದ ವೈಭವ, ವಿಸ್ತರಣೆಯನ್ನು ಸಾರ್ಥಕವಾಗಿ ಹಿಡಿದಿಟ್ಟಿರುವ ಈ ಗೀತೆ ವಿಜಯನಗರ, ರತ್ನಗಿರಿ ಸಂಸ್ಥಾನದೊಂದಿಗೆ ಸಿರಾ ಹೊಂದಿದ್ದ ಬಾಂಧವ್ಯ ಸಂಪರ್ಕವನ್ನು ನಿಚ್ಚಳವಾಗಿ ಪ್ರಕಟಿಸುತ್ತದೆ. ರಾಜಮಹಾರಾಜರು, ವೀರ ಯೋಧರು. ಸಾಧು-ಸಂತರು, ಬಾಳಿ ಬೆಳಗಿದ ಹಿರಿಮೆ ಸಿರಾ ಸೀಮೆಗಿದೆ. ಶೌರ್ಯ ಪರಾಕ್ರಮ, ಪ್ರತಿಭೆ-ಪಾಂಡಿತ್ಯ, ತ್ಯಾಗ-ಬಲಿದಾನಗಳ ರೋಚಕ ಚಿತ್ರ ಸಿರಾ ಸೀಮೆಯ ಇತಿಹಾಸದಲ್ಲಿ ಹಾಸುಹೊಕ್ಕಾಗಿದೆ. ಅಪೂರ್ವ ಜನಪದ ಸಂಸ್ಕೃತಿ, ಮೈನವಿರೇಳಿಸುವ ಅರಸು ಪರಂಪರೆ, ಗುಡಿ-ಗೋಪುರ, ಕೋಟೆಗಳ ಸಿರ್ಯಾ ಸರ್ವಧರ್ಮ ಸಮನ್ವಯದ ಕೇಂದ್ರ. ರಾಷ್ಟ್ರೀಯ ಭಾವೈಕ್ಯತೆಗೆ ಸಂಕೇತವೂ ಹೌದು. ಜನಪದ ಹಾಡು, ಮಹಾಕಾವ್ಯ, ಕುಣಿತ, ಯಕ್ಷಗಾನ, ಬಯಲಾಟ, ಅಡಿಗೆ, ಉಡುಗೆ, ದೇಶಿನುಡಿ ಈ ನೆಲದ ವಿಶೇಷ.

ಪೂರ್ವಕ್ಕೆ ಮಧುಗಿರಿ ಮತ್ತು ಕೊರಟಗೆರೆ, ಈಶಾನ್ಯಕ್ಕೆ ಆಂಧ್ರಪ್ರದೇಶದ ಮಡಕಶಿರಾ, ಆಗ್ನೇಯದಲ್ಲಿ ತುಮಕೂರು, ದಕ್ಷಿಣಕ್ಕೆ ಗುಬ್ಬಿ, ನೈಋತ್ಯಕ್ಕೆ ಚಿಕ್ಕನಾಯಕನಹಳ್ಳಿ, ಪಶ್ಚಿಮ-ವಾಯುವ್ಯಕ್ಕೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಈ ತಾಲ್ಲೂಕಿನ ಗಡಿನೆಲೆಗಳು. ಕಳ್ಳಂಬೆಳ್ಳ, ಬುಕ್ಕಾಪಟ್ಟಣ, ಹುಲಿಕುಂಟೆ, ಗೌಡಗೆರೆ, ಸಿರಾ ಕಸಬಾ, ಈ ತಾಲ್ಲೂಕಿನ ಹೋಬಳಿ ಕೇಂದ್ರಗಳು. ತಡಕಲೂರು, ದೊಡ್ಡಬಾಣಗೆರೆ, ಹುಲಿಕುಂಟೆ, ಹೊಸಹಳ್ಳಿ, ದ್ವಾರನಕುಂಟೆ, ಬೇವಿನಹಳ್ಳಿ, ಬರಗೂರು, ಹಂದಿಕುಂಟೆ, ನಾದೂರು, ಹೆಂದೊರೆ, ಹುಣಸೇಹಳ್ಳಿ, ಹೊಸೂರು, ತಾವರೇಕೆರೆ, ಗೌಡಗೆರೆ, ಬೂವನಹಳ್ಳಿ, ಲಕ್ಷ್ಮೀಸಾಗರ, ಮೇಲ್ಕುಂಟೆ, ಕೊಟ್ಟ, ಮದಲೂರು, ಹೊನ್ನಗೊಂಡನಹಳ್ಳಿ, ಮಾಗೋಡು, ರತ್ನಸಂದ್ರ, ಯಲಿಯೂರು, ಚಿಕ್ಕನಹಳ್ಳಿ, ಭೂಪಸಂದ್ರ, ತರೂರು, ಕಳ್ಳಂಬೆಳ್ಳ, ಚಿನ್ನೇನಹಳ್ಳಿ, ಗೋಪಾಲದೇವರಹಳ್ಳಿ, ಸೀಬಿ, ಸೀಬಿ ಅಗ್ರಹಾರ, ದೊಡ್ಡ ಅಗ್ರಹಾರ, ನೇರಲೇಗುಡ್ಡ, ಬುಕ್ಕಾಪಟ್ಟಣ, ರಾಮಲಿಂಗಾಪುರ, ಹುಯಿಲ್‌ದೊರೆ

ಇವು ಸಿರಾ ತಾಲ್ಲೂಕಿನ ಗ್ರಾಮಪಂಚಾಯ್ತಿ ಕೇಂದ್ರ ಸ್ಥಾನಗಳು. ಈ ಮೂವತ್ತಾರು ಗ್ರಾಮ ಪಂಚಾಯಿತಿಗಳಲ್ಲಿ 647 ಸದಸ್ಯರುಗಳು ಪ್ರತಿನಿಧಿಸುತ್ತಿದ್ದಾರೆ.

ಸಿರಾ 26 ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳನ್ನು ಹೊಂದಿದೆ. ಅವುಗಳೆಂದರೆ ತಡಕಲೂರು, ಹುಲಿಕುಂಟೆ, ಬರಗೂರು, ಹಂದಿಕುಂಟೆ, ಬೇವಿನಹಳ್ಳಿ, ನಾದೂರು, ಹೆಂದೊರೆ, ಹುಣಸೇಹಳ್ಳಿ, ತಾವರೇಕೆರೆ, ಮದಲೂರು, ಮೇಲ್ಕುಂಟೆ, ಹೊನ್ನಗೊಂಡನಹಳ್ಳಿ, ರತ್ನಸಂದ್ರ, ಯಲಿಯೂರು, ಮಾನಂಗಿ, ಲಕ್ಷ್ಮೀಸಾಗರ, ಚಿಕ್ಕನಹಳ್ಳಿ, ಕಳ್ಳಂಬೆಳ್ಳ, ತರೂರು, ಭೂಪಸಂದ್ರ, ಸೀಬಿ, ಗೋಪಾಲದೇವರ ಹಳ್ಳಿ, ಹುಯಿಲ್‌ದೊರೆ, ನೇರಳೇಗುಡ್ಡ, ಬುಕ್ಕಾಪಟ್ಟಣ, ರಾಮಲಿಂಗಾಪುರ ಇವುಗಳನ್ನು 26 ತಾಲ್ಲೂಕು ಪಂಚಾಯಿತಿ ಸದಸ್ಯರು ಪ್ರತಿನಿಧಿಸುತ್ತಿದ್ದಾರೆ. ಹುಲಿಕುಂಟೆ, ನಾದೂರು, ತಾವರೇಕೆರೆ, ಮದಲೂರು, ಚಿಕ್ಕನಹಳ್ಳಿ, ಬುಕ್ಕಾಪಟ್ಟಣ, ಕಳ್ಳಂಬೆಳ್ಳ ಇವು ಸಿರಾ ತಾಲ್ಲೂಕಿನ ಜಿಲ್ಲಾ ಪಂಚಾಯತ್ ಕ್ಷೇತ್ರಗಳು.

ಈ ಹಿಂದೆ ಸಿರಾ, ಕಳ್ಳಂಬೆಳ್ಳ ಈ ಎರಡು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದ್ದ ಸಿರಾ ತಾಲ್ಲೂಕು, 2008 ರಿಂದ ಈಚೆಗೆ ಸಿರಾ ಒಂದು ವಿಧಾನಸಭಾ ಕ್ಷೇತ್ರವಾಗಿದೆ. ಬುಕ್ಕಾಪಟ್ಟಣ ಹೋಬಳಿ ಸಿರಾ ವಿಧಾನಸಭಾ ಕ್ಷೇತ್ರದಿಂದ ಹೊರಗುಳಿದಿದ್ದು ನೆರೆಯ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುತ್ತದೆ. ಶ್ರೀ ಟಿ.ಬಿ.ಜಯಚಂದ್ರ ಅವರು ಈ ಏಕೀಕೃತ ಸಿರಾ ವಿಧಾನಸಭಾ ಕ್ಷೇತ್ರದ ಮೊದಲ ಶಾಸಕರು. ಆರಂಭದಲ್ಲಿ ಮಧುಗಿರಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದ್ದ ಸಿರಾ ನಂತರ ಪುನರ್ ವಿಂಗಡಣೆಯಲ್ಲಿ ಚಿತ್ರದುರ್ಗ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿತು. ಕಂದಾಯ ಗ್ರಾಮಗಳು 249, ಮಜರೆ ಗ್ರಾಮಗಳು 236 ಕೂಡಿಕೊಂಡು ಒಟ್ಟು 485 ಗ್ರಾಮಗಳನ್ನು ಹೊಂದಿರುವ ಸಿರಾ ತಾಲ್ಲೂಕಿನ ಭೌಗೋಳಿಕ ವಿಸ್ತೀರ್ಣ 1,55,377 ಹೆಕ್ಟೇರ್. 2001 ರ ಜನಗಣತಿಯ ಪ್ರಕಾರ ಈ ತಾಲ್ಲೂಕಿನ ಒಟ್ಟು ಜನಸಂಖ್ಯೆ 3,01,473 ಲಕ್ಷ. ಇದರಲ್ಲಿ ಸಿರಾ ಗ್ರಾಮಾಂತರ ಪ್ರದೇಶಗಳಲ್ಲಿ 2,51,385 ಇದ್ದರೆ ಸಿರಾ ನಗರದಲ್ಲಿ 50,088 ರಷ್ಟು ಇದ್ದಾರೆ. ಸಮುದ್ರಮಟ್ಟಕ್ಕಿಂತ 661.42 ಮೀ. ಎತ್ತರವಿದ್ದು ಸಿರಾ ಸೀಮೆ ಅಕ್ಷಾಂಶ 13-44 ಹಾಗೂ ರೇಖಾಂಶ 76-54 ಸೆಂಟಿಗ್ರೇಡ್‌ಗಳಾಗಿರುತ್ತದೆ.

ರಾಷ್ಟ್ರೀಯ ಹೆದ್ದಾರಿ ನಂ.4 ಸಿರಾ ಪಟ್ಟಣದ ಮೇಲೆ ಹಾದುಹೋಗಿದ್ದು, 47 ಕಿ.ಮೀ. ಉದ್ದದ ರಸ್ತೆ ಈ ತಾಲ್ಲೂಕಿನ ಆಸುಪಾಸಿನಲ್ಲಿ ಹಾದುಹೋಗುತ್ತದೆ. ಮೂಡಿಗೆರೆಯಿಂದ ಆಂಧ್ರಪ್ರದೇಶದ ವೆಂಕಟಗಿರಿ ಕೋಟೆಯ ಮಾರ್ಗದಲ್ಲಿ ರಾಜ್ಯ ಹೆದ್ದಾರಿ ಸಿರಾ ಮಾರ್ಗವಾಗಿ ಬಂದಿದ್ದು 59.19 ಕಿ.ಮೀ. ದೂರದಲ್ಲಿ ಮೂರು ರಸ್ತೆಗಳು ಬರುತ್ತವೆ. ಉಳಿದಂತೆ 726.9

ಕಿ.ಮೀ. ನಷ್ಟು ಉದ್ದದ 42 ಜಿಲ್ಲಾ ಮುಖ್ಯ ರಸ್ತೆಗಳು ಸಿರಾ ತಾಲ್ಲೂಕನ್ನು ಇತರ ಪ್ರಮುಖ ನಗರಗಳೊಂದಿಗೆ ಸಂಪರ್ಕಿಸಿದೆ.

**ಸಿರಾ ಹೆಸರಿನ ಮೂಲ:**

ಸಿರಾ ಈ ಹೆಸರಿನ ಬಗೆಗೆ ನಾನಾಬಗೆಯ ದಂತಕಥೆಗಳು, ವ್ಯಾಖ್ಯಾನಗಳು ಈ ಭಾಗದಲ್ಲಿವೆ. ಪಾಳೆಯಗಾರರು ಈ ಊರನ್ನು ಕಟ್ಟಿದರೆಂದೂ ಹೇಳಲಾಗುತ್ತಿದೆ. ಇವರಿಗೆ ಭೂಮಿ ನೀಡಿದ ದೇವಣ್ಣ, ಸಿರಿಯಣ್ಣ ಎಂಬ ಗೊಲ್ಲ ಮೂಲದ ವ್ಯಕ್ತಿಗಳು ಸ್ಥಳದಾನ ಮಾಡಿದ ಕಾರಣದಿಂದ ಅವರ ಹೆಸರನ್ನೇ ಪಾಳೆಯದಾರರು ಈ ಊರಿಗೆ ಇಟ್ಟಿದ್ದಾರೆಂದೂ ಹೇಳಲಾಗುತ್ತಿದೆ. ಸಿರಾವನ್ನು ಆಳಿದ ರಾಜಮನೆತನಗಳಲ್ಲಿ ಪಾಳೆಯಗಾರರೂ ಒಬ್ಬರು. ಆದರೆ ಇವರಿಗಿಂತ ಹಿಂದೆ ಸುಮಾರು ಐದು ರಾಜ ಮನೆತನಗಳು ಸಿರಾ ನಗರವನ್ನು ಆಳ್ವಿಕೆ ಮಾಡಿವೆ. ಪಾಳೆಯಗಾರರ ಕಾಲ ಆರಂಭವಾಗುವುದು ವಿಜಯನಗರ ಸಾಮ್ರಾಜ್ಯ ಪತನದ ನಂತರ. 1565ರ ವಿಜಯನಗರದ ಪತನ ಇಡೀ ದಕ್ಷಿಣ ಭಾರತದಲ್ಲಿನ ಘಟನೆಗೆ ಕಾರಣವಾಯಿತು. ವಿಜಯನಗರದ ಅರಸರು ಅಂತ್ಯದಲ್ಲಿ ಆಯಾಯ ಪ್ರಾಂತ್ಯದವರಿಗೆ ಆಯಾಯ ಭಾಗವನ್ನು ಬಿಟ್ಟುಕೊಟ್ಟರು. ಸಿರಾವನ್ನು ಆಳಿದ ಪಾಳೆಯಗಾರರು ಇದೇ ಪರಂಪರೆಯಲ್ಲಿ ಬಂದವರು. ಈ ಹಿನ್ನೆಲೆಯಿಂದ, ಸಿರಾ ಇತಿಹಾಸದಲ್ಲಿ ಪಾಳೆಯಗಾರರ ಕಾಲ ಕ್ರಿ.ಶ.1585 ರ ಸುಮಾರಿಗೆ ಪ್ರಾರಂಭವಾಗುತ್ತದೆ. ಆದರೆ ಸಿರಾ ಸೀಮೆಯಲ್ಲಿ ದೊರೆತಿರುವ ಅಪಾರ ಪ್ರಮಾಣದ ಶಾಸನಗಳು, ಐತಿಹಾಸಿಕ ಆಕರಗಳಲ್ಲಿ ಸಿರಾ ಹೆಸರಿನ ಪ್ರಸ್ತಾಪ ಮೇಲಿಂದ ಮೇಲೆ ಪ್ರಸ್ತಾಪವಾಗುತ್ತದೆ. ಆದುದರಿಂದ ಸಿರಾ ಹೆಸರು ಪಾಳೆಯಗಾರರ ಆಳ್ವಿಕೆಗಿಂತಲೂ ಪ್ರಾಚೀನವಾದುದೆಂದು ತಿಳಿಯುತ್ತದೆ. ಕ್ರಿ.ಶ.878ರ ಸಿರಾ ಶಾಸನದ ಪ್ರಕಾರ ಪಲ್ಲವಾದಿ ರಾಜನ ಮಗ ಮಹೇಂದ್ರರಾಜನ ಉಲ್ಲೇಖದೊಂದಿಗೆ ಸೀರ್ಯಾ ನಾಡು ನಾನ್ನೂರು> ನಾದೂರನ್ನು ಉಲ್ಲೇಖಿಸುತ್ತದೆ. ಕ್ರಿ.ಶ.1126 ರ ಚಾಲುಕ್ಯ ತ್ರೈಲೋಕ್ಯ ಮಲ್ಲನ ಕಾಲದ ಶಾಸನದಲ್ಲಿ ದೊಡ್ಡ ಮುನ್ನೂರು, ಸಿರೆ ಮುನ್ನೂರು, ದರುವೆ ಮುನ್ನೂರು, ಕಣೆಕಲ್ಲು ಮುನ್ನೂರು, ಸಿಂದವಾಡಿ ಸಾವಿರ ಎಂಬ ವಿವರಣೆಯಲ್ಲಿ ಸಿರಾದ ಉಲ್ಲೇಖವೂ ಇದೆ. ಇವುಗಳ ಜೊತೆಗೆ ನೊಳಂಬರು, ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರ ಕಾಲದ ಬಹುತೇಕ ಶಾಸನಗಳಲ್ಲಿ ಸಿರಾ ಹೆಸರಿನ ಉಲ್ಲೇಖ ಮೇಲಿಂದ ಮೇಲೆ ಪ್ರಸ್ತಾಪವಾಗುತ್ತದೆ. ಕ್ರಿ.ಶ.1533ರ ಮೇಲುಕುಂಟೆ ಶಾಸನದಲ್ಲಿ ಸಿರಾದ ಪ್ರಸ್ತಾಪವಿದ್ದು ಇದರಲ್ಲಿ ಹರತಿ ಇಮ್ಮಡಿ ರಂಗಪ್ಪನಾಯಕನ ಉಲ್ಲೇಖವಿದೆ. ಈ ಎಲ್ಲ ಹಿನ್ನೆಲೆ ಹಾಗೂ ಈ ಭಾಗದಲ್ಲಿ ವ್ಯಾಪಕವಾಗಿ ದೊರೆಯುವ ಜನಪದ ಕಥನಗೀತೆ, ಚೌಡಿಕೆ ಪದಗಳಲ್ಲಿ ಸೀರ್ಯಾ, ಸಿರಾ, ಸೀರಾ ಸೀಮೆ ಮುಂತಾದ ಉಲ್ಲೇಖ ಬರುತ್ತದೆ. ಈ ಎಲ್ಲ ಹಿ

ನ್ನೆಲೆಗಳಿಂದ ಸಿರಾ ಈ ಹೆಸರು ಪ್ರಾಚೀನವಾಗಿದ್ದು ಪ್ರಾರಂಭದಲ್ಲಿ ಇದೊಂದು ಪುಟ್ಟ ಹಳ್ಳಿಯಾಗಿ ನಂತರ ಕಾಲದಿಂದ ಕಾಲಕ್ಕೆ ವಿಸ್ತಾರವಾಗಿ ಬೆಳೆದಿದೆ ಎಂಬುದಾಗಿ ತಿಳಿದುಬರುತ್ತದೆ.

ಸಿರಾ ನಗರದ ಸ್ಥಾಪಕ ಸಿರಿಯಣ್ಣನೆಂಬ ಗೊಲ್ಲ ಜನಾಂಗದ ವ್ಯಕ್ತಿಯಾಗಿದ್ದು, ಈತ ಪಶುಪಾಲನೆಯ ಕಾಯಕದವನು ಎಂಬುದಾಗಿ ಸ್ಥಳೀಯ ಐತಿಹ್ಯ ಹೇಳುತ್ತದೆ. ಸ್ಥಳನಾಮಗಳ ಅಧ್ಯಯನದ ಸ್ವರೂಪದಲ್ಲಿ ಈ ಅಂಶ ಹೆಚ್ಚು ವಾಸ್ತವಿಕವಾಗಿದ್ದು ವ್ಯಕ್ತಿಯ ಹೆಸರಿನಲ್ಲಿಯೇ ಸ್ಥಳ ನಿರ್ಮಾಣವಾಗಿದೆ. ಇಂಥ ವ್ಯಕ್ತಿ ಹೆಸರಿನ 100 ಕ್ಕೂ ಹೆಚ್ಚು ಹಳ್ಳಿಗಳು ಸಿರಾ ತಾಲ್ಲೂಕಿನಲ್ಲಿವೆ. ಈ ಹಿನ್ನೆಲೆಯಲ್ಲಿ ಸಂಸ್ಕೃತದ ಶ್ರೀ ತತ್ಸಮವಾಗಿ ಸಿರಿ ಎಂದಾಗುತ್ತದೆ. ಹಳೆಯ ಶಬ್ದಗಳನ್ನು ಸೇರಿಸಿ ಹೊಸ ಪದಗಳನ್ನು ಕಟ್ಟುವುದು ಜನಪದರ ಜಾಯಮಾನವಾಗಿದೆ. ಹಾಗಾಗಿಯೇ ಸಿರಿಯ, ಸಿರಯಣ್ಣ ಎಂಬುದು ಸಿರಿ, ಸಂಪತ್ತು ಎಂಬ ಅರ್ಥಗಳಲ್ಲಿ ಬಳಕೆಯಾಗುತ್ತದೆ. ಈ ವ್ಯಕ್ತಿಯ ಹೆಸರೇ ಸಿರಾ ಸ್ಥಳದ ಮೂಲವೂ ಆಗಿದೆ. ಜನಪದರಿಗೆ ಸಿರಾ ಎಂಬ ಶಬ್ದ ಹೊಸತೇನಲ್ಲ. ತಮ್ಮ ದೈನಂದಿನ ವ್ಯವಹಾರದಲ್ಲಿ ಮೇಲಿಂದ ಮೇಲೆ ಈ ಪದವನ್ನು ಬಳಸಲಾಗುತ್ತದೆ. ಉದಾ.ಬಡತನ x ಸಿರಿತನ, ಬಡವ x ಶ್ರೀಮಂತ ಹೀಗೆ ಪದ ಬಳಕೆಯಲ್ಲಿ ಸಿರಿ ಪದವನ್ನು ಕಾಣಬಹುದು. ಈ ಸಿರಿ ಪದವೇ ಸೀರ್ಯಾ ಪದವಾಗಿ ವ್ಯಕ್ತಿ ಹೆಸರಲ್ಲಿ ಸೇರಿಕೊಂಡು ನಾಮವಾಚಕವಾಗಿ ಬಳಕೆಯಾಗುತ್ತದೆ. ಈ ವ್ಯಕ್ತಿಮೂಲದ ಹೆಸರೇ ಸಿರಾ ನಗರದ ಹೆಸರಿನ ಮೂಲವೂ ಆಗಿದೆ.

ಪಾಳೆಯಗಾರರ ಸಂಬಂಧವನ್ನು ಸಿರಾ ನಗರಕ್ಕೆ ಸಮೀಕರಿಸುವ ಸಂದರ್ಭದಲ್ಲಿ ಕ್ರಿ.ಶ.1569 ರ ಮಧುಗಿರಿ ಶಾಸನ 10 ಪ್ರಮುಖ ಆಕರವಾಗುತ್ತದೆ. ಇದರ ಪ್ರಕಾರ ಹರತಿ ಲಕ್ಷ್ಮೀಪತಿ ನಾಯಕರಿಗೆ ವಿಜಯನಗರದ ಅರಸುಗಳು ಅಮರಮಾಗದಿಯಾಗಿ ಸಿರಿಯಾ, ಅಗಳಿ, ದೊಡ್ಡೇರಿ ಸೀಮೆಗಳನ್ನು ಕೊಟ್ಟ ವಿವರವಿದೆ. ಇದರ ಪ್ರಕಾರ ಸಿರಾ ಆಳಿದ ಪಾಳೆಯಗಾರರ ಅವಧಿ ಕ್ರಿ.ಶ. 1569 ಅಥವಾ 15 ನೇ ಶತಮಾನದ ಉತ್ತರಾರ್ಧ ಭಾಗದಿಂದ ಆರಂಭವಾಗುತ್ತದೆ. ಸಿರಾ ನಗರ ಈ ವೇಳೆಗಾಗಲೇ ವೈಭವದಿಂದ ಕೂಡಿದ್ದು ರಾಷ್ಟ್ರಕೂಟರು, ಚಾಲುಕ್ಯರು, ನೊಳಂಬರು, ಪಲ್ಲವರು, ಚೋಳರು, ಗಂಗರು, ವಿಜಯನಗರದ ಅರಸರು ಈ ಮುಂತಾದ ಅರಸರ ಆಳ್ವಿಕೆಗೆ ಒಳಪಟ್ಟಿತ್ತು ಮಾತ್ರವಲ್ಲ ದಕ್ಷಿಣ ಕರ್ನಾಟಕದಲ್ಲಿ ಪ್ರಸಿದ್ಧಿಯೂ ಆಗಿದ್ದಿತು.

ನಂತರ ಆಳ್ವಿಕೆ ಮಾಡಿದ ಪಾಳೆಯಗಾರರು, ಬಿಜಾಪುರದ ಸುಲ್ತಾನರು, ದೆಹಲಿ ಮೊಘಲರು, ನವಾಬರು, ಮರಾಠರು, ಹೈದರ್-ಟಿಪ್ಪು, ಮೈಸೂರಿನ ಒಡೆಯರು, ಕಂಪನಿ

ಸರ್ಕಾರ ಹೀಗೆ ಅರಸು ಪ್ರಭುತ್ವದಿಂದ, ಪ್ರಜಾಪ್ರಭುತ್ವದ ತನಕ, ಸಿರಾ ನಗರವನ್ನು ಆಳಿದವರು ಈ ಪ್ರದೇಶವನ್ನು ಕಟ್ಟಿ ಬೆಳೆಸುವಲ್ಲಿ ಅಪಾರವಾಗಿ ಶ್ರಮಿಸಿದ್ದಾರೆ.

ದಟ್ಟ ಬಯಲುಸೀಮೆಯಾದ ಸಿರಾ, ದಕ್ಷಿಣ ಕರ್ನಾಟಕದ ಅದ್ಭುತ, ಅನನ್ಯ ಜನಪದ ವಾಙ್ಮಯ ಕೇಂದ್ರ. ಬುಡಕಟ್ಟು ಸಂಸ್ಕೃತಿಯ ಇಲ್ಲಿನ ಕಾಡುಗೊಲ್ಲರು ಸಂಸ್ಕೃತಿಯ ನಿರಂತರ ವಾಹಕರು. ಜನಪದ ವಾಙ್ಮಯದ ಪ್ರೇರಕರೂ ಆಗಿದ್ದಾರೆ. ಅವಿದ್ಯಾವಂತ ಪರಂಪರೆಯ ಈ ಜನ, ಆರೇಳು ರಾತ್ರಿ ನಿರಂತರರಾಗಿ ಕಾವ್ಯ ಹಾಡುವ, ಗಣೆ ಊದುವ, ಅನನ್ಯ ಪ್ರತಿಭಾವಂತರು. ಕಾಡುಗೊಲ್ಲರ ಹಟ್ಟಿಗಳು ಹುಲ್ಲು ಎಲೆಗಳಿಂದ ಕಟ್ಟಿದ ಗುಡಿಸಲಾದರೂ ಹಾಡು, ಕತೆ, ಗಾದೆಗಳ ಕಣಜಗಳೆಂಬುದು ಮರೆಯಬಾರದ ಸಂಗತಿ. ಈ ಭಾಗದಲ್ಲಿ ವ್ಯಾಪಕವಾಗಿ ಹಾಡುವ ಎೀರಜುಂಜಪ್ಪ, ಎತ್ತಪ್ಪ, ಚಿತ್ರದೇವರು, ಕಾಟಂಲಿಂಗ, ಕಂಬದರಂಗ ಈ ಸಾಂಸ್ಕೃತಿಕ-ಪುರಾಣ ಪುರುಷರ ಬಗೆಗೆ ಸಿರಾ ಸೀಮೆಯಲ್ಲಿ ಮಹತ್ವದ ಕಾವ್ಯಗಳು ಲಭ್ಯವಿವೆ. ಇದು ದೇಶೀ ಸಂಸ್ಕೃತಿಯ ಹಿರಿಮೆಯಾಗಿದ್ದು ಹಲವು ಸಂಶೋಧನೆಗೆ ಆಕರವಾಗಿವೆ. ಇದು ಕರ್ನಾಟಕ ಸಾಂಸ್ಕೃತಿಕ ಇತಿಹಾಸಕ್ಕೆ ಸಿರಾ ಸೀಮೆ ನೀಡಿದ ಬಹುದೊಡ್ಡ ಕೊಡುಗೆ ಎಂಬುದನ್ನು ಮರೆಯುವಂತಿಲ್ಲ. ಈ ತಾಲ್ಲೂಕಿನ ಸಂಸ್ಕೃತಿ, ಐತಿಹಾಸಿಕತೆ, ದಾನ-ದತ್ತಿಗಳ ಮೂಲಕ ಧಾರ್ಮಿಕ ಸಮನ್ವಯತೆ ಮೆರೆದ, ಜನೋಪಕಾರಿ ಕೆಲಸಗಳಿಗೆ ಆಶ್ರಯವಾಗಿ ತ್ಯಾಗ, ಬಲಿದಾನಗೈದ ಹಲವು ಮಹಾಪುರುಷರ ಸಾರ್ಥಕ ಬದುಕನ್ನು ಕಟ್ಟಿಕೊಡುವ ಈ ಭಾಗದ ಶಾಸನಗಳು ಕೇವಲ ಕಲ್ಲಿನ ಬರಹವಾಗದೆ, ಸಿರಾ ಸೀಮೆಯ ಸಂಸ್ಕೃತಿಯ ಸೊಲ್ಲುಗಳಾಗಿವೆ.

ಹಿಂದೂ-ಮುಸ್ಲಿಂ ಸಂಗಮ ಸಂಸ್ಕೃತಿಗೆ, ಐಕ್ಯತೆಗೆ ಮಾದರಿಯಾಗಿರುವ ಸಿರ್ಯಾ ಸೀಮೆ, ಪ್ರಧಾನವಾಗಿ ಮಂದಿರ, ಮಸೀದಿಗಳ ಬೀಡು. ಮಲ್ಲಿಕ್ ರಿಹಾನ್ ದರ್ಗಾ, ಜಮ್ಮಾ ಮಸೀದಿ, ಬರಾಕಿ ಮಸೀದಿ, ಮಹಮದ್ ಖಾನ್ ಗೋರಿ, ಚಿನ್ನದ ಗೋರಿ, ಈದ್ಗಾ ಮೈದಾನವೂ ಸೇರಿದಂತೆ 50 ಮಸೀದಿಗಳು 17ನೇ ಶತಮಾನದ ವೇಳೆಗೆ ಸಿರಾ ನಗರದಲ್ಲಿದ್ದವೆಂದು ಹೇಳಲಾಗುತ್ತಿದೆ[2]. ಇದರ ಜೊತೆ ಜೊತೆಗೆ ನಾರಾಯಣಸ್ವಾಮಿ ದೇವಾಲಯ, ಗಣಪತಿ ದೇವಾಲಯ, ವೀರಭದ್ರ ದೇವಾಲಯ, ಕೊಳದಪಲೇಶ್ವರ, ಆಂಜನೇಯ, ದುರ್ಗಾಪರಮೇಶ್ವರಿ, ಭವಾನಿ ಮಂದಿರ, ಕೊಲ್ಲಾಪುರದಮ್ಮ, ಕನ್ನಿಕಾಪರಮೇಶ್ವರಿ ಮಂದಿರ, ಏಕನಾಥೇಶ್ವರಿ, ಪಾಂಡುರಂಗ ದೇವಾಲಯ, ಕಾಳಿಕಾಂಬ ದೇವಾಲಯ, ಸಿರಾ ನಗರದ ಭಕ್ತಿಭಾವದ ನೆಲೆಗಳಾಗಿವೆ. ಪಟ್ಟನಾಯಕನಹಳ್ಳಿ ನಂಜಾವಧೂತ ಮಠ, ಹನುಮನಹಳ್ಳಿ ಲಕ್ಕಪ್ಪಸ್ವಾಮಿ ಮಠ, ಮೂಗನಹಳ್ಳಿ ರೇವಣಸಿದ್ದೇಶ್ವರ ಮಠ, ಗಂಡಿಹಳ್ಳಿ ಬುಡನ್‌ಮಠ ಸಿರಾದ ಕಾಳಿಂಗಯ್ಯನ ಮಠ ಇವುಗಳು ಪುರಾತನ ಗುರು

ಪರಂಪರೆಗೆ ತೋರುಗಂಭದಂತಿವೆ. ಕಳುವರಹಳ್ಳಿ, ಮರಡಿಗುಡ್ಡ, ಪುರಲೇಹಳ್ಳಿ, ತಾವರೇಕೆರೆ, ಮಾಗೋಡು, ಮೂಗನಹಳ್ಳಿ, ಸಾಕ್ಷಿಹಳ್ಳಿ, ಬೆಜ್ಜಿಹಳ್ಳಿ, ತಡಕಲೂರು, ಸೀಬಿ, ಸಿರಾ ಸೀಮೆಯ ಪವಿತ್ರ ನೆಲೆಗಳು, ಜಾತ್ರೆ, ರಥೋತ್ಸವದ ಹಿರಿಮೆ ಇವುಗಳಿಗಿವೆ. ಸೀಬಿ ನರಸಿಂಹಸ್ವಾಮಿ ದೇವಾಲಯ, ಸಿರಾದ ಕಾಳಿದಾಸನಗರದ ಶ್ರೀ ಗುರು ರೇವಣಸಿದ್ದೇಶ್ವರ ದೇವಾಲಯಗಳ ಭಿತ್ತಿಚಿತ್ರಗಳು ಕರ್ನಾಟಕ ಚಿತ್ರಕಲೆ ಕ್ಷೇತ್ರಕ್ಕೆ ನೀಡಿದ ಮರೆಯಬಾರದ ಕೊಡುಗೆ[3].

ಈ ಬಗೆಯ ಸಾಂಸ್ಕೃತಿಕ ಸಂಪತ್ತಿನ, ಜಾನಪದ ಸಂಸ್ಕೃತಿಯ ಸಿರಾ ತಾಲ್ಲೂಕಿನ ಭೌಗೋಳಿಕ ವ್ಯಾಪ್ತಿಯನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಇಲ್ಲಿನ ಜನಪದ ಸಾಹಿತ್ಯ, ಸಂಶೋಧನೆ, ಕಲೆ-ಕಲಾವಿದರು, ಸ್ಥಳನಾಮಗಳ ಹಿರಿಮೆ, ಸಾಂಸ್ಕೃತಿಕ ವೀರರು, ಆ ಸಂಬಂಧಿ ಜಾನಪದ, ಕೃಷಿ, ದೈವ, ಜಾತ್ರೆ, ಅಡಿಗೆ, ಆಟ ಇವುಗಳ ಜೊತೆಗೆ ಆಧುನಿಕ ಸೌಲಭ್ಯಗಳ ಮುಖಾಮುಖಿಯ ಒಳಗೂ ನಗರ ಪರಿಸರದಲ್ಲಿ ಜಾನಪದ ಸಂಸ್ಕೃತಿ ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ಸ್ಥೂಲವಾಗಿ ಇಲ್ಲಿ ಅಧ್ಯಯನಕ್ಕೆ ಒಳಗುಮಾಡಿಕೊಳ್ಳಲಾಗಿದೆ. ಅನುಬಂಧದಲ್ಲಿ ಸಿರಾ ಸೀಮೆಯ ಭಾಷೆ, ನುಡಿಗಟ್ಟು, ಗಾದೆ, ಒಗಟು, ನಂಬಿಕೆಗಳ ವಿವರವನ್ನು ಒದಗಿಸಲಾಗಿದೆ. ಈ ಮೂಲಕ ಒಟ್ಟು ಅಧ್ಯಯನಕ್ಕೆ ಒಂದು ಬನಿ ದೊರೆತಂತಾಗುತ್ತದೆ.



1. *ಬಂಡಿ ಬಂದಾವು ಬಾಳೆ ವನದಾಗೆ, ಸಂ: ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ*
2. *ತುಮಕೂರು ಜಿಲ್ಲಾ ದರ್ಶನ, ಸಂ: ಸಿ.ಎನ್.ಭಾಸ್ಕರಪ್ಪ*
3. *ಸೀಬಿ ಕ್ಷೇತ್ರದರ್ಶನ - ಡಾ.ಚಿಕ್ಕಣ್ಣ ಯಣ್ಣೆಕಟ್ಟೆ*
4. *ಕರ್ನಾಟಕ ಗೆಜೆಟಿಯರ್, ಸಂಪುಟ 9-12*

# ಅಧ್ಯಾಯ – ಎರಡು
# ಸಿರಾ ಸೀಮೆ ಜನಪದ ಸಂಬಂಧಿ ನಡೆದಿರುವ ಕೆಲಸ

ಜಾನಪದ ಇಂದು ಎಲ್ಲರ ಕುತೂಹಲ, ಆಸಕ್ತಿಯ ವಸ್ತುವಾಗಿದೆ. ಜನಪದ ಅಂದರೆ ಮೂಗು ಮುರಿಯುತ್ತಿದ್ದವರೂ ಇಂದು ಜಾನಪದ ಕುರಿತು ವಿಶೇಷ ಆಸಕ್ತಿ, ಕಾಳಜಿ ತೋರುತ್ತಿರುವುದು ಸಧ್ಯದ ಸ್ಥಿತಿಯಾಗಿದೆ. ಸಿರಾ ಪರಿಸರದಲ್ಲಿ ಇಂದು ಜನಪದಸಾಹಿತ್ಯ ಸ್ವಲ್ಪ ಕರಗಿದಂತೆ ಕಂಡರೂ ಜಾನಪದ ತನ ಬಡವಾಗಿಲ್ಲ. ಜಾನಪದಕ್ಕೆ ಸಂಬಂಧಿಸಿದ ಸಾಹಿತ್ಯಕ ರೂಪಗಳಾದ ಹಾಡು, ಗಾದೆ, ಒಗಟು, ಕತೆ ಈ ಬಗೆಯ ವಸ್ತುಗಳು ಆಧುನಿಕ ಪ್ರೇರಣೆ ಪ್ರಭಾವಗಳಿಂದಾಗಿ ಇಲ್ಲವಾಗುತ್ತಿದೆ. ಇಂದಿಗೆ ಹತ್ತು ವರ್ಷಗಳ ಹಿಂದಷ್ಟೇ ಸೀರ್ಯಾ ಸೀಮೆಯಲ್ಲಿ ಜುಂಜಪ್ಪನನ್ನು ಕುರಿತು ಮಹಾಕಾವ್ಯ ಹಾಡುವವರು ಹಳ್ಳಿ ಹಳ್ಳಿಗಳಲ್ಲಿ ಕಂಡುಬರುತ್ತಿದ್ದರು. ಕಾಡುಗೊಲ್ಲರ ಯಾವುದೇ ಹಟ್ಟಿಗಳಿಗೆ ಕಾಲಿಟ್ಟರೂ ಅಲ್ಲೆಲ್ಲಾ ಗಣೆಯ ಪದ, ಕೋಲು ಪದ, ಕಥನಗೀತೆ, ಕಾವ್ಯ, ಹಾಡುಗಾರಿಕೆ ವ್ಯಾಪಕವಾಗಿಯೇ ಕಂಡುಬರುತ್ತಿತ್ತು. ಒಂದಲ್ಲ ಎರಡಲ್ಲ ಆರೇಳು ರಾತ್ರಿಗಳ ಕಾಲ ನಿರಂತರವಾಗಿ ಕಥೆ ಮಾಡುವ, ಕಾವ್ಯ ಹೇಳುವ ಕಲಾವಿದರು ಶ್ರದ್ಧಾಭಕ್ತಿಯಿಂದ ತೊಡಗಿಸಿಕೊಳ್ಳುತ್ತಿದ್ದರು. ಹಾಗಾಗಿ ಈ ಕಾಡುಗೊಲ್ಲರ ಹಟ್ಟಿಗಳು ಹುಲ್ಲು, ಎಲೆಗಳಿಂದ ಕಟ್ಟಿದ ಗುಡಿಸಲಾದರೂ ಅವುಗಳೊಳಗೆ ಮುತ್ತು ರತ್ನಗಳಿಂದ ತುಂಬಿದ ಜಾನಪದ ಸಿರಿಸಂಪತ್ತಿತ್ತು. ಗಣೆ ಊದುವವರು, ಕೋಲುಪದಕಾರರು, ಲಾವಣಿಕಾರರು, ಸೋಬಾನೆಯುವರು, ತತ್ವಪದಕಾರರು ಇದ್ದರು. ಆದರೆ ಇತ್ತೀಚಿನ ದಿನಮಾನಗಳಲ್ಲಿ ಈ ಬಗೆಯ ಹಾಡುಗಾರರು ಇಲ್ಲವಾಗುತ್ತಿದ್ದಾರೆ. ತೊಂಬತ್ತರ ದಶಕದಲ್ಲಿದ್ದ ಜುಂಜಪ್ಪ, ಚಿತ್ರದೇವರು, ಕಾಟಂಲಿಂಗ, ಕಂಬದರಂಗ ಈ ಬಗೆಯ ಮಹಾಕಾವ್ಯ, ಖಂಡಕಾವ್ಯ ಹಾಡುಗಾರರು ಇದಕ್ಕೆ ಪೂರಕವಾಗಿ ಗಣೆಯ ಸಾತು ನೀಡುತ್ತಿದ್ದ ಅಪೂರ್ವ ಗಣೆವಾದಕರೂ ಇಂದು ಇಲ್ಲವಾಗುತ್ತಿದ್ದಾರೆ. ಒಂದು ಪರಂಪರೆಯ



ಸಾರ್ಥಕ ಮುಂದುವರಿಕೆ ಎಂದರೆ ಈ ಪರಂಪರೆಯನ್ನು ನಂಬಿದ್ದ, ಆಚರಣೆಗೆ ಪ್ರೇರಕವಾಗಿದ್ದ ಶಕ್ತಿಗಳನ್ನು ರೂಢಿಸಿಕೊಳ್ಳುವ ಈ ಸಂಬಂಧಿ ನಂಬಿಕೆ, ನಡಾವಳಿಗೆ ತಕ್ಕ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿ ಬೆಳೆಸಿಕೊಳ್ಳುವುದಾಗಿದೆ. ಇದನ್ನೇ ವಿಲಿಯಂ ಪಾಟಕ್ ಎಂಬ ಮಾನವಶಾಸ್ತ್ರಜ್ಞ ''ಜಾನಪದ ಮನುಷ್ಯ ಭಾವನೆಗಳ ಒಡೆದ ಚೂರು'' ಎಂದು, ಅವು ಎಂದಿಗೂ ಸಾವನ್ನು ಸ್ವೀಕರಿಸದೆ ತನ್ನ ಜೀವಂತಿಕೆಯನ್ನು ಸದಾ ಉಳಿಸಿಕೊಳ್ಳುತ್ತದೆ ಎಂದಿದ್ದಾರೆ. ಈ ಮಾತು ಎಲ್ಲ ಕಾಲಕ್ಕೂ ಎಲ್ಲ ಪ್ರದೇಶಗಳಿಗೂ ಅನ್ವಯವಾಗುತ್ತದೆ.

ಸೀರ್‍ಯಾ ಸೀಮೆ ಬುಡಕಟ್ಟು ಸಂಸ್ಕೃತಿಯ ದಟ್ಟೈಸುವಿಕೆಯಿಂದ ಈ ನೆಲ ಮೌಲಿಕ ಸಾಹಿತ್ಯ, ಸಾಂಸ್ಕೃತಿಕವಾಗಿ ಸಶಕ್ತವಾಗಿದೆ. ಸಾಂಸ್ಕೃತಿಕವಾಗಿ ಇಂದಿಗೂ ವೈಶಿಷ್ಟ್ಯತೆಯನ್ನು ಪಡೆದಿದೆ. ಸಾಂಸ್ಕೃತಿಕವಾಗಿ ಇಂದಿಗೂ ವೈಶಿಷ್ಟ್ಯತೆಯನ್ನು ಪಡೆದಿದೆ. ಸಾಂಸ್ಕೃತಿಕ ನಾಯಕರನ್ನು ಕುರಿತು ಆರೇಳು ರಾತ್ರಿಗಳ ಕಾಲ ನಿರಂತರವಾಗಿ ಹಾಡುವ ಕಾವ್ಯ, ಬೀಸುವ ಕಲ್ಲು, ಕೋಲು ಪದ, ಸೋಬಾನೆ, ಮಂಗಳಾರತಿ ಪದಗಳಲ್ಲೂ ಬಿಡಿಬಿಡಿಯಾಗಿ ಹಾಡಲಾಗುತ್ತದೆ. ಜುಂಜಪ್ಪ, ವೀರಗಾಟರಾಯ, ಮೈಲಾರಲಿಂಗ, ವೀರಬೊಪ್ಪರಾಯ, ಗುರು ರೇವಣಸಿದ್ಧ, ಜಾಂಬುವಯ್ಯ, ಕಂಬದರಂಗ, ಕಾಟಂಲಿಂಗ, ಚಿತ್ರದೇವ, ಎತ್ತಪ್ಪ - ಈ ಬಗೆಯ ಅಪೂರ್ವ ನಾಯಕರ ಬದುಕಿನ ಸುತ್ತ ಸಿರಾ ಸೀಮೆಯ ಜನಪದ ಕಥನ, ಕಾವ್ಯಗಳ ಬೀಸು ಚೆಲ್ಲಿಕೊಳ್ಳುತ್ತದೆ. ಕೋಲುಪದ, ಕೃಷಿ ಸಂಬಂಧಿ ಬದುಕಿನ ನಡುವೆ ಶುಭ ಕಾರ್ಯಗಳಲ್ಲಿ ಸಾಂದರ್ಭಿಕವಾಗಿ ಅದರದ್ದೇ ರೂಪದಲ್ಲಿ ಹಾಡುವುದು, ಪೂರಕ ಮಟ್ಟುಗಳನ್ನು ಬಳಸಿಕೊಂಡು ದೇಶೀ ಶೈಲಿಯ ನೆಲಮೂಲ ಧಾಟಿಯಲ್ಲಿಯೇ ಹಾಡುವುದು ಇಂದಿಗೂ ಸಿರಾ ಸೀಮೆಯುಲ್ಲಿದೆ. ಸಿರಾ ಕೋಟೆ, ಪಟ್ಟನಾಯಕನಹಳ್ಳಿ, ಗುರುಗುಂಡಸ್ವಾಮಿಮಠ, ರೇವಣರ ಮಠ ಇವುಗಳ ಜೊತೆಗೆ ಆಯಾಯಾ ಜನಾಂಗಿಕ ದೇವರುಗಳ ಬಗೆಗೂ ಮೌಖಿಕ ಪರಂಪರೆಯಲ್ಲಿ ಪದ ಹಾಡುವ ಸಂಪ್ರದಾಯ ಇಂದಿಗೂ ಇದೆ. ಬೇವಿನಹಳ್ಳಿ ವಿಭೂತಿ ತಿಮ್ಮಣ್ಣ, ಪದ ಹೇಳುವ ತಿಮ್ಮಣ್ಣ, ನಾಗಣ್ಣ, ಈರಣ್ಣ, ಕೆಂಪನಹಳ್ಳಿ ಹಾವಿನಪ್ಪ, ಕಳುವರಹಳ್ಳಿ ಮಣೆಗಾರ ಕದರಯ್ಯ, ತಳವಾರ ದಿ॥ ತಮ್ಮಣ್ಣ, ಮಾಗೋಡು ಗೊಲ್ಲರಹಟ್ಟಿ ಜೋಗೀರಣ್ಣ, ಮೊದಲೂರು ದಾಸರಹಳ್ಳಿ ದಾಸಣ್ಣ ಇಂದಿಗೂ ಜನಪದ ಮಹಾಕಾವ್ಯ ಹಾಡುವ ಕಲಾವಿದರು. ತೊಂಭತ್ತರ ದಶಕದಲ್ಲಿ ಸಿರಾ ಸೀಮೆಯಲ್ಲಿ ಗಣೆ ಊದುವ ಕಲಾವಿದರು ವ್ಯಾಪಕವಾಗಿದ್ದರು. ಕಾಲ ಸರಿದಂತೆ ವಯೋಮಾನದ ಇತಿಮಿತಿಯೊಳಗೆ ಈ ಬಗೆಯ ಕಲಾವಿದರು ಗತಿಸಿದ ಮೇಲೆ ಗಣೆಯ ಪರಂಪರೆಯೇ ಇಲ್ಲವಾಗಿಬಿಡುವ ತಲ್ಲಣದಲ್ಲಿ ಗಣೆ ಸಂಪ್ರದಾಯವಿದೆ. ಗಣೆಯನ್ನು ಬಿಟ್ಟು ಹಾಗೆಯೇ ಪದ ಹೇಳುವ ಸಂಪ್ರದಾಯವೂ ರೂಢಿಗತವಾಗಿರುವುದರಿಂದ ಗಣೆ ತನ್ನತನವನ್ನೇ ಕಳೆದುಕೊಳ್ಳಲಾರಂಭಿಸಿದೆ. ಆರು ಅಡಿ ಉದ್ದನೆಯ ಬಿದಿರು ಬೊಂಬನ್ನು ಕೊರೆದು

ತಯಾರಿಸುವ ಗಣೆ ಊದುವುದಕ್ಕೆ ಸುಲಭ ಸಾಧನವಲ್ಲ. ಅಪರಿಮಿತ ಪರಿಶ್ರಮ ಬಯಸುವ ವಾದನ. ನಾಭಿಯಿಂದ ಉಸಿರನ್ನು ಎಳೆದು ಕಟ್ಟಿ ನಿಲ್ಲಿಸಿ, ಕೊಳಲ ಮಾದರಿಯಲ್ಲಿ ಊದಿ ಹಾಡುಗಾರಿಕೆಗೆ ಲಯ ಒದಗಿಸುವುದು ಸುಲಭದ ಕೆಲಸವಲ್ಲ. ಇಷ್ಟೊಂದು ಪರಿಶ್ರಮದಾಯಕ ಕೆಲಸಕ್ಕೆ ಸಧ್ಯದ ಮನಃಸ್ಥಿತಿ ಒಪ್ಪದ ಕಾರಣವೂ ಗಣೆ ವಾದನ ಕಲೆ ಹೆಚ್ಚು-ಕಡಿಮೆ ಇಲ್ಲವಾಗುತ್ತಿದೆ. ಮಹಾಕಾವ್ಯ ಹಾಡುಗಾರ ಮಾಡಗಾನಹಟ್ಟಿ ದಾಸಣ್ಣನಂಥವರೂ ಇಂದು ಗಣೆ ಆಧರಿಸಿ ಹಾಡುವುದಿಲ್ಲ. ಗಣೆ ಊದುವವರು ಯಾರೂ ಸಿಗುವುದಿಲ್ಲ ಎನ್ನುವುದು ಅವರ ವಾದವೂ ಸರಿ ಎನ್ನಿಸುತ್ತಿದೆ.

ತುಮಕೂರು ಜಿಲ್ಲೆಯ ಜನಪದ ಸಂಗ್ರಹ ಕಾರ್ಯ ಆರಂಭವಾದುದು 1970 ರ ಸುಮಾರಿನಲ್ಲಿ. ಈ ಸಂದರ್ಭದಲ್ಲಿ ಜನಪದ ಗೀತೆಗಳ ಸಂಗ್ರಹ ಕಾರ್ಯಕ್ಕೆ ಕೈಹಾಕಿದವರು ದಿ॥ ಕೆ.ಆರ್.ಕೃಷ್ಣಸ್ವಾಮಿ. ಕರಾಕೃ ಎಂಬ ಹೆಸರಿಂದ ಜಾನಪದ ಕ್ಷೇತ್ರದಲ್ಲಿ ಅನನ್ಯ ಸಾಧನೆ ಮಾಡಿರುವ ಇವರು, ತುಮಕೂರು ಜಿಲ್ಲೆಯ ಸಿರಾ, ಪಾವಗಡ ಮಧುಗಿರಿ ಈ ಭಾಗಗಳಲ್ಲಿ ಕ್ಷೇತ್ರ ಕಾರ್ಯ ಮಾಡಿ ಜನಪದ ಗೀತೆಗಳನ್ನು ಸಂಗ್ರಹಿಸುವ ಕಾರ್ಯ ಮಾಡಿದರು. ಕರಾಕೃ ಅವರನ್ನು ಮೈಸೂರಿನಿಂದ ಚಿತ್ರದುರ್ಗ ಸೀಮೆಗೆ ಕರೆತಂದು ಜನಪದ ಗೀತೆಗಳ ಸಂಗ್ರಹ ಕಾರ್ಯದಲ್ಲಿ ನೆರವಾಗುವುದಲ್ಲದೆ ಆ ಸಂಕಲನಗಳಿಗೆ ಆಕರ್ಷಕವಾದ ರೇಖಾಚಿತ್ರಗಳನ್ನು ಬರೆದು ಕಲಾವಿದರ ಮಾಹಿತಿ ಒದಗಿಸಿರುವ ಹರ್ತಿಕೋಟೆ ಪಿ.ಆರ್.ತಿಪ್ಪೇಸ್ವಾಮಿ ಅವರ ಸಾಹಸ, ಜಾನಪದಾಸಕ್ತ ಮನಃಸ್ಥಿತಿ ಎಂದಿಗೂ ಮರೆಯಬಾರದ ಸಂಗತಿಯಾಗಿದೆ. ಈ ಸಂದರ್ಭದಲ್ಲಿ ಕರಾಕೃ ಅವರು ಪ್ರಕಟಿಸಿರುವ 'ಪಾಳೆಯಗಾರರ ಪದಗಳು' ವಿಶೇಷವಾಗಿ ಈ ಪುಸ್ತಕ ಚಿತ್ರದುರ್ಗ, ಹಿರಿಯೂರು ಭಾಗಗಳ ಕ್ಷೇತ್ರಕಾರ್ಯ ಆಧಾರಿತ ನೆಲೆಯಲ್ಲಿ ಇಲ್ಲಿನ ಗೀತೆಗಳ ಸಂಗ್ರಹಗೊಂಡಿದ್ದರೂ ಸಿರಾ ಪಾಳೆಯಗಾರರ ಆಡಳಿತ, ಪರಾಕ್ರಮ, ಚಿತ್ರದುರ್ಗ, ತರೀಕೆರೆ ಪಾಳೆಯಗಾರರ ಸಂಬಂಧ ಕುರಿತ ಮೊದಲ ಮಾಹಿತಿ ನೀಡುವ ಗೀತೆಗಳಾಗಿವೆ. ನಂತರ ಕಂಬಾಳು ಸಿದ್ಧಗಂಗಯ್ಯ ಅವರು 'ಮಾತಾಡು ಮಲ್ಲಿಗೆ' ಜನಪದ ಗೀತ ಸಂಕಲನವನ್ನು ಪ್ರಕಟಿಸಿದರು. ಇದರಲ್ಲಿ ಶಿವಗಂಗೆ, ಹೆಬ್ಬೂರು, ಹಾಗಲವಾಡಿ ಈ ಸುತ್ತಿನ ಗೀತೆಗಳನ್ನು ಸಂಗ್ರಹಿಸದರು. ಸೀರ್ಯಾ ಸೀಮೆಯ ಸಾಂಸ್ಕೃತಿಕ ನಾಯಕ ವೀರ ಜುಂಜಪ್ಪನನ್ನು ಕುರಿತು ಹಾಡುಗಳನ್ನು ಮೊದಲಿಗೆ ಸಂಗ್ರಹಿಸಿ ಪ್ರಕಟಿಸಿದರು. ಇದು ಪೂರ್ಣ ಕಾವ್ಯವಲ್ಲ. ಜುಂಜಪ್ಪನನ್ನು ಕುರಿತ ಕೋಲು ಹಾಗೂ ಇತರೆ ಸಂದರ್ಭಗಳಲ್ಲಿ ಹಾಡುವ ಪದಗಳಾಗಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಗಾಗಿ ಜುಂಜಪ್ಪ ಎಂಬ ಪುಟ್ಟ ಪುಸ್ತಕವನ್ನು ಕಂಬಾಳರು ರಚಿಸಿಕೊಟ್ಟಿದ್ದಾರೆ. ಇದು ಜುಂಜಪ್ಪನ ಕಾವ್ಯದ ಪದ್ಯಗಳನ್ನು ಆರಿಸಿಕೊಂಡು ಹೆಣೆದ ಜುಂಜಪ್ಪನ ಕಥೆಯಾಗಿದೆ. ಜುಂಜಪ್ಪನ ಕಾವ್ಯವನ್ನು ಮೊದಲಿಗೆ ಸಂಗ್ರಹಿಸಿ ಪ್ರಕಟಿಸಿದ ಡಾ॥ ಜೀಶಂಪ ವೃತ್ತಿಗಾಯಕರನ್ನು ಕುರಿತ 'ಕರ್ನಾಟಕ ವೃತ್ತಿಗಾಯಕರ

ಕಾವ್ಯಗಳು' ಮಹತ್ವದ ಗ್ರಂಥವನ್ನು ಪ್ರಕಟಿಸಿದರು. ಇದರಲ್ಲಿ ಹಾಗಲವಾಡಿ ಭಾಗದಲ್ಲಿ ಸಂಗ್ರಹಿಸಿದ ಜುಂಜಪ್ಪನ ಕಾವ್ಯದ ಕೆಲವು ಪದ್ಯಗಳನ್ನು ಸಂಗ್ರಹಿಸಲಾಗಿದೆ. ಇದು ಜುಂಜಪ್ಪನ ಬಗೆಗೆ ವಿಶೇಷವಾಗಿ ಆಸಕ್ತಿ ಮೂಡಲು ಪ್ರೇರಕವಾಯಿತು. ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕರ್ನಾಟಕ ಜನಪದ ಕಾವ್ಯಗಳ ಸಾಲಿನಲ್ಲಿ ಜುಂಜಪ್ಪನ ಕಾವ್ಯವನ್ನು ಗುರುತಿಸುವ ಮಹತ್ತರ ಕಾರ್ಯ ಇದರಿಂದ ಸಾಧ್ಯವಾಯಿತು. ಇವರ ವಿದ್ಯಾರ್ಥಿಯೂ ಜುಂಜಪ್ಪನ ಕ್ಷೇತ್ರಕಾರ್ಯದ ನೆಲೆಯಿಂದ ಬಂದ ಜಾನಪದ ವಿದ್ವಾಂಸ ತೀ.ನಂ.ಶಂಕರನಾರಾಯಣರು 'ಕಾಡುಗೊಲ್ಲರ ಸಂಪ್ರದಾಯ ಮತ್ತು ನಂಬಿಕೆಗಳು' ಎಂಬ ಸಂಶೋಧನೆಯನ್ನು ಮೊದಲಿಗೆ ಆರಂಭಿಸಿದರು. ಇದು ಕರ್ನಾಟಕದ ಬುಡಕಟ್ಟು ಅಧ್ಯಯನಕ್ಕೆ ಹೊನ್ನಾರು ಹೂಡಿದಂತಾಯಿತು. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ಸಿರಾ, ಗುಬ್ಬಿ ತಾಲ್ಲೂಕುಗಳಲ್ಲಿ ಜಾನಪದೀಯವಾಗಿ ಸಂಶೋಧನೆಯ ಕೆಲಸ ಆರಂಭಿಸಿದವರಲ್ಲಿ ತೀ.ನಂ.ಶಂಕರನಾರಾಯಣ ಮೊದಲಿಗರು. ಸಿರಾ ತಾಲ್ಲೂಕಿನ ಹುಳಿಗೆರೆ ಚಿಕ್ಕಣ್ಣ, ಬೇವಿನಹಳ್ಳಿ ದೇವರಹಟ್ಟಿಯ ನಾಗಣ್ಣ, ನಂಜಪ್ಪಜ್ಜ ಅವರುಗಳಿಂದ ಜುಂಜಪ್ಪನ ಮೇಲಿನ ಪದಗಳನ್ನು ಹಾಡಿಸಿದರು, ಧ್ವನಿ ಮುದ್ರಿಸಿಕೊಂಡರು. ಇದೊಂದು ಸಂಶೋಧನೆಯ ಕೆಲಸವಾದುದರಿಂದ ಒಟ್ಟು ಜನಪದ ಕಾವ್ಯವನ್ನು ಸಂಗ್ರಹಿ ಸದೆ ಕಾಡುಗೊಲ್ಲರ ಪುರಾಣ ಪುರುಷರು, ಸಾಂಸ್ಕೃತಿಕ ವೀರರು ಇವರ ಕುರಿತ ಖಂಡಕಾವ್ಯ, ಮಹಾಕಾವ್ಯ, ಕಥೆ, ಕಥನ ಗೀತೆಗಳಲ್ಲಿ ಪ್ರಕಟವಾಗುವ ಕಾಡು ಗೊಲ್ಲರ ಧಾರ್ಮಿಕ ನೆಲೆಗಳು, ಮೂಲಪುರುಷರು, ಕಟ್ಟೆ ಮನೆಗಳು, ಪಶುಪಾಲನೆ, ಆಹಾರ, ವಿವಾಹ, ಶವಸಂಸ್ಕಾರ, ತಾಳಿ ಕಟ್ಟುವ ಹಾಗೂ ತಾಳಿ ಕಟ್ಟಿದ ಗೊಲ್ಲರ ಸಾಂಸ್ಕೃತಿಕ ವಿವರಗಳನ್ನು ಮೊದಲಿಗೆ ಕ್ಷೇತ್ರ ಕಾರ್ಯಾಧಾರಿತ ನೆಲೆಯಲ್ಲಿ ವಿವರಿಸಿದ್ದಾರೆ. ಈ ಹಿನ್ನೆಲೆ ಯಲ್ಲಿ 'ಕಾಡುಗೊಲ್ಲರ ಸಾಂಸ್ಕೃತಿಕ ವೀರ'ರಾದ ಎತ್ತಪ್ಪ, ಜುಂಜಪ್ಪ, ಪುರಾಣ ಪುರುಷರಾದ ಚಿತ್ರದೇವರು, ಕಾಟಂಲಿಂಗ ಇವರ ಬಗೆಗೆ ಮೊದಲಿಗೆ ಬೆಳಕು ಚೆಲ್ಲಿದವರು ಡಾ|| ತೀ.ನಂ.ಶಂಕರನಾರಾಯಣ ಅವರು. ಇವರ ಸಂಶೋಧನೆಗೆ 1978 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪಿಎಚ್‌ಡಿ ಪದವಿ ನೀಡಿ ಗೌರವಿಸಿದೆ.

ಡಾ|| ಕಾಳೇಗೌಡ ನಾಗವಾರ ಅವರು ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ (ಈಗ ರಾಮನಗರ ಜಿಲ್ಲೆ) ತಾಲ್ಲೂಕಿನ ನಾಗವಾರ ಗ್ರಾಮದವರು. ತೊಂಬತ್ತರ ದಶಕದಲ್ಲಿ ಸಿರಾ ತಾಲ್ಲೂಕಿನ 'ಬೇವಿನಹಳ್ಳಿ ಹಟ್ಟಿ - ಒಂದು ಅಧ್ಯಯನ' ಎಂಬ ವಿಷಯವಾಗಿ ಸಂಶೋಧನೆ ನಡೆಸಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪದವಿ ಪಡೆದಿದ್ದಾರೆ. ಕರ್ನಾಟಕದಲ್ಲಿ ಒಂದು ಹಳ್ಳಿಯನ್ನು ಕೇಂದ್ರವಾಗಿರಿಸಿಕೊಂಡು ಅದರ ಸಮಗ್ರ ಸಾಂಸ್ಕೃತಿಕ ಆಯಾಮಗಳನ್ನು ಅಧ್ಯಯನದ ವ್ಯಾಪ್ತಿಗೆ ಅಳವಡಿಸಿಕೊಂಡ ಮೊದಲಿಗರು. ಕಾಡುಗೊಲ್ಲರ ದಟ್ಟನೆಲೆಯಾದ ಬೇವಿನಹಳ್ಳಿ ಕಾಡುಗೊಲ್ಲರ ಮಹತ್ವದ ಸಾಂಸ್ಕೃತಿಕ ನಾಯಕನಾದ

ವೀರಜುಂಜಪ್ಪನ ನೆಲೆಯೂ ಹೌದು. ಜುಂಜಪ್ಪ ಹುಟ್ಟಿ ಬೆಳೆದ ಕಳುವೋರಹಳ್ಳಿಯಿಂದ ನಾಲ್ಕು ಕಿ.ಮೀ. ಅಂತರದಲ್ಲಿರುವ ಬೇವಿನಹಳ್ಳಿ ಕಾಡುಗೊಲ್ಲರ ಸಂಕೀರ್ಣ ಸಂಸ್ಕೃತಿಯ ನೆಲೆ. ಇಲ್ಲಿ ಜುಂಜಪ್ಪ, ಚಿತ್ರದೇವರುಗಳ ಮಂದಿರವೂ ಇದೆ. ಆ ಕಾಲಕ್ಕೆ ಹತ್ತಾರು ಕಲಾವಿದರು ಜುಂಜಪ್ಪನನ್ನು ಕುರಿತು ಪದ ಹೇಳುವ, ಗಣೆ ಊದುವವರಿದ್ದರು. ಇಂದು ಆ ಸ್ಥಿತಿಯಿಲ್ಲ. ಪದ ಹೇಳುವ ತಿಮ್ಮಣ್ಣ, ವಿಭೂತಿ ತಿಮ್ಮಣ್ಣ ಇಬ್ಬರು ಮಾತ್ರ ಗಣೆ ಪದದ ಕಲಾವಿದರು ಉಳಿದಿದ್ದಾರೆ ಎಂಬುದೇ ವಿಷಾದಕರ ಸಂಗತಿ. ಇಂಥ ಸಮೃದ್ಧ ಸಂಸ್ಕೃತಿಯ ಹಳ್ಳಿಯನ್ನು ನೆಪವಾಗಿಟ್ಟುಕೊಂಡು ಸಿರಾ ಸೀಮೆಯ ಕಾಡುಗೊಲ್ಲರ ಬದುಕನ್ನು ಅಧ್ಯಯನಕ್ಕೆ ಒಳಗುಮಾಡಿಕೊಂಡರು.

1983 ರಲ್ಲಿ ಹೆಚ್.ವಿ.ವೀರಭದ್ರನಾಯಕ ಅವರು 'ಗುಮ್ನಳ್ಳಿ ಕದನ' ಎಂಬ ಕಿರುಹೊತ್ತಿಗೆಯಲ್ಲಿ ಸಿರಾ ಕ್ಷೇತ್ರದ ವಿಶ್ಲೇಷಣಾ ಕಾರ್ಯವನ್ನು ನಡೆಸಿದ್ದಾರೆ. ಸಿರಾದ ಪಾಳೆಯಗಾರ ಕಸ್ತೂರಿ ರಂಗಪ್ಪನಾಯಕನ ಆಳ್ವಿಕೆಯ ಕೊನೆಯ ದಿನಗಳನ್ನು ಕುರಿತ ವಿವರಣೆಗೆ ಸೀಮಿತವಾಗಿದೆ. ಸಿರಾದ ರಂಗಣ್ಣ ಮತ್ತು ಪೂವಲ ಕೆಂಗಣ್ಣ ಎನ್ನುವ ನಾಯಕರಿಬ್ಬರ ನಡುವೆ ನಡೆಯುವ ಸಂವಾದ, ಸರಸ, ವಿರಸ, ಯುದ್ಧ ಇವುಗಳ ಕರುಣಾಪೂರಿತ ದೃಶ್ಯಾವಳಿಯನ್ನು ಈ ಕೃತಿ ಕಟ್ಟಿಕೊಡುತ್ತದೆ. ಇದಕ್ಕೆ ನಾಡಿನ ಹಿರಿಯ ವಿದ್ವಾಂಸ ನಾಡೋಜ ಹಂ.ಪ.ನಾಗರಾಜಯ್ಯ ಮುನ್ನುಡಿ ಬರೆಯುತ್ತಾ ಹೇಳಿರುವ ಮೌಲ್ವಿಕ ಮಾತುಗಳು ಗಮನಾರ್ಹವಾಗಿವೆ. 'ಈ ಪ್ರಕಾರದ ಹಾಡುಗಳಲ್ಲಿ ಬರುವ ಗತಕಾಲದ ಆಡಳಿತ ಪದ್ಧತಿ, ರೀತಿ-ನೀತಿ, ಭೌಗೋಳಿಕ ಪರಿಸರ, ಸಾಮಾಜಿಕ ಪದ್ಧತಿ ಇತ್ಯಾದಿ ಆಳುವ ವರ್ಗದ ಭವ್ಯ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವ ದೃಷ್ಟಿಯಿಂದ ಇತಿಹಾಸಜ್ಞರಿಗೆ ಇಂಥವುಗಳ ಅಗತ್ಯವಿರುತ್ತದೆ. ಸಿರಾ ತಾಲ್ಲೂಕು ಹೊಸೂರು ಗ್ರಾಮದ ನಾಯಕ ತಿಮ್ಮಜ್ಜಿ ಮತ್ತು ರುದ್ರಜ್ಜಿ ಎಂಬ ಇಬ್ಬರು ಕಲಾವಿದರಿಂದ ಇಲ್ಲಿನ ಪದಗಳನ್ನು ಸಂಗ್ರಹಿಸಲಾಗಿದೆ. ಸಂಗ್ರಹ ತುಂಬಾ ಕಡಿಮೆ. ಸಿಕ್ಕ ಅಲ್ಪಸ್ವಲ್ಪ ಪದಗಳನ್ನು ಇಟ್ಟುಕೊಂಡು ಕರ್ನಾಟಕದ ಪಾಳೆಯಗಾರರು, ನಾಯಕರ ಆಳ್ವಿಕೆ, ವಿಜಯನಗರ ನಂತರದ ನಾಯಕರ ಸ್ಥಿತಿಗತಿ, ಸಿರಾ ನಗರದ ಬೆಳವಣಿಗೆಗೆ ನಾಯಕರ ಪಾತ್ರ ಕುರಿತು ಕೊಂಚ ಭಾವುಕ ನೆಲೆಯಿಂದಲೇ ವಿವರಿಸಿದ್ದಾರೆ. ಒಟ್ಟಾರೆ ಈ ಕೃತಿಯನ್ನು ಜನಪದವೆಂದು ಪರಿಗಣಿಸುವುದಕ್ಕಿಂತ ಐತಿಹಾಸಿಕವಾಗಿಯೂ ಮಹತ್ವವೆನಿಸಿದೆ' ಎಂಬ ಹಂಪನಾ ಅವರ ಮಾತು ಅರ್ಥಪೂರ್ಣವಾಗಿದೆ.

ಸಿರಾ ಸೀಮೆಯ ಜಾನಪದ ಅಧ್ಯಯನ, ಕ್ಷೇತ್ರಕಾರ್ಯ, ಸಂಶೋಧನೆ, ಕಲಾ ಪ್ರದರ್ಶನ, ಪ್ರಸಾರ, ಪ್ರಕಟಣೆಯ ಕಾರ್ಯಗಳಲ್ಲಿ ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ ಅವರದು ದಾಖಲಾರ್ಹ

ಸಾಧನೆ. 1996 ರಿಂದ ಸಿರಾ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಅಧ್ಯಾಪಕರಾಗಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಪಿಎಚ್.ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿಯೂ ಕಾರ್ಯನಿರ್ವಹಿಸಿರುವ ಇವರು, ಸಿರಾ ತಾಲ್ಲೂಕಿನ ಜಾನಪದೀಯ ವಿವಿಧ ನೆಲೆಗಳನ್ನು ವ್ಯಾಪಕವಾಗಿ ಶೋಧಿಸಿದ್ದಾರೆ. ಚಿತ್ರದೇವರು ಕಾವ್ಯವನ್ನು 1998 ರಲ್ಲಿ ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿದ್ದಾರೆ. ಇದು ಕಾಡುಗೊಲ್ಲರ ಜನಾಂಗಿಕ ಪುರಾಣ. ಮೊಟ್ಟ ಮೊದಲಿಗೆ ಸಮಗ್ರ ಕಾವ್ಯವನ್ನು ಸಂಪಾದಿಸಿ ಪ್ರಕಟಿಸಿದ ಹಿರಿಮೆ ಇವರದು. ಜೊತೆಗೆ ಈ ಕಾವ್ಯವನ್ನು ಕುರಿತು ಎಂ.ಫಿಲ್ ಹಾಗೂ ಪಿಎಚ್‌ಡಿ ಸಂಶೋಧನೆಯೂ ನಡೆದಿರುವುದು ವಿಶೇಷ. ನಂತರ ಕಂಬದ ರಂಗನ ಕಾವ್ಯವನ್ನು 2000 ರಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಇದರ ಬಗೆಗೂ ಸಂಶೋಧನೆ ನಡೆದಿದೆ. ಚಿತ್ರದೇವರು ಕಾವ್ಯವನ್ನು ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿಯ ನಿಂಗಜ್ಜ ಹಾಡಿದರೆ, ಕಂಬದರಂಗನ ಕಾವ್ಯವನ್ನು ಮಾಗೋಡು ಜೋಗೀರಣ್ಣ ಹಾಡಿದ್ದಾರೆ. ಇದಲ್ಲದೆ 2001 ರಲ್ಲಿ ಇವರು ಸಂಶೋಧಿಸಿ ಪ್ರಕಟಿಸಿರುವ 'ತುಮಕೂರು ಜಿಲ್ಲೆಯ ಜಾನಪದೀಯ ಅಧ್ಯಯನ' ತುಮಕೂರು ಜಿಲ್ಲೆಯ ಜಾನಪದ ಸಂಶೋಧನೆಯ ಆಚಾರ್ಯ ಕೃತಿ ಎಂಬ ಹಿರಿಮೆಗೆ ಪಾತ್ರವಾಗಿದೆ. ಈ ಗ್ರಂಥದಲ್ಲಿ ಸಿರಾ ಸೀಮೆಯ ಜನಪದ ಕಲೆ, ಕಲಾವಿದರು, ಜನಪದ ಪ್ರವಾಸಿ ನೆಲೆ, ಜನಾಂಗಿಕ ಸಾಂಸ್ಕೃತಿಕ ಅಧ್ಯಯನ ನೆಲೆಗಳನ್ನು ಮೊದಲಿಗೆ ಕಟ್ಟಿಕೊಡಲಾಗಿದೆ. 'ಹೋಳೆದಂಡೆ ಕರಿಕೆ' 1998 ರಲ್ಲಿ ಪ್ರಕಟವಾದ ಜಾನಪದೀಯ ಅಧ್ಯಯನ. ಪ್ರಧಾನವಾಗಿ ಕಾಡುಗೊಲ್ಲರ ಕಾವ್ಯ ಪ್ರಕಾರ, ವಿವಿಧ ಜನಾಂಗಿಕ ಸಾಂಸ್ಕೃತಿಕ ಆಚರಣೆ, ಕಲೆ, ಬದುಕನ್ನು ಕುರಿತ ಅಧ್ಯಯನವಾಗಿದೆ. 'ಕಿನ್ನರಿಯ ಮೇಲೆ ಕಿರುಗೆಜ್ಜೆ' ಕೃತೀಯೂ ಇದೇ ನೆಲೆಯಲ್ಲಿ ಪ್ರಕಟವಾಗಿರುವ ಕೃತಿ (2001). ಇದೇ ಲೇಖಕರ ತುಮಕೂರು ಜಿಲ್ಲಾ ಜಾತ್ರೆಗಳು ಕೃತಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದೆ (2004). ಇದರಲ್ಲಿಯೂ ಜನಪದ ಜಾತ್ರೆ, ಆ ಹಿನ್ನೆಲೆಯ ಜನಾಂಗಿಕ ಆಚರಣೆ, ಆ ಸಂಬಂಧಿ ಆಚರಣೆ, ವರ್ಗ ಪ್ರಾತಿನಿಧ್ಯ, ಆ ಸಂಬಂಧಿ ಹಾಡು, ಕಲೆಗಳನ್ನು ವಿವರಿಸಲಾಗಿದೆ. ಸಿರಾ ಸೀಮೆಯ ಪಟ್ಟನಾಯಕನಹಳ್ಳಿ ಗುರುಗುಂಡ ಬ್ರಹ್ಮಜಾತ್ರೆ, ಗಂಡೀಹಳ್ಳಿ ಮಠ, ಕಳವರಹಳ್ಳಿ ಜುಂಜಪ್ಪ, ತಾವರೇಕೆರೆ, ಸೀಬಿ, ಮಾಗೋಡು, ಮರಡಿ ರಂಗನಾಥ ಮೊದಲಾದ ಜಾತ್ರೆಗಳ ಸಾಂಸ್ಕೃತಿಕ ಅಧ್ಯಯನ ನಡೆಸಲಾಗಿದೆ. 2008 ರಲ್ಲಿ ಪ್ರಕಟಿಸಿದ ಸಿರಾ ಸೀಮೆ ಇತಿಹಾಸ ಮತ್ತು ಸಂಸ್ಕೃತಿ ಗ್ರಂಥವೂ ಸಿರಾ ತಾಲ್ಲೂಕಿನ ಜಾನಪದ ನೆಲೆಗಳನ್ನು ಕಾವ್ಯ, ಹಾಡುಗಾರರು ಇವರುಗಳು ಜಾಗತಿಕ ಮಹತ್ವ ಕುರಿತು ಮಹತ್ವದ ಅಧ್ಯಯನವಾಗಿದೆ. ಇದು ಸಿರಾ ತಾಲ್ಲೂಕಿನ ಒಟ್ಟು ಇತಿಹಾಸ, ರಾಜಕೀಯ, ಆರ್ಥಿಕ, ಶಿಕ್ಷಣ ಇವುಗಳ ಜೊತೆ ಜೊತೆಗೆ ಜಾನಪದ ಸಂಸ್ಕೃತಿಯೂ ಪೂರಕವಾಗಿ ಬಂದಿದೆ. ಆದರೂ ಜಾನಪದಾಸಕ್ತರಿಗೆ ಹಲವಾರು ಮಾಹಿತಿಗಳು ಇಲ್ಲಿ ಲಬ್ಧವಾಗುತ್ತವೆ.

2010 ರಲ್ಲಿ 'ಬಂಡಿ ಬಂದಾವು ಬಾಳೆ ವನದಾಗೆ' ಎಂಬ ಅಪರೂಪದ ಜನಪದ ಗೀತೆಗಳ ಸಂಕಲನವನ್ನು ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸಿದ್ದಾರೆ. ತಾಲ್ಲೂಕಿನ ಜನಪದ ಸಾಂಸ್ಕೃತಿಕ ವೀರರ ಕಥನಗೀತೆಗಳೂ ಸೇರಿದಂತೆ ಸಿರಾ ಕೋಟೆ, ಪಟ್ಟನಾಯ್ಕನಹಳ್ಳಿ ಮಠ, ಕಳುವರಹಳ್ಳಿ, ಪುರಲೇಹಳ್ಳಿ, ಬೆಜ್ಜಿಹಳ್ಳಿ, ಬರಗೂರು, ಹೇಮಾವತಿ ಮೊದಲಾದ ಸಾಂಸ್ಕೃತಿಕ ನೆಲೆಗಳನ್ನು ಕುರಿತ ಸೊಗಸಾದ ಗೀತೆಗಳನ್ನು ಇದಕ್ಕೆ ಮೂಲ ಸೊಗಡಿನಲ್ಲಿ ಸಂಗ್ರಹಿಸಲಾಗಿದೆ. ಕರ್ನಾಟಕ ಜಾನಪದ ಅಕಾಡೆಮಿಯ ಶ್ರೇಷ್ಠ ಕೃತಿ ಪ್ರಶಸ್ತಿ ದೊರೆತಿರುವುದು ಈ ಕೃತಿಯ ಮಹತ್ವ, ಶ್ರೇಷ್ಠತೆಯನ್ನು ಹೇಳುತ್ತದೆ.

ಹೀಗೆ ಚಿತ್ರದೇವರ ಕಾವ್ಯ, ಮಾಗೋಡು ರಂಗನಾಥನ ಕಾವ್ಯ, ಬಂಡಿ ಬಂದಾವು ಬಾಳೆ ವನದಾಗೆ, ಕಾಟಂಲಿಂಗನ ಕಥೆ - ಈ ಬಗೆಯ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಆಧಾರದ ಮೇಲೆ ಸಂಗ್ರಹಿಸಿದ ಡಾ॥ ಚಿಕ್ಕಣ್ಣ, ತುಮಕೂರು ಜಿಲ್ಲೆ ಜಾನಪದೀಯ ಅಧ್ಯಯನ, ಸಿರಾ ಸೀಮೆ ಇತಿಹಾಸ ಮತ್ತು ಸಂಸ್ಕೃತಿ, ಹೊಳೆದಂಡೆ ಕರಿಕೆ, ಕಿನ್ನರಿಯ ಮೇಲೆ ಕಿರುಗೆಜ್ಜೆ ಈ ಮೊದಲಾದ ಸಂಶೋಧನಾ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಇಲ್ಲೆಲ್ಲಾ ಸಿರಾ ಸೀಮೆಯ ವೈವಿಧ್ಯ ಜಾನಪದ, ಆಕರ್ಷಕವಾಗಿ ಪ್ರಕಟವಾಗಿದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಬುಡಕಟ್ಟು ಅಧ್ಯಯನ ವಿಭಾಗದಿಂದ ನಡೆಸಿದ ಜಾನಪದ ಕ್ಷೇತ್ರಕಾರ್ಯದಲ್ಲಿ ಚಲುವರಾಜು ಅವರು ಮಧುಗಿರಿ ತಾಲ್ಲೂಕು, ಮಾಡಗಾನಹಟ್ಟಿ ದಾಸಣ್ಣ ಅವರಿಂದ 'ಜುಂಜಪ್ಪ' ಎಂಬ ಮಹಾಕಾವ್ಯವನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಇದು ತಾಲ್ಲೂಕಿನ ಹೊರಗಿನ ಕಲಾವಿದರಿಂದ ಸಂಗ್ರಹಿಸಿದ ಸಂಗ್ರಹವಾದರೂ ಸಿರಾ ತಾಲ್ಲೂಕಿನ ಸಮಗ್ರ ಜಾನಪದ ನೆಲೆಗಳನ್ನು ಕಳುವರಹಳ್ಳಿ ಪುರಲೇಹಳ್ಳಿ, ಸಾಕ್ಷಿಹಳ್ಳಿ, ಮರಡಿಗುಡ್ಡ, ಸಿರಾ ಕೆರೆ, ಕೋಟೆ, ಜಾನಕಲ್ಲು, ಪರಸಮ್ಮನ ಕೆರೆ, ಬೇವಿನಹಳ್ಳಿ, ಹುಲಿಕುಂಟೆ ವರ್ಣನೆಗಳಿಂದಾಗಿ ಇದು ಸಿರಾ ಸೀಮೆಯ ಕಾವ್ಯವಾಗಿದೆ, ಮಾತ್ರವಲ್ಲ ಈ ಕಾವ್ಯ ವೀರ ಜುಂಜಪ್ಪನನ್ನು ಜಾಗತಿಕವಾಗಿ ಮೈಲಾರಲಿಂಗ, ಮಲೆಯ ಮಹದೇವ, ಮಂಟೇಸ್ವಾಮಿ ಈ ಸಾಂಸ್ಕೃತಿಕ ನಾಯಕರ ಸಾಲಿಗೆ ನಿಲ್ಲುವ ತೌಲನಿಕ ಅಧ್ಯಯನಕ್ಕೆ ಒಳಗು ಮಾಡುವ ಮಹತ್ವದ ಕೆಲಸವಾಗಿದೆ. ಡಾ॥ ಹಿ.ಚಿ.ಬೋರಲಿಂಗಯ್ಯ ಅವರ ಪ್ರಧಾನ ಸಂಪಾದಕರ ಪ್ರಸ್ತಾವನೆ ಅರ್ಥಪೂರ್ಣವಾಗಿದೆ.

ಶ್ರೀಮತಿ ಲಲಿತಮ್ಮ ಅವರ 'ಸಿರಾ ನಗರ ಸಂಸ್ಕೃತಿ ಒಂದು ಅಧ್ಯಯನ', ಬಿ.ಕೆ. ಬಸವರಾಜು ಅವರ 'ಚಿತ್ರದೇವರು: ಬುಡಕಟ್ಟು ಪೌರಾಣಿಕ ವೀರನ ಅಧ್ಯಯನ' ಎಂ.ಫಿಲ್ ಪದವಿಯನ್ನು ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂನಿಂದ ಪಡೆದಿವೆ (ಅಪ್ರಕಟಿತ ಕೃತಿಗಳು). ಹೊನ್ನಗಾನಹಳ್ಳಿ ಕರಿಯಣ್ಣ, 'ಬಂದಕುಂಟೆ ಈರಚಿಕ್ಕಣ್ಣ' ಎಂಬ ಪುಟ್ಟ ಕೃತಿಯನ್ನು

ಪ್ರಕಟಿಸಿದ್ದಾರೆ. ಇದು ವೀರಗಾರನೊಬ್ಬನನ್ನು ಕುರಿತ ತ್ರಿಪದಿಯಾಗಿದೆ. ಪ್ರೊ॥ ತಿಮ್ಮಯ್ಯ ಮೈಸೂರು ಯುವರಾಜ ಕಾಲೇಜಿನ ಅಧ್ಯಾಪಕರು. ಸಿರಾ ತಾಲ್ಲೂಕಿನ ಗ್ರಾಮದೇವತೆ ಕುರಿತು ಸಂಶೋಧನೆಗೆ ಪಿ.ಎಚ್.ಡಿ ಪಡೆದಿದ್ದಾರೆ. ಜವಗೊಂಡನಹಳ್ಳಿ ಮಹಾಲಿಂಗಯ್ಯ 'ಚಿತ್ರದೇವರ ಕಾವ್ಯ' ಕುರಿತು ಸಂಶೋಧನೆ ನಡೆಸಿ ಡಾಕ್ಟರೇಟ್ ಪಡೆದಿದ್ದಾರೆ.

ಇದಿಷ್ಟು ಸಿರಾ ಸೀಮೆಯ ಜಾನಪದ ಸಂಸ್ಕೃತಿ ಕುರಿತು ನಡೆದಿರುವ ಕೆಲಸವಾಗಿದೆ. ಸೀಬಿ ಕ್ಷೇತ್ರದರ್ಶನ, ಪುಟ್ಟ ಗ್ರಂಥವಾದರೂ ದೊಡ್ಡಸೀಬಿ, ಅಗ್ರಹಾರ, ಹಾಲು ದೊಡ್ಡೇರಿ, ಹುಂಜನಹಳ್ಳಿ ಈ ಪರಿಸರದ ಜಾನಪದೀಯ ನೆಲೆಗಳನ್ನು ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ ಕಿರಿದಾಗಿ ಪರಿಚಯಿಸಿದ್ದಾರೆ. ಇದಲ್ಲದೆ ರಾಜ್ಯದ ವಿವಿಧ ವಿಚಾರ ಸಂಕಿರಣ ಮೊದಲಾದ ಗ್ರಂಥಗಳಲ್ಲೂ ಸೀರ್ಯಾ ಸೀಮೆಯ ಜಾನಪದ ಸಂಸ್ಕೃತಿ, ಕಾವ್ಯ, ಕಲಾವಿದರ ಪರಿಚಯ ಪ್ರಕಟವಾಗಿವೆ. ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ ಅವರ 'ತುಮಕೂರು ಜಿಲ್ಲೆ ಜನಪದ ಕಲಾವಿದರು' ಎಂಬ ಗ್ರಂಥವನ್ನು ಕರ್ನಾಟಕ ಜಾನಪದ ಅಕಾಡೆಮಿ ಪ್ರಕಟಿಸಿದೆ. ಇದರಲ್ಲಿ ಸಿರಾ ತಾಲ್ಲೂಕಿನ ಜನಪದ ಕಲಾವಿದರ ಸಮಗ್ರ ವಿವರ ನೀಡಲಾಗಿದೆ. ಡಾ॥ ಎನ್.ನಂದೀಶ್ ಪ್ರಕಟಿಸಿರುವ 'ಸಿರಾ ತಾಲ್ಲೂಕು ದರ್ಶನ', ಸಿ.ಎನ್.ಭಾಸ್ಕರಪ್ಪ ಅವರ ಸಂಪಾದಕತ್ವದ 'ತುಮಕೂರು ಜಿಲ್ಲಾ ದರ್ಶನ', ಎಂ.ಎಚ್.ನಾಗರಾಜ್ ಅವರ 'ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ', ಡಾ॥ ಸಣ್ಣರಾಮ ಅವರು ಸಂಪಾದಿಸಿರುವ ತೀನಂಶಂ ಅವರ ಗೌರವ ಸಂಪುಟ, ಸಮನ್ವಯ ಲಕ್ಷ್ಮಣ ತೆಲಗಾವಿ ಅವರು ಸಂಪಾದಿಸಿರುವ ಹೆಚ್.ವಿ. ವೀರನಾಯರ ಗೌರವ ಗ್ರಂಥ 'ಹರ್ತಿಸಿರಿ' ಪ್ರೊ॥ ಪರಮೇಶ್ ಸಂಪಾದಿಸಿರುವ ಕಲಾವಿದ ಪಿ.ಆರ್.ತಿಪ್ಪೇಸ್ವಾಮಿ ಅವರ ಅಭಿನಂದನಾ ಸಂಪುಟಗಳಲ್ಲಿ ಸಿರಾ ಸೀಮೆಯ ಸಂಸ್ಕೃತಿ, ಸ್ಥಳನಾಮ, ಜನಾಂಗಿಕ ವಿವರಗಳನ್ನೊಳಗೊಂಡ ಬರಹವಿದೆ. ಡಾ॥ಎನ್. ನಂದೀಶ್ ಅವರ 'ಸಿರಾ ತಾಲ್ಲೂಕು ಶಾಸನಗಳು ಮತ್ತು ಸ್ಮಾರಕಗಳು' ಸಾಂಸ್ಕೃತಿಕವಾಗಿ ಉತ್ತಮ ಗ್ರಂಥವಾಗಿದೆ.

ಸಿರಾ ಸೀಮೆಯಲ್ಲಿ ಗಡಿನಾಡ ಜಾನಪದ ಸಂಪರ್ಕ ಕೇಂದ್ರ ಎಂಬ ಜಾನಪದ ಸಂಸ್ಥೆ ಕಳೆದ ಹದಿಮೂರು ವರ್ಷಗಳಿಂದಲೂ ಕೆಲಸ ಮಾಡುತ್ತಿದೆ. ಜಾನಪದ ಕಲೆ, ಕಲಾವಿದರ ಸಂಪರ್ಕ, ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರದರ್ಶನವನ್ನು ಪ್ರಧಾನ ಆಶಯವನ್ನಾಗಿ ಇರಿಸಿಕೊಂಡು, ಜಾನಪದ ಕ್ಷೇತ್ರದ ಮಹತ್ವದ, ಅಪರೂಪದ ಗ್ರಂಥಗಳನ್ನು ಪ್ರಕಟಿಸಿದೆ. ಈ ಮೂಲಕ ನೆಲ-ಮೂಲ ಸಂಸ್ಕೃತಿಯ ತೆರೆಮರೆಯ ಬುಡಕಟ್ಟು ಕಾವ್ಯಗಳ ಪ್ರಕಟಣೆಯ ಮೂಲಕ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಗೆ ಒಳಗುಮಾಡಿದ್ದು ವಿಶೇಷವಾಗಿದೆ. ಈವರೆಗೆ ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿರುವ ಈ ಸಂಸ್ಥೆ, ಜಾನಪದ ಕ್ಷೇತ್ರದಲ್ಲಿ ವಿಶೇಷವಾಗಿ ಗಡಿಭಾಗದ ಕಲಾವಿದರಿಗೆ 'ಗಡಿನಾಡ ಜಾನಪದ ಸಂಪನ್ನ' ರಾಷ್ಟ್ರೀಯ ಪುರಸ್ಕಾರ ನೀಡುತ್ತಾ ಬರುತ್ತಿದೆ.

# ಅಧ್ಯಾಯ -ಮೂರು
# ಸ್ಥಳನಾಮಗಳು ಮತ್ತು ಸಾಂಸ್ಕೃತಿಕ ನೋಟ

ಸಿರಾ ತಾಲ್ಲೂಕು ಕೇಂದ್ರವಾದಂತೆ ಇದರ ಪರಿಧಿಯೊಳಗೆ 485 ಗ್ರಾಮಗಳು ಬರುತ್ತವೆ[1]. ಅರಸು ಪರಂಪರೆಯಿಂದ ಪ್ರಜಾಪ್ರಭುತ್ವದ ಇಂದಿನವರೆಗೆ ಸಿರಾ ರಾಜಕೀಯವಾಗಿ ಹಲವಾರು ಸ್ಥಿತ್ಯಂತರಗಳನ್ನು ಹೊಂದಿದೆ. ಮೊದಲು ಸಿರಾ ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟಿತ್ತು. ಕಮೀಷನರ್ ಆಳ್ವಿಕೆಯ ಕಾಲದಲ್ಲಿ ಚಿತ್ರದುರ್ಗ ಒಂದು ಡಿವಿಜನ್ ಎಂದೂ ಕರೆಯಲಾಗುತ್ತಿತ್ತು. 1866 ರಲ್ಲಿ ಸಿರಾ ನಗರವನ್ನು ಚಿತ್ರದುರ್ಗದಿಂದ ಬೇರ್ಪಡಿಸಿ, ತುಮಕೂರು ಜಿಲ್ಲೆಗೆ ಸೇರಿಸಲಾಯಿತು[2]. ಆಗಲೂ ಕೊರಟಗೆರೆ ತಾಲ್ಲೂಕು ಅಸ್ತಿತ್ವ ಪಡೆದುಕೊಂಡಿರಲಿಲ್ಲ. ಹಾಗಾಗಿ ಕೊರಟಗೆರೆಯ ಹಲವು ಹಳ್ಳಿಗಳು ಸಿರಾದೊಂದಿಗೆ ವ್ಯವಹರಿಸುತ್ತಾ ಇದ್ದುದರಿಂದ ಮುಂದೆ 1866 ರ ಸುಮಾರಿಗೆ ತುಮಕೂರಿನ ಕೆಲವು ಹಳ್ಳಿಗಳು, ಕೊರಟಗೆರೆಯ ಕೆಲವು ಹಳ್ಳಿಗಳನ್ನು ಸಿರಾ ವ್ಯಾಪ್ತಿಯ ಹಲವು ಹಳ್ಳಿಗಳೊಂದಿಗೆ ಸಂಯೋಜಿಸಿ ಸಿರಾ ತಾಲ್ಲೂಕು ಕೇಂದ್ರವೆಂದು ಘೋಷಿಸಲಾಯಿತು. 1882 ರಲ್ಲಿ ತಾಲ್ಲೂಕು ಕೇಂದ್ರದ ಮನ್ನಣೆ ಪಡೆದ ಸಿರಾ ಈಗಿನಂತೆ 485 ಹಳ್ಳಿಗಳನ್ನು ಒಳಗೊಳ್ಳದೆ 400 ಕ್ಕೂ ಕಡಿಮೆ ಹಳ್ಳಿಗಳನ್ನು ಹೊಂದಿರುವುದಾಗಿ ತಿಳಿಯುತ್ತದೆ. ನಂತರದ ದಿನಗಳಲ್ಲಿ ಜನಸಂಖ್ಯೆಯ ಹೆಚ್ಚಳ, ಅವಕಾಶ, ವಲಸೆ ಈ ಮುಂತಾದ ಕಾರಣಗಳಿಂದಾಗಿ ಗ್ರಾಮಗಳ ಅಸ್ತಿತ್ವ ಹೆಚ್ಚಾಗುತ್ತಲೇ ಹೋಗುತ್ತಿವೆ. 2005 ರ ತಾಲ್ಲೂಕು ಕಛೇರಿ ತಯಾರಿಸಿದ ಗ್ರಾಮನಕ್ಷೆಯ ಪ್ರಕಾರ, ಸಿರಾ ತಾಲ್ಲೂಕಿಗೆ 485 ಹಳ್ಳಿಗಳು ಅಧಿಕೃತವಾಗಿ ತಮ್ಮದೇ ಆದ ಹೆಸರುಗಳಿಂದ ಕರೆಯಲ್ಪಟ್ಟವು. 1866 ರಲ್ಲಿ ತುಮಕೂರು ಜಿಲ್ಲೆ ಅಸ್ತಿತ್ವ ಪಡೆದುಕೊಂಡ ಮೇಲೆ ತುಮಕೂರು ಜಿಲ್ಲೆಯ ಮಧುಗಿರಿ, ಕೊರಟಗೆರೆ, ಚಿಕ್ಕನಾಯಕನಹಳ್ಳಿ, ಹೊನ್ನವಳ್ಳಿ (ತಿಪಟೂರು), ಕುಣಿಗಲ್ ಹಾಗೂ ಕಡಬ (ಗುಬ್ಬಿ) ಈ ಗ್ರಾಮಗಳೂ ತಾಲ್ಲೂಕು ಕೇಂದ್ರಗಳೆಂದು ಘೋಷಿಸಿಕೊಂಡವು. ಮುಂದೆ ಸಿರಾ ಬೆಳೆಯತೊಡಗಿತು. ಅದರಂತೆ ಪಾವಗಡ, ಸಿರಾ, ಮಧುಗಿರಿ ಈ ಮೂರೂ ತಾಲ್ಲೂಕುಗಳನ್ನು ಒಟ್ಟುಗೂಡಿಸಿ ತಾಲ್ಲೂಕು ಕೇಂದ್ರವಾಗಿದ್ದ ಹಾಗೂ ಸಿರಾ, ಪಾವಗಡ ಎರಡೂ ತಾಲ್ಲೂಕುಗಳಿಗೆ ಮಧ್ಯಭಾಗವಾದ ಮದ್ದಗಿರಿಯನ್ನು 1927 ರಲ್ಲಿ ಉಪವಿಭಾಗದ ಕೇಂದ್ರಸ್ಥಳವನ್ನಾಗಿ ಮಾಡಲಾಯಿತು.

---

1. *ಸಿರಾ ತಾಲ್ಲೂಕು ಗ್ರಾಮಸೂಚಿ*
2. *ಕರ್ನಾಟಕ ಗೆಜೆಟೀಯರ್, ತುಮಕೂರು ಜಿಲ್ಲೆ ಸಂ.12*

ಸಿರಾ ತಾಲ್ಲೂಕಿನ ಗ್ರಾಮಗಳನ್ನು ಸಾಂಸ್ಕೃತಿಕ, ಐತಿಹಾಸಿಕ ಅಧ್ಯಯನ ಭಾಷಿಕ ಹಿನ್ನೆಲೆ, ಉಗಮ, ವಿಕಾಸ, ವಿಶಾಲಾರ್ಥ, ಹೀನಾರ್ಥ, ಅನ್ವರ್ಥ ಹೀಗೆ ಬೇರೆ ಬೇರೆ ಆಯಾಮಗಳನ್ನು ಪಡೆದ ಹಿನ್ನೆಲೆಯ ದೃಷ್ಟಿಯಿಂದ ಸ್ಥಳನಾಮಗಳ ಅಭ್ಯಾಸ ತೀವ್ರ ಕುತೂಹಲಕಾರಿಯಾದುದು. ಈ ಮಾತು ಪ್ರತಿಯೊಂದು ಹಳ್ಳಿಗೂ ಅನ್ವಯಿಸುತ್ತದೆ. ಆ ಹಳ್ಳಿ, ಪಟ್ಟಣ, ಗ್ರಾಮ ಯಾವುದೇ ಇರಲಿ ಅದರ ಮೂಲಕ್ಕೆ ಖಚಿತವಾದ ಐತಿಹಾಸಿಕವಾದ ಕಾರಣ ಇದ್ದೇ ಇರುತ್ತದೆ. ಅದು ಪುರಾಣ ಮೂಲವಾದರೆ ದೇವರು, ಧರ್ಮ, ಕೇಂದ್ರಿತ ನೆಲೆಯಲ್ಲಿ ಆ ಗ್ರಾಮಕ್ಕೆ ಆ ಹೆಸರು ಬಂದಿರುತ್ತದೆ. ಉದಾ.: ಕೃಷ್ಣಾಪುರ, ರಾಮಲಿಂಗಾಪುರ, ದೇವರಪುರ ಈ ಮಾದರಿ ಗ್ರಾಮಗಳ ಹೆಸರಿನ ಮೂಲದಲ್ಲಿ ಕಾಣಬಹುದಾಗಿದೆ. ಅದರಂತೆ ವ್ಯಕ್ತಿಕೇಂದ್ರಿತ ಹೆಸರಿನ ಮೂಲದಿಂದಲೂ ಆ ಗ್ರಾಮಕ್ಕೆ ಹೆಸರು ಬಂದಿರುತ್ತದೆ. ಅಂತೆಯೇ ಪರಿಸರ, ಪ್ರಕೃತಿಯ ತಾಣಗಳಿಂದಲೂ ಅನ್ವರ್ಥವಾಗಿ ಒಂದು ಗ್ರಾಮದ ಹೆಸರು ರೂಪುಗೊಂಡು ಚಾಲ್ತಿಗೆ ಬಂದಿರುತ್ತದೆ. ಈ ಹಿನ್ನೆಲೆಯಿಂದ ಸಿರಾ ಸೀಮೆಯ ಗ್ರಾಮಗಳ ಹೆಸರಿನ ಹಿನ್ನೆಲೆಯೂ ಕುತೂಹಲಕರವಾಗಿದೆ. ತಾಲ್ಲೂಕಿನ 485 ಹಳ್ಳಿಗಳಿಗೂ ಒಂದೊಂದು ಪರಂಪರೆ, ಐತಿಹಾಸಿಕ ಹಿನ್ನೆಲೆ ಇದೆ ಎಂಬುದು ಹೆಮ್ಮೆಯ ಸಂಗತಿ. ಈ ಗ್ರಾಮಗಳು ರೂಪುಗೊಂಡು ಅವುಗಳ ಹೆಸರಿನ ಹಿನ್ನೆಲೆಯನ್ನು ಹೀಗೆ ಗ್ರಹಿಸಬಹುದು. ಇಲ್ಲಿ ಹಳ್ಳಿ, ಹಟ್ಟಿ, ಪಾಳ್ಯ ಈ ಮೊದಲಾದ ಹದಿನೈದು ವರ್ಗಗಳಲ್ಲಿ ಹೆಸರಿನ ಮೂಲ ಚೆಲ್ಲಿಕೊಂಡಿದ್ದರೆ ಸಂಕೀರ್ಣವಾಗಿ 173 ಹಳ್ಳಿಗಳನ್ನು ಕಾಣಬಹುದಾಗಿದೆ.

| | | | | | | | | |
|---|---|---|---|---|---|---|---|---|
| ಹಳ್ಳಿ | - | 170, | ಊರು | - | 008 | ಸಾಗರ | - | 002 |
| ಹಟ್ಟಿ | - | 039, | ಕಾವಲ್ | - | 006, | ಕೊಣ | - | 002 |
| ಪುರ | - | 020, | ಸಂದ್ರ | - | 007, | ಕೆರೆ | - | 002 |
| ಕುಂಟೆ | - | 018, | ಕೋಟೆ | - | 004, | ಗೂಳ | - | 002 |
| ಗೆರೆ | - | 012, | ಅಗ್ರಹಾರ | - | 05, | ಸಂಕೀರ್ಣ | - | 173 |

ಈ ವರ್ಗೀಕರಣವನ್ನು ಗಮನಿಸಿದರೆ ಸಿರಾ ತಾಲ್ಲೂಕಿನ ಅರ್ಧದಷ್ಟು ಗ್ರಾಮಗಳು 'ಹಳ್ಳಿ' ಎಂಬ ಹೆಸರಿಂದ ರೂಪುಗೊಂಡವುಗಳಾಗಿವೆ. ಇವುಗಳಲ್ಲಿ ಹಳ್ಳಿ ಎಂಬ ಪದದ ಅಡಿಯಲ್ಲಿ ದೇವರು, ವ್ಯಕ್ತಿ ಇವುಗಳಲ್ಲಿ ಹೆಂಗಸು, ಗಂಡಸು, ಜಾತಿ, ಪ್ರಾಣಿ ಹಾಗೂ ಪರಿಸರದ ಹಿನ್ನೆಲೆಯಿಂದ ಹಳ್ಳಿಗಳು ರೂಪುಗೊಂಡಿವೆ. ಗ್ರಾಮದ ಸ್ಥಾಪಕನ ಹೆಸರನ್ನು ಇಟ್ಟು ಕರೆಯುತ್ತಾ ಬಂದ ವಾಡಿಕೆಯೂ ಇದೆ. ದೇವರ ಹೆಸರಿಂದ ರೂಪುಗೊಂಡಿರುವುದಕ್ಕೆ ದೇವರಹಳ್ಳಿ ನಿದರ್ಶನವಾದರೆ ಜಾತಿಯ ಹೆಸರಲ್ಲಿಯೇ ಹಳ್ಳಿ ಅಸ್ಥಿತ್ವ ಪಡೆದ ಕುಂಬಾರಹಳ್ಳಿ, ಕುರುಬರಹಳ್ಳಿ, ಬ್ಯಾಡರಹಳ್ಳಿ, ದಾಸರಹಳ್ಳಿ, ಕರಿದಾಸರಹಳ್ಳಿ, ಯರವರಹಳ್ಳಿ, ಗೊಲ್ಲರಹಳ್ಳಿ,

ಈಡಿಗರದಾಸರಹಳ್ಳಿ, ವಡ್ಡನಹಳ್ಳಿ ಮೊದಲಾದ ಹಳ್ಳಿಗಳು ಯಾವುದೇ ಮಾರ್ಪಾಟುಗಳಿಲ್ಲದೆ ನೇರವಾಗಿ ಜಾತಿ ಸೂಚಕವಾಗಿಯೇ ಬಳಕೆಯಾಗಿರುವುದನ್ನು ಕಾಣಬಹುದು. ಜೊತೆಗೆ ಕೆಳವರಹಳ್ಳಿ ಎಂಬ ಹೆಸರಿನ ಹಳ್ಳಿಯೂ ಸಿರಾ ತಾಲ್ಲೂಕಿನಲ್ಲಿದೆ. ಈ ಹೆಸರು ತುಂಬಾ ಅಪರೂಪ ಹಾಗೂ ವಿಶಿಷ್ಟವಾದ ಪದಪ್ರಯೋಗವಾಗಿದೆ. ಕಳುವರು ಎಂಬ ಜನಾಂಗವೊಂದು ಕರ್ನಾಟಕ ರಾಜಕಾರಣದಲ್ಲಿ ಪಾತ್ರ ವಹಿಸಿರುವುದರ ಬಗೆಗೆ ಸಂಶೋಧಕರು ಉಲ್ಲೇಖಿಸಿದ್ದಾರೆ[3]. ಆ ಜನಾಂಗ ಇಂದು ಕರ್ನಾಟಕದಲ್ಲಿ ಇರುವುದರ ಬಗೆಗೆ ಮಾಹಿತಿ ಯು ಲಭ್ಯವಿಲ್ಲ. ಆದರೂ ಈ ಜನಾಂಗದ ಹಿನ್ನೆಲೆ ಸೂಚಿಸುವ ಹಳ್ಳಿ ಸಿರಾ ತಾಲ್ಲೂಕಿನ ಗೌಡಗೆರೆ ಹೋಬಳಿಯಲ್ಲಿದೆ. ಮಾತ್ರವಲ್ಲ ಕಾಡುಗೊಲ್ಲರ ಸಾಂಸ್ಕೃತಿಕ ವೀರ ಜುಂಜಪ್ಪನ ನೆಲೆಯೂ ಕಳುವರಹಳ್ಳಿಯಾಗಿದೆ. ಜೊತೆಗೆ ಈ ಕಳುವರ ಎಂಬುದು ಕುಂಚಿಟಿಗ ಜನಾಂಗದ ಪರ್ಯಾಯ ಪದವಾಗಿರಬಹುದೆ? ಕುಂಚಿಟಿಗರ ನೆಲಮೂಲವನ್ನು ಹೇಳುವಾಗ ಉತ್ತರ ಭಾರತವನ್ನು ಉಲ್ಲೇಖಿಸಿ, ಶೀಲ ರಕ್ಷಣೆ, ರಕ್ತಪಾವಿತ್ರತೆಗಾಗಿ ದಕ್ಷಿಣಕ್ಕೆ ಬಂದು, ತುಂಗಭದ್ರಾ ನದಿಯನ್ನು ದಾಟಿ ಈ ಬಯಲುಸೀಮೆ ಪ್ರದೇಶಕ್ಕೆ ಬಂದಿರಬಹುದೆ? ಆ ಜನಾಂಗವನ್ನು ಕಳುವೋರು, ಕಳುವರರು, ಕಳವರು ಈ ಹೆಸರುಗಳಲ್ಲಿ ಕರೆದಿರಬಹುದೆ? ಅದೇ ಹೆಸರು ಇಂದು ಕಳವೋರಹಳ್ಳಿಯಾಗಿ ಬೆಳೆದಿರಬಹುದೆ? ಎಂಬ ಬಗೆಗೆ ವ್ಯಾಪಕ ಸಂಶೋಧನೆಗೆ ಅವಕಾಶಗಳಿವೆ. ಒಟ್ಟಾರೆ ಇಂಥ ಸಂಕೀರ್ಣ ಅರ್ಥವುಳ್ಳ ಹಳ್ಳಿಯೂ ಸಿರಾ ತಾಲ್ಲೂಕಿನಲ್ಲಿದೆ.

ಪುರುಷ ಹಾಗೂ ಸ್ತ್ರೀಮೂಲದಿಂದಲೂ ಹಳ್ಳಿಯ ಹೆಸರನ್ನು ಕರೆಯುವ ಪದ್ಧತಿ ಇದೆ. ಪುರುಷರ ಹೆಸರಲ್ಲಿ ಕರೆಯುವ ಹಳ್ಳಿಗಳೆಂದರೆ ಗಂಗನಹಳ್ಳಿ, ಕೆಂಚಗಾನಹಳ್ಳಿ, ಮರಳಪ್ಪನಹಳ್ಳಿ, ವೀರಗಾನಹಳ್ಳಿ, ಕಾಟನಹಳ್ಳಿ, ಬೆಟ್ಟಪ್ಪನಹಳ್ಳಿ, ಲಕ್ಕನಹಳ್ಳಿ, ಜುಂಜರಾಮನಹಳ್ಳಿ, ಗಿರಿನಾಥನಹಳ್ಳಿ, ದೊಡ್ಡನಹಳ್ಳಿ, ಕೆಂಪನಹಳ್ಳಿ, ಚಿಕ್ಕನಹಳ್ಳಿ, ಬಾಲೇನಹಳ್ಳಿ, ಬಸವಂತನಹಳ್ಳಿ, ತೊರೆಯಪ್ಪನಹಳ್ಳಿ, ಮಾಟನಹಳ್ಳಿ, ಮೂರ್ಗಹಳ್ಳಿ, ಚಿನ್ನಪ್ಪನಹಳ್ಳಿ, ಕುಂಟೇಗೌಡನಹಳ್ಳಿ, ಹಂಡೇಚಿಕ್ಕನಹಳ್ಳಿ, ಮಾದೇನಹಳ್ಳಿ, ಮುದ್ದನಹಳ್ಳಿ, ಉಮಾಪತಿ ಹಳ್ಳಿ, ಕೆಂಚಪ್ಪನಹಳ್ಳಿ, ಕಾಳಪ್ಪನಹಳ್ಳಿ, ಯರಮಾದನಹಳ್ಳಿ, ರಾಮನಹಳ್ಳಿ, ಲಿಂಗಶೆಟ್ಟಿಹಳ್ಳಿ, ಚನ್ನೇನಹಳ್ಳಿ, ತಿಮ್ಮನಹಳ್ಳಿ, ತಿಪ್ಪನಹಳ್ಳಿ, ಮಾಳನಹಳ್ಳಿ, ಅಜ್ಜೇನಹಳ್ಳಿ, ಓಬಳಹಳ್ಳಿ, ಇನಕನಹಳ್ಳಿ, ಅರುಗನಹಳ್ಳಿ, ಬೊಮ್ಮರಸನಹಳ್ಳಿ, ಪಟ್ಟನಾಯಕನಹಳ್ಳಿ, ಸೀಗಲಹಳ್ಳಿ, ಬೀರನಹಳ್ಳಿ, ಹನುಮನಹಳ್ಳಿ, ರಾಗಲಹಳ್ಳಿ, ಮುದ್ದರಂಗನಹಳ್ಳಿ, ಭೂತಕಾಟನಹಳ್ಳಿ, ವೀರಬೊಮ್ಮನಹಳ್ಳಿ, ಮೂಡ್ಲೇನಹಳ್ಳಿ, ಕದಿರೇನಹಳ್ಳಿ, ಕಲಿಗೋನಹಳ್ಳಿ ಈ ಮುಂತಾದ ಹಳ್ಳಿಗಳ ವ್ಯಕ್ತಿಯ ಹೆಸರಿನ ಜೊತೆಗೆ ನೇರವಾಗಿಯೇ ಗುರುತಿಸಿಕೊಳ್ಳುತ್ತವೆ. ಈ ಹೆಸರುಗಳ ವ್ಯಕ್ತಿ ಅಥವಾ ಅವರ ಹಿರಿಯನೋ ಇಲ್ಲವೆ ಆ ಸಮುದಾಯದ ಗೌರವಯುತ

*3. ಕನ್ನಡಿಯ ಹುಟ್ಟು : ಶಂ.ಬಾ. ಜೋಶಿ ; ಕರ್ನಾಟಕ ಇತಿಹಾಸ : ಎಸ್. ಫಾಲಾಕ್ಷ*

ವ್ಯಕ್ತಿಯೇ ಆಗಿರುತ್ತಾನೆ. ಹಾಗಾಗಿಯೇ ಆತನ ಹೆಸರಿನಲ್ಲಿಯೇ ಹಳ್ಳಿ ಬೆಳೆದುಬಂದಿರುತ್ತದೆ. ಹಳ್ಳಿ ಇಂದು ತಮ್ಮ ಮೂಲ ಸ್ವರೂಪದಲ್ಲಿ ಬದಲಾಗಿರಲೂಬಹುದು. ಪಟ್ಟಣದ ಸ್ವರೂಪ ಪಡೆದರೂ ಜನರ ಮಾನಸದಲ್ಲಿ ಮಾತ್ರ ಮೂಲ ಹೆಸರೇ ಬಳಕೆಯಲ್ಲಿರುವುದನ್ನು ಕಾಣಬಹುದು. ಸಿರಾ ತಾಲ್ಲೂಕಿನ ಪಟ್ಟನಾಯಕನಹಳ್ಳಿ ಇದಕ್ಕೆ ಅತ್ಯುತ್ತಮ ನಿದರ್ಶನ. ಕ್ರಿ.ಶ.1569 ರಿಂದ 1621 ರವರೆಗೆ ಸಿರಾದ ಪಾಳೆಯಗಾರರ ಆಳ್ವಿಕೆಯ ಸಂದರ್ಭದಲ್ಲಿ ಹೊನ್ನೇನಹಳ್ಳಿ, ಹುಯಿಲ್‌ದೊರೆ, ಬುಕ್ಕಾಪಟ್ಟಣ, ಗಾಣದಾಳಸೆ ಈ ಹಳ್ಳಿಗಳಲ್ಲಿ ಚಿಕ್ಕ ಚಿಕ್ಕ ಪಾಳೆಯಗಾರರು ಈ ಗ್ರಾಮದ ವ್ಯಾಪ್ತಿಯ ಹಳ್ಳಿಗಳನ್ನು ನೋಡಿಕೊಳ್ಳುತ್ತಿದ್ದರು. ಅಂತೆಯೇ ಚಂಗಾವರ, ಚಿಕ್ಕನಕೋಟೆ, ಕಗ್ಗಲಡು ಈ ಹಳ್ಳಿಗಳು ಪಾಳೆಯಗಾರರ ಹಿಡಿತದಲ್ಲಿದ್ದವು. ಅಂಥ ಸಂದರ್ಭದಲ್ಲಿಯೇ ಪಟ್ಟನಾಯಕನೆಂಬುವನು ಪಟ್ಟನಾಯಕನಹಳ್ಳಿಯ ಮೂಲಪುರುಷನಾಗಿ ಆ ಹೆಸರಿಗೆ ಪ್ರೇರಕನಾಗಿದ್ದಾನೆ. ಪಟ್ಟನಾಯಕನಹಳ್ಳಿ ತನ್ನ ಹಳ್ಳಿ ಸ್ವರೂಪವನ್ನು ಮೀರಿ ಬೆಳೆದಿದೆ. ಶಾಲಾ ಕಾಲೇಜು, ಔದ್ಯೋಗೀಕರಣ, ಬ್ಯಾಂಕಿಂಗ್, ವಾಹನ ಸೌಲಭ್ಯ ಮೊದಲಾದ ಎಲ್ಲ ನಾಗರಿಕ ಸೌಲಭ್ಯಗಳು ದೊರೆತರೂ ತನ್ನ ಮೂಲ ಹೆಸರಿನಿಂದ ಬದಲಾವಣೆ ಸಾಧ್ಯವಾಗಿಲ್ಲ. ಅದು ಸಾಧುವೂ ಅಲ್ಲ. ಬದಲಿಸುವುದು ಇತಿಹಾಸ, ಪರಂಪರೆಗೆ ಬಗೆದ ಅಪಮಾನವೂ ಕೂಡ. ಇಷ್ಟಾದರೂ ಸಿರಾ ತಾಲ್ಲೂಕಿನಲ್ಲಿ ಮೂರು ಹಳ್ಳಿಗಳು ತನ್ನ ಮೂಲ ಹೆಸರಿನಲ್ಲಿ ಬದಲಾವಣೆ ಮಾಡಿಕೊಂಡಿವೆ.

ಹಂಡೇನಹಳ್ಳಿ > ಲಕ್ಷ್ಮೀಸಾಗರ
ಕೂರೇಹಳ್ಳಿ > ರಾಮಲಿಂಗಾಪುರ
ನಾಗಜ್ಜಿಗುಡ್ಲು > ರಂಗನಾಥನಗರ

ಹಂಡೇನಹಳ್ಳಿ ಹಂಡೆವಂಶ ಜಾತಿಯಿಂದ ಬಂದಿರುವ ಹೆಸರು. ಕುರುಬರಲ್ಲಿ ಒಂದು ಪಂಗಡ ಹಂಡೇನರು. ಇಂದಿಗೂ ಹಂಡೆಕುರುಬರ ಮನೆಗಳು ಲಕ್ಷ್ಮೀಸಾಗರದಲ್ಲಿ ಹೆಚ್ಚಿವೆ. ಜೊತೆಗೆ ಕಂಬಳಿ ಕಾಯಕದ ಈ ಜನ ಕಂಬಳಿ ತಯಾರಿಕೆಗೆ ಹುಣಸೆ ಸರಿಯನ್ನು (ಅಂಬಲಿ) ದೊಡ್ಡ ದೊಡ್ಡ ಕಡಾಯಿ (ಹಂಡೆ) ಗಳಲ್ಲಿ ಬೇಯಿಸಬೇಕಾಗುತ್ತದೆ. ಅದೇ ಮೂಲವಾಗಿ ಹಂಡೆ - ಅಂಬಲಿ ಕಾಯಿಸುವ ಕಾಯಕವಾದುದರಿಂದ ಹಂಡೇನಹಳ್ಳಿ ಹೆಸರು ಬಂದಿದೆ. ಇದಕ್ಕೆ ಪೂರಕವಾಗಿ ಗಾಣದಹುಣಸೆ ಎಂಬ ಹಳ್ಳಿಯನ್ನು ಕಾಣಬಹುದು. ಇಂದಿಗೂ ಕುರುಚಲು ಕಾಡು ಹಾಗೂ ಗುಡ್ಡಗಳ ಆವರ್ತದಿಂದ ಕೂಡಿದ ಗ್ರಾಮ. ಹುಣಸೇಮರಗಳ ಸಾಲು ಗಾಣದ ಮಾದರಿಯಲ್ಲಿ ಹುಣಸೇ ಗಿಡಗಳಿವೆ. ಜೊತೆಗೆ ಕುರುಬರು ಈ ಊರಿನಲ್ಲಿ ಕಂಬಳಿ ಕಾಯಕವನ್ನು ಇಂದಿಗೂ ಮಾಡುತ್ತಿದ್ದಾರೆ. ಕಂಬಳಿ ತಯಾರಿಕೆಯಲ್ಲಿ ಹುಣಸೆಯ ಅಂಬಲಿ ಪ್ರಮುಖವಾದುದು. ಹುಣಸೇಬೀಜವನ್ನು ರುಬ್ಬುವ ಗಾಣ ಈ ಊರಿನಲ್ಲಿ ಇದ್ದುದರಿಂದಲೇ ಗಾಣದಹುಣಸೆ ಎಂಬ ಹೆಸರು ಬಂದಿರುವುದಕ್ಕೆ ಪ್ರೇರಣೆ.

ಸ್ತ್ರೀಮೂಲವನ್ನು ಹಳ್ಳಿಯ ಹೆಸರಿಡುವ ಸಂದರ್ಭದಲ್ಲಿ ಉಪೇಕ್ಷಿಸಿಲ್ಲ. ಹೆಂಗಸರ ಹೆಸರಿನ ಆರು ಹಳ್ಳಿಗಳು ಸಿರಾ ತಾಲ್ಲೂಕಿನಲ್ಲಿವೆ. ಈ ಆರು ಹಳ್ಳಿಗಳೂ ಒಂದೊಂದು ವಿಶೇಷತೆಯನ್ನು ಹೊಂದಿರುವುದು ವಿಶೇಷ. ಮದ್ದಕ್ಕನಹಳ್ಳಿ, ಬಡಕ್ಕನಹಳ್ಳಿ, ಕೊಂಡಮ್ಮನಹಳ್ಳಿ, ಹರಿಯಜ್ಜಿಹಳ್ಳಿ, ಪದ್ಮಾಪುರ. ಇಲ್ಲಿ ಮದ್ದಕ್ಕ ಎಂಬುದು ಈ ಗ್ರಾಮದ ಪ್ರಾಚೀನ ದೇವತೆ. ಈ ದೇವತೆಯ ಕಾರಣದಿಂದಾಗಿಯೇ ಈ ಹೆಸರು ಬಂದಿದೆ. ಹರ್ತಿ ಪಾಳೆಯಗಾರರು ಮದ್ದಮ್ಮ ದೇವಸ್ಥಾನಕ್ಕೆ ದತ್ತಿ ಕೊಟ್ಟ ಸಂಗತಿ ಕ್ರಿ.ಶ.16ನೇ ಶತಮಾನದ ಶಾಸನ ತಿಳಿಸುತ್ತದೆ. ಈ ಕಾರಣಗಳಿಂದ ಮದ್ದಕ್ಕನಹಳ್ಳಿ ಸಿರಾ ತಾಲ್ಲೂಕಿನ ಪ್ರಾಚೀನ ಹಳ್ಳಿ ಎಂದು ತಿಳಿದುಬರುತ್ತದೆ. ಹಿರಿಯ ಅಜ್ಜಿ ಹಿರಿಯಜ್ಜಿಯಾಗಿ ಹರಿಯಜ್ಜಿಹಳ್ಳಿಯಾಗಿರುವ ಸಾಧ್ಯತೆ ಇದೆ. ಕೊಂಡಮ್ಮ ಚಿತೆ ಹೋದ ಅಥವಾ ಸತಿ ಹೋದ ಹೆಂಗಸೊಬ್ಬಳ ನೆನಪಿನಲ್ಲಿ ರೂಪುಗೊಂಡ ಹಳ್ಳಿ ಎಂಬುದು ಸತ್ಯ. ಏಕೆಂದರೆ ಇಂದಿನ ಮಾಸ್ತಮ್ಮ, ಮಾರಮ್ಮ, ವೀರಮ್ಮ ಮುಂತಾದ ವೀರ ವನಿತೆಯರ ಹೆಸರಲ್ಲಿ ದೇವಾಲಯ ಹಾಗೂ ವ್ಯಾಪಕ ಒಕ್ಕಲುಗಳನ್ನು ಕಾಣಬಹುದಾಗಿದೆ.

ಜನಾಂಗಿಕ ಅಧ್ಯಯನಕ್ಕೆ ಹೊಸ ಆಕೃತಿ ಒದಗಿಸಬಲ್ಲ ಹಲವು ಹಳ್ಳಿಗಳು ಸಿರಾ ಪರಿಸರದ ಹಲವು ಗ್ರಾಮಗಳ ಅಧ್ಯಯನಗಳಲ್ಲಿ ಕಾಣಬಹುದು. ಅಂಥವುಗಳಲ್ಲಿ ಗೌಡ ಪದ ಬಳಕೆಯೂ ಒಂದಾಗಿದೆ. ಗ್ರಾಮ ಮುಖಂಡ, ಯಜಮಾನ ಮೊದಲಾದ ಗ್ರಾಮಾಧಿಕಾರದ ಹಿನ್ನೆಲೆಯಲ್ಲಿ ಗೌಡ ಎಂಬ ಹೆಸರಲ್ಲಿ ಕರೆಯುವುದು ವಾಡಿಕೆ. ಆದರೂ ಗೌಡ ಎಂಬ ಪದ ದಕ್ಷಿಣ ಕರ್ನಾಟಕದಲ್ಲಿ ಒಂದು ನಿರ್ದಿಷ್ಟ ಜನಾಂಗಕ್ಕೆ ಅನ್ವಯಿಸಿ ಹೇಳುವುದುಂಟು. ಆದರೆ ಸಿರಾ ಸೀಮೆಯಲ್ಲಿ ಈ ಜನಾಂಗ ಪರಿಧಿಯನ್ನು ಮೀರಿ ಮೂಲ ಸ್ವರೂಪದಲ್ಲಿ ಅಂದರೆ ಕಾಯಕ ಅನುಲಕ್ಷಿಸಿ ಕರೆದಿರುವುದನ್ನು ಕಾಣಬಹುದು. ಹಾಗಾಗಿ ಸಿರಾ ತಾಲ್ಲೂಕಿನಲ್ಲಿ ಬೇಡ, ಗೊಲ್ಲ, ಈಡಿಗ, ಕುರುಬ ಇವರನ್ನು ಗೌಡ ಎಂದೇ ಕರೆಯಲಾಗಿದೆ. ಉದಾ.: ಶಾಗದಡು ಸಂಗೇಗೌಡ, ಲಿಂಗೇಗೌಡ, ಗಾಣದುಣಸೆ ಬೊಮ್ಮೇಗೌಡ, ನೇರಲಗುಡ್ಡ ಪರ್ವತೇಗೌಡ, ಹುಣಸೇಕಟ್ಟೆ ರಾಮದಾಸೇಗೌಡ ಈ ಬೇಡ ಜನಾಂಗದವರನ್ನು ಗೌಡರು ಎಂದೇ ಕರೆಯುವುದು. ಹೆಸರ ಮುಂದೆ ಗೌಡ ಪದವನ್ನು ಅನ್ವರ್ಥವಾಗಿ ಬಳಸುವುದನ್ನು ಇಂದಿಗೂ ಕಾಣಬಹುದು. ಬಿಜ್ಜಳಿಬೆಳ್ಳದ ಒಂದು ಮುಸ್ಲಿಂ ಕುಂಟುಂಬಕ್ಕೂ ಗೌಡ ಪದ ಅನ್ವರ್ಥವಾಗಿ ಬಳಕೆಯಾಗಿ ಹುಸೇನ್ ಗೌಡ ಎಂದೇ ಕರೆಯಲಾಗುತ್ತಿದೆ. ಗೌಡ > ಗಾವುಂಡ > ಗೌಡ ಪದಗಳಿಗೆ ಸಂವಾದಿಯಾಗಿ ಬಳಕೆಯಾಗಿ ಈ ಬಗೆಯ ವ್ಯಕ್ತಿ ಹೆಸರಿನ ಹಳ್ಳಿಗಳೂ ಸಿರಾ ತಾಲ್ಲೂಕಿನಲ್ಲಿವೆ. ಹಳಗನ್ನಡದ ಗೊಂಡ ಪದ ಹೊಸಗನ್ನಡದಲ್ಲಿ ಗೌಡ ಪದ ಸಮಾನಾರ್ಥಕ ಪದವಾಗಿದೆ. ಇದೇ ಹೆಸರಿನ ಆರಕ್ಕೂ ಹೆಚ್ಚು ಹಳ್ಳಿಗಳು ಸಿರಾ ತಾಲ್ಲೂಕಿನಲ್ಲಿವೆ.

ಕಾಮಗೊಂಡನಹಳ್ಳಿ, ನಾರಗೊಂಡನಹಳ್ಳಿ, ಹೊನ್ನಗೊಂಡನಹಳ್ಳಿ, ಮಾರಗೊಂಡನಹಳ್ಳಿ ಮುಂದೆ ಗೌಡ ಮೂಲದ ಗೊಂಡ ಪದ ಪ್ರಯೋಗದಲ್ಲಿಯೇ ಇಂದಿಗೂ ಬಳಕೆಯಾಗುತ್ತಿದೆ. ಜೊತೆಗೆ ಕುಂಟೇಗೌಡನಹಳ್ಳಿ ಮುಂತಾದ ಹಳ್ಳಿಗಳ ಬಳಕೆಯಲ್ಲಿ ಹೊಸಗನ್ನಡದ ರೂಪವನ್ನು ಕಾಣಬಹುದಾಗಿದೆ.

ಕೆರೆ, ಗೆರೆ, ಸಂದ್ರ ಈ ಮೂಲದ 21 ಹಳ್ಳಿಗಳು ಸಿರಾ ಸೀಮೆಯಲ್ಲಿವೆ. ಕೆರೆಯ ಬದಿ, ಅಂಗಳ, ಆ ಹಿಂದೆ-ಮುಂದೆ ರೂಪುಗೊಂಡ ಹಳ್ಳಿಗಳನ್ನು ಅದೇ ಹೆಸರಲ್ಲಿ ಕರೆಯುವುದು ವಾಡಿಕೆಯಾಗಿದೆ. ದೊಡ್ಡಬಾಣಗೆರೆ, ಚಿಕ್ಕಬಾಣಗೆರೆ, ಮಾರನಗೆರೆ, ಗೌಡಗೆರೆ, ಹಾರೋಗೆರೆ, ಮುದಿಗೆರೆ, ಬಿಳಿಗೆರೆ, ಯಂಜಲಗೆರೆ, ಕಡವಿಗೆರೆ ಈ ಎಲ್ಲವೂ ಕೆರೆಯ ಹೆಸರಿನ ಹಿ ನ್ನೆಲೆಯಿಂದಲೇ ಬಂದವುಗಳು. ಬಿದಿರುಕೆರೆ, ತಾವರೇಕೆರೆ ಈ ಊರುಗಳು ರೂಢನಾಮದಿಂದ ಬಂದವುಗಳು. ಇದೇ ಮೂಲದ ಸಂದ್ರ - ಸಮುದ್ರ ಪದದ ಸಂಕ್ಷಿಪ್ತ ರೂಪವಾಗಿದ್ದು ಈ ಹೆಸರಿನ ಏಳು ಹಳ್ಳಿಗಳನ್ನು ಕಾಣಬಹುದಾಗಿದೆ. ಚಿಕ್ಕಸಂದ್ರ, ಬೋರಸಂದ್ರ, ರತ್ನಸಂದ್ರ, ಬ್ರಹ್ಮಸಂದ್ರ, ಮಾಯಸಂದ್ರ, ಭೂಪಸಂದ್ರ ಈ ಮುಂತಾದ ಹೆಸರುಗಳು ವ್ಯಕ್ತಿಯ ದೇವರ ಹೆಸರನ್ನು ಮೊದಲರ್ಧದಲ್ಲಿ ಕಾಣಬಹುದಾಗಿದೆ. ಹಾಗೆಯೇ ಕುಂಟೆ ಎಂಬ ಹೆಸರಿನ ಹದಿನೆಂಟು ಹಳ್ಳಿಗಳು ಕಂಡುಬರುತ್ತವೆ. ಕುಂಟೆ ಎಂದರೆ ನೀರಿನ ಜಾಗ, ಹೊಂಡ, ಸಣ್ಣ ಕೆರೆ, ಕಟ್ಟೆ ಎಂಬ ಅರ್ಥದಲ್ಲಿಯೂ ಬಳಕೆಯಾಗಿದೆ. ಗಂಜಲಗುಂಟೆ, ದ್ವಾರನಕುಂಟೆ, ಕುದುರೆಕುಂಟೆ, ಹುಲಿಕುಂಟೆ, ಕ್ಯಾದಿಕುಂಟೆ, ಗೋಪಿಕುಂಟೆ, ಮೊಸರಕುಂಟೆ, ಉಜ್ಜಿನಕುಂಟೆ, ಬಂದಕುಂಟೆ, ಮೇಲುಕುಂಟೆ, ಹಂದಿಕುಂಟೆ, ಓಜಗುಂಟೆ, ಚನ್ನನಕುಂಟೆ, ಕೂಸುಕುಂಟೆ, ಸೋರೇಕುಂಟೆ, ಯರಗುಂಟೆ ಈ ಎಲ್ಲ ಗ್ರಾಮಗಳು ಕೆರೆ, ಕಟ್ಟೆ ಮೂಲದಿಂದ ಬಂದ ಹಳ್ಳಿಗಳಾಗಿವೆ. ಓಜಗುಂಟೆ - ಓಜಕುಂಟೆಯಿಂದ ಬಂದ ಪದ. ಓಜ ಎಂದರೆ ವಿದ್ವಾಂಸ ಎಂಬ ವಿಶೇಷ ಅರ್ಥವಿದೆ. ಈ ಪದಕ್ಕೆ ಪಂಡಿತ, ಶಿಕ್ಷಕ ಎಂಬ ಅರ್ಥವೂ ಇದೆ. ಈ ಗ್ರಾಮದ ಬದಿಗೆ ಒಂದು ಶುಭ್ರವಾದ ವಿಶಾಲವಾದ ಕೊಳವಿದ್ದು, ಇದು ಸಿರಾ ಸಂಸ್ಥಾನದ ಅರಸು ಪರಂಪರೆಯ ಪಂಡಿತರಿಗೆ ಸ್ನಾನ ಘಟ್ಟವಾಗಿಯೂ ಬಳಕೆಯಾಗುತ್ತಿದ್ದುದರಿಂದಾಗಿ ಅಥವಾ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದ ಸ್ಥಳವಾದ ನಿಮಿತ್ತವೂ ಅನ್ವರ್ಥವಾಗಿ ಓಜಗುಂಟೆ ಎಂದು ಕರೆಯಲಾಗಿದೆ.

ಗ್ರಾಮ ಸಂಸ್ಕೃತಿಯಲ್ಲಿ 'ಊರು' ಎಂಬುದು ಹೆಚ್ಚು ಜನಪ್ರಿಯ ಶಬ್ದ. ಸಿರಾ ತಾಲ್ಲೂಕಿನಲ್ಲಿ ಊರು ಹೆಸರಿನ 8ಕ್ಕೂ ಹೆಚ್ಚು ಹಳ್ಳಿಗಳಿವೆ. ಬರಗೂರು, ಹೊಸೂರು, ನಾದೂರು, ಮದಲೂರು, ತರೂರು, ಯಲಿಯೂರು, ತಡಕಲೂರು ಇತ್ಯಾದಿ. ಬರಗು+ಊರು = ಬರಗೂರು ಆಗಿದೆ ಎಂದರೆ ಬರಗು ಬೆಳೆಯುವ ಪ್ರದೇಶ ಎಂಬ

ಪ್ರಾದೇಶಿಕ ವಿವರವೂ ಪ್ರಾಪ್ತವಾಗುತ್ತದೆ. ಸ್ಥಳೀಯ ಐತಿಹ್ಯದ ಪ್ರಕಾರ ನೊಳಂಬವಾಡಿ 32 ಸಾವಿರ ವರಹಗಳ ನಾಡಿನ ಕುದುರೆಗಳಿಗೆ ಆಹಾರ ಪೂರೈಕೆಯ ಸ್ಥಳ ಎಂತಲೂ, ಪ್ರಮುಖ ವಿದ್ಯಾ ಕೇಂದ್ರವಾಗಿ ಬ್ರಹ್ಮಚಾರಿಗಳ ಗುರುಕುಲವಾಗಿತ್ತು ಎಂತಲೂ ಹೇಳಲಾಗುತ್ತಿದೆ. ಈ ಗ್ರಾಮದಲ್ಲಿನ ಈಶ್ವರ ದೇವಾಲಯದಲ್ಲಿನ ಶಾಸನ ಈ ಅಂಶವನ್ನು ಪುಷ್ಟೀಕರಿಸುತ್ತದೆ.

ತರೂರು (ತರೀ ಮರ), ಯಲಿಯೂರು (ಎಲೆ-ಬಳ್ಳಿ ಸಸ್ಯಜಾತಿ) ಈ ಹಳ್ಳಿಗಳು ಸಸ್ಯಮೂಲದಿಂದ ಬಂದವುಗಳು. ಮೊದಲೂರು ಕ್ರಿಯಾಸೂಚಕ ಪದ. ಕರ್ನಾಟಕ-ಆಂಧ್ರದ ಗಡಿ ಗ್ರಾಮವಾಗಿರುವುದೇ ಈ ಹೆಸರಿನ ಮೂಲ. ನಾದೂರು ಕಲೆ, ಸಂಗೀತ ಸಂಬಂಧಿ ಕಾರಣ ಇರಬಹುದು. ನೊಳಂಬವಾಡಿಯ ಸಂಸ್ಥಾನದ ವಾದ್ಯಕಾರರು ನಾದೂರಿನವರಾಗಿದ್ದು ಆ ವಂಶದ ದಾಸಪ್ಪನವರ ಏಳು ಕುಟುಂಬಗಳು ನಾದೂರಿನಲ್ಲಿ ಇಂದಿಗೂ ಇವೆ. ದಾಸಪ್ಪ ಹೆಸರಾಂತ ಕಹಳೆ, ನಾದಸ್ವರ ವಾದಕ. ನಾದೂರಿನಲ್ಲಿ ನೊಳಂಬರ ಕಾಲದ ಕಲ್ಲೇಶ್ವರ ದೇವಾಲಯ ಪೂರಕವಾಗಿ ದೇವಾಲಯದ ಕೊಡುಗೆ ಜಮೀನು ಇಂದಿಗೂ ಇವೆ. ಈ ಅಂಶಗಳೂ ನಾದೂರಿನ ಹೆಸರಿನ ಹಿನ್ನೆಲೆಗೆ ಬಲವಾದ ಆಕರಗಳಾಗಿವೆ.

ಕಾವಲು ಹೆಸರಿನ ಆರಕ್ಕೂ ಹೆಚ್ಚು ಹಳ್ಳಿಗಳು ಸಿರಾ ತಾಲ್ಲೂಕಿನಲ್ಲಿದ್ದು ಈ ಎಲ್ಲವುಗಳ ಭೌಗೋಳಿಕ  ವಿನ್ಯಾಸವನ್ನು ಗಮನಿಸಿದರೆ ಈ ಎಲ್ಲಾ ಗ್ರಾಮಗಳು ಕೆರೆಯ ಅಥವಾ ನೀರಿನ ಮುಂಭಾಗದ ಸ್ಥಳಗಳಾಗಿದ್ದು ಹೆಚ್ಚಾಗಿ ಹುಲ್ಲುಗಾವಲುಗಳಾಗಿರುವುದು ವಿಶೇಷ. ಹೀಗಾಗಿ ಅಲ್ಲಿನ ಕೆರೆಯ ಹೆಸರಿನೊಂದಿಗೆ ಹೊಂದಿಕೊಂಡಿರುವ ಗ್ರಾಮಗಳಿಗೆ ಜೋಡಿಯಾಗಿ ಹೀಗೆ ಕರೆಯಲಾಗುವುದು. ಚಿಕ್ಕಸಂದ್ರ ಕಾವಲ್, ಮುದಿಗೆರೆ ಕಾವಲ್, ಕೂಸುಕುಂಟೆ ಕಾವಲ್, ಹುಯಿಲ್‌ದೊರೆ ಕಾವಲ್, ಹಲ್ಕೂರು ಕಾವಲ್, ಬೂದಿಗುಡ್ಡ ಕಾವಲ್ ಈ ಸ್ಥಳಗಳು ಮುಖ್ಯ ಗ್ರಾಮದ ಹೆಸರಿನೊಂದಿಗೆ ಕಾವಲ್ ಸೇರಿಸಿ ಕರೆಯಲಾಗಿದೆ.

ಅಗ್ರಹಾರ ಎಂಬ ಸ್ಥಳದ ಹಿನ್ನೆಲೆಯು ಒಂದು ಕಾಲದ ಬ್ರಾಹ್ಮಣರ ಪ್ರಾಬಲ್ಯದ ಅಥವಾ ಜನಹಿತ ಕಾರಣ ದಾನ, ಪೂಜೆ ಮೊದಲಾದ ಕಾರಣಗಳಿಂದ ಬ್ರಾಹ್ಮಣರಿಗೆ ದಾನವಾಗಿ ನೀಡಿದ ಗ್ರಾಮ ಅಥವಾ ಪ್ರದೇಶವಾಗಿರುತ್ತವೆ. ಬ್ರಾಹ್ಮಣರ ಪ್ರಧಾನ ಕಸುಬಾದ ವಿದ್ಯಾಭ್ಯಾಸ, ಧಾರ್ಮಿಕ ಬೋಧನೆ, ಪೌರೋಹಿತ್ಯ ಕಾರ್ಯ ಈ ಹಿನ್ನೆಲೆಯಿಂದಲೂ ಅಗ್ರಹಾರ ಎಂದು ಕರೆಯಲಾಗುವುದು. ಸಿರಾ ತಾಲ್ಲೂಕಿನಲ್ಲಿ ಐದು ಅಗ್ರಹಾರಗಳಿವೆ. ಸೀಬಿ ಅಗ್ರಹಾರ, ದೊಡ್ಡ ಅಗ್ರಹಾರ, ಚಿಕ್ಕ ಅಗ್ರಹಾರ, ಹಂದಿಕುಂಟೆ ಅಗ್ರಹಾರ ಇಲ್ಲೆಲ್ಲ ಇಂದು ಬ್ರಾಹ್ಮಣರ ಸಂಖ್ಯೆ ಅಥವಾ ವಾಸ ಮಾಡುವುದು ಕಾಣದಿದ್ದರೂ ಬ್ರಾಹ್ಮಣ್ಯದ ಕಾರಣದಿಂದಲೇ ಅಗ್ರಹಾರ ಹೆಸರು ಬಂದಿರುವ ಸಾಧ್ಯತೆಗಳಿವೆ.

ಪುರ ಹೆಸರಿನ ಸುಮಾರು 20 ಸ್ಥಳಗಳನ್ನು ಗುರುತಿಸಬಹುದು. ರಂಗಾಪುರ, ದೇವರಪುರ, ಪದ್ಮಾಪುರ, ವೀರಾಪುರ, ಕೃಷ್ಣಾಪುರ, ವೆಂಕಟಾಪುರ, ವರದಾಪುರ, ನಾರಾಯಣಪುರ, ರಾಮಲಿಂಗಾಪುರ ಇಲ್ಲಿ ದೇವರ ಹೆಸರಿನೊಂದಿಗೆ ಊರಿನ ಹೆಸರು (ಪುರ) ಅಂತ್ಯ ಪದವಾಗಿ ಬೆರೆತಿದೆ. ಈ ಎಲ್ಲವೂ ಆಯಾಯ ಹೆಸರಿನ ದೇವರು ಇಲ್ಲವೇ ದೇವರ ಒಕ್ಕಲುಗಳ ಪ್ರಭಾವದಿಂದಾಗಿಯೇ ಈ ಹೆಸರುಗಳು ಬಂದಿರುತ್ತವೆ.

ಹಟ್ಟಿ ಹೆಸರಿನ ಹಳ್ಳಿಗಳು 40 ಕ್ಕೂ ಅಧಿಕ ಸಂಖ್ಯೆಯಲ್ಲಿವೆ. ಹಟ್ಟಿ ಎಂದರೆ ಮನೆ, ಮನೆಯ ಪರಿಸರ ಎಂತಲೂ ಕರೆಯಲಾಗುವುದು. ಒಂದು ನಿರ್ದಿಷ್ಟ ಜನಾಂಗದ ವಾಸಸ್ಥಳ ಎಂತಲೂ ಕರೆಯಲಾಗಿದೆ. ಆದರೆ ಸಿರಾ ತಾಲ್ಲೂಕಿನ ಈ ಎಲ್ಲ ಹಟ್ಟಿಗಳು ಸ್ವತಂತ್ರವಾಗಿ ಅಸ್ಥಿತ್ವ ಪಡೆದವುಗಳಲ್ಲ. ಬದಲಿಗೆ ಮಜರೆ ಗ್ರಾಮಗಳಾಗಿ ಬಳಕೆಯಾಗಿರುವುದನ್ನು ಕಾಣಬಹುದು. ಉದಾ. ದಾಸರಹಳ್ಳಿ ಗೊಲ್ಲರಹಟ್ಟಿ, ಲಕ್ಕೇನಹಳ್ಳಿ ಗೊಲ್ಲರಹಟ್ಟಿ, ಮಾರನಗೆರೆ ಗೊಲ್ಲರಹಟ್ಟಿ, ಓಜಗುಂಟೆ ಗೊಲ್ಲರಹಟ್ಟಿ, ಎಮ್ಮೇರಹಳ್ಳಿ ಗೊಲ್ಲರಹಟ್ಟಿ, ಕಾರ್ಪೆಹಳ್ಳಿ ಗೊಲ್ಲರಹಟ್ಟಿ, ಹೊನ್ನಗೊಂಡನಹಳ್ಳಿ ಗೊಲ್ಲರಹಟ್ಟಿ ಇದರಲ್ಲಿ ದೇವರಹಟ್ಟಿ, ಕುಂಟನಹಟ್ಟಿ, ಗುಡ್ಡದಹಟ್ಟಿ ಪರಿಸರದ ಹಿನ್ನೆಲೆಯಲ್ಲಿ ಅನ್ವರ್ಥಗೊಂಡ ಗ್ರಾಮಗಳಾಗಿವೆ. ವಿಶೇಷವಾಗಿ ಈ ಎಲ್ಲ ಗ್ರಾಮಗಳು ಗೊಲ್ಲ ಜನಾಂಗದ ನೆಲೆಗಳಾಗಿರುವುದು ವಿಶೇಷವಾಗಿದೆ.

ಕೋಟೆ ಹೆಸರಿನ ನಾಲ್ಕು ಗ್ರಾಮಗಳಿದ್ದು ಇವೆಲ್ಲವೂ ಪ್ರಾಚೀನ ಗ್ರಾಮಗಳೆಂದು ತಿಳಿಯುತ್ತದೆ. ಪಾಳೆಯಗಾರರ, ಮಾಂಡಲೀಕರ ಅಥವಾ ಗ್ರಾಮ ರಕ್ಷಣಾತ್ಮಕವಾಗಿಯೂ ಕೋಟೆ ಕಟ್ಟಿಕೊಂಡಿರುವ ಸಾಧ್ಯತೆಗಳಿವೆ. ಅಲ್ಲದೆ ಸಿರಾ ತಾಲ್ಲೂಕಿನ ಕಗ್ಗಲಡು, ಚೆಂಗಾವರ, ಬರಗೂರು, ನಾದೂರು, ಪ.ನಾ.ಹಳ್ಳಿ, ತಡಕಲೂರು, ಕೆ.ರಂಗನಹಳ್ಳಿ ಈ ಗ್ರಾಮಗಳಲ್ಲೂ ಕೋಟೆಯ ಅವಶೇಷಗಳನ್ನು ಇಂದಿಗೂ ಕಾಣಬಹುದಾಗಿದೆ. ಆದರೂ ಕೆಲ ಗ್ರಾಮಗಳಿಗೆ ಅನ್ವರ್ಥವಾಗಿ ಕೋಟೆ ಪದವನ್ನು ಬಳಸಿಕೊಂಡಿಲ್ಲ. ಚಿಕ್ಕನಕೋಟೆ, ಮೆಳೇಕೋಟೆ, ಹೊಸಕೋಟೆ, ಕಲ್ಲುಕೋಟೆ ಇಲ್ಲೆಲ್ಲಾ ವ್ಯಕ್ತಿಯ ಹೆಸರಿನ ಪೂರ್ವಪದದೊಂದಿಗೆ ಕೋಟೆ ಅಂತ್ಯದಲ್ಲಿ ಬಂದಿದೆ. ಅಂತೆಯೇ ಬೊಪ್ಪರಾಯನ ಪಾಳ್ಯ, ಮೇಲುಗಿರಿಯಪ್ಪನಪಾಳ್ಯ, ಚಿಕ್ಕಬೆಟ್ಟಣ್ಣನ ಪಾಳ್ಯ, ಹಳ್ಳಪ್ಪನ ಪಾಳ್ಯ, ಬಂಡಿ ಬಸಪ್ಪನ ಪಾಳ್ಯ, ಕೋಡಿಬಸಪ್ಪನ ಪಾಳ್ಯ, ಶಿವನಯ್ಯನ ಪಾಳ್ಯ, ಕೊಟ್ಟಿಪಾಳ್ಯ, ಕೆರೆಕೆಂಚಪ್ಪನಪಾಳ್ಯ, ಮುಕಡಪ್ಪನಪಾಳ್ಯ, ಹನುಮೇಗೌಡನಪಾಳ್ಯ, ಕಾಡಜ್ಜನಪಾಳ್ಯ, ಅಜ್ಜಯ್ಯನಪಾಳ್ಯ, ಗುಬ್ಬಿ ಚಿಕ್ಕಣ್ಣನಪಾಳ್ಯ, ಉದ್ದಯ್ಯನಪಾಳ್ಯ, ಮರಳೇಗೌಡನಪಾಳ್ಯ, ಹೊಸಪಾಳ್ಯ - ಈ ಮುಂತಾದ ಹಳ್ಳಿಗಳೂ ನೇರವಾಗಿ ವ್ಯಕ್ತಿ ಮೂಲದ ಹೆಸರನ್ನು ಹೊಂದಿವೆ. ಹಾಗಾಗಿ ಆ ವ್ಯಕ್ತಿಯ ಪರಿವಾರದವರ ವಾಸಸ್ಥಳವಾಗಿ ಮುಂದೆ ಊರು ಬೆಳೆದಿದೆ.

ಹುಣಸೆಕಟ್ಟೆ, ಗಾಣದಹುಣಸೆ ಸಸ್ಯಪ್ರಧಾನ ನೆಲೆಯಿಂದ ರೂಪುಗೊಂಡ ಹಳ್ಳಿಗಳು. ಸಿಡ್ಲೇಕೊಣ, ತುಪ್ಪದಕೊಣ ಆಹಾರ, ಪ್ರಾಣಿಮೂಲದ ಹೆಸರುಗಳು. ಇಲ್ಲಿ ಕೊಣ ಅಂದರೆ ನೀರಿನ ಕೊಳ ಗ್ರಾಮ್ಯ ಭಾಷೆಯಲ್ಲಿ ಕೊಣವಾಗಿ ಪ್ರಚಲಿತವಾಗಿದೆ. ಹಾಗೆಯೇ ತಿಮ್ಮಸಾಗರ, ಲಕ್ಷ್ಮೀಸಾಗರ ಕೆರೆಗೆ ಪೂರಕವಾಗಿ ರೂಪುಗೊಂಡ ಹೆಸರುಗಳು. ಮುದಿಮಡು ಇದೇ ಹಿನ್ನೆಲೆಯ ಗ್ರಾಮ. ನೇರಲೇಗುಡ್ಡ ಕುರುಚಲುಮಿಶ್ರಿತ ಗುಡ್ಡಪ್ರದೇಶ. ಇದರ ಭೌಗೋಳಿಕ ಲಕ್ಷಣವೂ ಹಾಗೆಯೇ ಇದೆ. ನೇರಳೇಹಣ್ಣಿನ ಪ್ರದೇಶವೂ ಆಗಿದ್ದಿರಬಹುದು. ಮಾಗೋಡು, ಬುಕ್ಕಾಪಟ್ಟಣ, ಬೆಂಚೆ, ಕಳ್ಳಂಬೆಳ್ಳ, ಕಗ್ಗಲಡು, ಶಾಸಮರು, ಕೊಟ್ಟ, ಯಾದಲಡಕು, ಬೆಜ್ಜಿಹಳ್ಳಿ, ಬಿಜ್ಜನಬೆಳ್ಳ, ಚಂಗಾವರ, ಮಾನಂಗಿ, ನೇಜಂತಿ, ಸಿರಾದಡು, ತಾಳಗುಂದ, ಯಂದೊರೆ, ಹುಯಿಲ್‌ದೊರೆ, ವಾಜರಹಳ್ಳಿ, ಶಾಗದಡು ಈ ಬಗೆಯ ಅಪರೂಪದ ಹೆಸರಿನ ಸ್ಥಳನಾಮಗಳು ಇಲ್ಲಿವೆ. ಅಂತೆಯೇ ಕೆರೆಯ ಹಿನ್ನೆಲೆಯ ಚಿಕ್ಕಗುಳ, ದೊಡ್ಡಗುಳ ಎಂಬ ಹೆಸರಿನ ಹಳ್ಳಿಗಳೂ ಇವೆ.

ಮಾಗಿದ+ಗೋಡು, ಫಲವತ್ತಾದ ಮಣ್ಣಿನ ಪ್ರದೇಶ ಎಂಬ ಅರ್ಥದಲ್ಲಿ ಮಾಗೋಡು ಹೆಸರು ಬಂದಿದ್ದರೆ, ಶಾಸನ ಬರೆಯುತ್ತಿದ್ದವನ ಊರು ಶಾಸನೂರು ಆಡುಭಾಷೆಯಲ್ಲಿ ಶಾಸಮರು ಆಗಿದೆ. ಚನ್ನಿಗರಾಯನ ದೇವಾಲಯ ಇರುವುದರಿಂದಾಗಿಯೇ ಚಂಗಾವರ ಚೆಲುವಿನ ಊರು ಎಂಬ ಅರ್ಥವಿದೆ. ಸಸ್ಯಮೂಲದ ಹೆಸರು ನೇಜಂತಿ. ವಾಜರು ಅಂದರೆ ಅಕ್ಕಸಾಲಿಗರ ವಾಸಸ್ಥಳ ಎಂದೂ ಕರೆಯಲಾಗುತ್ತದೆ. ಹುಯಿಲ್‌ದೊರೆ, ಯಂದೊರೆ, ಬುಕ್ಕಾಪಟ್ಟಣ ಇವು ವ್ಯಕ್ತಿಮೂಲದ ಹೆಸರುಗಳು. ಇವುಗಳ ಆರಂಭಿಕ ಹೆಸರು ಹೇಗಿತ್ತು ಅಥವಾ ದೊರೆ, ರಾಜ, ಮಾಂಡಲಿಕ ಈ ತರಹದ ಒಡೆತನದ ಪರಿವಾರ ನಿರ್ಮಿಸಿದ ಹಳ್ಳಿ ಅಥವಾ ಸ್ಥಳವಾಗಿರಲೂಬಹುದು. ಅಥವಾ ಮೊದಲು ಇದ್ದ ಹೆಸರೇ ವ್ಯಕ್ತಿಯ ಗೌರವಾರ್ಥವಾಗಿ ಮಾರ್ಪಾಡಾಗಿರಲೂಬಹುದು.

ಕುರುಬರಹಳ್ಳಿ, ಕುಂಬಾರಹಳ್ಳಿ, ಒಡ್ಡನಹಳ್ಳಿ, ಅಗ್ರಹಾರ, ಗೊಲ್ಲರಹಳ್ಳಿ, ಬ್ಯಾಡರಹಳ್ಳಿ ಇವು ನೇರವಾಗಿ ವರ್ಣವ್ಯವಸ್ಥೆಯ ಜಾತಿಸೂಚಕ ಪದಗಳು. ಜಾತಿ ಆಧಾರದಿಂದಲೇ ಈ ಹೆಸರು ಬಂದಿವೆ. ಹುಂಜಿನಹಳ್ಳ ಹುಂಜನಾಳವಾಗಿದೆ. ವಾಸ್ತವವಾಗಿ ಕಾಡಿನ ಪ್ರದೇಶ ಕಾಡುಕೋಳಿ-ಹುಂಜಗಳು ಕೂಗುವ, ದಟ್ಟವಾಗಿ ವಾಸಿಸುವ, ನೀರಿಗೆ ಹಳ್ಳದ ಬದಿಗೆ ಬರುವ ಕಾರಣ ಅದಕ್ಕೆ ಹೊಂದಿಕೊಂಡೇ ಇರುವುದರಿಂದ ಹುಂಜನಹಳ್ಳವಾಗಿದೆ. ಇದು ಹೇಮಾವತಿ ಸಹಜ ಹಳ್ಳವಾಗಿ ಹರಿದು ಕಳ್ಳಂಬೆಳ್ಳ ಕೆರೆ ತುಂಬುವುದು ಇದೇ ಹಳ್ಳದ ಮೂಲಕವಾಗಿಯೇ. ಅಜ್ಜನಹಳ್ಳ ಎಂಬುದು ಬಿಜ್ಜಂಬೆಳ್ಳ (ಹಳ್ಳ) ವಾದರೆ ಹಳ್ಳ, ಗಿಡ, ಮರಗಳ ಪ್ರದೇಶದಿಂದ ಕಳ್ಳಂಬೆಳ್ಳ ಹೆಸರು ಬಂದಿದೆ. ಕಳ್ಳಂಬೆಳ್ಳ ಎಂಬ ಜಾತಿಯ ಗಿಡವಿದ್ದು

ಗಬ್ಬದ ಹಸು/ ಕುರಿ ಮರಿಹಾಕಿದ ನಂತರ ಸತ್ತೆ ಹಾಕದಿದ್ದಾಗ ಕಳ್ಳಂ ಎಲೆ ತಿನ್ನಿಸುವ ಪದ್ಧತಿ ಇಂದಿಗೂ ರೈತಾಪಿ ಬದುಕಿನಲ್ಲಿದೆ. ಕಲ್ಹಣನ ಊರಾಗಿದ್ದರಿಂದ ಕಲ್ಲಣ್ಣ ಕಲ್ಹಣನಾಗಿದೆ. ಈತ ರಾಜ ತರಂಗಿಣಿ ಎಂಬ ಕೃತಿಯನ್ನು ರಚಿಸಿದ್ದಾನೆ. ಈ ಹಿನ್ನೆಲೆಯನ್ನು ಕೆಂಕೆರೆ ಹನುಮಂತೇಗೌಡರು ನೀಡುತ್ತಾರೆ. ನೀರಿನ ಕೊಳ, ಕೆರೆ, ಬಾವಿಗಳಿಂದಾಗಿಯೇ ಚಿಕ್ಕ ಕೆರೆ ಭಾಗ ಚಿಕ್ಕಗೂಳವಾದರೆ ದೊಡ್ಡ ಊರು ಅಥವಾ ಕೆರೆಯುನ್ನು ಹೊಂದಿರುವುದರಿಂದಾಗಿಯೇ ದೊಡ್ಡಗೂಳವಾಗಿದೆ. ವಾಸ್ತವವಾಗಿ ಈ ಎರಡೂ ಗ್ರಾಮಗಳು ಕೆರೆಯ ಬದಿಗೆ ಹೊಂದಿಕೊಂಡಿರುವುದು ವಿಶೇಷವಾಗಿದೆ. ಕೊಟ್ಟ, ಕೊಟ್ಟಿ ಹೆಸರಿನ ಎರಡು ಹಳ್ಳಿಗಳಿವೆ. ಕೊಟ್ಟಿ ಕೊಟ್ಟಿಗೆ, ದನಕರುಗಳ ಗೂಡು ಎಂಬ ಅರ್ಥ ಒಂದಾದರೆ ಇನ್ನೊಂದು ಬಿದಿರು ಮುಳ್ಳಿನ ಪೊದೆ ಎಂಬ ಅರ್ಥವೂ ಇದೆ.

ಸಿರಾ>ಸಿರಿ> ಶ್ರೀ ಮೂಲದ ಪದ. ಸಿರಾ ಸೀಮೆಯ ಶಾಸನಗಳಲ್ಲಿ ದೇವಣ ಸೀರ್ಯಾ ಎಂದೂ ಕರೆದಿದ್ದಾರೆ. ವ್ಯಕ್ತಿ ಮೂಲದ ಹೆಸರಾಗಿದ್ದು ದೇವಣ್ಣ-ಸಿರಿಯಣ್ಣ ಎಂಬುವವರೇ ಸಿರಾದ ಮೂಲ ಪುರುಷರು. ಸ್ಥಳನಾಮಗಳು ಜನಪದರ ಜೀವ ವಿಧಾನದ ಪ್ರಮುಖ ಲಕ್ಷಣಗಳನ್ನು ಯಥಾವತ್ತಾಗಿ ಕಟ್ಟಿಕೊಡುತ್ತವೆ. ಸ್ಥಳಕ್ಕೊಂದು ಹೆಸರು ಕೊಡುವಾಗ ಸ್ಥಳೀಯ ಸಂಸ್ಕೃತಿಯನ್ನು ಮೂಲವಾಗಿರಿಸಿ ಕೊಳ್ಳುವುದು ಜನಪದರ ಪ್ರಮುಖ ಗುಣ. ಜನಪದರ ಭಾವ ಬುದ್ಧಿಯ ಚಮತ್ಕಾರಿಕೆಯನ್ನು ಸ್ಥಳನಾಮಗಳು ತೋರಿಸುತ್ತವೆ. ಇಲ್ಲಿ ಪುರಾಣ, ಇತಿಹಾಸ, ನಂಬಿಕೆ, ಸಂಪ್ರದಾಯಗಳ ಒಟ್ಟು ಮೊತ್ತವಾಗಿ, ಸ್ಥಳನಾಮಗಳು ಪ್ರಕಟವಾಗಿರುವುದಲ್ಲದೆ, ಊರಿಗೆ ಹುಗ್ಗಿ ಹುಯ್ದವರ ಅಂದರೆ ಮೂಲ ನಿವಾಸಿಗಳ ಸಾಂಸ್ಕೃತಿಕ ಇತಿಹಾಸದ ರೂಪವಾಗಿಯೂ ಸ್ಥಳನಾಮಗಳು ಕಾಣಿಸಿಕೊಳ್ಳುತ್ತವೆ.



*1. ಸಿರಾ ಸೀಮೆ ಇತಿಹಾಸ ಮತ್ತು ಸಂಸ್ಕೃತಿ : ಡಾ// ಚಿಕ್ಕಣ್ಣ ಯಣ್ಣೆಕಟ್ಟೆ*

*2. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು: ಡಾ// ಎಂ.ಎ. ಕಲಬುರ್ಗಿ*

*3. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಡಾ// ಎಂ. ಚಿದಾನಂದಮೂರ್ತಿ*

*4. ಹನುಮಂತೇಗೌಡ, ಕಡವಿಗೆರೆ ಗಂಗಣ್ಣ, ಮೂಡಲಗಿರಿಯಪ್ಪ, ಇಕ್ಕನೂರು ನಿಂಗಣ್ಣ ಇವರ ಮೌಖಿಕ ಹೇಳಿಕೆಗಳು*

# ಅಧ್ಯಾಯ – ನಾಲ್ಕು
# ಸಿರಾ ಸೀಮೆಯ ಸಾಂಸ್ಕೃತಿಕ ನಾಯಕರು

## ಅ) ಚಿತ್ರದೇವರು :

ಚಿತ್ರದೇವರು ಕಾಡುಗೊಲ್ಲರ ಆರಾಧ್ಯಮೂರ್ತಿ. ತಮ್ಮ ಅಪೂರ್ವ ಶೀಲಶೌಚಗಳಿಂದ ಈ ಜನಾಂಗದ ಮಾದರಿ ನಾಯಕರು. 'ಎತ್ತಪ್ಪ' ಕಾಡುಗೊಲ್ಲರ ಮೊದಲ ಸಾಂಸ್ಕೃತಿಕ ವೀರ. ಎರಡನೆಯವರು 'ಜುಂಜಪ್ಪ'. ಪಶುಪಾಲನೆಯಲ್ಲಿಯೇ ಅನನ್ಯತೆಯನ್ನು ಕಂಡುಕೊಂಡ ಈ ಇಬ್ಬರು ಸಾಂಸ್ಕೃತಿಕ ವೀರರೂ ಕೂಡ. ಚಿತ್ರದೇವರ ಭಕ್ತರು ಎಂಬುದು ಗಮನಾರ್ಹ. ಹಾವು, ಚೇಳಿನ ಒಡೆಯನಾಗಿ, ಜನಸಾಮಾನ್ಯರಿಗೂ ಪ್ರಿಯನಾದ ಜುಂಜಪ್ಪನನ್ನು ಕಾಡುಗೊಲ್ಲರು, ಕುರುಬರು, ಕುಂಚಿಟಿಗರು, ಬೇಡರು ಗೌರವಿಸುತ್ತಾರೆ. ಹರಳು ಪಡಿಹಾಕುವ ಮೂಲಕ ತಮ್ಮ ಕೃತಜ್ಞತೆ ತೋರಿಸುತ್ತಾರೆ. ಹಾಗಾಗಿಯೇ ಹೆಂಗಸರು, ಮಕ್ಕಳು ಎಲ್ಲರೂ ಜುಂಜಪ್ಪನ ಬಗೆಗೆ ಕತೆ ಹೇಳುವ, ಹಾಡು ಹೇಳುವ ಸಂಪ್ರದಾಯ ಚಿತ್ರದುರ್ಗ, ತುಮಕೂರು ಜಿಲ್ಲೆಯಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ. ಅಂತೆಯೇ ಚಿತ್ರದೇವರನ್ನು ಕುರಿತು ಹಾಡುವವರೂ ಸಾಕಷ್ಟಿದ್ದಾರೆ. ಆದರೆ ಎತ್ತಪ್ಪ-ಜುಂಜಪ್ಪನನ್ನು ಕುರಿತು ಹಾಡುವಂತೆ ಚಿತ್ರದೇವರನ್ನು ಕುರಿತು ಹಾಡುವವರು ತೀರಾ ವಿರಳ ಅಷ್ಟೇ ಅಲ್ಲದೆ ಜುಂಜಪ್ಪ-ಎತ್ತಪ್ಪರನ್ನು ಕುರಿತ ಕಾವ್ಯ ಸಂಗ್ರಹದ ಜೊತೆಗೆ ಪಿಎಚ್.ಡಿ ಸಂಶೋಧನೆಗಳೂ ನಡೆದಿವೆ. ಆದರೆ ಪುರಾಣ ಪುರುಷನಾದ ಚಿತ್ರದೇವರನ್ನು ಕುರಿತು ಕನಿಷ್ಠ ಸಂಗ್ರಹದ ಕೆಲಸವೂ ಆಗಿರಲಿಲ್ಲ. ಜುಂಜಪ್ಪನ ಕಾವ್ಯದೊಳಗೆ ಸಂಕರಗೊಂಡ ಚಿತ್ರದೇವರನ್ನು ಕುರಿತ ಪ್ರಸಂಗಗಳು ಬರುತ್ತವೆ. ಸಿರಾ, ಹಿರಿಯೂರು, ಪಾವಗಡ, ಚಳ್ಳಕೆರೆ ಹಾಗೂ ಹೊಸದುರ್ಗ ಭಾಗಗಳಲ್ಲಿ ಕರಡಿಗೊಲ್ಲರು, ಚಿತ್ರದೇವರ ನೆಲೆಗಳನ್ನು ಗುರುತಿಸಿಕೊಂಡು ಪವಿತ್ರ ಸ್ಥಳವನ್ನಾಗಿ ಮಾಡಿಕೊಂಡು, ದೀಪ ಏರಿಸುವ ಮೊದಲಾದ ಉತ್ಸವಗಳನ್ನು ಪ್ರತಿ ವರ್ಷವೂ ಮಾಡುತ್ತಾ ಬರುತ್ತಿದ್ದಾರೆ.



ಚಿತ್ರದೇವರ ಕಾವ್ಯವನ್ನು ಸಿರಾ ತಾಲ್ಲೂಕು 'ಲಕ್ಕವ್ವನಹಳ್ಳಿಯ ನಿಂಗಜ್ಜ' ಎಂಬುವವರು ಹಾಡುತ್ತಾರೆ. ಇತರೆಯವರು ಚಿತ್ರದೇವರನ್ನು ಕುರಿತು ಹಾಡುತ್ತಾರಾದರೂ ಜುಂಜಪ್ಪ, ಚಿತ್ರದೇವರು, ಕಾಟಂಲಿಂಗ ಇವರುಗಳನ್ನು ಕುರಿತ ವಿವರ ಜುಂಜಪ್ಪನ ಕಥೆಯಲ್ಲಿಯೇ ಬರುತ್ತದೆ. ಚಿತ್ರದೇವರನ್ನು ಕುರಿತು ಸಮಗ್ರವಾಗಿ ಹಾಗೂ ಪ್ರತ್ಯೇಕವಾಗಿ ಹಾಡುವವರು ಇತ್ತೀಚೆಗೆ ತೀರಾ ವಿರಳರಾಗುತ್ತಿದ್ದಾರೆ.

ಒಮ್ಮೆ ಶಿವಪಾರ್ವತಿಯರು ನಂದಿಯನ್ನು ಏರಿಕೊಂಡು ಆಕಾಶಮಾರ್ಗದಲ್ಲಿ ಭೂಸಂಚಾರ ಮಾಡುತ್ತಿರುತ್ತಾರೆ. ಅಲ್ಲಿ ಚಿತ್ರಗಿರಿ ಎಂಬ ಬೆಟ್ಟ, ಅದರ ಸುತ್ತ ಕಾಡು, ಅದರಲ್ಲಿ ಪ್ರಾಣಿ-ಪಕ್ಷಿಗಳ ಆವಾಸಸ್ಥಾನ, ಇಂಥ ಚಿತ್ರಗಿರಿಗೆ ಬೆಂಕಿಬಿದ್ದು ಧಗಧಗಿಸಿ ಉರಿಯಲಾರಂಭಿಸುತ್ತದೆ. ಅದರೊಳಗಿದ್ದ ಪ್ರಾಣಿಸಂಕುಲಗಳ ಅತೀವ ರೋಧನ ಪಾರ್ವತಿಯ ಕಿವಿಗೆ ಬೀಳುತ್ತದೆ. ಆಗ ಪಾರ್ವತಿ 'ಜೀವಜಂತುಗಳು ನಾಶವಾಗುತ್ತಿವೆ, ಸಹಾಯಕ್ಕಾಗಿ ಹಂಬಲಿಸುತ್ತಿವೆ. ರಥ ನಿಲ್ಲಿಸಿ ಪ್ರಾಣ ಉಳಿಸಿ' ಎಂದು ಶಿವನಲ್ಲಿ ಪ್ರಾರ್ಥಿಸುತ್ತಾಳೆ. ಆಗ ಶಿವನು

ನಡಿಯಾಲ ಪಾರ್ವತಿಯ ನಾವೂರಿಗೋಗಾನ
ಅಂದಾನು ಶಿವನು ಮಾತು ಮುರಿಯೋನಂತೋ
ಶಿವನೆಂಬ ಮಾತು ಕೇಳಿ ಪಾರ್ವತಿಯು ಹೇಳುತ್ತಾಳೆ
ಕೇಳಲೇ ಮಾಸ್ವಾಮಿ ನಾನೊಂದ ಹೇಳುತ್ತೀನಿ
    ಸುರಲೋಕ ನರಲೋಕ ದೇವಲೋಕ ಮೂರು
    ಲೋಕದೊಳಗೆ ನಮ್ಮನ್ನು ಕಣ್ಣಿಂದ ನೋಡಿದರೆ
    ಕಿವಿಯಾರ ಕೇಳಿದರೆ ಮುಂದಕ್ಕೆ ಹೋಗಾರು
    ಅಂತಂದು ಕ್ಷಮಿಸೋದಿಲ್ಲ ನಮ್ಮನ್ನು ಸ್ವಾಮಿ
    ದೇವರು ಅಂಬೋದಿಲ್ಲ ನಮ್ಮನ್ನು ಅಂಬೋಳಂತೋ ।[1]

ಪಾರ್ವತಿಯ ಅತೀವ ಒತ್ತಡ, ಜೀವಪ್ರೀತಿಗಳಿಂದ ಶಿವ ರಥವನ್ನು ನಿಲ್ಲಿಸುತ್ತಾನೆ. ಹತ್ತಿ ಉರಿಯುತ್ತಿರುವ ಬೆಂಕಿಯನ್ನು ನಂದಿಸಲು ಶಿವನೇ ಯೋಚಿಸಿ ಗಳಗಳನೆ ಬೆವರುತ್ತಾನೆ. ಶಿವನು ಬೆವತಾಗ ಆತನು ಧರಿಸಿದ್ದ ಅಂಗಿ ಒದ್ದೆಯಾಗುತ್ತದೆ. ಆಗ ಪಾರ್ವತಿಯು ಆ ಒದ್ದೆಬಟ್ಟೆಯನ್ನು ತೆಗೆದು ಉರಿಯುತ್ತಿದ್ದ ಬೆಟ್ಟಕ್ಕೆ ಹಿಂಡುತ್ತಾಳೆ, ಬೆಂಕಿ ಆರಿಹೋಗುತ್ತದೆ. ಆದರೆ ಆ ಬೆಂಕಿಯು ಆರಿದ ಮೇಲೆ ಶಿವನ ಬೆವರಿನಲ್ಲಿ ಮೂವರು ಮಕ್ಕಳು ಹುಟ್ಟುತ್ತಾರೆ. ಆ ಮಕ್ಕಳಿಗೆ ಕಾಟಯ್ಯ, ಚಿತ್ತಯ್ಯ ಹಾಗೂ ಓಬಳನರಸಿಂಹ ಎಂಬ ಹೆಸರುಗಳನ್ನು ಶಿವನು ನೀಡುವುದರ ಜೊತೆಗೆ, ಚಿತ್ರಗಿರಿ ಎಂಬ ಪಟ್ಟಣವನ್ನು ಸೃಷ್ಟಿಸಿ ಕಾಟಯ್ಯನಿಗೆ ಚಿಂತಾಮಣಿ

ಎಂಬ ಪುಸ್ತಕವನ್ನು ಚಿನ್ನದ ಗೊಡಗನ್ನು, ಚಿತ್ತಯ್ಯನಿಗೆ ಚಿನ್ನದ ಬೆತ್ತವನ್ನು ಕೊಟ್ಟು ಕೈಲಾಸಕ್ಕೆ ಹೋಗುತ್ತಾನೆ. ಹಿರಿಕನಾದ ಕಾಟಯ್ಯ ಆಧ್ಯಾತ್ಮಿಕದತ್ತ ಒಲವು ತೋರಿ ತನ್ನ ತಮ್ಮನಾದ ಚಿತ್ತಯ್ಯನನ್ನು ಚಿತ್ರಗಿರಿ ರಾಜ್ಯಕ್ಕೆ ರಾಜನನ್ನಾಗಿ ಮಾಡುತ್ತಾನೆ.

ಚಿತ್ತಯ್ಯ ಹಲವು ವರ್ಷ ಅಧಿಕಾರ ಮಾಡುತ್ತಾನೆ. ಒಮ್ಮೆ ಬೇಟೆಗೆಂದು ಕಾಡಿಗೆ ಹೋಗಿದ್ದಾಗ ಗಂಗೆಮಾಳಿ ಎಂಬ ಬ್ರಾಹ್ಮಣರ ಹುಡುಗಿಯನ್ನು ಕಂಡು ಮೋಹಗೊಳ್ಳುತ್ತಾನೆ. ಆಕೆಯೂ ಈತನನ್ನು ಪ್ರೀತಿಸುತ್ತಾಳೆ. ಜೊತೆಗೆ ಬಹಳ ದಿನಗಳ ಕಾಲ ಇವರಿಬ್ಬರೂ ಕಾಡು ಪ್ರದೇಶಗಳಲ್ಲಿಯೇ ಕಾಲ ಕಳೆಯುತ್ತಾರೆ. ರಾಜ್ಯದ ಕಡೆ ಗಮನಹರಿಸದ ತಮ್ಮನ ವರ್ತನೆಯಿಂದ ಕಾಟಯ್ಯ ಗಾಬರಿಯಾಗುತ್ತಾನೆ. ಚಿಂತಾಮಣಿ ಎಂಬ ಪುಸ್ತಕ ತೆಗೆದು ನೋಡಿದಾಗ ಚಿತ್ತಯ್ಯ ಗಂಗೆಮಾಳಿಯರ ಮಧುರ ಸಂಬಂಧದ ಅರಿವಾಗಿ ಬ್ರಾಹ್ಮಣರ ಸಹವಾಸ ಒಳಿತಲ್ಲ ಎಂದು ಚಿಂತಿಸಿ ತಮ್ಮನನ್ನು ಬೇರ್ಪಡಿಸಿ ಹಲವು ಪ್ರಯತ್ನ ಮಾಡುತ್ತಾನೆ. ಆದರೆ ಕಾಟಯ್ಯನ ಯೋಜನೆ ಒಂದಿಷ್ಟೂ ಕೆಲಸ ಮಾಡುವುದಿಲ್ಲ. ಕೊನೆಗೆ ಬ್ರಾಹ್ಮಣರ ಬೊಮ್ಮಯ್ಯನೊಂದಿಗೆ ಸಂಪರ್ಕ ಬೆಳೆಸಿ ನಿಮ್ಮ ಮಗಳನ್ನು ತಮ್ಮ ಚಿತ್ತಯ್ಯನಿಗೆ ಕೊಟ್ಟು ಮದುವೆ ಮಾಡಬೇಕೆಂದು ಹೇಳುತ್ತಾನೆ. ಮೊದಲು ಕಾಡುಗೊಲ್ಲರಿಗೆ ಮಗಳನ್ನು ಕೊಡಲು ಉತ್ಸುಕತೆ ತೋರದ ಬೊಮ್ಮಯ್ಯ ತನ್ನ ಮಗಳ ಮನಸ್ಸನ್ನು ಒಡೆಯಲು ಇಷ್ಟಪಡದೆ ಮದುವೆಗೆ ಒಪ್ಪುತ್ತಾನೆ. ಗಂಗೆಮಾಳಮ್ಮ ಚಿತ್ತಯ್ಯರ ಮದುವೆ ಕಾಡುಗೊಲ್ಲರ ಸಂಪ್ರದಾಯದಂತೆಯೇ ನಡೆಯುತ್ತದೆ. ಈ ಮದುವೆಗೆ ಸಂಬಂಧಿಸಿದ ಶಾಸ್ತ್ರ ಸಂಪ್ರದಾಯ ಆಚರಣೆಗೆ ಸಂಬಂಧಿಸಿದ ಮಾತುಗಳು ಕಾವ್ಯದುದ್ದಕ್ಕೂ ಕಂಡುಬರುತ್ತವೆ. ಜೊತೆಗೆ ಮೊದಲು ಪರಸ್ಪರ ಪ್ರೀತಿಜೀವಗಳಾಗಿದ್ದ ಗಂಗೆಮಾಳಿ ಚಿತ್ತಯ್ಯರ ದಾಂಪತ್ಯ ಬದುಕು ಅಷ್ಟೇನೂ ಪರಿಣಾಮಕಾರಿಯಾಗಿ ನಡೆಯುವುದಿಲ್ಲ. ಗಂಗೆಮಾಳಿಯನ್ನು ತವರಲ್ಲಿ ಬಿಡುವುದು ಚಿತ್ತಯ್ಯ-ಗಂಗೆಮಾಳಿಯ ವಿರಸ ಮೊದಲಾದ ವಿವರಣೆ ಕಾವ್ಯದಲ್ಲಿ ಪ್ರಕಟವಾಗುತ್ತದೆ.

ಚಿತ್ರಗಿರಿ ಪಟ್ಟಣದ ಸಮೀಪದ ಕಲಪಲ್ಲಿ ರಾಜ್ಯ, ಅಲ್ಲಿ ಕರಿಮಲೆ ಕಾಡು, ಆ ಭಾಗದಲ್ಲಿ ಕಾಡುಪ್ರಾಣಿಗಳ ಹೆಚ್ಚಳ, ಉಪಟಳ ಅಧಿಕವಾಗುತ್ತದೆ. ಈ ಕಾಡುಪ್ರಾಣಿಗಳನ್ನು ಅಡಗಿಸಲು ಚಿತ್ತಯ್ಯ, ಕಾಟಯ್ಯ ಬೇಟೆಯಾಡುವುದಕ್ಕೆ ಹೊರಡಬೇಕೆಂದು ಹಾರುವರ ಬೊಮ್ಮಯ್ಯ ಒತ್ತಡ ತರುತ್ತಾನೆ. ಇವರಿಗೆ ತೊಂದರೆ ಕೊಡಬೇಕೆಂಬುದು ಬೊಮ್ಮಯ್ಯನ ಉದ್ದೇಶ, ಜೊತೆಗೆ ಬೇಟೆಗೆ ಬೇಕಾಗುವ ಸಲಕರಣೆಯಿಂದಲೂ ಅವಮಾನಿಸಬೇಕೆಂಬ ಭ್ರಮೆ. ಅಂತೂ ನಾಲ್ಕುಸಾವಿರ ನಾಯಿಗಳ ದಂಡನ್ನು ಒದಗಿಸಿಕೊಂಡು ಬೇಟೆಗೆ ಸಿದ್ಧರಾದರು. ಆದರೆ ಬೊಮ್ಮಯ್ಯ ಬೇಟೆಗೆ ತಕ್ಕಂತಹ ಬಿರುದು ಬೇಕೆಂದು ಪಟ್ಟುಹಿಡಿಯುತ್ತಾನೆ. ಅದು ಬೇಡವೆಂದು ಕಾಟಯ್ಯ ಹೇಳಿದರೆ ಬೇಕೆಂದು ಚಿತ್ತಯ್ಯ ಹಟಮಾಡುತ್ತಾನೆ. ಕೊನೆಗೆ ಚಿತ್ರಗಿರಿ ಪಟ್ಟಣದ

ನೆಲಮಾಳಿಗೆಯಲ್ಲಿದ್ದ ನವರತ್ನಗಳಿಂದ ಕೂಡಿದ ಮುತ್ತಿನ ಛತ್ರಿಯಾದ ಗೊಡಬನ್ನು ಹೊಲೆಯರ ಕಮ್ಮೇಶಿಯೇ ಎಂಬುವವನಿಂದ ತೆಗೆಸುವಲ್ಲಿ ಹತ್ತಾರು ಪಾಡು ಪಡಬೇಕಾಗುತ್ತದೆ. ಗೊಡಬನ್ನು ಹೊಲೆಯರ ಕಮ್ಮೇಶಿಯೇ ತೆಗೆಯಬೇಕೆಂಬ ನಿಯಮ ಒಂದು ಕಡೆಯಾದರೆ ಚಿತ್ತಯ್ಯ ಈತನನ್ನು ಬಹಳ ದಿನಗಳಿಂದಲೂ ದೂರ ಇಡುವುದರೊಂದಿಗೆ ಈತನಿಗೆ ಕೊಡಬೇಕಾದ ಆಯುಧ, ದವಸವನ್ನು ಕೊಡದೆ ಅವಮಾನಪಡಿಸಿರುತ್ತಾನೆ. ಈಗ ಕಮ್ಮೇಶಿ ಇದನ್ನು ಅಸ್ತ್ರವಾಗಿ ಬಳಸಿಕೊಂಡು ಗೊಡಬು ತೆಗೆಯಲು ಆಹ್ವಾನಿಸಲು ಬಂದ ಚಿತ್ತಯ್ಯನಿಗೆ ಹುಣಸೆಯ ಬರಲಿಂದ ಹೊಡೆಯುವುದರ ಜೊತೆಗೆ ಜನರ ಮುಂದೆ ಕ್ರೂರ ಮಾತುಗಳಿಂದ ಅವಮಾನ ಮಾಡುತ್ತಾನೆ. ಸಂಯಮ ಚಿತ್ತದ ಚಿತ್ತಯ್ಯ ತಾಳ್ಮೆಯಿಂದ ಕಮ್ಮೇಶಿಯು ನೀಡಿದ ಶಿಕ್ಷೆಯನ್ನು ಸ್ವೀಕರಿಸಿ ಗೊಡಬು ಈಚೆಗೆ ತೆಗೆಯುವುದರಲ್ಲಿ ಕಾರ್ಯಶೀಲನಾಗಿ  ಯಶಸ್ವಿಯಾಗುತ್ತಾನೆ.

ಮುತ್ತಿನ ಗೊಡಬನ್ನು ನೆಲಮಾಳಿಗೆಯಿಂದ ತೆಗೆಯುವಾಗ ಮಾಡುವಾಗ ಶಾಂತಿಯ ಸಂಪ್ರದಾಯ ಆಕರ್ಷಕವಾಗಿ ಬರುತ್ತದೆ. ಮುನ್ನೂರು ಮಣ್ಣುವಡ್ಡರನ್ನು ಕರೆಸಿ ಮುನ್ನೂರು ತಟ್ಟೆ, ಸಲಿಕೆ ತರಿಸಿದರು. ಗೊಡಬು ಇದ್ದ ಜಾಗದಲ್ಲಿ ಮುನ್ನೂರು ಗಬ್ಬದ ಕುರಿಯನ್ನು ಬಲಿಕೊಡಲಾಯಿತು. ಹನ್ನೆರಡು ದಿಕ್ಕಿಗೂ ಹನ್ನೆರಡು ಮೇಕೆಯನ್ನು ಗಾವು ಸಿಗಿಯಲಾಯಿತು. ಹನ್ನೆರಡು ಖಂಡುಗ ಅಕ್ಕಿಯ ಅನ್ನ ಮಾಡಿಸಿ, ಊಟ ಬಡಿಸಿ, ಶಾಂತಿ ಮಾಡಿಸಿದ ನಂತರ ಹೊಲೆಯರ ಕಮ್ಮೇಶಿ ಗೊಡಬನ್ನು ಆಚೆ ತೆಗೆಯಬೇಕಾಯಿತು. ನಂತರ ಬಿರುದಿಗೆ ತಕ್ಕನಾದ ಕಂಚಿನ ಹೆಗ್ಗಾಳೆ ಎತ್ತಿ ಹಿಡಿಯಬೇಕೆಂದು ಬೊಮ್ಮಯ್ಯ ಮತ್ತೊಂದು ಷರತ್ತು ಹಾಕಿದನು. ಅದನ್ನು ಶಿವನು ಕಾಟಯ್ಯನಿಗೆ ನೀಡಿದ್ದು, ಅದನ್ನು ನೆಲಮಾಳಿಗೆಯಲ್ಲಿ ಹೂಳಿಡಲಾಗಿತ್ತು. ಮತ್ತೆ ಅದನ್ನು ಶಾಸ್ತ್ರೋಕ್ತವಾಗಿಯೇ ತೆಗೆಯಬೇಕಾಯಿತು. ನೆಲಮಾಳಿಗೆಯ ಉತ್ತರ ಭಾಗದಲ್ಲಿದ್ದ ಹೆಗ್ಗಳೆಯನ್ನು ತೆರೆಯಲು ಐವತ್ತು ಜನ ಅಗೆಯುವವರು, ಅಷ್ಟೇ ಸಂಖ್ಯೆಯ ಮಣ್ಣು ತೆಗೆಯುವವರು ಬೇಕಾಗಿ ಅದಕ್ಕೂ ಶಾಂತಿಯೂಟವಾಯಿತು. ನಂತರ ಕಮ್ಮೇಶಿ ಹೆಗ್ಗಳೆಯನ್ನು ಎತ್ತಿ ತೆಗೆದನು. ಹೀಗೆ ಬೊಮ್ಮಯ್ಯ ಒಡ್ಡಿದ ಒಂದೊಂದು ಷರತ್ತು ಪೂರೈಸಿ ಬೇಟೆಗೆ ಸಿದ್ಧರಾದರು. ಚಿತ್ತಯ್ಯ ಕಂದುಬಣ್ಣದ ಕುದುರೆಯನ್ನು ಕಾಟಯ್ಯ ಬಿಳಿ ಬಣ್ಣದ ಆನೆಯನ್ನು, ನರಸಿಂಹ ನೀಲಿ ಕುದುರೆಯನ್ನು ಏರಿ ಮುತ್ತಿನ ಗೊಡಬು ಹಾಗೂ ಹೆಗ್ಗಳೆಯನ್ನು ಹಿಡಿದು ಕರಿಮಲೆಯ ಕಾಡಿಗೆ ಬೇಟೆಗೆ ಹೊರಡುತ್ತಾರೆ. ಆದರೆ ತವರುಮನೆಯಲ್ಲಿಯೇ ಇದ್ದ ಗಂಗೆಮಾಳಿ ತನ್ನ ತಂದೆಯ ಕಕ್ಕುಲಾತಿ ಕೆಲಸವನ್ನು ಏರಿತಿದ್ದು ಗಂಡ ಚಿತ್ತಯ್ಯ ಬೇಟೆಗೆ ಕಾಡಿಗೆ ಹೋಗಬಾರದೆಂದು ಓಡೋಡಿ ಬಂದು ತಡೆಯುತ್ತಾಳೆ. ಆದರೆ ಆಕೆಯ ಮಾತನ್ನು ಚಿತ್ತಯ್ಯ ತಳ್ಳಿಹಾಕುತ್ತಾನೆ. ಜೊತೆಗೆ ಆಕೆಯನ್ನು ಏಟು ಕೊಡುವ ಮೂಲಕ ಸುಮ್ಮನಾಗಿಸುವ ಕೆಲಸ ಮಾಡಬೇಕಾಗುತ್ತದೆ.

ಗಂಡನ ಅಗಲಿಕೆ, ಒಂಟಿತನ, ಅವಮಾನ ಈ ಮೂರು ಕಾರಣಗಳಿಂದ ಬೆಂದು ತೀವ್ರ ದುಃಖಕ್ಕೆ ಒಳಗಾದ ಗಂಗೆಮಾಳಿಯನ್ನು ಚಿತ್ತಯ್ಯ ಆಕೆಯ ಪ್ರಾರ್ಥನೆಯ ಮೇರೆಗೆ 'ಮೂಳ' ಎಂಬ ಒಂದು ನಾಯಿಯನ್ನು 'ಗಿಡುಗ' ಎಂಬ ಒಂದು ಪಕ್ಷಿಯನ್ನು ಕೊಟ್ಟು ಅವುಗಳನ್ನು ಪಾಲಿಸಿಕೊಂಡು ಒಂಟಿತನ ನೀಗಿಸಿಕೊಳ್ಳುವಂತೆ ಹೇಳಿ ಬೇಟೆಗೆ ಹೊರಡುತ್ತಾನೆ. ಆದರೂ ಗಂಗೆಮಾಳಿ ಬೇಟೆಗೆ ಹೊರಟ ದಂಡಿಗೆ ಊಟ, ಕುದುರೆಗಳಿಗೆ ಹುರುಳಿ, ಹುಲ್ಲು ಸಿದ್ಧಪಡಿಸುತ್ತಾಳೆ. ಜೊತೆಗೆ ಬೇಟೆಗೆ ಹೊರಟ ದಂಡಿಗೆ ಊಟ, ಕುದುರೆಗಳಿಗೆ ಹುರುಳಿ, ಹುಲ್ಲು ಸಿದ್ಧಪಡಿಸುತ್ತಾಳೆ. ಜೊತೆಗೆ ಬೇಟೆಯ ಕಾಲದಲ್ಲಿ ಆಹಾರಕ್ಕಾಗಿ ಒಂದು ಹಿಡಿ ಅಕ್ಕಿ, ಒಂದು ಹಿಡಿ ಬೇಳೆಕಾಳು, ಒಂದು ಚಿನ್ನದ ಚೆಂಬಿನಲ್ಲಿ ನೀರು ಈ ವಸ್ತುಗಳನ್ನು ನೀಡಿ ಇಷ್ಟೂ ದಂಡಿಗೆ ಊಟದ ಸಾಮಗ್ರಿ ಎಂದು ತಿಳಿಸಿ ಕಳುಹಿಸಿಕೊಡುತ್ತಾಳೆ. ಜೊತೆಗೆ ಕುದುರೆಗೆ ಮೇವಿಗಾಗಿ ಹಾಲುಬಳ್ಳಿ ಮೂರು ಕರುಕೆಬಳ್ಳಿಯನ್ನು ನೀಡುತ್ತಾಳೆ.

ಚಿತ್ತಯ್ಯನ ದಂಡು ಬೇಟೆಗಾಗಿ ಕರಿಮಲೆಗೆ ಹೊರಡುತ್ತದೆ. ಇದೊಂದು ಭಯಾನಕ ಕಾಡು ನರಮನುಷ್ಯರ ಸುಳಿವಿಲ್ಲ. ಕಾಡುಪ್ರಾಣಿಗಳ ಆವಾಸಸ್ಥಾನ. ಇಂತಹ ಕ್ರೂರ ಜಾಗವನ್ನು ಕಂಡ ಹಾರುವರ ಬೊಮ್ಮಯ್ಯ ಇದೇ ಜಾಗದಲ್ಲಿ ಬೀಡು ಬಿಡಬೇಕೆಂದು ಹಟ ಮಾಡಿದನು. ಇದೊಂದು ವಿಚಿತ್ರವಾದರೂ ಬೇಟೆಯ ಕಾರ್ಯ ಎಂದು ಚಿತ್ತಯ್ಯ ಅಲ್ಲಿಯೇ ಬಿಡಾರ ಬಿಡಲು ನಿಶ್ಚಯಿಸಿ ನಾಲ್ಕು ಗುಡಾರ ಹಾಕಿಸಿದನು.

ಮೂಡಲ ದಿಕ್ಕಿಗೆ ನರಸಿಂಹನ ಡೇರೇವು
ಪಡುವಲ ದಿಕ್ಕಿಗೆ ಚಿತ್ತಯ್ಯನ ಡೇರೇವು
ಬಡಗಾಲ ದಿಕ್ಕಿಗೆ ಬೊಮ್ಮಯ್ಯನ ಡೇರೇವು
ಟೆಂಕಾಲ ದಿಕ್ಕಿಗೆ ಕರಪಲ್ಯರ ಡೇರೇವು
ನಟ್ಟ ನಡುವಗಲ ಬಟ್ಟಂಬೈಲಾಗ
ದೊಡ್ಡಾನೆ ಭೂತಾಳಿ ಗಜನಿಂಬೆ ಮರದಡಿಗೆ
ಜಪದ ಮುನಿ ಕಾಟಯ್ಯನ ಡೇರೇವು ಹೊಡಿಸೇನಂತೋ[2]

ಹೀಗೆ ಒಂದೊಂದು ದಿಕ್ಕಿನಲ್ಲೂ ಒಂದೊಂದು ಡೇರೇವು ಸಿದ್ಧವಾಯಿತು. ಈ ವಿವಿಧ ಡೇರೆಗಳ ಮಧ್ಯೆ ಮುತ್ತಿನ ಗೊಡಬನ್ನು ಇಟ್ಟು ಜೋಪಾನ ಮಾಡಲಾಯಿತು. ರಾತ್ರಿಯ ಊಟಕ್ಕೆ ಗಂಗೆಮಾಳಮ್ಮ ಕೊಟ್ಟಿದ್ದ ಒಂದು ಹಿಡಿ ಅಕ್ಕಿ, ಒಂದು ಹಿಡಿ ಬೇಳೆಯಿಂದ ಮಾಡಿದ ಅನ್ನ, ಸಾರು ದಂಡಿನ ನಾಲ್ಕುಸಾವಿರ ಸೇನೆ ಹಾಗೂ ನಾಲ್ಕು ಸಾವಿರ ನಾಯಿಗಳಿಗೆ ಮೂರುತಿಂಗಳು ಸಾಕಾಗುವಷ್ಟು ಅಡಿಗೆ ಸಿದ್ಧವಾಯಿತು. ಅಂತೆಯೇ ಆಕೆ ಕೊಟ್ಟ ಮೂರು ಮೂರು ಬಳ್ಳಿ ಕರಿಕೆ ಹಾಲುಬಳ್ಳಿಗಳು, ದಂಡಿನ ಕುದುರೆಗಳಿಗೆ ಮೂರು ತಿಂಗಳು

ಸಾಕಾಗುವಷ್ಟು ಆಹಾರವಾಯಿತು.

ಕತ್ತಲು ಕರಿಮಲೆಯಲ್ಲಿ ಬೀಡು ಬಿಟ್ಟು ಕಾಡುಪ್ರಾಣಿಗಳ ಬೇಟೆಯಲ್ಲಿ ತೊಡಗಿದ್ದರು. ಇಲ್ಲಿಗೆ ಸಮೀಪದಲ್ಲಿಯೇ ತಿರುಗಣಿ ಎಂಬ ಪಟ್ಟಣವಿತ್ತು. ಅದನ್ನು ತಿರುಣಿರಾಜ ಪರಿಪಾಲಿಸುತ್ತಿದ್ದನು. ಆದರೆ ಅವರಲ್ಲಿ ತಿರುಗಣಿ ಕೊರಮರು ಕಳ್ಳರಾಗಿದ್ದು, ಕಳ್ಳತನಕ್ಕೆ ಹೆಸರುವಾಸಿಯಾಗಿದ್ದರು. ಇವರ ಕಣ್ಣಿಗೆ ಚಿತ್ತಯ್ಯನ ಮುತ್ತಿನ ಗೊಡಬು ತನ್ನ ಅಪ್ರತಿಮ ಪ್ರಕಾಶನ ಸ್ವಯಂ ಬೆಳಕು ನೀಡುವ ಕ್ರಿಯೆಯಿಂದ ಕಣ್ಣಿಗೆ ಬಿದ್ದಿತು. ಅಂಥ ವಸ್ತು ನಮ್ಮ ರಾಜ್ಯದ ರಾಜನ ಬಳಿಯೂ ಇಲ್ಲ. ಹೇಗಾದರೂ ಮಾಡಿ ಅಪಹರಿಸಬೇಕೆಂದು ಮನಸ್ಸು ಮಾಡಿದರು. ಇದೊಂದು ಅಸಾಮಾನ್ಯ ಕೆಲಸವಾದುದರಿಂದ ಈ ಸಂಗತಿಯನ್ನು ತಿರುಣಿರಾಜನಿಗೂ ತಿಳಿಸಿದರು. ಆದರೆ ಚಿತ್ರಯ್ಯನ ಪರಾಕ್ರಮ ಕಾಟಯ್ಯನ ಕಾಲಜ್ಞಾನದ ಮಹಿಮೆಯನ್ನು ಬಲ್ಲವರಾಗಿದ್ದ ರಾಜ ಕಳ್ಳಕೊರಮರ ಬಯಕೆಯನ್ನು ನಿರಾಕರಿಸುತ್ತಾನೆ. ಆದರೆ ಕಳ್ಳಕೊರಮರು ಹಟ ಬಿಡದೆ ಮುತ್ತಿನ ಗೊಡಗನ್ನು ಕದಿಯಲು ಒಪ್ಪಿಗೆ ಪಡೆಯುವಲ್ಲಿ ಯಶಸ್ವಿಯಾಗುತ್ತಾರೆ.

ಕಾಟಯ್ಯ, ಚಿತ್ತಯ್ಯ, ನರಸಿಂಹರು ಸತತವಾಗಿ ಮೂರು ತಿಂಗಳ ಕಾಲ ಬೇಟ ಮಾಡಿ ಪ್ರಾಣಿಗಳನ್ನು ಕೊಂದು ರೈತರಿಗೆ ಒದಗಿದ್ದ ತೊಂದರೆಯನ್ನು ನಿವಾರಿಸುತ್ತಾರೆ. ಕೊನೆಯ ದಿನ ಅತ್ಯಂತ ಖುಷಿಯಿಂದ ಊಟ ಮಾಡಿ ಮಲಗುತ್ತಾರೆ. ಜೊತೆಗೆ ಇದು ಈ ಬಿಡಾರದಲ್ಲಿನ ಕೊನೆಯ ವಸತಿ. ಮೂರು ತಿಂಗಳುಗಳ ನಿರಂತರ ಹೋರಾಟ, ಆಯಾಸ, ದಣಿವುಗಳ ಅಂತ್ಯದ ದಿನ ಗಾಢ ನಿದ್ರೆಯಲ್ಲಿ ಮಲಗಿದ್ದರು. ಈ ಒಂದು ಸಂದರ್ಭವನ್ನು ಕಳ್ಳಕೊರಮರು ಯಶಸ್ವಿಯಾಗಿ ಬಳಸಿಕೊಂಡರು.

> ಚಿನ್ನದಂಥ ಮಳೆಯಾಗಿ ರನ್ನದಂಥ ಹೊಳೆಯಾಗಿ
> ಬಂದವರು ಕಳ್ಳಕೊರಮರು ಕರಿಮಲೆಯ ಕಾಡಿಗೆ
> ಹವಳದ ಗೊಡಗು ಅದರಗವರು ತೆಗೆದಾರಂತೋ
> ದಿಟ್ಟಿಸಿ ನಿಟ್ಟುಸಿರು ಮೂರು ಮುಕ್ಕಾಲುಗಳಿಗೆ
> ಒಳಗಾಗಿ ದಿಲ್ಲಿ ಪಟ್ಟಣದಿಂದ ಕೆಂಗರು ಮಲೆಗೆ
> ಹೋಗೋರಂತೋ[3]

ಹೀಗೆ ಕಳ್ಳಕೊರಮರು ಕತ್ತಲೆಯ ಸರಿರಾತ್ರಿಯಲ್ಲಿ ಚಿತ್ತಯ್ಯನ ಬಿಡಾರದ ಬಳಿಗೆ ಬಂದರು. ನೇರವಾಗಿ ಬರಲು ಧೈರ್ಯ ಸಾಲದೆ ಸೊಪ್ಪು ಮುತ್ತುಗದ ಎಲೆ, ತಂಗಟಿ ಸೊಪ್ಪು ಸುತ್ತಿಕೊಂಡು ಇರುಳಿಕೊಂಡು ಡೇರೆಯ ಸಮೀಪಕ್ಕೆ ಬಂದರು. ಡೇರೆಯಿಂದ ಹನ್ನೆರಡು

ಮೈಲಿ ದೂರದಲ್ಲಿ ಕುಳಿತು ಒಂದು ಬಲವಾದ ಉಡವನ್ನು ತಂದು ಅದಕ್ಕೆ ನೂಲ ಹಗ್ಗವನ್ನು ಬಿಗಿದು ಬಿಡಾರದ ಸಮೀಪ ಹಾಕಿದರು. ಆ ಉಡ ಬೆಳಕು ನೀಡುತ್ತಿದ್ದ ಮುತ್ತಿನ ಗೊಡಗು ಇದ್ದ ಬಳಿಗೆ ಬಂದು, ಅದನ್ನು ಬಲವಾಗಿ ಹಿಡಿದುಕೊಂಡಿತು. ಆಗ ಕಳ್ಳಕೊರಮರು ನೂಲ ಹಗ್ಗದ ಇನ್ನೊಂದು ತುದಿಯಿಂದ ಬಲವಾಗಿ ಎಳೆದರು. ಆದರೆ ಮುತ್ತಿನ ಗೊಡಬು ಚಿತ್ತಯ್ಯ ಕಾಟಯ್ಯರನ್ನು ಬಿಟ್ಟು ಹೋಗಲು ಸುತರಾಂ ಇಷ್ಟಪಡಲಿಲ್ಲ. ಸಾಕಷ್ಟು ತೊಂದರೆ ಕೊಟ್ಟಿತು, ಅಳಲಾರಂಭಿಸಿತು. ಅತ್ತ ಕಣ್ಣೀರು ಹರಿದು ಚಿತ್ತಯ್ಯನ ಬಳಿಗೆ ಹರಿದು ಬಂದರೂ, ಗಾಢನಿದ್ರೆಯಲ್ಲಿದ್ದ ಚಿತ್ತಯ್ಯ ಎಚ್ಚರಗೊಳ್ಳಲಿಲ್ಲ. ಕೊನೆಗೆ ಕಳ್ಳಕೊರಮರ ಬಲವಾದ ಎಳೆತದಿಂದ ಗೊಡಗು ನಿಧಾನವಾಗಿ ಕೊರಮರ ವಶವಾಯಿತು. ನಂತರ ಅದನ್ನು ಸಾಗಿಸಿಕೊಂಡು ತಿರುಣಿ ಪಟ್ಟಣದ ಅರಮನೆಯಲ್ಲಿ ನೆಲಮಾಳಿಗೆ ಮಾಡಿ ಅದರಲ್ಲಿ ಗೊಡಗನ್ನು ಇಟ್ಟರು.

ಬೆಳಗಾದ ಕೂಡಲೇ ಎಲ್ಲರೂ ಎಚ್ಚೆತ್ತರು. ಚಿತ್ತಯ್ಯ ಮೊದಲು ಗೊಡಬನ್ನು ಹುಡುಕಿದನು. ಗೊಡಬು ಕಾಣೆಯಾಗಿರುವುದರಿಂದ ಆತಂಕಪಟ್ಟನು.ಗೊಡಬು ಕೈತಪ್ಪಿ ಹೋಗಿರುವುದು ತಿಳಿದು ಆತನಿಗೆ ಪ್ರಾಣವೇ ಹೋದಷ್ಟು ಸಂಕಟವಾಗುತ್ತದೆ.

ರಾಮ ರಾಮ ಗುರುವೇ ಕಿಡಿಗಣ್ಣನು ಚಿತ್ತಯ್ಯ
ಧರಣಿ ಮಂಡಲದುದ್ದಕ್ಕೂ ಬಿದ್ದಾನಂತೋ
ಬಂಗಾರದ ಗೊಡಬು ಚಂದವಿಲ್ಲ ಮುಂದೆ
ಜಂಗಮಯ್ಯ ಜ್ಞಾಪದ ಮುಂದೆ ಬಂಗಾರದ ಗೊಡಬು
ಕರಿಮಲೆಗೆ ಇಲ್ಲಾವಂತೋ[4]

ಚಿತ್ತಯ್ಯನು ರೋಧನ, ಸಂಕಟದಿಂದ ಬಳಲುವುದರ ಜೊತೆಗೆ ಗೊಡಬಿನ ತಪಾಸಣೆಗಾಗಿ ಬೆತ್ತಲು ಕುದುರೆಯನ್ನು ಹತ್ತಿ ಆಕಾಶದ ಮಾರ್ಗವಾಗಿ ಹೊರಟನು. ಆಗ ಕಾಟಯ್ಯನು ಚಿತ್ತಯ್ಯನನ್ನು ಸಮಾಧಾನಗೊಳಿಸಿ ತನ್ನಲ್ಲಿದ್ದ ಚಿಂತಾಮಣಿ ಕಾಲಜ್ಞಾನದಿಂದ ಗೊಡಗು ತಿರುಮಣಿ ರಾಜ್ಯದ ನೆಲಮಾಳಿಗೆಯಲ್ಲಿರುವುದಾಗಿ ತಿಳಿಸಿದನು. ಅದನ್ನು ಕಳ್ಳಕೊರಮರು ಅಪಹರಿಸಿರುವ ಸಂಗತಿಯೂ ಹೊತ್ತಿಗೆಯಿಂದ ಅರಿವಾಯಿತು. ಈಗ ಆ 'ಗೊಡಬ'ನ್ನು ತರುವುದರ ಕಡೆ ಕೆಲಸ ಮಾಡಬೇಕೆಂದು ಚಿತ್ತಯ್ಯನಿಗೆ ಸೂಚಿಸಿದನು.

ತಿರುಮಣಿ ಪಟ್ಟಣದ ಅರಮನೆಯಲ್ಲಿ ಗೊಡಗಿರುವುದು ತಿಳಿಸಿದ ಕಾಟಯ್ಯ ಅದನ್ನು ತರುವುದಕ್ಕಾಗಿ ಚಿತ್ತಯ್ಯನನ್ನು ಕಳುಹಿಸುತ್ತಾನೆ. ಚಿತ್ತಯ್ಯ ತಿರುಮಣಿ ಪಟ್ಟಣಕ್ಕೆ ಬರುತ್ತಾನೆ. ಆದರೆ ಕೋಟೆಯ ಒಳಗಡೆ ಪ್ರವೇಶ ಅಷ್ಟು ಸುಲಭವಲ್ಲ. ಆದ್ದರಿಂದ ಅರಮನೆಯ

ಬಟ್ಟೆಯನ್ನು ತೊಳೆಯುತ್ತಿದ್ದ 'ಲಕ್ಕಿ' ಎಂಬ ಮಡಿವಾಳ ಸ್ತ್ರೀಯನ್ನು ಭೇಟಿಯಾದನು. ಈ ಹಿಂದೆ ಆಕೆಯ ಮಗ ತನ್ನ ಮನೆ ಬಿಟ್ಟು ಹೋಗಿದ್ದವನು ಹಿಂತಿರುಗಿರುವುದಿಲ್ಲ. ಚಿತ್ತಯ್ಯ ಆ ಹುಡುಗನಂತೆ ವೇಷ ಬದಲಿಸಿ ಲಕ್ಕಿಯನ್ನು ಭೇಟಿಯಾಗುತ್ತಾನೆ. ಆಕೆಗೆ ಮಗ ಸಿಕ್ಕ ಸಂಭ್ರಮ. ಬಟ್ಟೆ ತೊಳೆದು ಉಬ್ಬೆ ಬಾನಿಯನ್ನು ಕತ್ತೆಯ ಮೇಲೆ ಹೊತ್ತು ಅರಮನೆಯ ಒಳಗೆ ಬರುತ್ತಾಳೆ. ಕೋಟೆ ಕಾವಲುಗಾರರು ಈ ಅಪರಿಚಿತ ಹುಡುಗನನ್ನು ಪ್ರಶ್ನಿಸಿದಾಗ 'ಈತನು ನನ್ನ ಮಗ. ಈ ಹಿಂದೆ ಊರು ಬಿಟ್ಟು ಹೋಗಿದ್ದವನು ಹಿಂತಿರುಗಿ ಬಂದಿದ್ದಾನೆ' ಎಂದು ತಿಳಿಸಿ ಕೋಟೆಯ ಒಳಗೆ ಪ್ರವೇಶ ನೀಡುತ್ತಾಳೆ. ಮುಂದೆ ಮನೆಗೆ ಬಂದ ಮಗನಿಗೆ ವಿಶೇಷ ಅಡಿಗೆಯ ತಯಾರಿಕೆಗಾಗಿ ಸೊಪ್ಪು ತರಲು, ಹುಡುಗನಿಗೆ ಉಬ್ಬೆ ಬಾನಿ ತೆಗೆದುಕೊಂಡು ಮನೆಗೆ ಹೋಗುವಂತೆ ತಿಳಿಸಿ ಹೊರಡುತ್ತಾಳೆ. ಹುಡುಗ ಸ್ವಲ್ಪ ದೂರ ಹೋದಂತೆ ನಟಿಸಿ ಉಬ್ಬೆ ಬಾನಿಯನ್ನು ಕೆಳಗೆ ಹಾಕಿ ಒಡೆಯುತ್ತಾನೆ. ಉರಿಗಣ್ಣು ಬಿಟ್ಟು ಸುಟ್ಟುಹಾಕುತ್ತಾನೆ. ಲಕ್ಕಿ ಹಿಂದಿರುಗಿ ಬಂದು ನೋಡಲಾಗಿ ಮಗನ ವೇಶದಲ್ಲಿ ಬಂದಿದ್ದವನು ಮಗನಲ್ಲ ಎಂದು ತಿಳಿದು ಅರಸನಿಗೆ ದೂರು ಕೊಡುತ್ತಾಳೆ. ಕಾಟಯ್ಯ ಕೊಟ್ಟ ಮೊದಲ ಸೂಚನೆ ಫಲಕಾರಿಯಾಗಿ ಎರಡನೇ ಕೆಲಸ ತಿರುಮಣಿ ಪಟ್ಟಣದ ಪದ್ಮಾವತಿ ಎಂಬ ಸೂಳೆಯ ಮನೆಯಲ್ಲಿ ಮಲಗುವುದು, ಆತ ಮಲಗಿದ್ದ ಮಂಚದ ಮರದ ಕಾಲನ್ನು ತೆಗೆದು ಅರಸನ ಮಂಚದ ಬಂಗಾರದ ಕಾಲನ್ನು ತಂದು ಜೋಡಿಸುವುದು. ಎರಡನೆಯ ರಾತ್ರಿ ಊರಿನ ವರ್ತಕನ ಮನೆಯ ಅಂಗಡಿಯ ಬೆಲೆಬಾಳುವ ಪದಾರ್ಥಗಳನ್ನು ಕದ್ದು ಮತ್ತೆ ಪದ್ಮಾವತಿ ಮನೆಗೆ ಬಂದು ಮಲಗುವುದು ಹೀಗೆ ಒಂದಾದ ಮೇಲೆ ಒಂದರಂತೆ ಅರಮನೆ ಪೇಟೆ ಬೀದಿಗಳಲ್ಲಿ ವಿಪರೀತ ಕಳ್ಳತನದ ವಾತಾವರಣವನ್ನು ನಿರ್ಮಿಸುತ್ತಾನೆ. ಕೊನೆಗೆ ಕಾವಲುಗಾರ ಬೊಮ್ಮಯ್ಯನನ್ನು ಆತನ ಅಳಿಯನಂತೆ ವೇಷ ಹಾಕಿಕೊಂಡು ವಂಚಿಸಿ ಕಾವಲಿನ ಎಲ್ಲ ಒಳಸುಳಿವುಗಳನ್ನು ಅರಿತುಕೊಳ್ಳುತ್ತಾನೆ. ಕೊನೆಗೆ ಅವರ ಸ್ನೇಹವನ್ನು ಮಾಡುತ್ತಾನೆ. ಜೊತೆಗೆ ಆ ಕಳ್ಳರ ಗುಂಪಿನಲ್ಲಿ ಎರಡು ಭಾಗ ಮಾಡಿ ಒಂದು ಗುಂಪಿಗೂ ಇನ್ನೊಂದು ಗುಂಪಿಗೂ ಒಳಜಗಳ ತಂದಿಟ್ಟು ಹೊಡೆದಾಡಿ ಸಾಯುವಂತೆ ಮಾಡುತ್ತಾನೆ. ಇಲ್ಲಿಗೆ ತನ್ನ ಮೊದಲ ಶತ್ರುವಾದ ಕಳ್ಳಕೊರಮರ ನಾಶವಾಯಿತು. ಜೊತೆಗೆ ಇವರಿಗೆ ಉತ್ತೇಜನ ನೀಡಿದ ರಾಜನ ಬಗೆಗೂ ದ್ವೇಷ ಉಂಟಾಗಿ, ಆತನನ್ನು ಮುಗಿಸಿ ಗೊಡಬನ್ನು ಪಡೆಯಬೇಕೆಂದು ರಾತ್ರಿಯ ಕಾಲದಲ್ಲೇ ಸಣ್ಣದೊಂದು ಅಂಗಡಿ ತೆರೆಯುತ್ತಾನೆ. ರಾಜ ನೇರವಾಗಿ ಈತನ ಬಳಿಗೆ ಬಂದು ಕಾರಣ ಕೇಳಿದರೆ 'ರಾತ್ರಿಯಲ್ಲಿ ಕಳ್ಳಕಾಕರು ಸಂಚಾರ ಮಾಡುವಾಗ ಅವರಿಗೆ ಬೇಕಾದ ಉಪಯೋಗಿ ವಸ್ತುಗಳ ಅಗತ್ಯವಿದ್ದು, ಅದಕ್ಕಾಗಿ ಅಂಗಡಿ ತೆರೆದಿರುವುದಾಗಿ' ತಿಳಿಸಿದನು. ತಿರುಮಣಿ ರಾಜ ಇದನ್ನು ನಂಬಿದನು. ಜೊತೆಗೆ ಕಳ್ಳರನ್ನು ಹಿಡಿಯಲು ನನಗೆ ಸಹಾಯ ಮಾಡು ಎಂದು ಕೇಳಿಕೊಂಡನು. ಚಿತ್ತಯ್ಯ ರಾಜನ

ಮನವಿಯನ್ನು ಒಪ್ಪಿದನು. ಅವನು ರಾಜನಿಗೆ 'ನೀನು ನನ್ನ ಹಾಗೆ ಇಲ್ಲಿದ್ದರೆ ಕಳ್ಳರು ಈ ಕಡೆ ಬರುವುದಿಲ್ಲ. ಆದ್ದರಿಂದ ಈ ಪೆಟ್ಟಿಗೆಯಲ್ಲಿ ಅಡಗಿಕೊಂಡರೆ ಕಳ್ಳರು ಬಂದಾಗ ಅವರನ್ನು ಹಿಡಿಯಬಹುದು' ಎಂದನು. ತಿರುಮಣಿ ರಾಜನು ಚಿತ್ತಯ್ಯನ ಈ ಮಾತಿಗೆ ಒಪ್ಪಿಗೆ ಒಂದು ಪೆಟ್ಟಿಗೆಯಲ್ಲಿ ಕುಳಿತನು. ಚಿತ್ರದೇವರು ಆ ಪೆಟ್ಟಿಗೆಯನ್ನು ಮುಚ್ಚಿ ಬೀಗ ಹಾಕಿ, ಅದನ್ನು ತೆಗೆದುಕೊಂಡು ಹೋಗಿ ಒಂದು ಬಾವಿಗೆ ಹಾಕಿ ರಾಜನನ್ನು ಕೊಂದನು.

ಕಾಟಯ್ಯನಿಗೆ ಈ ಸಂಗತಿ ತಿಳಿಯಿತು. ಕೂಡಲೇ ನರಸಿಂಹನನ್ನು ಕರೆದುಕೊಂಡು ದಂಡಿನೊಂದಿಗೆ ತಿರುಮಣಿ ಪಟ್ಟಣವನ್ನು ಮುತ್ತಿದನು. ಎದುರಾದ ಸೈನ್ಯವನ್ನೆಲ್ಲಾ ಕೊಂದು, ತಿರುಗಣಿ ಪಟ್ಟಣವನ್ನು ನಾಶಮಾಡಿದರು. ನೆಲಮಾಳಿಗೆಯಲ್ಲಿ ಹೂತಿಟ್ಟಿದ್ದ ಬಂಗಾರದ ಗೊಡಬನ್ನು ತೆಗೆದುಕೊಂಡು ವಿಜಯೋತ್ಸವದಿಂದ ಚಿತ್ರಗಿರಿ ಪಟ್ಟಣದ ಕಡೆ ಹೊರಟರು. ಆದರೆ ದಾರಿಯಲ್ಲಿ ಮೊಲ ಮತ್ತೊಂದು ಪವಾಡವನ್ನು ಮಾಡುತ್ತದೆ. ಮೊಲ ಚಿತ್ತಯ್ಯನ ದಂಡನ್ನೆಲ್ಲಾ ಸೋಲಿಸಿ ಚಿತ್ತಯ್ಯನ ಸೇನೆಯಲ್ಲಿದ್ದ ನಾಲ್ಕು ಸಾವಿರ ನಾಯಿಗಳನ್ನು ಸಾಯಿಸುತ್ತದೆ. ಕಾಟಯ್ಯ, ಚಿತ್ತಯ್ಯ ತೀವ್ರ ಆತಂಕಪಡುತ್ತಾರೆ. ಕೊನೆಗೆ ಚಿತ್ತಯ್ಯ ತಾನು ದಂಡಿಗೆ ಬರುವಾಗ ತನ್ನ ಹೆಂಡತಿ ಗಂಗಮಾಳಿಗೆ ಕೊಟ್ಟುಬಂದಿದ್ದ ಗಿಡುಗ ಎಂಬ ಪಕ್ಷಿ ಮತ್ತು ಮೂಳ ಎಂಬ ನಾಯಿಯ ನೆನಪಾಗುತ್ತದೆ. ಈ ನಾಯಿಯನ್ನು ತಕ್ಷಣ ಕಳಿಸಿಕೊಡಬೇಕೆಂದು ಪತ್ರ ಬರೆದು ಗುಂಗರಿಯ ಕಾಲಿಗೆ ಕಟ್ಟಿ ಹಾರಿಬಿಡುತ್ತಾನೆ. ಗಂಗೆಮಾಳಿ ಸುದ್ದಿ ತಿಳಿದು ಗಂಡನಿಗೆ ಬಂದೊದಗಿರುವ ಅಪಾಯವನ್ನು ತಪ್ಪಿಸಲು ತನ್ನ ಬಳಿಯಲ್ಲಿದ್ದ ಗಿಡುಗ ಹಾಗೂ ನಾಯಿಯನ್ನು ದಂಡಿಗೆ ಕಳುಹಿಸಿಕೊಡಲು ಸಿದ್ಧತೆ ಮಾಡಿ ವಿಶೇಷ ಆರೈಕೆ ಮಾಡುತ್ತಾಳೆ.

ಆನೆ ಆನೆಗೂ ಜಗಳ, ಆನೆ ಮರಿಗೆ ಜಗಳ
ಜಾಣಿಗೆ ಜಗಳಬಹು ಜಗಳ ಮಾಳಮ್ಮನೀನು
ಸಾಕಿದ ಒಂದು ಮೂಳೊಂದು ಯಕ್ಕಲ ಕಳಿಸಬೇಕೆಂತ ಬರದಾನಂತೊ
ಒಂಟಿಗರ ಬಹು ಜಗಳ ನೀನು ಸಾಕಿದ ಗಿಡಗಾನ ಕಳಿಸಬೇಕಂತೋ

ಅಂತೆಂಬಾ ಹೊತ್ತಿಗೆಲ್ಲೋ ಮಾಳಮ್ಮ ತೂಕದ ಸಕ್ಕರೆ
ಕಲೆಸ್ಯಾಳಲ್ಲೋ, ತೂಕದ ಸಕ್ಕರೆ ತರಿಸ್ಯಾಳಲ್ಲೋ ಮಾಳಮ್ಮ
ಗಿಡಗಾನೂ ಮೂಳಣ್ಣನಿಗು ಹಬ್ಬದಡಿಗ ನಡೆಸಾಳಂತೋ
ಮಾಳಮ್ಮ ಚಿತ್ತರಗಿರಿ ಅರಮನೆಯಾಗೆ ಮೂಳಣ್ಣನಿಗೂ ಗಿಡುಗಣ್ಣನಿಗೂ

ಹಬ್ಬದಡಿಗೆ ಮಾಡೋಳಂತೋ । ಹಬ್ಬದಡಿಗೆ ಮಾಡೋಳಂತೋ
ಅಗ್ಗರಣಿ ಕಾಯೋದಲ್ಲೋ । ಹಾಲೂನೆ ಕಾಯೋದಲ್ಲೋ
ಬಾನಗಳೇ ಇಳಿದಾವಲ್ಲೋ । ಜಾಜಿಮಲ್ಲಿಗೆ ನೋಡೋ
ಜೀವತಿಗೆ ಅರಳೋದಂತೋ[5]

ಹೀಗೆ ಹಬ್ಬದಡಿಗೆ ಮಾಡಿ ಮಜ್ಜನ ಮಾಡಿಸಿ, ಊಟ ಮಾಡಿಸಿ ಮುದ್ದಿನಿಂದ ಸಾಕಿದ ಮೂಳಣ್ಣ ಮತ್ತು ಗಿಡುಗಣ್ಣರನ್ನು ಗಂಡ ಚಿತ್ತಯ್ಯ ಇರುವಂತಹ ದಂಡಿನ ಕಡೆಗೆ ಕಳಿಸುವಾಗ

ನಾಯಿಯ ಕೈಗೆ ಸಿಗಬೇಡ ನೀವು
ನರಿಯ ಕೈಗೆ ಸಿಗಬೇಡಿ ಗಿಡುಗಣ್ಣ
ಆಕಾಶದಾಗೆ ಹೋಗಬೇಕು ನೀನು ಗಿಡುಗಣ್ಣ
ಕಣ್ಣುಗುಡ್ಡೆರಡು ಕೀಳಬೇಕು ನೀನು
ಭೂಮಿ ಮೇಲೆ ಹೋಗಬೇಕು ನೀನು
ಮೂಳಣ್ಣ ತೊರಡು ಬೀಡೆರಡು ಇರಿಬೇಕು ನೀನು[6]

ಎಂದು ಹೇಳಿಕಳುಹಿಸುತ್ತಾಳೆ. ಯುದ್ಧ ಮಾಡಿ ಸೊಕ್ಕಿನಿಂದಿದ್ದ ಮೊಲದ ಬಳಿಗೆ ಗಿಡುಗ ಹಾಗೂ ಮೂಳಣ್ಣ ಎರಡೂ ಬಂದವು. ಮೊಲವನ್ನು ದೂರದಿಂದಲೇ ಕಂಡವು. ಆಕಾಶದಲ್ಲಿ ಹಾರಿ ಬಂದ ಗಿಡುಗ ಹಿರಿಮೊಲದ ಕಣ್ಣನ್ನು ಕುಕ್ಕಿ ಅದರ ದೃಷ್ಟಿಯನ್ನು ಕಳೆಯಿತು. ಹಿಂದಿನಿಂದ ಬಂದ ಮೂಳ ನಾಯಿ ಮೊಲದ ಎರಡು ತೊರಡು ಬೀಜಗಳನ್ನು ಹಿಡಿದು ಕಿತ್ತಿತು. ಮೊಲ ಸತ್ತುಹೋಯಿತು. ಮೊಲದ ಮೇಲೆ ಯುದ್ಧ ಮಾಡಿ ಮೂರ್ಛೆ ಹೋಗಿದ್ದ ಸೇನೆ ಕಾಟಯ್ಯನ ದಿವ್ಯದೃಷ್ಟಿಯಿಂದ ಎದ್ದು ಕುಳಿತಿತ್ತು.

ಮೂಳಣ್ಣ, ಗಿಡುಗಣ್ಣ ಗೆದ್ದ ಉತ್ಸಾಹದಿಂದ ಪ್ರೀತಿಯಿಂದ ಚಿತ್ತಯ್ಯನ ಬಳಿಗೆ ಬಂದುನಿಂತವು. ಚಿತ್ತಯ್ಯ ಈ ಎರಡನ್ನೂ ದೃಷ್ಟಿಸಿ ನೋಡಿದನು. ನಾನು ಮಹಾ ಪರಾಕ್ರಮಿಯಾದರೂ ಹೆಣ್ಣು ಹೆಂಗಸಿನ ಈ ಕನಿಷ್ಠ ನಾಯಿಯಿಂದ ನಾನು ನನ್ನ ಪ್ರತಿಷ್ಠೆ ಕಳೆದುಕೊಳ್ಳಬೇಕಾಯಿತಲ್ಲ ಎಂದು ಮನಸ್ಸನ್ನು ಕಿರಿದುಮಾಡಿಕೊಂಡನು. ಕೋಪ ಉಕ್ಕಿಬಂದಿತು. ದೊಣ್ಣೆಯನ್ನು ತೆಗೆದುಕೊಂಡು ಹೊಡೆಯಲು ಹೋದನು. ಏಟು ತಿಂದ ನಾಯಿ ನೇರವಾಗಿ ತನ್ನ ಒಡತಿಯ ಬಳಿಗೆ ಓಡಿಹೋಯಿತು. ತನ್ನ ಸಂಕಟವನ್ನು ಹೇಳಿಕೊಂಡಿತು. ಗಂಗೆಮಾಳಮ್ಮನಿಗೆ ತಡೆಯಲಾರದ ಕೋಪ ಬಂದಿತು. ತನ್ನ ಗಂಡ ಚಿತ್ತಯ್ಯ ಚಿತ್ರಗಿರಿ ಪಟ್ಟಣಕ್ಕೆ ಬರುವುದನ್ನು ಕಾದಳು. ಗೆದ್ದು ಬಂದ ಚಿತ್ತಯ್ಯನನ್ನು ಸ್ವಾಗತಿಸಲಿಲ್ಲ. ಬಂದ ಕೂಡಲೇ ಆತನೊಂದಿಗೆ ವಾಗ್ವಾದಕ್ಕೆ ಇಳಿದಳು. ನನ್ನ ನಾಯಿಗೆ

ಅವಮಾನ ಮಾಡಿದ ನಿಮ್ಮೊಂದಿಗೆ ಬಾಳ್ವೆ ಮಾಡುವುದಿಲ್ಲ ಎಂದಳು. ತಾನು ಧರಿಸಿದ್ದ ಮೂಗುಬಟ್ಟನ್ನು ತೆಗೆದು ಚಿತ್ತಯ್ಯನ ಮೇಲೆ ಬಿಸಾಡಿದಳು. ಮೂಡಲ ದಿಕ್ಕಿಗೆ ಮುಖಮಾಡಿ ಬಿರಬಿರನೆ ನಡೆದಳು. ಪಾವಗಡ ತಾಲ್ಲೂಕಿನ ಬುಮ್ಮೇನಹಳ್ಳಿಯಲ್ಲಿ ನೆಲೆಸಿದಳು. ಆನಂತರ ಮರಣ ಹೊಂದಿದಳು. ಈ ಗ್ರಾಮದಲ್ಲಿ ಗಂಗೆಮಾಳಮ್ಮನ ಗುಡಿಯಿದ್ದು ಕಾಡುಗೊಲ್ಲರು ಬ್ರಾಹ್ಮಣರು ಸಮಾನವಾಗಿ ಆರಾಧಿಸುತ್ತಿದ್ದಾರೆ. ದೀಪಾವಳಿ ಸಂದರ್ಭದಲ್ಲಿ ವಿಶೇಷ ಪೂಜೆ ಇಂದಿಗೂ ಜರುಗುತ್ತಿದೆ. ದೀಪ ಏರಿಸುವುದು ಮೊದಲಾದ ಆಚರಣೆ ಕಾಡುಗೊಲ್ಲರ ಸಂಪ್ರದಾಯದಂತೆ ನಡೆಯುತ್ತದೆ. ಮುಂದೆ ಚಿತ್ತಯ್ಯ, ಕಾಟಯ್ಯ, ನರಸಿಂಹರು ಚಿತ್ರಗಿರಿ ಪಟ್ಟಣವನ್ನು ಆಳಿದರು. ಇವರು ಶಿವೈಕ್ಯರಾದ ಬಳಿಕ ಕಾಡುಗೊಲ್ಲರಲ್ಲಿನ ಕರಡಿಗೊಲ್ಲರು ಚಿತ್ತಯ್ಯನನ್ನು, ಅಜ್ಜಿಯರ ಗೊಲ್ಲರು ಕಾಟಯ್ಯನನ್ನು, ತಳವಾರರು ಓಬಳನರಸಿಂಹನನ್ನು ಕುಲದೇವತೆಯನ್ನಾಗಿ ಮಾಡಿಕೊಂಡು ಪೂಜಿಸುತ್ತಾ ಬಂದರು.

ಚಿತ್ರದೇವರ ಕಾವ್ಯವನ್ನು ಸಮಗ್ರವಾಗಿ ಹಾಡುವವರು ವಿರಳ. ಸಿರಾ ತಾಲ್ಲೂಕಿನ ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿಯ ನಿಂಗಣ್ಣ ಎಂಬುವವರು ಈ ಕಾವ್ಯವನ್ನು ಇಡಿಯಾಗಿ ಹಾಡುತ್ತಾರೆ. ಚಿತ್ರದೇವರೊಂದಿಗೆ ಇತರೆ ಕಾಡುಗೊಲ್ಲರ ಸಾಂಸ್ಕೃತಿಕ ವೀರರಾದ ಎತ್ತಪ್ಪ ಮತ್ತು ಜುಂಜಪ್ಪ ಇವರನ್ನು ಕುರಿತ ಯಾವುದೇ ಮಾಹಿತಿಯೂ ನಿಂಗಣ್ಣನಿಗೆ ತಿಳಿದಿಲ್ಲ ಅಥವಾ ಈತ ಕಲಿತಿಲ್ಲ. ಹಾಗಾಗಿಯೇ ಚಿತ್ರದೇವರ ಕಾವ್ಯ ಯಾವುದೇ ಕೂಡಾವಳಿ ಇಲ್ಲದೆ ಸಂಗ್ರಹಿಸಲು ಸಾಧ್ಯವಾಯಿತು.



---


1. *ಚಿತ್ರದೇವರ ಕಾವ್ಯ : ಸಂ.ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ*
2. *ಅದೇ*
3. *ಅದೇ*
4. *ಅದೇ*
5. *ಅದೇ*
6. *ಅದೇ*

ಆ) ಜುಂಜಪ್ಪ



ದಕ್ಷಿಣ ಕರ್ನಾಟಕದ ಬಯಲುಸೀಮೆ ಪ್ರದೇಶವಾದ ತುಮಕೂರು ಜಿಲ್ಲೆಯ ಸಿರಾ ಜನಪದ ಸಂಸ್ಕೃತಿಯ ಸಮೃದ್ಧ ನೆಲೆ. ಜುಂಜಪ್ಪ ಈ ಭಾಗದ ಪ್ರಬಲ ಸಾಂಸ್ಕೃತಿಕ ನಾಯಕ. ಈತನನ್ನು ಕುರಿತು ಜನಪದ ಮಹಾಕಾವ್ಯ ಮೌಖಿಕ ಪರಂಪರೆಯಲ್ಲಿ ವ್ಯಾಪಕ ಜನಪ್ರಿಯತೆಯನ್ನು ಪಡೆದಿದೆ. ದಕ್ಷಿಣ ಕರ್ನಾಟಕದ ತುತ್ತ ತುದಿ ಚಾಮರಾಜನಗರ ಜಿಲ್ಲೆಯಲ್ಲಿ ಮಲೆಯ ಮಹದೇಶ್ವರ, ಅದಕ್ಕೆ ಹೊಂದಿಕೊಂಡಂತೆ ಮಂಟೇಸ್ವಾಮಿ, ಕಾವ್ಯಗಳು, ಉತ್ತರ ಕರ್ನಾಟಕ ಭಾಗದಲ್ಲಿ ಮೈಲಾರಲಿಂಗ, ಕರಾವಳಿ ಪ್ರದೇಶದಲ್ಲಿ ಕೋಟಿ ಚೆನ್ನಯ್ಯ ಕಾವ್ಯಗಳು ಪ್ರಾದೇಶಿಕ ಮಹಾಕಾವ್ಯಗಳೆಂಬ ಹಿರಿಮೆಗೆ ಪಾತ್ರವಾದಂತೆ ಕಾಡುಗೊಲ್ಲರ ಸಾಂಸ್ಕೃತಿಕ ವೀರ ಜುಂಜಪ್ಪ, ತುಮಕೂರು ಜಿಲ್ಲೆಯ ಜನಪದ ಮಹಾಕಾವ್ಯದ ನಾಯಕ. ಈತನನ್ನು ಕುರಿತು ಆರೇಳು ರಾತ್ರಿಗಳ ಕಾಲ ನಿರಂತರವಾಗಿ ಕಾವ್ಯ ಹಾಡುವ ಪರಂಪರೆ ಮೌಖಿಕ ನೆಲೆಯಲ್ಲಿ ಇಂದಿಗೂ ವ್ಯಾಪಕವಾಗಿದೆ. ಕಾಡುಗೊಲ್ಲರು ದಟ್ಟವಾಗಿ ನೆಲೆಸಿರುವ ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಚಳ್ಳಕೆರೆ, ಹೊಳಲ್ಕೆರೆ, ಹೊಸದುರ್ಗ ಭಾಗಗಳಲ್ಲೂ ಜುಂಜಪ್ಪನ ಪ್ರಭಾವ ಇದೆಯಾದರೂ, ಎತ್ತಪ್ಪನ ಬಗೆಗೆ ಆ ಭಾಗದಲ್ಲಿ ವಿಶೇಷ ಗೌರವ. ಸಿರಾ ತಾಲ್ಲೂಕಿನ ಕಳುವೋರಹಳ್ಳಿ ಜುಂಜಪ್ಪನ ತಳಮನೆ. ಈತನ ಸಮಾಧಿಯೂ ಇಲ್ಲಿಯೇ ಇದೆ. ಹಾಗಾಗಿ ಜುಂಜಪ್ಪ ತುಮಕೂರು ಜಿಲ್ಲೆಯ ಸಾಂಸ್ಕೃತಿಕ ನಾಯಕ ಅನ್ನುವುದೇ ವಿಶೇಷ. ತುಮಕೂರು ಜಿಲ್ಲೆಯಲ್ಲಿ ಜುಂಜಪ್ಪನ ಬಗೆಗಿನ ಐತಿಹ್ಯ, ಆರಾಧನೆಯೂ ಹೆಚ್ಚಾಗಿವೆ. ಚೀಳೂರು, ಹಾಗಲವಾಡಿ, ಮಂಚಲದೊರೆ, ಮರಡಿಗುಡ್ಡ, ಬೇವಿನಹಳ್ಳಿ, ಚಂಗಾವರ, ಹುಲಿಕುಂಟೆ ಇವು ಜುಂಜಪ್ಪನ ಪ್ರಮುಖ ಸಾಂಸ್ಕೃತಿಕ ನೆಲೆಗಳು. ದೈವಸಂಬಂಧಿ ಆರಾಧನೆಯ ಸ್ವರೂಪ ಪಡೆದ ಸ್ಥಳಗಳಾಗಿ ಜನಪದರ ಭಕ್ತಿಭಾವದ ಕೇಂದ್ರಗಳಾಗಿವೆ.

ವೃತ್ತಿಗಾಯಕ, ಹವ್ಯಾಸಿ ಈ ಎರಡೂ ಪರಂಪರೆಯಲ್ಲಿಯೂ ಜುಂಜಪ್ಪನ ಕಾವ್ಯ ಹಾಡಲಾಗುತ್ತದೆ. ಇವರುಗಳಲ್ಲಿ ಒಂದು ರಾತ್ರಿಯಿಂದ ಹಿಡಿದು ಆರೇಳು ರಾತ್ರಿಗಳ ಕಾಲ ನಿರಂತರವಾಗಿ, ಹಾಡುವ ಸಂಪ್ರದಾಯವೂ ಇದೆ. ಜುಂಜಪ್ಪನ ಕತೆ ಕೇಳಲು ಬಂದ ಸಮೂಹವನ್ನು ರಾತ್ರಿಯಿಡೀ ಹಿಡಿದಿಡುವ ಕುತೂಹಲಕರ ಮನರಂಜನಾತ್ಮಕ ಪ್ರಸಂಗಗಳನ್ನು ಸೃಷ್ಟಿಸಿ, ಹಾಡುವ ಚಮತ್ಕಾರಿಕ ಕಲೆ ಕಾಡುಗೊಲ್ಲರ ಅದ್ಭುತ ಪ್ರತಿಭೆಯ ಪ್ರತೀಕವಾಗಿದೆ.



ನಮ್ಮ ಜನಪದರಿಗೆ ಜನಪದ ಪರಂಪರೆಯ ನಾಯಕರ ಬಗೆಗಿನ ಕಾವ್ಯ ಹಾಡುವಾಗ, ಕಥೆ ಹೇಳುವಾಗ ಅವರಿಗೆ ಇದೊಂದು ಕಾವ್ಯ, ಮಹಾಕಾವ್ಯ ಎಂಬ ಹಮ್ಮು-ಬಿಮ್ಮಾಗಲಿ ಅಥವಾ ಕಾವ್ಯ ಅನ್ನುವ ವಿಶೇಷ ಪರಿಕಲ್ಪನೆಯಾಗಲಿ ಇದ್ದಂತಿಲ್ಲ. ಅವರಿಗೆ ಇದೊಂದು ಪವಿತ್ರ ಸಂಕಥನ. ಪರಂಪರಾಗತ ಕಾವ್ಯ, ದೈವಸಂಬಂಧಿ ಕಲೆ ಅಷ್ಟೇ. ಆದರೂ ವಿದ್ವಾಂಸರು, ಜನಪದ ಮಹಾಕಾವ್ಯ ಎನ್ನುವ ಮಾತನ್ನು ಬಳಸುತ್ತಾರೆ. ಇದು ಶಿಷ್ಟಕಾವ್ಯದ ಪ್ರಭಾವ. ಶಿಷ್ಟಕಾವ್ಯ ಹೇಗೆಲ್ಲಾ ಭಾಷಿಕ, ವಿಮರ್ಶಾತ್ಮಕ ಹಾಗೂ ಮೀಮಾಂಸಕ ನೆಲೆಯಲ್ಲಿ ಸಂವಿಧಾನಾತ್ಮಕವಾಗಿ ಕಾವ್ಯಸ್ವರೂಪ ಬಿಚ್ಚಿಕೊಳ್ಳಬೇಕೋ, ಹಾಗೆಯೇ ಜನಪದ ಕಾವ್ಯಗಳೂ ಕಾವ್ಯ ಮೀಮಾಂಸೆಯ ಎಲ್ಲ ಸೂಕ್ಷ್ಮಾತಿಸೂಕ್ಷ್ಮ ಭಾವನೆ, ಸಂವೇದನೆಯನ್ನು ಪರಿಣಾಮಕಾರಿಯಾಗಿ ಪ್ರಕಟಿಸುತ್ತದೆ. ಇದೇ ಇದರ ವಿಶೇಷ. ಹೀಗೆ ಕಟ್ಟಿಕೊಡುವಾಗ ಅಪ್ಪಟ ದೇಶೀ ನೆಲೆಯ, ಪ್ರಾದೇಶಿಕ ನುಡಿಗಟ್ಟುಗಳನ್ನು ಯಥಾವತ್ತಾಗಿ ಅಭಿವ್ಯಕ್ತಿಸುವುದು ಇದರ ಮತ್ತೊಂದು ವೈಶಿಷ್ಟ್ಯತೆ. ಜುಂಜಪ್ಪನ ಕಥೆ ಸಾಗುವುದು ಹೀಗೇನೇ. ಕಾಡುಗೊಲ್ಲರು ಈ ಕಥೆಯ ವಾಹಕರು. ತುಮಕೂರು ಜಿಲ್ಲೆಯಲ್ಲಿ ವ್ಯಾಪಕವಾಗಿ ನೆಲೆಸಿರುವ ಕಾಡುಗೊಲ್ಲರು ಪಶುಪಾಲನೆಯ ಕಾಯಕದವರು. ಪಶುಪಾಲನೆ ಭಾರತೀಯ ಸಂಸ್ಕೃತಿಯ ಮಾತೃರೂಪ. ಇದಕ್ಕೆ ತಕ್ಕನಾಗಿ ಗೋವುಗಳನ್ನು ತಮ್ಮ ಸಂಸ್ಕೃತಿಯ ಅಂಗವಾಗಿ ಅನ್ನದ ಮೂಲ ಎಂದು ಪರಿಭಾವಿಸಿ, ಗೋವುಗಳೊಂದಿಗೆ ಒಂದೇ ಕಡೆ ವಾಸಿಸುತ್ತಾ, ಗೋವಿಗೆ ಮಾತೆ, ಕಾಮಧೇನು ಎಂದೆಲ್ಲಾ ವಿಸ್ತೃತ ಆಧ್ಯಾತ್ಮಿಕ ರೂಪದೊಂದಿಗೆ ಬಾಳುವುದು ಕಾಡುಗೊಲ್ಲರ ನಿತ್ಯನೇಮವಾಗಿದೆ. ಹಾಗಾಗಿಯೇ ಗೂಡಬ್ಬ, ಬಸವನಹಬ್ಬ, ಕಾರಬ್ಬ, ಬೆಳಕಿನ ಹಬ್ಬ (ದೀಪಾವಳಿ)ಗಳನ್ನು ಕಾಡುಗೊಲ್ಲರಂತೆ ಹಲವು ಬುಡಕಟ್ಟು ವರ್ಗಗಳು ಗೋವಿನ ಹೆಸರಲ್ಲಿಯೇ ಆಚರಿಸುವುದು ತುಮಕೂರು ಜಿಲ್ಲೆಯ ವಿಶೇಷ. ಮಾತ್ರವಲ್ಲ ಗೋವನ್ನು ಉಪವಾಸವಿಟ್ಟು ತಾವು ಎಂದೂ ಊಟ ಮಾಡದಿರುವ ಕಾಡುಗೊಲ್ಲರು, ಗೋವಿನ ಹುಲ್ಲು, ನೀರಿಗಾಗಿ ಊರಿಂದ ಊರಿಗೆ ವಲಸೆ ಹೋಗುವ ಪರಂಪರೆ ಇಂದಿಗೂ ನಿಂತಿಲ್ಲ. ಮಾತ್ರವಲ್ಲ ಗೋವಿಗೆ ಆಪತ್ತು ಬಂದಾಗ, ಶತ್ರುಗಳ ಪಾಲಾಗುವ ಸಂದರ್ಭ ಬಂದಾಗ ಪ್ರಾಣದ ಹಂಗು ತೊರೆದು ಹೋರಾಡಿದ ಕಥನಗಳೇ ಜನಪದ ಕಾವ್ಯ, ಖಂಡಕಾವ್ಯ, ಕಥನಗೀತೆ, ಮಹಾಕಾವ್ಯ ರೂಪದಲ್ಲಿ ಪದಕಟ್ಟಿ ಮೌಖಿಕ ಪರಂಪರೆಯಲ್ಲಿ ಸದಾ ಹಾಡುತ್ತಾ, ಅದನ್ನು ಸಂಗತ ಮಾಡುತ್ತಾ ಬರುತ್ತಿರುವ ಕಾಡುಗೊಲ್ಲರು ನೆಲಮೂಲ ಸಂಸ್ಕೃತಿಯ ಮಾದರಿಯಾಗಿ ಇಂದಿಗೂ ಉಳಿದಿದ್ದಾರೆ.

ತುಮಕೂರು ಜಿಲ್ಲೆಯಲ್ಲಿ ಜನಪದ ಮಹಾಕಾವ್ಯದಂತೆ ಖಂಡಕಾವ್ಯದ ಮಾದರಿಯಲ್ಲಿ ಹಲವು ಕಾವ್ಯಗಳು ಲಭ್ಯವಿವೆ. ಚಿತ್ರದೇವರ ಕಾವ್ಯ, ಕಂಬದರಂಗನ ಕಾವ್ಯ ಈ ಎರಡೂ ಕಾವ್ಯಗಳು, ಕಾಡುಗೊಲ್ಲರ ಸಾಂಸ್ಕೃತಿಕ ಇತಿಹಾಸದ ಬಗೆಗೆ ವಿಸ್ತೃತ ಬೆಳಕು ಚೆಲ್ಲುವ ಮಹತ್ವದ ಕಾವ್ಯಗಳು[1]. 'ಚಿತ್ರದೇವರ ಕಾವ್ಯ' ಕಾಡುಗೊಲ್ಲರ ಪುರಾಣ ಕೃತಿ. ಕಾಡುಗೊಲ್ಲರ ಮೂಲಪುರುಷ ಎಂದೇ ಪರಿಭಾವಿಸುವ ಚಿತ್ರದೇವರು, ಕಾಟಂಲಿಂಗ ಇವರ ಉಗಮ, ವಿಕಾಸ ಹಾಗೂ ಈ ವೀರರಿಬ್ಬರೂ ಪರಶಿವನ ಬೆವರಿಂದ ಜನಿಸಿದರೆಂಬ ವಿಸ್ತೃತ ವಿವರಣೆ ದೊರೆಯುತ್ತದೆ. ಜುಂಜಪ್ಪ, ಎತ್ತಪ್ಪ ಈ ಬಗೆಯ ಐತಿಹಾಸಿಕ ವೀರರಿಗೆ ಸೀಮಿತವಾದ ಪ್ರದೇಶದಲ್ಲಿ ಮಾತ್ರ ದೈವಸ್ವರೂಪವಾಗಿ, ತಮ್ಮ ಶೀಲಶೌಚಗುಣಗಳಿಂದಾಗಿ ತಮ್ಮ ಜನಾಂಗದ ಏಳಿಗೆಗಾಗಿ, ಗೋಗಳ್ಳರೊಂದಿಗೆ ಹೋರಾಡಿದ, ಗೋ ಸಂರಕ್ಷಿಸಿದ ಅನನ್ಯ ಸಾಧನೆ ಮಾಡಿದ ಕಾರಣದಿಂದಾಗಿ ಈ ಇಬ್ಬರೂ ನಾಯಕರು ಕಾಡುಗೊಲ್ಲರ ಹಿರಿಮೆಗೆ ಪಾತ್ರರಾಗಿದ್ದಾರೆ. ಜೊತೆಗೆ ಇವರಂತೆ ಹಲವಾರು ಈರಗಾರರಿದ್ದು ಅವರನ್ನು ಆರಾಧಿಸುವ, ಅವರನ್ನು ಕುರಿತು ಮೌಖಿಕ ನೆಲೆಯಲ್ಲಿ ಸಾಹಿತ್ಯ ಕಟ್ಟಿ ಹಾಡುವ, ಕಥನಗಳ ಮೂಲಕ ಈರಗಾರರ ಹಿರಿಮೆ, ಕುಲಮೂಲದ ಘನತೆಯ ಪ್ರತೀಕ ಎಂಬ ಭಾವನೆಯೂ ಇದೆ. ಇದರಂತೆ ಬೇಡ, ನಾಯಕರಲ್ಲಿ ಈರಗಾಟರಾಯ, ಕುಮಾರರಾಮ ಮುಂತಾದ ಸಾಂಸ್ಕೃತಿಕ ನಾಯಕರು ತಮ್ಮ ನಡಾವಳಿಗಳಿಂದ ಆದರ್ಶಪ್ರಾಯರಾಗಿ ಎತ್ತರಕ್ಕೆ ಬೆಳೆದವರು ಮಾತ್ರವಲ್ಲದೆ ಆರಾಧನೆಗೂ ಒಳಗಾಗಿರುವ ಪ್ರಸಂಗ ಸಿರಾ, ಮಡಕಶಿರಾ, ಪಾವಗಡ, ಮಧುಗಿರಿ ಈ ಭಾಗಗಳಲ್ಲಿ ಇಂದಿಗೂ ಕಾಣಬಹುದಾಗಿದೆ. ಪಾವಗಡದ ಕೋಟಗುಡ್ಡ (ಪಾಲನಾಯಕ), ಮಡಕಶಿರಾದ ಹಳ್ಳಿಕೆರೆ (ಈರಗಾಟರಾಯ) ಈ ಮುಂತಾದ ಸಾಂಸ್ಕೃತಿಕ ನೆಲೆಗಳು[2] ಜನಪದ ವಾಙ್ಮಯದ ಕೇಂದ್ರಗಳೂ ಆಗಿರುತ್ತವೆ. ತುಮಕೂರು ಜಿಲ್ಲಾ ಜಾನಪದ ಕಾವ್ಯಗಳ ಸಾಲಿನಲ್ಲಿ ಈ ತೆರನಾದ ಕಾವ್ಯಗಳೂ ಸೇರಿದಂತೆ, ಹೆಬ್ಬೂರು ಚಿಕ್ಕಣ್ಣ[3], ಹುಳಿಯಾರು ಕೆಂಚಮ್ಮ, ದರಣಿ ಹೊನ್ನಾದೇವಿ, ಮದಲಿಂಗ, ವಡ್ಡಗೆರೆ ವೀರನಾಗಮ್ಮ, ಮದ್ದೆಯ ಸ್ವಾರಮ್ಮ, ಜಂಗಮರಹಳ್ಳಿ, ಮರೂರುಗಳಲ್ಲಿ ವೀರನಾಗಪ್ಪ ಸಿರಾ ತಾಲ್ಲೂಕಿನ ಬೆಜ್ಜಿಹಳ್ಳಿಯ ವೀರಬೊಪ್ಪರಾಯ, ಗುಬ್ಬಿ ತಾಲ್ಲೂಕು ಬಿದರೆ ಸಮೀಪದ ಹಾಲುಮೀಸಲು ಈರಣ್ಣ - ಈ ಎಲ್ಲ ನಾಯಕರ ಬಗೆಗೆ ಖಂಡಕಾವ್ಯಗಳು ಜಾನಪದ ವಾಙ್ಮಯದಲ್ಲಿವೆ. ಇವುಗಳಲ್ಲಿ ಚಿತ್ರದೇವರು, ಕಾಟಂದೇವರು ಹಾಗೂ ಕಂಬದರಂಗನ ಕುರಿತ ಕಾವ್ಯಗಳು ಮಾತ್ರ ಸಂಗ್ರಹವಾಗಿ ಅವು ಕ್ರಮವಾಗಿ 1998-99 ಹಾಗೂ 2001 ರಲ್ಲಿ ಪ್ರಕಟವಾಗಿವೆ. ಇನ್ನುಳಿದ ಈ ಬಗೆಯ ಖಂಡಕಾವ್ಯಗಳು ಪ್ರಕಟವಾಗಿಲ್ಲ. ಜೊತೆಗೆ ಡಾ|| ಜೀಶಂಪ ಅವರು ಉಲ್ಲೇಖಿಸಿರುವ ಹಾಗೂ ಮೊದಲಿಗೆ ಸಂಗ್ರಹಿಸಿದ ಹುಳಿಯಾರು ಕೆಂಚಮ್ಮನನ್ನು ಕುರಿತ ಬೇರೆ ಬೇರೆ ವಕ್ತೃಗಳಿಂದ ಸಂಗ್ರಹಿಸಿದ ಪಾಠಾಂತರದ ರೂಪವೂ ಪ್ರಕಟವಾಗಿದೆ (ಗಮನಿಸಿ:

ಬಂಡಿ ಬಂದಾವೆ ಬಾಳೆ ವನದಾಗೆ, ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ, 2009) ಸಿರಾ ಭಾಗದಲ್ಲಿ ಮಾತ್ರ ಹಾಡುವ ಕುಂತಿ ಪದ, ಬೆಸ್ತ ಜನಾಂಗದವರು ಮಾತ್ರ ಹಾಡುವ ಜೋಕುಮಾರನ ಕಥೆ, ತೆಲುಗು ಮೂಲದ ಬುರ್ರಾ ಕಥಾಸ್ವರೂಪದ ಬಾಲನಾಗಮ್ಮ, ಕಾಡುಸಿದ್ದಮ್ಮ, ಬಂಜೆ ಹೊನ್ನಮ್ಮ ಇವುಗಳನ್ನು ತಿಪಟೂರು, ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಲ್ಲಿ ಮಾತ್ರ ಬಳಕೆಯಲ್ಲಿರುವ ಕರಪಾಲಮೇಳದ ಗಾಯಕರೂ ಹಾಡುವ ಸಂಪ್ರದಾಯವಿದೆ. ಇವೆಲ್ಲವೂ ದೀರ್ಘ ಕಥಾನಕವನ್ನು ಹೊಂದಿದ್ದು, ಉಪಕಥೆಗಳೊಂದಿಗೆ ರಾತ್ರಿಯಿಡೀ ಹಾಡುವ ಕರಪಾಲ, ಬುರ್ರಾ ಕಥೆಗಳಲ್ಲಿ ಇಂದಿಗೂ ಕಾಣಬಹುದಾಗಿದೆ. ಅಂತೆಯೇ ಸಿರಾ ತಾಲ್ಲೂಕಿನ ಗಡಿ ಗ್ರಾಮಗಳಲ್ಲಿ ವಿರಳವಾಗಿ ಕಂಡುಬರುವ ಅರ್ಜುನ ಜೋಗಿ ಪರಂಪರೆಯ ಸುದೀರ್ಘ ಕಥನ ಮಾದರಿಯ ಕಾವ್ಯಗಳೂ ಕಂಡುಬರುತ್ತವೆ. ಕಿನ್ನರಜೋಗಿ ಸಂಪ್ರದಾಯದಲ್ಲಿ ಮಹಾಭಾರತದ ಭಿನ್ನ ಭಿನ್ನ ಪ್ರಸಂಗವನ್ನು ಸ್ವಾರಸ್ಯಕರವಾಗಿ ಹಾಡುವ ಸಂಪ್ರದಾಯ ಇಂದಿಗೂ ಇದೆ.

ಚಿತ್ರದೇವರು ಕಾಡುಗೊಲ್ಲರ ಕುಲಮೂಲ ದೈವ. ಅಖಂಡ ಕರ್ನಾಟಕವೂ ಸೇರಿದಂತೆ ಆಂಧ್ರದ ಬಹುತೇಕ ಕಾಡುಗೊಲ್ಲರ ಹಟ್ಟಿಗಳಲ್ಲಿ ಚಿತ್ರದೇವರ ದೇವಸ್ಥಾನ ಇರುತ್ತದೆ. ನೆಲಮೂಲ, ಕುಲಮೂಲ ಸಂಸ್ಕೃತಿಯನ್ನು ಆ ಸಂಸ್ಕೃತಿಯ ಪ್ರವಾದಿಯಾಗಿರುವ ಸಾಂಸ್ಕೃತಿಕ ನಾಯಕನ ಬಗೆಗೆ ಜನಪದರು ತಮ್ಮದೇ ಆದ ಕಥೆ, ಹಾಡು ಕಟ್ಟಿ ಅದನ್ನೇ ಮೌಖಿಕ ಪರಂಪರೆಯಲ್ಲಿ ನಿರಂತರವಾಗಿ ರವಾನಿಸುತ್ತಾ ಬರುವುದು ವಾಡಿಕೆ. ಕಾಡುಗೊಲ್ಲರು, ಬೇಡರು, ಕುರುಬರು - ಇವರುಗಳು ಸಾಂಸ್ಕೃತಿಕ ವೀರರನ್ನು ಹೊಂದಿ ಅವರನ್ನು ಪೌರಾಣಿಕ ಪುರುಷರಾಗಿ, ಐತಿಹಾಸಿಕ ವೀರರನ್ನಾಗಿ ಕಂಡು ಅವರು ಮಡಿದ ಅಥವಾ ಜನ್ಮಸ್ಥಳವನ್ನು ಪವಿತ್ರಸ್ಥಳವನ್ನಾಗಿ, ಆಧ್ಯಾತ್ಮಿಕ ನೆಲೆಯನ್ನಾಗಿ ಮಾಡಿಕೊಂಡಿರುವುದು ಈ ಬುಡಕಟ್ಟು ವರ್ಗದ ಪ್ರಧಾನ ಲಕ್ಷಣ. ಇಂಥ ನಾಯಕರ ಬಗೆಗೆ ಲಿಖಿತವಾಗಿ ಯಾವುದೇ ದಾಖಲೆ ಅಲಭ್ಯವಾದರೂ ಮೌಖಿಕ ಪರಂಪರೆಯ ಅಪಾರ ವಾಙ್ಮಯವನ್ನು ಕಾಣಬಹುದಾಗಿದೆ. ಚಿತ್ರದೇವರು, ಕಾಟಂದೇವರು ಕಾಡುಗೊಲ್ಲರಲ್ಲಿ ಪೌರಾಣಿಕ ದೈವವಾಗಿ ಪರಿಭಾವಿಸಿದರೆ, ಐತಿಹಾಸಿಕ ವೀರನಾಗಿ ಜುಂಜಪ್ಪ-ಎತ್ತಪ್ಪರನ್ನು ಆರಾಧಿಸಲಾಗುತ್ತದೆ. ಹಾಗಾಗಿ ತುಮಕೂರು ಸೇರಿದಂತೆ ಕರ್ನಾಟಕದ ಗಡಿಭಾಗವಾದ ಆಂಧ್ರಪ್ರದೇಶದಲ್ಲೂ ಚಿತ್ರದೇವರ ದೇವಾಲಯ ಪೂರಕ ಅವರನ್ನು ಕುರಿತ ಕಾವ್ಯವಿದೆ. ಅನಂತಪುರ ಜಿಲ್ಲೆಯ ಕಲ್ಯಾಣದುರ್ಗ ಸಮೀಪದ ಬೆಸ್ತರಪಲ್ಲಿಯಲ್ಲಿ ಚಿತ್ರದೇವ, ಕಾಟಂಲಿಂಗ, ಮಾಳಮ್ಮ ಇವರ ಪ್ರತ್ಯೇಕ ಪ್ರತ್ಯೇಕ ದೇವಾಲಯಗಳಿವೆ. ಶ್ರೀ ಬೊಮ್ಮಲಿಂಗಯ್ಯ ಎಂಬ ತೊಂಬತ್ತರ ಯಜಮಾನರು ಅಪ್ಪಟ ಕನ್ನಡದಲ್ಲಿ ಚಿತ್ರದೇವರ ಕತೆ ಹೇಳುತ್ತಾರೆ, ಹಾಡುತ್ತಾರೆ. ಸಿರಾ ತಾಲ್ಲೂಕಿನ ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿಯ ಶ್ರೀ ನಿಂಗಜ್ಜ ಹಾಡಿರುವ ಚಿತ್ರದೇವರ ಕಾವ್ಯದ ವಸ್ತು, ವಿವರಣೆ,

ವರ್ಣನೆಗಳಿಗೂ ಬೊಮ್ಮಲಿಂಗಯ್ಯ ಹಾಡುವ ಕಾವ್ಯಸ್ವರೂಪಕ್ಕೂ ಬದಲಾವಣೆಗಳೇನೂ ಇರುವುದಿಲ. ಅಷ್ಟೊಂದು ಸಾಮೀಪ್ಯತೆ ಚಿತ್ರದೇವರ ಕಾವ್ಯದಲ್ಲಿ ಕಾಣಬಹುದಾಗಿದೆ. ಇದೇ ಬಗೆಯ ಸಾಮ್ಯತೆ, ತುಮಕೂರು ಜಿಲ್ಲೆಯ ಚೇಳೂರು ಸಮೀಪದ ದಿಬ್ಬದಹಳ್ಳಿ ಗೊಲ್ಲರಹಟ್ಟಿಯ ಚಿತ್ತಯ್ಯನವರ ಚಿಕ್ಕಣ್ಣ ಹಾಡುವ ಕಾವ್ಯವೂ ಸೇರಿದಂತೆ ಜಿಲ್ಲೆಯಾದ್ಯಂತ ಕಾಡುಗೊಲ್ಲರ ಚಿತ್ರದೇವರನ್ನು ಕುರಿತು ಹಾಡುವ ಕತೆ, ಸಮಾನ ವರ್ಣನೆ. ಪಾತ್ರ ಚಿತ್ರಣಗಳೂ ಸಮಾನವಾಗಿರುವುದನ್ನು ಕಾಣಬಹುದು.

ಜುಂಜಪ್ಪ ತುಮಕೂರು ಜಿಲ್ಲೆಯ ಹೆಸರಾಂತ ಸಾಂಸ್ಕೃತಿಕ ನಾಯಕ. ಜಿಲ್ಲೆಗೆ ಮಹಾಕಾವ್ಯದ ಪಟ್ಟ ತಂದುಕೊಟ್ಟ ಗೋಪಾಲಕ. ಕಾಡುಗೊಲ್ಲರ ಬೆಡುಗಾದ ಮಾರನೋರ ಪಂಗಡಕ್ಕೆ ಸೇರಿದವನು. ಹಾಗಾಗಿ ಕರಡಿಗೊಲ್ಲ ಮಾರನೋರ ಗೊಲ್ಲರು ಜುಂಜಪ್ಪನನ್ನು ಮನೆದೇವರನ್ನಾಗಿ ಆರಾಧಿಸುತ್ತಾರೆ. ವಿಶೇಷವೆಂದರೆ ಸಿರಾ ತಾಲ್ಲೂಕಿನಲ್ಲಿ ಕುಂಚಿಟಿಗ ಒಕ್ಕಲಿಗರ ಒಳಪಂಗಡವಾದ ಅಳುವನೋರು ಪಂಗಡಕ್ಕೆ ಜುಂಜಪ್ಪನೇ ಮನೆದೇವರು. ಸಿರಾ ತಾಲ್ಲೂಕಿನ ಕಳುವರಹಳ್ಳಿ, ಬೇವಿನಹಳ್ಳಿ, ಸಿದ್ದಾಪುರ, ಹೊಸಹಳ್ಳಿ, ವೀರಗಾನಹಳ್ಳಿ, ಹನುಮನಹಳ್ಳಿ ಇಲ್ಲಿ ವಾಸಿಸುವ ಬಹುತೇಕ ಕುಂಚಿಟಿಗರ ಮನೆದೇವರು ಜುಂಜಪ್ಪ. ಹಾಗೆಯೇ ಹಾವು, ಚೇಳು ಮುಂತಾದ ವಿಷ ಜಂತುಗಳ ಬಾಧೆ ನಿವಾರಣೆಯ ದೈವವಾಗಿ, ತುಮಕೂರು ಜಿಲ್ಲೆಯ ಶೂದ್ರವರ್ಗದ ಜನಗಳು ಜುಂಜಪ್ಪನ ಆರಾಧಕರಾಗಿರುವುದು ಕಂಡುಬರುತ್ತದೆ. ಚೇಳೂರು, ಹಾಗಲವಾಡಿ ಈ ಭಾಗಗಳಲ್ಲಿ ವೀರಶೈವರ ಕುರುಬರು, ವಿಶ್ವಕರ್ಮ ಜನಾಂಗದವರು ವಿಶೇಷ ಭಕ್ತರು. ಚೇಳೂರು ಸಮೀಪದ ಗಡೇಕನಹಳ್ಳಿಯ ಹೊರಾಂಗಣದಲ್ಲಿ ಜುಂಜಪ್ಪನ ಪುಟ್ಟ ದೇವಸ್ಥಾನವಿದ್ದು, ಇದರ ಅರ್ಚಕರು ವೀರಶೈವ ವರ್ಗಕ್ಕೆ ಸೇರಿದ ಸಿದ್ದಪ್ಪ ಎನ್ನುವವರು. ಹಾಗೆಯೇ ಚೇಳೂರು ಹೋಬಳಿ ನಲ್ಲೂರು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದ ತೋಣಚನಹಳ್ಳಿ ಮಜರೆ ಗ್ರಾಮ ಲಿಂಗಾಪುರದಲ್ಲಿ, ಲಿಂಗಾಯಿತರ ಆರಾಧ್ಯದೈವ ಕಾಟಂಲಿಂಗ. ನಾಶವಾಗಿದ್ದ ದೇವಾಲಯವನ್ನು ಪೂರ್ಣ ಗುಡಿ ಕಟ್ಟಿ ದೇವಾಲಯದ ಸ್ವರೂಪ ನೀಡಿ, ವಾರದ ಪೂಜೆಗೂ ವ್ಯವಸ್ಥೆ ಮಾಡಲಾಗಿದೆ. ಆದರೆ ಚಿತ್ರದೇವರ ಜೊತೆ ಜೊತೆಯಾಗಿ ಬರುವ ಕಾಟಂದೇವರ ಕಾವ್ಯ ಹಾಡುವವರು, ಪದ ಹೇಳುವವರು ಸಮೀಪದ ನಲ್ಲೂರು ಹಟ್ಟಿ ಕದುರಯ್ಯ, ದಿಬ್ಬದಹಟ್ಟಿಯ ಎತ್ತಿನಯ್ಯನ ಚಿಕ್ಕಣ್ಣ, ಚಿತ್ತಯ್ಯ ಮೊದಲಾದವರು. ಜುಂಜಪ್ಪ ಪಶುಪಾಲಕನಾಗಿದ್ದು ಆತನ ಕಾಲಕ್ಕೆ ಸಾಕಷ್ಟು ಹುಲ್ಲುಗಾವಲುಗಳಿದ್ದು ಹುಲ್ಲು ನೀರಿಗಾಗಿ ಜುಂಜಪ್ಪ ವ್ಯಾಪಕ ತಿರುಗಾಟ ಮಾಡಿದ್ದಾನೆ. ಬಯಲುಸೀಮೆಯ ಹಲವು ಜಿಲ್ಲೆಗಳಲ್ಲಿ ಇಂದಿಗೂ ಜುಂಜಪ್ಪನ ನೆಲೆಗಳಿವೆ. ಅವೆಲ್ಲವೂ ಐತಿಹ್ಯ ಮಾದರಿಯ ದೇವಾಲಯ ಸ್ಮಾರಕಗಳಾಗಿ ಕಾಡುಗೊಲ್ಲರ ಅತ್ಯಂತ ಪ್ರಭಾವೀ ಸಾಂಸ್ಕೃತಿಕ ನಾಯಕನಾಗಿ ಪ್ರಕಟಗೊಳ್ಳುವ ಜುಂಜಪ್ಪನ ಕಥೆ ಕಾಡುಗೊಲ್ಲರನ್ನು

ಇತರೆ ಜನವರ್ಗದಿಂದ ಪ್ರತ್ಯೇಕಗೊಳಿಸಿ ಕಾಡುಗೊಲ್ಲರ ಸಾಂಸ್ಕೃತಿಕ ಸ್ವರೂಪವನ್ನು ಅಚ್ಚುಕಟ್ಟಾಗಿ ಕಟ್ಟಿಕೊಡುತ್ತದೆ. ಮಾತ್ರವಲ್ಲ ಗೊಲ್ಲರ ಗೋಸಂರಕ್ಷಣೆ, ಗೋವುಗಳಿಗೆ ತೊಂದರೆಯಾದಾಗ ಜೀವದ ಹಂಗು ತೊರೆದು ಹೋರಾಡಿದವನು. ಶತ್ರುಗಳ ಉಪಟಳದ ನಿಗ್ರಹಕ್ಕಾಗಿ ಸಾಹಸ ಪವಾಡ ಮೆರೆದ ಧೀರ. ಪಶುಪಾಲಕರು ಬಳಸುವ ಉದ್ದನೆಯ ಬಿದಿರಿನಿಂದ ತಯಾರಿಸಿದ ಗಣೆಗೆ ವಿಶೇಷ ಪ್ರಾಮುಖ್ಯ ತಂದುಕೊಡುವುದಲ್ಲದೆ ಗಣೆಯನ್ನು ಪೂಜ್ಯ ವಸ್ತುವನ್ನಾಗಿ ಆರಾಧನೆಗೆ ಒಳಗುಪಡಿಸಿದ್ದು ಜುಂಜಪ್ಪನ ಕಥೆಯ ಮೂಲಕವೇ ಎಂಬುದು ಮರೆಯಬಾರದ ಸಂಗತಿಯಾಗಿದೆ. ಹಾಗಾಗಿಯೇ ಜನಸಾಮಾನ್ಯರು ಜುಂಜಪ್ಪನ ಗಣೆ ಎಂದೇ ಕರೆದು ಪರಿಭಾವಿಸುವ ವಾತಾವರಣದ ನಿರ್ಮಾಣಕ್ಕೆ ಪ್ರೇರಕವಾದವನು.

ಗಣೆ ಮೂಲಕ ಹಾಡುವ ಹಾಗೂ ಗದ್ಯಮಾದರಿಯಲ್ಲಿ ಕಥೆ ಹೇಳುವ ಎರಡೂ ಪ್ರಕಾರಗಳಲ್ಲಿಯೂ ಜುಂಜಪ್ಪನ ಕಾವ್ಯದ ವಸ್ತು ಲಭ್ಯವಿದೆ. ಜೊತೆಗೆ ಹೆಂಗಸರು ಹಾಡುವ ತ್ರಿಪದಿ ರೂಪದ ಮಂಗಳಾರತಿ, ಸೋಬಾನೆ, ವಸಗೆ ಪದಗಳಲ್ಲೂ ವೀರ ಜುಂಜಪ್ಪನ ಸಾಹಿತ್ಯವಿದೆ. ಚೇಳೂರು ಸಮೀಪ ಸಾತೇನಹಳ್ಳಿ, ತಿಗಳರಪಾಳ್ಯ, ಯಣ್ಣೆಕಟ್ಟೆ ಕಡೆಗಳಲ್ಲಿ ಇಂದಿಗೂ ಕೋಲು ಪದಗಳಲ್ಲಿ ಜುಂಜಪ್ಪನ ಕಥೆ ಭಾಗ ಭಾಗವಾಗಿ ಬರುತ್ತದೆ (ನೋಡಿ: ಬಂಡಿ ಬಂದಾವು ಬಾಳೆ ವನದಾಗೆ - ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ, 2010). ಜುಂಜಪ್ಪನ ಬಗೆಗೆ ಸಾಹಿತ್ಯವನ್ನು ಮೊದಲಿಗೆ ಪ್ರಕಟಿಸಿದವರು ಡಾ|| ಜೀಶಂಪ. ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು, ಮಹಾಪ್ರಬಂಧದ ಜುಂಜಪ್ಪನ ಗಣೆ ಕಾವ್ಯ ಎಂದೇ ವಿವರ ನೀಡುತ್ತಾರೆ. ನಂತರ ಕರಾಕೃ ಹಾಗಲವಾಡಿ ಚಿನ್ನಮ್ಮ ಎಂದು ಹೆಂಗಸರ ಹಾಡ್ಗತೆಗಳು ಎಂಬ ಕೃತಿ ಪ್ರಕಟಿಸಿದರು. ಮುಂದೆ ಡಾ|| ಅಂಬಳಿಕೆ ಹಿರಿಯಣ್ಣ 'ಕಾಡುಗೊಲ್ಲರ ಜನಪದ ಗೀತೆಗಳು' ಎಂಬ ಕೃತಿಯಲ್ಲಿ ಜುಂಜಪ್ಪನನ್ನು ಕುರಿತ ಹಾಡುಗಳಿವೆ. 'ಜನಪದ ವೀರಗೀತೆಗಳು' ಎಂಬ ಜನಪದ ಗೀತೆಗಳ ಸಂಕಲನವನ್ನು ಡಾ|| ಕೃಷ್ಣಮೂರ್ತಿ ಹನೂರು ಸಂಪಾದಿಸಿದ್ದು ಇದು ವಿಶೇಷವಾಗಿ ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು ಭಾಗಗಳ ಕ್ಷೇತ್ರ ಕಾರ್ಯದ ಆಧಾರದ ಮೇಲೆ ರಚನೆಯಾಗಿದೆ. ಇದರಲ್ಲಿ ಜುಂಜಪ್ಪ ಎಂಬ ಕಥನಗೀತೆ ಗಮನ ಸೆಳೆಯುತ್ತದೆ. ಸಿದ್ಧಗಂಗಯ್ಯ ಕಂಬದ ಅವರು ಸಂಗ್ರಹಿಸಿ ಪ್ರಕಟಿಸಿರುವ 'ಮಾತಾಡು ಮಲ್ಲಿಗೆ' ಸಂಕಲನದಲ್ಲೂ ಜುಂಜಪ್ಪನನ್ನು ಕುರಿತ ಹಾಡುಗಳಿವೆ. ಡಾ|| ಕಾಳೇಗೌಡ ನಾಗವಾರ ಅವರು ಕಾಡುಗೊಲ್ಲರ ಹಟ್ಟಿಯ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಿದವರು ಜೊತೆಗೆ ಜುಂಜಪ್ಪ ಎಂಬ ಪುಟ್ಟ ಪುಸ್ತಕವನ್ನು ವಯಸ್ಕರ ಶಿಕ್ಷಣ ಸಮಿತಿ ಪ್ರಕಟಿಸಿದೆ. ಕಾಡುಗೊಲ್ಲರ ಸಮಗ್ರ ಸಂಸ್ಕೃತಿಯನ್ನು ಕುರಿತು ಮೊದಲಿಗೆ ವ್ಯಾಪಕ ಸಂಶೋಧನೆ ನಡೆಸಿದವರು ಡಾ|| ತೀ.ನಂ. ಶಂಕರ ನಾರಾಯಣ ಅವರು ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು ಸಂಸೋಧನಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿ

ಕಾಡುಗೊಲ್ಲರ ಸಂಸ್ಕೃತಿ, ಸಾಂಸ್ಕೃತಿಕ ನಾಯಕರ ಬಗೆಗೆ ಆಕರವನ್ನೊದಗಿಸುವ ಮೊದಲ ಕೆಲಸ ಮಾಡಿತು. ಡಾ|| ಮೀರಾಸಾಬಿಹಳ್ಳಿ ಶಿವಣ್ಣನವರು ಎತ್ತಪ್ಪ ಜುಂಜಪ್ಪನ ಸಂಪ್ರದಾಯ ಕುರಿತು ವ್ಯಾಪಕ ಸಂಶೋಧನೆ ನಡೆಸಿದ್ದಾರೆ. ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ ಅವರ 'ಬಂಡಿ ಬಂದಾವು ಬಾಳೆವನದಾಗೆ' ಜನಪದ ಗೀತೆಗಳ ಸಂಕಲನ (2009) ದಲ್ಲೂ ಜುಂಜಪ್ಪನನ್ನು ಆಧರಿಸಿದ ಕೆಲವು ಗೀತೆಗಳನ್ನು ಸಂಗ್ರಹಿಸಿದ್ದಾರೆ. ಇಷ್ಟಾದರೂ ಸಮಗ್ರ ಜೀವನ ಪರಿಚಯಿಸುವ ಜುಂಜಪ್ಪನನ್ನು ಕುರಿತ ಕಾವ್ಯ ಪ್ರಕಟವಾಗಿರಲಿಲ್ಲ. ಆ ಕೆಲಸವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಮೂಲಕ ಚೆಲುವರಾಜು ಮಾಡಿದರು. ಜನಪದ ಮಹಾಕಾವ್ಯ ಎಂದು ಗುರುತಿಸುವುದಕ್ಕೆ ಬೇಕಾದ ಆಕರ ಗ್ರಂಥವೂ ಇದೇ ಆಗಿದೆ. ಈ ಬೃಹತ್ ಕಾವ್ಯವನ್ನು ಮಧುಗಿರಿ ತಾಲ್ಲೂಕಿನ ಮಾಡ್ಗಾನಹಟ್ಟಿಯ ದಾಸಣ್ಣ ಹಾಡಿದ್ದಾರೆ. ಹನ್ನೆರಡು ಸಂದುಗಳಲ್ಲಿ ಬಿಚ್ಚಿಕೊಂಡಿರುವ ಜುಂಜಪ್ಪನ ಕತೆಯೊಂದಿಗೆ ಕಾಡುಗೊಲ್ಲರ ಕುಲಮೂಲ, ಕುರುಬರ ಬೀರೇದೇವರು, ಚಿತ್ರದೇವರ ವೆಂಕಟರಮಣ ಹೀಗೆ ಕತೆಗೆ ಪೂರಕವಾಗಿ ಹಲವು ಪ್ರಸಂಗಗಳನ್ನು ಇಲ್ಲಿ ದಾಖಲಿಸಿದೆ. ಹೀಗಾಗಿ ಪುಸ್ತಕ ಗಾತ್ರ ಬೃಹತ್ ಹಾಗೂ ವಿಸ್ತಾರಕ್ಕೆ ಕಾರಣವಾಗಿದೆ. ಇಂಥ ಸೇರ್ಪಡೆಯನ್ನು ಸಾಮಾನ್ಯವಾಗಿ ಎಲ್ಲ ಗಾಯಕರಿಂದಲೂ ಕಾಣಬಹುದು. ಆದರೂ ನಾನು ಸಂಗ್ರಹಿಸಿರುವ ಕಳುವರಹಟ್ಟಿಯ ತಳವಾರ ತಮ್ಮಣ್ಣ ಹಾಗೂ ಮಣೆಗಾರ ಕದುರಯ್ಯ ಇವರು ಹಾಡಿರುವ ಕಾವ್ಯದಲ್ಲಿ ಜುಂಜಪ್ಪನಿಗೆ ಸಂಬಂಧಿಸಿದ ನೇರ ವಿಚಾರ ಮಾತ್ರ ಪ್ರಕಟವಾಗುತ್ತದೆ. ಕಾಡುಗೊಲ್ಲರ ಉಗಮ, ಬೇರೆ ಬೇರೆ ಜನಾಂಗದೊಂದಿಗಿನ ಇತಿಹಾಸ, ವೆಂಕಟರಮಣ ಮೊದಲಾದ ವೈಷ್ಣವ ಸಂಪ್ರದಾಯ ಸಂಬಂಧಿ ವಿವರಣೆ ಇರುವುದಿಲ್ಲ. ಜೊತೆಗೆ ಇವರು ಜುಂಜಪ್ಪನ ಕತೆಯನ್ನು ಹಾಡಿನ ಮೂಲಕ ಹೇಳುವಾಗ ಗಣೆಯ ಅಗತ್ಯತೆ ಬಯಸುವುದಿಲ್ಲ. ಸಾಮಾಜಿಕ ಜಾತಿ ವ್ಯವಸ್ಥೆಯ ಕೆಳಹಂತದ ಈ ಕಲಾವಿದರ ಕಾಡುಗೊಲ್ಲರು ಗಣೆ ಊದುವುದಿಲ್ಲ ಹಾಗಾಗಿ ಹಾಡುವುದನ್ನು ಹವ್ಯಾಸವಾಗಿ ಮಾತ್ರ ರೂಢಿ ಮಾಡಿಕೊಂಡೆವು ಎಂದು ಈ ಕಲಾವಿದರು ಹೇಳುತ್ತಾರೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಮುಖ್ಯ ಅಂಶವೆಂದರೆ, ಕಾಡುಗೊಲ್ಲ ಸಮಾಜದ ಹತ್ತಾರು ಗಣೆ ಕಲಾವಿದರನ್ನು ನಾನು ಸಂಪರ್ಕಿಸಿ ಕಾವ್ಯ ಹಾಡಿಸಿದ್ದೇನೆ. ಇವರು ಇಡೀ ಕಾವ್ಯವನ್ನು ಹಾಡುತ್ತಾರಾದರೂ ಪುನರಾವರ್ತನೆ, ದೈವ ಸಂಬಂಧಿ ಸ್ಮರಣಿಕೆಗಾಗಿಯೇ ಬಹಳ ಕಾಲ ತೆಗೆದುಕೊಳ್ಳುತ್ತಾರೆ. ಕೆಲವರು ಸ್ವಾಮಿ ಹುಟ್ಟಿನ ಸಂದುವಿನಿಂದ ನೇರವಾಗಿ ಆರಂಭಿಸಿ ಬಡಮ್ಮೆಲನ ಸಂದು, ಹುಲಿಕುಂಟೆ ಸಂದು, ಚೀಳೂರು ರಂಗಣ್ಣನ ಸಂದು, ಪರಸವ್ವನ ಕೆರೆಯ ಸಂದು, ಕಂಬೇರ ನಾಶದ ಸಂದು, ಸ್ವಾಮಿ ಐಕ್ಯದ ಸಂದು ಹೀಗೆ ಭಿನ್ನ ಭಿನ್ನ ರೂಪದಲ್ಲಿ ಹೇಳಿದರೂ ಕತೆಯ ಒಟ್ಟು ಭಾವದಲ್ಲಿ ಬದಲಾವಣೆ ಇರುವುದಿಲ್ಲ.

**ಜುಂಜಪ್ಪ ಕಾವ್ಯಾನುಸಂಧಾನ:**

ಹೊನ್ನಟ್ಟಿ ಆಲೇಗೌಡ ಆತನ ಮಡದಿ ದೊಡ್ಡಮ್ಮ. ಏಳು ಗೂಡಿನ ದನಗಳ ಶ್ರೀಮಂತ. ಸಿರಿತನ, ಹೈನುಗಾರಿಕಾ ಸಂಪತ್ತು ಸಮೃದ್ಧವಾಗಿದ್ದರೂ ಮಕ್ಕಳಿಲ್ಲದ ದಂಪತಿಗಳು ಕಂಗಾಲಾಗಿದ್ದರು. ಆಲೇಗೌಡರು ಹೈನುಗಳೊಂದಿಗೆ ಕಾಡಿಗೆ ಬಂದಾಗ ಪೊದೆಯ ಪಕ್ಕದಲ್ಲಿ ಆಗ ತಾನೇ ಹುಟ್ಟಿದ ನವಜಾತಶಿಶು ಕಣ್ಣಿಗೆ ಬೀಳುತ್ತದೆ. ಸಮೀಪದ ಸಾಲಹಟ್ಟಿಯ ಗೊಲ್ಲರ ಹೆಂಗಸೊಬ್ಬಳು ಬಸಿರಾಗಿ ಹಡೆದು ಮಗುವನ್ನು ಕಾಡಿನಲ್ಲಿ ಮಲಗಿಸಿ ಬಂದಿದ್ದಳು. ಇದಕ್ಕೆ ದೇವರ ಪ್ರೇರಣೆ ಎಂದು ಸಾಮಾನ್ಯವಾಗಿ ಕಾಡುಗೊಲ್ಲರ ಗಾಯಕರ ಮತವಾದರೆ, ಇತರೆ ಜನಾಂಗದವರು ಆಲೇಗೌಡರಿಗೆ ಮಕ್ಕಳಿಲ್ಲದಿರುವಾಗ ನಾನು ಸಾಕಲಾರದ ಮಗುವನ್ನು ಅವರು ಸಾಕುತ್ತಾರೆಂಬ ಬಲವಾದ ನಂಬಿಕೆಯಿಂದಲೇ ಆಕೆ ಮಗುವನ್ನು ಕಾಡಿನಲ್ಲಿ ಮಲಗಿಸಿ ಬಂದಿದ್ದಳೆಂದು ಹೇಳುತ್ತಾರೆ. ಅನಾಥ ಮಗುವನ್ನು ಪ್ರೀತಿಯಿಂದ ತಂದ ಆಲೇಗೌಡ, ಮಡದಿ ದೊಡ್ಡಮ್ಮನಿಗೆ ನೀಡಿ ಪ್ರೀತಿಯಿಂದಲೇ ಸಾಕುತ್ತಾರೆ. ಮಗು ಮನೆಗೆ ಬಂದ ಕಾಲ ಗುಣದಂತೆ ಮನೆಯಲ್ಲಿ ಧನ-ಧಾನ್ಯ, ಹೈನುಗಾರಿಕೆಯಲ್ಲಿ ಹೆಚ್ಚಳವಾಗಿ ಸಿರಿವಂತಿಕೆ ವೃದ್ಧಿಸುತ್ತದೆ. ಮಗು ಕೆಂಪು ಬಣ್ಣದಿಂದ ಕೂಡಿದ್ದುದರಿಂದ ಕೆಂಗುರ ಎಂದೂ ಮಲ್ಲೇಗೌಡ ಎಂದು ಎರಡೂ ಕೂಡಿಸಿ ಕೆಂಗುರ ಮಲ್ಲೇಗೌಡ ಎಂದು ಕರೆದರು. ಬೆಳೆದು ದೊಡ್ಡವನಾಗುತ್ತಾನೆ. ಸಿರಾ ಚಳ್ಳಕೆರೆ ಭಾಗಗಳ ಕಾಡುಗೊಲ್ಲರ ಒಂದು ಪಂಗಡ ಕೆಂಗುರ ಗೊಲ್ಲರು ಕಂಡುಬರುತ್ತಾರೆ. ಕುಲಮೂಲದ ಹಿನ್ನೆಲೆಯಲ್ಲಿಯೂ ಮಗುವಿಗೆ ಈ ಹೆಸರು ಬಂದಿರಬಹುದು. ಕೆಂಗರುಮಲ್ಲೇಗೌಡ ಅಪ್ರತಿಮ ಪಶುಪಾಲಕ ಯೌವನಕ್ಕೆ ಬಂದರೂ ಸ್ತ್ರೀಸಂಬಂಧಿ ಮೋಹಕ್ಕೆ ಒಳಗಾಗದ ಅಚಲತ್ವ ಸ್ತ್ರೀಮೂಲದ ಅಂಟು ಸೂತಕಗಳು ಹೈನುಗಳಿಗೆ ತಾಕಿ ಅವುಗಳಿಗೇನಾದರೂ ಅನಾಹುತ ಬಂದೀತೆಂಬ ಭಯ. ಇಂಥಹುದೇ ಪ್ರಸಂಗವನ್ನು ಜುಂಜಪ್ಪನ ಪರಂಪರೆಯ ಹಿಂದಿನ ತಲೆಮಾರಿನ ದೇವರ ದೈಮಾರ ಎಂಬುವವನಲ್ಲಿ ಕಾಣಬಹುದು. ಈತ ಎಂಥ ಕಟ್ಟುನಿಟ್ಟಿನ ಮನುಷ್ಯನೆಂದರೆ ಈತನಿಗೆ ಮದುವೆ ನಿಶ್ಚಯಿಸಿ ಅಲಂಕರಿಸಿಕೊಂಡು ಹೆಣ್ಣು ಬಂದು ನಿಂತರೂ ಮದುವೆಗೆ ಬಾರದೆ ದನಗಳ ನಡುವೆಯೇ ಉಳಿದ ಧೀರ. ಕೊನೆಗೆ ಈತನ ಹೆಸರೇಳಿ ಬಾಕಿಗೆ ಹೆಣ್ಣನ್ನು ಧಾರೆ ಎರೆದುಕೊಟ್ಟ ಪ್ರಸಂಗ ಪ್ರಕಟವಾಗುತ್ತದೆ. ಕೆಂಗುರ ಮಲ್ಲೇಗೌಡ ಅದೇ ಪರಂಪರೆಯನ್ನು ಅನುಸರಿಸುತ್ತಾನೆ. ಹಾಗಾಗಿಯೇ ಕೆಂಗುರ ಮಲ್ಲೇಗೌಡನ ಮಡದಿ ಚಿನ್ನಮ್ಮ ತಾನು ಮಕ್ಕಳ ಫಲಕ್ಕಾಗಿ ಗೌರಸಂದ್ರದ ಮಾರಮ್ಮನ ಮರೆ ಹೋಗುತ್ತಾಳೆ. ಮಾರಮ್ಮನ ವರದಿಂದ ಹುಟ್ಟಿದವನು ಜುಂಜಪ್ಪ. ಚಿನ್ನಮ್ಮಳ ಬೆನ್ನಿನಿಂದ ಅಲೌಕಿಕ ಶಿಶುವಾಗಿ ಜನಿಸುವ ಜುಂಜಪ್ಪ, ವೀರಭದ್ರನ ಅವತಾರ ಎಂದು ನಂಬುತ್ತಾರೆ. ಇದು ಅಸಾಧ್ಯ ಎನ್ನುವುದರ ನಡುವೆಯೇ ಜುಂಜಪ್ಪ ಮಾಡುವ ಪವಾಡ, ತೋರುವ ಸಾಹಸ, ದುಷ್ಟರನ್ನು ಅಡಗಿಸುವ ಏಕಾಂಗಿತನ

ನಿಬ್ಬೆರಗಾಗಿಸುತ್ತವೆ. ಜುಂಜಪ್ಪನಿಗೆ ಸರಿ ಜೋಡಿಯಾಗಿ ಆತನೆಲ್ಲಾ ಸಾಹಸದ ಹಿಂದೆ ನಿಲ್ಲುವ ಬಡಮೈಲ ಎಂಬ ಹೋರಿ, ಕೇವಲ ಎತ್ತು ಆಗದೆ ಶಿವನ ಮಹಾನಂದಿ. ಇದು ಹುಲಿ, ಕರಡಿಯೊಂದಿಗೆ ಹೋರಾಡುತ್ತಲೇ ಗೋರಕ್ಷಣೆಗೆ ನಿಲ್ಲುವ ಜುಂಜಪ್ಪನಿಗೆ ಸರಿದೊರೆಯಾಗಿ ಹೋರಾಡುವ ಈ ಬಡಮೈಲನ ಸಾಹಸ ಪ್ರಕಟವಾಗುವುದು ಚೇಳೂರು ರಂಗಣ್ಣನ ಸಂಧಿನ ಪ್ರಕರಣದಲ್ಲಿ.

ಕಂಬೇರು ಮಾಟ ಮಾಡಿ ಪರಸಮ್ಮನ ಕೆರೆಯ ನೀರಿನಲ್ಲಿ ಮುಳುಗಿಸಿದ್ದ ಹೊಟ್ಟೇಕರು ಜುಂಜಪ್ಪನ ಆರೈಕೆಯಿಂದಾಗಿ ಬಡಮೈಲನಾಗಿ ಬೆಳೆಯುವುದು ಪೌರಾಣಿಕ ಸಾದೃಶ್ಯವನ್ನು ಹೋಲುತ್ತದೆ. ಈ ಮೂಲಕ ಜುಂಜಪ್ಪ ಸೋದರಮಾವಗಳು (ಕಂಬೇರು) ಮಾಡುವ ಎಲ್ಲ ಬಗೆಯ ಮೋಸ, ಮಾಟ, ಮಂತ್ರ, ತಂತ್ರಗಳೆಲ್ಲಾ ನುಚ್ಚುನೂರಾಗುವುದು ಜುಂಜಪ್ಪನ ಅಸದೃಶ ಶಕ್ತಿ, ಅತಿಮಾನುಷ ಬೆಳವಣಿಗೆಗೆ ಪ್ರೇರಕವೂ ಆಗುತ್ತದೆ.

ಪರಸವ್ವನ ಕೆರೆಯೊಳಗೆ
ಕರಿವಿನಣೆ ಮೇಲೆ ಕಕ್ಕಡ ಅಚ್ಚೈತೆ
ಕಾದೆಣ್ಣೆ ಮುಸುಣೆ ಮೇಲೆ ಬಿದ್ರೆ
ಅಂಬಾ ಅಂಬಾ ಅಂತ ಕರ ಬಾಯ್ತೆರೀತೈತೆ
ಮೇಕ್ಕ ನೆಗೆಗೈತೆ, ನೀರು ಕುಡಿತೈತೆ ವಟ್ಟೇಕರ
ಜುಂಜಪ್ಪನಿಗೆ ಸಿಟ್ಟು ಬಂದು ಜಾಡ್ಸಿ ವದ್ದ[4]

ಹೀಗೆ ನೀರಿನಲ್ಲಿ ಮುಳುಗಿಸಿ ಸಾಯಿಸುತ್ತಿದ್ದ. ಈ ಮೂಲಕ ರೋಗ ಹರಡಿಸಿ, ಜುಂಜಪ್ಪನ ದನಗಳನ್ನು ನಾಶಮಾಡುವುದು ಕಂಬಿಗೊಲ್ಲರ (ಸೋದರಮಾವಂದಿರ) ಉದ್ದೇಶ. ಆದರೆ ಇದು ತಿರುಗುಬಾಣವಾಗಿ ಜುಂಜಪ್ಪನ ದನಗಳು ಏಳು ಗೂಡಾಗಿ ಬೆಳೆಯುವುದು. ಕಂಬೇರಗೋವುಗಳು ನಾಶವಾಗುತ್ತವೆ. ಇದು ಸೋದರಮಾವಂದಿರಿಗೆ ಸಹಿಸಲಸಾಧ್ಯವಾದ ವೇದನೆ ಉಂಟಾಗಿ ಹಂತ ಹಂತವಾಗಿ ಜುಂಜಪ್ಪನ ಮೇಲೆ ಮತ್ಸರ ತೋರುತ್ತಾ ಸಾಗುತ್ತಾರೆ. ಮತ್ತೊಂದು ಪಠ್ಯದಿಂದ ಹುಲಿಕುಂಟೆ ಕೆರೆಗೆ ನೀರು ಕುಡಿಯಲು ಬರುವ ರಾಸುಗಳಿಗೆ ರೋಗ ತಗುಲಿ ಸಾಯಲೆಂದು, ಕಂಬೇರು ರೋಗದ ಕರುವನ್ನು ಕೆಸರಲ್ಲಿ ಸಿಕ್ಕಿಸಿ, ಮೇಲೆ ಬಾರದಂತೆ ಮಾಡುತ್ತಾರೆ. ಇಂಥ ಅಸಹಾಯಕ ಸ್ಥಿತಿಯಲ್ಲಿದ್ದ ಕರುವನ್ನು ಜುಂಜಪ್ಪ ಮೇಲೆತ್ತಿ ಆತನ ಗೋವುಗಳೊಂದಿಗೆ ಮೇಯಿಸುವ ಚಿತ್ರವನ್ನು ಕೊಡುತ್ತಾರೆ. ಬಡಮೈಲನ ಸಾಹಸದೊಂದಿಗೆ ಜುಂಜಪ್ಪನ ಪರಾಕ್ರಮ ಪ್ರಕಟವಾಗುವುದು ಚೇಳೂರ ರಂಗಣ್ಣನ ಸಂದುವಿನ ಪ್ರಸಂಗದಲ್ಲಿ ಸಿರಾ ಸೀಮೆಗೆ ಬರಗಾಲ ಬಂದು ದನಗಳ ಹುಲ್ಲು ನೀರಿಗಾಗಿ ಜುಂಜಪ್ಪ ತನ್ನ ತಮ್ಮಂದಿರಾದ ಮಾರಣ್ಣ, ಮೈಲಣ್ಣರೊಂದಿಗೆ ಚೇಳೂರು ಸೀಮೆಗೆ

ಬರುವುದು, ಆ ಸಂದರ್ಭದಲ್ಲಿ ಚೇಳೂರು ರಂಗಣ್ಣ ಎಂಬ ಪಾಳೆಯಗಾರನ ಆಳ್ವಿಕೆಗೆ ಒಳಪಟ್ಟಿತ್ತೆಂದು ಕಾವ್ಯ ಉಲ್ಲೇಖಿಸುತ್ತದೆ. ಈ ಮೂಲಕ 15-16ನೇ ಶತಮಾನದಲ್ಲಿನ ವಿಜಯನಗರದ ಪತನಾ ನಂತರ ತಲೆ ಎತ್ತಿದ ಪಾಳೆಯಗಾರರ ಸಂಸ್ಕೃತಿ ಆ ಸಂದರ್ಭ ಪಶುಪಾಲನೆ, ಬೇಡರು-ಗೊಲ್ಲರ ತುರುಗೋಳ್ ಮಾದರಿಯ ಕಲಹ ಇವುಗಳ ಸ್ಪಷ್ಟ ಚಿತ್ರಣವನ್ನು ಜುಂಜಪ್ಪನ ಕಥೆ ತೋರಿಸಿಕೊಟ್ಟಿದೆ. ಸಾಮಾನ್ಯ ಎತ್ತೊಂದು ಅಸಾಧಾರಣವಾದ ರೀತಿಯಲ್ಲಿ ಚೇಳೂರಿನ ರಂಗಣ್ಣನ ಕೋಟೆ ಅರಮನೆ ನಾಶ ಮಾಡುವ ಮೂಲಕ ಬಡಮೈಲ - ಜುಂಜಪ್ಪನ ಬಸವನ ಸ್ವರೂಪ ಪಡೆದು, ರೈತಾಪಿ ವರ್ಗದವರೂ ಸೇರಿದಂತೆ ಎಲ್ಲ ವರ್ಗದವರ ಗೌರವಾದರ, ಪೂಜ್ಯತೆಗೆ ಒಳಗಾಗುವುದು ವಿಶೇಷ.

> ಗಾಜಿನ ಗೋಡೆ ತಿರುವಿತು ಚೇಳೂರ ಕಾವಲಿಗೆ
> ಆ ಕಾವಲು ಮುಂದೆ ನಿಂತ್ಕಂಡು ಜುಂಜಪ್ಪನ ಬಸವ
> ಕಾಲ್ಕೆರೆದು ಉಡ್ರಿಕೆ ಹೊಡೆದೇಟಿಗೆ
> ನರಲೋಕ, ಸುರಲೋಕ ದೇವಲೋಕವೆಲ್ಲಾ
> ಅಲ್ಲಾಡೋತು ।
> ಬಸವ ಕೊಂಬು ತೂರ್‍ಸಿ ಗಾಜಿನ ಗೋಡೆ ಎತ್ತಿ ಕುಕ್ಕುಬಿಡ್ತು
> ಕಾವಲೊಳಗೆ ನುಗ್ಗಿದ ಬಸವ ಉಡ್ರಿಕೆ ಹಾಕಿ ದನ ಕರೆದ
> ಜುಂಜಪ್ಪನ ದನ ಚೇಳೂರ ಕಾವಲಾಗೆ
> ನೂರಾ ಅರವತ್ತೆಂಟು ಎಕರೆ ಹುಲ್ಲುಗಾವಲು
> ಅಷ್ಟರೊಳಗೆ ಜುಂಜಪ್ಪನ ದನ ಈಜಾಡಿಕೊಂಡು ಮೇದವೋ ।

ಇಲ್ಲಿಂದ ಜುಂಜಪ್ಪ, ವಿಜೃಂಭಿಸುವ ದನಗಳ ಸೇವೆಯಲ್ಲಿ ಸಕ್ರಿಯನಾಗುವುದನ್ನು ಕಾಣಬಹುದು. ಹಾಗಾಗಿಯೇ ಕಾವ್ಯದಲ್ಲಿ ಜುಂಜಪ್ಪನನ್ನು 'ಆವಿನ ಭೋಗಿ' ಎಂದು ಕರೆಯಲಾಗುವುದು. ಈ ಬಗೆಯ ಜುಂಜಪ್ಪ ಬೆಳವಣಿಗೆ ಕಂಬೇರಗೊಲ್ಲರಿಗೆ ಒಂದು ಬಗೆಯ ಮಗ್ಗಲಮುಳ್ಳಾಗಿ ಪರಿಣಮಿಸುತ್ತದೆ. ಜುಂಜಪ್ಪನ ನಿಯಂತ್ರಣಕ್ಕೆ ಇನ್ನಿಲ್ಲದ ಹುನ್ನಾರು ನಡೆಸುತ್ತಾರೆ. ಅದರಲ್ಲಿ ಚೇಳೂರು ರಂಗಣ್ಣನೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬಡಮೈಲ ಹೋರಿಯನ್ನು ಅಪಹರಿಸುವುದು. ತವರಿಗೆ ಬಂದ ಜುಂಜಪ್ಪನ ಇಲ್ಲದಿರುವಿಕೆಯನ್ನು ಗ್ರಹಿಸಿದ ಪಾಳೆಯಗಾರರು ಕುತಂತ್ರದಿಂದ ಬಡಮೈಲನನ್ನು ಹಿ ಡಿದೊಯ್ದು ಚೇಳೂರ ಊರ ಮುಂಭಾಗದ ನಿಲುವುಗಲ್ಲಿಗೆ ಸರಪಳಿಯಿಂದ ಬಿಗಿದು ತರತರದ ಹಿಂಸೆ ಕೊಡುತ್ತಾರೆ.

ಚೇಳೂರೆಂಬುದು ಏಳು ಸುತ್ತಿನ ಕ್ವಾಟೆ
ಪಕ್ಷಿ ಹಾರಿದರೆ ಗಳಿರೆಂಬೋ ಕ್ವಾಟೆಗೆ
ಹೊಕ್ಕನಲ್ಲಮ್ಮೆ ಬಡಮೈಲ[9]

ತವರಿನಲ್ಲಿದ್ದ ಜುಂಜಪ್ಪನಿಗೆ ತಾನು ಸ್ನಾನ ಮಾಡುವ ಎಣ್ಣೆಯ ಮಗಿಯಲ್ಲಿ ಚೇಳೂರಾಗಿ ಬಿಗಿದ ಹೋರಿಯ ಚಿತ್ರ ಕಾಣುತ್ತದೆ. ಕೂಡಲೇ ಎದ್ದು ಬಂದ ಜುಂಜಪ್ಪ ಮಂಚಲದೊರೆಯ ಮದಗದ ಮೇಲೆ ನಿಂತು ಗಣೆ ಊದಿ ಹೀಗೆ ಕರೆಯುತ್ತಾನೆ.

ಕಲ್ಲು ಕಂಬ ಮುರಿಯೋ ಕಬ್ಬುನದ ಸರ ಹರಿಯೊ
ಮುದ್ದು ಚೇಳೂರ ತೆನೆ ಮುರಿಯೊ
ಗೆದ್ದು ಬಾರೋ ಚೇಳೂರ ಬಯಲಾಗೆ [11]

ಜುಂಜಪ್ಪನ ಈ ಬಗೆಯ ಗಣೆಯ ಧ್ವನಿ ಅಪ್ಪಳಿಸಿದ ತಕ್ಷಣ ಮಂಕಾಗಿದ್ದ ಬಸವನಿಗೆ ಪುನರ್ ಜೀವ ಬಂದಂತಾಗುತ್ತದೆ. ನಿಜವಾದ ರುದ್ರನ ಆರ್ಭಟ ತೋರುತ್ತದೆ. ಕಾಲು ಕೆರೆದು, ಬಾಲ ನಿಗುರಿಸಿ ಉಡ್ಡರಿಕೆ ಹೊಡೆದು, ಕಲ್ಲು ಕಂಬಕ್ಕೆ ಕಟ್ಟಿದ್ದ ಕಬ್ಬಿಣದ ಸರಪಳಿಯನ್ನು ಜಾಡಿಸಿದ ಕೂಡಲೇ ಕಂಬ ಮುರಿದು ಮೂರು ತುಂಡಾಗಿ ಬೀಳುತ್ತದೆ. ಬಡಮೈಲ, ಕೋಟೆ ಹಾರುವಾಗ (ನೆಗೆದಾಗ) ಕೋಟೆ ಗೋಡೆಯೆಲ್ಲಾ ಬಿದ್ದುಹೋಗುತ್ತದೆ. ಬಸವ ಉಡ್ರಿಕೆ ಹೊಡೆದ ರಭಸಕ್ಕೆ ಚೇಳೂರು ರಂಗಣ್ಣ ಗರ್ಭಿಣಿ ಹೆಂಡತಿ ನೆಲಕ್ಕೆ ಬಿದ್ದು ಆಕೆಯ ಹೊಟ್ಟೆಯ ಒಳಗಿದ್ದ ಪಿಂಡಗಳು ನೆಲಕ್ಕೆ ಬಿದ್ದವು ಎಂದೆಲ್ಲಾ ಕಾವ್ಯಭಾಗದಲ್ಲಿ ವರ್ಣನೆಗೊಂಡಿದೆ. ಹೀಗೆಯೇ ಚೇಳೂರು ಜುಂಜಪ್ಪನ ಕೈವಶವಾಗುತ್ತದೆ. ಐದು ತಿಂಗಳ ಕಾಲ ಜುಂಜಪ್ಪ ಚೇಳೂರಿನ ಒಡೆತನ ಮಾಡಿದುದಾಗಿಯೂ ಪ್ರಕಟವಾಗುತ್ತದೆ. ನಂತರ ನಮ್ಮದಲ್ಲದ ವಸ್ತು ನಮಗೆ ಬೇಡ ಎಂದ ಜುಂಜಪ್ಪ ಚೇಳೂರನ್ನು ರಂಗಣ್ಣನಿಗೆ ಒಪ್ಪಿಸಿ ತನ್ನ ಪರಿವಾರದೊಂದಿಗೆ ಸೀರ್ಯಾ ಸೀಮೆಗೆ ಹಿಂತಿರುಗಿದ ಸತ್ಯವಂತಿಕೆಯೂ ಪ್ರಕಟವಾಗುವುದರ ಜೊತೆಗೆ ಸೀರ್ಯಾದ ಪಾಳೆಯಗಾರರ ಪ್ರಸ್ತಾಪವೂ ಬರುತ್ತದೆ. ಆಲೇಗೌಡರ ಮಡದಿ ದೊಡ್ಡಮ್ಮ ಪಾಳೆಯಗಾರನೊಂದಿಗೆ ಅನೈತಿಕ ಸಂಬಂಧ ಹೊಂದಿದ್ದು, ಜುಂಜಪ್ಪ ಅದನ್ನು ಪರಿಹರಿಸಿದ ವರ್ಣನೆಯ ಸಂದರ್ಭ; ಜುಂಜಪ್ಪ ಸಿರಾ ಪಾಳೆಯಗಾರರ ಆಳ್ವಿಕೆಯ ಸಂದರ್ಭ ಅಂದರೆ ಕ್ರಿ.ಶ.1569 ರಿಂದ (ಹರತಿ ಲಕ್ಷ್ಮೀಪತಿನಾಯಕ), ರಂಗಪ್ಪನಾಯಕ (1580), ಇಮ್ಮಡಿ ರಂಗಪ್ಪನಾಯಕ (1612), ಮುಮ್ಮಡಿ ರಂಗಪ್ಪನಾಯಕ (1626) ಈ ಅವಧಿಯಲ್ಲಿ ಬಾಳಿದವನಾಗಿರಬೇಕು. ಪಶುಪಾಲನೆ, ಕಾಡಿನ ಚಿತ್ರಣ ಇವುಗಳ ವರ್ಣನೆಯೂ ಅದೇ ಕಾಲಕ್ಕೆ ಹೊಂದಿಕೊಳ್ಳುವ ಎಲ್ಲ ಸೂಕ್ಷ್ಮತೆಗಳು ಜುಂಜಪ್ಪನ ಕಾವ್ಯದಲ್ಲಿ ನಿಚ್ಚಳವಾಗಿ ಪ್ರಕಟವಾಗುತ್ತವೆ.

ತಾಳೆದುರ್ಗಿಯ ಪ್ರಸಂಗ, ಜುಂಜಪ್ಪನಿಗೆ ಸೋದರಮಾವಂದಿರು ನೀಡುವ ಉಪಟಳದ ತೀವ್ರತೆಯ ಒಂದು ಭಾಗ. ತಾಳೆದುರ್ಗಿಗೆ ಒಡ್ಡುವ ಗಬ್ಬದ ಕುರಿ, ಬಣ್ಣದ ಸೀರೆ, ಮೂರು ಖಂಡುಗ ಅಕ್ಕಿಯ ಅನ್ನ ಇಷ್ಟೊಂದು ಹರಕೆ ಕೊಟ್ಟು ಜುಂಜಪ್ಪನನ್ನು ಕೊಲ್ಲುವಂತೆ ತಾಳೆದುರ್ಗಿಯಲ್ಲಿ ಮೊರೆಹೋಗುವ ಕಂಬೇರು, ಕುತಂತ್ರ ಆರಂಭದಲ್ಲಿ ಫಲ ನೀಡಿದರೂ ಕೊನೆಯಲ್ಲಿ ಪ್ರತಿ ತಂತ್ರವಾಗಿ ಗೌರಸಂದ್ರದ ಮಾರೆವ್ವನ ನೆರವು, ಪುರಲೇಹಳ್ಳಿ ಭೂತಪ್ಪನ ಸಹಾಯದಿಂದ ತಾಳೆದುರ್ಗಿಯ ಹೊಟ್ಟೆ ಸೇರಿದ ಜುಂಜಪ್ಪ ಮರಳಿ ಆಕೆಯ ಹೊಟ್ಟೆ ಸೀಳಿಕೊಂಡು ಹೊರಬರುವುದು, ಪೌರಾಣಿಕ ಆಶಯದಂತೆ ಕತೆ ಬೆಳೆಯುತ್ತಾ ಸಾಗುತ್ತದೆ.

ಅವನು ಏನು ಮಾಡಿದರೂ ಬಗ್ಗಲ ತಗ್ಗಲ್ಲ
ಜುಂಜಪ್ಪನ ವಂಶ ನಾಶನೇ ಆಗವಲ್ಲದು
ಅವರು ಮೂವರು ಅಣ್ಣತಮ್ಮಗೋಳ್ನ
ಬಾಳೆಹಣ್ಣು ಸುಲ್ದು ನುಂಗಿದಂತೆ ನುಂಗಿ
ನಮ್ಗೆ ರಕ್ಷಣೆ ಕೊಡಬೇಕಮ್ಮ ಅಂದು
ದುರ್ಗಿನ ಮರೆಹೋದ್ರು ಕಂಬೇರಗೊಲ್ಲರು[12]

ಈ ಬಗೆಯ ಹರಕೆ, ಪ್ರಾರ್ಥನೆಗಳಿಂದ ಒಲಿದ ತಾಳೇದುರ್ಗಿ ಕೊನೆಗೆ ನಾಶವಾಗುವುದರೊಂದಿಗೆ ಜುಂಜಪ್ಪನ ದೈವಬಲದೊಂದಿಗೆ ಆತನ ವಿಶಿಷ್ಟ ಪವಾಡದ ರೂಪವೂ ಬಯಲಾಗುತ್ತದೆ. ಜೊತೆಗೆ ಸಿರಾ ಕಳುವರಹಳ್ಳಿ ನಡುವೆ ಪುರಲೇಹಳ್ಳಿಯಲ್ಲಿ ನೆಲೆಸಿರುವ ಭೂತಪ್ಪನ ಉಗಮ, ಪ್ರಸಿದ್ಧಿ ಗೂ ಪ್ರೇರಕವಾಗುತ್ತದೆ. ಇಂದಿಗೂ ಜುಂಜಪ್ಪನಿಗೆ ನೈವೇದ್ಯವಾಗಿ ನೆನೆ ಅಕ್ಕಿ, ನೆನೆಗಡಲೆ, ಹಾಲು-ತುಪ್ಪ ಹಣ್ಣು ಪ್ರಸಾದವಾದರೆ ಭೂತಪ್ಪನಿಗೆ ನಿತ್ಯವೂ ಮಾಂಸದ ಅಭಿಷೇಕ. ಜುಂಜಪ್ಪನ ಜಾತ್ರೆಯನ್ನು ಮೀರಿಸುವ ಹಾಗೆ ಜನ ಸಾಗರದ ಮಾದರಿಯಲ್ಲಿ ಪ್ರತಿ ಮಂಗಳವಾರ, ಶುಕ್ರವಾರ ಜನ ಸೇರುತ್ತಾರೆ. ಜುಂಜಪ್ಪನಿಗೆ ಸೋಮವಾರ ಮಾತ್ರ ಸರಳವಾದ ಪೂಜೆ ನಡೆಯುತ್ತದೆ. ಜುಂಜಪ್ಪನ ಕಾವ್ಯದ ರೋಚಕ ಪ್ರಸಂಗಗಳಲ್ಲಿ ಒಂದಾದ ಸಾಣೆಕೆರೆ ಪುಟ್ಟಾಚಾರಿ ಪ್ರಸಂಗ, ಜುಂಜಪ್ಪನ ಅಪ್ರತಿಮ ಸಾಹಸ, ಚಮತ್ಕಾರಿಕೆಗಳ ಜೊತೆಗೆ ಮಾಟ, ಮಂತ್ರ, ವಶೀಕರಣಗಳಿಂದ ಜನಸಾಮಾನ್ಯರಿಗೆ ಸಿಂಹಸ್ವಪ್ನವಾಗಿದ್ದ ಪುಟ್ಟಾಚಾರಿಯುನ್ನು ಸದೆಬಡಿದದ್ದು, ದೇವೇಂದ್ರನಂಥ ದೇವಾನುದೇವತೆಗಳೂ ಪುಟ್ಟಣ್ಣನ ವಶೀಕರಣ ವಿದ್ಯೆಯ ಪೈಶಾಚಿಕತೆಗೆ ಬೆದರಿದ್ದರು.

ಸತ್ಯಲೋಕದಲ್ಲಿರ‍್ಕಂತ ದೇವೇಂದ್ರನಿಗೆ
ಕೀಲು ಮೈಕೈ ಕಾಲುಗಳೆಲ್ಲಾ ಬಾದಿಸಿದಂಗೆ

ಇಡಿದ್ಬಿಟ್ಟವಂತೋ। ಮಾಟನೇ ಮಾಡಿಸೆವನೋ
ಸೂನ್ಯನೇ ಮಾಡಿಸ್ಯಾನೆ ಪುಟ್ಟಾಚಾರಿ[13]

ಇಂಥ ಪುಟ್ಟಾಚಾರಿ ಊರಿನ ಯಾವೊಬ್ಬ ಪುರುಷರಿಗೂ ಪೌರುಷವೇ ಇದ್ದಂತೆ ಮಾಡಿ, ಕಾಳಿಯ ವಶೀಕರಣದಿಂದ ಅವರನ್ನು ನಿರ್ವೀರ್ಯಗೊಳಿಸುವುದಲ್ಲದೆ ಪರಸ್ತ್ರೀಯರ ಮಿಂಡನಾಗಿ ಮೆರೆಯುವ ಆಚಾರಿಗೆ ಜುಂಜಪ್ಪ ನಾಗರಹಾವಾಗಿ ಕುಟುಕಿ ಸಾಯಿಸುವುದು ತುಂಬಾ ವಿಚಿತ್ರಕರವಾಗಿ ಕಾಣುತ್ತದೆ. ಮತ್ತೆ ಈತನ ಮಗನನ್ನೂ ಸಾಯಿಸಿ ನಂತರ ಬದುಕಿಸುವ ಜುಂಜಪ್ಪ ತುಂಬಾ ಉದಾರವಾಗಿ ನಡೆದುಕೊಳ್ಳುವುದನ್ನು ಕಾಣಬಹುದು. ದುಷ್ಟರಿಗೆ ದುಷ್ಟನಾದ ಜುಂಜಪ್ಪ ದೈನಾಸಿ ಬಂದವರಿಗೆ ಅಭಯ ನೀಡಿ ರಕ್ಷಕನಾಗಿ ಅವರ ಸಹಾಯಕ್ಕೆ ನಿಲ್ಲುವುದನ್ನು ಕಾಣಬಹುದು. ಇಂಥ ಕಡೆಗಳಲ್ಲಿ ಶತ್ರುವಿನ ನಾಶ, ಅವರ ಆಸ್ತಿಯ ಬಗೆಗೆ ಮೋಹ ಪಡದೆ ಇರುವುದು ಕಾಡುಗೊಲ್ಲ ಸಂಸ್ಕೃತಿಯ ಹಿರಿಮೆಯ ಪ್ರತೀಕವಾಗಿದೆ. ಚೇಳೂರು ರಂಗಣ್ಣನ ಸಂಧಿನ ಪ್ರಸಂಗವೂ ಹಾಗೆಯೇ ನಡೆಯುತ್ತದೆ. ರಂಗಣ್ಣನನ್ನು ಸದೆಬಡಿದು ಚೇಳೂರು ಕೋಟೆಯನ್ನು ಆರು ತಿಂಗಳುಗಳ ಕಾಲ ಆಳಿದರೂ, ಅವರ ನೆಲವನ್ನು ಅವರಿಗೇ ಬಿಟ್ಟು ಸೀರ್ಯಾ ಸೀಮೆಗೆ ಬರುವ ಜುಂಜಪ್ಪ ಸಂಗ್ರ, ಪ್ರಭುತ್ವ ನೆಲೆಯಿಂದ ಹೊರಗೆ ನಿಂತ ಜಂಗಮರೂಪಿ.

ಪಶುಪಾಲನೆಗೋಸ್ಕರ ತಮ್ಮ ಇಡೀ ಬದುಕನ್ನು ಧಾರೆಯೆರೆದುಕೊಂಡ ಜುಂಜಪ್ಪ 15-16 ನೇ ಶತಮಾನದ ಪಶುಪಾಲನಾ ಸಂಸ್ಕೃತಿಯ ಪ್ರತೀಕ. ಮಾತ್ರವಲ್ಲ ಪಶುಪಾಲಕ ವೃತ್ತಿಯೊಂದಿಗೆ ಕಾಡು, ಗಿಡ-ಮರ ಈ ಸಸ್ಯಸಂಬಂಧಿಗಳೊಂದಿಗಿನ ಆತ್ಮೀಯ ಬಾಂಧವ್ಯ, ಒಡನಾಟ ಈ ಮೂಲಕ ಪರಿಸರ ಸಂರಕ್ಷಕರಾಗಿಯೂ ಕಂಡುಬರುತ್ತಾನೆ. ಇದೇ ಪರಂಪರೆಯನ್ನು ಅರ್ಥಪೂರ್ಣವಾಗಿ ಮುಂದುವರಿಸಿಕೊಂಡು ಬರುತ್ತಿರುವ ಕಾಡುಗೊಲ್ಲ ಜನಾಂಗ ಪ್ರಾಣಿಗಳಿಗೆ ಮೈಲಿಗೆಯ - ಸೂತಕದ ಕಾಟ ತಟ್ಟಬಾರದೆಂದು ಇಂದಿಗೂ ರಜತಾದಿ ಸೂತಕಗಳ ವಿಚಾರದಲ್ಲಿ ಬಿಗಿಯಾದ ಕಟ್ಟು-ಕಟ್ಟಳೆಯನ್ನು ವಿಧಿಸಿಕೊಂಡಿರುವುದು. ಹೆರಿಗೆ, ಮೈ ನೆರೆಯುವುದು ಕೊನೆಗೆ ಮಾಸಿಕ ಮುಟ್ಟಿನ ಸಂದರ್ಭಗಳಲ್ಲೂ ತಮ್ಮ ಹಟ್ಟಿಗಳಿಂದ ಹೊರಗೆ ಹೋಗುವ, ತಮ್ಮ ಹೆರಿಗೆಯನ್ನು ತಾವೇ ಮಾಡಿಕೊಳ್ಳುವ ಪರಿಸ್ಥಿತಿ ಇಂದಿಗೂ ಕಾಡುಗೊಲ್ಲರ ಹಟ್ಟಿಗಳಲ್ಲಿ ಬಳಕೆಯಲ್ಲಿದೆ. ಇದಕ್ಕೆ ಪೂರಕವಾಗಿ ವಿದ್ವಾಂಸರ ಅಭಿಪ್ರಾಯಗಳೂ ಇದನ್ನೇ ಸಮರ್ಥಿಸುತ್ತವೆ.

ಜುಂಜಪ್ಪನ ಪುರಾಣ ಸಾಹಿತ್ಯ, ಮಾನವ ವಿಜ್ಞಾನ ಹಾಗೂ ಜಾನಪದ ದೃಷ್ಟಿಯಿಂದ ಬೆಲೆಯುಳ್ಳ ಅನೇಕ ಅಂಶಗಳನ್ನು ಒಳಗೊಂಡಿದೆ. ಕಾಡುಗೊಲ್ಲರ ಆಹಾರ, ಉಡುಪು, ಕಸುಬು, ಆಭರಣಗಳು, ಹುಟ್ಟು, ಸಾವು, ಮದುವೆ ಮೊದಲಾದ ಸಾಂಸ್ಕೃತಿಕ ಅಂಶಗಳಿಗೆ

ಸಂಬಂಧಿಸಿದ ಅನೇಕ ವಿಷಯಗಳಿವೆ. ಇವುಗಳನ್ನು ಕಾಡುಗೊಲ್ಲರ ಸಂಸ್ಕೃತಿಯ ಆದರ್ಶ ವಿನ್ಯಾಸಗಳು (Ideal Patterns) ಮತ್ತು ಕಡ್ಡಾಯ ವಿನ್ಯಾಸಗಳು (Compulsory Patterns)[14] ಎಂದು ಹಿರಿಯ ವಿದ್ವಾಂಸ ಡಾ|| ತೀ.ನಂ.ಶಂಕರನಾರಾಯಣ ಅವರ ಅಭಿಪ್ರಾಯ ಸಮರ್ಥನೀಯವಾಗಿದೆ. ಶಿಷ್ಟ ಕಾವ್ಯಗಳಂತೆಯೇ ಜನಪದರ ಆಶಯವೂ ಸಾಂಸ್ಕೃತಿಕ ನಾಯಕರ ಬಗೆಗಿನ ಆಶಯ ಏಕಮುಖವಾಗಿಯೇ ಪ್ರಕಟವಾಗುತ್ತದೆ. ವೀರನಾಗಿ, ಸಾಧುವಾಗಿ, ಅವತಾರ ಎತ್ತಿ ಸಂಕಷ್ಟಗಳನ್ನು ಕ್ಷಣಮಾತ್ರದಲ್ಲಿ ಎದುರಿಸುತ್ತಿದ್ದ ಜುಂಜಪ್ಪನ ಅಂತ್ಯ ಮಾತ್ರ ಮರುಕ ತರಿಸುತ್ತದೆ. ಸಾಮಾನ್ಯ ಮನುಷ್ಯರ ಥರದಲ್ಲಿಯೇ ನಡೆಯುವುದು ಈ ಕಾವ್ಯದ ವೈಶಿಷ್ಟ್ಯ. ಇದು ಶ್ರೀಕೃಷ್ಣನ ಅಂತ್ಯವನ್ನು ನೆನಪಿಸುವಂಥದ್ದು.

ಹೀಗೆ ಅಪರೂಪಕ್ಕೆ ಬಂದ ಸೋದರಮಾವನಿಗೆ ಮಾವನ ಮಕ್ಕಳು ಪ್ರೀತಿಯಿಂದ ಬರಮಾಡಿಕೊಳ್ಳುವುದು, ಆರತಿ ಬೆಳಗುವುದು ಕಾಡುಗೊಲ್ಲರ ಸಂಸ್ಕೃತಿಯಲ್ಲಿ ಅಪರೂಪದ ಸಂದರ್ಭಗಳಲ್ಲಿ ಇಂದಿಗೂ ಜರುಗುವ ಪ್ರಸಂಗಗಳು. ಜೊತೆಗೆ ತನ್ನ ಅಕ್ಕನ ಮಕ್ಕಳನ್ನು ಆದರದಿಂದ ಕಂಡು, ತನ್ನ ತಂಗಿಯಿಂದಲೇ ವಿಷದ ಸಾರು ನೀಡಿ ಕೊಲ್ಲುವ ಎಣಿಕೆಯನ್ನು ಜುಂಜಪ್ಪನ ಸೋದರಿ ಮಾರಕ್ಕನಿಂದಲೇ ಮಾಡಿಸುವ ಪ್ರಯತ್ನ ಸಫಲವಾಗದಿದ್ದರೂ ಸರದಿ ಸಾಲಿನಲ್ಲಿ ಕೂರಿಸಿ, ತಿಳಿಯದಂತೆ ವಿಷವುಣಿಸುವ ಕಾಡುಗೊಲ್ಲರ ವರ್ತನೆಯನ್ನು ಕಾವ್ಯ ಹೀಗೆ ವಿವರಿಸುತ್ತದೆ:

ಪ್ರಜೆಪಾಲಕರಿಗೆಲ್ಲ ಒಬ್ಬ ನೀಡಿಕೊಂಡು ಹೋಗೆವನೆ
ಸಾರು ಬಿಟ್ಟುಕೊಂಡೇ ಹೋಗ್ತಾನೆ
ಜುಂಜಪ್ಪ ತಮ್ಮಗಳ ಹತ್ತಿರ ಬರುವಾಗ
ಒಬ್ಬ ಬೇರೆ ಸಟುಗ ತಂದು ವಿಷದೆಸರಿಗೆ
ಸೌಟಿಕ್ಕಿ ಸಾರು ಬಿಟ್ಟು ಆಚೆ ಹೋಗಿ ಕೈ ತೊಳಕಂಬುತಾನೆ
ಮೈಗೆ ಸೋಕಿದರೆ ಸುಡುವಂಥ ವಿಷ ಬೆರೆತ
ಊಟಾನ ಜುಂಜಪ್ಪ ಉಂಬುತ್ತಾನೋ ।
ಮೂರು ತುತ್ತು ಮಿದಿಕೆ ಮಾಡಿ ಜೂಲು ನಾಯಿಗೆ
ಹಾಕಿದರೆ ಜುಂಜಪ್ಪ । ತಿಂದು ಮೇಲಕ್ಕೆ ಹಾರಿ
ಬಿದ್ದು ಪ್ರಾಣನೆ ಬಿಟ್ಟಿತು ಜೂಲನಾಯಿ[17]

ಜುಂಜಪ್ಪ ವಿಷದ ಕಜ್ಜಾಯ ತಿಂದನು, ಎಕ್ಕದ ಹಾಲು ಕುಡಿದನು, ಸೋದರರಿಗೂ ತಿನ್ನಿಸಿದನು. ವಿಷಯ ತಿಳಿದರೂ ಹೆದರಲಿಲ್ಲ ಅಧೀರನೂ ಆಗಲಿಲ್ಲ. ಆದರೆ ರಕ್ತಸಂಬಂಧ. ಕಂಬೇರ ಹೆಣ್ಣುಮಕ್ಕಳು ತೀವ್ರವಾಗಿ ರೋಧಿಸಿದರು. ಕಂಬೇರಿಗೆ ಒಂದು ಕಡೆ ಗೆದ್ದ

ವಿಜಯ, ಮತ್ತೊಂದು ಕಡೆ ಸಾವಿನ ಸೂತಕದ ಭಯ. ಒಂದೇ ಕುಟುಂಬದ ಕುತೂಹಲಕಾರಿ ಬೆಳವಣಿಗೆಗಳು.

ಊಟ ತೀರಿಸಿಕೊಂಡು ತಮ್ಮಂದಿರೊಂದಿಗೆ ಹೊರಟ ಜುಂಜಪ್ಪ ಹೊನ್ನಹಟ್ಟಿ ಆಲೇಗೌಡರ ಆರಕದ ಹುಲ್ಲಿನ ಬಣವೆಯ್ನನು ಹೊಕ್ಕನು. ಮೊದಲಿಗೆ ಸಾವಿನ ಮಂಪರಿನಲ್ಲಿದ್ದ ತಮ್ಮಂದಿರ ಮೇಲೆ ಉರಿಗಣ್ಣನ್ನು ಬಿಟ್ಟನು. ಇಡೀ ಬಣವೆ ಹತ್ತಿ ಉರಿಯುತ್ತದೆ. ಜುಂಜಪ್ಪ ದಿನದಿಂದ ದಿನಕ್ಕೆ ಧೀರೋದ್ದಾತ್ತನಾಗಿ ಬೆಳೆಯುತ್ತ ಚೇಳೂರು ಪಟ್ಟಣಕ್ಕೂ ಒಡೆಯನಾದ. ಮಾಟ, ಮಂತ್ರ, ತಂತ್ರಗಳಿಗೆ ಪ್ರತಿಯಾಗಿ ಶತ್ರುಗಳೇ ನಾಶವಾದರು. ಜುಂಜಪ್ಪನ ವಂಶವನ್ನೇ ತೆಗೆಯಬೇಕೆಂದಿದ್ದ ಕಂಬೇರಗೊಲ್ಲರಿಗೆ ಎಲ್ಲ ಕಡೆಯಿಂದಲೂ ಮುಖಭಂಗವಾಯಿತು.

ಮಾರಣ್ಣ, ಮೈಲಣ್ಣರೂ ದಹಿಸಿ ಹೋಗುತ್ತಾರೆ. ಜುಂಜಪ್ಪ ಸತ್ತ ಏಳು ದಿನದಲ್ಲಿ ಮತ್ತೆ ಹುಟ್ಟುತ್ತಾನೆ. ಸೋದರರನ್ನು ಬದುಕಿಸಿಕೊಂಡು ಸೋದರರೊಂದಿಗೆ ಸಿರಾ ತಾಲ್ಲೂಕಿನ ಮರಡಿಗುಡ್ಡದ ಸಮೀಪದ ಪರುಸವ್ವನ ಕೆರೆಗೆ ಬಂದು ಪವಿತ್ರಸ್ನಾನ ಮಾಡುವ ಮೂಲಕ ಸೂತಕ ಕಳೆದುಕೊಳ್ಳುತ್ತಾನೆ. ಮರಡಿಗುಡ್ಡದ ಮೇಲೆ ನಿಂತು ಜುಂಜಪ್ಪ ಉರಿಗಣ್ಣ ಬಿಟ್ಟನು. ಇದರಿಂದ ಕಂಬೇರಹಟ್ಟಿ ಪೂರ್ಣವಾಗಿ ನಾಶವಾಗುತ್ತದೆ.

ಹೂಡಿಬಿಟ್ಟರು ಜೋಡಿ ಬಾಣವ
ಕಂಬೇರಹಟ್ಟಿ ಕೇರಿಗೆ ಬಿಟ್ಟಾರು ಕೆಂಡದ ಬಾಣವ
ಒಂದು ಬಾಣ ಬುಟ್ಟಾರೆ ಬೆಂದೋಯ್ತು ಕಂಬೇರಹಟ್ಟಿ
ಅಂದದುಪ್ಪರಿಗೆ ಗರಡೀಯ ನಾಗಟಕದ ಸಾಲು
ಬಂದು ನೋಡುವ ಹೊತ್ತಿಗೆ ಇರಲಿಲ್ಲ[18]

ಮುಂದುವರಿದು

ಮುಂದುಲು ಮನಿಯಾಗೆ
ತಣಗುಟ್ಟೋದೆನಮ್ಮ
ಈರಯ್ಯ ಜುಂಜನ ಉರಿಬಾಣ
ಕಂಬೇರ ಸಾಲೇಳು ಕೇರಿ ಸುಡುತಾವೋ[19]

ವಂಚನೆಯಿಂದಲೇ ಬದುಕುತ್ತಾ ಕೆಡುಕನ್ನೇ ಸ್ವಾಮಿಯನ್ನಾಗಿಸಿಕೊಂಡು ಬಂದ ಸೋದರಮಾವಗಳು ಜುಂಜಪ್ಪನ ಉರಿಬಾಣಕ್ಕೆ ಸಿಕ್ಕಿ ನಾಶವಾದರು. ಅವರ ಮನೆಗಳೆಲ್ಲವೂ ಭಸ್ಮವಾದವು. ತುಂಬು ಗರ್ಭಿಣಿಯಾಗಿದ್ದ ಮಾರಕ್ಕ ಮುಂದೆ ಗಂಡುಮಗುವಿಗೆ ಜನ್ಮ

ನೀಡಿದಳು. ಇದರಿಂದಾಗಿ ಕಂಬೇರ ವಂಶ ಮತ್ತೆ ಬೆಳೆಯುತ್ತದೆಂದು ಕಾವ್ಯಹಾಡುಗಾರರು ವಿವರಿಸುತ್ತಾರೆ.

ಜುಂಜಪ್ಪನ ಕಾವ್ಯ ಒಂದು ಪಠ್ಯಕ್ಕಿಂತ ಹಲವು ಭಿನ್ನ ಸ್ವರೂಪದ ಸಾಂಸ್ಕೃತಿಕ ವರ್ತನೆ ಹಾಗೂ ಆಚರಣೆ ಮತ್ತೊಂದರಲ್ಲಿ ಭಿನ್ನವಾಗಿ ಕಾಣುವುದಿಲ್ಲ. ಹಾಡುಗಾರರು ಮಾನಸಿಕ ಪಠ್ಯವಾಗಿ ಆರಾಧನೆ, ಮನೋರಂಜನೆಯನ್ನು ಏಕಕಾಲದಲ್ಲಿ ಪ್ರಕಟಗೊಳಿಸುತ್ತಲೇ ಪವಾಡಸದೃಶ ನಂಬಿಕೆ ಮತ್ತು ಅದಕ್ಕೆ ತಕ್ಕ ಆಚರಣೆಯತನದಿಂದಾಗಿ ಸರ್ವಜನಾಂಗದಲ್ಲೂ ದೈವತ್ವದ ರೂಪ ಪ್ರತಿಷ್ಠಾಪಿಸಿರುವುದು. ಈ ಮೂಲಕ ಜಾಗತಿಕ ಮಟ್ಟಕ್ಕೆ ತಮ್ಮ ಸಾಂಸ್ಕೃತಿಕ ಹಿರಿಮೆಯನ್ನು ವಿಸ್ತರಿಸಿರುವುದು ಹೆಮ್ಮೆಯ ಸಂಗತಿಯಾಗಿದೆ.

---

1. *ಚಿತ್ರದೇವರ ಕಾವ್ಯ, ಸಂ: ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ, 1998*
2. *ಹಳ್ಳಿಕೆರೆ, ಮಡಕಶಿರಾ ತಾಲ್ಲೂಕಿನ ಅಮರಾಪುರದ ಬಳಿ ಗ್ರಾಮ, ಬೇಡರ ಪವಿತ್ರ ನೆಲೆ, ಈರಗಾಟರಾಯನ ನೆಲೆ*
3. *ಹೆಬ್ಬೂರು ಚಿಕ್ಕಣ್ಣ, ಚಿಕ್ಕಣ್ಣನಿಗೆ ಹೊಕ್ಕಿತು ಉಕ್ಕಿನ ಉರಿಬಾಣ, 'ಬಂಡಿ ಬಂದಾವು ಬಾಳೆ ವನದಾಗೆ', ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ, 2009*
4. *ಜುಂಜಪ್ಪ, ಸಂ: ಚಲುವರಾಜು, ಹಂಪಿ ಕನ್ನಡ ವಿವಿ, 1997*
5. *ತಾಯಿ ಸ್ವಾರಮ್ಮನ ಮೇಲೆ ಪದನೂರು, ಸಣ್ಣನಾಗಪ್ಪ, 2006*
6. *ವೀರನಾಗಪ್ಪನ ಪದಗಳು, ಜಂಗಮರಹಳ್ಳಿ ಮುದ್ದುವೀರಪ್ಪ, 2006*
7. *ಕಂಬದರಂಗನ ಕಾವ್ಯ, ಸಂ: ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ, 2001*
8. *ಜುಂಜಪ್ಪ, ಸಂ: ಚೆಲುವರಾಜು*
9. *ಬಂಡಿ ಬಂದಾವೋ ಬಾಳೆ ವನದಾಗೆ, ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ*
10. *ಅದೇ*
11. *ಅದೇ*
12. *ಜುಂಜಪ್ಪ, ಚೆಲುವರಾಜು*
13. *ಅದೇ*
14. *ಡಾ॥ ತೀ.ನಂ. ಶಂಕರನಾರಾಯಣ ಲೇಖನ (ಗಡಿನಾಡ ಜಾನಪದ ಸಂಸ್ಕೃತಿ) ಸಂಪಾದಕರು: ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ, ಪ್ರೊ॥ಕೆ.ಹನುಮಂತರಾಯಪ್ಪ, ಬೂವನಹಳ್ಳಿ ನಾಗರಾಜು*
15. *ಜುಂಜಪ್ಪ, ಸಂ.ಚೆಲುವರಾಜು*

*16, 17, 18, 19 ಜುಂಜಪ್ಪ, ಸಂ.ಚೆಲುವರಾಜು*

ಇ) ಕಂಬದರಂಗ

ಮಾಗೋಡು ಕಂಬದ ರಂಗನ ಕಥೆ, ಬುಡಕಟ್ಟು ಸಂಸ್ಕೃತಿಯ ಕಾವ್ಯ. ಮೌಖಿಕ ಪರಂಪರೆಯ ಸಾಹಿತ್ಯಿಕ ರೂಪವಾದ ಜನಪದ ಕಾವ್ಯಗಳು ಅಜ್ಞಾನ ಕರ್ತೃತ್ವದ ಸಾಮೂಹಿಕ ಬೆಳವಣಿಗೆಗಳಿಂದಲೇ ಅಪಾರ ಜನಪ್ರಿಯತೆಯನ್ನು ಪಡೆದಿರುತ್ತವೆ. ಒಂದು ಪ್ರದೇಶದ ಭಾಷಿಕ, ಸಾಮಾಜಿಕ ಹಾಗೂ ಭೌಗೋಳಿಕ ಲಕ್ಷಣಗಳನ್ನು ಅತ್ಯಂತ ಆಕರ್ಷಕವಾಗಿ ಕಟ್ಟಿಕೊಡುವತನವನ್ನು ಜನಪದ ಕಾವ್ಯಗಳು ಹೊಂದಿರುತ್ತವೆ. ಕರ್ನಾಟಕದಲ್ಲಿ ರೂಪುಗೊಂಡಿರುವ ಜನಪದ ಕಾವ್ಯಗಳಾದ ಮಂಟೇಸ್ವಾಮಿ, ಮಲೆಯ ಮಹದೇಶ್ವರ, ಜುಂಜಪ್ಪ ಇವರೆಲ್ಲರೂ ಐತಿಹಾಸಿಕ ವೀರರಾಗಿ ಬಾಳಿ ಆ ಕಾಲದ ಸಾಂಸ್ಕೃತಿಕ, ಜನಾಂಗಿಕ ಸ್ಥಿತ್ಯಂತರಗಳಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಹಲವು ಬಗೆಯ ಹೋರಾಟಗಳಿಂದ ಖಚಿತ ರೂಪು ಪಡೆದವರು. ಹಾಗಾಗಿಯೇ ಜುಂಜಪ್ಪ, ಮಲೆಯ ಮಹದೇವ ಇವರುಗಳು ಒಂದು ವರ್ಗದ ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿ-ಗತಿಗಳ ಮೇಲೆ ನಿಚ್ಚಳ ಪ್ರಭಾವ ಬೀರುವುದರ ಜೊತೆಗೆ ತಾನೇ ತಾನಾಗಿ ಜನಾಂಗದ ವೀರತ್ವದ ಪಟ್ಟವನ್ನೂ ಅನುಭವಿಸಿದ್ದಾರೆ.

ತುಮಕೂರು, ಚಿತ್ರದುರ್ಗ ಈ ಜಿಲ್ಲೆಯ ಜನಪದ ಕಾವ್ಯಗಳು ಪ್ರಧಾನವಾಗಿ ಬುಡಕಟ್ಟು ಜನಾಂಗವಾದ ಕಾಡುಗೊಲ್ಲರ ಸಾಂಸ್ಕೃತಿಕ ಆಚಾರ, ಸಂಪ್ರದಾಯ, ನಂಬಿಕೆ ಈ ಎಲ್ಲವುಗಳನ್ನು ಅತ್ಯಂತ ಸೊಗಸಾಗಿ ಸೆರೆಹಿಡಿದಿವೆ. ಇದನ್ನು ಜುಂಜಪ್ಪ ಮೊದಲಾದ ಕಾವ್ಯಗಳಲ್ಲಿ ಕಾಣಬಹುದು. ಹಾಗಂತ ಜುಂಜಪ್ಪ ಸಮಗ್ರ ಕಾಡುಗೊಲ್ಲರ ನಾಯಕನಂತೂ ಅಲ್ಲ. ಕಾಡುಗೊಲ್ಲರಲ್ಲಿ ಒಂದು ಪಂಗಡವಾದ ಕಂಬೇರಗೊಲ್ಲರು ಇಂದಿಗೂ ಜುಂಜಪ್ಪನ ಹೆಸರನ್ನು ಎತ್ತುವುದಿಲ್ಲ. ಹಾಗೆ ಎತ್ತಿದರೆ ಅದೊಂದು ಅಮಂಗಳ ಎಂದೇ ಭಾವಿಸುತ್ತಾರೆ.



ಜೊತೆಗೆ ಜುಂಜಪ್ಪನ ಗುಡ್ಡೆ ಈ ಸಂಬಂಧಿ ಐತಿಹ್ಯ, ಸ್ಥಳಗಳ ಮುಂದೆ ತಿರುಗಾಡುವುದು ಇವರಿಗೆ ಇಷ್ಟವಾಗುವುದಿಲ್ಲ. ಆದರೆ ಇದೇ ಪ್ರದೇಶಗಳಲ್ಲಿ ಉಪಲಬ್ಧವಾಗುವ ಜನಪದ ಕಾವ್ಯಗಳಾದ ಚಿತ್ರದೇವರು, ಕಾಟಂಲಿಂಗ ಕೇತೇದೇವರು, ಪಾತೇದೇವರು ಈ ಕಾವ್ಯಗಳಲ್ಲಿ ಪ್ರಕಟವಾಗುವ ದೇವರುಗಳಿಗೆ ಕಾಡುಗೊಲ್ಲರು, ಮ್ಯಾಸಬೇಡರು, ಕುರುಬರು, ಕುಂಚಿಟಿಗರು ಸೇರಿದಂತೆ ಹಲವು ವರ್ಗದವರು ಭಕ್ತರಾಗಿದ್ದಾರೆ.

ರಂಗನಾಥನ ಕಥೆ ದಾಸಣ್ಣನೆಂಬ ಸಾಮಾನ್ಯ ವ್ಯಕ್ತಿ ದೈವತ್ವಕ್ಕೆ ಏರುವ ಮೂಲಕ ನಾಯಕನಾಗಿ ಬೆಳೆದ ರೋಚಕ ಪ್ರಸಂಗವನ್ನು ಹೇಳುತ್ತದೆ. ಪುರಾಣ ಹಾಗೂ ಇತಿಹಾಸ ಈ ಎರಡೂ ಪರಂಪರೆಯನ್ನು ಬೆಸೆಯುವ ಮೂಲಕ ವರ್ತಮಾನದಲ್ಲಿ ನಿಂತು, ಪುರಾಣ ಪುರುಷನೊಂದಿಗೆ ಒಡನಾಡಿಯಾಗಿ ಬೆಳೆಯುವುದು ಈ ಕಾವ್ಯದ ವಿಶೇಷ. ಜೊತೆಗೆ ಕಾಡುಗೊಲ್ಲ ಸಂಸ್ಕೃತಿಯನ್ನು ಅಚ್ಚುಕಟ್ಟಾಗಿ ನಿರೂಪಿಸುತ್ತದೆ. ಕಾಡುಗೊಲ್ಲರ ಇತರೆ ಕಾವ್ಯಗಳಂತೆ ಕಂಬದರಂಗನ ಕಥೆಯಲ್ಲಿಯೂ ಗೊಲ್ಲ ಜನಾಂಗದ ನಂಬಿಕೆ ನಡಾವಳಿ ಇವುಗಳಿಗೆ ಅನುಗುಣವಾಗಿ ಕಾವ್ಯ ರಚನೆಯಾಗಿದೆ. ಆದರೆ ಜುಂಜಪ್ಪ, ಎತ್ತಪ್ಪ, ಚಿತ್ರದೇವರು, ಕಾಟಂಲಿಂಗ ಈ ಕಾವ್ಯಗಳಲ್ಲಿ ವಿಶೇಷವಾಗಿ ಶೈವ ಸಂಸ್ಕೃತಿಯ ಆಚರಣೆ, ಸಂಸ್ಕಾರವನ್ನು ಒಳಗೊಂಡಿವೆ. ಹಾಗಾಗಿ ಕಾಡುಗೊಲ್ಲರು ಮೂಲತಃ ಶೈವರಿರಬೇಕೆಂಬ ಅಭಿಪ್ರಾಯವು ಇದೆ. ಇದಕ್ಕೆ ಪೂರಕವಾಗಿ ಈ ಎಲ್ಲಾ ಕಾವ್ಯಗಳಲ್ಲೂ ಶೈವಧರ್ಮದ ಹಿನ್ನೆಲೆಯನ್ನು ಪಡೆದಿವೆ. ಇಲ್ಲಿ ಬಳಸುವ ಲಾಂಛನ, ಹೆಸರು, ಆರಾಧನೆಯ ರೂಪ, ಸ್ಮರಣೆ ಈ ಎಲ್ಲಾ ಕಡೆ ಶೈವ ಸಂಸ್ಕೃತಿಯನ್ನೇ ಹೊಂದಿವೆ. ಜೊತೆಗೆ ಈ ದೇವರುಗಳಿಗೆ ಈಶ್ವರನ ಲಿಂಗವೇ ರೂಪ. ಅಷ್ಟೇ ಅಲ್ಲ ಜುಂಜಪ್ಪನನ್ನು ವೀರಭದ್ರನ ಅವತಾರ ಎಂದೂ, ಆತನ ಹೋರಿ ಬಡಮೈಲನನ್ನು ಶಿವನ ವಾಹನ ನಂದಿಯ ಸಂಕೇತ ಎಂದೇ ಭಾವಿಸುತ್ತಾರೆ. ಶೈವಧರ್ಮದ ಮಾದರಿಯ ಪೂಜೆ, ಪುರಸ್ಕಾರಕ್ಕೆ ಸೋಮವಾರ ಶ್ರೇಯಸ್ಕರ ಎಂಬ ಭಾವನೆ ಇದೆ. ಜುಂಜಪ್ಪನ ಪೂಜೆ ಸೋಮವಾರವೇ. ಜೊತೆಗೆ ಅಂದು ಜುಂಜಪ್ಪನ ಒಕ್ಕಲುಗಳಲ್ಲಿ ಮಾಂಸಾಹಾರ ನಿಷಿದ್ಧ.

ಕಂಬದ ರಂಗನ ಕಥೆ ಇದೊಂದು ವಿಶಿಷ್ಟ ಬಗೆಯ ಕಥೆ. ಅಪ್ಪಟ ವೈಷ್ಣವ ಸಂಸ್ಕೃತಿಯ ಕಾವ್ಯ. ಚನ್ನಪ್ಪನಂಥ ಒಬ್ಬ ಸಾಮಾನ್ಯ ವ್ಯಕ್ತಿ ದೇವರೊಂದಿಗೆ ಒಡನಾಡಿಯಾಗಿ ಬೆಳೆಯುವ, ಸಂಭಾಷಿಸುವ, ದೇವರ ಜಡತ್ವವನ್ನು ಚನ್ನಪ್ಪ, ಚನ್ನಪ್ಪನ ಜಡತ್ವವನ್ನು ಕಂಬದ ರಂಗ ಪರಸ್ಪರ ಬಿಡಿಸುವ ಮೂಲಕ ಮನುಷ್ಯ-ದೇವರು ಒಡನಾಡಿಯಾಗಿ ಬೆಳೆಯುವ ರೋಚಕ ಪ್ರಸಂಗವನ್ನು ಕಂಬದ ರಂಗನ ಕಾವ್ಯ ನಿರೂಪಿಸುತ್ತದೆ.

ಕಂಬದರಂಗನ ಕಥೆ, ಶ್ರೀಹರಿಯ ಕಂಬದ ಅವತಾರ. ಪ್ರಕೃತಿ ಆರಾಧನೆಯಲ್ಲಿ ಮರ,

ಗಿಡ, ಕಲ್ಲು, ಆಯುಧ, ನೀರು, ಬೆಂಕಿಗಳೇ ಆರಾಧನೆಯ ರೂಪ. ಇದೇ ಪ್ರಕೃತಿಯ ಆರಾಧನೆಯ ರೂಪವಾಗಿ ಶ್ರೀಹರಿ ಕಂಬದ ರಂಗನ ರೂಪದಲ್ಲಿ ಅವತರಿಸಿದ್ದಾನೆ ಎನ್ನುವುದು ಜನಪದರ ಬಲವಾದ ನಂಬಿಕೆ. ಆ ನಂಬಿಕೆಯ ಮೌಖಿಕ ರೂಪ ಶ್ರವಣ ರೂಪದಲ್ಲಿ ಹರಿದು ಬಂದಿದೆ.

ಕಾಡುಗೊಲ್ಲರು ಮಡಿ-ಮೈಲಿಗೆ ಸಂಪ್ರದಾಯದ ವಿಚಾರದಲ್ಲಿ ಕಟ್ಟುನಿಟ್ಟು. ಹೊಲೆಮಾದಿಗರನ್ನು ಊರಿನ ಒಳಗೂ ಬಿಟ್ಟುಕೊಳ್ಳದೆ ರಜತಾದಿ ಸೂತಕಗಳನ್ನು ಅತ್ಯಂತ ಕಟ್ಟುನಿಟ್ಟಾಗಿ ಆಚರಿಸುತ್ತಾರೆ. ಇದು ಜುಂಜಪ್ಪ ಮೊದಲಾದ ದೇವರುಗಳ ಒಕ್ಕಲುಗಳಲ್ಲಿ ಕಾಣಬಹುದು. ಆದರೆ ಕಂಬದರಂಗನ ಪರಂಪರೆ ಈ ಬಗೆಯ ಮಡಿ-ಮೈಲಿಗೆಯಿಂದ ಕೊಂಚ ದೂರ ಬಂದಿದೆ. ಅಸ್ಪೃಷ್ಯತೆಯ ಆಚರಣೆ ಇಲ್ಲಿ ನಗಣ್ಯ. ಪೂಜೆ, ಪ್ರಸಾದಗಳಲ್ಲಿ ಅವರೂ ಸಮಭಾಗಿ. ಅಷ್ಟೇ ಅಲ್ಲ ಕಂಬದರಂಗನ ಕೇಂದ್ರವಾದ ಮಾಗೋಡು ಗ್ರಾಮ ಗೊಲ್ಲರು-ಮಾದಿಗರು ಒಟ್ಟಾಗಿ ವಾಸಿಸುವ ಗ್ರಾಮ. ಕಳ್ಳೀಬೇಲಿ, ಗಡಿ ಈ ಬಗೆಯ ಕಟ್ಟುನಿಟ್ಟಿನ ಸಂಪ್ರದಾಯದ ಆಚೆ ಬಂದು ಕಂಬದರಂಗನ ಗುಡಿ ನಿರ್ಮಾಣವಾಗಿದೆ. ಗೊಲ್ಲರಹಟ್ಟಿ, ಮಾದಿಗರಹಟ್ಟಿ ಮಧ್ಯದಲ್ಲಿ ರಂಗನಾಥನ ದೇವಾಲಯವಿದೆ. ದೂರದಿಂದ ಸೇವೆಗೆ ಬರುವ ಹೊಲೆಯರು, ಮಾದಿಗರು ಇಲ್ಲಿ ಇತರರು ಉಳಿದುಕೊಳ್ಳುವ ಮಂಟಪದಲ್ಲಿಯೇ ತಂಗುವುದು ರೂಢಿಯಾಗಿದೆ.

ಕಾವ್ಯದ ರಚನೆ, ವಿನ್ಯಾಸ, ವರ್ಣನೆಯಲ್ಲಿ ಕಾಡುಗೊಲ್ಲರ ಸಾಂಸ್ಕೃತಿಕ ವಿವರಗಳು ದಟ್ಟವಾಗಿ ದೊರೆಯುತ್ತವೆ. ಆದರೆ ಕಂಬದರಂಗನ ಭಕ್ತರು ಒಕ್ಕಲಿಗರು, ಮಾದಿಗರು, ಹೊಲೆಯರು, ಕುರುಬರು, ಬ್ರಾಹ್ಮಣರು ಅಧಿಕ. ಜೊತೆಗೆ ಕಾಡುಗೊಲ್ಲರ ಪುರಾಣಪುರುಷ ದೈವ ಚಿತ್ರದೇವರು, ಕಾಟಂಲಿಂಗ ಈ ಮೊದಲಾದ ದೇವರುಗಳ ಒಕ್ಕಲು ಬಹುತೇಕ ಗೊಲ್ಲರು. ಜುಂಜಪ್ಪನ ಒಕ್ಕಲು ಅಧಿಕವಾಗಿ ಗೊಲ್ಲರಾದರೂ ಕುಂಚಿಟಿಗರ ಅಳುವಿನ ಒಕ್ಕಲಿಗ ಸಮುದಾಯ ಮಾತ್ರ ಜುಂಜಪ್ಪನ ಒಕ್ಕಲಾಗಿದ್ದಾರೆ. ಈ ಬಗೆಯ ಸೀಮಿತ ಜನಾಂಗದ ಒಕ್ಕಲುತನದಿಂದ ಕಂಬದರಂಗ ಬಿಡಿಸಿಕೊಂಡು ಸಕಲೊಂಬತ್ತು ಜಾತಿಯ ದೈವವಾಗಿದ್ದಾನೆ. ತುಮಕೂರು, ಚಿತ್ರದುರ್ಗ, ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲದೆ ಆಂಧ್ರದ ಅನಂತಪುರ, ಮಡಕಸಿರಾ, ಅಗಳಿ, ರತ್ನಗಿರಿ, ತಮಿಳುನಾಡಿನ ಕೊಯಮತ್ತೂರು, ಸೇಲಂ, ಹೊಸೂರು ಈ ಹೊರರಾಜ್ಯಗಳಲ್ಲೂ ಕಂಬದರಂಗನ ಭಕ್ತರಿದ್ದಾರೆ. ಪ್ರತಿ ವರ್ಷ ಫೆಬ್ರವರಿಯಲ್ಲಿ ನಡೆಯುವ ಬೃಹತ್ ಜಾತ್ರಾ ಮಹೋತ್ಸವ ಕಾಲದಲ್ಲಿ ಈ ಭಾಗಗಳಿಂದ ಬಂದು ಕೊಪ್ಪಲು ಹಾಕುವ ಪದ್ಧತಿ ಇಂದಿಗೂ ಇದೆ. ಜೊತೆಗೆ ಹೊಸಮನೆ, ಮದುವೆ, ಸಾವು, ಗಾಳಿಸೋಂಕು ಈ ಮೊದಲಾದ ವಿಶೇಷ ಸಂದರ್ಭಗಳಲ್ಲಿ ಕಂಬದರಂಗನನ್ನು

ತಮ್ಮ ಊರುಗಳಿಗೆ ಕರೆಸುವ, ಮೆರವಣಿಗೆ ಮಾಡಿಸುವ, ಕಥೆ ಮಾಡಿಸುವ ಸಂಪ್ರದಾಯವೂ ಇದೆ. ಹೀಗೆ ದೇವರು ಭಕ್ತರಮನೆಗಳಿಗೆ ಹೋದ ಕಡೆಯಲ್ಲೆಲ್ಲಾ ದೇವರ ಕಥೆ ಮಾಡಿಸುವ ವಾಡಿಕೆಯೂ ಉಂಟು. ಈ ರೀತಿಯ ಕಥಾಶ್ರವಣ ಪರಮಪುಣ್ಯವೆಂದೂ ಭಯ-ಭಕ್ತಿಯಿಂದ ಆಲಿಸುವ ಸಂಪ್ರದಾಯ ಕಂಬದರಂಗನ ಪರಂಪರೆಯಲ್ಲಿ ನಡೆದುಕೊಂಡು ಬಂದಿದೆ. ಇದರಲ್ಲಿ ಜಾತಿಯ ಸೂತಕವಿಲ್ಲದಿರುವುದು ವಿಶೇಷ.

ಈವರೆಗೆ ಪ್ರಕಟವಾಗುವ ಶುದ್ಧ ಶೈವ ಪರಂಪರೆಗಿಂತ ಹೊರತಾಗಿ ನಿಂತು ವೈಷ್ಣವ ಸಂಪ್ರದಾಯವನ್ನು ಪೂಜಾ ಪರಿಕರ, ಆಚರಣೆ ಇವುಗಳನ್ನು ಕಂಬದರಂಗನ ಕಥೆಯಲ್ಲಿ ಕಾಣಬಹುದು. ಇಲ್ಲಿನ ಕಥಾನಾಯಕ ಶ್ರೀವಿಷ್ಣು. ಶ್ರೀ ವಿಷ್ಣುವೇ ಕಂಬದರಂಗನಾಗಿ ಅವತರಿಸಿ, ಆತನ ಸುತ್ತ ಪವಾಡಗಳು ಅಸದೃಶವಾಗಿ ತೆರೆದುಕೊಳ್ಳುತ್ತವೆ. ಪೂರಕವಾಗಿ ಕಾಡುಗೊಲ್ಲರ ಸಂಪ್ರದಾಯ, ನಂಬಿಕೆಯು ವಿವಿಧ ಸ್ತರಗಳಲ್ಲಿ ಪ್ರಕಟವಾಗುತ್ತದೆ.

ಕಾಡುಗೊಲ್ಲರ ಕಾವ್ಯಗಳಲ್ಲಿ ಪ್ರಕೃತಿಯ ಆರಾಧನೆಯೇ ಪ್ರಧಾನ ಲಕ್ಷಣ. ಇದು ಜುಂಜಪ್ಪ, ಎತ್ತಪ್ಪ, ಚಿತ್ರದೇವರು ಇವುಗಳಲ್ಲಿ ಪ್ರಕೃತಿಯ ವಸ್ತುಗಳಾದ ಗಡಿಗೆ, ಮರ, ಹುತ್ತ, ಬೆತ್ತ, ಕಠಾರಿ, ಬ್ಯಾಟೆಮರ, ಧೂಪಾರತಿ ಇವುಗಳಿಗೆ ಪೂಜೆ ಕಂಡುಬರುತ್ತದೆ. ಭೂತಪ್ಪನ ಆರಾಧನೆಯಲ್ಲೂ ಕಲ್ಲುಗುಂಡೇ ಪೂಜೆಯ ರೂಪ. ಕಂಬದರಂಗನ ಆರಾಧನೆಯೂ ಬ್ಯಾಟೆಮರ, ಮೂರು ನಾಮದ ಕಲ್ಲು-ಗುಂಡು, ಮೆರವಣಿಗೆ ಸಂದರ್ಭದಲ್ಲಿ ಹರಿಗೆಯನ್ನು ವಿಗ್ರಹ ರೂಪದಲ್ಲಿ ಮೆರೆಸುತ್ತಾರೆ. ಇತ್ತೀಚೆಗೆ ಕಂಬದರಂಗನನ್ನು ಮೆರವಣಿಗೆಯ ದೇವರ ವಿಗ್ರಹದ ರೂಪದಲ್ಲಿ ಪೂಜೆ ಮಾಡುವ ಸಂಪ್ರದಾಯ ರೂಢಿಯಾಗುತ್ತಿದೆ. ಮೆಡ್ಡೆಕೋಲು ಬೆತ್ತ, ಬಿದಿರುಗಣೆಯೂ ಕಂಬದರಂಗನ ಸಂಕೇತವಾಗಿ ಆರಾಧನೆಗೆ ಒಳಗಾಗಿದೆ. ಚಿತ್ರದೇವರು, ಕಾಟಂಲಿಂಗ, ಜುಂಜಪ್ಪನಂಥ ಶೈವ ಪಂಥ ದೇವರಿಗೂ ವೈಷ್ಣವ ಪರಂಪರೆಯಂತೆ ಮೂರು ನಾಮ ಹಾಕಿ ಆರಾಧಿಸುವ ಪರಿಪಾಠ ಇತ್ತೀಚೆಗೆ ಬಲವಾಗುತ್ತಿದೆ. ಹಿರಿಯೂರು ತಾಲ್ಲೂಕಿನ ಇಕ್ಕನೂರು, ಪಾವಗಡ ತಾಲ್ಲೂಕಿನ ಪುಲಿಮಾಜಿ ಗೊಲ್ಲರಹಟ್ಟಿಗಳ ದೇವಸ್ಥಾನಗಳಲ್ಲಿ ಈ ಚಿತ್ರಗಳನ್ನು ಕಾಣಬಹುದಾಗಿದೆ.

ಕಂಬದರಂಗನ ಕಾವ್ಯದಲ್ಲಿ ನಿರೂಪಿತವಾಗಿರುವ ಎಲ್ಲಾ ಚಟುವಟಿಕೆಗಳು ಮಾನವರವು. ಇಲ್ಲಿನ ವಿಷ್ಣು ತನ್ನ ಅಜ್ಞಾತ ಸ್ಥಿತಿಯಿಂದ ಮೇಲೆ ಬರಲು ಮಾಡುವ ಪವಾಡ, ವ್ಯವಹರಿಸುವ ಕ್ರಿಯೆ ಕುತೂಹಲಕರವಾದುದು. ಚನ್ನಪ್ಪನೆಂಬ ಮಾರನೂರ ಗೊಲ್ಲ, ಈತನೇ ಕಾವ್ಯದ ಮುಖ್ಯ ಆಸಕ್ತಿ. ಇಲ್ಲಿನ ನಾಯಕ ವಾಸ್ತವ ಅರ್ಥದಲ್ಲಿ ದಾಸರ ಚನ್ನಪ್ಪ. ಆತನ ಸುತ್ತ ರಂಗನಾಥನ ಕಥೆ ಬಿಚ್ಚಿಕೊಳ್ಳುತ್ತದೆ. ಹಾಗಾಗಿಯೇ ಅನಾದಿಕಾಲದ ವಸ್ತು ವರ್ತಮಾನದ ರೂಪ ಪಡೆದು ಸಮಕಾಲೀನತೆಯನ್ನು ಮೆರೆಯುತ್ತದೆ. ಹೀಗೆ ಮೆರೆಯುವಾಗಲೆಲ್ಲ ಸಮಾಜ

ವ್ಯವಸ್ಥೆಯ ದೌರ್ಜನ್ಯ, ಮೋಸ, ವಂಚನೆ, ಮಾತ್ಸರ್ಯಗಳಿಂದ ಅಟ್ಟಹಾಸಗೈವ ವ್ಯಕ್ತಿಯನ್ನು ಮಟ್ಟಹಾಕುವಲ್ಲಿ ತೋರುವ ಕ್ರಿಯೆ ಪೌರಾಣಿಕ ರೂಪ. ಅದು ತೋರುವ ಎಲ್ಲ ಚಟುವಟಿಕೆಯ ಕಾರ್ಯರೂಪ ಚನ್ನಪ್ಪನೆಂಬ ನೈಜ ಮಾನವ. ಚನ್ನಪ್ಪನ ಧೈರ್ಯ, ಶೌರ್ಯ, ವೀರತನ ಸಾಹಸ ನಿಚ್ಚಳಗಾಗಿಸುತ್ತವೆ. ಹೀಗೆ ಬದಲಾಗುವಾಗ ಕಂಬದರಂಗನ ಮಾಂತ್ರಿಕತನವು ಕಾರಣವಾಗುತ್ತದೆ.

ಜನಪದ ಮಹಾಕಾವ್ಯ ಎನ್ನುವುದು ಜನಪದರಲ್ಲಿ ತೀರ ಆಧುನಿಕ ಪರಿಕಲ್ಪನೆ ಎಂಬ ಅಭಿಪ್ರಾಯ ಇರುವಂತೆ ಕಂಬದರಂಗನ ಕಾವ್ಯದ ಕಲ್ಪನೆ ತೀರಾ ಇತ್ತೀಚಿನದು ಎನ್ನಬಹುದು. ಕಂಬದರಂಗ ತನ್ನ ಶಿಷ್ಯನಾದ ಚನ್ನಪ್ಪನ ಮೂಲಕ ಮಾಡಿಸುವ ಎಲ್ಲಾ ಪವಾಡಗಳಲ್ಲಿಯೂ ಸಂಭವನೀಯ ಐತಿಹ್ಯಗಳಿವೆ, ಕುರುಹುಗಳಿವೆ. ಸಿರಾ ಆಡಳಿತ ಕಛೇರಿ, ಸಂತೆ ಸುಂಕ, ತೂಬಿನ ಗುಂಡಿ, ಗದ್ದೆ ಮಾನ್ಯ ಮಾಡುವುದು ಈ ಮೊದಲಾದ ಸಮಕಾಲೀನ ಭಾಷಿಕ ವಿವರಗಳು ಸಿರಾದ ಪರಿಸರವನ್ನು ಅಚ್ಚುಕಟ್ಟಾಗಿ ಪರಿಚಯಿಸುತ್ತವೆ. ಹೀಗಾಗಿ ಇದೊಂದು ಪ್ರಾಚೀನ ಕಾವ್ಯಸ್ವರೂಪದ ಅರ್ಥ ಕಳೆದುಕೊಂಡು, ಸಮಕಾಲೀನ ನಾಯಕನೊಬ್ಬನ ವೀರಗಾಥೆಯಾಗಿ ಅದರ ವಸ್ತು ನಂಬಿಕೆ, ಜೀವನ ದೃಶ್ಯಗಳನ್ನು ಕಂಬದರಂಗನ ಕಥೆ ಬಿಂಬಿಸುತ್ತದೆ. ಇದರ ಆಚೆಗೂ ಆಲೋಚಿಸಿದಾಗ ಇದೊಂದು ಮೌಖಿಕ ಪರಂಪರೆಯ ಕಾವ್ಯ. ಹಾಗಾಗಿ ಜನರು ತಮ್ಮ ಪೂರ್ವನಾಯಕನ ಬಗೆಗೆ ತೋರುವ ಗೌರವ, ಕೃತಜ್ಞತೆಯ ದ್ಯೋತಕವಾಗಿ ಅಂಥ ನಾಯಕನ ಬಗೆಗೆ ಕಥೆಕಟ್ಟಿ ಸ್ಮರಣೆಯಲ್ಲಿರಿಸಿಕೊಂಡು ಆಗಾಗ ಹಾಡುತ್ತಾ ಯುಗಧರ್ಮಕ್ಕೆ ಅನುಗುಣವಾಗಿ ಬದಲಾವಣೆಯಾಗಿರುವ ಸಾಧ್ಯತೆಗಳು ಹೆಚ್ಚಿರುತ್ತವೆ. ಆದರೆ ಕಂಬದರಂಗನ ಕಥೆ, ಜುಂಜಪ್ಪ, ಮಲೆಯ ಮಹದೇವ ಮೊದಲಾದ ಸಾಂಸ್ಕೃತಿಕ ವೀರರ ಬದುಕಿನಲ್ಲಿ ಆಗಿರುವ ಬದಲಾವಣೆಗೆ ಆಸ್ಪದವಾಗಿರುವಂತೆ ಕಂಡುಬರುವುದಿಲ್ಲ. ಕಾವ್ಯನಾಯಕರನ್ನು ಕಾಣುವ, ತರ್ಕಿಸುವ ಭಕ್ತಿಭಾವದ ಹಿನ್ನೆಲೆಯಲ್ಲಿ ವರ್ಣನೆ, ಕಾವ್ಯ ವಿಸ್ತೃತ ರೂಪವನ್ನು ಕಾಣುವ ಸಾಧ್ಯತೆ, ಬಹು ಪಾಠಾಂತರಗಳಲ್ಲಿ ದೊರಕುವ ಜುಂಜಪ್ಪನ ಕಥೆಯಲ್ಲಿ ಕಾಣಬಹುದಾದರೂ ಅದೇ ಪರಂಪರೆಯ ಪ್ರಾದೇಶಿಕ ಕಥೆ ಕಂಬದರಂಗನ ಕಾವ್ಯದಲ್ಲಿ ಕಾಣಲಾಗುವುದಿಲ್ಲ. ಇದರ ವ್ಯಾಪ್ತಿ ತುಂಬಾ ದೊಡ್ಡದು. ಹಾಡುವವರು ಮಾತ್ರ ಏಕವ್ಯಕ್ತಿ. ಕಂಬದರಂಗ ಅಪಾರ ಭಕ್ತರನ್ನು ಹೊಂದಿರುವ ದೈವ. ಕಂಬದಯ್ಯ, ಕಂಬದರಾಯ, ರಂಗಧಾಮ, ರಂಗನಾಥ, ದಾಸಯ್ಯ, ಮಾಗೋಡು ರಂಗ ಹಿ ೀಗೆ ಹಲವು ಹೆಸರಿನಿಂದ ಕರೆದು ಪೂಜಿಸುತ್ತಾರೆ. ಈ ಬಗೆಯ ಒಕ್ಕಲಿನ ಸಮುದಾಯವನ್ನು ಅಪಾರವಾಗಿ ಹೊಂದಿದ್ದಾನೆ. ಆದರೂ ಈ ದೇವರ ಕುರಿತು ಹೇಳುವವರು ಇಲ್ಲದಿರುವುದು ಆಶ್ಚರ್ಯಕರ ಸಂಗತಿಯಾಗಿದೆ.

ಕಂಬದರಂಗನ ಕಥೆ ಆರಂಭವಾಗುವುದು ಶ್ರೀಹರಿಯ ಪುನರ್ ಅವತಾರದಿಂದ. 'ಕರುಣಿ ಕಂಬದರಂಗನ ನೆನೆದೇನೋ' ಪ್ರಸಂಗದಲ್ಲಿ ಮೂಲದೈವಗಳನ್ನು ಸ್ಮರಿಸಲಾಗಿದೆ.

ಕಲ್ಲತ್ತಿನೇವೊಳಗೆ ಕರುಣಿನೆ ಕಂಬದರಂಗ ।
ಸೊಲ್ಲೆತ್ತುವ ಮುನ್ನ ನೆನೆದೇನು ॥[1]

ಎಂದು ಆರಂಭವಾಗುವ ಹಾಡಿನಲ್ಲಿ ವಕ್ತೃ ರಂಗನಾಥನನ್ನು ಬಗೆಬಗೆಯ ಹೆಸರುಗಳಲ್ಲಿ ಕರೆದಿರುವುದು ಪ್ರಕಟವಾಗುತ್ತದೆ. ಆದರೂ ಇಂದು ಮಾಗೋಡು ರಂಗನಾಥ, ಕಂಬದರಂಗ ಈ ಎರಡು ಹೆಸರುಗಳಲ್ಲಿ ಹೆಚ್ಚು ಪ್ರಸಿದ್ಧವಾಗಿದೆ.

ಕಂಬದ ಅವತಾರ ರೂಪವಾದ ರಂಗ ಜನಪದರಲ್ಲಿ ಕಂಬದರಂಗನೇ ಆಗಿದ್ದಾನೆ. ಶ್ರೀಹರಿ ಚಿಟ್ಟಾಲದ ಮರದ ಎಲೆಯ ಮೇಲೆ ಮಲಗಿದ್ದಾಗ ಮುಂಗಾರು ಮಳೆ ಪೂರಕವಾಗಿ ಉಂಟಾದ ಬರಸಿಡಿಲು ಶ್ರೀಹರಿಯ ಮೇಲೆರಗಿ ವಿಷ್ಣು ಬೆಂದು ಉಕ್ಕಿ ಪಾಳಾಗಿ ಭೂಮಿಯನ್ನು ಸೇರುತ್ತಾನೆ. ಹೀಗೆ ಭೂಮಿ ಸೇರಿದ ಶ್ರೀಹರಿ ಕಂಬದ ರೂಪದಲ್ಲಿ ಹೊರಬರುವಾಗ ಮಾಡುವ ಪವಾಡ, ತೋರುವ ದಯೆ, ದುಷ್ಟನಿಗ್ರಹ, ಶಿಷ್ಟ ರಕ್ಷಣೆ ಅನನ್ಯವಾದುದು. ಉಕ್ಕಿನ ಪಾಳು ರೂಪದಲ್ಲಿ ಭೂಮಿಯ ಒಳಗೆ ಸೇರಿದ ಶ್ರೀಹರಿ ಭೂಮಿಯಿಂದ ಹೊರಗಡೆ ಬರುವಾಗ ತೋರುವ ಸಾಹಸಕ್ಕೆ ಪೂರಕವಾಗಿ ದುರ್ವ್ಯಸನಗಳಿಂದ ತಳಮನೆ ಬಿಟ್ಟು ಸೂಳೆಮನೆ ಸೇರಿದ ಬಬ್ಬೂರ ಗೌಡನಂಥ ಕಾಮಾಂಧನನ್ನು ಸರಿದಾರಿಗೆ ತರುವಲ್ಲಿ ಸಾರ್ಥಕವಾಗಿ ಬಳಕೆಯಾಗುತ್ತದೆ. ಈ ಭಾಗ ಇಡೀ ಕಾವ್ಯದ ಚೌಕಟ್ಟನ್ನು ಸೂಚಿಸುವುದರೊಂದಿಗೆ ವೈಷ್ಣವ ಪಂಥದ ಕಂಭದ ಪ್ರಸ್ತಾವನೆಯನ್ನು ವಿವರಿಸುತ್ತದೆ. ಇಲ್ಲಿ ಗಮನ ಸೆಳೆಯುವ ಅಂಶವೆಂದರೆ ಶ್ರೀಹರಿ ಕಂಬದರಂಗನಾಗಿ ಜನ್ಮ ತಳೆಯುವ ಪ್ರಮುಖ ಹಿನ್ನೆಲೆ, ಜೊತೆಗೆ ಬಡಗಿ ಹನುಮಂತನೆಂಬ ಪ್ರಜಾಪೀಡಕ ದುಷ್ಟವ್ಯಕ್ತಿಯ ಜೀವನ ವಿರೋಧಿ ನಿಲುವು. ಆತನ ದುಷ್ಟತನ ಅಡಗಿಸುವುದರ ಜೊತೆಗೆ ಹಿಂಸಾರೂಪದ ಬದುಕಿಗೆ ಇತಿಶ್ರೀ ಹಾಡುವುದು. ಇಲ್ಲಿ ಕಂಬದರಂಗನ ಅವತಾರ ಅನಿವಾರ್ಯ ಎಂಬ ಸೂಚನೆಯೂ ದೊರಕುತ್ತದೆ. ಜೊತೆಗೆ ಕಂಬದರಂಗ ಬಡಗಿ ಹನುಮಂತನಂಥ ದುಷ್ಟ ವ್ಯಕ್ತಿಯನ್ನು ಕೊಲ್ಲಲು ಇರುವ ಆಶಯದ ಹಿಂದೆ ಕಂಬದರಂಗ ತನ್ನತನವನ್ನು ಮರೆಯಬೇಕಾಗುತ್ತದೆ. ತನ್ನನ್ನು ತಾನು ಗುರುತಿಸಿ ಕೊಳ್ಳುವ ತವಕವೂ ಸ್ಪಷ್ಟವಾಗಿ ಪ್ರಕಟವಾಗುತ್ತದೆ. ಬಬ್ಬೂರ ಗೌಡನ ಎರೆಯ ಹೊಲದಲ್ಲಿ ಸಿಕ್ಕ ಉಕ್ಕಿನ ಪಾಳಿನಿಂದ ಕಂಬವನ್ನು ಮಾಡಿಸಿದರೆ ಸತ್ತಿರುವ ಗೌಡನ ಪರಿವಾರದವರೆಲ್ಲರೂ ಬದುಕುತ್ತಾರೆಂಬ ಕೊರವಂಜಿಯ ಮಾತು, ಅದರಂತೆ ಉಕ್ಕಿನ ಕಂಬ ಮಾಡಿಸಲು ಗೌಡ, ಬಡಗಿ ಹನುಮಂತನ

ಮನೆಗೆ ಬರುತ್ತಾನೆ. ಬಂದಂಥ ಗೌಡನನ್ನು ಬಡಗಿ ದರ್ಪದಿಂದ ಜರಿಯುವುದು ಆತನ ದುರಹಂಕಾರದ ಪರಮಾವಧಿಯಾಗಿ ಪ್ರಕಟವಾಗುತ್ತದೆ.

ನಾವು ಕಾನಪ್ಪ ಬಬ್ಬೂರ ಗೌಡ ಮೂರು ಹಿಡಿ ಹೊನ್ನು ತಂದಿದ್ದೀನಿ
ಉಕ್ಕಿನ ಪಾಳು ಮಾಡಿ ಕೊಡಬೇಕಪ್ಪ ಅಂಬೋ ಮಾತಿಗೆ
ಬೆಳ್ಳಿ ಬಂಗಾರನೇ ಕಣ್ಣಾಗೆ ನೋಡಲ್ಲ ಅಂಥಾದ್ದರಲ್ಲಿ
ಯಾರಲೇ ಸತ್ತ ಕಬ್ಬಿಣ ಬಡಿಯೋರುಷ ಹೋಗಲೇ ಕಳ್ಳಸೂಳೆಮಗನೆ [2]

ಅಂದು ಒಂಬತ್ತು ಕಾವಲುಗಾರರನ್ನು ಕರೆಸಿ ಒಂಭತ್ತು ಬಾಗಿಲಿನಿಂದಾಚೆ ನೂಕಿಸಿದರು. ಹೀಗೆ ಬೇಡಿ ಬಂದವರನ್ನು ಸಮಯ, ಸಂದರ್ಭದ ಅರಿವಿಲ್ಲದೆ ಹೊರಗೋಡಿಸುವ ಅಮಾನವೀಯ ಕ್ರಮದಿಂದಾಗಿ ಆತನ ದುರ್ದಿನಗಳು ಆರಂಭವಾಗುತ್ತವೆ.

ಉಕ್ಕಿನ ಕಂಬ ಮಾಡಿಸುವ ತವಕ ಬಬ್ಬೂರ ಗೌಡನದಾದರೆ ಮೋಜು, ದರ್ಪ, ಮಂತ್ರ, ತಂತ್ರ, ಮಾಟ, ಮೋಡಿ ಮೊದಲಾದ ಅತಿಮಾನುಷ ಕೃತ್ಯಗಳಿಂದಲೇ ಮಹಾನಾಯಕನಾಗುವ ಭ್ರಮೆ ಹನುಮಂತನದು. ನರಮಾನವರನ್ನು ಅತ್ಯಂತ ನಿಕೃಷ್ಟವಾಗಿ ಕಾಣುವ ರೀತಿಯು ಆತನ ಅದಃಪತನದ ಮುನ್ಸೂಚನೆ. ಬಡಗಿಯ ದುರ್ವರ್ತನೆ ಯಾವ ಹಂತ ತಲುಪುತ್ತದೆ ಎಂದರೆ ಉಕ್ಕಿನ ಕಂಬವನ್ನು ಮಾಡಿ ನೀರು ಹೀರಿಕೊಳ್ಳಲು ಉಚ್ಚೆ ಬಚ್ಚಲಿಗೆ ಹಾಕುತ್ತಾನೆ. ಇದೊಂದು ಪಾಪದ ಮೊತ್ತವಾಗಿ ಬಡಗಿ ಹನುಮಂತ ಅಪಾರ ಬೆಲೆಯನ್ನು ತೆರಬೇಕಾಗುತ್ತದೆ.

ಬಡಗಿ ಹೆಂಡರಾಗ ಗುಡ್ಡದಂತ ಬಸುರೆಂಗಸು
ಪಟ್ಟದ ಸಾಲಿನ ಮೇಲೆ ಉಪ್ಪರಿಗೆ ಮಂಚದ ಮೇಲೆ
ಮಲಗಿಕೊಂಡು ರೈತಾನೆ ಕಾರಿಕೊಂಡು ಪ್ರಾಣಾನೆ ಬಿಟ್ಟಳಂತಳಲ್ಲೋ ॥ [3]

ಉಚ್ಚೆ ಬಚ್ಚಲಾಗೆ ಮಕಾಡೆ ಹಾಕಿದ್ದ ಕಂಬ, ಕಪ್ಪೆಯಾಗಿ ಅರಚುವುದು, ಬಚ್ಚಲ ನೀರನ್ನು ರಾಡಿ ಮಾಡುವುದು ಮುಂತಾದ ವಿಷಯಗಳಲ್ಲಿ ಶ್ರೀಹರಿ ತನ್ನ ಮಹಿಮೆಯನ್ನು ಮೆರೆದರೂ ಅರ್ಥ ಮಾಡಿಕೊಳ್ಳದ ದುಷ್ಟ ಹನುಮಂತ ತನ್ನ ದುಷ್ಟತನವನ್ನು ಮತ್ತೂ ಮುಂದುವರಿಸುತ್ತಾನೆ. ಆತನ ದೌರ್ಜನ್ಯವನ್ನು ಸಹಿಸಿಕೊಂಡು ಬಾಳುವ ಹಲವು ಪ್ರಸಂಗಗಳು ಈ ಕಾವ್ಯದಲ್ಲಿ ಪ್ರಕಟವಾಗುತ್ತವೆ. ಕಂಬದರಂಗನೇ ಏಳುಕೋಟಿ ದೇವತೆಗಳನ್ನು ಹನುಮಂತನ ವಿರುದ್ಧ ಎತ್ತಿ ಕಟ್ಟುವ ಸಂದರ್ಭವು ಅರ್ಥಪೂರ್ಣವಾಗಿದೆ.

ದೆಸೆವಂತ ಹುಟ್ಟೋ ಕಾಲ ಬಂದೈತೆ
ಗಂಡಾಂತರವೆಲ್ಲಾ ಹರಿಯೋ ಕಾಲ ಬಂದೈತೆ
ಆಯಿತವಾರ ಅಮಾಸೆ ಮೂರು ಮುಕ್ಕಾಲು ಗಳಿಗೆಯೊಳಗೆ
ದೆಸೆವಂತ ಏಳು ಕೋಟಿ ದೇವತುರುಗಳನ್ನೆಲ್ಲಾ
ಜುಟ್ಟು ಹಿಡಿದು ಎಳೆದು ಬಾಗಿಲಿಗೆ ಕಟ್ಟೆವನೆ
ದೆವ್ವದ ಉಸಿರು ತಗುಲಿ ಬಡಗಿ ವಂಶವೆಲ್ಲಾ ನಾವಶಾಗುವುದಲ್ಲೋ ।[4]

ಕಂಬದರಂಗ ಬಡಗಿ ಹನುಮಂತನ ಪರಿವಾರವನ್ನೆಲ್ಲಾ ನಾಶ ಮಾಡಿದರೂ, ಆತನಿಗೆ ದೈಹಿಕವಾಗಿ ತೊಂದರೆಯಾಗಿಲ್ಲ. ಅಷ್ಟೇ ಅಲ್ಲ ಆತನನ್ನು ಸಂಹರಿಸುವುದು ಕಂಬದರಂಗನಿಗೆ ವಿಪರೀತ ಶ್ರಮವೇನಲ್ಲ. ಆದರೆ ಆತನಿಂದ ಇನ್ನೂ ಕೆಲಸವಾಗಬೇಕಾಗಿದೆ. ಜೊತೆಗೆ ತಾನು ಮೆರೆದ ದರ್ಪ, ಇತರರಿಗೆ ಬಡಗಿಯೂ ಒಬ್ಬ ಸಾಮಾನ್ಯ ಹುಲುಮಾನವ ಎಂಬುದನ್ನು ದೈವ ಸಾಕ್ಷಾತ್ಕರಿಸಬೇಕಾದ ಅಗತ್ಯವೂ ಕಂಬದರಂಗನಿಗೆ ಇದೆ. ಜೊತೆಗೆ ಕಂಬದ ರೂಪವೆತ್ತಲೂ ಬೇಕಾದ ಪೂರಕ ಸಿದ್ಧತೆಗಳನ್ನು ಬಡಗಿ ಹನುಮಂತನೇ ಮಾಡಬೇಕಾಗುತ್ತದೆ. ಇದಕ್ಕೆ ಪೂರಕವೆಂಬಂತೆ ಬಡಗಿ ಪಡುವ ಪಡಿಪಾಟಲುಗಳು ಕಾವ್ಯಭಾಗದಲ್ಲಿ ಸುದೀರ್ಘವಾಗಿ ಬರುತ್ತದೆ.

ಕಂಬದರಂಗನನ್ನು ದೆಸೆವಂತ, ಮಾಯಕಾರ, ಶನಿವಾರದಯ್ಯ, ಸತ್ಯವಂತ ಎಂದೆಲ್ಲಾ ಸಂಬೋಧಿಸಲಾಗುತ್ತದೆ. ಇಲ್ಲಿ ಕಂಬದರಂಗನ ತಂತ್ರವಾಗಲಿ, ಪವಾಡವಾಗಲಿ ಇವೆಲ್ಲಾ ಕಂಬದರಂಗ ತಾನು ಉಳಿಯುತ್ತಾ ತಮ್ಮತನವನ್ನು ಸ್ಥಾಪಿಸಲು ಪಡುವ ಪ್ರಸಂಗಗಳು ಎಂಬುದು ಗಮನಾರ್ಹ. ಹಾಗೆಯೇ ಕಾವ್ಯದ ಆರಂಭದಿಂದಲೂ ಹಲವು ಬಗೆಯ ಪವಾಡಗಳು ನಡೆಯುತ್ತವೆ. ಇದಕ್ಕೆ ಎರಡು ಕಾರಣಗಳನ್ನು ಗುರುತಿಸಬಹುದು. ಮೊದಲನೆಯದು ಅವು ರಚನೆಯಾದ ವರ್ಗ ಅಥವಾ ಸಮಾಜದ ಆಶೋತ್ತರಗಳನ್ನು ಪ್ರಕಟಿಸುವುದು. ಎರಡನೆಯದು ಕಥೆಯ ಜೊತೆಗೆ ಉಪಕಥೆಗಳನ್ನು ಸೃಷ್ಟಿಸುತ್ತಾ ಕಥೆ ಮುಂದುವರಿಯಲು ಕಾರಣವಾಗುವುದು. ಇವು ಕಂಬದರಂಗನ ಘನ ಮಹಿಮೆಯನ್ನು ಗಾಢವಾಗಿ ಪರಿಭಾವಿಸುವುದಕ್ಕೆ ಕಾರಣವಾಗುತ್ತವೆ. ಈ ಬಗ್ಗೆಯ ಆಶಯವನ್ನು, ಕಾವ್ಯ ಲಕ್ಷಣದ ಚೌಕಟ್ಟನ್ನು ಕಂಬದರಂಗನ ಕಥೆಯ ವಕ್ತೃ ರೂಢಿಸಿ ಬೆಳೆಸಿಕೊಂಡು ಬಂದಿರುವುದು ವಿಶೇಷವಾಗಿದೆ.

ಶ್ರೀಹರಿಯ ಪರೋಕ್ಷ ರೂಪವಾದ ಉಕ್ಕಿನ ಪಾಳನ್ನು ಉಚ್ಚೆ ಬಚ್ಚಲಿಗೆ ಹಾಕುವ ದುರಹಂಕಾರದ ವರ್ತನೆಗಳ ವಿಸ್ತೃತ ರೂಪ ಪಡೆದ ಬಡಗಿ ಹನುಮಂತ, ಆ ಸಲುವಾಗಿಯೇ

ಹಲವು ಹಿಂಸೆಗಳನ್ನು ಅನುಭವಿಸಬೇಕಾಗುತ್ತದೆ. ಹೆಂಡತಿಯ ಸಾವು ಒಂಬತ್ತು ಬಾಗಿಲಿನ ಉಪ್ಪರಿಗೆ ಮನೆ ಸುಟ್ಟು ಭಸ್ಮವಾಗುವುದು. ಆಳು, ಮಕ್ಕಳು, ಕುದುರೆ ಮೊದಲಾದ ಜೀವರಾಶಿಗಳೆಲ್ಲವೂ ರಕ್ತಕಾರಿ ಸಾಯುವುದು. ಇವೆಲ್ಲವೂ ಕಂಬದರಂಗನ ಪವಾಡ ಪ್ರಸಂಗಗಳೇ ಆದರೂ ನರಮನುಷ್ಯನಾದ ಹನುಮಂತನಿಗೆ ತಾನು ಮಾಡಿದ ಕಂಬ ಭಗವಂತನ ಮೂರ್ತಿ ರೂಪ ಎಂಬ ಪ್ರಜ್ಞೆ ಇಲ್ಲದೇ ಹೋದುದು ದೈವ ನಿಯಮ. ಈ ಪ್ರಸಂಗವನ್ನು ನಿರೂಪಿಸುವ ಕಥೆ ಹತ್ತಾರು ಪುಟಗಳಲ್ಲಿ ಬೆಳೆಯುತ್ತಾ ಹೋಗುತ್ತದೆ. ಹನುಮಂತನ ಸಂಕಟ, ಉಪಾಯ ಕಾಣದ ತವಕ, ಸಾವನ್ನು ತಪ್ಪಿಸಿಕೊಳ್ಳಲು ಮಾಡುವ ಯತ್ನ ಈ ಯಾವುದಕ್ಕೂ ಆಸ್ಪದವಾಗದೇ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಂಡರೂ ತೀರದ ಕಂಬದರಂಗನ ಕೋಪ ಕಂಬದರಂಗ ತನ್ನ ಸಾರ್ವಭೌಮತ್ವವನ್ನು ಪ್ರತಿಪಾದಿಸಿಕೊಳ್ಳುವ ತನಕ ಬಡಗಿ ಹನುಮಂತನನ್ನು ಬಗೆಬಗೆಯಾಗಿ ಕಾಡುತ್ತಾನೆ. ಉಕ್ಕನ ಕಂಬ ತಯಾರಾದ ಮೇಲೂ ಆ ಕಂಬದ ಸೇವೆಯ ಸಂದರ್ಭದಲ್ಲಿ ಮಾಡಬೇಕಾದ ಶಾಸ್ತ್ರ, ಧಾರ್ಮಿಕ ವಿಧಿಗಳನ್ನು ಪಂಚಾಂಗದ ಶಾಮಣ್ಣ, ಮಡಿವಾಳ ಮಾಳಪ್ಪ, ತಳವಾರ, ಚಿಪ್ಪಿಗರು ಇವರೆಲ್ಲರೂ ತಮ್ಮ ತಮ್ಮ ಕೆಲಸ ಮಾಡಲು ನಿರಾಕರಿಸಿದಾಗ ಕಂಬದರಂಗ ಇವರಿಗೆ ನೀಡಿದ ಶಿಕ್ಷೆಯ ಸ್ವರೂಪ, ಸಾವು, ಕುರುಡತನ ಮೊದಲಾದ ಪವಾಡ ಭಕ್ತರಲ್ಲಿ ಭಯ ಹುಟ್ಟಿಸುತ್ತದೆ. ಅದಕ್ಕೆ ಪೂರಕವಾಗಿ ತಮ್ಮ ತಪ್ಪಿನ ಅರಿವಾಗಿ ಕಂಬದರಂಗ ಸೇವೆಯಲ್ಲಿ ತಮ್ಮನ್ನು ಒಪ್ಪಿಸಿಕೊಳ್ಳುವ ತನಗಳಿಂದ ಕಂಬದರಂಗನ ಘನಮಹಿಮೆ ವ್ಯಾಪಕವಾಗುತ್ತದೆ. ಕೊನೆಗೆ ದೈವ ಬಯಸಿದಂತೆ ಬೋಚಿಕೆರೆಯಲ್ಲಿ ಕಂಬಕ್ಕೆ ಜಲಧಿ ಪೂಜೆಯಾಗಿ ಕಂಬವನ್ನು ಅಪಮಾನಿಸಿ ಶ್ರೀಹರಿಯನ್ನು ಅಪಹಾಸ್ಯ ಮಾಡಿದ್ದ ಬಡಗಿ ಹನುಮಂತ ಕಂಬದರಂಗನಿಗೆ ಮೊದಲ ಬಲಿಯಾಗಬೇಕಾಗುತ್ತದೆ. ಹೀಗೆ ಪಾಪಕ್ಕೆ ಪಾಪ ಮರಿ ಇಕ್ಕುತ್ತದೆ.

> ಉಕ್ಕಿನ ಉರಿಬಾಣ ಎತ್ತುತಾನೆ ಕಿಡಕಿಡನೆ ಎಗರುತ್ತಾನೆ
> ಬಾರಪ್ಪ ಖಂಡಿತವಾಗಿ ನಿನ್ನ ಬಿಡೋದಿಲ್ಲ ಬಾರೋ
> ಸುತ್ತ ಮೂರು ದಿಕ್ಕಿಗೆಲ್ಲಾ ಗಂಡನಾಗಿದ್ದೆ ನೀನು
> ಬಾರಪ್ಪ ನಿನ್ನ ಪುಂಡುತನ ನನ್ನ ಮುಂದೆ ತೋರು
> ಆಗ ಬಡಗಿ ಹನುಮಂತ ಗುಡಾರದೊಳಗೆ ಕೈ ಜೋಡಿಸುತ್ತಿದ್ದಂಗೆ
> ಬೋಚಿಕೆರೆವೊಳಗೆ ಗುಡಾರದ ಮುಂದೆ ಅರೆವಾಲಗ
> ಉರಿ ಎದ್ದು ಹನುಮಂತ ಚಿಟಚಿಟ್ ಅಂತ ಬೆಂದು ಹೋಯ್ತಾನಮ್ಮ । [5]

ಹೀಗೆ ಕ್ರೌರ್ಯ, ಮಂತ್ರ-ತಂತ್ರ ಮುಂತಾದ ಮಾಂತ್ರಿಕ ಲೋಕವನ್ನೇ ಸೃಷ್ಟಿಸುತ್ತಾ ಪ್ರಜಾಪೀಡಕನಾಗಿ ಮೆರೆದ ಬಡಗಿ ಹನುಮಂತನ ಅವನತಿಯೂ ಕಂಬದರಂಗನ

ಕೃಪೆಯಂತೆಯೇ ನಡೆಯುತ್ತದೆ.

ಇಲ್ಲಿಂದ ಮುಂದೆ ಪ್ರಕಟಗೊಳ್ಳುವ ಕಂಬದರಂಗನ ಕಥೆಯ ಪ್ರಮುಖ ನೆಲೆ ಕಾಡುಗೊಲ್ಲರ ಸಾಂಸ್ಕೃತಿಕ ಆಯಾಮಗಳನ್ನು ಕುರಿತದ್ದು. ದಾಸರ ಚನ್ನಪ್ಪನಂಥ ಅಸಹಾಯಕ ಪಲಾಯನವಾದಿ ವ್ಯಕ್ತಿಯನ್ನು ಕಂಬದರಂಗ ತನ್ನ ಪ್ರಭಾವದಿಂದಾಗಿ ಒಬ್ಬ ಸಮರ್ಥಶಾಲಿಯನ್ನಾಗಿ ರೂಪಿಸುತ್ತಾನೆ. ಜೊತೆಗೆ ಈ ಚನ್ನಪ್ಪ ಕಾಡುಗೊಲ್ಲರ ಆಚಾರ, ವಿಚಾರಗಳಿಗೆ ಅನುಗುಣವಾಗಿ ನಡೆದುಕೊಳ್ಳುತ್ತಾ ಒಂದು ಜನಾಂಗದ ಸಂಸ್ಕಾರ, ಆಚಾರ-ವಿಚಾರಗಳಿಗೆ ಸಂಪ್ರದಾಯಗಳನ್ನು ಬೆಳೆಸುತ್ತಾ ಹೋಗುತ್ತಾನೆ. ಹೀಗೆ ಲೌಕಿಕ ಸ್ತರದಿಂದ ಅಲೌಕಿಕತ್ವಕ್ಕೆ ಏರುವ ಚನ್ನಪ್ಪನ ಹಲವು ರೀತಿಯ ಪವಾಡ, ಮಹಿಮೆಗಳನ್ನು ಕಂಬದರಂಗನ ಕೃಪಾಕಟಾಕ್ಷದಲ್ಲಿಯೇ ತೋರುತ್ತಾನೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಘೋರಪಾತಮ್ಮ ಎಂಬ ಹೆಳವ ಹುಡುಗಿಯನ್ನು ಚನ್ನಪ್ಪ ಮದುವೆಯಾಗುವ ಪ್ರಸಂಗ. ಇಲ್ಲಿನ ಅಲೌಕಿಕ ಘಟನೆಗಳು ಪುರಾಣಸದೃಶವಾದರೂ ಗೊಲ್ಲ ಸಂಸ್ಕೃತಿಯ ಆಚಾರ, ಸಂಪ್ರದಾಯಗಳು ಬೆಸೆದುಕೊಂಡೇ ಪ್ರಕಟವಾಗುತ್ತವೆ. ಹೊನ್ನ್ಯಾರು ಗೊಲ್ಲರ ಪಾತಣ್ಣ ಭಾರೀ ಕುಳ. ಏಳು ಹೆಣ್ಣು, ಅಷ್ಟೇ ಗಂಡು ಮಕ್ಕಳ ತುಂಬು ಸಂಸಾರ. ಇದರಲ್ಲಿ ಎಲ್ಲರಿಗೂ ಕಿರಿಯವಳು ಘೋರಪಾತಮ್ಮ ಎಂಬ ಎಳವಿ. ಈ ಹೆಳವಿಯ ಮೇಲೆ ಕಂಬದರಂಗನ ಕಣ್ಣು ಬೀಳುತ್ತದೆ. ಆಕೆಯನ್ನು ತನ್ನ ಶಿಷ್ಯ ಚನ್ನಪ್ಪನಿಗೆ ಮದುವೆ ಮಾಡಿಕೊಳ್ಳುವ ಮೂಲಕ ಆಕೆಯ ಅಂಗವಿಕಲತೆಯನ್ನು ಹೋಗಲಾಡಿಸುತ್ತಾನೆ. ಚನ್ನಪ್ಪ ನೆಂಟರ ಹಟ್ಟಿಗೆ ಬಂದು ಹೆಣ್ಣು ಕೇಳುವ ಪ್ರಸಂಗ ಕಾವ್ಯದಲ್ಲಿ ಹೀಗೆ ಪ್ರಕಟವಾಗುತ್ತದೆ.

> ಪಾತಯ್ಯ ಮಾವ ತಮ್ಮ ಮಗಳ ಕೊಡಬೇಕು ನೀನು
> ಮೊದಲೇ ಕೇಳಿದ್ದರೆ ಮುತ್ತಿನಂಥ ಹೆಣ್ಣು ಮಕ್ಕಳನೇ ಕೊಟ್ಟು
> ಮದುವೆ ಮಾಡುತ್ತಿದ್ದೆ ನಾನು । ಈಗ ನನ್ನ ಮಾನ ಕಳೀಬೇಡ
> ಇರೋದೊಂದು ಹೆಣ್ಣು ಹುಟ್ಟು ಘೋರ ಹೆಳವೆ ಎತ್ತಬೇಕು
> ಇಳಿಸಬೇಕು । ಹೆಂಗಪ್ಪ ಇಂಥ ಅಜ್ಜನಿಗೆ ಮಗಳ ಕೊಡೋದು ನಾನು ।
> ಹೆಳವಾಗಲಿ । ಕುರುಡಾಗಲಿ ನಿನ್ನ ಮನೆಯೊಳಗೆ ಒಂದು ಬೆಕ್ಕಿನ
> ಮರಿಯನ್ನಾದರೂ ಕೊಡಬೇಕು ಪಾತಯ್ಯ ನೀನು ।[6]

ದಾಸರ ಚೆನ್ನಪ್ಪನಿಗೆ ಮಗಳನ್ನು ಕೊಡಲು ತಿರಸ್ಕರಿಸಿದ ಪಾತಯ್ಯನೊಂದಿಗೆ ಹಲವು ಪವಾಡಗಳನ್ನು ಮಾಡಬೇಕಾಗುತ್ತದೆ. ಅಂತಹ ಪವಾಡಗಳಿಂದಲೇ ಪಾತಮ್ಮ ದಾಸಣ್ಣರ ವಿವಾಹವು ನಡೆಯುತ್ತದೆ. ಇವರ ವಿವಾಹ ವರ್ಣನೆಯ ಮೂರು ನಾಲ್ಕು ಪದ್ಯಗಳು

ಕಾಡುಗೊಲ್ಲರ ಸಂಸ್ಕೃತಿಯ ದಾಖಲಾರ್ಹ ಮಾಹಿತಿಗಳು. ಶಾಸ್ತ್ರದ ನೀರು ತರುವುದು, ಹುತ್ತದ ಪೂಜೆ, ಕ್ಷೌರದ ಶಾಸ್ತ್ರ, ಉಂಗುರ ಉಡುದಾರ ಶಾಸ್ತ್ರ, ಅಲಂಕೃತಗೊಂಡ ಗಂಡಿನ ಕಾಲಿನ ಊರಿನ ಕುರಿ ಕಾಯುವವರು ನಮಸ್ಕರಿಸುವ ಪದ್ಧತಿ, ಇವೆಲ್ಲವೂ ಕಾವ್ಯದಲ್ಲಿ ವಿವರವಾಗಿ ಬಂದಿವೆ.

ಪಾತಮ್ಮಳನ್ನು ಮದುವೆ ಮಾಡಿಕೊಂಡು ಚನ್ನಪ್ಪ ಹೆಂಡತಿಯನ್ನು ತವರುಮನೆಯಲ್ಲಿ ಬಿಡುತ್ತಾನೆ. ಆದರೆ ಕಂಬದರಂಗನೇ ಛೇಡಿಸಿ ಹೆಂಡತಿಯನ್ನು ಕರೆತರಲು ಕಳುಹಿಸುತ್ತಾನೆ. ಹೆಣ್ಣನ್ನು ಗಂಡಿನ ಮನೆಗೆ ಹೊಸದಾಗಿ ಕಳಿಸುವಾಗ ಮಾಡುವ ಶಾಸ್ತ್ರವು ಕಾಡುಗೊಲ್ಲರ ಸಂಸ್ಕೃತಿಗೆ ಅನುಗುಣವಾಗಿ ಪ್ರಕಟವಾಗುತ್ತದೆ.

ಜವಳಿ ಅಂಗಡಿಗೆ ಹೋಗಿ ಕರಿಸೀರೆ ತಂದು ಪಾತಮ್ಮನಿಗೆ
ಶಾಸ್ತ್ರದ ನೀರು ಹಾಕುತಾರೆ । ಕರಿಯಾನೆ ಸೀರೆ ಉಡಿಸುತಾರೆ
ಕಸ್ತೂರಿ ಹಚ್ಚುತ್ತಾರೆ । ಪಾತಮ್ಮನಿಗೆ ಅಂಗಾರ ತುಂಬುತಾರೆ
ಪಟ್ಟೆ ಸೀರೆ ಎಲೆ ಅಡಿಕೆ ಮಡಿಲಿಗೆ ತುಂಬುತಾರೆ
ಏಳು ಜನ ಮಡಿಲಕ್ಕಿ ಕಟ್ಟಿ ಪಾತಮ್ಮನಿಗೆ ಸುತ್ತಮುತ್ತಲ
ಜನವಾದ ಜನವೆಲ್ಲಾ ಮರಳಾಕಿದರೆ ಮರಳಿಯ ದಂಗೆ
ಜಮಾಯಿಸಿ ಘೋರ ಪಾತಮ್ಮನನ್ನು ಕಳುಹಿಸುತಾರಲ್ಲೋ । [7]

ಹುಟ್ಟು ಹೆಳವಿ ಪಾತಮ್ಮನನ್ನು ಹೆಗಲ ಮೇಲೆ ಹೊತ್ತು ತನ್ನ ಮನೆಗೆ ಚನ್ನಪ್ಪ ಕರೆತರುತ್ತಾನೆ. ಆಶ್ಚರ್ಯಕರ ರೀತಿಯಲ್ಲಿ ಪಾತಮ್ಮನಿಗೆ ಎರಡು ಕಾಲುಗಳು ಬರುತ್ತವೆ. ತವರು ಮನೆಯವರು ಹಾಕಿದ್ದ ಏಳು ಸೇರು ಮಡಿಲಕ್ಕಿಯನ್ನು ಏಳು ತಿಂಗಳ ಕಾಲ ಊಟ ಮಾಡುತ್ತಾರೆ. ಇಲ್ಲಿಯ ತನಕ ತನ್ನ ಮಹಿಮೆಯಿಂದಲೇ ಬೇಕು ಬೇಕಾದ ಪದಾರ್ಥಗಳನ್ನು ಚನ್ನಪ್ಪನ ಮೂಲಕ ಪಡೆಯುತ್ತಿದ್ದ ಕಂಬದರಂಗ ಈಗ ಚನ್ನಪ್ಪನನ್ನು ದುಡಿಮೆಗೆ ಕಳುಹಿಸುತ್ತಾನೆ. ಈಸಂದರ್ಭದಲ್ಲಿ ದಾಸಪ್ಪನ ಜಡತ್ವ ಹೋಗಿಸುವ ಕಾಯಕ್ಕೆ ಇಳಿಸುವ ಪ್ರಸಂಗದ ಹಲವು ಚಿತ್ರಗಳು ರಂಗನಾಥನ ಕಾವ್ಯದ ಕೊನೆಯ ಘಟ್ಟದಲ್ಲಿ ಪರಿಣಾಮಕಾರಿಯಾಗಿ ಚಿತ್ರಿತವಾಗಿವೆ. ಜೊತೆಗೆ ಸಿರಾದ ಆ ಕಾಲದ ಜನಜೀವನ ಆಡಳಿತ ಧರ್ಮ ಇವೆಲ್ಲವುಗಳನ್ನು ಇದೇ ಭಾಗದಲ್ಲಿ ಕಾಣಬಹುದು.

ಸಿರಾ ನಗರಕ್ಕೆ ಸಾಂಕ್ರಾಮಿಕ ರೋಗ ಆವರಿಸಿ ಜನ ತತ್ತರಿಸಿ, ಅಪಾರ ಸಾವು ನೋವುಗಳು ಸಂಭವಿಸುತ್ತವೆ. ಜನಗಳು ಸಹಾಯಕ್ಕಾಗಿ ಸಿರಾ ಆಡಳಿತದ ಮೊರೆ ಹೋಗುವುದು ಇವೆಲ್ಲಾ ಜರುಗುತ್ತವೆ. ಸಿರಾ ಆಡಳಿತಕ್ಕೆ ಇದೊಂದು ಬಗೆಹರಿಸಲಾಗದ


ಸಮಸ್ಯೆಯಾಗಿ ಹಲವು ರೀತಿಯ ಸಮಸ್ಯೆಯಲ್ಲಿ ಸಿಕ್ಕುತ್ತದೆ. ಜೊತೆಗೆ ಈ ಸಾಂಕ್ರಾಮಿಕ ರೋಗವನ್ನು ನಿಯಂತ್ರಿಸಬಲ್ಲ, ಈ ಮೂಲಕ ಪವಾಡ ಎತ್ತಬಲ್ಲ ವ್ಯಕ್ತಿಯ ತೀವ್ರ ಅನ್ವೇಷಣೆ ನಡೆಯುತ್ತದೆ. ಇದಕ್ಕೆ ಧಾರ್ಮಿಕ ಸಂಘಟಕರನ್ನು, ದೈವ ಪ್ರತಿನಿಧಿಗಳಾದ ದಾಸಪ್ಪ, ಗೊರಪ್ಪ, ಜಂಗಮ ಇವರುಗಳ ಮೊರೆಹೋಗುತ್ತಾರೆ. ಆದರೆ ಇವರ್‍ಯಾರಿಂದಲೂ ಪರಿಹಾರ ಸಾಧ್ಯವಾಗದೇ ಅವರೆಲ್ಲರೂ ತಲೆಮರೆಸಿಕೊಳ್ಳುತ್ತಾರೆ. ಭಿಕ್ಷೆಗೆ ಬಂದ ದಾಸಪ್ಪ ನೇರವಾಗಿ ಆಡಳಿತದವರ ಮುಂದೆ ಹೋಗುತ್ತಾನೆ. ಆಗ ಇವನಿಂದಲಾದರೂ ಸಮಸ್ಯೆ ಪರಿಹಾರವಾಗ ಬಹುದೆಂದು ಭಾವಿಸಿ ಅವತಾರವೆತ್ತುವ ಮೂಲಕ ರೋಗವನ್ನು ಪರಿಹರಿಸಬಹುದೆಂದು ದಾಸಪ್ಪನನ್ನು ಬಂಧಿಸುತ್ತಾರೆ. ದಾಸಪ್ಪ ಬಂಧಿಯಾಗಿ ಕಂಬದರಂಗನನ್ನು ಧ್ಯಾನ ಮಾಡುತ್ತಾನೆ. ಕೊನೆಗೆ ಮೇಲುಕುಂಟೆಯಲ್ಲಿ ಪವಾಡ ಮಾಡುವ ಮೂಲಕ ಸತ್ತ ಇಬ್ಬರು ವ್ಯಕ್ತಿಗಳನ್ನು ಬದುಕಿಸುತ್ತಾನೆ. ಈ ಮೂಲಕ ಸಿರಾದ ದೊಡ್ಡ ಕೆರೆಯ ಹಿಂಭಾಗದ ತೂಬಿನಗುಂಡಿ ಗದ್ದೆಯನ್ನು ಮಾನ್ಯವಾಗಿ ಪಡೆದ ಪ್ರಸಂಗ ಐತಿಹಾಸಿಕವಾಗಿ ಮಹತ್ವ ಪಡೆಯುತ್ತದೆ.

> ಹೇಳುತಾನೆಲ್ಲೋ ಗಾನಗುರುವು ಕೇಳಣ್ಣ
> ಈಗ ಬಂದಿರೋ ಪ್ರಜೆಪಾಲಕರೆಲ್ಲಾ ಸೇರಿ
> ದೊರೆ ಗೌಡಾಳಿಕೆಯೆಲ್ಲಾ ಹೋಗಿ ಸೀರ್ಯ ಕೆರೆ ಹಿಂದಲ
> ತೂಬಿನ ಗುಂಡಿ ಹಿಂದಲ ಗದ್ದೆ ಮಾನ್ಯ ಮಾಡಬೇಕು
> ಕಲ್ಲಾಕಬೇಕು ಕಂಬೆಗೆ ರಾತು ಮಾಡಬೇಕು [8]

ಮಾಗೋಡು ರಂಗನಾಥನ ಕಥೆಯಲ್ಲಿ ಜನಪದ ಗಾದೆಗಳು, ಒಗಟುಗಳು, ನಂಬಿಕೆ-ಸಂಪ್ರದಾಯಗಳು ಅದ್ಭುತವಾಗಿ ಪ್ರಕಟವಾಗುತ್ತವೆ. ಇವೆಲ್ಲಾ ಕಾಡುಗೊಲ್ಲರ ಸಂಸ್ಕೃತಿಗೆ ಮಾತ್ರ ಸಂಬಂಧಿಸದೆ ಸಾರ್ವತ್ರಿಕ ಮೌಲ್ಯವನ್ನು ಪಡೆಯುತ್ತದೆ. ಜನಪದರಿಗೆ ಸಂಖ್ಯೆ ಏಳರ ಬಗೆಗೆ ಅನನ್ಯ ಗೌರವ. ಹಾಗಾಗಿ ಈ ಕಾವ್ಯದಲ್ಲಿ ಕೂಡ ಸಂಖ್ಯೆ ಏಳರ ಬಗೆಗೆ ಹತ್ತಾರು ಉಲ್ಲೇಖಗಳು ದೊರೆಯುತ್ತವೆ. ಏಳು ಸುತ್ತಿನ ಕೋಟೆ, ಏಳು ಉಪ್ಪರಿಗೆ ಮನೆ, ಏಳು ಜನ ಅಣ್ಣ ತಮ್ಮಂದಿರು, ಏಳು ರಾತ್ರಿ, ಏಳು ಊರು ಈ ಎಲ್ಲವೂ ಸಂಖ್ಯೆ ಏಳರ ಬಗೆಗಿನ ಮಹತ್ವವನ್ನು ಪರಿಚಯಿಸುತ್ತದೆ. 'ಸೊಸೆ ಸತ್ತರ ಸೋಬಾನ, ಮಗ ಸತ್ತರೆ ಮನೆ ಹಾಳು', 'ಶೆಟ್ಟರ ಬುದ್ದಿ ಸುಟ್ಟರೂ ಹೋಗಲ್ಲ', 'ಕೊಕ್ಕರೆಗೆ ಒಂದು ಕೆರೆಯಲ್ಲ, ದಾಸಯ್ಯನಿಗೆ ಒಂದು ಊರಲ್ಲ', 'ಅಕ್ಕಸಾಲಿ ಅಕ್ಕ ತಂಗಿ ವಡವೆಗೂ ಆರು ತೂಕ ಕತ್ತರಿಸುವ ಜಾತಿ' ಮುಂತಾದ ಗಾದೆಗಳಲ್ಲಿ ಸಮಾಜ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ವಿವರಿಸುತ್ತದೆ.

ಈ ಕಾವ್ಯದ ಮಹತ್ವದ ಸಂಗತಿಗಳೆಲ್ಲಾ ಜರುಗುವುದು ಕಂಬದರಂಗನ ಕೃಪೆಯಿಂದಲಾದರೂ ರಂಗನಾಥನ ವಿವಿಧ ಪವಾಡಗಳನ್ನು, ಕಾರ್ಯಕಾರಣ ಸಂಬಂಧವನ್ನು ಪರಿಣಾಮಕಾರಿಯಾಗಿ ಜನಗಳಿಗೆ ತಿಳಿಸಿ ಹೇಳುವ ಈ ಮೂಲಕ ಕಂಬದರಂಗನಿಗೂ ಜನಗಳಿಗೂ ಸಂಪರ್ಕ ಸೇತುವಾಗುವವಳು ಕೊರವಂಜಿ. ಈ ಕೊರವಂಜಿಯ ವರ್ಣನೆ ಈ ಕಾವ್ಯದಲ್ಲಿ ಮೂರು-ನಾಲ್ಕು ಸಂದರ್ಭಗಳಲ್ಲಿ ಪ್ರಕಟವಾಗುತ್ತದೆ.

ಬಬ್ಬೂರಿನಲ್ಲಿ ಕಂಬದ ಮೂಲಕ ಅವತಾರ ಎತ್ತಿದ ರಂಗನಾಥ, ಕಂಬದರಂಗನಾಗಿ ಬೋಚಿಕೆರೆ, ನೆಂಟ್ರಟ್ಟಿ, ಮೇಲುಕುಂಟೆ, ಸಿಳ್ಳಿಕ್ಯಾತರ ಬಂಡೆ ಇಲ್ಲೆಲ್ಲಾ ತಂಗಿ ಕೊನೆಗೆ ಸಿರಾ ಸಮೀಪದ ಮಾಗೋಡು ಗ್ರಾಮದಲ್ಲಿ ನೆಲೆ ನಿಂತ ಬಗೆಯನ್ನು, ಆ ಸಂಬಂಧಿ ವಿವರಣೆಯನ್ನು ಮಾಗೋಡಿನ ಎಪ್ಪತ್ತರ ವಯೋಮಾನದ ಜೋಗೀರಣ್ಣ ಅದ್ಭುತವಾಗಿ ಹಾಡುತ್ತಾರೆ. ಜೊತೆಗೆ ಕಂಬದರಂಗನನ್ನು ಕುರಿತು ಕಾವ್ಯ ಹಾಡುವ ಏಕೈಕ ಕಲಾವಿದರೆಂದ ಹಿರಿಮೆಗೂ ಪಾತ್ರರಾಗಿದ್ದಾರೆ.



1. *ಬಂಡಿ ಬಂದಾವೆ ಬಾಳೆ ವನದಾಗೆ - ಡಾ.ಚಿಕ್ಕಣ್ಣ ಯಣ್ಣೆಕಟ್ಟೆ*
2. *ಮಾಗೋಡು ರಂಗನಾಥನ ಕಾವ್ಯ - ಡಾ.ಚಿಕ್ಕಣ್ಣ ಯಣ್ಣೆಕಟ್ಟೆ*
3. *ಅದೇ*
4. *ಅದೇ*
5. *ಅದೇ*
6. *ಅದೇ*
7. *ಅದೇ*
8. *ಅದೇ*

## ಈ) ಜಲಧಿ ಬೊಪ್ಪರಾಯ

ಕುಂಚಿಟಿಗರು ಪ್ರಮುಖವಾಗಿ ಒಂದು ಬುಡಕಟ್ಟು ಜನಾಂಗ. ತುಮಕೂರು, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ವ್ಯಾಪಕವಾಗಿ ನೆಲೆಸಿರುವ ಇವರು ವಕ್ಕಲಿಗ ಜನಾಂಗದ ಒಂದು ಒಳಪಂಗಡ. ಆದರೂ ಸಾಂಸ್ಕೃತಿಕವಾಗಿ ವಕ್ಕಲಿಗ ಸಮುದಾಯದ ಆಚೆಯೂ ತಮ್ಮದೇ ಆದ ಆಚಾರ, ವಿಚಾರ, ಸಂಪ್ರದಾಯಗಳನ್ನು ಹೊಂದಿರುವ ಈ ಜನಾಂಗ ರೈತಾಪಿ ಬದುಕನ್ನು ನಂಬಿ ಬದುಕುತ್ತಿರುವವರು. ಬಯಲುಸೀಮೆಯ ಬಲಿಷ್ಠ ಜನಾಂಗವಾಗಿಯೂ ಕಾಣುವ ಇವರು, ಸಾಮಾಜಿಕ, ಆರ್ಥಿಕ, ರಾಜಕೀಯ ಪ್ರಾಬಲ್ಯ ಹೊಂದಿರುವ ಜನಾಂಗ. ತುಮಕೂರು ಜಿಲ್ಲೆಯ ಸಿರಾ, ಪಾವಗಡ, ಮಧುಗಿರಿ, ಕೊರಟಗೆರೆ ; ಚಿತ್ರದುರ್ಗ ಜಿಲ್ಲೆಯ  ಹಿರಿಯೂರು ತಾಲ್ಲೂಕುಗಳಲ್ಲಿ ಅತಿ ದಟ್ಟವಾಗಿ ನೆಲೆಸಿದ್ದಾರೆ. ಸಿರಾ ತಾಲ್ಲೂಕು ಸೇರಿದಂತೆ ಪಾವಗಡ, ಮಧುಗಿರಿ, ಕೊರಟಗೆರೆ, ಚಳ್ಳಕೆರೆ, ಹಿರಿಯೂರು ಈ ಮೊದಲಾದ ತಾಲ್ಲೂಕುಗಳಲ್ಲಿ ಕುಂಚಿಟಿಗರಂತೆಯೇ ಕಾಡುಗೊಲ್ಲರು, ಕುರುಬರು, ಬೇಡರು ಹೆಚ್ಚು ಕಡಿಮೆ ಸಮಾನವಾಗಿಯೇ ನೆಲೆಸಿದ್ದಾರೆ. ಆದುದರಿಂದ ಮದುವೆ ಸಂಪ್ರದಾಯವೂ ಸೇರಿದಂತೆ ಸಾಮಾನ್ಯ ವ್ಯವಹಾರಗಳಲ್ಲಿ ಈ ಜನಾಂಗಗಳ ನಡುವೆ ಏಕತಾನತೆ ಇದೆ. ಸಾಮ್ಯತೆ ನೇರವಾಗಿ ಪ್ರಕಟವಾಗುತ್ತದೆ.

ಕುಂಚಿಟಿಗರ ನೆಲಮೂಲವನ್ನು ಉತ್ತರಪ್ರದೇಶದಿಂದ ಗುರುತಿಸಲಾಗುತ್ತದೆ. ಹಾಗಾದರೆ ಕುಂಚಿಟಿಗ ಶಬ್ದದ ಬಳಕೆ ಹೇಗೆ? ಇದು ದ್ರಾವಿಡ ಶಬ್ದವೇ? ಅಥವಾ ದ್ರಾವಿಡೇತರ ಮೂಲದ್ದೇ? ಇದೇ ತರಹದ ಪ್ರಶ್ನೆಗಳು ಸಹಜವಾಗಿಯೇ ಏಳುತ್ತವೆ. ಕುಂಚಿಟಿಗರು> ಕುಂಚಿಟಿಗ ವಕ್ಕಲಿಗರು > ಕುಂಚೊಕ್ಕಲಿಗರು > ಕುಂಚಿಗರು ಎಂದೆಲ್ಲಾ ಕರೆಯುವ ಈ ಜನಾಂಗದ ಹೆಸರು ದ್ರಾವಿಡ ಮೂಲದ್ದು. ಕುಂಚ ಎಂದರೆ ಕುರುಬರು ಕಂಬಳಿ ನೇಯ್ಗೆಯಲ್ಲಿ ಬಳಸುವ ಒಂದು ಆಯುಧ. ಕಂಬಳಿಕೆ ಹುಣಸೆಯ ಸರಿ ಹಾಕಿ ನಯವಾಗಿ ಕುಂಚದಿಂದ ತೀಡುವುದು. ಇದಕ್ಕೆ ಪೂರಕ ಎಂಬಂತೆ ಕುಂಚಿಟಿಗರು ವಾಸಿಸುವ ಪ್ರದೇಶಗಳಲ್ಲಿ ಹೇಳುವ ಗಾದೆಯ ಮಾತೊಂದಿದೆ. ಅದೆಂದರೆ 'ಕುರುಬ ಕೆಟ್ಟು ಕುಂಚಿಟಿಗನಾದ' ಎಂಬುದು. ಈ ಗಾದೆ ಮೇಲುನೋಟಕ್ಕೆ ಅಸಂಗತ ಎಂದು ಕಾಣಿಸಿಕೊಂಡರೂ ಇದರ ಒಳಅರ್ಥ ತುಂಬಾ ಸೂಕ್ಷ್ಮವಾಗಿದೆ. ಇದಕ್ಕೆ ಸಮರ್ಥನೆಯಾಗಿ ಕುಂಚಿಟಿಗರ ಕುಲಮೂಲವನ್ನು ಪರಿಚಯಿಸುವ 'ಮೈಸೂರು ಸಂಸ್ಥಾನದ ಜಾತಿಗಳು ಮತ್ತು ಬುಡಕಟ್ಟುಗಳು' ಎಂಬ ಕೃತಿಯನ್ನು ಎಲ್.ಅನಂತಕೃಷ್ಣ ಅಯ್ಯರ್ ಪ್ರಕಟಿಸಿದ್ದಾರೆ (Caste and tribes in Mysore). ಇವರು ಕುರುಬರಿಗೂ ಕುಂಚಿಟಿಗರಿಗೂ ಸಂಬಂಧ ಕಲ್ಪಿಸುವ ಪುರಾಣದ ಕಥೆಯೊಂದನ್ನು ಉಲ್ಲೇಖಿಸುತ್ತಾರೆ. ಜೊತೆಗೆ ಕುಂಚಿಟಿಗರ ಐತಿಹ್ಯಗಳಲ್ಲೂ ಇಂಥವುಗಳೇ ಅಂಶಗಳು

ಪ್ರಕಟವಾಗುತ್ತವೆ. ಕುಂಚಿಟಿಗರು ಮೂಲತಃ ಉತ್ತರಭಾರತದವರು, ಪಶುಪಾಲಕರು, ಚತುರರು. ಇವರ ಹೆಣ್ಣುಮಕ್ಕಳು ರೂಪವತಿಯರು. ಶೀಲ-ಶೌಚಗಳಲ್ಲಿ ಅತ್ಯಂತ ಕಟ್ಟುನಿಟ್ಟು. ತಮ್ಮ ಕುಲಮೂಲದ ಪಾವಿತ್ರ್ಯತೆ ಹಾಗೂ ಶೀಲಸಂಸ್ಕರಣೆಗಾಗಿಯೇ ಈ ಜನಾಂಗ ಉತ್ತರಭಾರತದಿಂದ ದಕ್ಷಿಣಭಾರತದತ್ತ ವಲಸೆ ಬಂದರು ಎಂಬ ವಿವರಣೆಯೊಂದಿಗೆ ಇವರ ಮೂಲವನ್ನು ಇಂದ್ರಪ್ರಸ್ಥದ ಸಮೀಪದ ದ್ವಾರಕಾಪುರ ನಗರವನ್ನು ಉಲ್ಲೇಖಿಸುತ್ತಾರೆ. ಉಂಡೆ ಎತ್ತರಾಯ ರಾಜನಾಗಿದ್ದು 'ಬಾದಶಹ' ರಾಜನ ಪರಮ ಸ್ನೇಹಿತರೂ ಹೌದು ಎಂದಿದ್ದಾರೆ. ಕೆಲವೊಂದು ಕಥೆಗಳಲ್ಲಿ ಕುಂಚಿಟಿಗರ ಮೂಲದವರು ಪಶುಪಾಲಕರಾಗಿದ್ದು ಶುದ್ಧವಾದ ಹಾಲು-ತುಪ್ಪಕ್ಕೆ ಹೆಸರುವಾಸಿಯಾಗಿದ್ದರು. ತುಪ್ಪವನ್ನು ವರ್ಷಾನುಗಟ್ಟಲೆ ಗಾರೆಗಚ್ಚಿನ ನೆಲ, ಹಗೇವುಗಳಲ್ಲಿ ಸಂಗ್ರಹಿಸುತ್ತಿದ್ದರು ಎಂದು ಹೇಳಿದೆ. ಇದು ಇವರ ಮೂಲ ಹಾಗೂ ಕಸುಬನ್ನು ಹೇಳಿದರೆ, ಹೀಗಿದ್ದು ಉತ್ತರಭಾರತದಿಂದ ದಕ್ಷಿಣ ಕರ್ನಾಟಕದ ಕಡೆಗೆ ವಲಸೆ ಬಂದ ಹಿನ್ನೆಲೆಯನ್ನು ವಿವರಿಸಿದ್ದಾರೆ.[1]

ಉಂಡೆ ಎತ್ತರಾಯನ ಹೆಣ್ಣುಮಕ್ಕಳು ಪರಮಸುಂದರಿಯರು. ನಿತ್ಯವೂ ಹಾಲು-ಮೊಸರಿನ ವ್ಯಾಪಾರ ಮಾಡುತ್ತಿದ್ದವರು. ಇಂಥ ಹೆಣ್ಣುಮಕ್ಕಳ ಮೇಲೆ ದೊರೆ ಬಾದಶಹನ ಕಣ್ಣು ಬೀಳುತ್ತದೆ. ಆ ಹೆಣ್ಣುಗಳನ್ನು ಮೋಹಿಸಿದ ದೊರೆ ಇವರನ್ನು ಮದುವೆ ಮಾಡಿಕೊಳ್ಳುವಂತೆ ಕೇಳುತ್ತಾನೆ. ಅದು ಉಂಡೆ ಎತ್ತರಾಯನಿಗೆ ಅತ್ಯಂತ ಆತ್ಮಘಾತಕ ಸಂಗತಿಯಾಗಿ ಕಾಣುತ್ತದೆ. ಬಲಾಢ್ಯ ಬಾದಶಹನ ಕ್ರೂರ ಕೃತ್ಯವನ್ನು ತಿರಸ್ಕರಿಸುವಷ್ಟು ಬಲಾಢ್ಯನಲ್ಲದ ಉಂಡೆ ಎತ್ತರಾಯ, ತನ್ನ ಪರಿವಾರದೊಂದಿಗೆ ರಾತ್ರೋರಾತ್ರಿ ಉತ್ತರಭಾರತದಿಂದ ದಕ್ಷಿಣ ಭಾರತದ ಕಡೆಗೆ ಓಡಿ ಬಂದನೆಂದೂ ಹೇಳಲಾಗಿದೆ[2].

ಇಂದ್ರಪ್ರಸ್ಥದಿಂದ ರಾತ್ರೋರಾತ್ರಿ ಬಂಡಿಗಳಲ್ಲಿ ಹೊರಟುಬಂದ ಕುಂಚಿಟಿಗರು ಗಂಗಾನದಿಯನ್ನು ದಾಟಿ ಬಂದು ಕರ್ನಾಟಕದಲ್ಲಿ ನೆಲೆಸಿದರು ಎಂದು ಕುಂಚಿಟಿಗರ ಜನಪದ ಹಾಡುಗಳಲ್ಲಿ ವರ್ಣಿಸುತ್ತಾ ಉಪಕಥೆಯಾಗಿ ಬೊಪ್ಪರಾಯನ ಕಥೆಯನ್ನು ಸಾಂದರ್ಭಿಕವಾಗಿ ಸೇರಿಸುತ್ತಾರೆ. ಬಾದಶಹನ ಉಪಟಳದಿಂದ ತಪ್ಪಿಸಿಕೊಂಡು ಬಂದ ಉಂಡೆ ಎತ್ತರಾಯನ ಪರಿವಾರದವರು ಕೆಲವರು ಉಂಡೆ ಎತ್ತರಾಯನೆಂಬ ಕುಂಚಿಟಿಗನೊಂದಿಗೆ ಕಾಡುಗೊಲ್ಲರ ಚಂದಮುತ್ತಿ, ಕುರುಬರ ಬಸವೇಗೌಡ, ತಳವಾರ ರಾಮಣ್ಣ ಹೊರಟುಬಂದರೆಂದು ಉಲ್ಲೇಖಿಸಲಾಗಿದೆ[3]. ಜೊತೆಗೆ ಹಾಗೆ ಬಂದವರು ಚಳ್ಳಕೆರೆ ತಾಲ್ಲೂಕಿನ ಗೋಸಿಕೆರೆಯಲ್ಲಿ ನೆಲೆಸಿದರೆಂದೂ, ಈ ಗೋಸಿಕೆರೆ ಕುಂಚಿಟಿಗರೂ ಸೇರಿದಂತೆ ಕುರುಬರು, ಗೊಲ್ಲರು, ಮ್ಯಾಸಬೇಡರಿಗೂ ಮಠಮನೆಯಾಗಿದ್ದು ಅಲ್ಲಿ ಶ್ರೀಗುರು ಸಾರ್ವಡೇಶ್ವರ ಸ್ವಾಮಿಗಳು ನೆಲೆಸಿದ್ದು, ಧಾರ್ಮಿಕ ಮಾರ್ಗದರ್ಶನ ನೀಡುತ್ತಿದ್ದರು. ಆ ನೆನಪಿನ ಗೋಸಿಕೆರೆಯ ಶಿವಲಿಂಗ

ಇಂದಿಗೂ ಇದ್ದು ಅಪೂರ್ವವೆಂದೆನಿಸಿದೆ.

ಕುಂಚಿಟಿಗರಲ್ಲಿ 'ಜಲಧೇನರು' ಎಂಬ ಒಂದು ಬೆಡಗಿದೆ. ಇವರ ಕುಲದೈವ, ಮನೆದೈವ ಎರಡೂ ಜಲಧಿ ಬೊಪ್ಪರಾಯ. ಈ ಜಲಧಿ ಬೊಪ್ಪರಾಯನ ಬೆಡಗಿನವರು ಚಳ್ಳಕೆರೆ, ಹಿರಿಯೂರು, ಸಿರಾ, ಮಧುಗಿರಿ, ಪಾವಗಡ, ಕೊರಟಗೆರೆ, ಗುಬ್ಬಿ ಈ ತಾಲ್ಲೂಕುಗಳಲ್ಲದೆ ಹೊಸದುರ್ಗ, ಮೈಸೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲೂ ವ್ಯಾಪಕವಾಗಿ ನೆಲೆಸಿದ್ದಾರೆ. ಇವರೆಲ್ಲರ ಮನೆದೈವ ಜಲಧಿ ಬೊಪ್ಪರಾಯ. ಈ ಸಂಬಂಧಿ ಕ್ಷೇತ್ರವೊಂದು ಸಿರಾ ತಾಲ್ಲೂಕಿನ ಲಕ್ಕನಹಳ್ಳಿಗೆ ಮೂರು ಕಿ.ಮೀ ದೂರದಲ್ಲಿದೆ. ಪ್ರಾಚೀನ ದೇವಾಲಯ ರಾಜಗೋಪುರವಿಲ್ಲವಾದರೂ ಸಾಧಾರಣ ಗುಡಿ. ವಿಸ್ತಾರವಾದ ಪ್ರಾಂಗಣವಿದೆ. ಆದರೂ ಒಕ್ಕಲುಗಳ ಸಂಖ್ಯೆ ಅಪಾರ. ಇಂದಿಗೂ ಭಾನುವಾರ ಮತ್ತು ಸೋಮವಾರಗಳಂದು ವಿಶೇಷ ಪೂಜೆ ನಡೆಯುತ್ತದೆ.

ಜಲಧಿ ಬೊಪ್ಪರಾಯನಿಗೂ ಕುರುಬರಿಗೂ ಪೌರಾಣಿಕ ಹಿನ್ನೆಲೆಯನ್ನು ಕಲ್ಪಿಸುವ ಮೂಲಕ, ಕುಂಚಿಟಿಗರು ಕುರುಬ ಮೂಲದವರು ಎಂದು ಹೇಳುವ, ಅದರಂತೆ ಪರಿಭಾವಿಸುವ ಸ್ಥಿತಿ ಇಂದಿಗೂ ಗ್ರಾಮಾಂತರ ಪ್ರದೇಶಗಳಲ್ಲಿ ಬಲವಾಗಿದೆ. ಜೊತೆಗೆ ಬೀರೇದೇವರ ಒಕ್ಕಲುಗಳನ್ನು ಅಣ್ಣ-ತಮ್ಮಂದಿರಂತೆ ಕಾಣಲಾಗುತ್ತಿದೆ. ಮಾತ್ರವಲ್ಲ ಸಿರಾ ತಾಲ್ಲೂಕಿನ ಅನುಪನಹಳ್ಳಿ, ಕುರುಬರ ರಾಮನಹಳ್ಳಿ, ಕುರುಬರಹಳ್ಳಿಗಳಲ್ಲಿ ಬೀರೇದೇವರ ದೇವಾಲಯವಿದ್ದು ಇದರ ಪೂಜೆಯ ಉಸ್ತುವಾರಿ ಇಂದಿಗೂ ಕುಂಚಿಟಿಗ ಜನಾಂಗದವರದ್ದು. ಮಾತ್ರವಲ್ಲ ಕುರುಬರಲ್ಲಿ ವ್ಯಾಪಕವಾಗಿ ಇಟ್ಟುಕೊಳ್ಳುವ ಬೀರಪ್ಪ, ಬೀರಯ್ಯ ಎಂಬ ಹೆಸರನ್ನು ಕುಂಚಿಟಿಗ ಜನಾಂಗದವರೂ ಇಟ್ಟುಕೊಂಡಿರುವ ವಿರಳ ಉದಾಹರಣೆ ಸಿರಾ ತಾಲ್ಲೂಕಿನಲ್ಲಿ ವಿಶೇಷವಾಗಿ ಕುಂಚಿಟಿಗರ ಸಂಸ್ಕೃತಿಯಲ್ಲಿ ಕಾಣಬಹುದಾಗಿದೆ. ಕೆಲವರು ಬೊಪ್ಪಣ್ಣ, ಬೊಪ್ಪರಾಯಪ್ಪ ಎಂದೂ ಇಟ್ಟುಕೊಳ್ಳುತ್ತಾರೆ. ಇವರೆಲ್ಲ ಬೀರೇದೇವರ ಒಕ್ಕಲುಗಳು.

ಜಲಧಿ ಬೊಪ್ಪರಾಯನ ಪೌರಾಣಿಕ ಹಿನ್ನೆಗೆ ಹೀಗೆ ಬಿಚ್ಚಿಕೊಳ್ಳುತ್ತದೆ. ಉತ್ತರ ಭಾರತದಿಂದ ತಮ್ಮ ಹಾಲಿನಂಥ ಕುಲದ ಪಾವಿತ್ರ್ಯತೆಗಾಗಿ ಕುಟುಂಬ ಪರಿವಾರ ಸಮೇತ ಓಡಿಬಂದ ಉಂಡೆ ಎತ್ತರಾಯ, ಅವನನ್ನು ಹಿಂಬಾಲಿಸಿದ ಬಾದಶಹ ಇಂತಹ ಸಂದರ್ಭದಲ್ಲಿ ಗೋದಾವರಿ ನದಿ ಅಡ್ಡಲಾಗಿರುತ್ತದೆ. ನದಿ ದಾಟಲಾರದೆ ಪರಿತಪಿಸುತ್ತಿದ್ದ ಎತ್ತರಾಯನಿಗೆ ಸಮೀಪದಲ್ಲಿಯೇ ಕುರಿ ಮೇಯಿಸುತ್ತಿದ್ದ ಬೊಪ್ಪರಾಯನು ಕಾಣುತ್ತಾನೆ. ಆ ಹುಡುಗನ ಬಳಿಗೆ ಬಂದು ಎತ್ತರಾಯ ತಮ್ಮನ್ನು ಈ ನದಿಯಿಂದ ಆಚೆ ದಾಟಿಸಬೇಕೆಂದು ವಿನಂತಿಸುತ್ತಾನೆ. ಹಿಂಬಾಲಿಸಿ ಬರುವ ಮೊಘಲ್ ದೊರೆಯ ಕಿರುಕುಳದ ಬಗ್ಗೆಯೂ ವಿವರಿಸುತ್ತಾನೆ. ಅದಕ್ಕೆ ಸ್ಪಂದಿಸಿದ ಬೊಪ್ಪರಾಯ 'ನಾನು ನದಿ ದಾಟಿಸುತ್ತೇನೆ, ಆದರೆ

ನಿಮ್ಮ ಮಗಳನ್ನು ನನಗೆ ಕೊಟ್ಟು ಮದುವೆ ಮಾಡಿಸಬೇಕು' ಎಂದು ಷರತ್ತು ವಿಧಿಸುತ್ತಾನೆ. ಹೇಗಾದರೂ ಮಾಡಿ ಬಾದಶಹನಿಂದ ತಪ್ಪಿಸಿಕೊಳ್ಳಬೇಕೆಂಬ ತೀವ್ರ ಹವಣಿಕೆಯಲ್ಲಿದ್ದ ಎತ್ತರಾಯ ಒಪ್ಪುತ್ತಾನೆ.

ಗೋದಾವರಿ ನದಿ ತುಂಬಿ ಹರಿಯುತ್ತಿರುತ್ತದೆ. ಆಗ ಬೊಪ್ಪರಾಯ ತನ್ನ ತಲೆಯನ್ನು ಕತ್ತರಿಸಿ ಎಡಗೈಯ ಅಂಗೈ ಮೇಲಿಟ್ಟು ಕರ್ಪೂರದ ಆರತಿ ಬೆಳಗಿದಾಗ, ನದಿ ಎರಡು ಭಾಗವಾಗಿ, ಎತ್ತರಾಯನ ಪರಿವಾರ ಸುಲಭವಾಗಿ ನದಿ ದಾಟಿ ಬರುತ್ತಾರೆ. ಆಗ ಕೊಟ್ಟ ಮಾತಿನಂತೆ ಎತ್ತರಾಯ ರುಂಡವಿಲ್ಲದ ಮುಂಡಕ್ಕೆ ತನ್ನ ಮಗಳು ಚಿಕ್ಕಬೈರೇದೇವಮ್ಮನನ್ನು ಧಾರೆಯೆರೆದು ಕೊಡುತ್ತಾನೆ. ಮುಂದೆ ತಲೆ ಕತ್ತರಿಸಿ ರುಂಡ-ಮುಂಡ ಬೇರೆಯಾಗಿದ್ದ ಬೊಪ್ಪರಾಯನಿಗೆ ರುಂಡ-ಮುಂಡ ಕೂಡಿಕೊಂಡು ಮತ್ತೆ ಬೊಪ್ಪರಾಯ ಬದುಕಿ ಉಳಿಯುತ್ತಾನೆ. ಹೀಗೆ ಸಮುದ್ರದ ನೀರನ್ನು ಭಾಗಿಸಿ (ಭೇದಿಸಿ) ದಾರಿಮಾಡಿಕೊಟ್ಟ ಬೊಪ್ಪರಾಯನನ್ನು ಜಲಧಿ ಬೊಪ್ಪರಾಯ ಎಂದೇ ಕರೆದು ಗೌರವಿಸುತ್ತಾರೆ. ಮಾತ್ರವಲ್ಲ ಕುಂಚಿಟಿಗರು ಬೊಪ್ಪರಾಯನ ಕಸುಬಾದ ಕಂಬಳಿ ನೇಯ್ಗೆ, ಕುರಿ ಸಾಕಾಣಿಕೆಯ ಕಾಯಕ ಮಾಡುತ್ತಾ ಕುರುಬರಲ್ಲಿ ಗುರುತಿಸಿಕೊಳ್ಳಲಾರಂಭಿಸಿದರು. ಆಚಾರ-ವಿಚಾರ, ಸಾಂಸ್ಕೃತಿಕವಾಗಿ ಒಂದಾದರು. ಕಂಬಳಿ ನೇಯ್ಗೆ ಕಾಯಕದಲ್ಲೂ ಪರಿಣತಿ ಪಡೆದರು. ಕಂಬಳಿಯ ಕುಂಚ ಹೊಡೆಯುವ ಕಾಯಕ ಮಾಡುತ್ತಿದ್ದುದರಿಂದ ಕುಂಚಿಟಿಗರಾದರೆಂಬ ಐತಿಹ್ಯವೂ ಇದೆ. 'ಕುರುಬ ಕೆಟ್ಟು ಕುಂಚಿಟಿಗನಾದ' ಎಂಬ ಗಾದೆಯ ಅಂತರಂಗವೂ ಇದನ್ನೇ ನಿರ್ದೇಶಿಸುತ್ತದೆ. ಕುಂಚಿಟಿಗ ಎಂದರೆ ಕುಲಾವಿ ತಯಾರಕ ಎಂದೂ ವಸ್ತ್ರವಿನ್ಯಾಸಗಾರ ಎಂಬ ಅರ್ಥದಲ್ಲಿಯೂ ಕರೆಯಲಾಗಿದೆ[3].

ಕುರುಬರ ಮನೆಗಳಲ್ಲಿ ಹೊಸ ಕಂಬಳಿಗೆ ಹುಣಸೇಬೀಜದಿಂದ ಸರಿ ತಯಾರಿಸಿ, ಕುಂಚದಿಂದ ತೀಡಿ ನಯಗೊಳಿಸುವ ಕಾಯಕ ಮಾಡಿಕೊಂಡಿದ್ದರಿಂದ ದೆಹಲಿ ಮೂಲದ ಈ ಜನಾಂಗ ಕುಂಚಿಟಿಗರಾದರೆಂಬ ನಂಬಿಕೆ ಒಂದೆಡೆಯಾದರೆ, ಈ ವರ್ಗದವರು ಬಳಸುವ ಭಾಷೆಯ ಆಧಾರದ ಮೇಲೆ ಇವರನ್ನು ದ್ರಾವಿಡರು ಎಂದು ಕರೆದು ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕಕ್ಕೆ ವಲಸೆ ಬಂದವರಾಗಿದ್ದು ಇವರಿಗೆ ಅಡ್ಡಲಾದ ನದಿ ಗೋದಾವರಿ ನದಿಯಲ್ಲ, ಬದಲಿಗೆ ತುಂಗಭದ್ರಾ ನದಿ ಇರಬೇಕೆಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಜೊತೆಗೆ ಇವರು ಆಡುವ ಭಾಷೆ ಕನ್ನಡ ಮತ್ತು ತೆಲುಗು. ತುಮಕೂರು, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ ಈ ಭಾಗದ ಕುಂಚಿಟಿಗರು ಅಚ್ಚಕನ್ನಡ ಮಾತನಾಡಿದರೆ, ಗಡಿ ಪ್ರದೇಶವಾದ ಮಡಕಶಿರಾ, ಕಲ್ಯಾಣದುರ್ಗ ಇಲ್ಲಿ ತೆಲುಗು ಭಾಷೆಯನ್ನು ಬಳಸುತ್ತಾರೆ. ಜೊತೆಗೆ ತಮಿಳುನಾಡಿನ ಮಧುರೈ ಜಿಲ್ಲೆಯಲ್ಲಿಯೂ

ವಾಸಿಸಿರುವ ಕುಂಚಿಟಿಗರು ತಾವು ಕುಂಚಿಟಿಗರಾಗಿದ್ದು ಉತ್ತರ ಕರ್ನಾಟಕದ ಕಡೆಯಿಂದ ಬಂದವರೆಂದೂ, ಹಾಗೆ ಬರುವಾಗ ತುಂಗಭದ್ರಾ ನದಿಯನ್ನು ದಾಟಿ ಬಂದವರೆಂಬುದನ್ನು ಮಧುರೆ ಜಿಲ್ಲೆಯ ಕಂಬಂ, ತೇಕಡಿ ಭಾಗದ ಈ ಜನಾಂಗದ ಮುಖಂಡರ ಅಭಿಪ್ರಾಯವಾಗಿದೆ[4]. ಮಡಕಶಿರಾ ತಾಲ್ಲೂಕಿನ ಜೀರಿಗೆಹಳ್ಳಿಯ ಬೊಪ್ಪರಾಯ ದೇವರಿಗೆ ತಮಿಳುನಾಡಿನ ಒಕ್ಕಲುಗಳೇ ಅಧಿಕ. ಅವರೆಲ್ಲರೂ ಕುಂಚಿಟಿಗರೇ. ವಾರಗಟ್ಟಲೆ ಜಾತ್ರೆಯನ್ನು ಮಾಡುವುದು ವಿಶೇಷ. ಕನ್ನಡ, ತಮಿಳು ಎರಡೂ ಭಾಷೆಯನ್ನಾಡುತ್ತಾರೆ.

ಸಿರಾ ತಾಲ್ಲೂಕಿನ ಬೆಜ್ಜಿಹಳ್ಳಿ ಕುಂಚಿಟಿಗರ ಜಲದೇನವರಿಗೆ ಕಟ್ಟೆಮನೆ. ಇವರಿಗೆಲ್ಲಾ ಬೊಪ್ಪರಾಯ ಮನೆದೇವರು. ಕರ್ನಾಟಕ ಮಾತ್ರವಲ್ಲದೆ ಆಂಧ್ರ, ತಮಿಳುನಾಡಿನಿಂದಲೂ ಒಕ್ಕಲು ಇಲ್ಲಿಗೆ ನಡೆದುಕೊಳ್ಳುತ್ತಿದ್ದಾರೆ. ಬೆಜ್ಜಿಹಳ್ಳಿಯ ಬೊಪ್ಪರಾಯನ ವಿಗ್ರಹ ಕಪ್ಪು ಶಿಲೆಯಿಂದ ಕೂಡಿದ್ದು, ವೀರಗಲ್ಲಿನ ಮಾದರಿಯಲ್ಲಿದೆ. ವೀರನೊಬ್ಬ ಬಿಲ್ಲು ಹಿಡಿದು ಬೇಟೆ ಅಥವಾ ಶತ್ರುಗಳಿಗೆ ಗುರಿ ಇಟ್ಟು ನಿಂತ ಭಂಗಿಯಲ್ಲಿದೆ. ಸಾಮಾನ್ಯ ನೋಟದಲ್ಲಿ ಇದೊಂದು ವೀರಗಲ್ಲು ಎಂದು ಭಾವಿಸಬಹುದು. ಈ ವಿಗ್ರಹದ ಕೆಳಭಾಗದಲ್ಲಿ ಪಶುಗಳ ಚಿತ್ರಗಳಿವೆ. ಇದರಿಂದ ಕುಂಚಿಟಿಗರು ಪಶುಪಾಲನೆ, ವ್ಯವಸಾಯಕ್ಕೆ ಮಹತ್ವ ನೀಡಿದ್ದ ಜನಾಂಗ ಎಂಬುದೂ ಅರಿವಾಗುತ್ತದೆ. ಪೂರಕವಾಗಿ ಈ ಭಾಗದಲ್ಲಿ ಪ್ರಕಟವಾಗುವ ಜನಪದ ಗೀತೆಯೂ ಇವರ ಕುಲಮೂಲ, ವಲಸೆ, ಜಲಧಿ ಹೆಸರಿನ ಬಗೆಗೆ ಹೀಗೆ ವಿವರಿಸುತ್ತದೆ:

ಕೆಂದೋರಿ ಕೊಯ್ಲು ಮಂದ ಪಾಯಸ ಮಾಡಿ
ಹಿಂದೆ ಕುಂಚಿಗರ ಕುಲಗಳು ಕೆಡಿಸೆನೆಂದು
ದಿಲ್ಲಿಂದ ಸಾಬರು ಬರುತಾರೆ[5]
ಎಂತ ಕುಲಕಿನ್ನ ಎಂತ ಕುಲ ಹೆಚ್ಚಮ್ಮ
ಕಂಚಿನ ಮಡಿಕೆ ಹೊಲಕಾಕಿ ಗೇಯ್ವಂತ
ಕುಂಚೊಕ್ಕಲ ಮಗನ ಕುಲವೆಚ್ಚು[6]

ಈ ಎರಡೂ ಪದ್ಯಗಳು ಕುಂಚಿಟಿಗರು ದೆಹಲಿ ಮೂಲದವರು ಹಾಗೂ ಮಹಮದೀಯರ ಉಪಟಳ ಎದುರಿಸಿದವರು ಎಂಬುದು ಅರಿವಾದರೆ ಎರಡನೇ ಪದ್ಯದಲ್ಲಿ ಕೃಷಿ ಕಾಯಕದ ಕುಂಚಿಟಿಗರು ತಮ್ಮ ವ್ಯವಸಾಯದಲ್ಲಿ ಭೂಮಿ ಉಳುವುದಕ್ಕಾಗಿ ಕಂಚಿನ ನೇಗಿಲು (ಮಡಿಕೆ) ಬಳಸುತ್ತಿದ್ದವರು ಎಂದು ವಿವರಿಸುತ್ತಾ 'ಕುಂಚೊಕ್ಕಲ' ಮಗನ ಜಾತಿ ಶ್ರೇಷ್ಠ ಎಂದು ಪರಿಭಾವಿಸಲಾಗಿದೆ. ಇದರ ಸೂಕ್ಷ್ಮತೆ ಅರಿತರೆ ಕಂಚಿನ ನೇಗಿಲನ್ನು ಬಳಸುವ ರೂಢಿಗತ ಕ್ರಿಯೆಯಿಂದಾಗಿಯೇ 'ಕುಂಚಿಟಿಗ' ಎಂಬ ಹೆಸರು ಬಂದಿರಬಹುದೇ? ಇಷ್ಟಾದರೂ ಜನಪದರು ತಮ್ಮ ಬದುಕಿನ ಮಧ್ಯೆ ಕಟ್ಟಿಕೊಂಡ ಜನಪದ ಆಚಾರ,

ಸಂಪ್ರದಾಯ, ನಂಬಿಕೆಗಳ ಸಾಂಸ್ಕೃತಿಕ, ಧಾರ್ಮಿಕ ಸಂಗತಿಗಳಲ್ಲಿ ಪರಸ್ಪರ ಸಾಮ್ಯತೆ, ಏಕತಾನತೆಯನ್ನು ಕಾಣಬಹುದಾಗಿದೆ. ಕುರುಬರಂತೆ ಕುಂಚಿಟಿಗರೂ ಮದುವೆ ಕಾರ್ಯಗಳಲ್ಲಿ ಉಣ್ಣೆ ಕಂಕಣವನ್ನು ಕಟ್ಟುತ್ತಾರೆ. ಇದಕ್ಕೆ ಕುರುಬ ದಾರ, ಕುರುಬ ಕಂಕಣ ಎಂದು ಕರೆಯಲಾಗುತ್ತದೆ. ಕುಂಚಿಟಿಗರ ಯಾವುದೇ ಬೆಡಗಿರಲಿ ಅವರ ಮದುವೆ ಕಾರ್ಯದ ಶುಭ ಮಂಗಳ ಸೋಬಾನೆ ಆರಂಭವಾಗುವುದು, ವೀಳ್ಯದಾನ (ವೀಳ್ಯ ಎತ್ತುವುದು) ಜಲಧಿ ಬೊಪ್ಪರಾಯನ ಹೆಸರಿಂದ ಮೊದಲುಗೊಂಡು ಉಂಡೆ ಎತ್ತರಾಯನಲ್ಲಿಗೆ ಬಂದು ನಿಲ್ಲುತ್ತದೆ. ಹೀಗೆ ಕುರುಬರ ಬೊಪ್ಪರಾಯ ಕುಂಚಿಟಿಗರ ಸಾಂಸ್ಕೃತಿಕ ವೀರನಾಗಿ, ದೈವವಾಗಿ, ಪವಾಡಸದೃಶ ಶಕ್ತಿಯಾಗಿ ಸಿರಾ ಭಾಗದಲ್ಲಿ ವ್ಯಾಪಕ ಜನಪದ ವಾಙ್ಮಯವನ್ನು ಹೊಂದಿದ್ದಾರೆ. ಜೊತೆಗೆ ಚಳ್ಳಕೆರೆ ತಾಲ್ಲೂಕಿನ ನಾರಾಯಣಪುರದಲ್ಲಿರುವ ಮುಂಡದ ದೇವರು, ಮಡಕಶಿರಾ ತಾಲ್ಲೂಕಿನ ಕೊಮಾರೇನಹಳ್ಳಿ, ಕಲ್ಯಾಣದುರ್ಗದ ಬೆಸ್ತರಪಲ್ಲಿ ಮುಂತಾದ ಕಡೆ ಬೊಪ್ಪರಾಯನ ದೇವಾಲಯಗಳಿವೆ. ಜೊತೆಗೆ ಪಾವಗಡ ತಾಲ್ಲೂಕಿನ ಜಂಗಮರಹಳ್ಳಿಯಲ್ಲಿನ ವೀರನಾಗಪ್ಪ-ಬೊಪ್ಪರಾಯನ ಪ್ರತಿರೂಪವಾಗಿದೆ. ಏಕೆಂದರೆ ಇದರ ಭಕ್ತರು ಜಲದೇನರ ಗೋತ್ರಕ್ಕೆ ಸಂಬಂಧಿಸಿದವರು. ಈ ಭಾಗದಲ್ಲಿ ಹಾಡುವ ಜನಪದ ಗೀತೆಗಳಲ್ಲೂ ಬೊಪ್ಪರಾಯನ ಕಥೆ, ವೀರತ್ವ, ಪವಾಡ, ಕುರುಬರ ಬೀರಲಿಂಗನ ಮಹಿಮೆ ಈ ಎಲ್ಲವುಗಳನ್ನು ಸಾಂಸ್ಕೃತಿಕವಾಗಿ ಕಟ್ಟಿಕೊಡಲಾಗಿದೆ. ಕುರುಬರಂತೆ ಕುಂಚಿಟಿಗರಲ್ಲಿಯೂ ಕರಿಯ ಕಂಬಳಿಗೆ ವಿಶೇಷ ಗೌರವ. ಮನೆಯ ಪ್ರತಿ ಶುಭಕಾರ್ಯಗಳೂ ಸೇರಿದಂತೆ ಮದುವೆಯ ಸಂದರ್ಭಗಳಲ್ಲೂ ಮದುಮಗನ ಹೆಗಲ ಮೇಲೆ ಕಂಬಳಿ ಇರಲೇಬೇಕು. ಧಾರೆ ಮಂಟಪಕ್ಕೆ ಬರುವಾಗ ಕಂಬಳಿಯನ್ನು ಹೆಗಲ ಮೇಲೆ ಹಾಕಿಕೊಂಡು ಬರಲಾಗುತ್ತದೆ. ಮದುವೆ ಹೊರಗಡೆ ನಡೆದರೆ, ಮದುಮಗಳೊಂದಿಗೆ ಗಂಡು ತನ್ನ ಗ್ರಾಮಪ್ರವೇಶದ ಸಂದರ್ಭದಲ್ಲೂ, ಹೊಲ ಉಳುವಾಗ ಬಳಸುವ ಬಾರುಕೋಲು, ಕಂಬಳಿ ಹೆಗಲ ಮೇಲೆ ವಿಧಿಬದ್ಧವಾಗಿ ಇರುತ್ತದೆ.

ಮದುವೆ, ಧಾರ್ಮಿಕ ಸಮಾರಂಭಗಳಲ್ಲಿ ವೀಳ್ಯ ಎತ್ತುವುದು ಇವನ್ನು ಜಾಡಿ ಸೇವೆ ಎಂದು ಕರೆಯಲಾಗುವುದು. ಕರಿಯ ಕಂಬಳಿ ಹಾಸಿ, ಚೌಕಾಕಾರವಾಗಿ ಮಡಿಸಿ ಅದರ ಮೇಲೆ ಅಡಿಕೆ, ವೀಳ್ಯದ ಎಲೆ ಹಾಕಿ, ಜಾಡಿಯ ನಾಲ್ಕು ಮೂಲೆಗೂ ವಿಭೂತಿ, ಭಂಡಾರ ಇಟ್ಟು ಎಲೆ-ಅಡಿಕೆ ಇಟ್ಟು ಜಾಡಿ ಸೇವೆ ಮಾಡಲಾಗುವುದು. ನಂತರ ಕುಲಮೂಲ ಪದ್ಧತಿಯಂತೆ ಗ್ರಾಮ ಸಂಸ್ಕೃತಿಯನ್ನು ಗೌರವಿಸುವ ಗೌರವದ ವೀಳ್ಯ ನೀಡಲಾಗುವುದು. ಇಂಥ ಸಂದರ್ಭದಲ್ಲಿ ಜಲಧಿ ಬೊಪ್ಪರಾಯನ ವೀಳ್ಯ, ಉಂಡೆ ಎತ್ತರಾಯನ ವೀಳ್ಯೆ, ಬೀರಲಿಂಗನ ವೀಳ್ಯ, ಹೀಗೆ ವೀಳ್ಯ ಎತ್ತಿದ ಮೇಲೆ ಕಟ್ಟೆಮನೆಯ ಗೌಡ, ಕುಳವಾಡಿ,


ಪೂಜಾರಿ, ನಂತರ ಕುಲಸ್ಥರ ಮುಖಂಡರಿಗೂ ವೀಳ್ಯ ಕೊಡುವ ಪದ್ಧತಿ ಕುರುಬರು, ಕುಂಚಿಟಿಗರ ಜನಾಂಗಗಳಲ್ಲಿ ಇಂದಿಗೂ ಸಮಾನವಾಗಿದೆ. ಜೊತೆಗೆ ಗ್ರಾಮದಲ್ಲಿನ ಎಲ್ಲ ಜಾತಿ, ವರ್ಗದವರ ಮುಖಂಡರಿಗೂ ಒಂದೊಂದು ವೀಳ್ಯ ಕೊಡುವುದರ ಹಿಂದೆ ಜಾತಿ, ಕುಲದಾಚೆಯ ಸಮನ್ವಯ ಸಂಸ್ಕೃತಿಯನ್ನು ಕಾಣಬಹುದಾಗಿದೆ. ಕುಲಸಂಬಂಧಿ ಬೆಡಗುಗಳಲ್ಲಿ ಈ ಜನಾಂಗಗಳಲ್ಲೂ ಸಾಮ್ಯತೆ ಇದೆ. ಒಂದೇ ಬೆಡಗಿನವರು ಅಣ್ಣ ತಮ್ಮಂದಿರಾಗಿ ಪರಸ್ಪರ ವೈವಾಹಿಕ ಸಂಬಂಧವನ್ನು ನಿಷೇಧಿಸಿಲಾಗಿದೆ. ಈ ಬಗೆಯ ಬೆಡಗುಗಳು ಕುಂಚಿಟಿಗರಲ್ಲಿ 480 ಕ್ಕೂ ಹೆಚ್ಚು ಕಂಡುಬಂದರೆ ಕುರುಬರಲ್ಲಿ 250 ಕ್ಕೂ ಮಿಕ್ಕು ಬೆಡಗುಗಳಿವೆ. ಗೌಡನ ಕುರುಬರು, ಅಂಡೆ ಕುರುಬರು, ಸಾವಂತೆ ಕುರುಬರು, ಅರಸನ ಕುರುಬರು, ಹತ್ತಿ ಕುರುಬರು, ಬಳ್ಳಾರಿ ಕುರುಬರು ಹೀಗೆ ಕಂಡುಬಂದರೆ, ಕುಂಚಿಟಿಗರಲ್ಲಿ ಅಂಡೇನರು, ಅರಳೇನವರು, ಕಂಬಳಿಯವರು, ಅರಸನವರು, ಸಾವಂತದವರು, ಜಾನಕಲ್ಲಿನವರು, ಕೋಡಿಹಳ್ಳಿಯವರು ಈ ಬಗೆಯ ಸಮಾನ ಬೆಡಗುಗಳನ್ನು ಕಾಣಬಹುದು. ಜೊತೆಗೆ ಕುಂಚಿಟಿಗರು ಕುರುಬರು ಸಮಾನವಾಗಿ ನಡೆದುಕೊಳ್ಳುವ ಬೀರೇಶ್ವರ, ಸಿರಾ ತಾಲ್ಲೂಕಿನ ಅನುಪನಹಳ್ಳಿ, ಇಲ್ಲಿನ ದೇವಸ್ಥಾನದ ಪೂಜಾರಿ ದೇವಾಲಯದ ಒಡೆತನ ಒಕ್ಕಲು ವಿಶೇಷವಾಗಿ ಕುಂಚಿಟಿಗ ಜನಾಂಗದ್ದು. ಜೊತೆಗೆ ಮಡಕಶಿರಾ ತಾಲ್ಲೂಕಿನ ಕೊಮಾರೇನಹಳ್ಳಿಯಲ್ಲಿ ಬೀರಲಿಂಗನ ದೇವಾಲಯವಿದೆ. ಇದಕ್ಕೆ ಕುಂಚಿಟಿಗರ ನಲವತ್ತೆಂಟು ಗೋತ್ರಕ್ಕೆ ಸಂಬಂಧಿಸಿದವರೂ ವಕ್ಕಲಾಗಿ ಶ್ರದ್ಧಾ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಜೊತೆಗೆ ಇಲಿನ ಬೀರಲಿಂಗ ಜಲಧಿ ಬೊಪ್ಪರಾಯನ ಗುರು ಎಂದೇ ಭಾವಿಸಲಾಗಿದೆ. ಇದನ್ನು ಬೊಪ್ಪರಾಯನ ಪರಂಪರೆಯ ಪ್ರಚಾರದ ನೇತೃತ್ವ ವಹಿಸಿದ್ದ ಗುರು ಶ್ರೀ ಗುರು ಸಾರ್ವಡೇಶ್ವರರು ಸ್ಥಾಪಿಸಿದರು ಎಂದು ಸ್ಥಳೀಯರು ಹೇಳುತ್ತಾರೆ.

ಜಲದೇನರು ಎಂದಾರೆ ಜಗವೆರಡು ನಡಿಗ್ಯಾವು
ಹರಿವ ಗಂಗಮ್ಮ ಎರಡಾಗಿ। ದಿಲ್ಲಿಯ
ರುಸ್ತಾಳಗೋಲೆ ಬರದಾನು ।[7]

ಜಲಜಲನೆ ಬೆವುತಾಳು
ಜಲದಿ ಹರಿಬಿಟ್ಟಾಳು । ಗಂಗಮ್ಮ
ಜಲದಿ ಕುಲವೆಂದು ಕರೆದಾಳು

ಹಟ್ಟಿ ಮುಂದೆ ಈರಣ್ಣ ತಾರು ಮಂದೆಗೆ ಬೀರಲಿಂಗ
ಮ್ಯಾಗಳ ಪರಿಸ್ಯಾಗಕೆ ತಾಯಿ ಮುದ್ದು
ಪ್ರಾಣ ದೀವಿಗೆಯ ಬೆಳಕಿನಲ್ಲಿ[8]

ಈ ಮೂರು ತ್ರಿಪದಿಗಳು ಜಲದೇನರ ಈ ಮೂಲಕ ವೀರ ಬೊಪ್ಪರಾಯನ ಪರಂಪರೆ, ಕುಂಚಿಟಿಗರ ದೆಹಲಿ ಮೂಲ ಹೇಳುತ್ತವೆ. ಜೊತೆಗೆ ಕರ್ನಾಟಕದಲ್ಲಿ ನೆಲೆಸಿದ ನಂತರವೂ ಎತ್ತರಾಯನ ಪರಿವಾರ ಮೂಲದವರೊಂದಿಗೆ ಪತ್ರ ವ್ಯವಹಾರ ನಡೆಸಿದ ಸಂಗತಿಯನ್ನು ಹೇಳುತ್ತದೆ. ಜೊತೆಗೆ ಜಲದಿ ಬೆಡಗಿನ ಪೌರಾಣಿಕ ಹಿನ್ನೆಲೆಯನ್ನು ಒಂದು ಪದ್ಯ ವಿವರಿಸಿದರೆ ಬೊಪ್ಪರಾಯ, ಬೀರಲಿಂಗ, ಮುದ್ದಮ್ಮ ಇವರ ಅನ್ಯೋನ್ಯತೆ, ಆರಾಧನೆಯಲ್ಲಿ ಸಾರ್ವತ್ರಿಕತೆ, ಕುರುಬ ಮೂಲದ ಬೊಪ್ಪರಾಯನಂತೆ ಕುರುಬರ ಪೌರಾಣಿಕ ಸಾಂಸ್ಕೃತಿಕ ವೀರ ಬೀರಲಿಂಗಪ್ಪನ ಆರಾಧನೆಯೂ ಕುಂಚಿಟಿಗರಲ್ಲಿ ರೂಢಿಯಲ್ಲಿದೆ. ಇದಕ್ಕೆ ಕೊಮಾರೇನಹಳ್ಳಿಯ ಬೀರಲಿಂಗೇಶ್ವರ, ಅನುಪನಹಳ್ಳಿ, ಚಿರತಹಳ್ಳಿ, ವೀರಗಾನಹಳ್ಳಿ, ಮೂಗನಹಳ್ಳಿ, ಕಾಮಗೊಂಡನಹಳ್ಳಿ, ಬೀರೇದೇವರನ್ನು ಆರಾಧಿಸುವಲ್ಲಿ ಕುರುಬರಂತೆಯೆ ಕುಂಚಿಟಿಗರೂ ಆರಾಧಿಸುತ್ತಾರೆ.



1. *ಎಲ್.ಅನಂತಕೃಷ್ಣ ಅಯ್ಯರ್, Caste and tribes in Mysore*
2. *ಎಂ.ಎಸ್.ನಾಗರಾಜ್, ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ*
3. *ಅದೇ*
4. *ಕೆಂಕೆರೆ ಹನುಮಂತೇಗೌಡ, ಗಡಿನಾಡ ವಿದ್ವಾಂಸ, ಮಡಕಶಿರಾ ತಾ॥*
5. *ಬಂಡಿ ಬಂದಾವು ಬಾಳೆ ವನದಾಗೆ, ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ*
6. *ಅದೇ*
7. *ಅದೇ*
8. *ಅದೇ*

ಉ) ರೇವಣಸಿದ್ಧ:

ಸಿರಾ ಬುಡಕಟ್ಟು ಪ್ರದೇಶ, ಇಲ್ಲಿ ಕುಂಚಿಟಿಗರು, ಕುರುಬರು, ಕಾಡುಗೊಲ್ಲರು ವ್ಯಾಪಕವಾಗಿ ನೆಲೆಸಿದ್ದಾರೆ. ಅಷ್ಟೇ ಪ್ರಮಾಣದಲ್ಲಿ ನಾಯಕ ಬೇಡರೂ ಇದ್ದಾರೆ. ಈ ಎಲ್ಲ ವರ್ಗದವರು ಮೂಲತಃ ಬುಡಕಟ್ಟು ಸಂಸ್ಕೃತಿಯ ಸಮಾನ ನೆಲೆಯಿಂದ ಬಂದವರು. ಪಶುಪಾಲನೆ, ಬೇಟೆ, ಕೃಷಿ ಇವರ ಪ್ರಧಾನ ಕಸುಬಾಗಿದೆ. ಗೊಲ್ಲರು ಆರಂಭದಲ್ಲಿ ಗೋಪಾಲಕರಾಗಿ. ಕುರುಬರು ಕುರಿಗಾರರಾಗಿ, ಕುಂಚಿಟಿಗರು ವ್ಯವಸಾಯ ಮಾಡಿದರೆ, ಬೇಡರು ಬೇಟೆ ಕಾಯಕದಿಂದಲೇ ಬದುಕಿದ ಬಗೆಗೆ ಮೌಖಿಕ ಪರಂಪರೆಯಲ್ಲಿ ಈ ಜನಾಂಗಿಕ ಹಿನ್ನೆಲೆಯ ಸಾಂಸ್ಕೃತಿಕ ನಾಯಕರ ಬದುಕಿನಲ್ಲಿ ಕಾಣಬಹುದಾಗಿದೆ. ಕಾಡುಗೊಲ್ಲರ ಬದುಕನ್ನು, ಸಾಂಸ್ಕೃತಿಕ ತಲ್ಲಣವನ್ನು ಜುಂಜಪ್ಪ, ಚಿತ್ರದೇವರು ಮೊದಲಾದ ಮೌಖಿಕ ಕಾವ್ಯ ಚಿತ್ರಿಸಿದರೆ, ಕುರುಬರ ಸಾಂಸ್ಕೃತಿಕ ಬದುಕನ್ನು ಬೀರೇಶ್ವರನ ಕಾವ್ಯ, ಮೈಲಾರಲಿಂಗನ ಕಾವ್ಯ, ಮಾಳಿಂಗರಾಯನ ಕಾವ್ಯ, ಹಾಲುಮತ ಪುರಾಣ, ಟಗರು ಪವಾಡ ಮೊದಲಾದ ಮೌಖಿಕ ಸಾಹಿತ್ಯ, ದಟ್ಟವಾಗಿ ಕಟ್ಟಿಕೊಡುತ್ತದೆ. ಬೇಡರ ಬಗೆಗೆ ಗಾದರಿ ಪಾಲನಾಯಕ, ವೀರಗಾಟರಾಯನ ಪುರಾಣಗಳಲ್ಲಿ ವಿಫುಲ ಮಾಹಿತಿ ದೊರೆತರೆ, ಕುಂಚಿಟಿಗರ ಬಗೆಗೆ ಬೊಪ್ಪರಾಯ ಪುರಾಣ, ವೀರನಾಗಪ್ಪ, ವೀರನಾಗಮ್ಮ ಮೊದಲಾದ ಸಾಂಸ್ಕೃತಿಕ ನಾಯಕರ ಬದುಕಿನಿಂದ ತಿಳಿಯುತ್ತದೆ. ಒಂದು ಜನಾಂಗದ ಆಚಾರ-ವಿಚಾರ, ನಂಬಿಕೆ-ನಡಾವಳಿಗಳು ರೂಢಿಗತವಾಗಿ ತದನಂತರ ಆಯಾಯಾ ಸಾಂಸ್ಕೃತಿಕ ವಾತಾವರಣಕ್ಕೆ ಅನುಸಾರವಾಗಿ ತಮ್ಮ ತಮ್ಮ ಮಕ್ಕಳಿಗೆ ಹೆಸರು ಕಟ್ಟುವುದರಿಂದ ಆರಂಭಿಸಿ, ತಮ್ಮ ತಮ್ಮ ಸಾಂಸ್ಕೃತಿಕ ನಾಯಕರನ್ನು ಧಾರ್ಮಿಕ ನಾಯಕರನ್ನಾಗಿ ಪರಿಭಾವಿಸುತ್ತಾ ಆರಾಧನೆಗೆ ಒಳಗು ಮಾಡಿಕೊಂಡ ಸಂಗತಿ, ಜನಪದ ಸಂಸ್ಥೆಯ ಬಹುಮುಖ್ಯ ಲಕ್ಷಣವಾಗಿದೆ. ಈ ಹಿನ್ನೆಲೆಯಲ್ಲಿ ಕುರುಬರ ಗುರು ಪರಂಪರೆ, ಸಾಂಸ್ಕೃತಿಕ ವಿವರಗಳನ್ನು ಗ್ರಹಿಸಿ ರೇವಣಸಿದ್ದೇಶ್ವರರ ಕತೆಯನ್ನು ಅವಲೋಕಿಸಬಹುದು. ಏಕೆಂದರೆ ಸಿರಾ ಸೀಮೆಯಲ್ಲಿ ಕುರುಬರು, ಹಾಲು ಮತದವರು, ಹಾಲುಗೌಡರು ಎಂದೆಲ್ಲಾ ಕರೆದುಕೊಳ್ಳುವ ಈ ಜನಾಂಗದ ಸಾಂಸ್ಕೃತಿಕ ನಾಯಕ ರೇವಣಸಿದ್ದ, ಆರಾಧನೆಯ ನೆಲೆಯೂ ಇದೇ ಆಗಿದೆ ಮಾತ್ರವಲ್ಲ ಜನಾಂಗಿಕ ಸಂಬಂಧಿ ಯಾವುದೇ ನಿರ್ಣಯ ತೆಗೆದುಕೊಳ್ಳಬೇಕಾದರೂ, ರೇವಣರಮಠದಲ್ಲಿಯೇ. ಹಾಗಾಗಿ ಸಿರಾ ತಾಲ್ಲೂಕಿನಲ್ಲಿ ಸಿರಾ ನಗರದ ಕಾಳಿದಾಸನಗರ (ಇಂದು) ಜನಪದೀಯವಾಗಿ ಕುರುಬರಹಟ್ಟಿ ಹಾಗೂ ಮೂಗನಹಳ್ಳಿ, ಈ ಎರಡೂ ಕಡೆಗಳಲ್ಲೂ ರೇವಣಸಿದ್ದೇಶ್ವರನ ಮಠಗಳಿವೆ. ಇವು ಕುರುಬರ ಗುರುಮಠಗಳೂ ಹೌದು. ಈ ಮಠಗಳಿಗೆ ವಂಶ ಪಾರಂಪರ್ಯವಾಗಿ ಬಂದ ಒಡೆಯರು ಗುರುಗಳಾಗಿರುತ್ತಾರೆ. ಸಾಮಾನ್ಯವಾಗಿ ಸಾವಂತಿಗೆ ಗೋತ್ರದ ಈ ಒಡೆಯ ಪರಂಪರೆಯ ಬಗೆಗೆ, ಕುರುಬರೆಲ್ಲರೂ ಭಕ್ತಿಭಾವದಿಂದ

ನಡೆದುಕೊಳ್ಳುತ್ತಾರೆ. ಒಡೆಯರು ಪಾರಂಪರ್ಯವಾಗಿ ಲಿಂಗದೀಕ್ಷೆ ಸ್ವೀಕರಿಸಿ ಪೂಜಾಕಾರ್ಯವೇ ಇವರ ಕಾಯಕ. ಮಾಂಸ, ಮದ್ಯಸೇವನೆ ಇವರಿಗೆ ನಿಷಿದ್ಧ. ಕುರುಬರ ಇತರೆ ಪಂಗಡದವರ ಮನೆಯಿಂದ ಹೆಣ್ಣನ್ನು ತಂದು ಸೊಸೆಯನ್ನಾಗಿ ಮಾಡಿಕೊಳ್ಳ ಬಹುದಾದರೂ, ಮದುವೆ ಆದ ಕೂಡಲೇ ಆಕೆ ಲಿಂಗ ಸ್ವೀಕಾರ, ಇಷ್ಟಲಿಂಗಾಚರಣೆ, ನಿತ್ಯಲಿಂಗಾರ್ಚನೆ, ದಾಸೋಹ ಮೊದಲಾದ ಕಾಯಕ ದೀಕ್ಷೆ ಸ್ವೀಕರಿಸಲಾಗುತ್ತದೆ. ಲಿಂಗಧಾರಣೆಯೂ ನಡೆಯುತ್ತದೆ. ಅಂದಿನಿಂದ ಈಕೆ ಒಡೆಯರ ಅಮ್ಮನಾಗುತ್ತಾರೆ. ಒಡೆಯರ ಮನೆಯಿಂದ ಹೊರಗೆ ಕೊಡುವ ಹೆಣ್ಣಿಗೆ ಯಾವುದೇ ಕಟ್ಟು ಕರಾರು ಇರುವುದಿಲ್ಲ. ಮೊದಲೇ ಶಿವಾಚಾರ ಸಂಸ್ಕಾರದಿಂದ ಬಂದ ಹುಡುಗಿಯಾದುದರಿಂದ ಸಹಜವಾಗಿಯೇ, ಆಧ್ಯಾತ್ಮದಲ್ಲಿ ಒಲವಿರಿಸಿಕೊಂಡಿರುತ್ತಾಳೆ. ಗಂಡ ಹಾಗೂ ಇವರಿಗೆ ಜನಿಸುವ ಮಕ್ಕಳು ಇತರೆ ಕುರುಬರಂತೆ ನಂಬಿಕೆ ನಡಾವಳಿಯಲ್ಲಿ ಬಾಳುವುದು ಇಲ್ಲಿನ ವಿಶೇಷ.

ಕುರುಬರಿಗೆ ಗುರುನಯ್ಯ ಅಥವಾ ಒಡೆಯರೆಂದರೆ ದೈವಕ್ಕೆ ಸಮಾನ. ಕುರುಬರ ಮನೆಯ ರಜತಾದಿ ಸೂತಕ, ಮದುವೆ ಕಾರ್ಯ ಒಡೆಯರಿಂದಲೇ ನಡೆಯುತ್ತದೆ. ಬ್ರಾಹ್ಮಣ ಮೂಲದ ಪುರೋಹಿತರ ಪ್ರವೇಶ ಆರಂಭದಲ್ಲಿ ನಿಷೇಧಿತವಾಗಿದ್ದರೂ ಈಚೆಗೆ ಇದೊಂದು ಹವ್ಯಾಸವಾಗಿ ಬೆಳೆದುಬಂದಿದೆ. ಈ ಎಲ್ಲಕ್ಕಿಂತ ಪ್ರಮುಖ ಸಂಗತಿ ಎಂದರೆ ಕುರುಬರ ಒಡೆಯರ ಮಹಿಳೆಯರು ವಿಧವೆಯಾದರೂ, ಅವರಿಗೆ ವೈಧವ್ಯದ ಕ್ರೂರ ಬಂಧನವಿಲ್ಲ. ಕುಂಕುಮ, ಹೂವು, ಬಳೆ ತೆಗೆಯುವಂತಿಲ್ಲ. ಮಾತ್ರವಲ್ಲ ಗಂಡ ಇಲ್ಲದ ವಿಧವೆಯೂ ಇಲ್ಲಿ 'ಒಡೆಯರಮ್ಮ' ಎಂದು ಪರಿಭಾವಿಸಿ ಮದುವೆ, ಸೂತಕ ಮೊದಲಾದ ಕರ್ಮ ಕಳೆಯುವ, ಶುಭಕಾರ್ಯ ನಡೆಸಿಕೊಡುವುದು ಈ ಗುರುಗಳಿಗೆ ನೀಡಿರುವ ವಿಶೇಷ ಸ್ಥಾನಮಾನ. ಇದಕ್ಕಾಗಿ ಇಂತಿಷ್ಟು ಕಾಣಿಕೆ ನೀಡುವ, ದವಸ ಧಾನ್ಯ ನೀಡುವ ಪದ್ಧತಿ ಇದೆ. ಮಾತ್ರವಲ್ಲ ಶಿಷ್ಯ ಮಕ್ಕಳು ಕೂಡಿ ಒಂದಿಷ್ಟು ಭೂಮಿಯನ್ನು ಕೊಂಡು ಒಡೆಯರಿಗೆ ನೀಡಿ ಅದರಿಂದ ಬರುವ ಎಲ್ಲ ವಸ್ತುಗಳನ್ನು ಒಡೆಯರ ಕುಟುಂಬ ಅನುಭವಿಸಲು ಅವಕಾಶ ಕಲ್ಪಿಸುತ್ತಾರೆ. ಸಿರಾ ಸೀಮೆಯಲ್ಲಿಯೂ ಇದೇ ಪರಂಪರೆಯಿದೆ. ರೇವಣಸಿದ್ದಯ್ಯ ಒಡೆಯರ್ ಇವರ ಮಕ್ಕಳಾದ ಶ್ರೀ ಈಶ್ವರಯ್ಯ ಒಡೆಯರ್ ಅವರ ನಿಧನದ ತರುವಾಯ ಅವರ ಸೋದರರಾದ ರೇವಣ್ಣ ಒಡೆಯರ್ ಅವರು ಇಲ್ಲಿನ ಗುರು ರೇವಣರ ಮಠವನ್ನು ಗುರುಗಳಾಗಿ ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ. ಅವರು ಭಕ್ತರ ಮನೆ ಶುಭಕಾರ್ಯ ಮುಂತಾದ ಸಂದರ್ಭದಲ್ಲಿ ಹೊರಗೆ ಹೋಗಿದ್ದಾಗ ಇವರ ಅಣ್ಣನವರಾದ ದಿ||ಈಶ್ವರಯ್ಯ ಇವರ ಮಡದಿ ಶ್ರೀಮತಿ ಪುಟ್ಟರಂಗಮ್ಮ ಒಡೆಯರ್ ಹಾಗೂ ಮಕ್ಕಳಾದ ಶ್ರೀಧರ ಒಡೆಯರ್, ರಾಘವೇಂದ್ರ ಒಡೆಯರ್ ಪೂಜೆ ಮತ್ತಿತರ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ.

ಸಿರಾದ ಕುರುಬರಹಟ್ಟಿಯ ಮಧ್ಯದಲ್ಲಿ ಗುರುರೇವಣರ ಮಠವಿದೆ. ಇದನ್ನು ರೇವಣ್ಣರ ಗುಡಿ ಎಂದೇ ಕರೆಯಲಾಗುವುದು. ಆಧುನಿಕ ಪರಿಸ್ಥಿತಿಯ ಈ ದಿನಗಳಲ್ಲೂ ಕುರುಬರ ಕುಲಸಂಬಂಧಿ ಯಾವುದೇ ಪ್ರಮುಖ ನಿರ್ಧಾರ ತೆಗೆದುಕೊಳ್ಳುವುದು ರೇವಣರಮಠದಲ್ಲಿಯೇ. ಹಾಗಾಗಿ ಈ ಮಠ ಕುರುಬರ ಮೌಖಿಕ ನ್ಯಾಯಾಲಯ, ನಂಬಿಗೆಯ ದೈವನೆಲೆಯಾಗಿದೆ.

ರೇವಣರು ಕುರುಬರ ಮೊದಲ ಗುರು, ಕುಲಗುರು ಎಂಬುದು ಹಾಲುಮತದವರ ನಂಬಿಕೆ. ಅದಕ್ಕೆ ಪೂರಕವಾಗಿ ಮೌಖಿಕ ಪರಂಪರೆಯಲ್ಲಿ ವ್ಯಾಪಕ ಸಾಹಿತ್ಯವಿದೆ.

ಕುರುಬರ ಕೇರ್ಯಾಗೆ ಆದಾವು ಗುರುಮಠ
ನ್ಯಾಯಗಾರರು ಕುರುಬಾರು ॥ ಅಲ್ಲೇ
ರೇವಣರ ಗುರುಮಠವು

ಇಂಥ ಮಾತುಗಳು ಗುರು ರೇವಣರು ಕುರುಬರ ಕೇರಿಗಳಲ್ಲಿ ಮಠ ಸ್ಥಾಪಿಸಿದ ಅಂಶ ತಿಳಿದುಬರುವುದಲ್ಲದೇ ನ್ಯಾಯಗಾರರು ಕುರುಬರು ಎಂಬ ವಿಶೇಷಣವನ್ನೂ ಸೇರಿಸಿದೆ. ಇಲ್ಲಿ ನ್ಯಾಯಗಾರರೆಂದರೆ ನ್ಯಾಯ ತೀರ್ಮಾನ ಮಾಡುವವರು ಎಂಬ ಮಾತಿನಾಚೆ ಸಣ್ಣ ಪುಟ್ಟ ಕಲಹ, ಮನಸ್ತಾಪ ಬಂದಾಗ, ಮಠದಲ್ಲಿ ಕುಳಿತು ನಾಲ್ಕು ಜನ ಹೇಳಿದ ಮಾತಿಗೆ ಒಪ್ಪಿ ತಮ್ಮ ತಮ್ಮ ನಡಾವಳಿಯನ್ನು ತಿದ್ದಿಕೊಳ್ಳುವರು ಎಂಬ ವಿಶಾಲ ಅರ್ಥವನ್ನು ನೀಡುತ್ತದೆ.

ಗುರು ರೇವಣರು ಕುರುಬರು, ವೀರಶೈವ ಈ ಎರಡೂ ಜನಾಂಗಗಳಿಗೂ ಪೂಜ್ಯ ವ್ಯಕ್ತಿಯಾಗಿದ್ದಾರೆ. ಇವರ ಬಗೆಗೆ ಮೌಖಿಕ ಹಾಗೂ ಲಿಖಿತ ಈ ಎರಡೂ ಪರಂಪರೆಯಲ್ಲೂ ಸಾಕಷ್ಟು ಮಾಹಿತಿ ಲಭ್ಯವಿದೆ. ರೇವಣರನ್ನು ಪುರಾಣ ಪುರುಷರೆಂದು, ಐತಿಹಾಸಿಕ ವ್ಯಕ್ತಿ ಎಂದು ಎರಡೂ ಬಗೆಯಲ್ಲಿ ಪರಿಭಾವಿಸಿದೆ. ಹರಿಹರ ಕವಿ ರೇವಣರನ್ನು ಕೊಲ್ಲಿಪಾಕಿಯಲ್ಲಿ ಅವತರಿಸಿದ ಲಿಂಗೋದ್ಭವರೆಂದು ವರ್ಣಿಸಿದ್ದಾರೆ. ಕುರುಬರ ಮುದ್ದುಗೊಂಡ ಮತ್ತು ಮುದ್ದಪ್ಪ ಇವರಿಗೆ ಏಳು ಜನ ಮಕ್ಕಳು. ಇವರ ಕೊನೆಯ ಮಗ ಪದ್ಮಗೊಂಡ. ಈತನು ಜಡಸ್ಥಿತಿಯವನಾದುದರಿಂದ ಈತನನ್ನು ಉಂಡಾಳು ಪದ್ಮಣ್ಣ ಎಂದೂ ಕರೆಯಲಾಗಿದೆ. ಈತನಿಗೆ ಇಬ್ಬರು ಮಡದಿಯರು. ಮೊದಲ ಮಡದಿ ಜಿಂಕಾದೇವಿ. ಇವರಿಗೆ ಜಗ್ಗಲಿ ಮುತ್ತಯ್ಯ, ಸಹಾಯ ಮುತ್ತಯ್ಯ, ಸೋಹ ಮುತ್ತಯ್ಯ, ಶಾಂತ ಮುತ್ತಯ್ಯ, ದೇವಮುತ್ತಯ್ಯ ಎಂಬ ಐವರು ಮಕ್ಕಳು. ಇವರಲ್ಲಿ ಶಾಂತ ಮುತ್ತಯ್ಯನೇ ರೇವಣರ ತಂದೆ. ತಾಯಿ ಮಹಾದೇವಿ. ಇವರು ಶಿವಮಂದಿರ ನಿರ್ಮಾಣ, ಸಮಾಜಸೇವೆಯಲ್ಲಿ ತೊಡಗಿಸಿಕೊಂಡು ಕೊಲ್ಲಿಪಾಕಿಯಲ್ಲಿ ನೆಲೆಸಿದ್ದಾಗ ರೇವಣಸಿದ್ದರು ಹುಟ್ಟುತ್ತಾರೆ. ಪುರಾಣದ ಪ್ರಕಾರ ಗುರು

ರೇವಣರು ಕೊಲ್ಲಿಪಾಕಿ ಸೋಮೇಶ್ವವ ಲಿಂಗದಲ್ಲಿ ಅವತರಿಸಿದವರೆಂದು ಹೇಳಲಾಗಿದೆ. ಶೈವ ಪರಂಪರೆ ಈ ಅಭಿಪ್ರಾಯವನ್ನು ನಂಬಿದೆ ಮತ್ತು ತಮ್ಮ ಗುರುಗಳೆಂದು ಭಾವಿಸಿದೆ. 'ತಗರ ಪವಾಡ' ಕೃತಿಯಲ್ಲಿ ಶಾಂತಮುತ್ತಯ್ಯರನ್ನು ರೇವಣ ಸಿದ್ದೇಶ್ವರರ ಶಿಷ್ಯರೆಂದು ಕರೆದಿದೆ ಮಾತ್ರವಲ್ಲ ಲೋಕಕಲ್ಯಾಣಾರ್ಥ ರೇವಣಸಿದ್ದರು ಸರಗೂರಿಗೆ ಬಂದಾಗ ಅಲ್ಲಿ ಕಂಡ ಶಾಂತಮುತ್ತಯ್ಯನೆಂಬ ಕುರುಬ ಜನಾಂಗದ ವ್ಯಕ್ತಿಗೆ ಲಿಂಗದೀಕ್ಷೆ ನೀಡಿ, ಗುರುಕಂಕಣ ಕಟ್ಟಿ, ಕುರುಬ ಜನಾಂಗಕ್ಕೆ ಅಧ್ಯಕ್ಷನನ್ನಾಗಿ ಮಾಡಿದರು. ಮುಂದೆ ಇದೇ ಶಾಂತಮುತ್ತಯ್ಯ ಕುರುಬರ ಶುಭಕಾರ್ಯಗಳಲ್ಲಿ ಭಾಗವಹಿಸುತ್ತಾ ಮದುವೆ ಕಾರ್ಯವನ್ನು ನಡೆಸುತ್ತಾರೆ. ಆದುದರಿಂದಲೇ ಕುರುಬರ ಮದುವೆಗಳಲ್ಲಿ ಇಂದಿಗೂ ಶಾಂತಮುತ್ತಯ್ಯ ಕಟ್ಟಿಸಿದ ಕಲ್ಯಾಣ ಎಂಬ ಮಂತ್ರ ಪಠಿಸುತ್ತಾರೆ. ತರಗರ ಪವಾಡ ಹಾಗೂ ಹಾಲುಮತೋತ್ತೇಜಕ ಪುರಾಣ ಈ ಎರಡೂ ಕೃತಿಗಳಲ್ಲಿ ರೇವಣ, ಶಾಂತಮುತ್ತರ ವಿಚಾರ ಬರುತ್ತದೆ. ಸತ್ತ ತಗರನ್ನು ತಲೆಯ ಮೇಲೆ ಹೊತ್ತು ಮಾರಾಟ ಮಾಡುತ್ತಿದ್ದ ಕುರುಬರನ್ನು ದೊರೆ ಕಲ್ಯಾಣ ಪಟ್ಟಣದಿಂದ ಹೊರಗೆ ಹಾಕುತ್ತಾರೆ. ಆಗ ಶಾಂತಮುತ್ತ ಪವಾಡ ಮಾಡಿ ಸತ್ತ ತಗರು ಎದ್ದು ಸಭೆಯ ಮುಂದೆ ಕುಣಿಯುತ್ತದೆ. ಇವರ ಭಕ್ತಿಗೆ ಮೆಚ್ಚಿದ ಶಿವ ಕುರುಬರನ್ನು ಪಟ್ಟಣದ ಬಳಿಗೆ ಬರಮಾಡಿಕೊಂಡು, ವಿಧಿಸಿದ್ದ ಪುರಪ್ರವೇಶ ನಿಷೇಧವನ್ನು ಹಿಂತೆಗೆದುಕೊಂಡ ನೆಂದೂ, ರೇವಣರು ಈತನಿಗೆ ಲಿಂಗದೀಕ್ಷೆ ಮಾಡಿದ ಗುರುವೆಂದೂ ವಿವರಿಸಿದೆ.

ಉಂಗಾರಗೊಡು ಉರಿಗೋಡು ರೇವಣ್ಣ
ಸತ್ತ ತಗರು ನೆಗೆದೆದ್ದು ರೇವಣ್ಣ
ಶಿವನ ಮುಂದೆ ಕುಣಿದಾವು [1]

ಹೀಗೆ ಸತ್ತ ಟಗರನ್ನು ಬದುಕಿಸಿ ಕುರುಬರ ಘನತೆ, ಆಧ್ಯಾತ್ಮಿಕ ಅನನ್ಯತೆಯನ್ನು ಸಾರುವ ವಾಙ್ಮಯ ಮೌಖಿಕ ಪರಂಪರೆಯಲ್ಲಿ ವ್ಯಾಪಕವಾಗಿದೆ.

ಸಿರಾ ಕುರುಬರಹಟ್ಟಿಯ ಗುರುರೇವಣಸಿದ್ದೇಶ್ವರ ಮಠ ಇಲ್ಲಿನ ಅಪೂರ್ವ ಭಿತ್ತಿಚಿತ್ರಗಳಿಂದ ಹೆಸರುವಾಸಿಯಾಗಿದೆ. ಕರ್ನಾಟಕದ ಪ್ರಮುಖ ವಿದ್ವಾಂಸರು, ವಾಸ್ತುಶಿಲ್ಪ ತಜ್ಞರು ಇಲ್ಲಿನ ಚಿತ್ರಗಳನ್ನು ಕುರಿತು ಬರೆದಿದ್ದಾರೆ[2]. ರೇವಣರ ಗುಡಿ 13x10 ಅಳತೆಯ ದೇವಸ್ಥಾನ. ಗರ್ಭಗುಡಿ ಹಾಗೂ ಅಂಗಳ ಎರಡು ಚಿಕ್ಕ ಚಿಕ್ಕ ಕೊಠಡಿಯ ಮಂದಿರ. ಗರ್ಭಗುಡಿಯಲ್ಲಿ ರೇವಣಸಿದ್ದೇಶ್ವರರ ಪೀಠ, ಅದರ ಬದಿಗೆ ಶಿವಲಿಂಗವಿದೆ. ಮೇಲ್ಛಾವಣಿ ಎರಡು ಕೊಠಡಿಗಳಿಗೂ ಹೊಂದಿಕೊಂಡಿದ್ದು ನಾಲ್ಕು ಗೋಡೆ ಮೇಲೆ ಸುಟ್ಟ ಸುಣ್ಣದ

1. *ಬಂಡಿ ಬಂದಾವು ಬಾಳೆ ವನದಾಗೆ*
2. *ಪಿ.ಆರ್. ತಿಪ್ಪೇಸ್ವಾಮಿ, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು*

ಗಚ್ಚನ್ನು ಹಾಕಲಾಗಿದೆ. ಮೊದಲ ಅಂಕಣದ ಗೋಡೆಯ ನಾಲ್ಕು ಬದಿಗೂ ಸುಂದರವಾದ ಚಿತ್ರ ಬಿಡಿಸಲಾಗಿದೆ. ಸುಮಾರು 1800 ರಿಂದ 1850 ರ ಸುಮಾರಿಗೆ ರಚನೆಗೊಂಡಿರುವ ಇಲ್ಲಿನ ಚಿತ್ರಗಳಲ್ಲಿ ತಂಜಾವೂರು ಮೈಸೂರು ಶೈಲಿಯ ಸುಂದರ ವಿನ್ಯಾಸವಿದೆ. ದೇಶೀ ಬಣ್ಣವನ್ನು ಮೋಹಕವಾಗಿ ಬಳಸಿಕೊಳ್ಳಲಾಗಿದೆ. ಸೀಬಿ ದೇವಸ್ಥಾನದ ಭಿತ್ತಿಚಿತ್ರ ರಚನೆಯ ಕಾಲದಲ್ಲಿಯೇ ಈ ಚಿತ್ರಗಳ ಪೇಂಟಿಂಗ್ ಆಗಿರಬೇಕೆಂದು ತಜ್ಞರು ಅಭಿಪ್ರಾಯಪಡುತ್ತಾರೆ. ಮರಾಠರ ಶೈಲಿ ಎಂದೂ ಅಭಿಪ್ರಾಯಪಡುವುದುಂಟು. ಇಲ್ಲಿ ಭಿತ್ತಿಚಿತ್ರಗಳಲ್ಲಿ ರಾಮಾಯಣ, ಭಾಗವತ, ಶಿವಪುರಾಣ ಇವುಗಳ ಜೊತೆಗೆ ಕುರುಬರ ಮೂಲಪುರುಷನೆಂದು ಪರಿಭಾವಿಸುವ ಪದ್ಮಣ್ಣನ ಚಿತ್ರಗಳಿವೆ. ಪಾರ್ವತಿ ಪರಮೇಶ್ವರರ ವಿವಾಹದ ಕಾಲದಲ್ಲಿ ಧಾರೆಗೆ ಎರೆದ ಹಾಲು ಹರಿದು ಅದರಿಂದ ಉದ್ಭವವಾದ ವ್ಯಕ್ತಿ, ಆತನಿಂದಲೇ ಹಾಲುಮತ ಸ್ಥಾಪಿತವಾಯಿತೆಂಬುದು ಜನಪದೀಯ ಐತಿಹ್ಯ. ಇದರ ಚಿತ್ರವೂ ಇಲ್ಲಿ ಆಕರ್ಷಕವಾಗಿ ರಚನೆಯಾಗಿದೆ. ದೇವಸ್ಥಾನ ಪ್ರವೇಶಿಸಿದ ಬಲಬದಿಯ ದ್ವಾರಬಾಗಿಲ ಬಳಿ ಮಹಮ್ಮದೀಯ ಶೈಲಿಯ ಸೇನಾಪಡೆಯ ವೀರನೊಬ್ಬನ ಚಿತ್ರವಿದೆ. ಅದು ಹೈದರ್ ಹಾಗೂ ಟಿಪ್ಪೂ ಸುಲ್ತಾನನದು ಎಂದು ಇತಿಹಾಸ ತಜ್ಞರಾದ ಡಾ॥ ಯೋಗೀಶ್ವರಪ್ಪ ಅಭಿಪ್ರಾಯಪಡುತ್ತಾರೆ. ಉಳಿದಂತೆ ವೇಣುಗೋಪಾಲ, ನರಸಿಂಹ, ಹಿರಣ್ಯಕಶ್ಯಪನ ಸಂಹಾರ, ಶಿವ ಪಾರ್ವತಿಯರ ಲೋಕಸಂಚಾರ, ಕಲ್ಪವೃಕ್ಷ, ಕಾಮಧೇನು ಸುಂದರವಾಗಿವೆ. ಗರ್ಭಗೃಹದ ಬಲ ಗೋಡೆಯ ಮೇಲೆ ಪೀಠಾರೋಹರಾಗಿರುವ ಶ್ರೀರಾಮ-ಸೀತೆಯ ಚಿತ್ರ ಮೋಹಕವಾಗಿದೆ. ಹಸಿರು ಬಣ್ಣದ ಈ ಚಿತ್ರ ಶ್ರೀರಾಮ ಕಿರೀಟ, ಮುದ್ರಾ ಉಂಗುರ, ಧನಸ್ಸು ಹಿಡಿದ ಆಕರ್ಷಕ ಭಂಗಿ, ಬಲಬದಿಗೆ ಧನಸ್ಸು ಹಿಡಿದು ಕೈ ಮುಗಿಯುತ್ತಿರುವ ಲಕ್ಷ್ಮಣ, ಸುಗ್ರೀವ, ಬದಿಯಲ್ಲಿ ಹನುಮಂತ ಅವರ ಪರಿವಾರವಾದ ವಾನರ ಸೇನೆಯನ್ನು ಬಿಡಿಸಲಾಗಿದೆ.

ಗರ್ಭಗೃಹದಿಂದ ಲಲಾಟದಿಂದ ಮಧ್ಯಭಾಗಗಳಲ್ಲಿ ಚಕರವನ್ನು ಚಿತ್ರಿಸಿದರೆ ಇದರ ಎರಡೂ ಬದಿಯಲ್ಲಿ ಗಿಳಿ ಹಾಗೂ ನಂದಿಯನ್ನು ಚಿತ್ರಿಸಲಾಗಿದೆ. ಅವುಗಳಿಗೆ ಹೊಂದಿಕೊಂಡಂತೆ ಹೂಬಳ್ಳಿಗಳ ಚಿತ್ರವನ್ನು ಬಿಡಿಸಲಾಗಿದೆ. ದೇವಸ್ಥಾನದ ಒಳ ಅಂಕಣದ ಬಲಬದಿಯಲ್ಲಿ ಕೃಷ್ಣನ ಜಲಕ್ರೀಡಾ ಪ್ರಸಂಗವನ್ನು ಮೋಹಕವಾಗಿ ಬಿಡಿಸಲಾಗಿದೆ. ಗೋಪಿಕಾ ಸ್ತ್ರೀಯರು ನಗ್ನರಾಗಿ ನೀರಿನಲ್ಲಿ ಅರೆಬರೆ ಮುಳುಗಿರುವ ಚಿತ್ರ, ಕೆಲವು ಗೋಪಿಕಾ ಸ್ತ್ರೀಯರು ಮರದ ಮೇಲೆ ಕುಳಿತು ಕೊಳಲೂದುತ್ತಿರುವ ಶ್ರೀಕೃಷ್ಣನತ್ತ ವಸ್ತ್ರ ಕೊಡುವಂತೆ ಅಂಗಲಾಚುವ ಚಿತ್ರ ಮೋಹಕವಾಗಿವೆ. ಕಲಾವಿದ ತುಂಬು ರಸಿಕತನದಿಂದ ಇಲ್ಲಿನ ಸ್ತ್ರೀಯರ ಮೈಮಾಟದ, ವರ್ಣ ವಿನ್ಯಾಸವನ್ನು, ಕುಸುರಿ ಕಲೆಯನ್ನಾಗಿ ಬಿಡಿಸಿದ್ದಾನೆ. ಪೂರ್ಣ ನಗ್ನ ಸ್ತ್ರೀಯ ಆತಂಕ, ದೈನ್ಯತೆ, ನಾಚಿಕೆಯಿಂದಾಗಿ ಅರೆ ನೀರಲ್ಲಿ ನಿಂತ ಭಂಗಿ, ಉಬ್ಬಿದೆದೆಯ ನೀರೆಯರ ಸುಂದರ ಅಂಗಸೌಷ್ಠವತೆ, ಕಾಲ್ಗೆಜ್ಜೆ, ಕಾಲಂದಿಗೆ, ಕೈಬಳೆ, ತೋಳುಬಂದಿ, ಮೂಗುತಿ, ಕಿವಿಯೋಲೆ,

ಕಂಠೀಹಾರ, ಬೈತಲೆ, ನಾಚಿದ ಮುಖಭಾವ ಸುಂದರವಾಗಿದೆ. ಕೃಷ್ಣ ಮರದ ಮೇಲೆ ಕುಳಿತು ಕಾಲುಗಳನ್ನು ಇಳಿಬಿಟ್ಟು ವೇಣುವಾದನದಲ್ಲಿ ತಲ್ಲೀನನಾದರೆ ಗೋಪಾಲಿಕೆಯರು ಐವರು ಸಾಲಾಗಿ ನಿಂತು ಕೃಷ್ಣನ ಚೇಷ್ಟೆಗೆ ಪೂರಕ ಎಂಬಂತೆ ವಿವಸ್ತ್ರಧಾರಿಗಳಾಗಿ ಅರೆನಾಚಿಕೆಯ ಯಾತನಾಮಯ ದೃಶ್ಯವನ್ನು ಸೊಗಸಾಗಿ ಚಿತ್ರಿಸಲಾಗಿದೆ.

ಪ್ರಾಕೃತಿಕ ವರ್ಣನೆಗಳಾಗಿ ಕೃಷ್ಣ ಕುಳಿತ ಬದಿಯಲ್ಲಿಯೇ ಸ್ವೇಚ್ಛೆಯಾಗಿ ವಿಹರಿಸುವ ಮೀನು, ಏಡಿ, ಆಮೆ, ಹಾವು, ಮೊಸಳೆ ತಿಳಿನೀರಲ್ಲಿ ವಿಹರಿಸುತ್ತಿರುವ ಚಿತ್ರವನ್ನು ನಸುಕೆಂಚು ವರ್ಣದಲ್ಲಿ ಕಟ್ಟಿಕೊಡಲಾಗಿದೆ. ಎರಡನೇ ಅಂಕಣದ ಮೇಲ್ಭಾಗದ ಗೋಡೆಯಲ್ಲಿ ಮಹಾರಾಜರೊಬ್ಬರು ಸೈನ್ಯ ಸಮೇತ ಸಾರೋಟು ಹೊರಟ ದೃಶ್ಯಾವಳಿಯನ್ನು ನಿರೂಪಿಸಲಾಗಿದೆ. ಸವಾರಿ ನಿರತ ಕುದುರೆ ಸಾಲು, ಖಡ್ಗಧಾರಿ ಸೈನಿಕರು, ಅಲಂಕೃತಗೊಂಡ ಕುದುರೆ ಸಾಲು, ಚಾಮರ ಸಮೇತ ಸೇನೆಯ ಪಥಚಲನಾ ಮಾದರಿಯ ತಿರುಗಾಟ, ಬಲಬದಿಗೆ ಇಬ್ಬರು ನಾಟ್ಯಕಾರ್ತಿಯರು ಸರ್ವಾಲಂಕಾರಭರಿತರಾಗಿ ನೃತ್ಯಭಂಗಿಯಲ್ಲಿ ನಿಂತಿದ್ದಾರೆ. ಸೈನಿಕರು ಪೈಜಾಮ, ನಿಲುವಂಗಿ, ತುಂಬು ತೋಳಿನ ಅಂಗಿ, ತಲೆಯ ಮೇಲೆ ರುಮಾಲು, ಕಚ್ಚೆಪಂಚೆ, ಕುತ್ತಿಗೆ ಪಟ್ಟಿ, ಸೊಂಟಕ್ಕೆ ಬಿಗಿದು ಕಟ್ಟಿರುವ ಪಟ್ಟಿಕೆ, ಅದರ ಮೇಲೂ ಕುಸುರಿ ಕೆಲಸದ ಚಿತ್ರಣ ರೋಚಕವಾಗಿದೆ. ಕುರುಬರ ಸಂಸ್ಕೃತಿ ಸಾರುವ ಕುರಿ ಚಿತ್ರಗಳೂ ಪ್ರಕಟಗೊಂಡಿವೆ.

ಒಟ್ಟಾರೆ ಇಲ್ಲಿನ ಚಿತ್ರಗಳು ಕುಂಚದಿಂದ ಬರೆದ ಚಿತ್ರಗಳಾಗಿವೆ. ಕೆಂಪು, ನೀಲಿ, ಕಂದು, ಹಳದಿ, ತಿಳಿನೀಲಿ, ಗಿಳಿಹಸಿರು ಬಣ್ಣಗಳನ್ನು ಬಳಸಿಕೊಳ್ಳಲಾಗಿದೆ. ಇಲ್ಲಿನ ಕಲಾವಿದನಿಗೆ ಚಿತ್ರ ಬಿಡಿಸುವಲ್ಲಿ ಶೈವ, ವೈದಿಕ ಈ ಬಗೆಯ ವರ್ಗೀಕರಣದ ಬಗೆಗೆ ಕಲ್ಪನೆಯಾಗಲಿ, ಖಚಿತವಾದ ಪೂರ್ವ ತಯಾರಿಯಾಗಲಿ ಇದ್ದಂತೆ ಕಾಣಲಾಗುವುದಿಲ್ಲ. ಬದಲಿಗೆ ಕಲಾವಿದನು ತನ್ನ ಕಲ್ಪನಾಭಾವಕ್ಕೆ ರೂಪವಾಗಿ ಇಷ್ಟ ಬಂದ ಹಾಗೆ ಚಿತ್ರಿಸುತ್ತಾ ಹೋಗಿದ್ದಾನೆ. ಸ್ಥಳಾವಕಾಶ ಕಂಬಸಾಲು ಏನೇನೂ ಸಾಲದ ಕಿರು ಜಾಗದಲ್ಲಿ ಕಲಾ ಲೋಕದ ಅದ್ಭುತ ಜಗತ್ತು ತೆರೆದಿರುವುದು ಗಮನಾರ್ಹ ಸಂಗತಿ. ದುರಂತವೆಂದರೆ 1990 ರ ದಶಕದಲ್ಲಿ ದೆಹಲಿ ಮೂಲದ ಕೆಲವರು ಇಲ್ಲಿನ ಚಿತ್ರಕಲೆಯನ್ನು ಎತ್ತಿ ಕೊಂಡೊಯ್ಯುವ ಸಂದರ್ಭದಲ್ಲಿ ಭಕ್ತರಿಗೆ ತಿಳಿದು ಅವರಿಗೆ ಸಿಗದಂತೆ ಮಾಡಿದ್ದಾರೆ. ಆದರೂ ಎಬ್ಬಿರುವ ಚಿತ್ರ ಪೂರಾ ನಾಶವಾಗಿದೆ. ಉಳಿದವುಗಳಿಗೆ ನಾಡಸುಣ್ಣ ಬಳಿಯಲಾಗಿದೆ. ಈಗ ಚಿತ್ರದ ಮಾದರಿ ಕಾಣುವುದಿಲ್ಲ.

ಪ್ರತಿ ಶಿವರಾತ್ರಿ ವಿಜಯದಶಮಿಯ ದಿನಗಳಂದು ರೇವಣಸಿದ್ದೇಶ್ವರನ ಉತ್ಸವ ಹೊರಡುತ್ತದೆ. ರೇವಣರ ವಾಹನವಾಗಿ ಹತ್ತು ತಲೆಗಳ ರಾವಣನನ್ನು ಬಳಸಿಕೊಂಡಿರುವುದು

ವಿಶೇಷ. ಉಳಿದಂತೆ ಪ್ರತಿ ಸೋಮವಾರ ವಿಶೇಷ ಪೂಜೆ. ಅಭಿಷೇಕ, ಮಹಾಮಂಗಳಾರತಿ ನಡೆಯುತ್ತದೆ. ಇದರ ಬದಿಯಲ್ಲಿಯೇ ಇರುವ ಶ್ರೀ ಮೈಲಾರಲಿಂಗ, ಸಿದ್ದಪ್ಪ, ತಿಮ್ಮಪ್ಪ ದೇವರುಗಳಿಗೆ ಸೋಮವಾರ, ಭಾನುವಾರಗಳಂದು ವಿಶೇಷ ಪೂಜೆ ನಡೆಯುತ್ತದೆ. ಕುರುಬರ ಒಂದು ಪಂಗಡ ಕಟ್ಟೆಮನೆ ಅಣ್ಣ ತಮ್ಮರೆಂಬ ಭಾವನೆಯಲ್ಲಿ ಈ ದೇವರುಗಳಿಗೆ ನಡೆದುಕೊಳ್ಳುತ್ತಾರೆ. ತಿಮ್ಮಪ್ಪ, ಸಿದ್ದಪ್ಪ ದೇವರು ಗೌಡನ ಕುಲದ ಕುರುಬರ ಮನೆದೇವರು. ಏಕಾದಶಿಯ ಕೊನೆಯ ದಿನ ಈ ಬಳಗದವರೆಲ್ಲರೂ ಕೂಡ ಜಾತ್ರೆ ಮಾದರಿಯಲ್ಲಿ ಉತ್ಸವ ಮಾಡುತ್ತಾರೆ. ಸಹಭೋಜನದ ವ್ಯವಸ್ಥೆಯೂ ನಡೆಯುತ್ತದೆ. ಈ ದೇವಸ್ಥಾನದ ದ್ವಾರಬಾಗಿಲ ಬಳಿಯ ಒಳಬಾಗಿಲಿಗೆ ಕಂಚಿನ ತಗಡಿನಿಂದ ನಿರ್ಮಿಸಿರುವ ಬಾಗಿಲವಾಡದಲ್ಲಿ ಶಿವ, ವಿಷ್ಣು ಪುರಾಣಗಳ ಆಕರ್ಷಕ ದೃಶ್ಯಾವಳಿಗಳು ಗಮನಸೆಳೆಯುತ್ತವೆ.

ಇವುಗಳ ನಡುವೆಯೂ ರೇವಣರ ಗುಡಿ ಸಮಸ್ತ ಕುರುಬರ ಸಾಂಸ್ಕೃತಿಕ ನೆಲೆಯಾಗಿ ಜನಾಂಗದ ಪ್ರತಿಯೊಂದು ಚಟುವಟಿಕೆಗಳ ಕೇಂದ್ರವೂ ಆಗಿದೆ.

# ಅಧ್ಯಾಯ – ಐದು
# ಜನಪದ ಆಚರಣೆ

## ಅ) ಜೋಕುಮಾರ ಆಚರಣೆ

ಸಿರಾ ತಾಲ್ಲೂಕಿನಲ್ಲೂ ಜೋಕುಮಾರನ ಆಚರಣೆ ಬಳಕೆಯಲ್ಲಿದೆ. ಸಿರಾ ನಗರದ ಸಂತೇಪೇಟೆ ಬಡಾವಣೆಯ (ಸೋಮಣ್ಣನಕಟ್ಟೆ), ಮರಡಿಗುಡ್ಡದ ರಂಗನಾಥಪುರ, ಪಟ್ಟನಾಯಕನಹಳ್ಳಿ ಹಾಗೂ ತಾವರೆಕೆರೆಗಳಲ್ಲಿ ಇಂದಿಗೂ ಈ ಆಚರಣೆಯಿದೆ. ಪ್ರತಿ ಗೌರಿ ಗಣೇಶ ಹಬ್ಬವಾದ ಒಂದು ವಾರದೊಳಗೆ ಜೋಕುಮಾರ ಆಚರಣೆ ಮಾಡಲಾಗುತ್ತದೆ.

ಗಂಗಮತಸ್ಥರು ಅಥವಾ ಬೆಸ್ತ ಜನಾಂಗದಲ್ಲಿ ಮಾತ್ರ ಚಾಲ್ತಿಯಿರುವ ಈ ಆಚರಣೆ ಒಂದು ವಿಶಿಷ್ಟ ಮಾದರಿಯ ಹಬ್ಬ. ಮರದ ಗೂಡೆ ಅಥವಾ ಬಿದಿರ ಬುಟ್ಟಿಯಲ್ಲಿ ಹಸಿ ಜೇಡಿ ಮಣ್ಣಿನಿಂದ ತಯಾರಿಸಿದ ಅರ್ಧ ಅಡಿ ಎತ್ತರದ ಮೂರ್ತಿ, ಅದಕ್ಕೆ ಬೆಳಿ ಕಿರುಗಣ್ಣು, ಮೀಸೆ ಇಟ್ಟು ಬೇವಿನಸೊಪ್ಪಿನೊಂದಿಗೆ ಅಲಂಕರಿಸಿ, ಮೂವರು ಹೆಂಗಸರು ಮನೆಮನೆಗೆ ತೆರಳಿ ಜೋಕುಮಾರನ ಮೇಲೆ ಪದ ಹಾಡುತ್ತಾರೆ. ಮುಮ್ಮೇಳ-ಹಿಮ್ಮೇಳ ಮಾದರಿಯಲ್ಲಿ ಹಾಡುವ ಈ ಕತೆಯಲ್ಲಿ ಕಥಾಭಿತ್ತಿ ಹೀಗೆ ಬಿಚ್ಚಿಕೊಳ್ಳುತ್ತದೆ.

ಜೋಕುಮಾರ ಶಿವ-ಪಾರ್ವತಿಯರ ಮೊದಲ ಮಗ. ಎರಡನೇ ಮಗ ಗಣಪತಿ. ಬೆಳೆದು ದೊಡ್ಡವನಾದ ಜೋಕುಮಾರನೊಂದಿಗೆ ತಾಯಿ ಪಾರ್ವತಿ (ಹಾಡಿನಲ್ಲಿ ಗೌರಮ್ಮ ಎಂದು ಕರೆಯುತ್ತಾರೆ) ನಿನಗೆ ಮದುವೆಯ ಮಾಡಬೇಕಿದೆ, ಎಂಥ ಹೆಣ್ಣು ತರಲಿ ಎನ್ನುತ್ತಾಳೆ. ಅದಕ್ಕೆ ಜೋಕುಮಾರ ನಾಚಿಕೊಳ್ಳುತ್ತಲೇ ನಿನ್ನಂಥವಳೇ ಬೇಕು ಎನ್ನುತ್ತಾನೆ. ಅದು ಗೌರಮ್ಮನಿಗೆ ನೀನೇ ಎಂದು ತಪ್ಪಾಗಿ ಕೇಳಿಸುತ್ತದೆ. ಕೋಪಗೊಂಡ ಗೌರಮ್ಮ ಮುದ್ದೆಯ ಕವಗಟ್ಟಿಗೆಯಿಂದ ಆತನ ಕತ್ತು ಕತ್ತರಿಸುತ್ತಾಳೆ. ಹೀಗೆ ಕತ್ತರಿಸಿದ ತಲೆಯನ್ನು ಕೊಳೆ ಬಟ್ಟೆಯಲ್ಲಿ ಸುತ್ತಿ ಇಡುತ್ತಾಳೆ. ಮಡಿವಾಳ ಬರುತ್ತಾನೆ. ಕೊಳೆಬಟ್ಟೆ ಎಂದು ಜೋಕುಮಾರನನ್ನು ಸುತ್ತಿಟ್ಟಿದ್ದ ಬಟ್ಟೆಯನ್ನು ಒಗೆಯಲು ಹೊಳೆಗೆ ತೆಗೆದುಕೊಂಡು ಹೋಗುತ್ತಾನೆ. ತಲೆಯನ್ನು ಗಾಬರಿಯಿಂದ ನೀರಿಗೆ ಎಸೆಯುತ್ತಾನೆ.

ಜೋಕುಮಾರನ ತಲೆ ನೀರಿನಲ್ಲಿ ಕೊಚ್ಚಿಕೊಂಡು ಹೋಗಿ ದೂರದ ಹೊಳೆಯಲ್ಲಿ ಮೀನು ಹಿಡಿಯುತ್ತಿದ್ದ ಬೆಸ್ತರ ಬಲೆಗೆ ಬೀಳುತ್ತದೆ. ಆಸೆಯಿಂದ ಬಲೆ ಎತ್ತಿದ ಬೆಸ್ತರಿಗೆ ತಲೆಬುರುಡೆ ಕಂಡು ಗಾಬರಿ ನೀರಿಗೆ ಬಿಸುಟು ಇನ್ನೊಂದು ಕಡೆ ಹೋಗುತ್ತಾರೆ. ಅಲ್ಲಿ

ಮೀನು ಹಿಡಿಯಲು ಬಲೆ ಬೀಸಿದಾಗ ಅಲ್ಲಿಯೂ ಇದೇ ತಲೆಬುರುಡೆ ಬರುತ್ತದೆ. ಇದೇ ವರ್ತನೆ ಒಂದು ವಾರದ ತನಕ ಸತತವಾಗಿ ಪುನರಾವರ್ತನೆಯಾಗುತ್ತದೆ. ಬೆಸ್ತ ಸಮುದಾಯ ಆಹಾರವಿಲ್ಲದೆ ಬಳಲಬೇಕಾಗುತ್ತದೆ. ಹಲವು ದಿನಗಳ ಬಳಿಕ ಹಿರಿಯರೊಬ್ಬರ ಅಭಿಪ್ರಾಯದಂತೆ ಇದಕ್ಕೆ ಕಾರಣವೇನೆಂದು ಜೋತಿಷ್ಯ ಕೇಳಬೇಕೆಂದು ತೀರ್ಮಾನಿಸಿ, ಜ್ಯೋತಿಷಿಗಳ ಮನೆಗೆ ಹೋಗುತ್ತಾರೆ. ನೀರಿನಲ್ಲಿ ಬಂದು ಬಲೆಯಲ್ಲಿ ಬೀಳುವುದು ಬೇರೆ ಯಾರೂ ಅಲ್ಲ. ಗಂಗೆಯ ಮಗ ಜೋಕುಮಾರ ಸ್ವಾಮಿ. ತಾಯಿಯಿಂದ ಹತನಾಗಿ, ಮುಕ್ತಿ ಕಾಣದೆ ಮುಕ್ತಿಗಾಗಿ ನಿಮ್ಮ ಬಳಿಗೆ ಬಂದಿದ್ದಾನೆ. ಆದುದರಿಂದ ನೀವುಗಳು ಆ ತಲೆಯನ್ನು ತಂದು ಪೂಜಿಸಿ, ಮೆರೆಸಿ, ಸಂಸ್ಕಾರ ಮಾಡಬೇಕೆಂದು ಜ್ಯೋತಿಷಿ ಹೇಳುತ್ತಾನೆ. ಕೊನೆಗೆ ಬೆಸ್ತರು, ಮಡಿವಾಳರು ಕೂಡಿಕೊಂಡು ಜೋಕುಮಾರನ ಸಂಸ್ಕಾರ ಕಾರ್ಯ ನಡೆಯುತ್ತದೆ. ನಂತರ ಪ್ರತಿ ವರ್ಷ ಗೌರಿ ಗಣೇಶನ ಹಬ್ಬದ ಹಿಂದೆ ಮುಂದೆ ಜೋಕುಮಾರನ ಆಚರಣೆ ಮಾಡಲಾಗುವುದು.

ಜೋಕುಮಾರ ನಂಬವನೆ ಗೌರಮ್ಮನ ಮಗನಪ್ಪ
ಹುಟ್ಟುತ್ತಲೇ ತಾಯ ಬ್ರಮೆಸೇನೆ / ಗೌರಮ್ಮ
ಎತ್ತಾಕಿ ಕೊರಳ ಮುರಿದಾಳೆ
ಎತ್ತಾಕಿ ಕೊರಳ ಮುರಿದಾಳೆ ಗೌರಮ್ಮ
ಬಿಟ್ಟಾಳೆ ಹರಿವ ಜಲಧಿಗೆ । ಜೋಕುಮಾರ
ಬಂದವನೆ ಅಂಬಿಗರ ಬಲೆಯಾಗೆ
ಹಳ್ಳದಾಗೆ ಹರಿಸಿದ । ಕೊಳ್ಳದಾಗೆ ಕೂಗಿದ
ಎಲ್ಲಿ ಕಂದಾನ ಕೂಗಿರಮ್ಮ

ಸಂತೇಪೇಟೆಯ 62 ವಯಸ್ಸಿನ ಅಂಬಿಗರ ಸಿದ್ದಮ್ಮ ಹಾಡುವ ಈ ಕಾವ್ಯಭಾಗದಲ್ಲಿ ಜೋಕುಮಾರನ ಕಥನ ವಿವರವಿದೆ. ರಾತ್ರಿಯಿಡೀ ಕಾವ್ಯ ಹಾಡಬಲ್ಲ ಈಕೆಯೊಂದಿಗೆ, ಇದೇ ವರ್ಗದ ಗೌರಮ್ಮ, ಭಾಗ್ಯಮ್ಮ, ಲಕ್ಷ್ಮಮ್ಮ ಹಿಮ್ಮೇಳ ಹಾಡುತ್ತಾರೆ. ಇವರು ಹೀಗೆ ಹಾಡುತ್ತಾ ಮನೆ ಮನೆಗೆ ತೆರಳಿ ದವಸ, ಕಾಣಿಕೆ ಸಂಗ್ರಹಿಸುತ್ತಾರೆ. ಆರು ದಿನಗಳ ಕಾಲ ಮಾತ್ರ ಈ ರೀತಿಯ ಭಿಕ್ಷಾಟನೆ. ಏಳನೆಯ ದಿನಕ್ಕೆ ಜೋಕುಮಾರನ ಸಾಗಾಕುವ ಆಚರಣೆ. ಅಂದು ಅದುವರೆಗೆ ಸಂಗ್ರಹಿಸಿದ ದಿವಸದಿಂದ ಅಡಿಗೆ ತಯಾರಿಸಿ ಪರೇವು ಎಂಬ ಹೆಸರಲ್ಲಿ ಬಂದವರಿಗೆಲ್ಲಾ ಊಟ ಹಾಕಲಾಗುತ್ತದೆ. ನಂತರ ವಾದ್ಯ ಪರಿಕರದೊಂದಿಗೆ ಗಣೇಶನ ವಿಸರ್ಜನೆಯ ಮಾದರಿಯಲ್ಲಿ ನೀರಿನಲ್ಲಿ ವಿಸರ್ಜಿಸಲಾಗುವುದು.

### ಆ) ಮಣೇವು ಹಾಕುವುದು:

ಬಯಲುಸೀಮೆಯ ವೈಷ್ಣವ ಸಂಪ್ರದಾಯದ ಧಾರ್ಮಿಕ ಆಚರಣೆಗಳಲ್ಲಿ ಮಣೇವು ಸೇವೆ ಒಂದು ಪ್ರಮುಖ ಆರಾಧನೆಯಾಗಿದೆ. ತುಮಕೂರು ಜಿಲ್ಲೆಯಲ್ಲಿ ವ್ಯಾಪಕವಾಗಿ ಕಂಡುಬರುವ ರಂಗನಾಥನ ದೇವಾಲಯಗಳಲ್ಲಿ ಮಣೇವು ಸೇವೆ ಸಾಮಾನ್ಯವಾಗಿದೆ. ಜೊತೆಗೆ ವೆಂಕಟರಮಣನ ಭಕ್ತರಲ್ಲಿ ರೂಢಿಯಲ್ಲಿರುವ ಒಂದು ಸಂಪ್ರದಾಯವೂ ಆಗಿದೆ. ಮೇಲ್ಮಟ್ಟಕ್ಕೆ ಜನಪದ ಕ್ರೀಡೆಯ ಹಾಗೆ ಭಯಾನಕ, ಕುತೂಹಲ ಕೆರಳಿಸುವ ಈ ಆಚರಣೆ ಒಂದು ಕಲೆಯಾಗಿಯೂ ಪ್ರಕಟವಾಗಿದೆ.

ಸಿರಾ ತಾಲ್ಲೂಕಿನಲ್ಲಿ ಹೆಚ್ಚು ರಂಗನಾಥನ ದೇವಾಲಯಗಳಿವೆ. ಮಾಗೋಡು ರಂಗನಾಥ, ಮರಡಿಗುಡ್ಡ, ತಾವರೇಕೆರೆ, ಗುಡ್ಡದಹಟ್ಟಿ, ತಡಕಲೂರು, ಹುಲಿಕುಂಟೆ, ದೊಡ್ಡ ಬಾಣಗೆರೆ, ಚಿಕ್ಕ ಬಾಣಗೆರೆ, ಯಾದಲಡಕು, ರಂಗನಹಳ್ಳಿ, ಕಾರೇಹಳ್ಳಿ, ಓಜಕುಂಟೆ, ದ್ವಾರನಕುಂಟೆ, ಬೇವಿನಹಳ್ಳಿ ಈ ಮೊದಲಾದ ಕಡೆಗಳಲ್ಲಿ ರಂಗನಾಥನ ದೇವಾಲಯಗಳಿವೆ. ಮರಡಿಗುಡ್ಡ, ಬಾಣಗೆರೆ, ಮಾಗೋಡು, ಹೊನ್ನಗಾನಹಳ್ಳಿ ಗೊಲ್ಲರಹಟ್ಟಿಯ ಕದರೇ ನರಸಿಂಹ ದೇವಾಲಯ, ನರಸಿಂಹಸ್ವಾಮಿ ದೇವಾಲಯ, ತಡಕಲೂರು ನರಸಿಂಹಸ್ವಾಮಿ ದೇವಾಲಯ, ರಂಗನಾಥ ದೇವಸ್ಥಾನಗಳಲ್ಲಿ ಮಣೇವು ಸೇವೆ ನಡೆಯುತ್ತದೆ. ಮಡಿವಾಳ ಜಾತ್ರೆಯ ದಿನ ದೇವಸ್ಥಾನದ ಮುಂದೆ ನೆಲವನ್ನು ಸ್ವಚ್ಛಗೊಳಿಸಿ ಶುಭ್ರವಾದ ಬಟ್ಟೆಯನ್ನು ಹಾಕುತ್ತಾನೆ. ಆ ಬಟ್ಟೆಯ ಮೇಲೆ ಹಲಸಿನ ತೊಳೆ, ಬಾಳೆಹಣ್ಣು, ತೆಂಗಿನ ತುರಿ, ಕಡ್ಲೆಪುರಿ, ಬೆಲ್ಲದೊಂದಿಗೆ ಕಲಸಿ ಫಲಹಾರ ತಯಾರಿಸಿರುತ್ತಾರೆ. ದೇವರ ಮುಂದೆ ಹಾಸಿದ ಬಟ್ಟೆಗಳ ಮೇಲೆ ಫಲಹಾರವನ್ನು ಒಂದು ಹಿಡಿಯಷ್ಟು ಗುಪ್ಪೆ ಗುಪ್ಪೆಯಾಗಿ ಮೂರು ಕಡೆ ಇಡಲಾಗುತ್ತದೆ. ಹಾಗೆ ಇಟ್ಟ ಫಲಹಾರವನ್ನು ದಾಸಯ್ಯಗಳು ಕುಣಿಯುತ್ತಾ ಆವೇಶಭರಿತವಾಗಿ ಬಾಯಿಂದಲೇ ತಿನ್ನುವುದನ್ನು 'ಮಣೇವು ಹಾಕುವುದು' ಎಂದು ಕರೆಯಲಾಗುತ್ತದೆ. ಈ ಸಂದರ್ಭದಲ್ಲಿ ಅರೆವಾದ್ಯ, ಕೆಲವು ಕಡೆ ತಮಟೆಯನ್ನು ಪೂರಕ ವಾದ್ಯವನ್ನಾಗಿ ಬಳಸಿಕೊಳ್ಳಲಾಗುವುದು. ಬಟ್ಟೆಯ ಮೇಲೆ ಹಾಕುವ ಫಲಹಾರವನ್ನು ಮಣೇವು ಆಡುವವರು ಹಸಿದ, ಗಾಬರಿಗೊಂಡ ಅಥವಾ ದೇವರೇ ಆವೇಶಗೊಂಡವರಂತೆ ನಟಿಸುವುದು ಸಾಮಾನ್ಯವಾಗಿದೆ.

ಇದೊಂದು ಹರಕೆಯ ಕಾರ್ಯವಾಗಿಯೂ ಈ ಸೇವೆಯನ್ನು ಮಾಡಲಾಗುತ್ತದೆ. ಈ ಮೇಲೆ ಸೂಚಿಸಿರುವ ಗ್ರಾಮಗಳಲ್ಲಿ ಇಂದಿಗೂ ಈ ಆಚರಣೆ ಬಳಕೆಯಲ್ಲಿದೆ. ಜೊತೆಗೆ ಮಕ್ಕಳ ತಲೆ ಕೂದಲು ತೆಗೆಸುವ, ಹೊಸಮನೆ ಗೃಹಪ್ರವೇಶ, ತಿರುಪತಿ ಯಾತ್ರೆಯಂಥ ವಿಶೇಷ ಸಂದರ್ಭಗಳಲ್ಲಿ ಮಣೇವು ಸೇವೆಯನ್ನು ಮಾಡಲಾಗುವುದು. ದಾಸಯ್ಯ ಗುರುವಿನ ಸ್ಥಾನದಲ್ಲಿದ್ದು ಜಾಗಟೆ ಬಾರಿಸುತ್ತ ದೇವರ ಕುರಿತು ಶ್ಲೋಕ ಹೇಳುತ್ತಾ ಹೋಗುತ್ತಾನೆ.

ಇಬ್ಬರು ಯುವಕರು ಆ ಮಣೇವು ಬಟ್ಟೆಯ ಸುತ್ತ ಕುಣಿಯುತ್ತಾ ಕೆಲವೊಮ್ಮೆ ಮಲಗಿ ಬಾಯಿಂದಲೇ ಪಲ್ಲಾರ ತಿನ್ನುತ್ತಾರೆ. ಇದು ದೇವರಿಗೆ ಸೇರುತ್ತದೆಂಬ ನಂಬಿಕೆಯೂ ಜನಪದರಲ್ಲಿದೆ. ಹೀಗೆ ಮಣೇವು ಕುಣಿಯುವವರು ಬ್ಯಾಟೆ ಸೊಪ್ಪನ್ನು, ಜಾಗಟೆಯನ್ನು ಕೈಯಲ್ಲಿ ಹಿಡಿದಿರುತ್ತಾರೆ. ಮಣೇವು ಹಾಕುವುದು ಎಂದರೆ ದೇವರಿಗೆ ಮರ್ಯಾದೆ ಎಂದೇ ಭಾವಿಸಲಾಗುತ್ತದೆ. ಸಿರಾ ತಾಲ್ಲೂಕಿನ ಮಾಗೋಡು, ಮರಡಿಗುಡ್ಡ ಹಾಗೂ ಪುರಲೇಹಳ್ಳಿಯ ಭೂತೇಶ್ವರ ದೇವಸ್ಥಾನದ ಬಳಿ ವಿಶೇಷವಾಗಿ ಮಣೇವು ಸೇವೆಯನ್ನು ಮಾಡಲಾಗುತ್ತದೆ.

### ಇ) ದೋಣಿಸೇವೆ:

ದೋಣಿಸೇವೆ ಮೈಲಾರಲಿಂಗನ ಭಕ್ತರ ವಿಶಿಷ್ಟ ಆಚರಣೆ. ಇದೊಂದು ಧಾರ್ಮಿಕ ಪ್ರದರ್ಶನಾತ್ಮಕ ಕುಣಿತ. ಕೆಲವು ವಿಶೇಷ ಹಬ್ಬ, ಹರಿದಿನಗಳಲ್ಲಿ, ಜಾತ್ರೆ, ಉತ್ಸವಗಳಲ್ಲಿ ದೋಣಿ ಸೇವೆಯನ್ನು ಏರ್ಪಡಿಸುತ್ತಾರೆ. ಗೊರವ ಸಂಪ್ರದಾಯದಲ್ಲಿ ದೋಣಿ ಸೇವೆಗೆ ಮಹತ್ವದ ಸ್ಥಾನವಿದೆ. ಉದ್ದನೆಯ ಕರಡಿಯ ಚರ್ಮದಿಂದ ತಯಾರಿಸಿದ ಟೋಪಿ, ಕರಿಯ ಕಂಬಳಿಯಿಂದ ತಯಾರಿಸಿದ ಉದ್ದನೆಯ ನಿಲುವಂಗಿ, ಸೊಂಟಪಟ್ಟಿ ಹುಲಿಚರ್ಮ, ಕೊರಳಲ್ಲಿ ಕವಡೆಯ ಸರ, ಕವಡೆಗಳಿಂದಲೇ ತಯಾರಿಸಿದ ಕೊರಳಿಂದ ಇಳಿಬಿಟ್ಟ ಕವಡೆಗಳ ಅಡ್ಡಪಟ್ಟಿ, ಹೊಕ್ಕಳಗಂಟೆ, ಹೆಗಲಲ್ಲಿ ನೇತುಹಾಕಿದ ಹಿತ್ತಾಳೆ ಅಥವಾ ಮರದಲ್ಲಿ ತಯಾರಿಸಿದ ದೋಣಿ (ಇದನ್ನೇ ಊಟದ ತಟ್ಟೆಯಾಗಿ ಬಳಸುವುದು), ಅರಿಶಿನದ ಚರ್ಮದ ಚೀಲ, ಕಾಲುಗೆಜ್ಜೆ, ತ್ರಿಶೂಲ ಹಾಗೂ ಕೈಯಲ್ಲಿ ಢಮರುಗ ಮತ್ತು ಪಿಳ್ಳಂಗೋವಿ ಹಿಡಿದು ಆವೇಶದಿಂದ ಢಮರುಗ ಬಾರಿಸುತ್ತಾ, ಹಾಡುಗಳನ್ನು ಹೇಳುತ್ತಾ ಮೈಲಾರದೇವರ ಮಹಿಮೆಯನ್ನು ಸಾರುತ್ತಾ ಕುಣಿಯುವ ಒಂದು ಅದ್ಭುತ ಕಲೆ.

ತುಮಕೂರು ಜಿಲ್ಲೆಯಲ್ಲಿ ಈ ಕಲೆ ಬಳಕೆಯಲ್ಲಿದೆ. ಸಿರಾದ ಕಾಳಿದಾಸನಗರ, ಮಧುಗಿರಿ, ಚಿಕ್ಕನಾಯ್ಕನಹಳ್ಳಿ, ಹುಣಸೇಹಳ್ಳಿ, ಹೆಗ್ಗನಹಳ್ಳಿ, ಹೊನ್ನವಳ್ಳಿ, ಪಟ್ಟನಾಯಕನಹಳ್ಳಿ, ಪಾವಗಡ, ವೆಂಕಟೇಶಪುರ, ಹಂದನಕೆರೆ, ಹುಳಿಯಾರು, ಚೇಳೂರು, ಕೊರಟಗೆರೆ, ಮಧುಗಿರಿ, ತುಮಕೂರು, ಹುತ್ತರಿ, ತುರುವೇಕೆರೆ ಈ ಮೊದಲಾದ ಭಾಗಗಳಲ್ಲಿ ದೋಣಿಸೇವೆಯ ಆಚರಣೆ ಇದೆ. ಮಹಾನವಮಿ, ಯುಗಾದಿ ಹಾಗೂ ಮೈಲಾರಲಿಂಗಪ್ಪನ ಜಾತ್ರೆಯ ಕಾರಹುಣ್ಣಿಮೆಯ ದಿನಗಳಲ್ಲಿ ಆತನ ಭಕ್ತರು ಅಂದು ಮೈಲಾರದೇವರ ಗುಡಿಯಲ್ಲಿ ವಿಶೇಷ ಪೂಜೆ ಏರ್ಪಡಿಸುವುದರ ಜೊತೆಗೆ ದೋಣಿಸೇವೆಯ ಏರ್ಪಾಡನ್ನು ಮಾಡುತ್ತಾರೆ. ದೇವಾಲಯದ ಮುಂಭಾಗದಲ್ಲಿ ಅಥವಾ ವಿಶಾಲವಾದ ಜಾಗವೊಂದರಲ್ಲಿ ಮೈಲಾರ ಭಕ್ತರು, ಕಲಾಸಕ್ತರೆಲ್ಲರೂ ಸೇರುತ್ತಾರೆ. ಭಕ್ತರು ಕರಿ ಕಂಬಳಿಯ ಗದ್ದಿಗೆ ಮಾಡಿ, ಅದರ ಮೇಲೆ ಸಾಲಾಗಿ ದೋಣಿಗಳನ್ನು ಇಡಲಾಗುತ್ತದೆ. ಭಕ್ತರು ಭಯ-ಭಕ್ತಿಯಿಂದ ಮನೆಗಳಿಂದ

ತಂದಿರುವ ಬಾಳೆಹಣ್ಣು, ಹಾಲು, ತುಪ್ಪ, ಸಕ್ಕರೆ, ಬೆಲ್ಲ ಇತರೆ ಹಣ್ಣುಗಳ ಪದಾರ್ಥಗಳನ್ನು ದೋಣಿಯಲ್ಲಿ ತುಂಬುತ್ತಾರೆ. ದೋಣಿ ಹಾಲು ಹಣ್ಣುಗಳಿಂದ ತುಂಬುತ್ತದೆ. ಗೊರವರು ನಿಂತಲ್ಲಿಯೇ ಡಮರುಗವನ್ನು ಬಾರಿಸುತ್ತಾ ದೋಣಿಯ ತುಂಬಿಸುವಿಕೆ ಯಲ್ಲಿ ಸಹಾಯ ಮಾಡುತ್ತಾರೆ. ನಂತರ ಗೊರವರು ಪಂಚೆಯನ್ನು ಮೇಲಕ್ಕೆ ಕಟ್ಟಿ, ಸೊಂಟಕ್ಕೆ ಪಟ್ಟಿಯನ್ನು ಬಿಗಿದು ಮತ್ತೊಮ್ಮೆ ಮೂಲದೇವರ ಗುಡಿಗೆ ಹೋಗಿ, ಢಮರುಗದ ಝೇಂಕಾರ ಮಾಡಿ ಗುಡಿಗೆ ಪೂರ್ಣ ಪ್ರದರ್ಶನ ಹಾಕಿ ಅಲ್ಲಿಂದಲೇ ನಾಯಿಯ ಹಾಗೆ ಹಾರುತ್ತಾ ಗುರುಗುಟ್ಟುತ್ತಾ ಕುಣಿಯುತ್ತಾ ಕುಳಿತು, ಬಗ್ಗಿ ನಿಂತು ವಾಲಿ ಹೀಗೆ ನಾನಾ ಭಂಗಿಯಲ್ಲಿ ಢಮರುಗವನ್ನು ಬಡಿಯುತ್ತಾ ದೋಣಿಯ ಕಡೆಗೆ ಆವೇಶದಿಂದ ನುಗ್ಗುತ್ತಾರೆ. ಈ ದೋಣಿಯ ಪ್ರಸಾದವನ್ನು ತಿನ್ನಲು ನಾಯಿಯ ಹಾಗೆಯೇ ಪೈಪೋಟಿ ನಡೆಸುತ್ತಾರೆ. ಗೊರವರನ್ನು ಶಿವ ಸೃಷ್ಟಿಸಿದ ನಾಯಿಯ ಅವತಾರ ಎಂದೂ ಕರೆಯಲಾಗಿದ್ದು ಈ ದೋಣಿಸೇವೆಯ ಸಂದರ್ಭದಲ್ಲಿ ನಾಯಿಯ ಆವೇಶ, ಗುರುಗುಟ್ಟುವುದು ಮೊದಲಾದ ಪ್ರದರ್ಶನದ ದೃಶ್ಯ ಸೊಗಸಾಗಿ ಪ್ರಕಟವಾಗುತ್ತದೆ. ಈ ರೀತಿಯಲ್ಲಿ ಗೊರವರು ತಿಂದು ಬಿಟ್ಟ ದೋಣಿಯಲ್ಲಿ ಉಳಿದ ಪದಾರ್ಥವನ್ನು ಪ್ರಸಾದವಾಗಿ ಕಿತ್ತು ತಿನ್ನುವ ಪರಿಪಾಠ ರೋಚಕವಾದರೆ ಉಳಿದುದನ್ನು ಪ್ರಸಾದವಾಗಿ ಭಕ್ತರು ಸ್ವೀಕರಿಸುವುದು ಸ್ಪರ್ಧಾತ್ಮಕವಾಗಿರುತ್ತದೆ.

## ಈ) ಕೊಂತಮ್ಮನ ಆಚರಣೆ

ಜನಜೀವನಕ್ಕೆ ಸ್ಫೂರ್ತಿ ನೀಡಿದ, ಆದರ್ಶವಾಗಿ ಬಾಳಿ ಬದುಕಿದ, ತಮ್ಮ ಕಷ್ಟ ಸಹಿಷ್ಣುತೆಗಳ ಬಾಳುವೆಯಲ್ಲಿ ಎಂದೂ ತಮ್ಮ ಆದರ್ಶವನ್ನು ಬಿಡದ ಸ್ತ್ರೀ-ಪುರುಷರನ್ನು ದೇವರಂತೆ ಪೂಜಿಸುವುದು ಜನಪದದ ಸಂಪ್ರದಾಯವಾಗಿದೆ. ಇಂಥ ಆಚರಣೆಗಳಲ್ಲಿ ಕೊಂತಿ ಪೂಜೆಯೂ ಒಂದು. ಕುಂತಿ ಪೂಜೆ, ಕೊಂತಿ ಪೂಜೆ, ಕೊಂತೆಮ್ಮನ ಹಬ್ಬ ಹೀಗೆ ವಿಶಿಷ್ಟ ಹೆಸರುಗಳಿಂದ ಕರೆದು ನಡೆಸುವ ಈ ಆಚರಣೆ ಬಯಲುಸೀಮೆಗಳಾದ ತುಮಕೂರು, ಮಂಡ್ಯ, ಮೈಸೂರು ಹಾಗೂ ಬೆಂಗಳೂರು ಜಿಲ್ಲೆಯ ಕನಕಪುರ ಈ ತಾಲ್ಲೂಕುಗಳಲ್ಲಿ ಈ ಆಚರಣೆ ಇಂದಿಗೂ ಬಳಕೆಯಲ್ಲಿದೆ.

ತುಮಕೂರು ಜಿಲ್ಲೆಯ ಸಿರಾ, ಮಧುಗಿರಿ, ಪಾವಗಡ ಈ ತಾಲ್ಲೂಕುಗಳಲ್ಲಿ ಮಾತ್ರ ಇಂದಿಗೂ ತಮ್ಮ ಮೂಲ ಸಂಪ್ರದಾಯಗಳೊಂದಿಗೆ ಆಚರಣೆಯಲ್ಲಿರುವ ಕೊಂತಮ್ಮನ ಹಬ್ಬ. ಒಂದು ಸಾರ್ವತ್ರಿಕ ಹಬ್ಬ, ಗೊಲ್ಲರು, ಕುರುಬರು, ಕುಂಚಿಟಿಗರು, ಆದಿ ಕರ್ನಾಟಕದವರು ಹೀಗೆ ಸಾಮಾನ್ಯವಾಗಿ ಬುಡಕಟ್ಟು ಸಂಸ್ಕೃತಿಯ ಈ ಜನಾಂಗಗಳು ಕುಂತಿಪೂಜೆಯ ಆಚರಣೆಯನ್ನು ಶ್ರದ್ಧಾ ಪೂರ್ವಕವಾಗಿ ಆಚರಿಸುತ್ತಾರೆ. ಕುಂತಿಪೂಜೆಯ ಆಚರಣೆಯನ್ನು ಸಾಮಾನ್ಯವಾಗಿ ಹೆಣ್ಣುಮಕ್ಕಳೆಲ್ಲ ಕೂಡಿ ಆಚರಿಸುತ್ತಾರೆ. ಬೆಳದಿಂಗಳ

ಪೂಜೆಯ ಲಕ್ಷಣಗಳನ್ನು ಹೊಂದಿದ್ದರೂ ಅದಕ್ಕಿಂತ ಭಿನ್ನವಾದ ಆಚರಣೆ ಇದಾಗಿದೆ. ಜೊತೆಗೆ ಬೆಳದಿಂಗಳ ಪೂಜೆಯು ಬಯಲಲ್ಲಿ ನಡೆದರೆ ಕುಂತಿಪೂಜೆ ದೇವಾಲಯ ಅಥವಾ ಬಿಡದಿ ಮನೆಯಲ್ಲಿ ನಡೆಯುತ್ತದೆ. ಋತುಮತಿ, ಗರ್ಭಧಾರಣೆ ಹಾಗೂ ಸಹಿಷ್ಣುತೆಗೆ ಒತ್ತು ನೀಡುವ ಈ ಹಬ್ಬ ಸರಳ ಹಾಗೂ ನೇರ ಆಚರಣೆಯಾಗಿದೆ. ಕೊಂತೆಮ್ಮನ ಹಬ್ಬಕ್ಕೆ ವಾರದ ಒಂದು ದಿನ ಹಿರಿಯ ಹೆಂಗಸರು ಪ್ರತಿ ಮನೆಗೆ ಹೋಗಿ ಹಬ್ಬದ ಸಿದ್ಧತೆಯ ಬಗೆಗೆ ಹೇಳುತ್ತಾರೆ. ಒಂದು ಸಂಜೆ ಆ ಗ್ರಾಮದ ಮದುವೆಯಾಗದ ಹೆಣ್ಣು ಮಕ್ಕಳೆಲ್ಲ ಸೇರುತ್ತಾರೆ. ಕುಂತಿಪೂಜೆಯ ಊಟದ ಸಾಮಾನ್ಯ ಲೆಕ್ಕಾಚಾರ ಹಾಗೂ ಕೊಂತೆಮ್ಮನನ್ನು ಇಡಬೇಕಾದ ಸ್ಥಳದ ಬಗೆಗೆ ಚರ್ಚೆ ಮಾಡುತ್ತಾರೆ. ಮುಟ್ಟಾದ ಹೆಣ್ಣುಮಕ್ಕಳೂ ಇಲ್ಲಿ ಸೂತಕದ ಪರಿವಿಲ್ಲದೆ ಭಾಗವಹಿಸಬಹುದಾದ ಸಾಧ್ಯತೆ ಇದೆ. ಇದು ಅಪಚಾರವೇನಲ್ಲ. ದೇವಾಲಯಗಳಲ್ಲಿ ಕೊಂತೆಮ್ಮನನ್ನು ಪ್ರತಿಷ್ಠಾಪಿಸಿದರೆ ಮಾತ್ರ ಮುಟ್ಟಾದ ಹೆಣು ಮಗಳು ಬರುವುದಿಲ್ಲ. ಆದರೂ ಪೂಜೆಯ ಸಿದ್ಧತೆಯ ಕಾರ್ಯದಲ್ಲಿ ಪಾಲುಗೊಳ್ಳಬೇಕೆಂಬುದು ಕೊಂತೆಮ್ಮನ ಹಬ್ಬದ ವಿಶೇಷ. ಯಾರ ಮನೆಯಲ್ಲಿ ಹೆಣ್ಣು ಮಕ್ಕಳಿರುತ್ತವೆಯೋ ಅಂಥವರು ಕಡ್ಡಾಯವಾಗಿ ಕಾಣಿಕೆ ಕೊಡಬೇಕು. ಸಾಮಾನ್ಯವಾಗಿ ಗ್ರಾಮದ ಎಲ್ಲ ಮನೆಗಳಲ್ಲಿಯೂ ಕಾಣಿಕೆಯನ್ನು ಕೊಡುತ್ತಾರೆ.

ಕೊಂತೆಮ್ಮನನ್ನು ಪ್ರತಿಷ್ಠಾಪಿಸುವ ಮನೆ ಅಥವಾ ದೇವಸ್ಥಾನವನ್ನು ತೊಳೆದು, ಸಾರಿಸಿ ವಿಶೇಷವಾಗಿ ಅಲಂಕರಿಸುತ್ತಾರೆ. ಸುಣ್ಣ ಬಣ್ಣ ಬಳಿಯುವುದೂ ಉಂಟು. ಈ ಮೊದಲೇ ತಯಾರಿಸಿರುವ ಕುಂತಿಯನ್ನು ಹೋಲುವ ಗೊಂಬೆಯನ್ನು ತಂದು ಗದ್ದಿಗೆ ಮಾಡಿ ಪ್ರತಿಷ್ಠಾಪಿಸಲಾಗುತ್ತದೆ. ಆ ಗೊಂಬೆಗೆ ಕುಂಬಳಬಳ್ಳಿ, ಮಾವಿನಸೊಪ್ಪು, ಬಾಳೆಯಕಂದು ಮುಂತಾದ ಸಸ್ಯಗಳಿಂದ ಅಲಂಕಾರ ಮಾಡುತ್ತಾರೆ, ಬಳೆ ತೊಡಿಸುತ್ತಾರೆ. ಕೊಂತೆಮ್ಮನನ್ನು ಕೂರಿಸುವ ಜಾಗಕ್ಕೆ ಕೊಂತೆಮ್ಮನ ಗದ್ದಿಗೆ ಎಂದು ಕರೆದು, ಅದರ ಮೇಲೆ ಕೊರಲೆ ಅಕ್ಕಿಯನ್ನು ಹರಡಿ ಅದರ ಮೇಲೆ ಕೊಂತೆಮ್ಮನನ್ನು ಕೂರಿಸುತ್ತಾರೆ. ಅದರ ಪಕ್ಕದಲ್ಲಿ ಕಳಸ ಹೂಡುತ್ತಾರೆ. ಕಳಸಕ್ಕೆ ಹೊಂಬಾಳೆ, ಮಾವಿನ ಎಲೆಗಳನ್ನು ಇಟ್ಟು ಅಲಂಕಾರ ಮಾಡುತ್ತಾರೆ. ಅಂದು ಪೂಜೆಯ ನೈವೇದ್ಯಕ್ಕೆ ಕುಂಬಳಕಾಯಿ ಮತ್ತು ಹೀರೇಕಾಯಿಯನ್ನು ಬಳಸಿ ತಯಾರಿಸಿದ ಪದಾರ್ಥವನ್ನು ಇಡುತ್ತಾರೆ. ಕೊಂತೆಮ್ಮ ಅಡವಿಯಲ್ಲಿ ಬೆಳೆದದ್ದರಿಂದ ಆಕೆಗೆ ಗೆಡ್ಡೆ-ಗೆಣಸು ಪ್ರಿಯವಾಗುತ್ತದೆಂದು ನಂಬುವ ಜನಪದರು ಇಂದಿಗೂ ಕೊಂತಿ ಆಚರಣೆಗೆ ಹೆಚ್ಚಾಗಿ ಬಳಸುವ ಆಹಾರ ಪದಾರ್ಥಗಳು, ಸಸ್ಯ ಆಹಾರವಾಗಿರುತ್ತದೆ. ಇದರ ಜೊತೆಗೆ ಅನ್ನ, ಪಾಯಸ, ಪದಾರ್ಥಗಳನ್ನು ನೈವೇದ್ಯವಾಗಿ ಇಡಲಾಗುತ್ತದೆ. ಮೊದಲ ದಿನದ ಪೂಜೆಗೆ ಕುಂಬಳಕಾಯಿಯ ಪಲ್ಯ ಕಡ್ಡಾಯ ಎಂದೇ ನಂಬುತ್ತಾರೆ.

ಕೊಂತಿಯ ಪೂಜೆಯನ್ನು ಹೆಣ್ಣು ಮಗಳೊಬ್ಬಳಿಂದ ಮಾಡಿಸಲಾಗುತ್ತದೆ. ಕೊಂತೆ ಆಚರಣೆಯ ವಿಧಿ-ವಿಧಾನಗಳನ್ನು ಹಿರಿಯ ಹೆಂಗಸೊಬ್ಬಳು ನಿರ್ದೇಶಿಸುತ್ತಾಳೆ. ಕುಂತಿಯ ಗುಡಿ ಸಂದರ್ಭದಲ್ಲಿ ಗದ್ದಿಗೆಗೆ ತೆಂಗಿನ ಗರಿ, ಹಲಸು, ಮಾವು, ಬಸರಿ ಹಾಗೂ ಅತ್ತಿ ಸೊಪ್ಪುಗಳನ್ನು ಮಂಟಪ ತಯಾರಿಸಲು ಬಳಸುವ ಸಂಪ್ರದಾಯ ಕನಕಪುರ, ಮಳವಳ್ಳಿ ಈ ಭಾಗಗಳಲ್ಲಿದೆ. ಆದರೆ ತುಮಕೂರು ಜಿಲ್ಲೆಯ ಸಿರಾ, ಕೊರಟಗೆರೆ ಈ ಭಾಗಗಳಲ್ಲಿ ಕುಂಬಳ ಬಳ್ಳಿಯನ್ನು ಮಂಟಪ ತಯಾರಿಕೆಯಲ್ಲಿ ಬಳಸುವ ಪರಿಪಾಠವಿದೆ.

ಕೊಂತೆಮ್ಮನನ್ನು ಸಾಮಾನ್ಯವಾಗಿ ಐದು ದಿನದಿಂದ ಒಂಬತ್ತು ದಿನಗಳ ಕಾಲ ಕೂಡಿಸುವ ಸಂಪ್ರದಾಯವಿದೆ. ಸಾಮಾನ್ಯವಾಗಿ ಕೊಂತೆಮ್ಮನನ್ನು ಇಟ್ಟ ಸಂದರ್ಭದಲ್ಲಿ ಮನೆಗಳಲ್ಲಿ ಮಾಂಸಾಹಾರವನ್ನು ಮಾಡುವುದಿಲ್ಲ. ನಗರ ಪ್ರದೇಶವಾದ ಸಿರಾದಲ್ಲಿ ಈ ನಿಯಮ ಕಡ್ಡಾಯವೇನಲ್ಲ. ಈ ದಿನಗಳಲ್ಲಿ ಬಗೆ ಬಗೆಯ ಸಿಹಿ ಅಡಿಗೆಯನು ಮಾಡಿ ಕೊಂತೆಮ್ಮಳಿಗೆ ಎಡೆಹಾಕುವ ಸಂಪ್ರದಾಯವಿದೆ.

ಕೊಂತೆಮ್ಮನನ್ನು ವಿಸರ್ಜಿಸುವ ದಿನ ವಿಶೇಷ ಸಂಭ್ರಮದಿಂದ ಕೂಡಿರುತ್ತದೆ. ಇದೊಂದು ಗಣಪತಿಯ ವಿಸರ್ಜನೆಯ ಎಲ್ಲಾ ಲಕ್ಷಣವನ್ನು ಹೊಂದಿದ್ದು ಅಷ್ಟೇ ವಿಜೃಂಭಣೆಯೂ ಇರುತ್ತದೆ. ಸಾರ್ವಜನಿಕರು ಸೇರಿದಂತೆ ಹೆಣ್ಣುಮಕ್ಕಳು ನಡೆಸುವ ಈ ಉತ್ಸವಕ್ಕೆ ಹುಡುಗರು ಅಷ್ಟಾಗಿ ಓಡಾಡದೆ ವಿಜೃಂಭಣೆ ಕಳೆದುಕೊಂಡಿದೆ. ಮೊದಲೇ ಗೊತ್ತುಮಾಡಿದ ದಿನ ಎತ್ತಿನ ಬಂಡಿ ಹೂಡಿ ಅದಕ್ಕೆ ಮಾವಿನ ತೋರಣ, ಬಾಳೆ ಕಂದು ಕಟ್ಟಿ ಅಲಂಕರಿಸುತ್ತಾರೆ. ಸಂಜೆ 4 ರಿಂದ 6 ಗಂಟೆಯ ಒಳಗೆ ಕೊಂತೆಮ್ಮನ ಸಾಗುಹಾಕುವ ಕಾರ್ಯವಿದ್ದು, ಕೊಂತಮ್ಮಳನ್ನು ಬಂಡಿಯ ಮೇಲೆ ಹಣೆ ಹಾಕಿ, ಅದರ ಮೇಲೆ ಕೂರಿಸಿ, ಅಕ್ಕಿಯನ್ನು ಹರಡಿ, ಹೊಸ ಬಟ್ಟೆ ಹಾಸಿ ಅದರ ಮೇಲೆ ಕೂರಿಸುತ್ತಾರೆ. ವಿಶೇಷ ಪೂಜೆಯ ನಂತರ ಮೆರವಣಿಗೆ ಹೊರಡುತ್ತದೆ. ವಾದ್ಯಗಳ ಸಮೇತ ಬೀದಿ ಬೀದಿಯಲ್ಲಿ ಮೆರವಣಿಗೆ ಹೊರಡುತ್ತದೆ. ಕೊಂತೆಮ್ಮ ಹಾದು ಬರುವಾಗ ಮನೆಯ ಅಂಗಳವನ್ನು ಸಾರಿಸಿ, ರಂಗೋಲಿ ಇಟ್ಟು ಅಲಂಕರಿಸುತ್ತಾರೆ. ಜೊತೆಗೆ ತಮ್ಮ ಮನೆಯ ಬಾಗಿಲಿಗೆ ಕೊಂತೆಮ್ಮ ಬಂದಾಗ ಪೂಜೆ ಮಾಡಿಸುತ್ತಾರೆ. ಹೀಗೆ ಊರ ಪ್ರದಕ್ಷಿಣೆ ಮಾಡಿದ ಕೊಂತೆಮ್ಮಳನ್ನು ಸಮೀಪದ ಕೆರೆಯಲ್ಲಿ ಗಣಪತಿಯನ್ನು ವಿಸರ್ಜಿಸುವ ಮಾದರಿಯಲ್ಲಿಯೇ ವಿಸರ್ಜಿಸಲಾಗುತ್ತದೆ. ಅಂದು ಮನೆಗಳಲ್ಲಿ ವಿಶೇಷ ಅಡಿಗೆ ಮಾಂಸಾಹಾರ ಸಿದ್ಧವಾಗಿರುತ್ತದೆ. ನೆಂಟರು, ಆಪ್ತರು ಬರುತ್ತಾರೆ. ಬಂದವರೆಲ್ಲರೂ ಕೊಂತೆಮ್ಮನಿಗೆ ಮಂಗಳಾರತಿ ಮಾಡಿಸುವ ಪರಂಪರೆ ನಡೆದುಕೊಂಡು ಬಂದಿದೆ.

ಪಾಂಡುರಾಜನಂಥ ರಾಜಕುಮಾರನನ್ನು ಮದುವೆಯಾಗಿ ಮಹಾರಾಣಿಯಾಗಿ ಅಪ್ರತಿಮ ವೀರ ಮಕ್ಕಳಾದ ಧರ್ಮರಾಯ, ಭೀಮ, ಅರ್ಜುನರನ್ನು ಹೆತ್ತರೂ ಪಡಬಾರದ ಪಾಡನ್ನು ಪಟ್ಟು ಕಣ್ಣೀರಲ್ಲಿ ಕೈತೊಳೆದರೂ ಆದರ್ಶವಾಗಿ ಬಾಳಿ, ಸತ್ಯಕ್ಕೆ ಧರ್ಮಕ್ಕೆ ಇವೆಲ್ಲವುದಕ್ಕಿಂತ ಸಹಿಷ್ಣುತೆಗೆ ಮಾದರಿಯಾಗಿ ನಿಂತ ಕೊಂತೆಮ್ಮನ ಆದರ್ಶ ಯುವತಿಯರಲ್ಲಿ ಬರಲಿ ಎಂಬುದೇ ಈ ಆಚರಣೆಯ ಹಿಂದಿನ ವಸ್ತುಸ್ಥಿತಿಯಾಗಿದೆ.

### ಉ) ಹರಿಗೆ ಸೇವೆ



ಗ್ರಾಮದೇವತೆಗಳಂತೆ ಕೆಲವು ಗಂಡು ದೇವತೆಗಳು ತಮ್ಮ ಸಂರಕ್ಷಣೆಗಾಗಿ ಅಂಗರಕ್ಷಕರನ್ನು ಹೊಂದಿರುತ್ತಾರೆ. ಇವರನ್ನು ಭಂಟರು, ದೂತರು, ಸೋಮಗಳು ಎಂದು ಕರೆಯಲಾಗುತ್ತದೆ. ಸೋಮ ತುಮಕೂರು ಜಿಲ್ಲೆಯ ಪ್ರಮುಖ ಕಲೆಯಾಗಿದ್ದು ಪ್ರದರ್ಶನ ಕಲೆಯಾಗಿಯೂ ಬಳಕೆಯಲ್ಲಿದೆ. ಇದೇ ಪರಂಪರೆಯಲ್ಲಿ ಕಂಡುಬರುವ ಭೂತದ ಕುಣಿತ ತುಮಕೂರು ಜಿಲ್ಲೆಯಲ್ಲೇ ವಿಶೇಷವಾಗಿದೆ. ಸೋಮನಂತೆ ಮುಖವಾಡ ಹೊಂದಿದ್ದು ಆಯಾಯ ಗ್ರಾಮದೇವತೆಯ ಸಂಬಂಧವನ್ನು ತಳಕುಹಾಕಿಕೊಂಡು ಬೆಳೆದುಬಂದಿದೆ. ಒಂದು ವೃತ್ತಾಕಾರದ ಮರದಲ್ಲಿ ದೊಡ್ಡ ಕಣ್ಣು, ಹಣೆ, ಬಲವಾದ ಮೀಸೆಯ ಚಿತ್ರವಿರುತ್ತದೆ. ಭಕ್ತರು ಇದನ್ನೇ ಕೈಯಲ್ಲಿ ಹಿಡಿದು ಕುಣಿಸುತ್ತಾರೆ. ತುಮಕೂರು ಜಿಲ್ಲೆಯ ಕುಣಿಗಲ್, ಸಿರಾ, ಕೊರಟಗೆರೆ, ಮಧುಗಿರಿ ಹಾಗೂ ಪಾವಗಡ ಈ ಭಾಗಗಳಲ್ಲಿ ತಿರುಪತಿ ತಿಮ್ಮಪ್ಪನ ಒಕ್ಕಲು, ರಂಗನಾಥನ ಒಕ್ಕಲಾಗಿರುವ ಭಕ್ತರು ಶ್ರಾವಣ ಶನಿವಾರ, ದೇವರ ಉತ್ಸವ ಮತ್ತಿತರೆ ವಿಶೇಷ ಧಾರ್ಮಿಕ ಆಚರಣೆಯ ಸಂದರ್ಭದಲ್ಲಿ ಈ ಹರಿಗೆ ಸೇವೆಯನ್ನು ಏರ್ಪಡಿಸುತ್ತಾರೆ. ಇದನ್ನು ಭೂತಪ್ಪನಿಗೆ ಎಡೆ ಹಾಕುವುದು ಎಂದೂ ಕರೆಯಲಾಗುತ್ತದೆ.

ಭೂತ ಅಥವಾ ಹರಿಗೆ, ಮರದಿಂದ ಮಾಡಿದ ಚಕ್ರಾಕಾರದ ಒಂದು ಚಿತ್ರ. ಒಬ್ಬ ರಾಕ್ಷಸನನ್ನು ಹೋಗುವ ಈ ಚಿತ್ರ ನುಣುಪಾದ ಮರದ ಹಲಗೆಯ ಮೇಲೆ ಕೋರೆಹಲ್ಲು, ದಪ್ಪ ಮೀಸೆ, ಕೆಂಪಾದ ಕಣ್ಣು, ಕೆದರಿದ ತಲೆಕೂದಲುಗಳಿಂದ ಭಯಾನಕ ಆಕೃತಿಯ ಚಿತ್ರವನ್ನು ಅದಕ್ಕೆ ಒಪ್ಪುವ ಬಣ್ಣಗಳಿಂದಲೇ ಬರೆದಿರುತ್ತಾರೆ. ಭೂತಾಳೆಯ ಮರದಿಂದ ಈ ಹರಿಗೆಯನ್ನು ತಯಾರಿಸುತ್ತಾರೆ. ಸಾಮಾನ್ಯವಾಗಿ ದಾಸಪ್ಪಗಳು ಕುಣಿಸುತ್ತಾರೆ.

ದಾಸಪ್ಪಗಳು ಅಂದು ಜಾಗಟೆ, ಬವನಾಸಿ, ಶಂಖ ಹಿಡಿದು ಕಚ್ಚೆ ಪಂಚೆ ಹಾಕಿ, ಅಂಗಿ ಕಳಚಿ ಹಣೆ, ಭುಜ ಹಾಗೂ ಎದೆಯ ಭಾಗಕ್ಕೆ ಮೂರು ನಾಮವನ್ನು ಹಾಕಿಕೊಂಡು, ಎಡಗೈಯಲ್ಲಿ ಗುರಾಣಿಯಾಕೃತಿಯ ಹರಿಗೆಯನ್ನು ಬಲಗೈಲಿ ಕತ್ತಿ ಕೆಲವೊಮ್ಮೆ ಬ್ಯಾಟೆಸೊಪ್ಪು ಬೆತ್ತವನ್ನು ಹಿಡಿದು ಕುಣಿಯುತ್ತಾರೆ. ಕುಣಿದು ಕುಣಿದು ಆವೇಶದಿಂದ ಮೈದುಂಬಿಯೂ ಬಿಡುತ್ತಾರೆ. ಕೊನೆಯಲ್ಲಿ ಹರಿಗೆ ಕುಣಿಸುವವರಿಗೆ ಶಾಂತಿ ಮಾಡಬೇಕಾಗುತ್ತದೆ. ಇದನ್ನು 'ಮಣೇವು ಸೇವೆ' ಎಂದು ಕರೆಯಲಾಗುತ್ತದೆ. ದೇವಸ್ಥಾನದಲ್ಲಿ ಮಡಿಯಿಂದ ತಯಾರಿಸಿದ ಪುರಿ, ಬಾಳೆಹಣ್ಣು, ಬೆಲ್ಲ, ತೆಂಗಿನಕಾಯಿಗಳಿಂದ ತಯಾರಿಸಿದ ಆಹಾರವನ್ನು ಮಣೇವಿಗಾಗಿ ತಯಾರಿಸುತ್ತಾರೆ. ಹರಿಗೆಯ ಕುಣಿತದ ಕೊನೆಯಲ್ಲಿ ಮಡಿ ಬಟ್ಟೆಯನ್ನು ಹಾಸುತ್ತಾರೆ. ಸುತ್ತಲೂ ಜನ ಕುಳಿತುಕೊಳ್ಳುತ್ತಾರೆ. ದೇವರನ್ನು ಮಧ್ಯೆ ಗದ್ದಿಗೆ ಮಾಡುತ್ತಾರೆ. ನಂತರ ಹಾಸಿದ ಮಡಿ ಬಟ್ಟೆಯ ಮೇಲೆ ಗುಪ್ಪೆಗಳಾಗಿ ಮೂರು ಭಾಗದಲ್ಲಿ ಆಹಾರವನ್ನು ಇಡಲಾಗುತ್ತದೆ. ಹರಿಗೆ ಕುಣಿಸುವವರು ಭಾವಿಸುವ ವಾದ್ಯಕ್ಕೆ ತಕ್ಕಂತೆ ಕುಣಿದು ಕೊನೆಗೆ ಬಟ್ಟೆಯ ಮೇಲೆ ಇಟ್ಟಿರುವ ಮಣೇವಿಗೆ ಮುಖ ಕೆಳಗೆ ಮಾಡಿಕೊಂಡು ಮಲಗಿ ಬಾಯಿಯಿಂದಲೇ ನಾಲಿಗೆಯನ್ನು ಚಾಚಿ ತಿನ್ನುತ್ತಾರೆ. ಆ ಗುಡ್ಡೆ ಮುಗಿದ ಮೇಲೆ ಮತ್ತೆ ಎದ್ದು ಕಿರುಚಾಡಿ ಕುಣಿಯುತ್ತಾರೆ. ಹೀಗೆ ಮಾಡಿದ ಆಹಾರವನ್ನೆಲ್ಲಾ ಆವೇಶದಿಂದ ಮಣೇವು ಸೇವೆಯ ಹೆಸರಲ್ಲಿ ತಿಂದು ಮುಗಿಸುತ್ತಾರೆ. ಅಷ್ಟಕ್ಕೂ ಸಾಕಾದರೆ ಹರಿಗೆ ಕುಣಿಸುವವನು ಆವೇಶದಿಂದ ಕುಣಿದು ಪ್ರಜ್ಞೆ ತಪ್ಪುವ ಸಾಧ್ಯತೆಯೂ ಉಂಟು. ಹರಿಗೆ ಕುಣಿಸುವವನು ತಿಂದು ಬಿಟ್ಟು ಚೂರುಪಾರು ಆಹಾರ ಪದಾರ್ಥವು, ಪರಮ ಪವಿತ್ರ ಪ್ರಸಾದ ಎಂಬ ನಂಬಿಕೆ ಭಕ್ತಸಮೂಹದಲ್ಲಿದೆ.

ಹರಿಗೆ ಅಥವಾ ಭೂತ ಸೇವೆಯ ಬಗೆಗೆ ಜನಪದರಲ್ಲಿ ಒಂದು ಕಥೆಯಿದ್ದು, ಪುರಾಣ ಮೂಲವನ್ನು ಮೌಖಿಕವಾಗಿ ಪ್ರಚಾರ ಮಾಡಿಕೊಂಡು ಬರುತ್ತಿದ್ದಾರೆ. ಕೃಷ್ಣ ಕುತಂತ್ರದಿಂದ ಭೀಮನ ಮಗನಾದ ಘಟೋತ್ಕಚನನ್ನು ಬಲಿಕೊಡಬೇಕೆಂದು ಯೋಚಿಸುತ್ತಾನೆ. ಅದಕ್ಕಾಗಿ ಹಲವು ರೀತಿಯ ಯೋಚನೆ ಮಾಡಿ ಕೊನೆಗೆ ಹೀಗೆ ಮಾಡುತ್ತಾನೆ. ಘಟೋತ್ಕಚನಿಗೆ ಮೈಕೈಯೆಲ್ಲಾ ರೋಮ ಇರುವುದನ್ನು ಸರಿಯಾಗಿ ಬಳಸಿಕೊಂಡ, ಕೃಷ್ಣ ಘಟೋತ್ಕಚನಿಗೆ ಹೀಗೆ ಹೇಳುತ್ತಾನೆ 'ನೀನು ಮಹಾ ಪರಾಕ್ರಮಿ, ನಿನ್ನ ಸಮಾನರಿಲ್ಲ. ನಿನ್ನಿಂದ ನನಗೊಂದು ಸಹಾಯವಾಗಬೇಕಾಗಿದೆ. ಅದೇನೆಂದರೆ, ಎದೆಯ ರೋಮ, ಕೋರೆ ಮೀಸೆ ಇರುವಂಥ ಒಂದು ಟಗರು ನನಗೀಗ ಅಗತ್ಯವಾಗಿ ಬೇಕಾಗಿದೆ ತಂದುಕೊಡು' ಎಂದನು. ಘಟೋತ್ಕಚನು ಅತ್ಯಂತ ಪ್ರೀತಿಯಿಂದಲೇ ಆ ಬಗೆಯ ಪ್ರಾಣಿಯನ್ನು ಹುಡುಕುತ್ತಾ ಹೊರಟನು. ಆದರೆ ಆತನಿಗೆ ಆ ಬಗೆಯ ಪ್ರಾಣಿಯ ಸುಳಿವು ದೊರೆಯಲೇ ಇಲ್ಲ. ಹುಡುಕಿ ಹುಡುಕಿ ಸುಸ್ತಾಗಿ ಕೊನೆಗೆ ದಣಿವಾಗಿ ನೀರು ಕುಡಿಯಲು ಒಂದು ಕೊಳದ ಬಳಿಗೆ ಬರುತ್ತಾನೆ. ಬಿಸಿಲಿನ

ಝುಳ, ಬೆಳಕಿಗೆ ತಿಳಿಯಾದ ನೀರಿನಲ್ಲಿ ಘಟೋತ್ಕಚನ ಪ್ರತಿಬಿಂಬ ಕಾಣುತ್ತದೆ. ಅದರಲ್ಲಿ ಕೋರೆಮೀಸೆ ಎದೆಯ ರೋಮ ಎದ್ದು ಕಾಣುತ್ತದೆ. ಈ ಬಗೆಯ ಪ್ರಾಣಿ ಎಲ್ಲಿಯೂ ದೊರೆಯುವುದಿಲ್ಲ. ನಾನೇ ಕೃಷ್ಣನಿಗೆ ಬಲಿಯಾದರೆ ಹೇಗೆ ಎಂದು ಯೋಚಿಸಿ ನೇರವಾಗಿ ಕೃಷ್ಣನ ಬಳಿಗೆ ಬರುತ್ತಾನೆ. ಬಂದು ಹೀಗೆ ಹೇಳುತ್ತಾನೆ 'ನೀನು ಬಯಸುವ ಪ್ರಾಣಿ ನಾನೇ, ನನ್ನನ್ನೇ ಬಲಿ ತೆಗೆದುಕೋ. ಆದರೆ ಏನೂ ಅರಿಯದ ನನ್ನನ್ನು ಕೊಲ್ಲುತ್ತಿರುವಿರಿ. ಇದಕ್ಕೆ ಪರಿಹಾರವೇನು?' ಎಂದು ಕೇಳುತ್ತಾನೆ. ಆಗ ಕೃಷ್ಣ 'ನಾನು ಮುಂದಿನ ಜನ್ಮದಲ್ಲಿ ತಿರುಪತಿಯ ತಿಮ್ಮಪ್ಪನಾಗಿ ಹುಟ್ಟುತ್ತೇನೆ. ಆಗ ಭೂಲೋಕದ ಜನರು ಮುಂಡ ಭಾಗದ ನಿನ್ನ ತಲೆಯನ್ನು ಪೂಜಿಸುತ್ತಾರೆ. ಅದೊಂದು ಮೋಕ್ಷದ ಕೆಲಸ' ಎಂದು ಹೇಳಿದಾಗ, ಭೀಮ ಘಟೋತ್ಕಚನನ್ನು ಕೊಲ್ಲುತ್ತಾನೆ. ಅದೇ ತಲೆ ಇಂದು ಹರಿಗೆಯ ರೂಪದಲ್ಲಿ ಪೂಜಿಸಲ್ಪಡುತ್ತದೆ ಎಂಬ ನಂಬಿಕೆ ಜನಪದರಲ್ಲಿ ಬಲವಾಗಿದೆ. ಗೊಲ್ಲರು, ಕುಂಚಿಟಿಗರು, ನಾಯಕರು ಈ ವರ್ಗದಲ್ಲಿ ಹರಿಗೆ ಸೇವೆ ಇಂದಿಗೂ ಪ್ರಿಯವಾದ ಆರಾಧನೆಯಾಗಿದೆ.

ಪುರಲೇಹಳ್ಳಿ ಭೂತಪ್ಪ, ರಂಗನಾಥಪುರದ ಮರಡಿ ರಂಗನಾಥ, ಶ್ಯಾಗದಡು, ಹುಂಜನಹಳ್ಳಿ ಇಲ್ಲೆಲ್ಲಾ ಹರಿಗೆ ಕುಣಿಸುವ ಸಂಪ್ರದಾಯ ಇಂದಿಗೂ ವ್ಯಾಪಕವಾಗಿದೆ. ಸೀಬಿ ನರಸಿಂಹಸ್ವಾಮಿಯ ಜಾತ್ರೆಯಲ್ಲಿ, ಮಾಗೋಡು ರಂಗನಾಥನ ಜಾತ್ರೆಗಳಲ್ಲಿ ಹರಿಗೆ ಸೇವೆ ಹೆಚ್ಚು.

# ಅಧ್ಯಾಯ – ಆರು
# ಸಿರಾ ಸೀಮೆಯ ಪ್ರವಾಸಿ ನೆಲೆಗಳು, ಜಾತ್ರೆ ತೇರುಗಳು

ಜಾತ್ರೆಗಳು ಜನಪದ ಸಂಸ್ಕೃತಿಯ ವಿಶಿಷ್ಟ ಪ್ರಕಾರ. ಜಾತ್ರೆ, ಪರಿಷೆ, ತೇರು, ರಥೋತ್ಸವ, ಉತ್ಸವ, ಪಲ್ಲಕ್ಕಿ, ಬಂಡಿ ಇತ್ಯಾದಿ ಯಾವುದೇ ಹೆಸರಿನಿಂದ ಕರೆದರೂ ಎಲ್ಲ ಜಾತ್ರೆಗಳ ಹೊರಸ್ವರೂಪ ಒಂದೇ. ಅಪಾರ ಜನಜಂಗುಳಿ, ಗದ್ದಲ, ಮನೋರಂಜನೆ, ಆಟೋಟಗಳು, ವಿವಿಧ ರೀತಿಯ ಸರಕುಗಳ ವ್ಯಾಪಾರ, ದೇವರನ್ನು ಮೆರೆಸುವಿಕೆ, ಭಕ್ತಿಭಾವ ಸಮರ್ಪಣೆ, ಹರಕೆ ಇವು ಎಲ್ಲ ಜಾತ್ರೆಗಳ ಸಾಮಾನ್ಯ ನೋಟ. ಜಾತ್ರೆಗಳ ಎಲ್ಲ ಲಕ್ಷಣಗಳನ್ನೂ ಒಳಗೊಂಡ ಒಂದು ಸಮಗ್ರ ವ್ಯಾಖ್ಯೆಯನ್ನು ಕೊಡುವುದು ಕಷ್ಟ. ಹೆಚ್ಚಿನ ಜಾತ್ರೆಗಳು ನಡೆಯುವುದು ಕೃಷಿಯ ಕೆಲಸಗಳು ಮುಗಿದು ಫಲ ಕೈಗೆ ಬಂದು ರೈತನು ಬಿಡುವಾಗಿರುವ ಕಾಲದಲ್ಲಿ. ಕೈಗೆ ಬಂದ ಫಲಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸುವುದು ಮತ್ತು ಮುಂದಿನ ವರ್ಷವೂ ಇದೇ ರೀತಿಯ ಫಲ ಸಿಗುವಂತೆ ಪ್ರಾರ್ಥನೆ ಸಲ್ಲಿಸುವುದೂ ಜಾತ್ರೆಗಳ ಮುಖ್ಯ ಉದ್ದೇಶವಾಗಿರಬಹುದು. ಈ ಸಂದರ್ಭದಲ್ಲಿ ದುಡ್ಡು ಕೈಯಲ್ಲಿರುವುದರಿಂದ ರೈತರ ವ್ಯಾಪಾರ ವಹಿವಾಟಿಗೆ ಜಾತ್ರೆ ಒಂದು ಅನುಕೂಲಕರ ಸಂದರ್ಭವಾಯಿತು. ರೈತನಿಗೆ ಬೇಕಾದ ವಸ್ತುಗಳು ಹಾಗೂ ಮನರಂಜನೆಯನ್ನು ಒದಗಿಸುವುದಕ್ಕಾಗಿ ವಿವಿಧ ಪ್ರಕಾರದ ಅಂಗಡಿಗಳು, ಮನರಂಜನಾ ಪ್ರಕಾರಗಳು ಜಾತ್ರೆಯಲ್ಲಿ ಸೇರಿಕೊಂಡಿರಬೇಕು. ಅನೇಕ ಜಾತ್ರೆಗಳು ದನದ ಜಾತ್ರೆಗಳೂ ಆಗಿರುವುದನ್ನು ದನಗಳ ಪ್ರದರ್ಶನ ಹಾಗೂ ಮಾರಾಟವೇ ಇಲ್ಲಿನ ಪ್ರಧಾನ ಅಂಶವಾಗಿರುವುದನ್ನು ಸಹ ಈ ಸಂದರ್ಭದಲ್ಲಿಯೇ ಗಮನಿಸಬಹುದು.

ತೇರು ಅಥವಾ ರಥವನ್ನು ಎಳೆಯುವುದು ಬಹುತೇಕ ಜಾತ್ರೆಗಳ ಮುಖ್ಯ ಭಾಗ. ಜಾತ್ರೆಯೆಂದರೆ ಜಾತ್ರೆಯಿಲ್ಲ ಎಂಬ ಗಾದೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ತೇರು ಮತ್ತು ರಥ ಇವೆರಡರ ನಡುವೆ ಹೆಚ್ಚಿನ ವ್ಯತ್ಯಾಸ ಕಲ್ಪಿಸದಿದ್ದರೂ ದೇವರ ಮೂರ್ತಿಯನ್ನಿಟ್ಟು ಮೆರವಣಿಗೆ ಮಾಡುವ ವಿಶಿಷ್ಟ ವಾಹನವನ್ನು ಮಾತ್ರ ತೇರು ಅನ್ನುತ್ತೇವೆ.

ರಥ ಎನ್ನುವುದು ಈ ಅರ್ಥದಲ್ಲಿ ಮಾತ್ರವಲ್ಲದೆ ವಾಹನ ಎಂಬ ಅರ್ಥದಲ್ಲಿಯೂ ಪ್ರಯೋಗವಾಗುತ್ತದೆ. ತೇರನ್ನು ಎಳೆಯುವುದು ತೇರಿರುವ ಜಾತ್ರೆಗಳ ಶಿಖರಘಟ್ಟ. 'ತೇರಾದ ಮೇಲೆ ಜಾತ್ರೆ ನೆರೆಯಿತು' 'ತೇರು ಆಯಿತು ಹೇರು ಮಾತ್ರ ವ್ಯರ್ಥ ತಂದೆ' ಎಂಬ ಗಾದೆಗಳಲ್ಲಿ ಈ ಅರ್ಥ ಧ್ವನಿಸಿದೆ. ತೇರು ಅಥವಾ ರಥೋತ್ಸವ ಪ್ರಧಾನವಾದ ಜಾತ್ರೆಗಳು ಅದೇ ಹೆಸರಿನಿಂದಲೇ ಪ್ರಸಿದ್ಧ. ಬಸವೇಶ್ವರ ರಥ, ಉಗ್ರನರಸಿಂಹಸ್ವಾಮಿ ರಥೋತ್ಸವ,

ವೀರಭದ್ರಸ್ವಾಮಿ ರಥ, ಕಲ್ಲೇಶ್ವರ ರಥ ಇತ್ಯಾದಿ. ನಾಯಕನಹಟ್ಟಿ ತೇರು, ಹಾಲಸ್ವಾಮಿ ತೇರು, ಬನಶಂಕರಿ ತೇರು, ಕರಿಸಿದ್ದೇಶ್ವರನ ತೇರು, ಶರಣಬಸಪ್ಪನ ತೇರು ಇತ್ಯಾದಿ. ದೇವರನ್ನು ಮೆರೆಸುವ ಸಾಧನಗಳ ಗುಂಪಿನಲ್ಲಿ ಪಲ್ಲಕ್ಕಿ, ವಾನ್ಯೇವು, ಬಂಡಿ, ಕುರ್ಜ ಮೊದಲಾದುವೆಲ್ಲ ಸೇರುತ್ತವೆ. ಬಂಡಿ ಅತ್ಯಂತ ಸರಳವಾದ ಮೂಲರೂಪದ ಪ್ರಾಚೀನ ವಾಹನ. ರಥವು ಧನಬಲ, ಶ್ರೀಮಂತಿಕೆ, ಕಲೆ, ವೈಭವಗಳ ಇನ್ನೊಂದು ತುದಿ. ಮಂಡ್ಯ ಜಿಲ್ಲೆಯ ಅನೇಕ ಜಾತ್ರೆಗಳನ್ನು ಬಂಡಿ ಎಂಬ ಹೆಸರಿನಲ್ಲಿ ಕರೆಯುವುದನ್ನು ಕಾಣಬಹುದು. ಬಂಡಿಯನ್ನೇ ಬಾಳೆಕಂಬ. ತಳಿರುಗಳ ಅಲಂಕಾರದೊಂದಿಗೆ ಸಿಂಗರಿಸಿ ಮೆರವಣಿಗೆ ಹೊರಡುವ ಸಂಭ್ರಮ ಇಲ್ಲಿದೆ. ಬಂಡಿಗಳಲ್ಲಿ ಜಾತ್ರೆಗೆ ಹೊರಟರೂ ಸಹ ಬಂಡಿಗಳನ್ನು ಇದೇ ರೀತಿ ಅಲಂಕರಿಸಿರುತ್ತಾರೆ. ದೇವರನ್ನು ಮೆರೆಸುವ ಇದಕ್ಕಿಂತ ಪ್ರಾಚೀನ ರೂಪವೆಂದರೆ ತಲೆಯ ಮೇಲೆ ಹೊತ್ತು ಮೆರೆಸುವುದೇ ಆಗಿದೆ. ತಲೆಯ ಮೇಲೆ ಹೊರುವುದರಿಂದಾರಂಭಿಸಿ ಭವ್ಯವಾದ ರಥ ತೇರುಗಳವರೆಗಿನ ವಿವಿಧ ಹಂತಗಳನ್ನು ನೋಡಿದಾಗ ಗಮನಕ್ಕೆ ಬರುವ ಸಂಗತಿಯೆಂದರೆ ಸಾಮಾನ್ಯವಾಗಿ ರಥೋತ್ಸವಗಳೆಲ್ಲ ಶಿಷ್ಟದೇವತೆಗಳಿಗೆ ನಡೆಯುವಂಥವು. ಬಿದಿರಿನ ಬುಟ್ಟಿ, ಅಡ್ಡೆ, ಮರದ ಬಂಡಿಯಂಥವು ಗ್ರಾಮ ದೇವತೆಗಳಿಗೆ ಮೀಸಲಾದಂಥವು. ಇಲ್ಲಿನ ಆರ್ಥಿಕ ವಿಕಾಸ ಕ್ರಮವೂ ಗಮನಿಸಬೇಕಾದ ಅಂಶ. ಗ್ರಾಮದೇವತೆಗಳು ಹಳ್ಳಿಗಳಿಗೆ, ಸಮಾಜದ ಕೆಳವರ್ಗದವರಿಗೆ, ಕೆಳಜಾತಿಗಳವರಿಗೆ, ಬಡವರಿಗೆ ಸೀಮಿತ. ಆದರೆ ಕೆಲವೊಂದು ಗ್ರಾಮದೇವತೆಗಳ ಆರ್ಥಿಕ ಸ್ಥಿತಿಯಲ್ಲಿ ಚೇತರಿಕೆಯಾದ ನಂತರ ಅವು ರಥೋತ್ಸವಗಳನ್ನು ಪಡೆಯಲು ಸಮರ್ಥವಾಗಿರಬಹುದು.

ರಥ, ತೇರುಗಳಲ್ಲಿ ಅನೇಕ ವಿಧ. ಮರದ ತೇರು, ಕಲ್ಲಿನ ರಥ, ಬೆಳ್ಳಿ ತೇರು, ಚಿನ್ನದ ತೇರು ಇತ್ಯಾದಿ. ರಥ ನಿರ್ಮಾಣ ಒಂದು ಕಲೆಯೂ ಆಗಿ ಬೆಳೆದಿದೆ. ಅತ್ಯಂತ ಸುಂದರವಾದ ರಥಗಳನ್ನು ಪೈಪೋಟಿಯಿಂದೆಂಬಂತೆ ನಿರ್ಮಿಸುವುದೂ ಉಂಟು. ರಥ ವೈಶಿಷ್ಟ್ಯಗಳು ಹಾಗೂ ರಥನಿರ್ಮಾಣದ ಬಗ್ಗೆ ಕಥೆ, ಐತಿಹ್ಯಗಳು ಸಾಕಷ್ಟಿವೆ. ಜಾತ್ರೆಗಳ ಅಧ್ಯಯನದಲ್ಲಿ ಇವುಗಳ ಬಗ್ಗೆ ವಿಶೇಷ ಗಮನ ಹರಿಸುವುದು ಅಗತ್ಯ.

ರಥೋತ್ಸವ ತೇರುಗಳ ನಂತರ ಜಾತ್ರೆಗಳ ಎರಡನೇ ವೈಶಿಷ್ಟ್ಯ ದನಗಳ ಪ್ರದರ್ಶನ ಹಾಗೂ ಮಾರಾಟ. ಇವು ದನಗಳ ಜಾತ್ರೆಯಾಗಿಯೇ ಪ್ರಸಿದ್ಧವಾಗಿವೆ. ಇನ್ನು ಕೆಲವು ಜಾತ್ರೆಗಳಲ್ಲಿ ವಿವಿಧ ರೀತಿಯ ಹರಕೆಗಳ ಸಲ್ಲಿಕೆಯೇ ಜಾತ್ರೆಯ ಪ್ರಧಾನ ಅಂಶವಾಗಿರುತ್ತದೆ. ಉದಾ. ಸಿಡಿಯಾಡುವುದನ್ನು ನೋಡಬಹುದು. ಸಿಡಿಯಾಡುವುದು ಒಂದು ಹರಕೆ. ಸಿಡಿ ಆಚರಣೆ ಇರುವ ಜಾತ್ರೆ ಸಿಡಿಜಾತ್ರೆ ಎಂದೇ ಪ್ರಸಿದ್ಧವಾಗಿರುವುದುಂಟು. ಮಾರಮ್ಮನ ಸಿಡಿ, ಆಂಜನೇಯ ಸಿಡಿ, ಏಕನಾಥೇಶ್ವರಿ ಸಿಡಿ ಇತ್ಯಾದಿ. ಸಿಡಿಯಾಟ ಇಂಥ ಜಾತ್ರೆಗಳ

ಶಿಖರಘಟ್ಟ. ಪ್ರಧಾನವಾದ ಇನ್ನಿತರ ಹರಕೆಗಳೆಂದರೆ ಉರುಳುಸೇವೆ, ಬೆತ್ತಲೆ ಸೇವೆ, ಬೇವಿನುಡುಗೆ ಸೇವೆ, ಬಾಯಿ ಬೀಗ, ಕೆಂಡದ ಮೇಲೆ ನಡಿಗೆ ಇತ್ಯಾದಿ. ಸ್ಪರ್ಧೆ ಮತ್ತು ಸಾಹಸ ಪ್ರದರ್ಶನಗಳು ಪ್ರಧಾನವಾದಂಥ ಜಾತ್ರೆಗಳೂ ಇವೆ. ಅದು ದನಗಳ ಓಟವಿರಬಹುದು, ಕಂಬಳ ಜಾತ್ರೆಯಲ್ಲಿದ್ದಂತೆ ಕೋಣಗಳ ಓಟದ ಸ್ಪರ್ಧೆಯಿರಬಹುದು ಅಥವಾ ಎಣ್ಣೆ ಮೆತ್ತಿ ಜಾರುವಂಥ ಕಂಭವನ್ನೇರಿ ಅದರ ತುದಿಯಲ್ಲಿರುವ ಮೊಸರು ಗಡಿಗೆಯನ್ನು ಒಡೆಯುವ ಸಾಹಸವಿರಬಹುದು. ಇಂತಹ ಹಲವಾರು ಜಾತ್ರೆಗಳಲ್ಲಿ ಯುವಕರು ತಮ್ಮ ದೈಹಿಕ ಬಲ, ಸಾಹಸಗಳನ್ನು ಮೆರೆಯುವುದಕ್ಕೆ ಸದವಕಾಶ. ಪವಾಡ ಪ್ರದರ್ಶನ ಕೆಲವೊಂದು ಜಾತ್ರೆಗಳ ಪ್ರಧಾನ ಅಂಶ. ಕೆಂಡದ ನಡಿಗೆ, ಕೆಂಡಾರ್ಚನೆ ಮೊದಲಾದವು ಈ ಗುಂಪಿನಲ್ಲಿ ಬರುತ್ತವೆ. ಭವಿಷ್ಯ ನುಡಿಯುವುದು, ಕಣಿ ಹೇಳುವುದು ಇನ್ನೂ ಕೆಲವು ಜಾತ್ರೆಗಳ ಪ್ರಧಾನ ಅಂಶ. ಮೈಲಾರಲಿಂಗನ ಜಾತ್ರೆ ಕಾರಣಿಕ್ಕಾಗಿಯೇ ಪ್ರಸಿದ್ಧ. ಉಜ್ಜನಿ ಚೌಡಮ್ಮನ ಜಾತ್ರೆಯಂಥವುಗಳಲ್ಲಿ ಎರಡು ಜಾತಿಗಳ ತಾತ್ಕಾಲಿಕ ಪಾತ್ರ ಬದಲಾವಣೆಯೇ ಪ್ರಧಾನ. ಕೆಲವೊಂದು ಜಾತ್ರೆಗಳು ಶುದ್ಧ ಮನರಂಜನಾ ಪ್ರಧಾನವಾಗಿವೆ. ಹೀಗೆ ಒಂದೊಂದು ಜಾತ್ರೆಯಲ್ಲಿ ಒಂದೊಂದು ರೀತಿಯ ಪ್ರಧಾನ ಅಂಶವಿದ್ದು ಉಳಿದೆಲ್ಲ ಅಂಶಗಳು ಈ ಶಿಖರಘಟ್ಟಕ್ಕೆ ಪೀಠಿಕೆಯ ರೂಪದಲ್ಲಿರುವ ಪ್ರಕ್ರಿಯೆಯನ್ನು ಕಾಣುತ್ತೇವೆ.

ಜಾತ್ರೆಗಳ ಅಂಗವಾಗಿ ರೂಪುಗೊಂಡ ಜನಪದ ಸಾಹಿತ್ಯ ಅನೇಕ ದೃಷ್ಟಿಗಳಿಂದ ಗಮನ ಸೆಳೆಯುತ್ತದೆ. ಈ ಸಾಹಿತ್ಯದಲ್ಲಿ ಹಾಡು, ಐತಿಹ್ಯ, ಪುರಾಣ, ಸ್ಥಳ ಕಥೆ, ವಿವರಣಾತ್ಮಕ ಕಥೆ, ಗಾದೆ, ನುಡಿಗಟ್ಟು ಇತ್ಯಾದಿ ಸೇರುತ್ತವೆ. ಶಿಷ್ಟ ದೇವತೆಗಳ ಕಥೆಗಳಿಗಿಂತ ಗ್ರಾಮ ದೇವತೆಗಳ ಕಥೆಗಳು ಅದರಲ್ಲಿಯೂ ಹೆಣ್ಣು ದೇವತೆಯ ಕಥೆಗಳು ಸಾಮಾಜಿಕ, ಸಾಂಸ್ಕೃತಿಕ ಇತಿಹಾಸದ ಅಧ್ಯಯನಕ್ಕೆ ಒಳ್ಳೆಯ ಸಾಮಗ್ರಿ. ಆಯಾ ಕಾಲಘಟ್ಟದಲ್ಲಿ ನಡೆದ ಯಾವುದೋ ಒಂದು ಸಂಘರ್ಷದ ಕಥೆಗಳನ್ನು ಇವು ಹೇಳುತ್ತವೆ. ಈ ದೈವಗಳು ಯಾವುದೇ ಕಾರಣದಿಂದ ನೆಲೆತಪ್ಪಿ ಬಂದ ದೈವಗಳಾಗಿದ್ದು ಹೊಸ ಜಾಗ ಕಂಡುಕೊಂಡ ಕಥೆಯನ್ನು ಇವು ತಿಳಿಸುತ್ತವೆ. ಈ ದೇವತೆಗಳು ಕೆಲವೊಂದು ಮಹಿಮೆ-ಪವಾಡಗಳ ಮೂಲಕ ಜನರಲ್ಲಿ ತಮ್ಮ ಬಗ್ಗೆ ಭಯಭಕ್ತಿ ಹುಟ್ಟುವಂತೆ ಮಾಡಿ ತಮ್ಮ ನೆಲೆಗಳನ್ನು ಭದ್ರಗೊಳಿಸಿಕೊಳ್ಳುತ್ತವೆ. ಸ್ಥಳೀಯ ಜನಾಂಗಿಕ, ಭೌಗೋಳಿಕ ಇತಿಹಾಸದ ಬಗ್ಗೆಯೂ ಈ ಕಥೆಗಳು ಬೆಳಕು ಚೆಲ್ಲುತ್ತವೆ. ಸ್ಥಳನಾಮಗಳ ಅಧ್ಯಯನಕ್ಕೂ ಅಪಾರ ಸಾಮಗ್ರಿ ಒದಗಿಸುತ್ತವೆ. ಗ್ರಾಮದೇವತೆಗಳ ಸಂಬಂಧದಲ್ಲಿ ವಿಶೇಷವಾಗಿ ಗಮನಿಸಬೇಕಾದ ಅಂಶವೆಂದರೆ ಅವುಗಳ ಹೆಸರುಗಳು. ಬಹುತೇಕ ಈ ಎಲ್ಲ ದೇವತೆಗಳು ಆಯಾ ಊರಿನ ಹೆಸರನ್ನೇ ಹೊಂದಿರುತ್ತವೆ. ಕೋಲಾರಮ್ಮ, ನಲ್ಲೂರಮ್ಮ, ಉಜ್ಜನಿ ಚೌಡಮ್ಮ, ಗುತ್ತಲಮ್ಮ, ಹೊಸೂರಮ್ಮ ಇತ್ಯಾದಿ.

ಊರುಗಳ ಹೆಸರನ್ನೇ ಅಂಟಿಸಿದ್ದರಿಂದಾಗಿ ಗುಣಸ್ವಭಾವ ಆಚಾರ ವಿಚಾರಗಳೆಲ್ಲವೂ ಬಹುತೇಕ ಒಂದೇ ಆಗಿರುವ ಸಾವಿರಾರು ದೇವತೆಗಳಿಗೆ ಪ್ರತ್ಯೇಕ ಹೆಸರಿಡುವ ಕಷ್ಟ ತಪ್ಪಿದಂತಾಗಿದೆ.

ಜಾತ್ರೆಗಳಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಅವುಗಳ ಸಹಕಾರ ಸ್ವರೂಪ. ಇಲ್ಲಿ ಊರಿನ ಎಲ್ಲ ಜಾತಿ-ವರ್ಗ, ಧರ್ಮಗಳ ಜನರೂ ಭೇದವಿಲ್ಲದೆ ಪಾಲುಗೊಳ್ಳುತ್ತಾರೆ. ಎಲ್ಲರೂ ತಮ್ಮ ತಮ್ಮ ನೆಲೆಯಲ್ಲಿ ಸೌಹಾರ್ದಯುತವಾಗಿ ಬೆರೆಯುವಂತೆ ಮಾಡುವುದೇ ಕೆಲವೊಂದು ಜಾತ್ರೆಗಳ ಉದ್ದೇಶವಾಗಿರುವಂತೆ ತೋರುತ್ತದೆ. ಏಕಕಾಲದಲ್ಲಿ ವಿರುದ್ಧ ಸಂಪ್ರದಾಯ ಆಚರಣೆಗಳನ್ನು ಪಾಲಿಸಿಕೊಂಡು ಬರುವುದರಲ್ಲಿಯೂ ಸಹಕಾರ ಸಮನ್ವಯ ಅಂಶವನ್ನು ಕಾಣಬಹುದು. ಒಂದು ಕಡೆ ಸಸ್ಯಾಹಾರಿ ಸಂಪ್ರದಾಯವಿದ್ದರೆ ಇನ್ನೊಂದು ಕಡೆ ಮಾಂಸಾಹಾರಿ ಪದ್ಧತಿ ಇರುತ್ತದೆ. ದೇವಾಲಯಗಳೊಳಗೆ ಪ್ರವೇಶವಿರದ ಹೊಲೆಯ ಅಂದು ದೇವರನ್ನು ಹೊರುತ್ತಾನೆ, ಜನಿವಾರ ಹಾಕಿಕೊಳ್ಳುತ್ತಾನೆ. ಜಾತಿ-ಕೋಮು ಸೌಹಾರ್ದದ ಉದ್ದೇಶ ಉತ್ತರ ಕರ್ನಾಟಕದಲ್ಲಿ ಸಾಧಿತವಾಗುವ ರೀತಿ ಮತ್ತು ದಕ್ಷಿಣ ಕರ್ನಾಟಕದಲ್ಲಿ ಸಾಧಿತವಾಗುವ ರೀತಿಗಳನ್ನು ತೌಲನಿಕವಾಗಿ ಅಭ್ಯಾಸ ಮಾಡಬಹುದು. ಉತ್ತರದಲ್ಲಿ ಹಿಂದೂ-ಮುಸ್ಲಿಂ ಸೌಹಾರ್ದದ ಪ್ರಶ್ನೆ ಇದ್ದರೆ ದಕ್ಷಿಣದಲ್ಲಿ ಮೇಲು-ಕೀಳು ಜಾತಿ ಪ್ರಶ್ನೆಯಿದೆ.

ಜಾನಪದದಲ್ಲಿ ವ್ಯವಸ್ಥಿತ ಸಂಗ್ರಹಕಾರ್ಯ ನಡೆಯಬೇಕಾಗಿರುವ ಪ್ರಮುಖ ಕ್ಷೇತ್ರವೆಂದರೆ ಜಾತ್ರೆಗಲು. ಆಚರಣೆ, ನಂಬಿಕೆ, ಐತಿಹ್ಯ, ಪುರಾಣ, ಕಲೆ, ಆಟ, ಮನರಂಜನೆ ಮುಂತಾದ ಅನೇಕ ಪ್ರಕಾರಗಳನ್ನೊಳಗೊಂಡಿರುವ ಜಾತ್ರೆ ಒಂದು ಸಂಕೀರ್ಣ ಪ್ರಕಾರ. ಆದ್ದರಿಂದ ಇದರ ಸಂಗ್ರಹಕಾರ್ಯ ಸುಲಭವಲ್ಲ. ಗೊಂದಲಮಯವೂ ಹೌದು. ಅಲ್ಲದೆ ಜಾತ್ರೆಗಳ ಸಂಖ್ಯೆ ಅಪಾರ. ಪ್ರಾದೇಶಿಕ ವ್ಯಾಪ್ತಿ ವಿಸ್ತಾರ. ಇಡೀ ಕರ್ನಾಟಕದ ಜಾತ್ರೆಗಳ ಸಂಗ್ರಹ ಒಬ್ಬರಿಂದಾಗುವ ಕೆಲಸವಲ್ಲ. ಜನಬಲ, ಹಣಬಲ, ಕಾಲಾವಕಾಶ ಈ ಎಲ್ಲ ಅಂಶಗಳ ಹಿನ್ನೆಲೆಯಿಂದ ನೋಡಿದಾಗ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ, ಕೊಡಗು ಮುಂತಾಗಿ ಕರ್ನಾಟಕದ ಪ್ರಾದೇಶಿಕ ವಿಂಗಡಣೆ ಮಾಡಿಕೊಂಡರೂ ಒಂದು ಪ್ರದೇಶದ ವ್ಯಾಪಕ ಸಂಗ್ರಹ ಒಬ್ಬರಿಂದಾಗುವಂಥದಲ್ಲ. ಈ ಕಾರಣದಿಂದಲೇ ಯಾವುದಾದರೊಂದು ನಿರ್ದಿಷ್ಟ ಊರು, ಗ್ರಾಮ, ನಿರ್ದಿಷ್ಟ ದೈವ ಇಂಥದನ್ನು ಗಮನದಲ್ಲಿಟ್ಟುಕೊಂಡು ಮಾತ್ರ ಕೆಲವೊಂದು ಅಧ್ಯಯನಗಳು ನಡೆದಿವೆ. ಆದರೆ ಒಟ್ಟಾರೆ ಜಾತ್ರೆಗಳ ಸ್ವರೂಪ, ಉದ್ದೇಶಗಳ ಬಗ್ಗೆ ಇಂತಹ ಅಧ್ಯಯನಗಳು ಹೆಚ್ಚಿನ ಬೆಳಕು ಚೆಲ್ಲಲಾರವು. ಜಾತ್ರೆಯ ವಿವಿಧ ಮುಖಗಳ ಅಧ್ಯಯನಕ್ಕೆ ಅಗತ್ಯವಾದ ಸಾಮಗ್ರಿ ಒದಗಿಸಲಾರವು. ಜಾತ್ರೆಗಳ ವ್ಯವಸ್ಥಿತ ಸಂಗ್ರಹಕ್ಕೆ

ಇನ್ನೂ ಕೆಲವು ಸಾಧ್ಯತೆಗಳಿವೆ. ಶಿಷ್ಟದೇವತೆ ಗ್ರಾಮದೇವತೆ ಪುರುಷ ದೇವತೆ ಸ್ತ್ರೀದೇವತೆ, ಶೈವದೇವತೆ, ವೈಷ್ಣವದೇವತೆ ಆದರೆ ಹೀಗೆ ಮಾಡಿಕೊಂಡಾಗಲೂ ಇಡೀ ಕರ್ನಾಟಕವನ್ನೇ ಗಮನಿಸಬೇಕಾಗುವುದರಿಂದ ಪ್ರಸ್ತುತದಲ್ಲಿ ಜಾತ್ರೆಗಳ ಸಂಗ್ರಹಣೆಗಾಗಿ ಜಿಲ್ಲೆಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ. ಜಿಲ್ಲೆಯನ್ನು ಆಧಾರವಾಗಿಟ್ಟುಕೊಳ್ಳುವುದರ ಒಂದು ಅನುಕೂಲವೆಂದರೆ ಒಬ್ಬ ವ್ಯಕ್ತಿಯಿಂದ ಸಮಗ್ರ ಸಂಗ್ರಹ ಸಾಧ್ಯವಾದೀತು ಎಂಬುದು. ಜಿಲ್ಲೆಯ ವ್ಯಾಪ್ತಿಯಲ್ಲಿ ಎಲ್ಲ ಪ್ರಕಾರದ ಜಾತ್ರೆಗಳು ಸಿಗುತ್ತವೆ. ಪ್ರತಿಯೊಂದು ಜಿಲ್ಲೆಯ ಸಂಗ್ರಹ ಕಾರ್ಯವನ್ನು ಏಕಕಾಲಕ್ಕೆ ನಡೆಸಿ, ಅನಂತರ ವಿಶ್ಲೇಷಣಾತ್ಮಕ ಅಧ್ಯಯನವನ್ನು ಕೈಗೊಳ್ಳಬಹುದು. ಜಾತ್ರೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಕೆಲವು ಅಂಶಗಳ ವಿಶ್ಲೇಷಣೆ ನಡೆಸಬಹುದಾಗಿದೆ.

ರಥೋತ್ಸವಗಳು ಶಿಷ್ಟದೇವತೆಗಳಿಗಿರುವಂತೆ ಗ್ರಾಮದೇವತೆಗಳಿಗೂ ಇವೆಯೇ? ಇದ್ದರೆ ಅವು ಮೂಲತಃ ಇದ್ದುದೇ ಅಥವಾ ಶಿಷ್ಟ ಸಂಬಂಧದಿಂದ ರೂಢಿಗೊಂಡುದೇ?

ಗ್ರಾಮದೇವತೆಗಳಿಗೆ ಸಂಬಂಧಿಸಿದ ಕಥೆಗಳು ಕರ್ನಾಟಕದಾದ್ಯಂತ ಒಂದೇ ರೀತಿ ಇವೆಯೇ? ಅವುಗಳ ತುಲನಾತ್ಮಕ ಅಧ್ಯಯನದಿಂದ ಕಂಡುಬರುವ ಅಂಶವೇನು?

ಜಾತ್ರೆಗಳಿಗೂ ಅವು ನಡೆಯುವ ಕಾಲಮಾನಕ್ಕೂ ಸಂಬಂಧವಿದೆಯೇ? ಕೆಲವೊಂದು ಜಾತ್ರೆಗಳ ಆಚರಣೆಗಳಿಗೂ ವಿವಾಹ ಸಂಬಂಧದ ಆಚರಣೆಗಳಿಗೂ ಬಹಳ ಸಾಮ್ಯವಿದೆ. ಉದಾಹರಣೆಗೆ ಜಾತ್ರೆಯಲ್ಲಿ ದೇವರುಗಳಿಗೆ ನಡೆಯುವ ಉಯ್ಯಾಲೆ ಉತ್ಸವ, ವಿವಾಹೋತ್ಸವ, ಶಯನೋತ್ಸವ ಇತ್ಯಾದಿ. ಗಂಧ ಎರಚುವುದು, ಓಕುಳಿಯಾಟ, ಸಕ್ಕರೆ ಹಂಚುವುದು ಇತ್ಯಾದಿ. ಕಳಸ ಒಯ್ಯುವುದು, ಮಡಿಲು ತುಂಬುವುದು, ತಾಳಿ ಕಟ್ಟುವುದು ಅಥವಾ ಹಳೆಯ ತಾಳಿ ಕಿತ್ತು ಹೊಸ ತಾಳಿ ಕಟ್ಟುವುದು ಈ ಆಚರಣೆಗಳ ಹಿನ್ನೆಲೆಯಲ್ಲಿ ನೋಡಿದಾಗ ವಿವಾಹವು ಸಂತಾನಫಲ ಸಂಬಂಧಿಯಾಗಿರುವಂತೆ ಜಾತ್ರೆಗಳೂ ಕೂಡ ಫಲವಂತಿಕೆ (ಕೃಷಿ) ಸಂಬಂಧವಾಗಿ ನಡೆಯುತ್ತಿವೆಯೇ?

ಜಾತ್ರೆಯ ವಿವಿಧ ಹರಕೆ, ನೈವೇದ್ಯ, ಆಚರಣೆಗಳ ಹಿನ್ನೆಲೆಯಲ್ಲಿರುವ ಅರ್ಥವೇನು? ಉದಾಹರಣೆಗೆ ತೇರು ಎಳೆಯುವಾಗ ಬಾಳೆಹಣ್ಣು, ಉತ್ತುತ್ತೆ ಎಸೆಯುವ ಸಂಪ್ರದಾಯ ವ್ಯಾಪಕವಾಗಿದೆ. ಫ್ರಾಯ್ಡ್ ಸಿದ್ಧಾಂತರ ಪ್ರಕಾರ ಬಾಳೆಹಣ್ಣು, ಉತ್ತುತ್ತೆ ಮೊದಲಾದವನ್ನು ಶಿಶ್ನ ಸಂಕೇತವೆಂದು ಭಾವಿಸಬಹುದು. ಕಡುಬು ಕಾಳಗವನ್ನು ಇದೇ ಅರ್ಥದಲ್ಲಿ ಗಮನಿಸಬಹುದು. ಈ ಸಂಪ್ರದಾಯದ ಹಿಂದೆ ಫಲವಂತಿಕೆಯ ಉದ್ದೇಶವಿರಬಹುದೇ? ಬ್ರಹ್ಮಚಾರಿ ದೇವತೆಯಾದ ಹನುಮಂತನ ಜಾತ್ರೆಗಳಲ್ಲಿ ಈ ಆಚರಣೆ ಇರುವುದೇ?

ಕೆಲವೊಂದು ದೇವರುಗಳಿಗೆ ಪಾದುಕೆಗಳನ್ನರ್ಪಿಸುವ ಹರಕೆಯಿದೆ. ಪಾದುಕೆ ಸ್ತ್ರೀ ಜನನಾಂಗದ ಸಂಕೇತ. ಇಂತಹ ಹರಕೆ ಸ್ವೀಕರಿಸುವ ದೇವರುಗಳು ಯಾರು?

ನಿರ್ದಿಷ್ಟವಾದ ಕೆಲವೊಂದು ಹರಕೆಗಳಿಗೂ ಅದರ ಕಥೆಗೂ ಸಂಬಂಧವಾದ ನೇಕ ಸಂಬಂಧವಿದೆಯೇ? ಮಾರಮ್ಮನ ಜಾತ್ರೆಯಲ್ಲಿ ಕೋಣ ಬಲಿ, ಕುರಿ ಬಲಿಗಳಿಗೆ ಸಂಬಂಧಿಸಿದಂತೆ ಹೇಳುವ ಕಥೆಯನ್ನು ಇಲ್ಲಿ ಗಮನಿಸಬಹುದು.

ಆಯಾ ದೇವರಿಗೂ ಅವುಗಳಿಗೆ ಸಲ್ಲುವ ಹರಕೆಗಳಿಗೂ ಇರುವ ಸಂಬಂಧವೇನು? ಸಾಮಾನ್ಯವಾಗಿ ಹನುಮಪ್ಪನ (ಆಂಜನೇಯ) ಜಾತ್ರೆಗಳಲ್ಲಿ ಮುಳ್ಳುಪಲ್ಲಕ್ಕಿ ಸೇವೆ ಕಂಡುಬರುತ್ತದೆ. ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಹನುಮಪ್ಪನಿಗೆ ಇದೇ ರೀತಿಯ ಸೇವೆ ಸಲ್ಲುವುದೇ? ಮತ್ತು ಇಂತಹ ಸೇವೆ ಹನುಮಪ್ಪನಿಗಲ್ಲದೆ ಇತರ ದೇವತೆಗಳಿಗೂ ಇದೆಯೇ? ಶೈವ ದೇವತಾ ಜಾತ್ರೆಯ ಆಚರಣೆಗಳಿಗೂ ವೈಷ್ಣವ ದೇವತಾ ಜಾತ್ರೆಯ ಆಚರಣೆಗಳಿಗೂ ವ್ಯತ್ಯಾಸವಿದೆಯೇ? ಅದೇ ರೀತಿ ಶಿಷ್ಟದೇವತಾ ಜಾತ್ರೆಗಳಿಗೂ ಗ್ರಾಮದೇವತಾ ಜಾತ್ರೆಗಳಿಗೂ ಇರುವ ವ್ಯತ್ಯಾಸವೇನು?

ಇಂತಹ ಯಾವುದೇ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾದರೆ ಸರಿಯಾದ ಮಾಹಿತಿ ಲಭ್ಯವಿರಬೇಕು. ಈ ದೃಷ್ಟಿಯಿಂದ ಕರ್ನಾಟಕದ ಪ್ರತಿಯೊಂದು ಜಿಲ್ಲೆಯಿಂದಲೂ ಜಾತ್ರೆಗಳಿಗೆ ಸಂಬಂಧಿಸಿದ ಮಾಹಿತಿಯ ಸಂಗ್ರಹ ನಡೆಯಬೇಕಾಗಿದೆ. ಈ ಕೆಲಸ ಪೂಣವಾಗದ ಹೊರತು ಅರ್ಥಪೂರ್ಣವಾದ ವಿಶ್ಲೇಷಣೆಯಾಗಲೀ ಸೈದ್ಧಾಂತಿಕ ನಿಲುವುಗಳನ್ನು ತಳೆಯುವುದಾಗಲೀ ಸಾಧ್ಯವಾಗದು. ಎಲ್ಲಕ್ಕಿಂತ ಮುಖ್ಯವಾಗಿ ಜಾತ್ರೆಗಳ ಸರಿಯಾದ ವರ್ಗೀಕರಣಕ್ಕೆ ಈ ಕೆಲಸದಿಂದ ತುಂಬ ನೆರವಾಗಬಹುದು. ಯಾವ ಜಾತ್ರೆ ಯಾವ ಉದ್ದೇಶಕ್ಕಾಗಿ ನಡೆಯುತ್ತದೆ ಎಂಬುದೇ ಜಾತ್ರೆಗಳ ವರ್ಗೀಕರಣಕ್ಕೆ ಆಧಾರವಾಗಲೂಬಹುದು. ಫಲವಂತಿಕೆಯ ಉದ್ದೇಶವೇ ವರ್ಗವರ್ಣ ಸಂಘರ್ಷದ ಹಿನ್ನೆಲೆಯೇ? ಕೇವಲ ಮನರಂಜನೆ, ಸಾಹಸದ ಉದ್ದೇಶವಿದೆಯೇ? ಇತ್ಯಾದಿ ಆಧಾರದ ಮೇಲೆ ಜಾತ್ರೆಗಳನ್ನು ಫಲವಂತಿಕೆಯ ಜಾತ್ರೆಗಳು, ಮನರಂಜನಾ ಜಾತ್ರೆಗಳು, ಸಾಹಸ ಪ್ರದರ್ಶನ ಜಾತ್ರೆಗಳು, ವ್ಯಾಪಾರ ಪ್ರದರ್ಶನದ ಜಾತ್ರೆಗಳು, ಸೌಹಾರ್ದ ಜಾತ್ರೆಗಳು ಇತ್ಯಾದಿಯಾಗಿ ವಿಂಗಡಿಸಲು ಸಾಧ್ಯವಿದೆ.

## ನಂಜಪ್ಪಸ್ವಾಮಿ ಜಾತ್ರೆ : ಪಟ್ಟನಾಯಕನಹಳ್ಳಿ

ಅತ್ತ ಪಟ್ಟನಾಯ್ಕನಹಳ್ಳಿ
ಇತ್ತ ಕಾಮಗಾನಹಳ್ಳಿ

ನಡುವೆ ನಂಜಪ್ಪನ ಮಠವು ।
ಗುರುಮಠವು ॥

ಪಟ್ಟನಾಯಕನಹಳ್ಳಿ ಸಿರಾ ತಾಲ್ಲೂಕು ಕೇಂದ್ರದಿಂದ ಹದಿನಾಲ್ಕು ಕಿ.ಮೀ. ದೂರದಲ್ಲಿ ಸಿರಾದಿಂದ ಅಮರಾಪುರ ಮಾರ್ಗದ ಮುಖ್ಯರಸ್ತೆಯಲ್ಲಿ ಸಾಗಿ ಪಟ್ಟನಾಯಕನಹಳ್ಳಿ ತಿರುವಿನ ಬಳಿ ಎಡಕ್ಕೆ ತಿರುಗಿದಾಗ 2 ಕಿ.ಮೀ. ಕ್ರಮಿಸಿದರೆ ಪಟ್ಟನಾಯಕನಹಳ್ಳಿ ಸಿಗುತ್ತದೆ. ಸುಮಾರು ಸಾವಿರ ಮನೆಗಳನ್ನು ಹೊಂದಿರುವ ಪಟ್ಟನಾಯಕನಹಳ್ಳಿ ತಾಲ್ಲೂಕಿನ ಪ್ರಮುಖ ವ್ಯಾಪಾರ ಹಾಗೂ ವಿದ್ಯಾ ಕೇಂದ್ರ. ಸರ್ಕಾರಿ ಪದವಿಪೂರ್ವ ಕಾಲೇಜು, ಸರ್ಕಾರಿ-ಖಾಸಗಿ ಪ್ರೌಢಶಾಲೆಗಳು ಇಲ್ಲಿವೆ. ಕಂಬಳಿ ನೇಕಾರರ ಸಹಕಾರ ಸಂಘ, ಕೃಷಿ ಸಹಕಾರ ಸಂಘ ಮೊದಲಾದ ಸಹಕಾರ ಸಂಘಗಳು, ವಾಣಿಜ್ಯೋದ್ಯಮಗಳು ಇಲ್ಲಿ ಸಾಕಷ್ಟು ಪ್ರಮಾಣದಲ್ಲಿವೆ. ಬೀರೇದೇವರ ಗುಡಿ, ಮೈಲಾರಲಿಂಗೇಶ್ವರ ದೇವಾಲಯ, ಸೋಮೇಶ್ವರ ದೇವಾಲಯ, ಶನಿದೇವರ ದೇವಾಲಯ ಮೊದಲಾದ ದೇವಾಲಯಗಳು ಮಸೀದಿಯೂ ಇದೆ. ಹರಿಜನ-ಗಿರಿಜನ, ಗೊಲ್ಲರು-ಕುರುಬರು, ಕುಂಚಿಟಿಗರು ಸಮಾನವಾಗಿ ಕೂಡಿ ಬದುಕುತ್ತಾರೆ. ಸಾಂಸ್ಕೃತಿಕ, ಧಾರ್ಮಿಕ ವಿಚಾರಗಳಲ್ಲಿ ಪರಸ್ಪರ ಸಹಕಾರ, ಸಂಯಮತೆಯನ್ನು ಕಾಯ್ದುಕೊಂಡು ಬರುತ್ತಿದ್ದಾರೆ. ಪಟ್ಟನಾಯಕನಹಳ್ಳಿ ಧಾರ್ಮಿಕವಾಗಿ ಭವ್ಯ ಪರಂಪರೆಯನ್ನು ಹೊಂದಿದೆ. ಶ್ರೀ ಗುರುಗುಂಡ ಬ್ರಹ್ಮೇಶ್ವರ ಮಠ ತುಮಕೂರು ಜಿಲ್ಲೆಯ ಅತ್ಯಂತ ಪ್ರಸಿದ್ಧವಾದ ಶ್ರೀಕ್ಷೇತ್ರವಾಗಿದೆ. ಶ್ರೀ ನಂಜಾವಧೂತ ಪೀಠಾಧಿಕಾರತ್ವದ ಭವ್ಯ ಪರಂಪರೆಯೂ ಇದೆ. ಪ್ರತಿವರ್ಷ ಜನವರಿ ಮೊದಲ ವಾರದಲ್ಲಿ ದನಗಳ ಭಾರೀ ಜಾತ್ರೆ ನಡೆಯುತ್ತದೆ. ದನಗಳ ಜಾತ್ರೆ ಸರಾಸರಿ ಹದಿನೈದು ದಿನಗಳ ಕಾಲ ವಿಜೃಂಭಣೆಯಿಂದ ನಡೆಯುತ್ತದೆ. ಜಾತ್ರೆಗೆ ಹಿರಿಯೂರು, ಮಡಕಸಿರಾ, ಹಿಂದೂ ಪುರ, ಮಧುಗಿರಿ, ಕೊರಟಗೆರೆ, ಗುಬ್ಬಿ, ಚಿಕ್ಕನಾಯಕನಹಳ್ಳಿ, ಚಳ್ಳಕೆರೆ ಈ ಭಾಗಗಳ ಜನಗಳು ಬಂದು ಸೇರುತ್ತವೆ. ಮಾರುವ-ಕೊಳ್ಳುವ ಅಪಾರ ಜನ ಪಟ್ಟನಾಯಕನಹಳ್ಳಿಯಲ್ಲಿ ಸೇರುತ್ತದೆ. 54 ಎಕರೆ ವಿಶಾಲ ಕಾಂಪೌಂಡ್, ಕಾಂಪೌಂಡಿನ ಸುತ್ತ ಬೆಳೆದು ನಿಂತ ಹುಣಸೆ, ಹೊಂಗೆ, ಬೇವಿನ ಮರಗಳ ಸಾಲು ಶ್ರೀಮಠಕ್ಕೆ ಹೊಂದಿಕೊಂಡಂತಿರುವ ಕೆರೆ, ನಂಜಾವಧೂತ ಮಠದ ಜಾತ್ರೆಗೆ ಪ್ರಾಕೃತಿಕ ಕೊಡುಗೆಗಳು. ಉತ್ತಮ ನೀರು ನೆರಳಿನ ಸೌಲಭ್ಯವಿರುವುದರಿಂದ ದನಗಳ ವಿನಿಮಯಕ್ಕೆ ಹೇಳಿ ಮಾಡಿಸಿದಂತಹ ವಾತಾವರಣವಿದೆ. ಜಾತ್ರೆಗೆ ಬಂದಂತಹ ಭಕ್ತಾದಿಗಳಿಗೆ ಉತ್ತಮ ಊಟದ ವ್ಯವಸ್ಥೆಯನ್ನು ಶ್ರೀಮಠ ಪ್ರಾರಂಭದಿಂದಲೂ ಮಾಡುತ್ತಾ ಬಂದಿದೆ.

ಈ ಮಠದ ಇತಿಹಾಸ ಸುಮಾರು 250 ವರ್ಷಗಳದು. ನಂಜಾವಧೂತ ಮಠಕ್ಕೆ ಸಂಬಂಧಿಸಿದಂತೆ ಈ ಭಾಗದಲ್ಲಿ ಸಾಕಷ್ಟು ಜಾನಪದ ವಾಙ್ಮಯವಿದೆ. ಪ್ರಥಮ

ಅವಧೂತರಾದ ಶ್ರೀ ನಂಜಾವಧೂತರ ಪವಾಡ ಕುರಿತು ಕಥೆಗಳೂ ಇವೆ. ಪಟ್ಟನಾಯಕನಹಳ್ಳಿಯಲ್ಲಿ ಶ್ರೀ ನಂಜಾವಧೂತ ಮಠ ಆರಂಭಗೊಂಡ ಹಿನ್ನೆಲೆ, ಆ ಸಂಬಂಧ ಜಾನಪದ ಕಥೆ ಹೀಗಿದೆ.

ಮೈಸೂರು-ಬೆಂಗಳೂರು ರಸ್ತೆಯ ಬದಿಯ ಮರವೊಂದರ ಬುಡದಲ್ಲಿ ಓರ್ವ ಯತಿ ತಪಸ್ಸಿಗೆ ಕುಳಿತರು. ಅವರು ತಪಸ್ಸಿನಲ್ಲಿಯೇ ನಿರತರಾದಾಗ ಬಹಳ ದಿನಗಳ ನಂತರ ಆ ಮರವೂ ಸೇರಿದಂತೆ ಯತಿಗಳ ಸುತ್ತಲೂ ಹುತ್ತವೊಂದು ಬೆಳೆಯಿತು. ಆ ತಪಸ್ವಿ ಹುತ್ತದೊಳಗೆ ಹಾಗೆಯೇ ಕುಳಿತರು. ಎಷ್ಟೋ ದಿನಗಳ ನಂತರ ಮೈಸೂರು-ಬೆಂಗಳೂರು ರಸ್ತೆಯನ್ನು ಮೈಸೂರು ಸಂಸ್ಥಾನದವರು ನಿರ್ಮಿಸಲು ಮುಂದಾಗಿ ರಸ್ತೆ ನಿರ್ಮಾಣದಲ್ಲಿ ತೊಡಗಿದರು. ರಸ್ತೆಗೆ ಹುತ್ತ ಅಡ್ಡ ಬಂದಿದ್ದರಿಂದ ಆ ಹುತ್ತವನ್ನು ಕೆಡಹುವುದಕ್ಕೆ ಮೊದಲು ಮಾಡಿದಾಗ ಮಾನವರೊಬ್ಬರ ಇರುವಿಕೆ ಗೊತ್ತಾಯಿತು. ಆ ಯತಿಗೆ ಸ್ವಲ್ಪವೂ ಗಾಯವಾಗದ ಹಾಗೆ ಮಣ್ಣನ್ನು ಬಿಡಿಸಿ ಮೈಸೂರು ಮಹಾರಾಜರ ಬಳಿಗೆ ಸುದ್ದಿ ಮುಟ್ಟಿಸಿದರು.

ರಾಜರು ಈ ಯತಿಯನ್ನು ತಮ್ಮ ಆಸ್ಥಾನಕ್ಕೆ ಗೌರವಾದರಗಳೊಂದಿಗೆ ಕರೆದುಕೊಂಡು ಹೋಗಿ ಉಪಚರಿಸಿದರು. 'ತಾವು ದೊರೆತಿರುವುದು ನಮ್ಮ ಭಾಗ್ಯವೆಂದೇ ಭಾವಿಸುತ್ತೇವೆ. ತಾವು ನಮ್ಮ ಅರಮನೆಯಲ್ಲಿಯೇ ಇದ್ದು ನಮಗೆ ಮಾರ್ಗದರ್ಶನ ಮಾಡಬೇಕು' ಎಂದು ಪ್ರಾರ್ಥಿಸಿದರು. ಆ ಯತಿಯು ರಾಜರ ಕೋರಿಕೆಯನ್ನು ನಯವಾಗಿ ತಿರಸ್ಕರಿಸಿ 'ನಾವು ಸನ್ಯಾಸಿಗಳು. ಯಾರ ಆಸ್ಥಾನದಲ್ಲೂ ಇರಲಾಗದು. ಅದೂ ಅಲ್ಲದೆ ನಾವು ಅವಧೂತ ಪರಂಪರೆಯವರು. ನಮ್ಮ ಸಂಪ್ರದಾಯದ ಪ್ರಕಾರ ನಾವು ಸ್ತ್ರೀಸಂಗ, ಸಂಪರ್ಕದಿಂದ ಬಹುದೂರ ಉಳಿಯಬೇಕು. ವಿರಕ್ತ ಜೀವನ ನಮ್ಮ ಬದುಕು' ಎಂದು ತಿಳಿಸಿ ಅಲ್ಲಿಂದ ಹೊರಹೋಗಲು ಬಯಸಿದರು. ಮೈಸೂರು ರಾಜರು ಇದನ್ನು ತಿರಸ್ಕರಿಸಲಿಲ್ಲ. ಬದಲಿಗೆ ಮುನಿಯಪ್ಪ ಎಂಬ ವ್ಯಕ್ತಿಯೊಬ್ಬನೊಂದಿಗೆ ಸ್ವಾಮಿಗಳನ್ನು ಕಳುಹಿಸಿದರು.

ಮೈಸೂರು ಸಂಸ್ಥಾನದಿಂದ ಹೊರಬಂದ ಆ ಯತಿಗಳು ಇಂದಿನ ಬೆಂಗಳೂರು ಜಿಲ್ಲೆಯ ದೇವನಹಳ್ಳಿ ಸಮೀಪದ ವಿಜಯಪುರಕ್ಕೆ ಬಂದರು. ಈ ವಿಜಯಪುರವೇ ಆ ಯತಿಗಳ ಮೊದಲ ನೆಲೆಯಾಯಿತು. ಮುಂದೆ ಅದೇ ಊರಿನ ನೀಲಗಿರಿಸ್ವಾಮಿ ಎಂಬ ಗೃಹಸ್ಥನು ತನ್ನ ಸಾಂಸಾರಿಕ ಜೀವನ ತ್ಯಜಿಸಿ ಅವಧೂತರ ಪರಮಶಿಷ್ಯನಾದನು. ಆತನ ನೆರವಿನೊಂದಿಗೆ ಅವಧೂತರು ವಿಜಯಪುರದಲ್ಲಿ ಶ್ರೀ ಓಂಕಾರೇಶ್ವರ ದೇವಸ್ಥಾನವನ್ನು, ಪುಟ್ಟ ಮಠವೊಂದನ್ನು ಸ್ಥಾಪಿಸಿದರು. ಈ ಮಠವೇ ಪಟ್ಟನಾಯಕನಹಳ್ಳಿಯ ನಂಜಾವಧೂತ ಮಠಕ್ಕೆ ಇಂದಿಗೂ ಮೂಲ ಮಠ. ಇದರ ಶಾಖಾಮಠ ಪಟ್ಟನಾಯಕನಹಳ್ಳಿಯ ಗುರುಗುಂಡ ಬ್ರಹ್ಮೇಶ್ವರ ಮಠ. ಅವಧೂತ ಶ್ರೀಗಳು ಕಾಲಕ್ರಮೇಣ ವಿಧಿವಶರಾದರು.

ಮುಂದೆ ನೀಲಗಿರಿಯ ಸ್ವಾಮಿಗಳು ಮಠದ ಧಾರ್ಮಿಕ ಕಾರ್ಯಕ್ರಮಗಳನ್ನು ಮುಂದುವರಿಸಿದರು. ಇವರ ಬಳಿ ಹಲವಾರು ಶಿಷ್ಯರಿದ್ದರು. ಶ್ರದ್ಧಾ ಭಕ್ತಿಗಳಿಂದ ಅವಧೂತ ಪರಂಪರೆಯಂತೆ ಧಾರ್ಮಿಕ ಕಾರ್ಯಗಳಲ್ಲಿ ತಲ್ಲೀನರಾಗಿದ್ದರು. ಒಮ್ಮೆ ಆ ಶಿಷ್ಯವರ್ಗದವರಲ್ಲಿ ನಾಲ್ವರು ಮಠದಿಂದ ಹೊರಗೆ ಬಂದು ಅವಧೂತ ಪರಂಪರೆಯನ್ನು ವಿಸ್ತರಿಸಬೇಕೆಂದು ಬಯಕೆಯಾಯಿತು. ಅದರಂತೆ ನಾಲ್ವರು ಶಿಷ್ಯರು ವಿಜಯಪುರದಿಂದ ನಾಲ್ಕು ದಿಕ್ಕುಗಳಿಗೆ ಹೊರಟರು. ಹಾಗೆ ಹೊರಟ ನಾಲ್ವರು ಶಿಷ್ಯರಲ್ಲಿ ಆಂಧ್ರದ ಕಡೆಗೆ ಹೊರಟವರು ಶ್ರೀ ನಂಜಾವಧೂತರು. ನಂದಿಬೆಟ್ಟ, ವಿಧುರಾಶ್ವತ್ಥ ಅಲ್ಲೆಲ್ಲಾ ಅಪಾರ ಶಿಷ್ಯರಾದರು. ಧಾರ್ಮಿಕ ಕಾರ್ಯಕ್ರಮಗಳನ್ನು ಮುಂದುವರಿಸಿದರು. ನಂತರ ಆಂಧ್ರದ ಕಡೆಗೆ ಪ್ರಯಾಣ ಬೆಳೆಸಿ ಅನಂತಪುರ ಜಿಲ್ಲೆಯ ಆಂಜನೇಯ, ಮಡಕಶಿರಾ ತಾಲ್ಲೂಕಿನ ಶಿವರ ಗ್ರಾಮಕ್ಕೆ ಬಂದು ನೆಲೆಸಿದರು. ಅಲ್ಲಿ ಶ್ರೀ ಆಂಜನೇಯ ದೇವಾಲಯವನ್ನು ನಿರ್ಮಿಸಿದರು. ಬಹಳ ವರ್ಷ ಅಲ್ಲಿಯೇ ನೆಲೆಸಿದರು. ನೂರಾರು ಭಕ್ತರು ಇವರ ಶಿಷ್ಯರಾದರು. ದಿನದಿಂದ ದಿನಕ್ಕೆ ಇವರ ಭಕ್ತಿ, ತಪಸ್ಸಿನ ಹಿರಿಮೆ ಪ್ರಸಿದ್ಧವಾಯಿತು. ಸೀರ್ಯಾ ಸೀಮೆಯ ಭಕ್ತರು ಶಿವರ ಪ್ರದೇಶಕ್ಕೆ ಬಂದು ಹೋಗತೊಡಗಿ ಪ್ರಸಿದ್ಧವಾಯಿತು. ಸಂಬಂಧ-ಬಾಂಧವ್ಯ ಮಧುರವಾಗತೊಡಗಿದಂತೆ ಸೀರ್ಯಾ ಸೀಮೆಯ ಪಟ್ಟನಾಯಕನಹಳ್ಳಿಗೆ ಬಂದು ಮಾರ್ಗದರ್ಶನ ಮಾಡುವಂತೆ ಕೋರಿಕೊಂಡಾಗ ಶ್ರೀ ನಂಜಾವಧೂತರು ಶಿವರದಿಂದ ಪಟ್ಟನಾಯಕನಹಳ್ಳಿಗೆ ಬಂದರು. ಹಾಗೆ ಬಂದವರು ಯಾರ ಮನೆಗೂ ಹೋಗದೆ ಕಾಮಗೊಂಡನಹಳ್ಳಿ-ಪಟ್ಟನಾಯಕನಹಳ್ಳಿ ಮಧ್ಯೆ ಒಂದು ಮರದ ಅಡಿಯಲ್ಲಿ ವಾಸಿಸತೊಡಗಿದರು. ಅಂತಹ ಸಂದರ್ಭದಲ್ಲಿ ಒಬ್ಬ ಆತ್ಮೀಯ ಶಿಷ್ಯ ನಂಜಾವಧೂತ ಸ್ವಾಮಿಗಳಿಗೆ ಊಟದ ವ್ಯವಸ್ಥೆ ಮಾಡುತ್ತಿದ್ದನು. ಅಂದರೆ ತನ್ನ ಮನೆಯಲ್ಲಿ ತಯಾರಿಸಿದ ಅಡಿಗೆಯನ್ನು ತಂದು ಕೊಡುತ್ತಿದ್ದನು. ಸ್ವಾಮೀಜಿಯವರೂ ಅದನ್ನು ಸ್ವೀಕರಿಸುತ್ತಿದ್ದರು. ನಂಜಾವಧೂತ ಸ್ವಾಮಿಗಳು ತಾವು ಇರುವ ಕಡೆ ಹೆಂಗಸರು ಸುಳಿಯಂತೆ ಎಚ್ಚರಿಕೆಯನ್ನು ಆರಂಭದಿಂದಲೂ ಪಾಲಿಸಿಕೊಂಡು ಬರುತ್ತಿದ್ದರು. ಶಿಷ್ಯರಿಗೂ ಗುರುವಿನ ಲಕ್ಷಣ, ಸ್ವಭಾವದ ಅರಿವಿತ್ತು. ಒಮ್ಮೆ ಒಂದು ಪುಟ್ಟ ಅಚಾತುರ್ಯ ನಡೆದುಹೋಯಿತು.

ನಂಜಾವಧೂತರಿಗೆ ಊಟವನ್ನು ತಂದುಕೊಡುತ್ತಿದ್ದ ವ್ಯಕ್ತಿ ಅನಿವಾರ್ಯ ಕಾರಣಗಳಿಂದ ಕೆಲಸವೊಂದರ ಮೇಲೆ ಬೇರೆ ಊರಿಗೆ ಹೋಗಬೇಕಾಗಿತ್ತು. ಅಂಥ ಸಂದರ್ಭದಲ್ಲಿ ಆ ವ್ಯಕ್ತಿ ನಂಜಾವಧೂತರಿಗೆ ಊಟವನ್ನು ತನ್ನ ಮಗಳ ಮೂಲಕ ಕಳುಹಿಸಿದನು. ಆ ಹೆಣ್ಣು ಮಗಳು ಊಟವನ್ನು ತೆಗೆದುಕೊಂಡು ನಂಜಾವಧೂತರ ಸನ್ನಿಧಿಗೆ ಬರುತ್ತಾಳೆ. ಸದಾ ಧ್ಯಾನಾವಸ್ಥೆಯಲ್ಲಿರುತ್ತಿದ್ದ ಅವಧೂತರು ಕೈ-ಕಾಲು, ರುಂಡ-ಮುಂಡ ಪ್ರತ್ಯೇಕಗೊಂಡು ರಕ್ತದ ಮಡುವಿನಲ್ಲಿ ಛಿದ್ರಛಿದ್ರವಾಗಿ ಬಿದ್ದಿರುವಂತೆ ಆ ಹುಡುಗಿಗೆ ಕಂಡುಬಂದಿತು. ಊಟ

ತಂದಿದ್ದ ಹೆಣ್ಣುಮಗಳು ಗಾಬರಿಗೊಂಡು ತನ್ನ ಮನೆಗೆ ಓಡಿಬಂದು ಸ್ವಾಮೀಜಿಯವರಿಗೆ ಉಂಟಾಗಿರುವ ಪರಿಸ್ಥಿತಿಯನ್ನು ವಿವರಿಸಿದಳು. ಆ ವ್ಯಕ್ತಿ ಗಾಬರಿಗೊಂಡು ಅವಧೂತರ ಸನ್ನಿಧಿಗೆ ಬಂದನು. ಶ್ರೀ ನಂಜಾವಧೂತರು ಅತ್ಯಂತ ಹಸನ್ಮುಖಿಗಳಾಗಿ, ಎಂದಿನಂತೆ ಧ್ಯಾನಾಸಕ್ತರಾಗಿ ಕುಳಿತಿರುವ ಚಿತ್ರ ಕಂಡುಬಂದಿತು. ತನ್ನ ತಪ್ಪಿನ ಅರಿವಾದ ಆ ಭಕ್ತ ಸ್ವಾಮೀಜಿಯವರಲ್ಲಿ ಕ್ಷಮೆ ಕೋರಿ ತಾನು ಅನ್ಯ ಕಾರ್ಯನಿಮಿತ್ತ ಪರ ಊರಿಗೆ ಹೋಗಲೇಬೇಕಾಯಿತು. ಕ್ಷಮಿಸಿ ಎಂದು ಕೇಳಿಕೊಂಡಾಗ ಸ್ವಾಮೀಜಿಯವರು ಕೋಪ-ತಾಪ, ಬೇಸರ ಕಿಂಚಿತ್ತೂ ತೋರ್ಪಡಿಸದೆ ನಗುನಗುತ್ತಲೇ ಹೀಗೆ ಹೇಳುತ್ತಾರೆ 'ನನ್ನ ಆಹಾರವನ್ನು ನಾನೇ ಸಂಪಾದಿಸಿಕೊಳ್ಳಬಲ್ಲೆನು. ಆದ್ದರಿಂದ ಇನ್ನು ಮುಂದೆ ನೀವು ನನಗೆ ಊಟವನ್ನು ತಂದುಕೊಡಬೇಕಾಗಿಲ್ಲ' ಎಂದರು. ಜೊತೆಗೆ ತಾವು ತಂಗಿದ್ದ ಜಾಗದಲ್ಲೂ ಉಳಿದುಕೊಳ್ಳಲು ಇಚ್ಛಿಸಲಿಲ್ಲ. ಮುಂದೆ ತಮ್ಮ ನೆಲೆಯನ್ನು ಬದಲಿಸಿದರು.

ತಮ್ಮ ಶಿಷ್ಯರು ನಾಲ್ಕು ದಿಕ್ಕುಗಳನ್ನು ಅನುಸರಿಸಿ ಹೊರಟವರು ಹೇಗಾದರು? ಅವರ ಬದುಕು ಹೇಗಿದೆ? ನೋಡಬೇಕೆಂಬ ಕುತೂಹಲ ವಿಜಯಪುರದ ನೀಲಗಿರಿ ಸ್ವಾಮಿಗಳಲ್ಲಿ ಉಂಟಾಯಿತು. ತಮ್ಮ ಉಳಿದ ಶಿಷ್ಯರ ಸಹಾಯದಿಂದ ಶಿಷ್ಯರನ್ನು ಹುಡುಕುತ್ತಾ ಬಂದರು. ಬಂದಾಗ ಪಟ್ಟನಾಯಕನಹಳ್ಳಿಯ ನಂಜಾವಧೂತ ಸ್ವಾಮಿಗಳೊಂದಿಗೆ ಸಂವಾದಕ್ಕಿಳಿದರು. ಆಧ್ಯಾತ್ಮವನ್ನು ಕುರಿತು ಚರ್ಚಿಸಿದರು. ಆಗ ನೀಲಗಿರಿ ಸ್ವಾಮಿಗಳು ನಂಜಾವಧೂತರಿದ್ದ ಮರದ ಮೇಲೆ ಕಾಗೆಗಳು ಕುಳಿತಿದ್ದವು. ಆ ಕಾಗೆಗಳನ್ನು ಕುರಿತು ಏನಾದರೂ ಪವಾಡ ಮಾಡು. ನಿನ್ನ ಸಾಧನೆ ತೋರು ಎಂದು ಮರದ ಮೇಲೆ ಕುಳಿತಿದ್ದ ಕಾಗೆಗಳ ಕಡೆ ನೋಡಿದಾಗ ಅವೆಲ್ಲವೂ ಕೆಳಗೆ ಬಿದ್ದು ಸತ್ತವು. ಆಗ ನೀಲಗಿರಿ ಶ್ರೀಗಳು ಸತ್ತ ಕಾಗೆಗಳನ್ನು ಪುನಃ ಬದುಕಿಸಬೇಕೆಂದು ಸೂಚಿಸಿದಾಗ ನಂಜಾವಧೂತರು ಒಂದು ಕಾಗೆಯ ಹೊರತಾಗಿ ಉಳಿದೆಲ್ಲಾ ಕಾಗೆಗಳು ಬದುಕುವ ಹಾಗೆ ಮಾಡು ಎಂದಾಗ ಹಾಗೇ ಮಾಡಿದರು. ಇದರಿಂದ ನೀಲಗಿರಿ ಶ್ರೀಗಳು ಶಿಷ್ಯನಿಗೆ ಹೀಗೆ ಹೇಳಿದರು. ನಿಮ್ಮ ಸಿದ್ಧಿ ಕಾರ್ಯ ಪೂರ್ಣ ದೊರಕಿಲ್ಲ. ಇನ್ನೂ ಪರಿಶ್ರಮ ಬೇಕೆಂದು ಮುಂದೆ ನಡೆದರು. ಅವರ ಜೊತೆಯಲ್ಲಿ ಬಂದಿದ್ದ ಕೆಲವು ಸನ್ಯಾಸಿಗಳು ಪಟ್ಟನಾಯಕನಹಳ್ಳಿಯಲ್ಲಿಯೇ ಉಳಿದರು. ಆ ಶಿಷ್ಯವರ್ಗಗಳೊಂದಿಗೆ ಕೂಡಿಕೊಂಡು ಕಟ್ಟಿದ ದೇವಸ್ಥಾನವೇ ಶ್ರೀ ನಂಜಾವಧೂತ ಮಠ. ಇಲ್ಲಿ ಓಂಕಾರೇಶ್ವರನ ಬೃಹತ್ ಶಿವಲಿಂಗವಿದೆ. ಚೌಕಾಕೃತಿಯ ಕಲ್ಲಿನಿಂದ ನಿರ್ಮಿಸಿರುವ ಸುಂದರ ದೇವಾಲಯ, ಸುಖನಾಸಿ ಪ್ರಾಂಗಣ, ಗರ್ಭಗುಡಿ ಎಲ್ಲವೂ ಸುಂದರವಾಗಿವೆ. ಶಿವಲಿಂಗ ದೇವರ ಮುಂದೆ ಬೃಹತ್ತಾದ ಬಸವೇಶ್ವರನ ವಿಗ್ರಹವಿದೆ. ನವಗ್ರಹ, ನಂದಿ, ಬ್ರಹ್ಮ ಮೊದಲಾದ ದೇವಾಲಯಗಳು, ವಿದ್ಯಾರ್ಥಿಗಳ ವಸತಿಗೃಹ, ನಂಜಾವಧೂತರ ಗದ್ದಿಗೆ, ಭೋಜನಶಾಲೆ, ಪ್ರಾಣಿ-ಪಕ್ಷಿ ಸಂರಕ್ಷಣಾ ಕೊಠಡಿಗಳೂ ಪ್ರತ್ಯೇಕವಾಗಿವೆ. ಪ್ರತಿ ಸೋಮವಾರ ವಿಶೇಷ

ಪೂಜಾ ಕಾರ್ಯ ಶ್ರಾವಣ ಸೋಮವಾರಗಳಲ್ಲಿ ಅಭಿಷೇಕ ನಿತ್ಯನಿಯಮವಾಗಿ ನಡೆಯುತ್ತಿದೆ. ತುಮಕೂರು ಜಿಲ್ಲೆಯ ಪ್ರಮುಖ ಮಠವಾಗಿ ರೂಪುಗೊಳ್ಳುತ್ತಿರು ನಂಜಾವಧೂತ ಮಠಕ್ಕೆ ಪೀಠಾಧಿಪತಿಗಳ ಪರಂಪರೆಯೂ ಇದೆ. ಈ ಪರಂಪರೆಯಲ್ಲಿ ಬಂದ ಪೀಠಾಧಿಪತಿಗಳೆಂದರೆ ನಂಜಾವಧೂತ ಸ್ವಾಮಿಗಳು. ಇವರು ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಮಠದ ಸಂಸ್ಥಾಪಕರು. ಶ್ರೀ ರಂಗಾವಧೂತ ಸ್ವಾಮಿಗಳು, ಮುದ್ದು ರಂಗಾವಧೂತ ಸ್ವಾಮಿ, ಪರಮಹಂಸ ಅವಧೂತ ಸ್ವಾಮೀಜಿ, ಗುರುಕುಮಾರ ಸ್ವಾಮಿ ಅವಧೂತರು ಹೀಗೆ ನಡೆದುಬಂದ ಪೀಠಾಧಿಪತಿಗಳ ಪರಂಪರೆಯಲ್ಲಿ ಪ್ರಸ್ತುತ ಪೀಠಾಧಿಪತಿಗಳು ಶ್ರೀ ನಂಜಾವಧೂತ ಸ್ವಾಮಿಗಳು. 1990 ರಿಂದ ಪಟ್ಟನಾಯಕನಹಳ್ಳಿಯ ಗುರುಗುಂಡ ಬ್ರಹ್ಮೇಶ್ವರ ಮಠದ ಪೀಠಾಧಿಕಾರಿಗಳಾಗಿ ಮಠಕ್ಕೆ ಹೊಸ ಆಯಾಮ ತಂದವರು. ಅಜ್ಞಾತವಾಗಿದ್ದ ಶ್ರೀಮಠವು ರಾಷ್ಟ್ರೀಯ ಮನ್ನಣೆಗೂ ಕಾರಣವಾಗಿರುವುದಲ್ಲದೆ ವಿವಿಧ ವರ್ಗದ, ಧರ್ಮದ ಜನರು ನಂಜಾವಧೂತರ ಅನುಯಾಯಿಗಳಾಗಿರುವುದಲ್ಲದೆ ಮಠದ ಭಕ್ತರ ಸಂಖ್ಯೆಯೂ ಸಾಕಷ್ಟು ಸುಧಾರಣೆ ಕಂಡಿದೆ. ವಿದ್ಯಾಶಾಲೆ, ಸಾಲುಮರ, ಸುಂದರವಾದ ರಸ್ತೆ, ನೀರಾವರಿ ವ್ಯವಸ್ಥೆ, ಮಠಕ್ಕೆ ತನ್ನದೇ ಆದ ಕಲ್ಯಾಣಮಂಟಪ, ಈ ಕಿರಿಯ ಸ್ವಾಮೀಜಿಗಳ ಹಿರಿಯ ಸಾಧನೆಯ ಸಂಕೇತಗಳು.

ಪಟ್ಟನಾಯಕನಹಳ್ಳಿ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಜಾತ್ರೆಯು ಸಿರಾ ಸೀಮೆಯ ಪ್ರಖ್ಯಾತ ಜಾತ್ರೆ. ಪ್ರತಿ ವರ್ಷ ಜನವರಿ ಮೊದಲ ವಾರದಲ್ಲಿ ನಡೆಯುತ್ತದೆ. ಹದಿನೈದು ದಿನಗಳ ಕಾಲ ನಡೆಯುವ ಈ ಜಾತ್ರೆಯಲ್ಲಿ ಮಡಿತೇರು, ಕಲ್ಲುಗಾಲಿ ತೇರು, ಆರತಿ, ಗಂಗಾಪೂಜೆ, ವಿಘ್ನೇಶ್ವರ ಉತ್ಸವ, ಕೈಲಾಸೋತ್ಸವ, ನಂದೀಶ್ವರನ ಉತ್ಸವ ಮೊದಲಾದ ಪ್ರತಿನಿತ್ಯದ ಕಾರ್ಯಕ್ರಮಗಳು ಜರುಗುತ್ತವೆ.

**ಗಂಗಾಪೂಜೆ**

ಮಠದ ಜಾತ್ರೆಯ ಮೊದಲ ಪೂಜಾಕಾರ್ಯ ಗಂಗಾಪೂಜೆಯೊಂದಿಗೆ ಆರಂಭಗೊಳ್ಳುತ್ತದೆ. ಮಠದ ಆವರಣದೊಳಗಿರುವ ಬಾವಿಯ ಬಳಿಗೆ ದೇವರನ್ನು ತಂದು ಪುಣ್ಯಜಲ ಹಾಕಿ, ಹೊಸ ವಸ್ತ್ರ, ಹಣ್ಣು-ಕಾಯಿ ಒಡೆದು ಪೂಜಿಸುತ್ತಾರೆ. ಬರಗೂರು ಶಿವಣ್ಣನವರ ನೇತೃತ್ವದಲ್ಲಿ ಕರಡಿವಾದ್ಯ, ನಂದಿಕೋಲು ಕುಣಿತ ಅಂದಿನ ವಿಶೇಷವಾಗಿರುತ್ತದೆ. ಪುಣ್ಯಸ್ನಾನವಾದ ಕೂಡಲೇ ದೇವತೆಯನ್ನು ವಾಹನದಲ್ಲಿಟ್ಟು ಮೆರವಣಿಗೆಗೆ ಸಿದ್ಧ ಮಾಡುತ್ತಾರೆ. ಈ ಕಾರ್ಯ ಸೋಮವಾರ ಏರ್ಪಡುತ್ತದೆ. ಮಠದ ಗಾಲಿ ರಥವನ್ನು ಅಂದೇ ಬಣ್ಣಬಣ್ಣದ ಬಟ್ಟೆಗಳಿಂದ, ಹೂಗಳಿಂದ ಅಲಂಕಾರಗೊಳಿಸುತ್ತಾರೆ. ನಂತರ ದೇವರನ್ನು ಅದರ ಮೇಲಿಟ್ಟು ಸ್ವಲ್ಪ ದೂರ ತೇರು ಹರಿಸಿ ಮರಳಿ ದೇವಾಲಯದಲ್ಲಿ ಬಿಜಯಂಗೈಯುತ್ತಾರೆ.

ಮಂಗಳವಾರ ವಿಘ್ನೇಶ್ವರ ಉತ್ಸವ. ರಾತ್ರಿ ಎಂಟು ಗಂಟೆಯ ಸುಮಾರಿಗೆ ಈ ಉತ್ಸವವು ಏರ್ಪಡುತ್ತದೆ. ಮರದ ಗಾಲಿಯ ರಥವನ್ನು ಅಲಂಕಾರಗೊಳಿಸುತ್ತಾರೆ. ಮಠದ ಆವರಣದಲ್ಲಿರುವ ಗಣೇಶನ ಮೂರ್ತಿಯನ್ನು ಮಂಗಳವಾದ್ಯಗಳೊಂದಿಗೆ ಅಲಂಕಾರಗೊಂಡ ರಥದಲ್ಲಿ ಕುಳ್ಳಿರಿಸಿರುತ್ತಾರೆ. ನಂತರ ಸಕಲ ಅಲಂಕಾರ ಮಂಗಳವಾದ್ಯಗಳೊಂದಿಗೆ ಮಠದಿಂದ ಅರ್ಧ ಫರ್ಲಾಂಗ್ ದೂರದಲ್ಲಿರುವ ಬಸವ ಮಂಟಪದ ತನಕ ತೇರು ಎಳೆಯಲಾಗುವುದು. ಅಲ್ಲಿ ಜನಪದ ಕಲಾ ಪ್ರದರ್ಶನಗಳೊಂದಿಗೆ ರಾತ್ರಿ ಒಂದು ಗಂಟೆಯ ಸುಮಾರಿಗೆ ದೇವರನ್ನು ಮೂಲಗುಡಿಗೆ ತಂದು ಗುಡಿ ತುಂಬಿಸಲಾಗುವುದು.

### ಹೂವಿನ ತೇರು

ಹೂವಿನ ಮೇಲೆ ನಂಜಪ್ಪನಿಗೆ ವಿಶೇಷ ಮಮಕಾರ ಎಂದೇ ಹೇಳುವ ಭಕ್ತರು ನಂಜಪ್ಪನ ತೇರಿಗೆ ಹೂ ಹಾಕಿದರೆ ತಮ್ಮ ಸಂಕಷ್ಟಗಳು ಪರಿಹಾರವಾಗುತ್ತವೆ ಎಂದು ಬಲವಾದ ನಂಬಿಕೆ ಇದೆ. ಹಾಗೆಂದೇ ನಂಜಪ್ಪ ಸ್ವಾಮಿಯ ಕಲ್ಲುಗಾಲಿ ತೇರಿಗೆ ನಂಜಪ್ಪಸ್ವಾಮಿಯನ್ನು ಕೂಡಿಸಿ, ಆಕರ್ಷಕವಾಗಿ ಅಲಂಕಾರ ಮಾಡುತ್ತಾರೆ. ರಾತ್ರಿ ಹತ್ತರ ಸುಮಾರಿಗೆ ಹರಿಯುವ ಹೂವಿನ ತೇರಿಗೆ ನೆರೆಯ ಆಂಧ್ರಪ್ರದೇಶದ ಗಡಿ ಪ್ರದೇಶಗಳಾದ ಮಡಕಸಿರಾ, ಅಮರಾಪುರ, ಹೇಮಾವತಿ, ಚಿತ್ರದುರ್ಗ ಜಿಲ್ಲೆಯ ಹೇಮಾವತಿ, ಚಳ್ಳಕೆರೆ, ಹಿರಿಯೂರು, ಧರ್ಮಪುರ ಭಾಗಗಳ ಅಪಾರ ಭಕ್ತರು ಕಿಕ್ಕಿರಿದು ಸೇರುತ್ತಾರೆ. ಒಂದು ಲಕ್ಷ ಜನಸಂಖ್ಯೆ ಸೇರಬಹುದೆಂದು ಪಟ್ಟನಾಯಕನಹಳ್ಳಿಯ ವಯೋವೃದ್ಧ ತಿಪ್ಪೇಸ್ವಾಮಿ ಹೇಳುತ್ತಾರೆ. 'ಈಗೀಗ ಜನ ಕಲೆಯುವುದು ಕಡಿಮೆ. ಹಿಂದೆಲ್ಲಾ ಮಳ್ಳಾಕಿರೆ ಮಳ್ಳು ಇಳಿತಿರಲಿಲ್ಲ. ನಂಜಪ್ಪನಿಗೆ ವರ್ಷಕ್ಕೊಂದು ದಪ ಹೂವು ಹಾಕುವುದೇ ಪುಣ್ಯ' ಎಂದು ಭಾವಪೂರ್ಣವಾಗಿ ಹೇಳುತ್ತಾರೆ. ಅಂದು ಹೂವಿನ ತೇರು ಬಸವ ಮಂಟಪದ ತನಕ ಹರಿಯುತ್ತದೆ. ನಂತರ ಹಿಂದಿರುಗಿ ದೇವಸ್ಥಾನದ ಸಮೀಪಕ್ಕೆ ಎಳೆದು ತರುತ್ತಾರೆ. ಕೀಲುಕುದುರೆ, ನಂದಿಧ್ವಜ, ಕೋಲುಮೇಳ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು ರಥೋತ್ಸವಕ್ಕೆ ವಿಶೇಷ ಮೆರುಗು ನೀಡುತ್ತವೆ. ಬೆಳಗಿನ ಜಾವ ಎರಡು ಗಂಟೆಯ ತನಕ ಜಾತ್ರೆಯ ಆಕರ್ಷಣೆ ಇರುತ್ತದೆ.

### ಕೈಲಾಸೋತ್ಸವ

ಗುರುಗುಂಡ ಬ್ರಹ್ಮೇಶ್ವರ ಮಠ ಶೈವ ಪರಂಪರೆಯ ಮಠ. ಅವಧೂತ ಪಂಥವನ್ನು ಅನುಸರಿಸಿದೆ. ಹಾಗಾಗಿ ಮಠದ ಆರಾಧ್ಯ ದೇವತೆ ಶಿವ ಅರ್ಥಾತ್ ನಂಜಪ್ಪ, ನಂಜಾವಧೂತ. ಗುರುವಾರ ಜರುಗುವ ಕೈಲಾಸೋತ್ಸವದಲ್ಲಿ ಶಿವ-ಪಾರ್ವತಿಯ ವಿಗ್ರಹವನ್ನು ರಥದ

ಮೇಲಿಟ್ಟು ರಥೋತ್ಸವ ಮಾಡುವುದು ಇದರ ಮುಖ್ಯ ಧ್ಯೇಯ. ಅಲಂಕೃತಗೊಂಡ ರಥದಲ್ಲಿ ರಾತ್ರಿ ಎಂಟು ಗಂಟೆಯ ಸುಮಾರಿಗೆ ಶಿವ-ಪಾರ್ವತಿಯನ್ನು ಹೊತ್ತ ರಥದ ಪಯಣ ಆರಂಭವಾಗುತ್ತದೆ. ಬೇರೆ ಬೇರೆ ಗ್ರಾಮಗಳ ಭಕ್ತರು ಅಂದು ಸೇರುತ್ತಾರೆ. ಜನಪದ ಕಲೆಗಳ ಪ್ರದರ್ಶನವೂ ಆಕರ್ಷಕವಾಗಿರುತ್ತದೆ.

### ನಂದಿ ಉತ್ಸವ

ಶುಕ್ರವಾರ ನಂದೀಶ್ವರನ ಉತ್ಸವವಿರುತ್ತದೆ. ನಂಜಾವಧೂತರ ಲಿಂಗದ ಮುಂಭಾಗದಲ್ಲಿ ಬೃಹದಾಕಾರದ ಕಲ್ಲಿನ ಬಸವವಿದೆ. ಶೈವ ಪಂಥಕ್ಕೆ ಅನುಗುಣವಾಗಿ ಬರುವ ಈ ಬಸವಣ್ಣನ ವಿಗ್ರಹವಲ್ಲದೆ ಕಂಚಿನ ವಿಗ್ರಹವೂ ಮಠದಲ್ಲಿದ್ದು ಇದನ್ನು ಉತ್ಸವಮೂರ್ತಿ ಎಂದೇ ಕರೆಯಲಾಗುತ್ತದೆ. ನಂದೀಶ್ವರ ಉತ್ಸವದ ದಿನ ಮರದ ಗಾಲಿಯ ರಥದ ಮೇಲೆ ಉತ್ಸವಮೂರ್ತಿ ನಂದಿಯನ್ನು ಇಟ್ಟು ತೇರು ಎಳೆಯಲಾಗುತ್ತದೆ. ಜಾತ್ರೆಗೆ ಬಂದ ಭಕ್ತರು ರಾಸುಗಳನ್ನು ಕೊಳ್ಳುವ-ಮಾರುವ ವ್ಯಾಪಾರಿಗಳು, ರಾಸುಗಳ ವಾರಸುದಾರರು ಅಪಾರ ಸಂಖ್ಯೆಯಲ್ಲಿ ಸೇರಿಕೊಂಡು ತೇರನ್ನು ಎಳೆಯಲಾಗುವುದು. ರಾತ್ರಿ ಒಂದು-ಒಂದೂವರೆ ಗಂಟೆಯ ತನಕ ರಥೋತ್ಸವದ ಸಡಗರ ಇರುತ್ತದೆ. ಜನಪದ ಕಲಾ ಪ್ರದರ್ಶನವೂ ಸೇರಿಕೊಂಡು ಕಾರ್ಯಕ್ರಮ ರಂಗಾಗುವುದರ ಜೊತೆಗೆ ಹಾಡುಗಾರಿಕೆಯೂ ಇರುತ್ತದೆ.

### ಮಡಿತೇರು

ಮೂಲ ದೇವತೆಯಾದ ಶ್ರೀ ನಂಜಾವಧೂತರ ಮೆರವಣಿಗೆ ವಿಗ್ರಹವನ್ನು ಅದೇ ತಾನೇ ಕಟ್ಟಿ ಶೃಂಗರಿಸಿದ ರಥದಲ್ಲಿ ಕುಳ್ಳಿರಿಸಿ ಮೆರವಣಿಗೆ ಮಾಡುವುದಕ್ಕೆ ಮಡಿತೇರು ಮೆರವಣಿಗೆ ಎಂದು ಕರೆಯುತ್ತಾರೆ. ಅಂದು ಎಲ್ಲ ವರ್ಗದವರೂ ಪೂಜಾ ಕಾರ್ಯದಲ್ಲಿ ಪಾಲ್ಗೊಳ್ಳುತ್ತಾರೆ. ಮಠದ ಆವರಣದಿಂದ ಒಂದು ಫರ್ಲಾಂಗ್ ದೂರದ ಬಸವಮಂಟಪದ ತನಕ ಮಡಿತೇರು ಹರಿಯುತ್ತದೆ. ಅಂದೂ ಸಹ ಸ್ಥಳೀಯ ಜಾನಪದ ಕಲೆಗಳ ಪ್ರದರ್ಶನ, ಕರಡಿ ಮೇಳಗಳ ಕುಣಿತ ವಿಶೇಷ ಆಕರ್ಷಣೆ ಹೊಂದಿರುತ್ತದೆ. ಕರಡಿ ಮೇಳ ಪ್ರದರ್ಶನ ಬರಗೂರಿನ ಕಲಾತಂಡದಿಂದ ನಡೆಯುತ್ತದೆ.

### ಕಲ್ಲುಗಾಲಿ ರಥೋತ್ಸವ

ಜಾತ್ರೆಯ ವಿಧಿ-ವಿಧಾನಗಳು ಆರಂಭವಾದ ಏಳನೇ ದಿನ ಭಾನುವಾರ ಶ್ರೀ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿಯ ಬೃಹತ್ ಕಲ್ಲುಗಾಲಿಯ ತೇರು ಹರಿಯುತ್ತದೆ. ಈ ಕಾರ್ಯಕ್ರಮದಲ್ಲಿ ಒಂದು-ಒಂದೂವರೆ ಲಕ್ಷ ಜನ ಕಲೆಯುತ್ತಾರೆ. ಅಂದು ಸಾಯಂಕಾಲ

ಆರು ಗಂಟೆಗೆ ನಡೆಯುವ ಆರತಿ ಉತ್ಸವದಲ್ಲಿ ಪಟ್ಟನಾಯಕನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಾದ ನಾದೂರು, ವೀರಗಾನಹಳ್ಳಿ, ಎಂದೊರೆ, ಕಾಡಜ್ಜನಪಾಳ್ಯ, ಕಾಮಗೊಂಡನಹಳ್ಳಿ ಹಾಗೂ ಸಮೀಪದ ಗೊಲ್ಲರಹಟ್ಟಿಗಳಿಂದ ಗುರುಗುಂಡ ಬ್ರಹ್ಮೇಶ್ವರ ಮಠಕ್ಕೆ ಆರತಿಗಳು ಬರುತ್ತವೆ. ಈ ಮಠ ಅವಧೂತ ಪರಂಪರೆಯ ಮಠವಾಗಿದ್ದು ಹೆಂಗಸರಿಗೆ ಇಲ್ಲಿ ಪ್ರವೇಶವನ್ನು ನಿಷೇಧಿಸಲಾಗಿದೆ. ಆದರೂ ವರ್ಷಕ್ಕೆ ಒಮ್ಮೆ ಹೆಂಗಸರು ಮಠಕ್ಕೆ, ದೇವಸ್ಥಾನಕ್ಕೆ ಬರುವುದಕ್ಕೆ ಆಸ್ಪದವಿದೆ. ಅಂಥ ವಿಶಿಷ್ಟ ಸಂದರ್ಭ ಈ ಆರತಿ ಉತ್ಸವದಲ್ಲಿ ನಡೆಯುತ್ತದೆ. ಆರತಿ ಹೊತ್ತ ಹೆಂಗಸರು, ಮಕ್ಕಳು ತಂಡೋಪತಂಡವಾಗಿ ಬಂದು ದೇವರಿಗೆ ತಾವೇ ಆರತಿ ಬೆಳಗಿಕೊಂಡು, ದೇವರ ಪ್ರಸಾದ ಪಡೆದು ಹಿಂದಿರುಗುತ್ತಾರೆ. ಕಡಲೇಬೀಜ, ಅಕ್ಕಿ ಮತ್ತು ಹುರಿಗಡಲೆಯನ್ನು ಪುಡಿಮಾಡಿ ಬೆಲ್ಲದ ಪಾಕದಲ್ಲಿ ಸೇರಿಸಿ ನಾಲ್ಕು ಮೂಲೆಯ ಅಚ್ಚಿನ ಆಕೃತಿಯಲ್ಲಿ ತಯಾರಿಸಿದ ಆರತಿಯ ಮೇಲೆ ಕಣಗಲೆ ಹೂಗಳನ್ನು ಹಂಚಿಕಡ್ಡಿಗೆ ಪೋಣಿಸಿ, ಅವುಗಳನ್ನು ಸಾಲಾಗಿ ಆರತಿಯ ಮೇಲೆ ಸಣ್ಣ ಹಣತೆಯನ್ನು ಹೊತ್ತಿಸಿಕೊಂಡು ಬರುತ್ತಾರೆ. ಕೆಲವರು ವೀಳ್ಯದ ಎಲೆಯನ್ನು ಆರತಿಗೆ ಅಲಂಕಾರ ಮಾಡಿಕೊಂಡು ಬರುತ್ತಾರೆ. ಮನೆಯ ಮಗಳು ಇಲ್ಲವೇ ಮನೆಯ ಸೊಸೆ ಆರತಿಯನ್ನು ಹೊರಬೇಕೆಂಬ ನಂಬಿಕೆಯು ಈ ಭಾಗದಲ್ಲಿ ಪ್ರಬಲವಾಗಿದೆ. ಬರುವಾಗ ಆರತಿಯ ಮೇಲೆ ದೀಪ ಉರಿಯುವಂತಿದ್ದರೆ ದೇವರಿಗೆ ನೈವೇದ್ಯವಾದ ಮೇಲೆ ದೀಪ ಉರಿಯುವಂತಿಲ್ಲವೆಂಬ ನಂಬಿಕೆ ಇದೆ. ಪ್ರಧಾನವಾಗಿ ಕುರುಬರು, ಕುಂಚಿಟಿಗರು, ಗೊಲ್ಲರು ಈ ಆರತಿ ಹೊರುವ ಸಂಪ್ರದಾಯ ಆರಂಭದಿಂದಲೂ ರೂಢಿಯಾಗಿದೆ.

ಕಲ್ಲುಗಾಲಿ ರಥ ರಾತ್ರಿ ಹತ್ತು ಗಂಟೆಗೆ ಮತ್ತೆ ಹರಿಯುತ್ತದೆ. ಇದು ದನಗಳ ಜಾತ್ರೆ. ಕಲೆತ ಮಧ್ಯದ ಅವಧಿ. ಜಾತ್ರೆಗೆ ರಂಗೇರಿರುತ್ತದೆ. ಅಪಾರ ಸಂಖ್ಯೆಯ ಭಕ್ತರು, ದನಗಳನ್ನು ಕೊಳ್ಳುವ, ಮಾರುವ ಜನರಿಂದ ತುಂಬಿ ಹೋಗುತ್ತದೆ. ಕಲ್ಲುಗಾಲಿ ರಥವನ್ನು ಬೆಳಗ್ಗೆಯಿಂದಲೂ ಬಾಳೆಕಂದು ಕಟ್ಟಿ, ಬಣ್ಣಬಣ್ಣದ ಬಲೂನ್‌ಗಳನ್ನು ತೇರಿನ ಸುತ್ತಲೂ ತೇರು ಮರಕ್ಕೆ ಕಟ್ಟುತ್ತಾರೆ. ತಳಿರು ತೋರಣಗಳಿಂದಲೂ ಅಲಂಕಾರ ಮಾಡುತ್ತಾರೆ. ಮಡಿವಾಳ ತಂದ ಶುಭ್ರವಾದ ಬಟ್ಟೆಯಿಂದ ತೇರಿನ ಸಂಪೂರ್ಣ ಭಾಗವನ್ನು ಬಣ್ಣ ಬಣ್ಣದ ಬಟ್ಟೆಯಿಂದ ಅಲಂಕಾರ ಮಾಡುತ್ತಾರೆ. ರಾತ್ರಿ ಹತ್ತು ಗಂಟೆಯ ಸುಮಾರಿಗೆ ಮಠದ ಅಧಿದೇವತೆ ನಂಜಪ್ಪಸ್ವಾಮಿಯ ಮೆರವಣಿಗೆ ಮೂರ್ತಿಯನ್ನು ಮಂಗಳವಾದ್ಯದ ಸಮೇತ ದೇವಸ್ಥಾನದಿಂದ ತಂದು ರಥದ ಮೇಲೆ ಕೂರಿಸಿ ಅಲಂಕಾರಗೊಳಿಸುತ್ತಾರೆ. ನಂತರ ಮಹಾಮಂಗಳಾರತಿ ನಡೆಯುತ್ತದೆ. ನಾಲ್ಕು ಕಲ್ಲು ಗಾಲಿಗಳಿಗೂ ವಿಶೇಷವಾಗಿ ತಯಾರಿಸಿದ ಅರಿಶಿನದ ಅನ್ನವನ್ನು ಎಡೆ ಇಡುತ್ತಾರೆ. ಬೂದುಕುಂಬಳಕಾಯಿಯನ್ನು

ಒಡೆದು ತೇರು ಹಗ್ಗವನ್ನು ಮುಂದೆ ಹಾಕುತ್ತಾರೆ. ದೇವರ ಹೆಸರಲ್ಲಿ ಜಯಕಾರ ಹಾಕುತ್ತಾ, ಕೈಯಲ್ಲಿ ತೇರ ಹಗ್ಗವನ್ನು ಹಿಡಿದು ಉತ್ಸಾಹ, ಕೇಕೆ, ಸಿಳ್ಳೆಗಳಿಂದ ತೇರು ಎಳೆಯುತ್ತಾರೆ. ಜನರ ಜಯಕಾರ ಮುಗಿಲು ಮುಟ್ಟುವಂತಿದ್ದು ಭಕ್ತಾದಿಗಳ ಉತ್ಸಾಹ ಜಾತಿ, ಧರ್ಮ, ಲಿಂಗ ಭೇದವಿಲ್ಲದೆ ಸ್ವಾಮಿಯ ಸೇವಾಕಾರ್ಯದಲ್ಲಿ ಕಾರ್ಯೋನ್ಮುಖರಾಗುವುದು ಜನಪದರ ಮೂಲ ಗುಣ. ತೇರೆಳೆದ ಹರ್ಷ ಮುಂದಿನ ವರ್ಷದ ತನಕ ಆಯಸ್ಸು ಗಟ್ಟಿಗಿರಲೆಂದು ಬಯಕೆ, ಪ್ರಾರ್ಥನೆ ಜನಮನದ ಆಶಯ.

ಪಟ್ಟನಾಯಕನಹಳ್ಳಿಯ ಮಠದ ಲಾಂಛನ ಲಿಂಗಮುದ್ರೆ ಹೊಂದಿದ್ದು ಸಾಮಾನ್ಯವಾಗಿ ಜಾತ್ರಾ ಮಹೋತ್ಸವಗಳ ಸಂದರ್ಬದಲ್ಲಿ ದೇವರ ಮುಂದೆ ಈ ಲಾಂಛನವನ್ನು ಹಿಡಿದುಕೊಂಡು ಬರುವ ಪರಿಪಾಠವಿದೆ. ದೇವರ ಪೂಜಾರಿಕೆ ಕುಂಚಿಟಿಗ ಸಮುದಾಯದವರದಾಗಿದ್ದು ಸಾಮಾನ್ಯವಾಗಿ ವಟುವಿನಿಂದ ಪೂಜಾಕಾರ್ಯ ನಡೆಯುತ್ತದೆ. ಜಾತ್ರೆಯ ಕಾಲದಲ್ಲಿ ಉತ್ತಮ ರಾಸುಗಳಿಗೆ ಬಹುಮಾನ ಕೊಡುವ ಸಂದರ್ಭಗಳೂ ಉಂಟು.

## ಮಾಗೋಡು ರಂಗನಾಥನ ಜಾತ್ರೆ

ಮಾಗೋಡು ಸಿರಾ ತಾಲ್ಲೂಕಿನ ಪ್ರಮುಖ ಯಾತ್ರಾಸ್ಥಳ. ಸಿರಾದಿಂದ ಮಧುಗಿರಿಗೆ ಹೋಗುವ ಮಾರ್ಗದಲ್ಲಿ ಸಿರಾದಿಂದ 12 ಕಿ.ಮೀ. ದೂರದಲ್ಲಿ ಮಾಗೋಡು ಕ್ಷೇತ್ರವಿದೆ. ಕಂಬದ ರಂಗಪ್ಪ, ಕಂಬದಯ್ಯ, ಮಾಗೋಡು ರಂಗ ಎಂಬ ಹೆಸರುಗಳಿಂದ ಸಿರಾ ತಾಲ್ಲೂಕಿನಲ್ಲಿ ಮಾತ್ರವಲ್ಲದೆ ಕರ್ನಾಟಕದ ಧಾರ್ಮಿಕ ವಲಯದಲ್ಲಿ ಪರಿಚಯವಾಗಿದೆ. ಇಲ್ಲಿನ ಆರಾಧ್ಯ ಮೂರ್ತಿ ಮಾಗೋಡು ರಂಗನಾಥ. ಮಾಗೋಡು ಕಾಡುಗೊಲ್ಲರಹಟ್ಟಿ, ಹಟ್ಟಿಯ ಒಳಗೆ ಮುಳ್ಳುಬೇಲಿಯ ಸುತ್ತ ಸುಮಾರು ಒಂದು ಎಕರೆ ವಿಸ್ತಾರ ಪ್ರದೇಶದಲ್ಲಿ ಮಾಗೋಡು ರಂಗನಾಥನ ದೇವಾಲಯವಿದೆ. ಈ ದೇವಾಲಯ ಪ್ರಾಚೀನವಾಗಿದ್ದು ಈ ದೇವಾಲಯದ ಆವರಣದ ಒಳಗೆ ಚಿತ್ರದೇವರು, ಭೂತಪ್ಪ ಹಾಗೂ ಎಲ್ಲಮ್ಮ ದೇವರುಗಳ ಪ್ರತ್ಯೇಕ ಮಂಟಪಗಳಿವೆ. ಕಾಡುಗೊಲ್ಲರ ಸಂಸ್ಕೃತಿಯಲ್ಲಿ ಚಿತ್ರದೇವರಿಗೆ ಅನನ್ಯ ಸ್ಥಾನವಿದ್ದು ಇವರ ಮೂಲ ಹಾಗೂ ಕುಲದೈವ ಚಿತ್ರದೇವರು. ಸ್ವಯಂ ಪರಶಿವನೇ ಸೃಷ್ಟಿಸಿದ ಕಾಟಂಲಿಂಗ, ಚಿತ್ರಲಿಂಗ ಹಾಗೂ ನರಸಿಂಹ ಈ ವ್ಯಕ್ತಿಗಳು ಬಾಳಿ, ಬದುಕಿದ, ಕಾಡುಗೊಲ್ಲರಿಗೆ ದೈವವಾಗಿ ರೂಪುಗೊಂಡ ಬಗೆಗೆ ಆರೇಳು ರಾತ್ರಿ ನಿರಂತರವಾಗಿ ಹಾಡಬಲ್ಲ ಅಪೂರ್ವ ಕಲಾವಿದರಿದ್ದಾರೆ. ಅನನ್ಯ ವಾಙ್ಮಯವಿದೆ. ಜುಂಜಪ್ಪ, ಎತ್ತಪ್ಪ, ಕಾಡುಗೊಲ್ಲರ ಸಾಂಸ್ಕೃತಿಕ ಐತಿಹಾಸಿಕ ವೀರರಾದರೆ ಚಿತ್ರದೇವರು ಪುರಾಣಪುರುಷರು. ಹೀಗಾಗಿ ಕಾಡುಗೊಲ್ಲರು ವಾಸಿಸುವ ನೆಲೆಗಳಲ್ಲಿ ಚಿತ್ರದೇವರ ದೇವಸ್ಥಾನ ಸಹಜವಾಗಿ ಕಂಡುಬರುವ, ಪೂರಕವಾಗಿ

ಅನ್ಯದೈವಕ್ಕೆ ವಕ್ಕಲಾದ, ಮನೆದೇವರನ್ನಾಗಿ ಆರಾಧಿಸುವ ಪರಿಪಾಠವೂ ಉಂಟು. ಈ ಪರಂಪರೆಯಲ್ಲಿಯೇ ಬರುವ ಮಾಗೋಡು ರಂಗನಾಥನ ಬಗೆಗೂ ಮೌಖಿಕ ಪರಂಪರೆಯಲ್ಲಿ ಕಾವ್ಯ, ಹಾಡು, ಕಥೆ ಹೇಳುವ ಪರಿಪಾಠವಿದೆ. ಮಾಗೋಡು ರಂಗನಾಥನನ್ನು ಕುರಿತು ಸಮಗ್ರವಾಗಿ ಕಾವ್ಯ ಹಾಡುವ ಜೋಗೇರ ದಾಸಣ್ಣ ಈ ಭಾಗದ ಅತ್ಯುತ್ತಮ ಕಲಾವಿದ. ಎಪ್ಪತ್ತೈದರ ಈ ವಯೋವೃದ್ಧ ಕಲಾವಿದ ಮಾಗೋಡು ರಂಗನಾಥನ ಸೇವೆಗಾಗಿಯೇ ತಮ್ಮ ಒಟ್ಟು ಬದುಕನ್ನು ಮೀಸಲಾಗಿಟ್ಟವರು. ಆರೇಳು ರಾತ್ರಿ ನಿರಂತರವಾಗಿ ಮಾಗೋಡು ರಂಗನಾಥನನ್ನು ಕುರಿತು ಕಾವ್ಯ ಹಾಡುತ್ತಾರೆ. ಮಾಗೋಡು ರಂಗನಾಥನನ್ನು ಹಲವು ಭಕ್ತರು ತಮ್ಮ ಕಷ್ಟ ಕಾರ್ಪಣ್ಯಗಳ ನಿವಾರಣೆಗಾಗಿ ಮನೆಗಳಿಗೆ ಕರೆದುಕೊಂಡು ಹೋಗುವ ಸಂದರ್ಭಕ್ಕೆ ಜೋಗೇರ ದಾಸಣ್ಣನ ಹಾಜರಿಯೂ ಅತಿ ಮುಖ್ಯ. ಅಷ್ಟರ ಮಟ್ಟಿಗೆ ದೇವರ ಸೇವೆಗಾಗಿಯೇ ಹೊಂದಿಕೊಂಡಿರುವ ಹಿರಿಯ ಕಲಾವಿದ. ದೇವರು ಗದ್ದಿಗೆ ಮಾಡಿದ ಕಡೆ ರಂಗನಾಥನನ್ನು ಕುರಿತು ಕಥೆ ಮಾಡುತ್ತಾರೆ, ಹಾಡು ಹೇಳುತ್ತಾರೆ. ಮಾಗೋಡು ರಂಗನಾಥನನ್ನು ಕುರಿತು ಮಾಗೋಡಿನವರೇ ಆದ ಕಂಬಣ್ಣ, ಚಿತ್ರಪ್ಪ ಹಾಗೂ ಈರಜ್ಜಿಯವರು ಕಾವ್ಯ ಹಾಡುತ್ತಾರೆ. ಇತ್ತೀಚೆಗೆ ಯಜಮಾನ್ ರಂಗಣ್ಣನವರ ಮಗ ಪಾಂಡುರಂಗ ಎಂಬ ಹತ್ತು ವರ್ಷದ ಬಾಲಕ ಮಾಗೋಡು ರಂಗನಾಥನನ್ನು ಕುರಿತು ಸೊಗಸಾಗಿ ಕಥೆ ಮಾಡುತ್ತಾರೆ. ಜನಪದ ಮೌಖಿಕ ಪರಂಪರೆಯಲ್ಲಿ ಒಂದು ಕಾವ್ಯಕ್ಕೆ ವಸ್ತುವಾಗಿರುವ ಮಾಗೋಡು ರಂಗನಾಥನ ಜಾತ್ರೆ ವರ್ಷಕ್ಕೊಮ್ಮೆ ವಿಜೃಂಭಣೆಯಿಂದ ನಡೆಯುತ್ತದೆ.

ಮಾರ್ಗಶಿರ ಮಾಸದ ಶುದ್ಧ ಪೂರ್ಣಿಮೆಯ ಮೊದಲ ಅಮಾವಾಸ್ಯೆಯ ದಿನದಂದು ಆರಂಭವಾಗಿ ಎಂಟು ದಿನಗಳ ಕಾಲ ವೈಭವದಿಂದ ಜಾತ್ರಾ ಮಹೋತ್ಸವ ನಡೆಯುತ್ತದೆ. ಸುಮಾರು ಒಂದು ಲಕ್ಷಕ್ಕೂ ಅಧಿಕ ಜನ ಸೇರುವ ಈ ಜಾತ್ರೆ ತುಮಕೂರು ಜಿಲ್ಲೆಯ ಜನಗಳ ಜಾತ್ರೆಯಲ್ಲಿಯೇ ಅತಿ ದೊಡ್ಡ ಜಾತ್ರೆ. ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳಿಂದಲೂ ಭಕ್ತರು ಈ ಜಾತ್ರೆಯಲ್ಲಿ ಭಾಗವಹಿಸುವುದು ಈ ದೇವರ ವಿಶೇಷ. ಪ್ರಧಾನವಾಗಿ ಕಾಡುಗೊಲ್ಲರ ಒಡೆತನದಲ್ಲಿದ್ದರೂ ಹರಿಜನ-ಗಿರಿಜನರೂ ಸೇರಿದಂತೆ ಸಮಾಜದ ಪ್ರತಿಯೊಂದು ವರ್ಗದ ಜನಾಂಗವೂ ಬೆರೆಯುವ ವಿಶಿಷ್ಟ ಸಂದರ್ಭವೂ ಈ ದೇವರಿಗಿದೆ. ಮಿಕ್ಕ ಸಂದರ್ಭದಲ್ಲಿ ದೇವಾಲಯವಿರುವ ಹಟ್ಟಿಯ ಒಳಗೆ ಪರಿಶಿಷ್ಟರಿಗೆ ಪ್ರವೇಶ ಧಾರ್ಮಿಕ ದೃಷ್ಟಿಯಿಂದ ನಿಷೇಧ. ಆದರೆ ಜಾತ್ರೆಯ ಸಂದರ್ಭದಲ್ಲಿ ಈ ಕಟ್ಟುಪಾಡುಗಳಿಲ್ಲ.

ಶನಿವಾರದಿಂದ ಶನಿವಾರದವರೆಗೆ 8 ದಿನಗಳ ಕಾಲ ನಡೆಯುವ ಈ ಜಾತ್ರೆ ಉತ್ಸವದಲ್ಲಿ ರಥೋತ್ಸವವೂ ಸೇರಿದಂತೆ ಈ ಕೆಳಕಂಡ ಉತ್ಸವಗಳು ಏರ್ಪಡುತ್ತವೆ.

**ಜಲದಿ:**

ಜಲದಿ ಎಂದರೆ ಗಂಗಾಸ್ನಾನದ ಕಾರ್‍ಯ. ಅಂದು ಶನಿವಾರ ಪ್ರಾತಃಕಾಲ ದೇವರನ್ನು ಮಾಗೋಡು ಕೆರೆಗೆ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗುತ್ತಾರೆ. ಮಾಗೋಡು ಕ್ಷೇತ್ರದಲ್ಲಿರುವ ರಂಗನಾಥನ ಜೊತೆಗೆ ಎಲ್ಲಮ್ಮ, ಭೂತಪ್ಪ ಹಾಗೂ ಚಿತ್ರದೇವರುಗಳನ್ನು ಜೊತೆಯಲ್ಲಿಯೇ ಗಂಗಾಸ್ನಾನಕ್ಕೆ ಕರೆದೊಯ್ಯುತ್ತಾರೆ. ಕೆರೆ ತುಂಬಿದ್ದರೂ ಆ ನೀರನ್ನು ಮುಟ್ಟುವುದಿಲ್ಲ. ಕೆರೆಯ ಅಂಗಳದಲ್ಲಿ ಪುಟ್ಟ ಚಿಲುಮೆ ತೋಡುತ್ತಾರೆ. ಇದನ್ನು ಮಜ್ಜನದ ಬಾವಿ ಎಂದು ಕರೆಯುತ್ತಾರೆ. ಎಲ್ಲಾ ದೇವರುಗಳನ್ನು ಈ ಬಾವಿಯ ದಡದಲ್ಲಿ ಕೂರಿಸಿ ಗಂಗಾಪೂಜೆಯನ್ನು ಮಾಡುತ್ತಾರೆ. ಎಲ್ಲಾ ದೇವರುಗಳನ್ನು ಕೂಡಿಸಿದ ನಂತರ ಗಂಗಾದೇವಿಗೆ ಹೊಸ ವಸ್ತ್ರವಿಟ್ಟು ಹಣ್ಣು, ಬಳೆ ಬಂಗಾರ, ಕುಂಕುಮ, ಹಸಿ ಅಕ್ಕಿ, ನೆನೆಕಡಲೆ ಫಲಾಹಾರವನ್ನು ನೈವೇದ್ಯಕ್ಕೆ ಬಳಸುತ್ತಾರೆ. ಗಂಗಾಪೂಜೆಯಾದ ನಂತರ ದೇವರ ಕುದುರೆ, ಬೆಳ್ಳಿ ಕತ್ತಿ, ಬೆಳ್ಳಿ ಕೋಲು, ಕಂಚಿನ ಕುದುರೆ, ಕಂಚಿನ ಆನೆ ಈ ಎಲ್ಲವನ್ನೂ ತೊಳೆಯುತ್ತಾರೆ. ದೇವತೆಗೆ ಗಂಗಾ ಜಲವನ್ನು ಹಾಕಿ ಮಂಗಳವಾದ್ಯದೊಂದಿಗೆ ವಿಶೇಷ ಪೂಜೆಯನ್ನು ಮಾಡಲಾಗುತ್ತದೆ. ಪೂಜಾರಿಯ ನೇತೃತ್ವದಲ್ಲಿ ಈ ಎಲ್ಲ ಕ್ರಿಯೆಗಳು ನಡೆಯುತ್ತವೆ. ಪೂಜಾರಿ ತೀರಿಕೊಂಡಾಗ ಮತ್ತೆ ಹೊಸ ಪೂಜಾರಿಗೆ ಪಟ್ಟ ಕಟ್ಟುವಾಗ ಮಾತ್ರ ಇಲ್ಲಿಂದ ಹತ್ತು ಕಿ.ಮೀ. ದೂರದ ಕಳ್ಳಂಬೆಳ್ಳದ ಕೆರೆಗೆ ಗಂಗಾಪೂಜೆಗೆ ಹೋಗುತ್ತಾರೆ. ಆದರೆ ಪ್ರತಿ ವರ್ಷ ಜಾತ್ರೆಯ ಕಾಲಕ್ಕೆ ಮಾಗೋಡಿನ ಪೂರ್ವಕ್ಕಿರುವ ಕೆರೆಯಲ್ಲಿಯೇ ಪೂಜೆಯನ್ನು ನೆರವೇರಿಸುತ್ತಾರೆ. ಜಲಧಿ ಕ್ರಿಯೆಯಿಂದ ಹಿಂತಿರುಗುವ ಕಾಲಕ್ಕೆ ನಡೆಮುಡಿಯಲ್ಲಿ ಬಂದು ಅರ್ಧ ದಾರಿಯಲ್ಲಿ ಒಂದು ಮರಿಯನ್ನು ಬಲಿ ಕೊಡಲಾಗುತ್ತದೆ.

**ಗರುಡೋತ್ಸವ:**

ಭಾನುವಾರ ಗರುಡೋತ್ಸವ ಏರ್ಪಡುತ್ತದೆ. ದೇವಾಲಯದಲ್ಲಿರುವ ಗರುಡನನ್ನು ಚಿಕ್ಕ ತೇರಿನ ಮೇಲಿಟ್ಟು ತೇರು ಎಳೆಯುತ್ತಾ ತೇರು ಬೀದಿಯಲ್ಲಿ ವಿಶೇಷ ಮೆರವಣಿಗೆ ನಡೆಯುತ್ತದೆ.

**ಹೂವಿನ ರಥೋತ್ಸವ:**

ಜಾತ್ರೆಯ ಮೂರನೇ ದಿನವಾದ ಸೋಮವಾರ ಬೃಹತ್ತಾದ ಕಲ್ಲುಗಾಲಿ ರಥೋತ್ಸವ ಏರ್ಪಡುತ್ತದೆ. ಒಂದು-ಒಂದೂವರೆ ಲಕ್ಷ ಭಕ್ತರು ಸೇರುವ ಈ ಜಾತ್ರೆಯ ದಿನ ಮಾಗೋಡು ಜನರಿಂದ ತುಂಬಿಹೋಗುತ್ತದೆ. ಬೆಳಿಗ್ಗೆ ಆರು ಗಂಟೆಯಿಂದಲೇ ತೇರಿನ ವಿಶೇಷ ಅಲಂಕಾರದ ಏರ್ಪಾಡು ನಡೆಯುತ್ತದೆ. ಅನೇಕ ಭಕ್ತರು ಅಂದು ಉಪವಾಸ ಇರುವುದೂ ಉಂಟು.

ಬೆಳಿಗ್ಗೆ ಒಂಬತ್ತು-ಹತ್ತು ಗಂಟೆಯ ಸುಮಾರಿಗೆ ಸ್ವಾಮಿಗೆ ಹೂ ಹಾಕುವ ವಿಶಿಷ್ಟ ಆಚರಣೆ ಇರುತ್ತದೆ. ಹೂ ಹಾಕಿಸುವ ಸಂಪ್ರದಾಯಕ್ಕಾಗಿಯೇ ಉಪವಾಸ ಇರುವುದೂ ಉಂಟು. ಮಕ್ಕಳ ಫಲ, ಕುರಿ-ದನಗಳಿಗೆ ಬರುವ ಕಾಯಿಲೆ ಮೊದಲಾದ ಸಂಕಷ್ಟವನ್ನು ಪಾರುಮಾಡಿದ್ದಕ್ಕಾಗಿ ಅಥವಾ ಪಾರುಮಾಡುವ ಕೃಪೆಗಾಗಿ ಈ ಹರಕೆಯನ್ನು ಒಪ್ಪಿಸಲಾಗುವುದು.

**ಮಗು ತುಲಾಭಾರ:**

ಈ ಸಂದರ್ಭದಲ್ಲಿ ಕೆಲವರು ಗಂಡುಮಗುವನ್ನು ತೂಕ ಮಾಡಿ ಆ ತೂಕಕ್ಕೆ ಹಣವನ್ನು ಹಾಕುವ ಸಂಪ್ರದಾಯವೂ ಇದೆ. ಹರಕೆ ಹೂ ಕಾರುವ ಕೆಲಸಗಳೆಲ್ಲಾ ಮುಗಿದ ಮೇಲೆ ಮಧ್ಯಾಹ್ನ ಒಂದು ಗಂಟೆಯ ವೇಳೆಗೆ ತೇರಿಗೆ ಅನ್ನದ ಬಲಿಯನ್ನು ಕೊಟ್ಟ ಮೇಲೆ, ವಿವಿಧ ಬಗೆಯ ಅನ್ನದ ಪೂಜೆ ನಡೆಯುತ್ತದೆ. ಅನ್ನವನ್ನು ತೇರಿನ ಮುಂದೆ ಹಾಕಿರುತ್ತಾರೆ. ಕೆಂಪು, ಅರಿಶಿನ ಬಣ್ಣದ ಅನ್ನ ಇದಾಗಿದ್ದು ಶಾಂತಿ ಮಾಡುವುದು ಎಂದು ಕರೆಯುತ್ತಾರೆ. ಬಲಿ ಮತ್ತು ಅನ್ನ ಪೂಜೆಯಾದ ತರುವಾಯ ಮಾಗೋಡು ರಂಗನಾಥನನ್ನು ಬ್ರಾಹ್ಮಣರು ವಿಶೇಷವಾಗಿ ಅಲಂಕಾರ ಮಾಡಿರುವ ತೂಗುಮಂಚದ ಮೇಲಿಟ್ಟು ಉಯ್ಯಾಲೋತ್ಸವವನ್ನು ನೆರವೇರಿಸುತ್ತಾರೆ. ದೇವಸ್ಥಾನದ ಎದುರಿಗೆ ಎರಡು ಕಲ್ಲು ಕಂಭ, ಅದಕ್ಕೆ ನಾಲ್ಕು ಸರಪಳಿ, ತೂಗು ಮರ ಇವೆಲ್ಲವನ್ನು ಅಲಂಕಾರಗೊಳಿಸಿ ಶೃಂಗಾರಗೊಳಿಸಿದ ರಂಗನಾಥನ ಪಲ್ಲಕ್ಕಿಯನ್ನು ಇದರ ಮೇಲಿಟ್ಟು ತೂಗುತ್ತಾರೆ. ಈ ಸಂದರ್ಭದಲ್ಲಿ ಈರಜ್ಜಿ, ಚಿತ್ತಪ್ಪ, ಜೋಗೇರ ದಾಸಣ್ಣ ಮೊದಲಾದವರು ರಂಗನಾಥನನ್ನು ಕುರಿತು ಪದ ಹೇಳುತ್ತಾರೆ. ಗದ್ದಲದ ಮಧ್ಯೆ ಇವರ ಪದವನ್ನು ಕೇಳುವವರು, ಆಲಿಸುವವರು ವಿರಳ. ಉಯ್ಯಾಲೋತ್ಸವದಿಂದ ಕಂಬದ ರಂಗನಾಥನನ್ನು ನೇರವಾಗಿ ಅಲಂಕೃತಗೊಂಡ ತೇರಿನ ಮೇಲೆ ಪ್ರತಿನಿತ್ಯ ಪೂಜಾಕಾರ್ಯ ನಡೆಸುವ ಕಾಡುಗೊಲ್ಲರಿಗೆ ಈ ಕ್ಷಣ ನಿಷಿದ್ಧ. ರಥದಲ್ಲಿನ ಸ್ವಾಮಿಯ ಪೂಜೆ ಮೊದಲಾದ ಎಲ್ಲಾ ಕಾರ್ಯಗಳೂ ಬ್ರಾಹ್ಮಣರಿಂದಲೇ ನಡೆಯುತ್ತದೆ. ಆದರೂ ರಥದ ಮುಂದೆ ಪಂಜಿನ ಸೇವೆ, ಎದೆಶೂಲ, ಮುಳ್ಳಿನ ಪಾಲಕೆಯ ಆಚರಣೆಗಳು ಆಕರ್ಷಕವಾಗಿ ನಡೆಯುತ್ತದೆ. ಉರಿಯುವ ಪಂಜನ್ನು ಹಿಡಿದು ಬೃಹತ್ತಾದ ಶಂಖವನ್ನು ಊದುವ ದಾಸಯ್ಯ ಪಂಜಿನ ದಾಸಯ್ಯ ಎಂದೇ ಕರೆಯುತ್ತಾರೆ. ಹರಿತವಾದ ದೇವರ ಬಾಕು (ತುಂಡುಗತ್ತಿ) ವಿನಿಂದ ಎದೆಯನ್ನು ಚುಚ್ಚಿಕೊಳ್ಳುವ ಚಮತ್ಕಾರ, ಪಾಲಿಕೆಯ ಮೇಲೆ ಜಾಲಿ ಹಾಗೂ ಕಾರೆಜಾತಿಯ ಚೂಪಾದ ಮುಳ್ಳುಗಳನ್ನು ತುಂಬಿ ಅದರ ಮೇಲೆ ವ್ಯಕ್ತಿಯೊಬ್ಬರು ಮಲಗುತ್ತಾರೆ. ಇದೂ ಆಕರ್ಷಕವಾಗಿರುತ್ತದೆ. ಮಧ್ಯಾಹ್ನ 1-2 ಗಂಟೆಯ ಒಳಗೆ ಮೊದಲ ತೇರು ಹರಿಯುತ್ತದೆ. ಇದನ್ನು ಮಡಿತೇರು ಎಂದೇ ಕರೆಯುತ್ತಾರೆ.

ದೇವಸ್ಥಾನದಿಂದ ರಥಬೀದಿಯಲ್ಲಿ ಸುಮಾರು ಅರ್ಧ ಫರ್ಲಾಂಗ್ ದೂರ, ಮಡಿ ತೇರು ಹರಿಯುತ್ತದೆ. ರಾತ್ರಿಯ ವೇಳೆಗೆ ತೇರು ದೂರದಲ್ಲಿಯೇ ನಿಲ್ಲುತ್ತದೆ. ಮುಳ್ಳು ಪಾಲಿಕೆಯ ಮೇಲೆ ದೇವರು ಮೈಮೇಲೆ ಬಂದ ವ್ಯಕ್ತಿ ಮಲಗಿಯೇ ಇರುತ್ತಾನೆ. ಇಂದು ಮುಳ್ಳುಪಾಲಿಕೆ ಹತ್ತುವ ವ್ಯಕ್ತಿಯ ಹೆಸರು ಕುಮಾರಪ್ಪ. ರಾತ್ರಿ ಹತ್ತು ಗಂಟೆಯ ನಂತರ ರಥವನ್ನು ದೇವಸ್ಥಾನದ ಹತ್ತಿರಕ್ಕೆ ಎಳೆದು ತರುತ್ತಾರೆ. ಇದನ್ನು ಮೈಲಿಗೆ ತೇರು ಎಂದು ಕರೆಯುತ್ತಾರೆ. ಈ ಸಂದರ್ಭದಲ್ಲಿ ರಥದ ಮೇಲೆ ಬ್ರಾಹ್ಮಣ ಪೂಜಾರಿ ಇರುವುದಿಲ್ಲ. ಮೂಲಸ್ಥಾನದಲ್ಲಿ ಪೂಜೆ ಮಾಡುತ್ತಿದ್ದ ವ್ಯಕ್ತಿ ರಥ ಹತ್ತಿ ಪೂಜೆ ಮಾಡತ್ತಿರುತ್ತಾನೆ. ರಥ ವಿಜೃಂಭಣೆಯಿಂದ ಜನಗಳ ಕೇಕೆ, ಸಿಳ್ಳು, ಹೇಳುಪದಗಳ ಮಧ್ಯರಾತ್ರಿ ಮೂರು ಗಂಟೆಯ ಸುಮಾರಿಗೆ ಮೂಲ ಗುಡಿಯನ್ನು ತಲುಪುತ್ತದೆ. ಬೆಳಗಿನಿಂದ ಸಂಜೆಯತನಕ ಉಪವಾಸವಿದ್ದವರು ಈಗ ಉಪವಾಸ ಬಿಡುವ ಶಾಸ್ತ್ರ ಮಾಡುತ್ತಾರೆ. ಕೊರೆಯುವ ಚಳಿಯಲ್ಲೂ ಸ್ನಾನ ಮಾಡಿ, ಮಡಿಯುಟ್ಟು, ದೇವವಿಗೆ ಪ್ರದಕ್ಷಿಣೆ ಹಾಕಿ, ಉಪವಾಸ ಬಿಡುತ್ತಾರೆ. ಆಗ ಅವರಿಗೆಲ್ಲ ನೈವೇದ್ಯವಾಗಿದ್ದ ಅನ್ನ ಮತ್ತಿತರ ಆಹಾರ ಪದಾರ್ಥವನ್ನು ಉಪವಾಸವಿರುವ ಭಕ್ತರಿಗೆ ಕೊಡುತ್ತಾರೆ.

**ಆಂಜನೇಯ ಮಹೋತ್ಸವ:**

ಮಂಗಳವಾರ ರಾತ್ರಿ 9-10 ಗಂಟೆಯ ಸುಮಾರಿಗೆ ಆಂಜನೇಯನ ರಥೋತ್ಸವ ಆರಂಭವಾಗುತ್ತದೆ. ಗ್ರಾಮದಲ್ಲಿರುವ ಆಂಜನೇಯ ದೇವರನ್ನು ವಿಶೇಷ ಅಲಂಕಾರ ಮಾಡಿ ಚಿಕ್ಕ ರಥದ ಮೇಲೆ ಕೂರಿಸುತ್ತಾರೆ. ನಂತರ ಅಲಂಕಾರ ಮಾಡುತ್ತಾರೆ. ಇದರ ಜೊತೆಯಲ್ಲಿ ಬೆಳ್ಳಿಕೋಲು, ಕುದುರೆಗಳನ್ನು ಮೆರವಣಿಗೆಯಲ್ಲಿ ರಥ ಎಳೆಯುವಾಗ ಮೆರೆಸುತ್ತಾರೆ. ಆಂಜನೇಯನ ರಥ ರಥಬೀದಿಯಲ್ಲಿ ಮೆರೆದು ಮತ್ತೆ ಮೂಲ ಗುಡಿಗೆ ಬಿಜಯಂಗೈಯುತ್ತದೆ. ನಂತರ ರಂಗನಾಥ, ಎಲ್ಲಮ್ಮ, ಭೂತಪ್ಪ, ಚಿತ್ರದೇವರುಗಳ ಮೆರವಣಿಗೆ ಹೊರಡುತ್ತದೆ. ರಾತ್ರಿ 12 ರ ಸುಮಾರಿಗೆ ಹೊರಡುವ ಈ ಉತ್ಸವದಲ್ಲಿ ಭೂತಪ್ಪನ ಕುದುರೆ, ಬೆಳ್ಳಿಕೋಲು, ಕಂಚಿನ ಆನೆ, ಕಂಚಿನ ಕುದುರೆಗಳನ್ನು ಹೊತ್ತ ಭಕ್ತರು ಆವೇಶದಿಂದ ಕುಣಿಯುತ್ತಾ ಮೆರವಣಿಗೆಯೊಂದಿಗೆ ತರುತ್ತಾರೆ. ರಾತ್ರಿ ಇರುಳು ಏರ್ಪಡುವ, ಊರಾಡುವ ಈ ಎಲ್ಲ ದೇವರ ಉತ್ಸವ ತುಂಬಾ ಆಕರ್ಷಕವಾಗಿರುತ್ತದೆ.

**ಮಂಡೆ ಸೇವೆ:**

ಬುಧವಾರ ಮಂಡೆ ಸೇವೆ ಇರುತ್ತದೆ. ಈ ಕಾಯಕ ಬೆಳಿಗ್ಗೆ 8 ಗಂಟೆಯಿಂದಲೇ ಆರಂಭವಾಗಿ ರಾತ್ರಿಯತನಕ ನಿರಂತರವಾಗಿ ನಡೆಯುತ್ತದೆ. ಅಪಾರ ಸಂಖ್ಯೆಯ ಭಕ್ತರು ತಮ್ಮ ತಮ್ಮ ಕಷ್ಟ ಪರಿಹಾರದ ಸಲುವಾಗಿ ತಲೆಗೂದಲನ್ನು ತೆಗೆಸುವ ಸಂಪ್ರದಾಯ

ಅನಾದಿ ಕಾಲದಿಂದಲೂ ಬಂದಿದ್ದು ಇದೇ ಸಂಪ್ರದಾಯ ಇಂದಿಗೂ ನಡೆಯುತ್ತಿದೆ. ಅಂದು ರಾತ್ರಿ ಒಂಬತ್ತು ಗಂಟೆಯ ಸುಮಾರಿಗೆ ಗ್ರಾಮಸ್ಥರೆಲ್ಲರೂ ಸೇರಿ 'ಹರಿಸೇವೆ' ಎಂಬ ವಿಶೇಷ ಆಚರಣೆಗೆ ಸಿದ್ಧತೆ ನಡೆಸುತ್ತಾರೆ. ಅಡಿಗೆಯ ಕೆಲಸಕ್ಕೆ ಎಲ್ಲರೂ ಸ್ವಯಂ ಪ್ರೇರಣೆಯಿಂದ ಭಾಗಿಯಾಗುತ್ತಾರೆ. ರಾತ್ರಿ ಹತ್ತು ಗಂಟೆಯಿಂದ ಆರಂಭಗೊಳ್ಳುವ ಅಡಿಗೆ ಕೆಲಸ ಸೂರ್ಯ ಹುಟ್ಟುವ ವೇಳೆಗೆ ಮುಗಿಯಬೇಕು ಎಂಬ ನಿಯಮವೂ ಇದೆ.

### ಹರಿಸೇವೆ

ಗುರುವಾರ ಬೆಳಿಗ್ಗೆ 8 ರಿಂದ ಆರಂಭಗೊಳ್ಳುವ ಹರಿಸೇವೆ ಸಂಜೆ 4 ಗಂಟೆಯ ತನಕ ನಿರಂತರವಾಗಿ ನಡೆಯುತ್ತದೆ. ಕಂಬದರಾಯನಿಗೆ 101 ಎಡೆಯನ್ನು ಹಾಕಲಾಗುತ್ತದೆ. ಆಗತಾನೇ ಕರೆದ ಹಾಲು ಮತ್ತು ಮೊಸರು, ಬಾಳೆಹಣ್ಣು, ಬೆಲ್ಲ ಇವುಗಳ ನೈವೇದ್ಯವನ್ನು ಅರ್ಪಿಸಲಾಗುತ್ತದೆ. ರಾತ್ರಿ ಮನರಂಜನೆಗಾಗಿ ಕೋಲಾಟ, ನಾಟಕಪ್ರದರ್ಶನ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾರೆ.

### ಜಾಡಿ ಲೆಕ್ಕಾಚಾರ

ದೇವರ ಜಾತ್ರೆಗಾಗಿ ಅಪಾರ ಸಂಖ್ಯೆಯಲ್ಲಿ ಭಕ್ತರು ಸೇರುತ್ತಾರೆ. ಹರಕೆ ರೂಪದಲ್ಲಿ ಹಣ, ಮತ್ತಿತರ ವಸ್ತುಗಳು ಸಂಗ್ರಹವಾಗುತ್ತವೆ. ಶುಕ್ರವಾರ ಜಾಡಿ ಲೆಕ್ಕಾಚಾರದ ಕಾರ್ಯಕ್ರಮವನ್ನು ಹಾಕಿಕೊಂಡು ಸಂಗ್ರಹಗೊಂಡ ಹಣಕಾಸಿನ ಸಮಗ್ರ ಲೆಕ್ಕವನ್ನು ಮಾಡುತ್ತಾರೆ. ದೇವಸ್ಥಾನದ ಹುಂಡಿಯನ್ನು ಒಡೆಯುವ ಕಾರ್ಯವೂ ಅಂದೇ ಇರುತ್ತದೆ. ದೇವಸ್ಥಾನದ ಪೂಜಾರರು, ಊರ ಗೌಡರು, ಕಟ್ಟೆಮನೆ ಯಜಮಾನರು ಇವರೆಲ್ಲರ ಸಮಕ್ಷಮದಲ್ಲಿ ದೇವರ ಹಣವನ್ನು ಎಣಿಸುವ ಕಾರ್ಯಕ್ರಮ ಇದಾಗಿರುತ್ತದೆ. ಯಾವುದೇ ಅನುಮಾನ, ಗೊಂದಲ, ತಪ್ಪು ಗ್ರಹಿಕೆಗೆ ಆಸ್ಪದವಿಲ್ಲದಂತೆ ದೇವಸ್ಥಾನಕ್ಕೆ ಬಂದ ಸಮಸ್ತ ಹರಕೆಯ ಹಣ, ವಸ್ತ್ರ ಮತ್ತಿತರೆ ಧಾನ್ಯಗಳ ಲೆಕ್ಕಾಚಾರವನ್ನು ಹಾಕಿ ಅದನ್ನು ದೇವಸ್ಥಾನದ ಖರ್ಚು-ವೆಚ್ಚಗಳಿಗೆ ಸರಿದೂಗಿಸಿಕೊಂಡು ಉಳಿಕೆ ಹಣವನ್ನು ಬ್ಯಾಂಕ್ ಮತ್ತಿತರ ಖಾತೆಗಳಲ್ಲಿ ತೊಡಗಿಸುವ ಆರೋಗ್ಯಕರ ಸಂಪ್ರದಾಯ ಬೆಳೆದುಬಂದಿದೆ. ಇದನ್ನು 'ಜಾಡಿ' ಲೆಕ್ಕಾಚಾರ ಎಂದೇ ಕರೆಯುತ್ತಾರೆ. ಕರಿಯ ಕಂಬಳಿಯ (ಜಾಡಿ) ಮೇಲೆ ಕುಳಿತು ಎದುರಿಗೆ ಹಣ ಸುರಿದು ಎಣಿಸುವ ಸಂಪ್ರದಾಯ ಇರುವುದರಿಂದ, ಇದನ್ನು ಜಾಡಿ ಲೆಕ್ಕಾಚಾರ ಎಂದೇ ಕರೆಯುವ ಪರಿಪಾಠವಿದೆ.

### ಮರು ಪೂಜೆ

ಜಾತ್ರೆಯ ಕೊನೆಯ ಉತ್ಸವ ಇದಾಗಿದ್ದು ಅಂದು ಶನಿವಾರ ಸಂಜೆ ಊರಿನ ಚಿಕ್ಕ ರಥವನ್ನು ವಿಶೇಷವಾಗಿ ಅಲಂಕಾರ ಮಾಡಲಾಗುತ್ತದೆ. ಅಲಂಕೃತಗೊಂಡ ರಥದಲ್ಲಿ ರಂಗನಾಥನನ್ನು ಇಡಲಾಗುತ್ತದೆ. ಉಳಿದ ದೇವರುಗಳಾದ ಚಿತ್ರದೇವರು, ಭೂತಪ್ಪ, ಎಲ್ಲಮ್ಮ, ಆಂಜನೇಯ ಇವರುಗಳನ್ನು ಮೆರವಣಿಗೆಯಲ್ಲಿ ಹೊತ್ತು ರಥದ ಸಮಸಮಕ್ಕೆ ನಡೆಯುತ್ತಾರೆ. ಬೆಳ್ಳಿಕೋಲು, ಗಣೆ, ಕಂಚಿನ ಕುದುರೆ, ಹರಿಗೆ, ದಾಸಪ್ಪಗಳ ಕುಣಿತ, ಹೇಳುಪದ, ಸೋಬಾನೆ ಪದ, ಹೆಂಗಸರು ಗಂಡರು ಹಾಡುತ್ತಾರೆ. ಜಾತ್ರೆಯ ಕಟ್ಟ ಕಡೆಯ ರಾತ್ರಿ ಉತ್ಸವ ಇದಾಗಿರುವುದರಿಂದ ಅಕ್ಕಪಕ್ಕದ ಗ್ರಾಮಸ್ಥರು ಅಧಿಕ ಸಂಖ್ಯೆಯಲ್ಲಿ ಸೇರುತ್ತಾರೆ. ರಾತ್ರಿಯೆಲ್ಲಾ ಉತ್ಸವ ನಡೆದು ಬೆಳಗಿನ ಜಾವ ದೇವರನ್ನು ಗುಡಿದುಂಬಿಸುತ್ತಾರೆ.

### ಜಾಡೇವು ಮರ ಇಳಿಸುವುದು

ರಥಕ್ಕೆ ಕಟ್ಟಿದ್ದ ವಿವಿಧ ಮರಗಳನ್ನು, ಕೊಂಬೆಗಳನ್ನು ಕಳಚುವ, ಜೋಪಾನ ಮಾಡುವ ಕೆಲಸ ಇದಾಗಿದ್ದು ಭಾನುವಾರ ಇಡೀ ದಿನ ಈ ಕೆಲಸ ಮಾಡುತ್ತಾರೆ. ಊರವರೆಲ್ಲರೂ ಈ ಕೆಲಸದಲ್ಲಿ ಭಾಗಿಯಾಗುತ್ತಾರೆ. ಮಾಗೋಡು ರಂಗನಾಥನ ರಥೋತ್ಸವ ಮೆರವಣಿಗೆ ಹಾಗೂ ದೇವರು ಬೇರೆ ಬೇರೆ ಊರುಗಳಿಗೆ ಹೋಗುವಾಗ ಚಾಮರ ಬೀಸುವ ಹಾಗೂ ಗರುಡ ಮತ್ತು ಆಂಜನೇಯ ಲಾಂಛನವನ್ನುಳ್ಳ ಪತಾಕೆಯನ್ನು ಹಿಡಿದ ಇಬ್ಬರು ಯುವಕರು ದೇವರ ಮುಂದೆ ನಿಂತಿರುತ್ತಾರೆ. ಈ ದೇವರ ಜಾತ್ರಾ ಉತ್ಸವದಲ್ಲಿ ಎಲ್ಲಾ ಕೆಲಸ ಕಾರ್ಯಗಳಲ್ಲಿ ತೊಡಗುವವರು ಕಾಡುಗೊಲ್ಲ ಜನಾಂಗ ಮಾತ್ರ. ತೋಟಿ, ತಳವಾರರಿಗೆ ಇಲ್ಲಿ ಗಮನ ನೀಡಿಲ್ಲ. ದರ್ಜಿ ಹಾಗೂ ಸಾದರ ಜನಾಂಗದವರ ಸಹಾಯ, ಸಲಹೆಯನ್ನು ಪಡೆಯಲಾಗುವುದು. ಕಂಬದ ರಂಗನಾಥನನ್ನು ಕುರಿತು ಡಾ.ಚಿಕ್ಕಣ್ಣ ಯಣ್ಣೆಕಟ್ಟೆ, ಕಾವ್ಯ ಹಾಗೂ ಗದ್ಯ ಕೃತಿಗಳನ್ನು ಪ್ರಕಟಿಸಿದ್ದು ಪ್ರಚಾರ ಕಾರ್ಯದಲ್ಲಿ ತುಂಬಾ ಪ್ರಯೋಜನವಾಗಿದೆ.

## ಕಳುವೋರಹಳ್ಳಿ ಜುಂಜಪ್ಪನ ಜಾತ್ರೆ

ಕಳುವೋರಹಳ್ಳಿ ಸಿರಾ ತಾಲ್ಲೂಕಿನ ಗೌಡಗೆರೆ ಹೋಬಳಿಯ ಮುನ್ನೂರು ಮನೆಗಳ ಗ್ರಾಮ, ಕಾಡುಗೊಲ್ಲರ ಪರಮ ಪವಿತ್ರ ಸ್ಥಳ. ಇಲ್ಲಿನ ಜುಂಜಪ್ಪನ ದೇವಾಲಯಕ್ಕೆ ಐತಿಹಾಸಿಕವಾಗಿಯೂ ಮಹತ್ವವಿದೆ. ಕಾಡುಗೊಲ್ಲರ ಸಾಂಸ್ಕೃತಿಕ ವೀರ ಜುಂಜಪ್ಪ ಹುಟ್ಟಿ ಬೆಳೆದು ಕೊನೆಗೆ ಐಕ್ಯವಾದ ಸ್ಥಳವೂ ಇದೇ ಕಳುವೋರಹಳ್ಳಿ.

ಕಳುವೋರಹಳ್ಳಿಯಲ್ಲಿ ಜುಂಜಪ್ಪನ ದೇವಾಲಯವಿದೆ. ಜೊತೆಗೆ ಕಳುವೋರಹಳ್ಳಿಯಿಂದ ಒಂದೂವರೆ ಕಿ.ಮೀ ದೂರದಲ್ಲಿ ಜುಂಜಪ್ಪನ ಸಮಾಧಿ ಇದೆ. ಜುಂಜಪ್ಪ ತಮ್ಮ

ಸೋದರಮಾವಂದಿರಾದ ಕಂಬೇರಗೊಲ್ಲರು ನೀಡಿದ ವಿಷದ ಅನ್ನ ತಿಂದು ಮಡಿದರೆಂದು ಜುಂಜಪ್ಪನ ಕಾವ್ಯದಲ್ಲಿ ಪ್ರಕಟವಾಗುತ್ತದೆ. ಜುಂಜಪ್ಪನ ನೆಲೆ ತುಮಕೂರು ಜಿಲ್ಲೆಯಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ. ವಿಶೇಷವಾಗಿ ಗುಬ್ಬಿ ತಾಲ್ಲೂಕಿನ ಹಾಗಲವಾಡಿ, ಚೇಳೂರು, ಸಿರಾ ತಾಲ್ಲೂಕಿನ ಬೇವಿನಹಳ್ಳಿ, ಗಡೇಕನಹಳ್ಳಿ, ಬಿಜ್ಜಂಬೆಳ್ಳ, ಚಿಕ್ಕನಾಯಕನಹಳ್ಳಿ, ಬಾಣದದೇವರಹಟ್ಟಿ, ಜುಂಜಪ್ಪನಹಲ್ಲಿ ಮೊದಲಾದ ಕಡೆ ಜುಂಜಪ್ಪನ ಜಾತ್ರೆ, ಹಾಲು ಮೀಸಲು, ಗುಡ್ಡೆಗೆ ಹಾಲು ಹಾಕುವುದು ಮೊದಲಾದ ಶಾಸ್ತ್ರಕಾರ್ಯಗಳು ನಿರಂತರವಾಗಿ, ವಿಶೇಷವಾಗಿ ನಡೆಯುತ್ತವೆ. ದೀಪಾವಳಿಯ ಸಂದರ್ಭದಲ್ಲಿ ಜಾತ್ರೆ ನಡೆಯುತ್ತದೆ.

ಜುಂಜಪ್ಪನ ಪ್ರಧಾನ ದೇವಾಲಯ ಕಳುವೋರಹಳ್ಳಿಯಲ್ಲಿದ್ದರೆ ಅಲ್ಲಿಂದ ಒಂದೂವರೆ ಕಿ.ಮೀ. ದೂರದಲ್ಲಿ ಜುಂಜಪ್ಪನ ಸಮಾಧಿ ಇದೆ. ಜುಂಜಪ್ಪನ ಸಮಾಧಿ ದೇವಾಲಯ ಇರುವ ಸ್ವಲ್ಪ ದೂರದಲ್ಲಿಯೇ ಪಾಳು ಬಿದ್ದಿರುವ ಮನೆಗಳಿದ್ದು ಅದು ಕಂಬೇರಗೊಲ್ಲರ ಹಟ್ಟಿ ಎಂದೂ ಜುಂಜಪ್ಪನಿಗೆ ಮೋಸ ಮಾಡಿದ್ದರಿಂದ ಅವರ ಮನೆಗಳು ನಾಶವಾದವೆಂದು ಇಂದಿಗೂ ಅಸ್ತಿಪಂಜರದಂತಿರುವ ಅವಶೇಷವನ್ನು ತೋರಿಸಿ ವಿವರಿಸುತ್ತಾರೆ. ಜುಂಜಪ್ಪನ ಜಾತ್ರೆ ಮರುದಿನ ವಿಜೃಂಭಣೆಯಿಂದ ನಡೆಯುತ್ತದೆ. ಮಡಿ-ಮೈಲಿಗೆಗಳಲ್ಲಿ ಅತ್ಯಂತ ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸಿಕೊಂಡು ಬಂದಿರುವ ಕಾಡುಗೊಲ್ಲರು ಅತ್ಯಂತ ನೇಮದಿಂದ ಜುಂಜಪ್ಪನ ಜಾತ್ರೆ ಮಾಡುತ್ತಾರೆ. ಕಾರ್ತಿಕ ಮಾಸದ ಅಮಾವಾಸ್ಯೆಯ ದಿನ ಜುಂಜಪ್ಪನಿಗೆ ದೀಪ ಏರುತ್ತದೆ.

**ಜಾಡೇವು ಏರಿಸುವುದು:**

ಕಳುವೋರಹಳ್ಳಿಯ ಜುಂಜಪ್ಪನ ಗುಡ್ಡೆಯ ಬಳಿ ಹಾಗೂ ಕಳುವೋರಹಳ್ಳಿಯಲ್ಲಿರುವ ಜುಂಜಪ್ಪನ ದೇವಸ್ಥಾನ ಎರಡು ಕಡೆಗಳಲ್ಲೂ ಜಾತ್ರೆಯ ಏರ್ಪಾಡು ನಡೆಯುತ್ತದೆ. ಜಾಡೇವು ಎಂದರೆ ದೇವಸ್ಥಾನದ ಎದುರಿನಲ್ಲಿ ಎತ್ತರವಾದ ಜಾಡೇವಿನ ಕಂಬವನ್ನು ನಿಲ್ಲಿಸಿ ಅದಕ್ಕೆ ಕಾವಿ ಬಣ್ಣದ ಬಾವುಟವನ್ನು ಕಟ್ಟಿ ಹಾರಿಸುತ್ತಾರೆ. ಇದನ್ನು ಜಾಡೇವು ಹಾರಿಸುವುದು ಎಂದು ಕರೆಯುತ್ತಾರೆ.

**ಗಂದಿಗೆ ಹಾಲು:**

ಹಾಲು ಮೀಸಲು ಎಂದು ಕರೆಯುವ ಈ ಶಾಸ್ತ್ರದಲ್ಲಿ ಜುಂಜಪ್ಪನಿಗೆ ಹಾಲು, ತುಪ್ಪ ತುಂಬಾ ಪ್ರಿಯವಾದ ವಸ್ತು. ಹಾಗಾಗಿ ಜುಂಜಪ್ಪಗೆ ಹಾಲು ಹಾಕುವ ವಿಶಿಷ್ಟ ಆಚರಣೆ ಇದಾಗಿದೆ. ಜಾಡೇವು ಹಾರಿದ ನಂತರ ಕುರಿಯೊಂದಕ್ಕೆ ಪರುಸಮ್ಮನ ಕೆರೆಯ ನೀರನ್ನು ತಂದು ಆ ನೀರಲ್ಲಿ ಕುರಿಯ ಮೊಲೆಯನ್ನು ತೊಳೆದು ಅದರ ಸಗಣಿಯಿಂದ ನೆನೆಸಿ ಕುರಿ

ಅಥವಾ ಮೇಕೆಯ ಮೊಲೆಗೆ ಮೆತ್ತುತ್ತಾರೆ. ಆ ಸಗಣಿ ನಿಧಾನವಾಗಿ ಒಣಗಿ ಮೊಲೆಯಲ್ಲಿ ಮೆತ್ತಿಕೊಂಡಿರುವುದರಿಂದ ಮರಿಗಳಿಗೆ ಹಾಲು ಕುಡಿಯಲು ಅಸಾಧ್ಯವಾಗುತ್ತದೆ. ಹೀಗೆ ಮೀಸಲಿಟ್ಟ ಹಾಲನ್ನು ಕರೆದು ಅದನ್ನು ಪ್ರತ್ಯೇಕವಾಗಿ ತೆಗೆದಿಟ್ಟು ಕಾಯಿಸಿ, ಹೆಪ್ಪು ಮಾಡಿ ಮೊಸರಿಂದ ಬೆಣ್ಣೆ ತೆಗೆದು ತುಪ್ಪ ಮಾಡಿ ಅದನ್ನು ಶೇಖರಿಸುತ್ತಾರೆ.

**ದೀಪ ಏರುವುದು:**

ಗಂದಿಗೆ ಹಾಕಿದ ಕುರಿಯ ಅಥವಾ ಮೇಕೆಯ ಹಾಲಿನಿಂದ ತಯಾರಿಸಿದ ತುಪ್ಪವನ್ನು ದೇವಸ್ಥಾನದ ಮುಂಭಾಗದಲ್ಲಿ ಆರೇಳು ಅಡಿಗಳಷ್ಟು ಎತ್ತರವಾಗಿರುವ 3-4 ಅಡಿಯಷ್ಟು ಸುತ್ತಳತೆಯ ಹಿತ್ತಾಳೆಯ ದೀಪದ ಕಂಬಕ್ಕೆ ಎಣ್ಣೆ, ಬತ್ತಿ ಹಾಕುತ್ತಾರೆ. ಭಕ್ತಾದಿಗಳು ಜಾತ್ರೆಗೆ ಬರುವಾಗ ತಂದ ಹಣ್ಣು-ಕಾಯಿಗಳನ್ನು ದೇವರಿಗೆ ನೈವೇದ್ಯ ಮಾಡಿ ಮಹಾಮಂಗಳಾರತಿಯ ನಂತರ ಭಕ್ತರು ತಂದ ಮೀಸಲು ತುಪ್ಪವನ್ನು ಆ ದೀಪಕ್ಕೆ ಹಾಕಿ ದೀಪವನ್ನು ಹತ್ತಿಸುತ್ತಾರೆ. ಕಾಡುಗೊಲ್ಲರಲ್ಲಿ ಜುಂಜಪ್ಪನಿಗೆ ದೀಪ ಏರಿದ ಮೇಲೆ ಮನೆಯಲ್ಲಿ ಮಾಂಸದ ಅಡಿಗೆ ಸೂತಕ ಆಗದಂತೆ ನೋಡಿಕೊಳ್ಳಬೇಕೆಂಬ ನಂಬಿಕೆ ಇದೆ.

**ಪುಣ್ಯಸ್ನಾನ:**

ದೇವರಿಗೆ ಪುಣ್ಯಾವರ್ತನೆ ಅಥವಾ ಗಂಗಾಸ್ನಾನ ಎಂದು ಕರೆಯುವ ಈ ಶಾಸ್ತ್ರದಲ್ಲಿ ಹಿಂದೆ ಜುಂಜಪ್ಪನನ್ನು ಪರುಸವ್ವನ ಕೆರೆಗೆ ಸ್ನಾನಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಕಳುವೋರಹಳ್ಳಿಗೂ ಪರುಸವ್ವನಕಟ್ಟೆಗೂ 40 ಕಿ.ಮೀ ದೂರವಿರುವುದರಿಂದ ಅಂದು ಜುಂಜ್ಜಪ ದೇವಸ್ಥಾನಕ್ಕೆ ಹತ್ತಿರವಿರುವ ಕೆರೆ ಅಥವಾ ಹಳ್ಳದಲ್ಲಿ ಚಿಲುಮೆಯನ್ನು ತೋಡಿ ವಾದ್ಯ ಸಮೇತ ದೇವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಪುಣ್ಯಸ್ನಾನ ಮಾಡಿಸುತ್ತಾರೆ. ಇದನ್ನು ದೇವರು ಹೊಳೆ ತೆಗೆಯುವುದು ಎಂದು ಕರೆಯುತ್ತಾರೆ.

**ದೊಡ್ಡ ದೀಪಾವಳಿ ಪರೀಕ್ಷೆ:**

ಇಂದು ಜುಂಜಪ್ಪ, ಚಿತ್ರದೇವರು, ತಿಮ್ಮಪ್ಪ, ಬೇವಿನಹಳ್ಳಿ ಕರಿಯಮ್ಮ, ಪುರಲೇಹಳ್ಳಿ ಭೂತಪ್ಪ ಎಲ್ಲ ದೇವರೂ ಸೇರುತ್ತವೆ. ಎಲ್ಲಾ ದೇವರುಗಳಿಗೆ ಅಟ್ಟಣಿಗೆಯ ಮೇಲೆ ಅಲಂಕಾರ ಮಾಡಿ ನಾಲ್ಕು ಜನ ಹೊತ್ತು ಮೆರವಣಿಗೆ ಮಾಡುತ್ತಾರೆ. ಇತ್ತೀಚೆಗೆ ದೇವರನ್ನು ಚಂದ್ರಮಂಡಲ ವಾಹನ ಕಟ್ಟಿ ಟ್ರ್ಯಾಕ್ಟರ್ ಮೇಲೆ ಕೂರಿಸಿ ಮೆರವಣಿಗೆ ಮಾಡುತ್ತಾರೆ. ಈ ವಾಹನ ಕಳುವೋರಹಳ್ಳಿಯಿಂದ ಹೊರಟು ಜುಂಜಪ್ಪನಗುಡ್ಡೆಯ ತನಕ ಬರುತ್ತದೆ.

**ದೇವರ ಗದ್ದಿಗೆ:**

ಒಂದು ವಾರ ಕಾಲ ದೇವರನ್ನು ಜುಂಜಪ್ಪನ ಮೂಲ ಗದ್ದಿಗೆಯಾದ ಜುಂಜಪ್ಪನ ಗುಡ್ಡೆಯ ಬಳಿ ಗದ್ದಿಗೆ ಮಾಡುತ್ತಾರೆ. ಮಜ್ಜನದ ಬಾವಿಯಿಂದ ನೀರು ತಂದು ನಿತ್ಯವೂ ಅಭಿಷೇಕವಾಗುತ್ತದೆ.

**ಮೆರವಣಿಗೆ ಹೊರಡಿಸುವುದು:**

ಭಕ್ತರು ತಮ್ಮ ಕಷ್ಟ ಪರಿಹಾರಕ್ಕಾಗಿ ಮಾಡಿಕೊಂಡ ಹರಕೆಯನ್ನು ತೀರಿಸುವ ಸಲುವಾಗಿ ದಿನಕ್ಕೆ ಒಬ್ಬರು ಅಥವಾ ಮೂರು-ನಾಲ್ಕು ಮೆರವಣಿಗೆಯನ್ನು ದೇವಸ್ಥಾನದ ಬಳಿ ಹೊರಡಿಸುತ್ತಾರೆ. ವಾರಗಳ ಕಾಲವೂ ಸಂಜೆ ಜುಂಜಪ್ಪನ ಗುಡ್ಡೆಯ ಬಳಿ ವಿಶೇಷ ವಾಹನಸೇವೆ ನಡೆಯುತ್ತದೆ. ಆಗ ದೇವರು ಮೆರವಣಿಗೆ ಹೊರಡುತ್ತದೆ ಎಂದು ಕರೆಯುತ್ತಾರೆ.

**ನಂಬಿಕೆ:**

ಜುಂಜಪ್ಪನು ಹಾವು, ಚೇಳು, ಮಂಡರಗಪ್ಪೆ ಕಡಿದಾಗ, ಮನೆಯಲ್ಲಿ ಕಾಣಿಸಿಕೊಂಡಾಗ ಪರಿಹಾರಕ್ಕಾಗಿ ಹರಕೆ ಹೊರುತ್ತಾರೆ. ಜೊತೆಗೆ ಹಸು, ಕುರಿ-ಮೇಕೆಗಳಿಗೆ ರೋಗ ಹತ್ತಿದರೆ, ಕಾಲುಬಾಯಿ, ಗೆರಸಲು ಆದರೆ, ಹರಳು ಗಿಡಕ್ಕೆ ಹುಳ ಬಿದ್ದರೆ ಪರಿಹಾರಕ್ಕಾಗಿ ಹರಕೆ ಹೊರುವರು. ಇಂಥ ಸಂದರ್ಭದಲ್ಲಿ ಬೆಳ್ಳಿಯ ಚೇಳು, ಹಾವು ಮಾಡಿಸಿಕೊಂಡು ಬಂದು ಜುಂಜಪ್ಪನ ಡಬ್ಬಿಗೆ ಹಾಕುವರು. ಕೆಲವರು ಹರಳು ತಂದು ಸುರಿಯುತ್ತಾರೆ. ಪೂಜೆಯ ಕಾರ್ಯದಿಂದ ಮೊದಲುಗೊಂಡು ದೇವರಿಗೆ ಸಂಬಂಧಿಸಿದ ಪ್ರತಿಯೊಂದು ಕಾರ್ಯವೂ ಕಾಡುಗೊಲ್ಲ ಜನಾಂಗದವರಿಂದ ಜರುಗುತ್ತದೆ. ಹರಿಜನ-ಗಿರಿಜನರೂ ಸೇರಿದಂತೆ ಬ್ರಾಹ್ಮಣರು, ಕುರುಬರು, ಕುಂಚಿಟಿಗರು ಮೊದಲಾದ ಜನಾಂಗದವರು ಈ ದೇವರಿಗೆ ಒಕ್ಕಲಿದ್ದಾರೆ. ಜುಂಜಪ್ಪನ ಜಾತ್ರೆಗೆ 10-15 ಸಾವಿರ ಜನ ಸೇರುತ್ತಾರೆ. ಅಂಗಡಿ, ಹೋಟೆಲ್ ಸೇರುತ್ತವೆ. ಕೋಲುಪದ, ಹರೆವಾದನ, ಕಹಳೆ, ಸೋಮನಕುಣಿತ, ನಂದಿಧ್ವಜ, ಗಣೆವಾದ್ಯ, ಗಣೆಪದ, ಕುರಿ ಕರೆಯುವುದು ಮೊದಲಾದ ಮನರಂಜನೆ ಜಾತ್ರೆಯ ಸಂದರ್ಭದಲ್ಲಿ ಏರ್ಪಡುತ್ತವೆ.

## ಗಿಡಗನಹಳ್ಳಿ ರಂಗನಾಥನ ಜಾತ್ರೆ

ಸಿರಾ ತಾಲ್ಲೂಕು ಗಿಡಗನಹಳ್ಳಿ ತಾಲ್ಲೂಕು ಕೇಂದ್ರದಿಂದ 15 ಕಿ.ಮೀ. ದೂರದಲ್ಲಿದೆ. ಇಲ್ಲಿ ರಂಗನಾಥನ ಜಾತ್ರೆ ಪ್ರತಿ ವರ್ಷ ಚೈತ್ರಮಾಸದಲ್ಲಿ 10 ದಿನಗಳ ಕಾಲ ನಡೆಯುತ್ತದೆ.

**ಮೊದಲ ದಿನ ಗಂಗಾಪೂಜೆ:** ಶ್ರೀ ರಂಗನಾಥದೇವರು ಹೊಳೆಗೆ ಹೊರಡುವುದು. ಸಮೀಪದ ಮದಲೂರು ಕೆರೆಗೆ ಹೋಗುತ್ತದೆ.

**ಧವನೋತ್ಸವ:** ಹೂವು ಹಾಗೂ ಧವನದಿಂದ ರಂಗನಾಥಸ್ವಾಮಿಯನ್ನು ಅಲಂಕಾರ ಮಾಡಿ ಊರ ಬೀದಿಗಳಲ್ಲಿ ಉತ್ಸವ ಮಾಡುತ್ತಾರೆ. ಇದರ ಉಸ್ತುವಾರಿಯನ್ನು ಗಿಡಗನಹಳ್ಳಿಯ ಗೋವಿಂದಗೌಡರು ವಹಿಸುತ್ತಾರೆ.

**ದೊಡ್ಡ ತೇರು**: ಕಲ್ಲುಗಾಲಿಯ ಹೂವಿನ ತೇರನ್ನು ಎಳೆಯಲಾಗುತ್ತದೆ. ಇದರ ಉಸ್ತುವಾರಿಯನ್ನು ಸಾಹುಕಾರ ಕರೇಗೌಡ ಮತ್ತು ಮಕ್ಕಳು ವಹಿಸುತ್ತಾರೆ. ತೇರು ಹರಿಯುವಾಗ 10 ಸಾವಿರ ಜನ ಸೇರುತ್ತಾರೆ.

**ಆನೆ ಉತ್ಸವ**: ಚಿಕ್ಕ ತೇರಿಗೆ ಆನೆಯ ಅಲಂಕಾರ ಮಾಡಿ ಅದರಲ್ಲಿ ರಂಗನಾಥನನ್ನು ಕೂರಿಸಿ ತೇರು ಎಳೆಯಲಾಗುವುದು.

**ಕುದುರೆ ಉತ್ಸವ**: ರಂಗನಾಥನನ್ನು ಬೆಳ್ಳಿ ಕುದುರೆಯ ಮೇಲೆ ಕೂರಿಸಿ ಮೆರವಣಿಗೆ ಮಾಡಿಸುತ್ತಾರೆ. ನಾಲ್ಕು ಜನ ದೇವರನ್ನು ಅಡ್ಡೆಯಲ್ಲಿ ಹೊರುತ್ತಾರೆ.

**ಕರಿಯಮ್ಮನನ್ನು ಹೊರಡಿಸುವುದು**: ರಂಗನಾಥನ ತಂಗಿ ಎಂದೇ ಕರೆಯಲ್ಪಡುವ ಕರಿಯಮ್ಮ ದೇವಿಯ ಜಾತ್ರೆಯನ್ನು ಕೊನೆಯ ದಿನ ಏರ್ಪಡಿಸುತ್ತಾರೆ. ಜಾತ್ರೆ ರಂಗನಾಥನ ಜಾತ್ರೆಯ ಕೊನೆಯ ದಿನವಿದ್ದು ಇದಕ್ಕೂ ಬಾನ (ಆರತಿ) ಕೋಣ ಬಲಿ ಹಾಗೂ ಹಗಲು ಪರಿಷೆಯ ಕಾಲಕ್ಕೆ ಗಾವು ಸಿಗಿಯುತ್ತಾರೆ. ಬೆಳಗಿನ ಜಾವ ಭಕ್ತರು ಹರಕೆಯ ರೂಪದಲ್ಲಿ ಕುರಿ, ಕೋಳಿ ಬಲಿ ನೀಡುತ್ತಾರೆ.

**ವಾದ್ಯಗಳ ಲೆಕ್ಕ**: ಕರಾರುವಕ್ಕಾಗಿ ಹೊರಟ ಅರೆ ಬಡಿಯುವವರು 10 ಜನ ಮತ್ತು ಕಹಳೆ ಬಳಗದವರು 10 ಜನ ಇರಲೇಬೇಕು. 2 ನಗಾರಿಗಳನ್ನು ಬಸವನ ಮೇಲೆ ಹಾಕಿ ಬಡಿಯುತ್ತಾರೆ. 2 ಸೋಮಗಳು, 2 ಭೂತಪ್ಪಗಳಿವೆ. ಇವುಗಳನ್ನು ರಾತ್ರಿ, ಹಗಲು ಪರಿಷೆಯಲ್ಲಿ ಕುಣಿಸುತ್ತಾರೆ. ಭೂತ ಹಾಗೂ ಸೋಮಗಳ ಮುಂದೆ ಮರಿ ಕಡಿಯುತ್ತಾರೆ. ಛತ್ರಿ, ಚಾಮರ ಮತ್ತು ಬಿಲ್ಲು ಹಿಡಿದಿರು ತ್ತಾರೆ. ಪೂಜಾರಿಗಳು ಒಕ್ಕಲಿಗರು, ಗೊಲ್ಲರು, ಪರಿಶಿಷ್ಟ ಜಾತಿ ವರ್ಗದವರೂ ಸಹ ಭಾಗಿಯಾಗುತ್ತಾರೆ.

## ರಂಗಾಪುರದ ಮರಡಿ ರಂಗನಾಥನ ಜಾತ್ರೆ

ಸಿರಾ ತಾಲ್ಲೂಕಿನ ಪ್ರಮುಖ ಯಾತ್ರಾಸ್ಥಳ ಸಿರಾ-ಬುಕ್ಕಾಪಟ್ಟಣ ರಸ್ತೆಯಲ್ಲಿ ರಂಗನಾಥಪುರದ ಗುಡ್ಡದ ಮೇಲಿದೆ. ಸಾಲಿಗ್ರಾಮ ಶಿಲೆಯ ಶಯನ ರೂಪದ ಭವ್ಯ

ರಂಗನಾಥನ ಮೂರ್ತಿ ಆಕರ್ಷಕವಾಗಿದೆ. ಪ್ರತಿವರ್ಷ ಚೈತ್ರ ಮಾಸದಲ್ಲಿ ಜನಗಳ ಜಾತ್ರೆ ನಡೆಯುತ್ತದೆ. ಶ್ರೀವೈಷ್ಣವ ಜನಾಂಗದವರು ಅರ್ಚಕರು. ಇಲ್ಲಿರುವ ಭೂತಪ್ಪ ಕುರಿ-ಕೋಳಿ ಬಯಸುತ್ತದೆ. ರಂಗನಾಥ ಸಸ್ಯಾಹಾರಿ. ಇಲ್ಲಿಗೆ ಸಮೀಪದ ಪರಸವ್ವನ ಕೆರೆ ಕಾಡುಗೊಲ್ಲರ ಪವಿತ್ರ ಸ್ಥಳ. ಜುಂಜಪ್ಪ, ಚಿತ್ರದೇವರು ಮೊದಲಾದ ದೇವತೆಗಳಿಗೆ ಇಲ್ಲಿ ಪುಣ್ಯಸ್ನಾನವಾಗುತ್ತದೆ. ಮುಸಲ್ಮಾನರ ಧಾಳಿಯಿಂದ ತಪ್ಪಿಸಿಕೊಳ್ಳಲು ಜುಂಜಪ್ಪ ಈ ಕೆರೆಯಲ್ಲಿ ಅಡಗಿದ್ದನೆಂಬ ಐತಿಹ್ಯವಿದೆ.

**ಸಾಕ್ಷಿಹಳ್ಳಿ ಮಣ್ಣೆಮ್ಮನ ಜಾತ್ರೆ:**

ಸಾಕ್ಷಿಹಳ್ಳಿ ಸಿರಾ ತಾಲ್ಲೂಕಿನ ಬುಕ್ಕಾಪಟ್ಟಣ ಹೋಬಳಿಗೆ ಸೇರಿದ ಒಂದು ಪುಟ್ಟ ಗ್ರಾಮ. ಮಣ್ಣಮ್ಮ ಇಲ್ಲಿನ ಗ್ರಾಮದೇವತೆ. ಪ್ರತಿ ವರ್ಷ ಮೇ ತಿಂಗಳಲ್ಲಿ ಒಂದು ವಾರದ ಕಾಲ ಬೃಹತ್ ಜಾತ್ರೆ ನಡೆಯುತ್ತದೆ. ಏಳೂರ ದೇವತೆಯಾದ ಮಣ್ಣಮ್ಮ, ಪಾತರಾಜ ಇಲ್ಲಿನ ಆಕರ್ಷಣೆ.

**ಮೊದಲ ದಿನ ಗಂಗಾಸ್ನಾನ:** ಪಕ್ಕದ ಕುರೆಹಳ್ಳಿ ಕೆರೆಯಲ್ಲಿ ದೇವತೆ ಮಜ್ಜನಕ್ಕೆ ದಯಮಾಡಿಸುತ್ತದೆ.

**ಮಡಿಲಕ್ಕಿ ಯಾತ್ರೆ:** ಪಕ್ಕದ ಊರುಗಳಿಗೆ ದೇವತೆ ಮಡಿಲಕ್ಕಿಗೆ ಹೋಗುತ್ತದೆ.

**ಬಾನ**: ದೇವತೆಗೆ ಸುತ್ತೇಳು ಹಳ್ಳಿಗಳಿಂದ ಆರತಿ ಬರುತ್ತದೆ. ರಾತ್ರಿ ಜನಗಳ ಬೃಹತ್ ಜಾತ್ರೆಯು ಕಲೆಯುತ್ತದೆ. ಆ ದಿನ ಕೋಣ ಬಲಿ, ಬೆಳಿಗ್ಗೆ ಕುರಿ-ಮೇಕೆ ಬಲಿಯೂ ನಡೆಯುತ್ತದೆ.

**ಅಗ್ನಿಕೊಂಡ**: ಶುಕ್ರವಾರ ಪ್ರಾತಃಕಾಲ ಅಗ್ನಿಕೊಂಡದ ಸೇವಾಕಾರ್ಯ ಇರುತ್ತದೆ.

**ಶನಿವಾರ:** ರಥೋತ್ಸವ ಕಾರ್ಯಕ್ರಮ

**ನಂಬಿಕೆ:** ಗಾಳಿ ಬಿಡಿಸುವುದು, ಮಾಟ-ಮಂತ್ರ, ದೂಳು ತೋರಿದ ದೋಷ ಪರಿಹಾರ ಎಂದು ನಂಬಲಾಗಿದೆ.

**ಮರೆ ಹಾಕುವುದು**: ದೇವತೆಗೆ ಸೋಮ-ಪಾತರಾಜಗಳಿದ್ದು ಗಾಳಿ ಸೋಂಕಿನವರಿಗೆ ಮರೆಹಾಕಲು ಇವುಗಳ ಸಹಾಯ ಪಡೆಯುವರು. ನಾಯಕರು, ಕುಂಚಿಟಿಗರು ಜಾತ್ರೆಯ ಪೂರ್ಣ ಹೊಣೆಗಾರಿಕೆ.

**ಬೇವಿನಹಳ್ಳಿ ಕರಿಯಮ್ಮ**: ಶಿರಾ ತಾಲ್ಲೂಕಿನ ಬೇವಿನಹಳ್ಳಿ ಕಾಡುಗೊಲ್ಲರ ಪ್ರಮುಖ ಸ್ಥಳ. ಈ ಜನಾಂಗದ ಕಟ್ಟೆಮನೆಯೂ ಇಲ್ಲಿದೆ. ಕಾಡುಗೊಲ್ಲ ಸಾಂಸ್ಕೃತಿಕ ವೀರ ಜುಂಜಪ್ಪನ

ದೇವಸ್ಥಾನವೂ ಇದೆ. ಈ ಭಾಗದಲ್ಲಿ ದೇವರ ಬಸವಗಳು ಸತ್ತರೆ ಈ ಊರಿನಲ್ಲಿಯೇ ಸಮಾಧಿ ಮಾಡಬೇಕೆಂಬ ಬಲವಾದ ನಂಬಿಕೆ ಇದೆ. ಬೇವಿನಹಳ್ಳಿ ಕರಿಯಮ್ಮ ಇಲ್ಲಿನ ಗ್ರಾಮದೇವತೆ. ಪ್ರತಿ ವರ್ಷ ಡಿಸೆಂಬರ್ ತಿಂಗಳಲ್ಲಿ ಒಂದು ವಾರ ಜಾತ್ರೆ ನಡೆಯುತ್ತದೆ. ಜುಂಜಪ್ಪನಿಗೆ ಶತ್ರುಕಾಟ ಅಧಿಕವಾದಾಗ ಅವರ ಪರಿಹಾರಕ್ಕಾಗಿ ಸ್ವತಃ ಜುಂಜಪ್ಪನೇ ಬೇವಿನಹಳ್ಳಿ ಕರಿಯಮ್ಮ ಹಾಗೂ ಪುರಲೇಹಳ್ಳಿ ಭೂತಪ್ಪ ಇವರನ್ನು ಸೃಷ್ಟಿಸಿದ ಎಂಬ ನಂಬಿಕೆ ಜನಪದರಲ್ಲಿ ಬಹಳವಾಗಿದೆ. ಜುಂಜಪ್ಪನ ಇಚ್ಛೆಯಂತೆಯೇ ಇಲ್ಲಿ ಪ್ರಾಣಿ ಬಲಿ ಕೊಡಲಾಗುತ್ತದೆ.

ಒಂದು ವಾರ ನಡೆಯುವ ಬೇವಿನಹಳ್ಳಿ ಕರಿಯಮ್ಮನ ಜಾತ್ರೆಯಲ್ಲಿ ಮಡೆ, ಮಜ್ಜನಸೇವೆ, ಮಡಿಲಕ್ಕಿ, ಗಾವುಸೇವೆ, ಬಲಿ, ಹಗಲು ಪರಿಷೆ, ಬಲಿ ಸಾಗಾಕುವುದು, ಊರಾಡುವುದು, ಧೂಳ ಮೆರವಣಿಗೆ ಮೊದಲಾದ ಆಚರಣೆಗಳು ನಡೆಯುತ್ತವೆ.

ಕಾಡುಗೊಲ್ಲರು-ಕುರುಬರು ಸಮಾನವಾಗಿ ಈ ಆಚರಣೆಯಲ್ಲಿ ಭಾಗಿಯಾಗಿ 2-4 ಸಾವಿರದ ತನಕ ಜನ ಸೇರುತ್ತಾರೆ. ಹಾವು-ಚೇಳು ಕಾಟವೂ ಸೇರಿದಂತೆ ಮಾಟ-ಮಂತ್ರ, ಕುರಿಗೆ ಸಂಬಂಧವಾದ ಹಲವಾರು ಕಾಯಿಲೆಗಳು ವಾಸಿಯಾಗುತ್ತವೆಂಬ ನಂಬಿಕೆ ಬಲವಾಗಿದೆ.

## ಗಂಡಿಹಳ್ಳಿ ಮಠದ ಮೊಹರಂ ಜಾತ್ರೆ

ಗಂಡಿಹಳ್ಳಿ ಮಠ ಸಿರಾ ತಾಲ್ಲೂಕಿನ ಪ್ರಮುಖ ಹಿಂದೂ-ಮುಸ್ಲಿಂ ಭಾವೈಕ್ಯತಾ ಸ್ಥಳ. ಸಿರಾದಿಂದ 20 ಕಿ.ಮೀ. ದೂರದಲ್ಲಿರುವ ಗಂಡಿಹಳ್ಳಿ ಮಠ ಸಿರಾ-ಅಮರಾಪುರ ರಸ್ತೆಯಲ್ಲಿದೆ. ಸುಮಾರು 500 ವರ್ಷಗಳ ಇತಿಹಾಸ ಹೊಂದಿರುವ ಇಲ್ಲಿನ ದೇವಸ್ಥಾನದ ಬಗೆಗೆ ದೆವ್ವ-ಭೂತ, ಪ್ರೇತ, ಮಾಟ-ಮಂತ್ರಗಳಿಗೆ ಪರಿಹಾರವಾಗಿ ಭಕ್ತರ ಸಂಕಷ್ಟ ಪರಿಹಾರವಾಗುತ್ತದೆಂಬ ಬಲವಾದ ನಂಬಿಕೆಯಿದೆ. ಹಾಗಾಗಿಯೇ ತುಮಕೂರು ಜಿಲ್ಲೆಯ ಜೊತೆಗೆ ಆಂಧ್ರದ ಮಡಕಸಿರಾ, ಹಿಂದೂಪುರ, ಅನಂತಪುರ ಭಾಗಗಳ ಭಕ್ತರೂ ನಡೆದುಕೊಳ್ಳುತ್ತಾರೆ.

ಗಂಡಿಹಳ್ಳಿ ಮಠದ ಹೆಸರು ಕೇಳಿದಾಕ್ಷಣ ಇದೊಂದು ಹಿಂದೂ ದೇವಾಲಯ ಎಂಬ ಕಲ್ಪನೆ ಮೂಡಬಹುದು. ಆದರೆ ಇಲ್ಲಿನ ದೇವರು ಮುಸ್ಲಿಂ ಪರಂಪರೆಯ ಬುಡನ್‌ದರ್ಗಾ. ಮುಸ್ಲಿಂ ಸಂಪ್ರದಾಯದ ಪ್ರಕಾರ ಮಸೀದಿಗೆ ವಿಶಾಲವಾದ ದೇಗುಲ ನಿರ್ಮಿಸಿದ್ದಾರೆ. ಮುಸ್ಲಿಂ ಸಮಾಧಿಯ ಆಕೃತಿಯಲ್ಲಿರುವ ದರ್ಗಾಕ್ಕೆ ಮುಸ್ಲಿಂ ರೀತಿಯ ಪೂಜಾಕಾರ್ಯ ನಡೆಯುತ್ತದೆ. ಮುಸ್ಲಿಂ ದೇವರಿಗೆ ಹಿಂದೂ ಪೂಜಾರಿ ಇದೇ ದೇವರ ವಿಶೇಷತೆ. ಕಾಡುಗೊಲ್ಲರು ಈ ದೇವಸ್ಥಾನದ ಪ್ರಧಾನ ಅರ್ಚಕರು. ಪ್ರತಿದಿನ ಪೂಜಾಕಾರ್ಯ, ಸಕ್ಕರೆ

ಓದಿಸುವುದು, ಗಂಧದ ಸೇವೆ, ನಮಾಜು ತಪ್ಪದೇ ನಡೆಯುತ್ತದೆ. ಪ್ರತಿ ಗುರುವಾರ ವಿಶೇಷ ಪೂಜೆ. ತೆಂಗಿನಕಾಯಿ ಒಡೆಯುವುದಿಲ್ಲ. ಪೂಜೆ ಮಾಡುವ ಕಾಡುಗೊಲ್ಲರ ಆಚಾರ-ವಿಚಾರಗಳು ಹೆಚ್ಚು ಕಡಿಮೆ ಮುಸ್ಲಿಂ ಸಂಪ್ರದಾಯದಂತೆ ನಡೆಯುತ್ತದೆ. ಹಂದಿಯ ಹೆಸರೂ ಇವರಿಗೆ ನಿಷೇಧ. ಹಲಾಲ್ ಮಾಡದೆ ಮಾಂಸ ಸೇರುವುದಿಲ್ಲ. ಅದೇ ರೀತಿ ಜಾತಿಯ ಯಾರ ಮನೆಯ ದೇವರ ಕಾರ್ಯದಲ್ಲೂ ಇವರು ಭಾಗವಹಿಸುವುದಿಲ್ಲ.

ಈ ದೇವರ ಅಸ್ತಿತ್ವದ ಬಗ್ಗೆ ಜನರ ನಂಬಿಕೆ ಹೀಗಿದೆ. ತಲೆತಿರುಗ ರಂಗಪ್ಪದೇವರು ಬರುವ ರಂಗಪ್ಪ, ಹೆರಿಗಾಳಪ್ಪ ಎಂಬ ಮೂವರು ಸೋದರರು ಕುರಿ ಮೇಯಿಸುತ್ತಿದ್ದರು. ಒಮ್ಮೆ ಹೆರಿಗಾಳಜ್ಜ ಕುರಿ ಬಿಟ್ಟು ದೇಶಾಂತರ ಹೊರಟನು. ಹೀಗೆ ಹೋದವನು ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್‌ಗಿರಿ ಸೇರಿದನು. ಅಲ್ಲಿನ ಬಾವಿಯಲ್ಲಿ ಸ್ನಾನ ಮಾಡುವಾಗ ಒಂದು ಬೆಣಚುಕಲ್ಲು ಕಂಬಳಿ ಸೇರಿತು. ಅದು ಕೆಳಗೆ ಇಳಿಯಲೇ ಇಲ್ಲ. ನೀನು ತಿರುಗಿ ಎಲ್ಲಿ ಸ್ನಾನ ಮಾಡುವೆಯೋ ಅಲ್ಲಿಯೇ ಉಳಿಯುವುದಾಗಿ ಹೇಳಿತು. ಹೆರಿಗಾಳಜ್ಜ ತಿರುಗಿ ಊರ ಕಡೆ ಬಂದನು. ಈಗ ಗಂಡಿಹಳ್ಳಿ ಮಠ ಇರುವ ಜಾಗ ಹಿಂದೆ ತೋಪಾಗಿತ್ತು. ಹೆರಿಗಾಳಜ್ಜ ಅಲ್ಲಿಗೆ ಬಂದನು. ಅಲ್ಲಿನ ಹುತ್ತಕ್ಕೆ ಕೈಹಾಕಿದಾಗ ಹಸ್ತದ ಆಕೃತಿಯಲ್ಲಿ ವಿಗ್ರಹ, ನವಿಲುಗರಿ, ಕುಚ್ಚ ದೊರೆತವು. ಹೆರಿಗಾಳಜ್ಜ ಅವುಗಳನ್ನು ಅಲ್ಲಿಯೇ ಪೂಜಿಸಿದನು. ದೇವರು ಈ ಹಿಂದೆಯೇ ಹೇಳಿದ್ದ ರೀತಿಯಲ್ಲಿ ಹೆರಿಗಾಳಜ್ಜ ಇರುವ ಕಡೆ ದೇವರು ಇರುವುದಾಗಿ ತಿಳಿದು ಆತನೂ ಅಲ್ಲಿಯೇ ನೆಲೆಸಿದನು. ಅದೇ ಸ್ಮಾರಕವಾಗಿ ಬುಡನ್ ಶಾವಳಿಯಾಗಿ ಪೂಜೆಗೆ ಅರ್ಹವಾಯಿತು. ಅದನ್ನು ದತ್ತಾತ್ರೇಯ ದರ್ಗಾ, ಪೀಠ, ಗದ್ದಿಗೆ ಎಂತಲೂ ಕರೆಯುತ್ತಾರೆ. ಹೆರಿಗಾಳಜ್ಜ ಬಾಬಾಬುಜನ್‌ಗಿರಿಗೆ ಬಂದಾಗ ಆತನ ಜೊತೆಯಲ್ಲಿಯೇ ಬಂದಿದ್ದ ಕೆಂಚರಾಯರೂ ಅಲ್ಲಿಯೇ ನೆಲೆಸಿ ಕಾಯಸ್ಥನಾದನು. ಆ ಹೆಸರಿನಲ್ಲಿಯೇ ದರ್ಗಾಕ್ಕೆ ಸ್ವಲ್ಪ ದೂರದಲ್ಲಿ ಕೆಂಚರಾಯನ ಗುಡಿ ಇದೆ. ಕೆಂಚರಾಯನಿಗೆ ಹಿಂದೂ ಸಂಪ್ರದಾಯದಂತೆ ಪೂಜೆ ನಡೆಯುತ್ತದೆ, ಪ್ರಾಣಿ ಬಲಿ ನಡೆಯುತ್ತದೆ. ಪ್ರಾಣಿ ಬಲಿ ಕೊಡುವಾಗ ಹಲಾಲ್ ಮಾದರಿಯಲ್ಲಿ ಬಲಿ ಕೊಡಲಾಗುತ್ತದೆ.

ಸಾಮಾನ್ಯ ಮಸೀದಿಯಾಗಿದ್ದ ಈ ಬುಡನ್ ಶಾವಳಿ ದೇವಸ್ಥಾನದ ರೂಪ ಪಡೆದ ಬಗೆಗೂ ದಂತಕಥೆಯಿದೆ. ಒಮ್ಮೆ ರಾಜ್ಯದ ದಂಡು ಈ ದೇವಸ್ಥಾನದ ಮಾರ್ಗವಾಗಿ ಹೊರಟಿತು. ದಳಪತಿ ವಿಜಯಕ್ಕಾಗಿ ಈ ದೇವರಲ್ಲಿ ಪ್ರಾರ್ಥಿಸಿದನು. ಘೋರ ಯುದ್ಧವೂ ನಡೆಯಿತು. ಯುದ್ಧದಲ್ಲಿ ದಳಪತಿಗೆ ಜಯವಾಯಿತು. ಹಿಂತಿರುಗಿ ಬರುವಾಗ ಆತ ಯುದ್ಧಕ್ಕೆ ಬಳಸಿದ ಕತ್ತಿ, ಗುರಾಣಿ, ಕಠಾರಿ, ಮಚ್ಚು, ಕೊಡಲಿ ಮೊದಲಾದ ಎಲ್ಲ ಆಯುಧಗಳನ್ನು ದಳಪತಿ ಧರಿಸಿದ್ದ ಎಲ್ಲ ಒಡವೆಗಳನ್ನು ದೇವರಿಗೆ ಅರ್ಪಿಸಿದನು. ಜೊತೆಗೆ ಬೃಹತ್ತಾದ

ದರ್ಗಾವನ್ನು ನಿರ್ಮಿಸಿದನು.

ಕೊನೆಗೆ ದೇವಸ್ಥಾನದ ವಿಷಯದಲ್ಲಿ ಗೊಲ್ಲರಿಗೂ ಮುಸ್ಲಿಮರಿಗೂ ಸಣ್ಣ ಜಗಳವಾಯಿತು. ಆಗ ಹೆರಿಗಾಳಜ್ಜ ಒಂದು ಪವಾಡ ಮಾಡಿದನು. ದೇವರು ಗೊಲ್ಲರಿಗೆ ಸೇರಬೇಕೆಂಬ ಬಯಕೆ ಇದ್ದರೆ ನಾವು ಮಾಡುವ ಅಡಿಗೆಯನ್ನು ಊಟ ಮಾಡಬೇಕು ಎಂದರು. ಅದರಂತೆ ಗೊಲ್ಲರು ಒಪ್ಪಿದರು. ಮುಸಲ್ಮಾನರು ಒಂದು ಹಸುವಿನ ಮಣಕವನ್ನು ಕಡಿದು ಊಟದ ವ್ಯವಸ್ಥೆ ಮಾಡಿದರು. ಗೊಲ್ಲರು ಊಟಕ್ಕೆ ಬಂದರು, ಊಟ ಬಡಿಸಿದರು. ಊಟಕ್ಕೆ ಬಡಿಸಿದ ಹಸುವಿನ ಮಾಂಸ ಹೂವಿನ ಮೊಗ್ಗುಗಳಂತೆ ಕಂಡವು. ಇದನ್ನು ಒಪ್ಪಿದ ಗೊಲ್ಲರು ಮುಸ್ಲಿಂ ಪರಂಪರೆಯನ್ನು ಒಪ್ಪಿ ಅದರಂತೆ ಆಚಾರ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದರೆಂಬ ನಂಬಿಕೆ ಇಂದಿಗೂ ಬಲವಾಗಿದೆ.

ಪ್ರತಿವರ್ಷ ಮೊಹರಂ ಹಬ್ಬದ ದಿನ ಗಂಡಿಹಳ್ಳಿ ಬುಡನ್ ದೇವರ ಜಾತ್ರೆ ನಡೆಯುತ್ತದೆ.

**ಅಲಾಬಿ ಮಾಡುವುದು:** ಮೊಹರಂ ಹಬ್ಬದ ಸಂದರ್ಭದಲ್ಲಿ ಅಮಾವಾಸ್ಯೆಯ ಚಂದ್ರನನ್ನು ನೋಡಿ ಗುದ್ದಲಿ ಹಾಕುತ್ತಾರೆ. ದೇವಸ್ಥಾನದ ಮುಂಭಾಗದಲ್ಲಿರುವ ಅಗ್ನಿಕುಂಡವನ್ನು ತೋಡುವುದು. ಇದನ್ನು ಗುದ್ದಲಿ ಹಾಕುವುದು ಎಂದು ಕರೆಯುತ್ತಾರೆ. ಈ ವರ್ಷದಲ್ಲಿ ಕೊಂಡದಲ್ಲಿರುವ ಬೆಂಕಿಯ ಕೆಂಡವನ್ನು ಒಂದು ಮಣ್ಣಿನ ಕುಡಿಕೆಯಲ್ಲಿ ತುಂಬಿ, ಕೊನೆಯಲ್ಲಿ ಅಗ್ನಿಕೊಂಡದಲ್ಲಿ ಹೂಳುತ್ತಾರೆ. ಅಂದು ತುಂಬಿದ್ದ ಬೆಂಕಿಯ ಕೆಂಡ ವರ್ಷಪೂರ್ತಿ ಹಾಗೆಯೇ ಬಿಸಿ ಬಿಸಿಯಾಗಿ ಇರುತ್ತದೆಂಬ ಬಲವಾದ ನಂಬಿಕೆ. ಜೊತೆಗೆ ಅದೇ ಬೆಂಕಿಯಿಂದ ಮತ್ತೆ ಅಗ್ನಿಕೊಂಡವನ್ನು ಹತ್ತಿಸಲಾಗುವುದು.

ಪ್ರಾತಃಕಾಲ 6 ಗಂಟೆಗೆ ಅಗ್ನಿಕೊಂಡ ಏರ್ಪಡುತ್ತದೆ. ಮೊದಲು ಕುದುರೆ, ನಂತರ ಕಳಸ, ನಂತರ ಆಯುಧ ಹಿಡಿದ ಕೆಲವರು ಕೆಂಡದ ಮೇಲೆ ಹೋಗುತ್ತಾರೆ. ನಂತರ ಭಕ್ತರು ಕೆಂಡದ ಮೇಲೆ ನಡೆದುಕೊಂಡು ಹೋಗುತ್ತಾರೆ.

**ಜಾಡೇವು ಸೇವೆ**: ದೇವಸ್ಥಾನದಲ್ಲಿ ಎರಡು ದೊಡ್ಡ ದೊಡ್ಡ ಬಾವುಟಗಳಿದ್ದು ಒಂದು ಬಾವುಟವನ್ನು ದೇವಸ್ಥಾನದ ಮೇಲಿನ ದರ್ಗಾಕ್ಕೂ ಮತ್ತೊಂದನ್ನು ದತ್ತಾತ್ರೇಯ ಎಂಬ ಹೆಸರಿನಲ್ಲಿ ದೇವಸ್ಥಾನದ ಹೊರಭಾಗದಲ್ಲಿನ ಎತ್ತರವಾದ ಸ್ತಂಭಕ್ಕೂ ಕಟ್ಟಲಾಗುತ್ತದೆ. ಇವುಗಳನ್ನು ಅಮ್ಮಾಜಿ ಜಾಡೇವು, ದತ್ತಾತ್ರೇಯ ಜಾಡೇವು (ಮಬೂಬು ಸುಬಾನಿ) ಎಂದು ಕರೆಯಲಾಗುವುದು. ಅಂದು ಮಠದಲ್ಲಿರುವ ಎರಡು ಬೃಹತ್ತಾದ ನಗಾರಿಯನ್ನು ಬಾರಿಸಲಾಗುವುದು.

**ಊರಾಡುವುದು**: ಜಾಂಡೇವು ಕಾರ್ಯ ಆರಂಭದ ಸೂಚನೆ ನಂತರ ಮಠದಲ್ಲಿರುವ ಪಟ್ಟದ ಕುದುರೆಯನ್ನು ತೊಳೆದು ಅಲಂಕೃತ ಗೊಳಿಸಿ ಊರಾಡುವುದಕ್ಕೆ ಪ್ರಾರಂಭಿಸುತ್ತಾರೆ. ಜೊತೆಗೆ ಕವುಸೇನ ಬಾವುಸೇನ ಎಂಬ ಹೆಸರಿನ ಫಕೀರರ ಕುಣಿತ, ದೇವರನ್ನು ಹೊಗಳುವುದು, ದೇವರ ಚರಿತ್ರೆ ಹಾಡುವುದು ಇವೆಲ್ಲ ನಿರಂತರವಾಗಿ ನಡೆಯುತ್ತದೆ.

**ಪಾನಕ ಏರಿಸುವುದು**: ಭಕ್ತರು ದೇವರಿಗೆ ಬೆಲ್ಲ, ಕಡಲೇಪುರಿ, ಸಕ್ಕರೆ ಓದಿಸುವ, ಹಣ ಕೊಡುವ ಸಂಪ್ರದಾಯವಿದೆ. ಇದನ್ನು ಪಾನಕ ಏರಿಸುವುದು ಎಂದು ಕರೆಯಲಾಗುವುದು.

**ಒಂಬತ್ತನೇ ಸರಗತ್ತು**: ಕೊಂಡದ ದಿನ ಸುತ್ತಲ ಗ್ರಾಮಗಳ ಆರತಿಯ ಸೇವೆ ನಡೆಯುತ್ತದೆ. ಕುದುರೆ ಮುಂದೆ ಆರತಿ ಹಿಂದೆ. ಬಾಣಗೆರೆ, ವರದಾಪುರ ಮೊದಲಾದ ಗ್ರಾಮಗಳಿಂದ ಆರತಿ ಬರುತ್ತವೆ. ರಾತ್ರಿಯಲ್ಲಿ ಉತ್ಸವ, ಉರುಸು ನಡೆಯುತ್ತದೆ. ಜನಪದ ಕಲಾ ಪ್ರದರ್ಶನ, ಕೋಲಾಟ ಈ ಸಂದರ್ಭದಲ್ಲಿ ಸಾಮಾನ್ಯ ಕಾರ್ಯಕ್ರಮ. ನಂದಿಕೋಲು, ಸೋಮನ ಕುಣಿತ, ತಮಟೆ ಕುಣಿತ, ಹೇಳುಪದ ಹಾಡುವುದು, ಚಿತ್ರದೇವರು, ಕಾಟಂದೇವರ ಪದ ಹಾಡುವುದು, ಹೆಣ್ಣುಮಕ್ಕಳು ಮಂಗಳಾರತಿ ಪದ ಹಾಡುವುದು, ವಿಶೇಷವಾಗಿ ಗೊಲ್ಲರ ಹೆಣ್ಣುಮಕ್ಕಳು ಹಾಡುವುದು, ಬಂದಂತಹ ಗಣ್ಯರಿಗೆ ಮಂಗಳಾರತಿ ಮಾಡುವುದು, ಅವರಿಂದ ಹಣ ಸಂಗ್ರಹಿಸುವುದು ಈ ಸಂದರ್ಭದ ವಿಶೇಷವಾಗಿರುತ್ತದೆ. ಬೆಳಗಿನ ಜಾವ 6 ಗಂಟೆಗೆ ಕೊಂಡ ಸೇವೆ ಇರುತ್ತದೆ.

**ಓದುವ ಶಾಸ್ತ್ರ**: ಕೊಂಡ ಹಾಯುವ ಮೊದಲು ದೊಡ್ಡ ಬಾಣಗೆರೆಯ ಮುಜಾವರ್ ಕಳಂದರ್ ಎಂಬುವವರು ಕುರಾನ್ ಪಠಿಸುವ ಶಾಸ್ತ್ರ ಮಾಡುತ್ತಾರೆ. ಇದನ್ನು ಪಾತೆಹ ಎಂದು ಕರೆಯಲಾಗುವುದು.

**ನಗಾರಿ ಬಡಿಯುವುದು**: ಅಂದು ನಗಾರಿಯನ್ನು ಉಲ್ಟಾಸೀದ ಎಂದು ಬಾರಿಸಲಾಗುತ್ತದೆ. ಅಂದರೆ ಬಲಗೈಯಿಂದ ಎಡಭಾಗಕ್ಕೂ, ಎಡಗೈಯಿಂದ ಬಲಭಾಗಕ್ಕೂ ಕೋಲಿನಿಂದ ನಗಾರಿ ಬಡಿಯಲಾಗುತ್ತದೆ.

**ಪಂಜಿನ ಸೇವೆ**: ಕಾಡುಗೊಲ್ಲರ ಪರಂಪರೆಯ ವಂಶ ಅಂದು ಪಂಜಿನ ಸೇವೆಯನ್ನು ಮಾಡುತ್ತಾರೆ. ಭಕ್ತರು ಕೊಂಡಕ್ಕೆ ತಂಗಟೆ ಸೊಪ್ಪು, ಕಡಲೇಕಾಯಿ, ಹರಳು ಹಾಕುತ್ತಾರೆ.

**ಕೆಂಚರಾಯನಿಗೆ ಬಲಿ**: ಅಂದು ಪೂಜಾರಿ ಚಿಕ್ಕರಂಗಪ್ಪನ ಮನೆಯಿಂದ ಹಲಾಲ್ ಮಾಡಿದ ಕೋಳಿಸಾರು ಹಾಗೂ ಒಂದು ಪಾವು ಅಕ್ಕಿಯಿಂದ ತಯಾರಿಸಿದ ಅನ್ನವನ್ನು ಎಡೆಯಾಗಿ ಅರ್ಪಿಸಲಾಗುತ್ತದೆ. ಬಂದಂತಹ ಭಕ್ತರು ಹಿಂದೂ ಸಂಪ್ರದಾಯದಂತೆ ತೆಂಗಿನಕಾಯಿ ಒಡೆಯುತ್ತಾರೆ. ಕಡ್ಡಿ ಕರ್ಪೂರ ಹಚ್ಚಿ ಪೂಜೆ ಮಾಡಿಸಿಕೊಂಡು ಹೋಗುತ್ತಾರೆ.

**ಕೆಂಡ ತುಂಬುವುದು**: ಅಗ್ನಿಕೊಂಡ ಮುಗಿದ ಮೇಲೆ ಒಂದು ಸಣ್ಣ ಮಣ್ಣಿನ ಗಡಿಗೆಯಲ್ಲಿ ಬೆಂಕಿ ಕೆಂಡವನ್ನು ತುಂಬಿ ಅದನ್ನು ಅಗ್ನಿಕೊಂಡ ಗುಂಡಿಯಲ್ಲಿ ಇಟ್ಟು ನಂತರ ಮಣ್ಣು ಮುಚ್ಚಲಾಗುತ್ತದೆ. ಹೀಗೆ ಮುಚ್ಚಿದ ಕುಡಿಕೆಯ ಬೆಂಕಿ ವರ್ಷಪೂರ್ತಿ ಹಾಗೆಯೇ ಇರುತ್ತದೆಂಬ ನಂಬಿಕೆ ಬಲವಾಗಿದೆ.

ಈ ಜಾತ್ರೆಯು ಮೂರು ದಿನ ನಡೆಯುತ್ತದೆ. ಕನಿಷ್ಠ ಐದರಿಂದ ಏಳುಸಾವಿರ ಜನ ಸೇರುತ್ತಾರೆ. ಕಾಡುಗೊಲ್ಲರು, ಮುಸ್ಲಿಮರು ಪೂಜೆಯ, ಜಾತ್ರೆಯ ಸಿದ್ಧತೆ, ವ್ಯವಸ್ಥೆ ನೋಡಿಕೊಳ್ಳುತ್ತಾರೆ. ದೆವ್ವ, ಭೂತ, ಪ್ರೇತಗಳಿಗೆ ಗಂಡುದೇವರಾಗಿದ್ದು ಈ ದೇವರ ಕೊಂಡ ತುಳಿದರೆ, ಸಕ್ಕರೆ ಓದಿಸಿದರೆ ಕಷ್ಟ ಪರಿಹಾರ, ಸಂತೃಪ್ತಿ ಎಂಬ ನಂಬಿಕೆ ಜನಪದರದ್ದು.

## ತಾವರೆಕೆರೆ ಬಂಡಿ ರಂಗನಾಥನ ಜಾತ್ರೆ:

ತಾವರೆಕೆರೆಯ ಬಂಡಿ ರಂಗನಾಥಸ್ವಾಮಿಯ ಜಾತ್ರೆಯು ಸಿರಾ ತಾಲ್ಲೂಕಿನ ದನಗಳ ಜಾತ್ರೆಯಲ್ಲಿಯೇ ಪ್ರಸಿದ್ಧವಾದುದು. ಸಿರಾ, ಹಿರಿಯೂರು ರಸ್ತೆಯಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿದೆ. ತಗ್ಗು ಪ್ರದೇಶವಾಗಿದ್ದು ಸದಾ ನೀರಿನ ಮಡುವಿನಂತೆ ತಾವರೆಯ ಹೂಗಳು ಬೆಳೆಯುತ್ತಿದ್ದ ಕಾರಣದಿಂದಾಗಿ, ಈ ಊರಿಗೆ ತಾವರೆಕೆರೆ ಎಂದು ಕರೆಯಲಾಗಿದೆ. ಬುಕ್ಕಾಪಟ್ಟಣ ಗೌಡಗೆರೆ ಹೋಬಳಿಗೆ ಸಂಪರ್ಕ ಕಲ್ಪಿಸುವ ಜಿಲ್ಲಾ ರಸ್ತೆಗಳೂ ಹಾದುಹೋಗಿದ್ದು ಇದು ಪ್ರಮುಖ ಪಟ್ಟಣವಾಗಿದೆ. ಶಾಲಾ ಕಾಲೇಜು, ಆಸ್ಪತ್ರೆ ಮೊದಲಾದ ನಾಗರಿಕ ಸೌಲಭ್ಯಗಳೆಲ್ಲವನ್ನು ಹೊಂದಿದೆ. ಇಲ್ಲಿನ ವಾಲ್ಮೀಕಿ ಸಮುದಾಯದವರು ಮುತ್ತಲಕ್ಕಪ್ಪನವರ ಮುಖಂಡತ್ವದಲ್ಲಿ 1980 ರಲ್ಲಿ ಶ್ರೀ ಅಂಬಾ ಭವಾನಿ ಪದವಿ ಪೂರ್ವ ಕಾಲೇಜನ್ನು ಆರಂಭಿಸಿದರು. ಕಲೆ, ವಾಣಿಜ್ಯ ಈ ಎರಡೂ ಅತ್ಯುತ್ತಮ ಫಲಿತಾಂಶ ನೀಡುತ್ತಿರುವ ಈ ಕಾಲೇಜು ಪ್ರಾಂಶುಪಾಲ ದೇವರಾಜು ಸೇರಿದಂತೆ, ನುರಿತ ಅಧ್ಯಾಪಕ ವರ್ಗದವರನ್ನು ಹೊಂದಿದೆ.ಇತ್ತೀಚೆಗೆ ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಗೆ ಒಳಪಟ್ಟಿದೆ.

ತಾವರೆಕೆರೆಯ ಅಧಿದೈವ ಶ್ರೀ ರಂಗನಾಥ. ಬಂಡಿ ರಂಗನಾಥ, ಬಂಡಿ ರಂಗಧಾಮ ಎಂದೆಲ್ಲಾ ಕರೆಯಲಾಗುವುದು. ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಜನವರಿ ತಿಂಗಳಲ್ಲಿ ನಡೆಯುವ ಜಾತ್ರಾ ಮಹೋತ್ಸವದಲ್ಲಿ ಹಿರಿಯೂರು, ಚಿತ್ರದುರ್ಗ, ದಾವಣಗೆರೆ ಸೇರಿದಂತೆ ತುಮಕೂರು ಜಿಲ್ಲೆಯ ದನಗಳು ಈ ಜಾತ್ರೆಗೆ ಸೇರುತ್ತವೆ. ಹದಿನೈದು ದಿನಗಳ ಕಾಲ ನಡೆಯುವ ಈ ಜಾತ್ರೆಗೆ ಒಂದು ಲಕ್ಷದವರೆಗೆ ಜಾನುವಾರು ಸೇರುತ್ತವೆಂದು ಈ ಗ್ರಾಮದ ಕಂಬಣ್ಣ ಹೇಳುತ್ತಾರೆ. ಮರದ ನೆರಳು, ನೀರಿನ ಸೌಕರ್ಯ, ವಾಹನ ಸೌಕರ್ಯ ಇರುವುದರಿಂದ ಜನ, ದನಸಂದಣಿಯೂ ಅಧಿಕವಾಗಿದೆ.

ಪ್ರತಿ ವರ್ಷ ರಥಸಪ್ತಮಿಯಂದು, ರಥೋತ್ಸವ ನಡೆಯುತ್ತದೆ. ನಾಲ್ಕು ಬೃಹತ್ ಕಲ್ಲುಗಾಲಿಗಳಿದ್ದು ಅವುಗಳಿಂದ ಕಟ್ಟಿದ್ದ ದೊಡ್ಡತೇರಿನ ಮೇಲೆ ಮೆರವಣಿಗೆ ರಂಗನಾಥನನ್ನು ಕೂರಿಸಲಾಗುವುದು. ಮಧ್ಯಾಹ್ನ 12 ರಿಂದ 1 ಗಂಟೆಯ ಒಳಗೆ ಆಕಾಶ ಮಾರ್ಗದಲ್ಲಿ ಗರುಡ ಹಾರುತ್ತ ಬಂದು, ಈ ತೇರಿನ ಸುತ್ತ ತಿರುಗಿ ಅಥವಾ ಹಾರಾಡಿ ಹೋಗುತ್ತದೆ. ಹೀಗೆ ಹೋಗುವುದು ತಪ್ಪದೇ ನಡೆಯುತ್ತದೆ. ಗರುಡ ಬರದೆ ನಂತರ ಭಕ್ತಾದಿಗಳು ಉದ್ರೇಕಗೊಂಡವರಂತೆ ದವನ, ಬಾಳೆಹಣ್ಣುಗಳನ್ನು ತೇರಿಗೆ ಎಸೆಯುತ್ತಾರೆ. ಉದ್ದನೆಯ ಹಗ್ಗ ಹಿಡಿದು ದೇವಸ್ಥಾನದ ಬಾಗಿಲಿಂದ ರಥ ಬೀದಿಯವರೆಗೆ ತೇರು ಹರಿಯುತ್ತದೆ. ನಂತರ ಬ್ರಾಹ್ಮಣರ ಸಮಾರಾಧನೆ ನಡೆಯುತ್ತದೆ. ಈ ಅನ್ನ ಸಮಾರಾಧನೆಯಲ್ಲಿ ಸಿರಾ ಸೀಮೆಯ ಬ್ರಾಹ್ಮಣ ಸಮುದಾಯದ ಒಕ್ಕಲುಗಳಲ್ಲಿ ಕೂಡುವುದು ವಿಶೇಷವಾಗಿದೆ.

ಹೀಗೆ ಹದಿನೈದು ದಿನಗಳ ಕಾಲ ಜಾತ್ರೆ ನಡೆಯುತ್ತದೆ. ಮೊದಲಿಗೆ ಸಂಜೆ ಯಕ್ಷಗಾನ, ಜನಪದ ಕಲಾಮೇಳ ನಡೆಯುತ್ತಿದ್ದು ಇಂದು ಆಧುನಿಕ ಪರಿಸರದಲ್ಲಿ ಇಲ್ಲವಾಗಿವೆ. ಆದರೂ ಸಾಂಪ್ರದಾಯಿಕ ಕಲಾ ಪ್ರದರ್ಶನ ನಡೆಯುತ್ತಿದೆ.

**ಸೀಬಿ:**

ಸೀಬಿ ತುಮಕೂರು ಜಿಲ್ಲೆಯ ಪ್ರಮುಖ ಪುಣ್ಯಧಾಮ. ಜಿಲ್ಲಾ ಕೇಂದ್ರ ತುಮಕೂರಿನಿಂದ ಉತ್ತರಕ್ಕೆ 26 ಕಿ.ಮೀ. ದೂರದಲ್ಲಿದೆ. ಬೆಂಗಳೂರು-ಪೂನಾ ರಾಷ್ಟ್ರೀಯ ಹೆದ್ದಾರಿ ನಾಲ್ಕಕ್ಕೆ ಅಂಟಿಕೊಂಡಿರುವ ಚಿಕ್ಕಸೀಬಿ, ಮಹಾವಿಷ್ಣುವಿನ ನಾಲ್ಕನೆಯ ಅವತಾರವಾದ ಶ್ರೀ ನರಸಿಂಹಸ್ವಾಮಿಯ ಮೂಲನೆಲೆ. ಸಿರಾದಿಂದ ದಕ್ಷಿಣಕ್ಕೆ 24 ಕಿ.ಮೀ. ಅಂತರದಲ್ಲಿದೆ. ಸೀಬಿ ನರಸಿಂಹಸ್ವಾಮಿ ಅಪಾರ ಭಕ್ತಸ್ತೋಮವನ್ನು ಹೊಂದಿದೆ. ದೇವಸ್ಥಾನ ಪ್ರಾಂಗಣದ ಭಿತ್ತಿಚಿತ್ರಗಳು ಲೋಕಪ್ರಸಿದ್ಧಿಯಾಗಿ, ಸಂಶೋಧನೆಗೂ ಒಳಗಾಗಿರುವುದು ಈ ದೇವಸ್ಥಾನದ ವಿಶೇಷ.

ತುಮಕೂರು ಜಿಲ್ಲೆ ಪ್ರಾಕೃತಿಕ ಸೌಂದರ್ಯಕ್ಕೆ ಹೆಸರಾದದ್ದು. ನಯನಮನೋಹರ ಬೆಟ್ಟಗುಡ್ಡಗಳು, ಕಣ್ಮನ ಸೆಳೆಯುವ ಸಸ್ಯೋದ್ಯಾನ, ವನ್ಯಸಂಪತ್ತು, ನಿಬ್ಬೆರಗುಗೊಳಿಸುವ ಪ್ರಾಣಿಸಂಕುಲ, ಈ ಜಿಲ್ಲೆಯ ಪ್ರವಾಸೋದ್ಯಮದ ಪ್ರಮುಖ ಆಕರ್ಷಣೆಗಳು. ಸೀಬಿಯ ಪರಿಸರ ಇಂದಿಗೂ ಕುರುಚಲು ಕಾಡು ಪ್ರದೇಶವಾಗಿಯೇ ಉಳಿದಿದೆ. ಸೀಬಿಯನ್ನು ಕೇಂದ್ರವಾಗಿರಿಸಿಕೊಂಡಂತೆ ಸುತ್ತಮುತ್ತ 50 ಕಿ.ಮೀ.ಗಳ ದೂರ ಇಂದಿಗೂ ಕಾಡಿನ ಭಾಗವಾಗಿಯೇ ಉಳಿದಿದೆ. ಸಿದ್ದರಬೆಟ್ಟ, ಬಡವನಹಳ್ಳಿ, ಗಿಡದಾಗಲಹಳ್ಳಿ, ಹಾಲು ದೊಡ್ಡೇರಿ, ದೇವರಾಯನದುರ್ಗ, ಬುಕ್ಕಾಪಟ್ಟಣ, ಹಾಗಲವಾಡಿ, ಹೂವಿನಕಟ್ಟೆ, ಮಂಚಲದೊರೆ,

ಮರಡಿಗುಡ್ಡ, ಅಂಕಸಂದ್ರ, ಹುಂಜನಹಳ್ಳ, ಬಸರೀಹಳ್ಳಿ, ಕಲ್ಲುಗುಡಿ, ಯರಬಳ್ಳಿ, ಬೆಳ್ಳಾರ ಈ ಪ್ರದೇಶಗಳು ಇಂದಿಗೂ ಕಾಡಿನ ರೂಪವಾಗಿಯೇ ಉಳಿದಿವೆ. ಇಲ್ಲೆಲ್ಲಾ ಮರಡಿ, ಗಂಧ, ಬೇಲ, ಬೀಟೆ, ಬಸರಿ, ಬ್ಯಾಟೆ. ತರೀ, ನೇರಳೆ, ಹೊಂಗೆ, ಹುಣಸೆ ಈ ಬಗೆಯ ಸಸ್ಯಸಂಪತ್ತು ಹೇರಳವಾಗಿವೆ. ತೂಬರೆ ಎಲೆ, ಮುತ್ತುಗ, ಬಂದ್ರೆ, ತಂಗಟೆ, ಕಳ್ಳನಗಿಡ ಈ ಮುಂತಾದ ಮರಗಿಡಗಳು ವ್ಯಾಪಾರಿ ಸರಕುಗಳಾಗಿ ಊಟದ ಎಲೆ, ಬೀಡಿ ಕಟ್ಟುವ ಎಲೆ, ಔಷಧಿ ಸಸ್ಯಗಳಾಗಿ ಗ್ರಾಮೀಣರ ಬಹು ಉದ್ದೇಶಿತ ಆಶ್ರಯಗಳಾಗಿವೆ. ಈ ಕಾಡಿನಲ್ಲಿ ಬೆಳೆಯುವ ಮರಡಿ, ದ್ರಾಕ್ಷಿ ಜಾತಿಯ ಹಣ್ಣಿನ ಮರವಾಗಿದ್ದು ಹುಳಿಮಿಶ್ರಿತ ಸಿಹಿಯಾಗಿದ್ದು ತಿನ್ನಲು ತುಂಬಾ ರುಚಿಯಾಗಿರುತ್ತದೆ. ಕಾಡುಬಿಕ್ಕೆ, ನೆಲ್ಲಿ, ನೇರಳೆಹಣ್ಣುಗಳು ಇಲ್ಲಿ ವಿಶೇಷ. ಮರಡಿ ಪ್ರಮುಖ ವಾಣಿಜ್ಯ ಬೆಳೆಯೂ ಆಗಿದ್ದು ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ರುಚಿಕಟ್ಟಾದ ಹಣ್ಣನ್ನು ಬಿಡುತ್ತದೆ. ಇವುಗಳನ್ನು ಹೊರದೇಶಕ್ಕೂ ರಫ್ತು ಮಾಡಲಾಗುತ್ತದೆ. ಮರಡಿ ಮರದ ಹಣ್ಣು, ಅದರೊಳಗಿನ ಬೀಜ ಒಂದು ಬಗೆಯ ಬಾದಾಮಿ ಕಾಯಿಯ ಸ್ವರೂಪದಲ್ಲಿ ಎಣ್ಣೆ ಮಿಶ್ರಿತ ಉತ್ಕೃಷ್ಟ ಆಹಾರವಾಗಿದೆ. ಹಾಗಾಗಿಯೇ ಮರಡಿ ಬೀಜವನ್ನು ಟೆಂಡರ್ ಮೂಲಕ ಕೊಂಡು ಹಣ್ಣು, ಬೀಜಗಳನ್ನು ಸಂಗ್ರಹಿಸಲಾಗುತ್ತದೆ.

ಮೊಲ, ಜಿಂಕೆ, ನವಿಲು, ಕಾಡುಕೋಳಿ, ಹಂದಿ, ನರಿ, ಕರಡಿ, ಉಡ, ಆಮೆ, ಮುಂಗುಸಿ, ಕಾಡುಬೆಕ್ಕು, ಗೋಜಿಗ, ಪುರಲೆ, ಬೆಳವ ಸಿಪ್ಲೆ, ಗೊರವನಕ್ಕಿ ಮೊದಲಾದ ಪಕ್ಷಿಸಂಪತ್ತು ಸೀಬಿ ಪರಿಸರದ ಕಾಡಿನಲ್ಲಿ ವ್ಯಾಪಕವಾಗಿವೆ. ಹೇಮಾವತಿ ನದಿ ಗೊರೂರಿನಿಂದ ಕಾಲುವೆ ಮೂಲಕ ತುಮಕೂರಿಗೆ ಹರಿದುಬರುತ್ತದೆ. ಅದರ ಒಂದು ಕಾಲುವೆ ಚೇಳೂರು ಸಮೀಪದ ಪಟ್ಟರಾಹುತನಹಳ್ಳಿಯ ಬಳಿ ಎಡಕ್ಕೆ ತಿರುಗಿ, ಸಹಜ ಹಳ್ಳದ ಮೂಲಕ ಕಳ್ಳಂಬೆಳ್ಳ, ಸಿರಾ ಕೆರೆಗಳನ್ನು ಸೇರುವುದು ಇದೇ ಕಾಡಿನ ಮೂಲಕವೇ. ಇದರ ದೂರ ಸೀಬಿಗೆ ಕೇವಲ 4 ಮೈಲಿ ಮಾತ್ರ.

ಸೀಬಿ ಎಂಬ ಸ್ಥಳನಾಮವು ಕುತೂಹಲವಾಗಿದೆ. ಸಂಸ್ಕೃತದಲ್ಲಿ ಸಿಖಿ ಎಂದರೆ 'ನವಿಲುಗರಿ' ಎಂದರ್ಥ. ಸೀಬಿ ಎಂಬ ಶಬ್ದ ಸಿಖಿ ಶಬ್ದದಿಂದ ರೂಪುಗೊಂಡು ನಂತರ ಸೀಬಿ ಆಗಿರಲೂ ಬಹುದು. ಏಕೆಂದರೆ ಕರ್ನಾಟಕದ ಸ್ಥಳನಾಮಗಳಲ್ಲಿ ಈ ಬಗೆಯ ಅಲ್ಪ ಬದಲಾವಣೆ ಗ್ರಂಥಸ್ಥದಿಂದ ಗ್ರಾಂಥಿಕ ರೂಪ ಪಡೆಯುತ್ತದೆ. ಹಾಗಾಗಿ ಕಾಡು-ನವಿಲುಗಳಿಂದಾಗಿ ಸಿಖಿ ಗ್ರಾಮ ನಂತರ ಸೀಬಿ ಗ್ರಾಮವಾಗಿ ಅನ್ವರ್ಥವಾಗಿರುವ ಸಾಧ್ಯತೆಯೂ ಇದೆ.

ಸೀಬಿಯನ್ನು 'ಸಿಬ್ಬೂರು' ಸೀಬಿಯ ಊರು ಎಂದು ಕರೆದಿದೆ. ಇದು 'ಸುರಾಸುರ' ಎಂಬ ರಾಕ್ಷಸನ ನೆಲೆಯಾಗಿತ್ತೆಂದೂ ಹೇಳಲಾಗುತ್ತಿದೆ. ಸುರಾಸುರ ಭಯಂಕರ

ರಾಕ್ಷಸನಾಗಿದ್ದು ನರಮನುಷ್ಯರಿಗೆ ಮಾತ್ರವಲ್ಲ, ದೇವಾನುದೇವತೆಗಳಿಗೂ ಕಾಟಕೊಡುತ್ತಿದ್ದನು. ಈ ರಾಕ್ಷಸನ ಸಂಹಾರದ ಸಲುವಾಗಿಯೇ ನರಸಿಂಹನು ಸೀಬಿ ಗುಡ್ಡದಲ್ಲಿ ನೆಲೆಸಿದನೆಂದು ಭಾವಿಸುತ್ತಾರೆ. ಮತ್ತೊಂದು ಕತೆಯಲ್ಲಿ ಸೀಬಿ ಗುಡ್ಡ ಬೃಹನ್ಮುನಿಯ ವಾಸಸ್ಥಳವಾಗಿತ್ತು. ಈ ಬೃಹನ್ಮುನಿ ಕಾಮಧೇನುವನ್ನು ಕರೆಸಿ ಹಾಲು ಕರೆದನೆಂದೂ, ಇದಕ್ಕೆ ಐತಿಹ್ಯವಾಗಿ ದೊಡ್ಡಸೀಬಿಯ ಗುಡ್ಡದಲ್ಲಿ ಇಂದಿಗೂ 'ಹಾಲುಬಾವಿ' ಎಂಬ ಸ್ಥಳವನ್ನು ತೋರಿಸುತ್ತಾರೆ. ಇಲ್ಲಿ ಸಂಗ್ರಹವಾಗುವ ನೀರು ಶುದ್ಧ ಹಾಲಿನ ತರಹದಲ್ಲಿದ್ದು ಬಣ್ಣ ಮೇಲ್ಮಟ್ಟಕ್ಕೆ ಹಾಲಿನಂತೆ ಕಂಡುಬರುತ್ತದೆ. ಹಿಂದೆ ಇದನ್ನು 'ಕ್ಷೀರವಾಪಿ' ಎಂದೂ ಕರೆಯುತ್ತಿದ್ದರೆಂದು ಹೇಳಲಾಗುತ್ತದೆ. ಇಂದಿಗೂ ದೊಡ್ಡಸೀಬಿಯ ಗುಡ್ಡದ ಬದಿಯಲ್ಲಿ ನರಸಿಂಹಸ್ವಾಮಿಯು ಪಾದದ ಗುರುತುಗಳನ್ನು ತೋರಿಸುತ್ತಾರೆ. ನರಸಿಂಹಸ್ವಾಮಿಯ ಎಡಪಾದ ಹಾಗೂ ಬಲಪಾದದ ಹಿಮ್ಮಡಿಯ ಭಾಗ ಆ ಚಿತ್ರಗಳಲ್ಲಿ ಮೂಡಿದೆ. ಅದಕ್ಕೆ ಚಿಕ್ಕ ಗುಡಿಯನ್ನು ಕಟ್ಟಿ ಶನಿವಾರ ಮತ್ತು ವಿಶೇಷ ದಿನಗಳಲ್ಲಿ ಪೂಜೆಯೂ ನಡೆಯುತ್ತದೆ. ದೊಡ್ಡ ಸೀಬಿ, ಸೀಬಿ ನರಸಿಂಹಸ್ವಾಮಿ ಕ್ಷೇತ್ರಕ್ಕೆ ಪಶ್ಚಿಮಾಭಿಮುಖವಾಗಿ ನಾಲ್ಕು ಮೈಲಿಗಳ ದೂರದಲ್ಲಿದೆ. ಚಿಕ್ಕ ಸೀಬಿ ಇಂದಿನ ಪ್ರಸಿದ್ಧ ನರಸಿಂಹಸ್ವಾಮಿಯ ಕ್ಷೇತ್ರವಾಗಿದೆ.

ಸ್ಥಳೀಯ ಜನಗಳು ನರಸಿಂಹಸ್ವಾಮಿಯ ಬಗೆಗೆ ಮತ್ತೊಂದು ಕತೆ ಹೇಳುತ್ತಾರೆ. ನರಸಿಂಹಸ್ವಾಮಿ ನಿದ್ರಾಪ್ರಿಯನಾದವನು. ದೊಡ್ಡಸೀಬಿಯಲ್ಲಿ ಕೋಳಿಗಳು ವಿಪರೀತವಾಗಿದ್ದು ಒಂದೇ ಸಮನೆ ಕೂಗುತ್ತಿದ್ದವು. ರಾತ್ರಿಯಲ್ಲಂತೂ ಮನಸೋ ಇಚ್ಛೆ ಕೋಳಿಗಳು ಕೂಗುತ್ತಿದ್ದವು. ಇದರಿಂದ ನರಸಿಂಹಸ್ವಾಮಿಗೆ ನಿದ್ರಾಭಂಗವಾಗುತ್ತಿತ್ತು. ಆ ಕೋಳಿಗಳ ಕೂಗಾಟದ ಕಾಟದಿಂದ ನರಸಿಂಹಸ್ವಾಮಿ ದೊಡ್ಡಸೀಬಿಯ ಗುಡ್ಡದಿಂದ ಈಗಿನ ಚಿಕ್ಕಸೀಬಿಯ ಈ ಪ್ರಶಸ್ತ ಸ್ಥಳಕ್ಕೆ ಬಂದು ನೆಲೆಸಿರುವನೆಂದು ಹೇಳಲಾಗುತ್ತಿದೆ. ಇದಕ್ಕೆ ಪೂರಕ ಎಂಬಂತೆ ವಿಜಯನಗರದ ಅರಸನಾದ ಬುಕ್ಕದೇವರಾಯನ ಮಗನಾದ ಹರಿಹರರಾಯನು ಸೀಬಿ ದೇವಸ್ಥಾನವೂ ಸೇರಿದಂತೆ ಈ ಸುತ್ತಮುತ್ತಲಿನ ಗ್ರಾಮಗಳಿಗೆ ದತ್ತಿ ದಾನ ನೀಡಿದ ಉಲ್ಲೇಖ ಸ್ಥಳೀಯ ತಾಮ್ರಶಾಸನದಿಂದ ತಿಳಿದುಬರುತ್ತದೆ. ಇದರ ಭಾಗವಾಗಿ 'ಸೀಬಿ ಅಗ್ರಹಾರ' ಎಂಬ ನೂತನ ಗ್ರಾಮವೊಂದರ ಉಗಮಕ್ಕೂ ಕಾರಣನಾಗಿದ್ದಾರೆ. ಇದು ದೊಡ್ಡಸೀಬಿಗೆ ಹೊಂದಿಕೊಂಡಂತೆ ಇದ್ದು ರಾಷ್ಟ್ರೀಯ ಹೆದ್ದಾರಿಗೆ ಒಂದು ಕಿ.ಮೀ. ದೂರದಲ್ಲಿದೆ. ಸೀಬಿ ಅಗ್ರಹಾರಕ್ಕೆ ಹೊಂದಿಕೊಂಡಂತೆ ವಿಶಾಲವಾದ ಕೆರೆಯಿದ್ದು ಬ್ರಾಹ್ಮಣರ ಪೂಜೆ, ಸಂಧ್ಯಾವಂದನೆ, ಮಡಿ ವಿಚಾರಗಳಿಗಾಗಿಯೇ ಕೆರೆಯನ್ನು ನಿರ್ಮಿಸಿದನೆಂದು ಜನಪದ ನಂಬಿಕೆಯೂ ಇದೆ. ಸೀಬಿಗೆ ಬುಕ್ಕರಾಯನ ಮಗ ಹರಿಹರರಾಯ ದತ್ತಿ ನೀಡಿ ಗ್ರಾಮಾಭಿವೃದ್ಧಿಯ ನಂತರ ಹರಿಹರಪುರ ಎಂದು ಕರೆದರೆಂಬ ಹೇಳಿಕೆಯೂ ಉಂಟು.

ಸೀಬಿ ಅಗ್ರಹಾರದಲ್ಲಿ ಇಂದಿಗೂ ಚಂದ್ರಮೌಳೇಶ್ವರನ ದೇವಾಲಯವಿದೆ. ಇದನ್ನು ಹರಿಹರರಾಯ ಕಟ್ಟಿಸಿದನೆಂಬ ಪ್ರತೀತಿಯಿದೆ.

ಸೀಬಿ ಪ್ರಧಾನವಾಗಿ ಕಾಡುಮೇಡಿನ ಪ್ರದೇಶ. ಮರ, ಗಿಡ ಗುಡ್ಡಗಳಿಂದ ಆವೃತ್ತವಾಗಿದೆ. ಪುರಾಣದಲ್ಲಿ ಪ್ರಸ್ತಾಪವಾಗಿರುವ ಕುಂತಲದೇಶ ಸೀಬಿಯಾಗಿದ್ದು, ಇದನ್ನು ಪುಳಿಂದರ ನಾಡು ಎಂತಲೂ ಕರೆಯಲಾಗಿದೆ. ಕಾಕತಾಳೀಯ ಎನ್ನುವಂತೆ ಸೀಬಿ, ಚಿಕ್ಕಸೀಬಿ ಈ ಗ್ರಾಮಗಳಲ್ಲಿ ಹೆಚ್ಚು ಬೇಡರು ವಾಸವಾಗಿದ್ದಾರೆ. ಹಾಗಾಗಿಯೇ ಪುಳಿಂದರ ನಾಡು ಎಂಬ ಭಾವನಾತ್ಮಕ ಸಂಬೋಧನೆಗೆ ಹತ್ತಿರದ ಸಂಬಂಧವಿದೆ.

'ಶೀಬಿ' ಎಂಬ ಹೆಸರಿನ ರಾಜನೂ ಇದ್ದು, ಆತನ ರಾಜ್ಯ ಇದೇ ಸೀಬಿ ಗ್ರಾಮವಾಗಿತ್ತೆಂದು ಹೇಳಲಾಗುತ್ತದೆ. ಹಿರಣ್ಯಕಶಿಪುವಿಗೆ ಪ್ರಹ್ಲಾದ, ಸಂಹ್ಲಾದ, ಅನುಹ್ಲಾದ, ಶೀಬಿ ಮತ್ತು ಭಾಷ್ಕಲ ಈ ಐದು ಜನ ಗಂಡುಮಕ್ಕಳು, ಹರಿಣಿ (ರೋಹಿಣಿ) ಎಂಬ ಹೆಣ್ಣುಮಗಳು ಇದ್ದರು ಇವರಲ್ಲಿ ಶೀಬಿ ಚಕ್ರವರ್ತಿ ಜನಪ್ರಿಯ ಆಡಳಿತ ನೀಡಿದ ರಾಜ. ಈತ ಅಣ್ಣ ಪ್ರಹ್ಲಾದನಂತೆಯೇ ದೇವಪ್ರಿಯ, ಸತ್ಯವಾಕ್ಯ ಪರಿಪಾಲಕ. ಒಮ್ಮೆ ಶೀಬಿ ಚಕ್ರವರ್ತಿ ಯಜ್ಞ ಕಾರ್ಯದಲ್ಲಿ ತಲ್ಲೀನನಾಗಿದ್ದಾಗ ಇಂದ್ರ ಗಿಡುಗನ ರೂಪದಲ್ಲಿಯೂ, ಅಗ್ನಿ ಪಾರಿವಾಳದ ರೂಪದಲ್ಲಿಯೂ ಬಂದರು. ಪಾರಿವಾಳ ರೂಪದ ಅಗ್ನಿ ಶೀಬಿಯ ಸತ್ವ, ಸತ್ಯ ಪರೀಕ್ಷೆಗಾಗಿ ಶೀಬಿ ರಾಜನ ಮೊರೆಹೋಗಿ ಗಿಡುಗನಿಂದ ತನ್ನನ್ನು ರಕ್ಷಿಸುವಂತೆ ಕೇಳಿಕೊಂಡಾಗ ರಾಜನು ಹಿಂದುಮುಂದು ನೋಡದೆ ತನ್ನ ದೇಹದ ಮಾಂಸವನ್ನೇ ಗಿಡುಗನಿಗೆ ನೀಡುವ ಮೂಲಕ ಶರಣಾಗತರನ್ನು ಕಾಪಾಡಿದ ಮಹಾದಾನಿ. ಈ ಕಾರಣಕ್ಕಾಗಿಯೇ ದೇವಾನುದೇವತೆಗಳಿಂದ ಹೊಗಳಿಸಿಕೊಂಡವನು. ಇದು ಸೀಬಿ ಪರಿಸರಕ್ಕೆ ಅರ್ಥಪೂರ್ಣ ವಾಗಿ ಹೊಂದಾಣಿಕೆಯಾಗುತ್ತದೆ. ಸೀಬಿ ಈ ಹಿಂದೆ ಸೀಬಿ ಚಕ್ರವರ್ತಿಯ ರಾಜ್ಯವಾಗಿತ್ತೆಂಬ ಸ್ಥಳೀಯರ ಹೇಳಿಕೆ ಹಾಗೂ ಇದಕ್ಕೆ ಪೂರಕವಾಗಿ ವಿಷ್ಣುವಿನ ನಾಲ್ಕನೆಯ ಅವತಾರ ಮಾಡಿದ ಸ್ಥಳ. ಹಿರಣ್ಯಕಶಿಪು, ಆತನ ಕೌಟುಂಬಿಕ ಬದುಕು, ಮಕ್ಕಳು, ಅವರ ದೈವಭಕ್ತಿ, ಹರಿನಿಷ್ಠೆ ಇವುಗಳನ್ನು ಗಮನಿಸಿದರೆ ಈ ಎಲ್ಲ ಅಂಶಗಳು ಸೀಬಿಗೆ ಅರ್ಥಪೂರ್ಣವಾಗಿ ಹೊಂದಿಕೊಳ್ಳುತ್ತವೆ.

ಸಿರಾ ತಾಲ್ಲೂಕಿನ ಹೊಸೂರಿನಲ್ಲಿ ಕದಿರಪ್ಪನ ದೇವಾಲಯವೂ ಇದೆ. ಇದಲ್ಲದೆ ತಡಕಲೂರು, ಹೊನ್ನಗೊಂಡನಹಳ್ಳಿಗಳಲ್ಲಿಯೂ ನರಸಿಂಹಸ್ವಾಮಿ ದೇವಾಲಯಗಳಿವೆ.

**ಜನಪದರಲ್ಲಿ ನರಸಿಂಹ:**

ಬುಡಕಟ್ಟು ಸಂಸ್ಕೃತಿಯಲ್ಲಿ ಹರಿಹರ ಸಮನ್ವಯದ ಪರಿಕಲ್ಪನೆಯು ಬೆಳೆದುಬಂದಿದೆ.

'ಚಿತ್ರದೇವರು' ಜನಪದ ಮಹಾಕಾವ್ಯದ ಪ್ರಕಾರ ನರಸಿಂಹ ಶಿವನ ಸ್ವಯಂಸೃಷ್ಟಿ. ಶಿವ-ಪಾರ್ವತಿಯರು ಲೋಕಸಂಚಾರ ಹೋಗುವಾಗ, ಗೋವರ್ಧನಗಿರಿಗೆ ಬೆಂಕಿ ಬಿದ್ದು ಸಕಲ ಜೀವ ಸಂಕುಲವೆಲ್ಲ ಸಾಯುತ್ತಿರುತ್ತವೆ. ಆ ಜೀವರಾಶಿಗಳ ರೋಧನ ಪಾರ್ವತಿಯ ಕಿವಿಗೆ ಬೀಳುತ್ತದೆ. ದೇವಿ ಕೂಡಲೇ ರಥ ನಿಲ್ಲಿಸುವಂತೆ ಶಿವನನ್ನು ಕೇಳಿಕೊಳ್ಳುತ್ತಾಳೆ. ಪರಶಿವನು ಪಾರ್ವತಿಯ ಬಯಕೆಯನ್ನು ತಿರಸ್ಕರಿಸಿದಾಗ, ಪಾರ್ವತಿ ನಾಲಿಗೆ ಹಿರಿದುಕೊಂಡು ಪ್ರಾಣಬಿಡುವ ಮಾತನ್ನಾಡುತ್ತಾಳೆ. ಇದಕ್ಕೆ ಮಣಿದ ಶಿವನು ವಿಪರೀತ ಬೆವರುತ್ತಾನೆ. ಬೆವರಿನಿಂದ ತೊಯ್ದ ಬಟ್ಟೆಯನ್ನು ಆ ಬೆಂಕಿ ಉರಿಯುತ್ತಿದ್ದ ಬೆಟ್ಟದ ಮೇಲೆ ಹಿಂಡುತ್ತಾನೆ. ಆ ಬೆವರಿನಲ್ಲಿ ಕಾಟಯ್ಯ, ಚಿತ್ತಯ್ಯ, ನರಸಿಂಹ ಎಂಬ ಮೂವರು ಮಕ್ಕಳು ಹುಟ್ಟುತ್ತಾರೆ. ಕಾಟಯ್ಯನಿಗೆ ಶಿವನು 'ಚಿಂತಾಮಣಿ ಹೊತ್ತಿಗೆ' (ಕಾಲಜ್ಞಾನ) ನೀಡಿದರೆ, ಚಿತ್ತಯ್ಯನಿಗೆ ಬಂಗಾರದ ಗೊಡಗು (ಚಾಮರ) ನೀಡುತ್ತಾನೆ, ನರಸಿಂಹನಿಗೆ ಬಾಣ ನೀಡುತ್ತಾನೆ. ಈ ಮೂವರು ಲೋಕಪೀಡಕರಾದವರನ್ನು ನಾಶಪಡಿಸುತ್ತಾ ಭೂಲೋಕ, ದೇವಲೋಕದಲ್ಲಿ ಸತ್ಯ, ಶಾಂತಿಯ ಬಾಳ್ವೆ ಮಾಡಬೇಕೆಂದು ಪರಶಿವನು ಆದೇಶಿಸಿ ಹೊರಟುಹೋಗುತ್ತಾನೆ. ಮುಂದೆ ಚಿತ್ರದೇವರು, ಕಾಟಂದೇವರು ಕಾಡುಗೊಲ್ಲರಿಗೆ ಸಂಸ್ಕಾರ ನೀಡಿ ಅವರ ಮನೆದೈವವಾದರೆ, ನರಸಿಂಹ ಬೇಡ ಜನಾಂಗದ ಆರಾಧ್ಯಪುರುಷನಾಗುವ ವಿವರ ಪ್ರಕಟವಾಗುತ್ತದೆ. ಕರ್ನಾಟಕದಲ್ಲಿ ಇಂದಿಗೂ ಇದೇ ಸಂಸ್ಕಾರವನ್ನು ದಟ್ಟವಾಗಿ ಗುರುತಿಸಬಹುದು.

ಸೀಬಿಯಲ್ಲಿ ನರಸಿಂಹಸ್ವಾಮಿ ನೆಲೆಯಾದ ಬಗೆಗೆ ಜನಪದ, ಚಾರಿತ್ರಿಕ ಈ ಎರಡೂ ಪರಂಪರೆಯಲ್ಲಿ ವಾಙ್ಮಯವಿದೆ. ಜನಪದ ನಂಬಿಕೆಯ ಪ್ರಕಾರ ಆದಯ್ಯನೆಂಬ ವ್ಯಾಪಾರಿ ಉತ್ತರದಿಂದ ದಕ್ಷಿಣದ ಕಡೆ ವ್ಯಾಪಾರಕ್ಕೆ ಸದಾ ಕಾಲ ಹೋಗುತ್ತಿದ್ದನು. ಹಾಗೆ ಹೋಗುವಾಗ ಈಗಿನ ಸೀಬಿ ಸ್ಥಳದಲ್ಲಿ ತಂಗುತ್ತಿದ್ದನು. ಹಾಗೆ ತಂಗುತ್ತಿದ್ದ ಒಂದು ಸಂದರ್ಭದಲ್ಲಿ ಅಡಿಗೆ ತಯಾರಿಸಿಕೊಳ್ಳುತ್ತಿದ್ದನು. ಒಂದು ದಿನ ಆದಯ್ಯ ಅಡಿಗೆ ಮಾಡಲು ಅಲ್ಲಿಯೇ ಬಿದ್ದಿದ್ದ ಮೂರು ಗುಂಡುಕಲ್ಲುಗಳನ್ನು ಒಂದು ಕಡೆ ಸೇರಿಸಿ, ಒಲೆ ಮಾಡಿಕೊಂಡು ಅಡಿಗೆ ತಯಾರಿಸಲು ಮುಂದಾಗುತ್ತಾನೆ. ಅಡಿಗೆ ಮಾಮೂಲಿನಂತಾಗದೆ ರಕ್ತವರ್ಣಕ್ಕೆ ತಿರುಗುತ್ತದೆ. ಆದಯ್ಯ ಗಾಬರಿಗೊಂಡು ಕಂಗಾಲಾಗುತ್ತಾನೆ. ಸ್ವಲ್ಪ ಹೊತ್ತಿನಲ್ಲಿ ಅದೇ ಮಾರ್ಗದಲ್ಲಿ ಮೂರು ನಾಮದ ದಾಸಯ್ಯ ಬರುತ್ತಾನೆ. ದಾಸಯ್ಯನಿಗೆ ಆದಯ್ಯ ಭಯಭೀತಿಯಿಂದ ಹೀಗೆ ಹೇಳುತ್ತಾನೆ 'ನಾನು ಎಂದಿನಂತೆ ಅಡಿಗೆ ಮಾಡಲು ಒಲೆ ಹೂಡಿ ಅಡಿಗೆಗೆ ಇಟ್ಟರೆ, ಎಲ್ಲವೂ ರಕ್ತವರ್ಣಕ್ಕೆ ತಿರುಗಿದೆ' ಎಂದು. ಆಗ ದಾಸಯ್ಯ 'ಇದು ಭಗವಂತನ ಮಹಿಮೆ. ಶ್ರೀ ವಿಷ್ಣು ನರಸಿಂಹನಾಗಿ ಅವತರಿಸಿ ದುಷ್ಟ ಹಿರಣ್ಯಕಶಿಪುವನ್ನು ಸಂಹಾರ ಮಾಡಿದ ಸ್ಥಳ ಇದಾಗಿದ್ದು, ಇಲ್ಲಿ ನರಸಿಂಹಸ್ವಾಮಿ ನೆಲೆಗೊಳ್ಳಬೇಕಾಗಿದೆ. ಆದುದರಿಂದ

ಗುಡಿಯೊಂದನ್ನು ಕಟ್ಟಬೇಕು. ಇದಕ್ಕಾಗಿಯೇ ಸ್ವಾಮಿ ನಿನ್ನ ಹೆಗಲೇರಿದ್ದಾನೆ. ದೇವಸ್ಥಾನ ನಿರ್ಮಿಸುವುದಾದರೆ ರಕ್ತದ ಅನ್ನ, ತಿನ್ನುವ ಅನ್ನದ ರೂಪ ಪಡೆಯುತ್ತದೆ' ಎಂದು ಹೇಳಿ ದಾಸಯ್ಯ ಮುಂದೆ ಹೋಗುತ್ತಾನೆ. ವ್ಯಾಪಾರಿ ಆದಯ್ಯ ದಾಸಯ್ಯ ಹೇಳಿದಂತೆ ನರಸಿಂಹಸ್ವಾಮಿಯ ಗುಡಿ ಕಟ್ಟಿಸಲು ಒಪ್ಪಿಕೊಂಡು ವ್ಯಾಪಾರ ಮಾಡಿಕೊಂಡು ಹಿಂದಿರುಗುವಾಗ ನರಸಿಂಹಸ್ವಾಮಿಯ ಗುಡಿಯನ್ನು ಕಟ್ಟಿಸುವುದಾಗಿ ಹರಕೆ ಹೊತ್ತನಂತರ ಅಡಿಗೆ ಸಹಜವಾಗುತ್ತದೆ. ವ್ಯಾಪಾರಿ ಆದಯ್ಯ ಮುಂದುವರಿದು ವ್ಯಾಪಾರ ಮಾಡಿಕೊಂಡು ಅಪಾರ ಸಂಪತ್ತುಗಳೊಂದಿಗೆ ಹಿಂತಿರುಗಿ ನರಸಿಂಹಸ್ವಾಮಿ ದೇವಸ್ಥಾನ ನಿರ್ಮಿಸಿದನು ಎಂದು ಜನಪದರು ಹೇಳುತ್ತಾರೆ.

ಸೀಬಿ ನರಸಿಂಹಸ್ವಾಮಿಗೆ ಅಪಾರ ಸಂಖ್ಯೆಯ ಒಕ್ಕಲುಗಳಿದ್ದಾರೆ. ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳ, ಬಾಂಬೆ, ದೆಹಲಿಗಳಿಂದಲೂ ಭಕ್ತರು ಬರುತ್ತಾರೆ. ಈ ಭಕ್ತರಲ್ಲಿ ಸಸ್ಯಾಹಾರಿ ಸಂಸ್ಕಾರದ ಭಕ್ತರಂತೆ ಮಾಂಸಾಹಾರಿ ಸಂಸ್ಕಾರದ ಒಕ್ಕಲುಗಳೂ ಇದ್ದಾರೆ. ಆದರೆ ನರಸಿಂಹಸ್ವಾಮಿ ದೇವಸ್ಥಾನದ ಪ್ರಾಂಗಣದ ಒಳಗೆ ಬಲಿ, ಮಾಂಸಾಹಾರ ಸಂಪೂರ್ಣ ನಿಷೇಧ, ಮಾತ್ರವಲ್ಲ ಮಾಂಸಾಹಾರ ತಿಂದ ಭಕ್ತರು ಈ ದೇವಸ್ಥಾನದೊಳಗೆ ಪ್ರವೇಶ ಮಾಡುವುದಿಲ್ಲ. ಆದರೂ ಸೀಬಿ ದೇವಸ್ಥಾನದ ಹೊರಗೆ ಪ್ರಾಣಿಬಲಿ, ಮಾಂಸಾಹಾರದ ಭೋಜನ ನಡೆಯುತ್ತದೆ. ಈ ಸಂಬಂಧಿ ಜನಪದ ಐತಿಹ್ಯ ಕಥೆ ಹೀಗಿದೆ.

ಸೀಬಿ ನರಸಿಂಹಸ್ವಾಮಿ ದೇವಸ್ಥಾನ ಚಿಕ್ಕಸೀಬಿಯ ಬಳಿ ತುಮಕೂರು, ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿಗೆ ಅಂಟಿಕೊಂಡು ಪೂರ್ವಾಭಿಮುಖವಾಗಿದೆ. ದೇವಸ್ಥಾನವು ಮಹಾದ್ವಾರ, ನರಸಿಂಹಸ್ವಾಮಿ ಪ್ರಧಾನ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಬೃಹತ್ ಪ್ರಾಂಗಣವನ್ನು ಹೊಂದಿದೆ. ಲಕ್ಷ್ಮೀನರಸಿಂಹಸ್ವಾಮಿ ಮೂರ್ತಿಯ ಉದ್ಭವಮೂರ್ತಿಯಿದೆ. ನರಸಿಂಹಸ್ವಾಮಿ ಗರ್ಭಗೃಹದ ಎಡ, ಬಲಬದಿಗೆ ಹೊಂದಿಕೊಂಡಂತೆ ಶ್ರೀದೇವಿ, ಭೂದೇವಿಯ ಗುಡಿಗಳಿವೆ. ಭೂದೇವಿಯನ್ನು ಲೋಕಾಂಬ, ಚುಂಚಲಕ್ಷ್ಮಿ ಎಂಬ ಹೆಸರಿನಿಂದಲೂ ಕರೆಯುತ್ತಾರೆ. ದೇವಸ್ಥಾನದ ಪ್ರಾಂಗಣದಲ್ಲಿ ವರಾಹ, ಕಾಳಿಂಗಮರ್ದನ ವೇಣುಗೋಪಾಲ, ಪಾಂಡುರಂಗ, ಬಾಲಕೃಷ್ಣ, ಯೋಗಾನರಸಿಂಹ, ಸತ್ಯನಾರಾಯಣ ಹಾಗೂ ಶಯನರೂಪದ ರಂಗನಾಥನ ಪ್ರತ್ಯೇಕ ಗುಡಿಗಳಿವೆ. ವಿಶಾಲವಾದ ಪ್ರಾಂಗಣದಲ್ಲಿ ನರಸಿಂಹಸ್ವಾಮಿಯ ಮೂಲದೇವರಿಗೆ ಎಡಭಾಗದಲ್ಲಿ ಪ್ರತ್ಯೇಕವಾಗಿ ವೈಕುಂಠ ಮಂಟಪವಿದೆ. ದೇವಸ್ಥಾನದ ಪ್ರಾಂಗಣದ ಹೊರಗೆ ಎಡಭಾಗದಲ್ಲಿ ದೇವಸ್ಥಾನದ ನಿರ್ಮಾತೃ ಪರಂಪರೆಯ ಶ್ರೀ ನಲ್ಲಪ್ಪನವರ ವಾಸದ ಮನೆಯಿದ್ದು ಇದು ಕಛೇರಿಯಾಗಿ ಬಳಕೆಯಾಗುತ್ತಿದೆ. ಇಲ್ಲಿಯೇ ಭೋಜನಶಾಲೆ, ಅಡಿಗೆ ಕೋಣೆಗಳಿವೆ. ಈ ಆವರಣದಲ್ಲಿ ಅರ್ಧನಾರೀಶ್ವರ ಎಂಬ ಹೆಸರಿನ ಆಕರ್ಷಕ ಶಿವಲಿಂಗ,

ಮುಂಭಾಗದಲ್ಲಿ ನಂದಿ ವಿಗ್ರಹವಿದೆ. ಇದಕ್ಕೆ ಪ್ರತ್ಯೇಕ ಅರ್ಚಕರೂ ಇದ್ದು ನಿತ್ಯವೂ ಪೂಜೆ ನಡೆಯುತ್ತದೆ. ದೇವಸ್ಥಾನದ ಪೂರ್ವಕ್ಕೆ ಎಡಭಾಗದಲ್ಲಿ ಸಮುದಾಯ ಭವನದ ಮಾದರಿಯಲ್ಲಿ ಕಲ್ಯಾಣಮಂಟಪ, ಭೋಜನಗೃಹ, ಅತಿಥಿಗೃಹಗಳಿವೆ. ದೇವಾಲಯದ ಪೂರ್ವಕ್ಕೆ 100 ಮೀ. ದೂರದಲ್ಲಿ ವಿಶಾಲವಾದ ಪುಷ್ಕರಿಣಿ ಇದೆ. ಚಿಕ್ಕಸೀಬಿಯಲ್ಲಿ ಬಸ್ಸು ಇಳಿದು ಬಲಬದಿಗೆ ತಿರುಗಿದರೆ ಸೀಬಿ ದೇವಸ್ಥಾನದ ದ್ವಾರಬಾಗಿಲು ಆಹ್ವಾನಿಸುವಂತಿದೆ. ಆ ಮೂಲಕ ಹಾದುಬಂದರೆ ಮೊದಲಿಗೆ ಬಲಭಾಗದಲ್ಲಿ ಭೂತರಾಯನ ಗುಡಿ ಇದೆ. ಇದನ್ನು ದಾಸಯ್ಯನಗುಡಿ ಎಂದೂ ಕರೆಯುತ್ತಾರೆ. ಒಕ್ಕಲುಗಳು ಅವರವರ ಇಷ್ಟಾನುಸಾರ ಪ್ರಾಣಿಬಲಿ, ಮಾಂಸಾಹಾರ, ಅನ್ನಸಂತರ್ಪಣೆ ಮಾಡುತ್ತಾರೆ. ಇದು ಮೂಲ ದೇವಸ್ಥಾನಕ್ಕೆ ಸ್ವಲ್ಪ ದೂರದಲ್ಲಿದೆ. ಇದರ ನಡುವೆ ದೇವಸ್ಥಾನದ ಭಕ್ತರು ಬೇರೆ ಬೇರೆ ಜನಾಂಗದವರು ಕಟ್ಟಿಸಿರುವ ಧರ್ಮಛತ್ರಗಳಿವೆ. ಇಲ್ಲಿ ಯಾತ್ರಾರ್ಥಿಗಳು ಇಳಿದುಕೊಂಡು ಪೂಜಾಕಾರ್ಯಗಳ ಸೇವೆ ಸಲ್ಲಿಸಿ ಹೋಗುವುದು ನಿತ್ಯವೂ ನಡೆಯುತ್ತಿದೆ. ಸುಮಾರು 20 ಎಕರೆ ಪ್ರದೇಶದ ಕಾಡಿನ ನಡುವಿನ ಈ ದೇವಸ್ಥಾನದ ಜಾಗದಲ್ಲಿ ಸಾಕಷ್ಟು ಮರಗಿಡಗಳಿದ್ದು, ಭಕ್ತರು ಜಾತ್ರೆಯ ಕಾಲದಲ್ಲಿ ಇಳಿದುಕೊಳ್ಳುವ, ಅಡಿಗೆ ತಯಾರಿಸುವ ಕಾರ್ಯವೂ ನಡೆಯುತ್ತದೆ.

ದೇವಸ್ಥಾನದ ವತಿಯಿಂದ ಪ್ರತಿ ಶನಿವಾರ ಮತ್ತು ಭಾನುವಾರ ಬಂದ ಭಕ್ತರಿಗೆಲ್ಲಾ ಭೋಜನದ ವ್ಯವಸ್ಥೆಯನ್ನು ಮಾಡಲಾಗಿದೆ. ಬೆಳಿಗ್ಗೆ 11 ಗಂಟೆಯಿಂದ 1.30ರ ಸುಮಾರಿನ ವರೆಗೆ ದೇವಸ್ಥಾನದ ವತಿಯಿಂದ ಪ್ರಸಾದದ ಹೆಸರಲ್ಲಿ ಭೋಜನ ವ್ಯವಸ್ಥೆ ನಡೆಯುತ್ತದೆ.

**ಭೂತರಾಯನ ಅವತಾರದಲ್ಲಿ ನರಸಿಂಹ:**

ಭೂತರಾಯನ ಉದ್ಭವದ ಬಗೆಗೆ ಜನಪದ ಕಥೆಯೊಂದು ಹೀಗಿದೆ. ಸೀಬಿ ಸಮೀಪದ ಗ್ರಾಮದ ಮುದುಕಿಯೊಬ್ಬಳು ಸೀಬಿ ನರಸಿಂಹಸ್ವಾಮಿಗೆ ಹುಂಜವೊಂದನ್ನು ಹರಕೆ ಬಿಟ್ಟಳು. ಅದನ್ನು ಸೀಬಿ ದೇವಸ್ಥಾನದ ಮುಂದೆ ದೇವರಿಗೆ ಬಲಿ ಕೊಟ್ಟು ಹರಕೆ ತೀರಿಸುವ ಬಯಕೆ. ಸೀಬಿ ದೇವಸ್ಥಾನದಲ್ಲಿ ಇದಕ್ಕೆ ಆಸ್ಪದ ಇಲ್ಲ. ಮುದುಕಿ ಸ್ವಾಮಿಯ ಹರಕೆ ತೀರಿಸಲಾಗದೆ ಕೊರಗಿದಳು. ಈ ಸಂಗತಿ ದೇವಸ್ಥಾನದ ಅರ್ಚಕರು, ಸಮಿತಿಯವರಿಗೆ ತಿಳಿದು ಸ್ವಾಮಿ ಹೊರಗೆ ಹೋಗದಂತೆ ಎಚ್ಚರಿಕೆ ವಹಿಸಿದರು. ಇತ್ತ ಮುದುಕಿ ವಯಸ್ಸಾದರೂ ಸ್ವಾಮಿಗೆ ಕೊಡಬೇಕಾದ ಹರಕೆ ಹಾಗೆಯೇ ಉಳಿಯಿತು. ಇದೇ ಕೊರಗಿನಲ್ಲಿ ನಿದ್ರೆ ಬಾರದೇ ಬಳಲಿದಳು. ಹೀಗೆಯೇ ಹಲವು ರಾತ್ರಿ ಕಳೆದಳು. ಒಂದು ರಾತ್ರಿ ಮುದುಕಿಗೆ ಸರಿರಾತ್ರಿಯಲ್ಲಿ ಕನಸೊಂದು ಬಿದ್ದಿತು. ಅದರಲ್ಲಿ ನರಸಿಂಹಸ್ವಾಮಿ ಮೂರು ನಾಮದ, ಶಂಖ, ಭವನಾಸಿ ಹಿಡಿದ ದಾಸಯ್ಯನ ರೂಪದಲ್ಲಿ ಬಂದು ಅಜ್ಜಿಗೆ ಹೀಗೆ ಹೇಳಿದನು. ನಿನ್ನ ಕೋಳಿ ಹರಕೆ ತೀರದಿರುವ

ಬಗ್ಗೆ ಚಿಂತಿಸಬೇಡ, ನರಸಿಂಹಸ್ವಾಮಿ ದೇವಸ್ಥಾನದ ಬಳಿ ನಿನ್ನ ಹರಕೆ ತೀರದೇ ಹೋದರೂ ನಾನೇ ನರಸಿಂಹಸ್ವಾಮಿ. ದಾಸಯ್ಯನ ರೂಪದಲ್ಲಿ ನಿಮ್ಮ ಮನೆಯ ಬಾಗಿಲಿಗೆ ಬರುತ್ತೇನೆ. ನೀನು ನಿನ್ನ ಇಷ್ಟದಂತೆ ಶನಿವಾರ ಮನೆ, ಒಲೆ ಸಾರಿಸಿ, ಅಲ್ಲಿಯೇ ಕೋಳಿ ಕೊಯ್ದು ಅಡಿಗೆ ಸಿದ್ಧಪಡಿಸು. ನಾನು ದಾಸಯ್ಯನ ರೂಪದಲ್ಲಿ ಬರುತ್ತೇನೆ. ನಿನ್ನ ಹರಕೆಯನ್ನು ನನಗೆ ಊಟ ಹಾಕುವ ಮೂಲಕ ತೀರಿಸು ಎಂದು ಹೇಳಿದಂತಾಯಿತು. ಮುದುಕಿ ರಾತ್ರಿ ಸ್ವಾಮಿ ಕನಸಿಗೆ ಬಂದ ಸಂಗತಿಯನ್ನು ತನ್ನ ಪರಿಚಯದವರಲ್ಲಿ ಹೇಳಿಕೊಂಡಳು. ಕೆಲವರು ತಾತ್ಸಾರ ಮಾಡಿದರು, ಕೆಲವರು ಗೇಲಿ ಮಾಡಿದರು. ಆದರೂ ಮುದುಕಿ ಮಾತ್ರ ತನ್ನ ನಿಷ್ಠೆ ಬಿಡಲಿಲ್ಲ. ಮುಂದಿನ ಶನಿವಾರದಂದು ತನ್ನ ಮನೆ, ಒಲೆ ಸಾರಿಸಿ ನರಸಿಂಹಸ್ವಾಮಿಯ ಹೆಸರಲ್ಲಿ ಬಿಟ್ಟ ಕೋಳಿ ಹುಂಜವನ್ನು ಕೊಯ್ದು ಅಡಿಗೆ ತಯಾರಿಸಿ, ನರಸಿಂಹಸ್ವಾಮಿಗೆ ಎಡೆ ತಯಾರಿಸಿದಳು. ಯಾವ ದಾಸಯ್ಯನೂ ಬರಲಿಲ್ಲ. ಮುದುಕಿ ಗಾಬರಿಯಾದಳು. ಇತ್ತ ದೇವಸ್ಥಾನದ ಅರ್ಚಕರಿಗೆ ಮುದುಕಿಯ ಕೋಳಿ ಕಥೆ ತಿಳಿದು ಸ್ವಾಮಿ ಹೊರಗೆ ಹೋಗದಂತೆ ಬಾಗಿಲ ಬಳಿ ಸಾಲಾಗಿ ಮಲಗಿದರು. ಆದರೂ ನರಸಿಂಹಸ್ವಾಮಿ ದಾಸಯ್ಯನ ರೂಪದಲ್ಲಿ ಮುದುಕಿಯ ಮನೆಗೆ ಬಂದನು, ಎಡೆ ಕೇಳಿದನು. ಮುದುಕಿಗೆ ಪರಮಾನಂದವಾಯಿತು. ಭಕ್ತಿಯಿಂದ ಊಟ ಬಡಿಸಿದಳು. ದಾಸಯ್ಯನ ವೇಶದಲ್ಲಿದ್ದ ನರಸಿಂಹಸ್ವಾಮಿ ಮುದುಕಿ ಬಡಿಸಿದ ಎಡೆಯನ್ನು ತೃಪ್ತಿಯಿಂದ ಊಟ ಮಾಡಿ, ಅಲ್ಲಿಂದ ದೇವಸ್ಥಾನಕ್ಕೆ ಬಂದನು. ಇತ್ತ ದೇವಸ್ಥಾನದ ಬಾಗಿಲಲ್ಲಿ ಅರ್ಚಕರು, ದೇವಸ್ಥಾನದ ವ್ಯವಸ್ಥಾಪಕರು ಸಾಲಾಗಿ ಮಲಗಿದ್ದಾರೆ. ನರಸಿಂಹಸ್ವಾಮಿ ಅವರನ್ನು ದಾಟಿಕೊಂಡು ಹೋಗುವಾಗ ಕಾಲು ಸೋಕಿದಂತಾಯಿತು. ಬಾಗಿಲು ಕಾಯ್ದುಕೊಂಡಿದ್ದವರು ಗಾಬರಿಯಿಂದ ನೋಡಿದರು. ದೇವಸ್ಥಾನದ ಉದ್ದಕ್ಕೂ ನರಸಿಂಹಸ್ವಾಮಿ ಭೂತಪ್ಪನ ರೂಪದಲ್ಲಿ ನಿಂತಿದ್ದಾನೆ. ಮೂರು ದೊಡ್ಡ ನಾಮ, ಭಯಂಕರ ಮುಖಭಾವ, ಬಾಯಲ್ಲಿ ಮಾಂಸ ತುಂಬಿಕೊಂಡು ಭಯಂಕರ ಕಣ್ಣಿನ ಭೂತರಾಯನ ರೂಪದಲ್ಲಿ ಕಾಣಿಸಿಕೊಂಡನು. ದೇವರ ಬಗೆಗೆ ಅನುಮಾನಪಟ್ಟ ಅರ್ಚಕರ ಪಡೆಯು ಕಾವಲು ಕಾಯ್ದದದ್ದು, ಅನುಮಾನ ಪಟ್ಟಿದ್ದು ಅಪರಾಧ ಎನ್ನುವ ಭಾವನೆ. ಪರಿಹಾರವಾಗಿ ಸ್ವಾಮಿಯ ಭಕ್ತರ ಭಾವನೆಗೆ ಧಕ್ಕೆ ತರುವುದು ತರವಲ್ಲ ಎಂಬ ಭಾವನೆಯೂ ಬೆಳೆಯಿತು. ಅಂದಿನಿಂದ ಸೀಬಿ ಕ್ಷೇತ್ರದಲ್ಲಿ ಭೂತರಾಯನನ್ನು ಸ್ಥಾಪಿಸಿ ಭಕ್ತರು ಪ್ರಾಣಿಬಲಿ ಹರಕೆಯನ್ನು ತೀರಿಸಿಕೊಳ್ಳಲು ಮುಕ್ತ ಅವಕಾಶ ಮಾಡಿಕೊಡಲಾಗಿದೆ. ಇದರಿಂದಾಗಿ ಸೀಬಿ ನರಸಿಂಹಸ್ವಾಮಿ ಯ ಜಾತ್ರೆಯ ಒಂದು ವಾರದ ಕಾಲ ನಡೆದು ಅಪಾರ ಸಂಖ್ಯೆಯ ಒಕ್ಕಲುಗಳು ದೇವಸ್ಥಾನದ ಆವರಣದಿಂದ ದೂರದ ಮರಗಿಡಗಳ ಅಡಿಯಲ್ಲಿ ಮಾಂಸದೂಟ ಮಾಡಿಸಿ ದಾಸಯ್ಯನಿಗೆ ಮೊದಲು ಎಡೆಹಾಕಿ ಗೋವಿಂದ ಎನ್ನಿಸಿಕೊಂಡು, ಬಂದ ಭಕ್ತರಿಗೆ, ಸಂಬಂಧಿಕರಿಗೆ ಊಟ ಹಾಕುವುದು

ಇಂದಿಗೂ ನಡೆದುಬಂದಿದೆ. ಜಾತ್ರೆಯ ಸಂದರ್ಭ ಮಾತ್ರವಲ್ಲದೆ ಪ್ರತಿ ಶನಿವಾರ, ಭಾನುವಾರಗಳಂದು ದೂರದ ಊರುಗಳಿಂದ ಬರುವ ಭಕ್ತರು, ಮಕ್ಕಳಿಗೆ ತಲೆಕೂದಲು ತೆಗೆಸುವುದು, ಹರಿಸೇವೆ, ಭೂತರಾಯನ ಹರಕೆ ಮೊದಲಾದ ಹೆಸರಲ್ಲಿ ಭೂತರಾಯನಿಗೆ ಮಾಂಸಾಹಾರ ನೈವೇದ್ಯ ನಡೆಯುತ್ತದೆ. ಇಲ್ಲಿನ ಸಂಪ್ರದಾಯದ ಪ್ರಕಾರ ಮೊದಲಿಗೆ ನರಸಿಂಹಸ್ವಾಮಿಗೆ ಪೂಜೆ ಮಾಡಿಸಿ ಹರಕೆ ಒಪ್ಪಿಸಿ, ನಂತರ ದೇವಸ್ಥಾನದ ಹೊರವಲಯದಲ್ಲಿ ಭೂತರಾಯನ ಹರಕೆ ತೀರಿಸಲು ಪ್ರಾಣಿಬಲಿ ನೀಡಲಾಗುವುದು. ಮಾಂಸ ಮುಟ್ಟಿದ ನಂತರ ನರಸಿಂಹಸ್ವಾಮಿಯ ಸನ್ನಿಧಿಗೆ, ಆವರಣಕ್ಕೆ ಬರುವಂತಿಲ್ಲ. ಇದು ಇಲ್ಲಿನ ಸಂಪ್ರದಾಯವಾಗಿದೆ. ದೂರದ ಊರುಗಳಿಂದ ಬರುವ ಭಕ್ತರು ದೇಗುಲದ ಹೊರವಲಯದಲ್ಲಿ ತಂಗಿ ಭೂತರಾಯನ ಹರಕೆ ತೀರಿಸಿಕೊಂಡು ಹೋಗುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಕೆಲವರು ಹರಿಗೆ ಕುಣಿತ, ಮಣೇವು ಸೇವೆ ಮೊದಲಾದ ಆಚರಣೆಗಳನ್ನು ನಡೆಸುತ್ತಾರೆ. ಈ ಸಂದರ್ಭದಲ್ಲಿ ಹರಿಗೆ ಕುಣಿಸುವ ದಾಸಯ್ಯಗಳು ಪ್ರಮುಖ ಪಾತ್ರ ವಹಿಸುತ್ತಾರೆ. ಈ ಪರಂಪರೆಯಲ್ಲಿ ಹುಂಜನಾಳ ಗ್ರಾಮದ ಸೀಬಿನಯ್ಯನವರ ಐದನೇ ತಲೆಮಾರಿನ ದಾಸಪ್ಪನವರು ಈ ಸೇವೆಯನ್ನು ಇಂದಿಗೂ ಮುಂದುವರಿಸುತ್ತಿದ್ದಾರೆ.

**ಶ್ರೀ ನರಸಿಂಹಸ್ವಾಮಿ ಕಥಾವಳಿ:**

ನರಸಿಂಹಸ್ವಾಮಿಯ ಕಥೆಗೆ ಪೌರಾಣಿಕ ಹಿನ್ನೆಲೆಯಿದೆ. ನರಸಿಂಹಸ್ವಾಮಿ ಶ್ರೀಹರಿಯ ನಾಲ್ಕನೇ ಅವತಾರ. ಹಿರಣ್ಯಾಕ್ಷ ಎಂಬ ರಾಕ್ಷಸ ಮಹಾ ಕ್ರೂರಿಯಾಗಿದ್ದು ನರಮಾನವರಿಗಲ್ಲದೆ ದೇವಾನುದೇವತೆಗಳಿಗೂ ಕಂಟಕನಾಗಿದ್ದನು. ಈತನು ಕಶ್ಯಪ ಎಂಬುವವನ ಮಗ. ದಿತಿ ಈತನ ತಾಯಿ. ಹಿರಣ್ಯಾಕ್ಷ ಈತನ ಸೋದರ. ಶಕುನಿ, ಶಂಬರ, ದೃಷ್ಟಿ, ವೃಕ, ಕಾಲನಾಭ, ಉತ್ಕಟ ಮೊದಲಾದ ಮಕ್ಕಳಿದ್ದರು. ಬ್ರಹ್ಮನು ಈತನಿಗೆ ನಾಶವಾಗದಂತಹ ವರವನ್ನು ಕೊಟ್ಟಿದ್ದನು. ಆದುದರಿಂದ ಹಿರಣ್ಯಾಕ್ಷ ಮಹಾ ಲೋಕಕಂಟಕನಾಗಿ, ಯಾರಿಗೂ ಹೆದರದೆ, ಅಂಜದೆ ಗುರು, ದೇವತೆ, ಸ್ತ್ರೀಪುರುಷರಾಗಿ ಮಕ್ಕಳೆನ್ನದೆ ಎಲ್ಲರನ್ನೂ ಪೀಡಿಸುತ್ತಾ ಅಟ್ಟಹಾಸದಿಂದ ಮೆರೆಯುತ್ತಿದ್ದನು. ಇಂಥ ಸಂದರ್ಭದಲ್ಲಿ ಈತನನ್ನು ಸಂಹಾರ ಮಾಡಲೇ ಬೇಕಾದ ಅನಿವಾರ್ಯತೆ ಉಂಟಾಯಿತು. ಆಗ ಮಹಾವಿಷ್ಣು ವರಾಹಾವತಾರದಿಂದ ಹಿರಣ್ಯಾಕ್ಷನನ್ನು ಕೊಲ್ಲಬೇಕಾಯಿತು. ಅದಕ್ಕಾಗಿ ಶ್ರೀವಿಷ್ಣು ಮೂರನೇ ಅವತಾರವಾಗಿ ವರಾಹ ರೂಪದಲ್ಲಿ ಬಂದನು. ಮಹಾ ಬಲಶಾಲಿಯಾದ ಹಿರಣ್ಯಾಕ್ಷನು ತನ್ನ ಭೀಕರವಾದ ಗಧೆಯನ್ನು ತಿರುಗಿಸುತ್ತಾ, ವರುಣ ದೇವನನ್ನು ಯುದ್ಧಕ್ಕೆ ಆಹ್ವಾನಿಸುತ್ತಾನೆ. ಆಗ ವರುಣ ವಿನಯದಿಂದ 'ನಿನ್ನಂಥ ಪರಾಕ್ರಮಿಗೆ ಶ್ರೀಹರಿಯೇ ಸಮರ್ಥನು' ಎಂಬ ಉದ್ರೇಕದ ಮಾತನಾಡಿದನು. ಆಗ ಹಿರಣ್ಯಾಕ್ಷ ತನ್ನ

ಗಧೆಯನ್ನು ತಿರುಗಿಸುತ್ತಾ, ಹರಿಯನ್ನು ಹುಡುಕುತ್ತಾ ಹೊರಟನು. ಆಗ ಶ್ರೀಮಹಾವಿಷ್ಣು ವರಾಹಾವತಾರ ಎತ್ತಿದನು. ಇದೊಂದು ಭಯಂಕರ ರೂಪ. ನಾಲ್ಕು ವೇದಗಳೇ ನಾಲ್ಕು ಕಾಲುಗಳು, ಯುಗಗಳೆಲ್ಲಾ ಈತನ ದಂತಗಳು, ಯಜ್ಞದ ಯೂಪಸ್ತಂಭವೇ ಕೋರೆಹಲ್ಲುಗಳು, ಚಯನವೆಂಬ ಅಗ್ನಿವೇದಿಕೆ ಮುಖ, ದರ್ಭೆಗಳು ರೋಮವಾಗಿ, ಅಗ್ನಿಮುಖವಾಗಿ ಬ್ರಹ್ಮಸ್ಥಾನದಲ್ಲಿರುವ ಋತ್ವಿಕ ಈತನ ತಲೆ. ಹಗಲು-ರಾತ್ರಿಗಳೆರಡೂ ಈತನ ಕಣ್ಣುಗಳು, ಸ್ವರಗಳು ಆಭರಣ, ಆಜ್ಯವೇ ಮೂಗು, ಸ್ರುವವೆಂಬ ಯಜ್ಞ ದರ್ವಿಯೇ ಆತನ ಮೂರ್ತಿ, ಸಾಮವೇದ ಘೋಷವೇ ಅವನ ಧ್ವನಿ, ಧರ್ಮವೇ ಮೂರ್ತಿ, ಹೋಮ ಆತನ ಪುರುಷಲಿಂಗ, ಪಶುಗಳು ಸೋಮಲತೆಗಳು ಬೀಜಗಳು, ಮಂತ್ರಗಳು ಆಸ್ಮಿತಗಳು, ಯಾಗವೇದಿಕೆ ವರಾಹನ ತೋಳು, ಹವಿಸ್ಸೇ ದೇಹ, ದಕ್ಷಿಣೆಯು ಆತನ ಹೃದಯ, ಹವ್ಯಕವ್ಯಗಳು ಮಲಮೂತ್ರವಾಗಿ, ಯಾಗದೀಕ್ಷೆ ಬಲದ ರೂಪ ಹೀಗೆ ಪ್ರಕೃತಿಯನ್ನೇ ಶಕ್ತಿಯನ್ನಾಗಿಸಿಕೊಂಡು ಬ್ರಹ್ಮ ನೀಡಿದ ಮಹಾ ಶಕ್ತಿಸಾಮರ್ಥ್ಯಕ್ಕೆ ಸಡ್ಡು ಹೊಡೆದು ದೇವಮಾನವರಿಗೆಲ್ಲಾ ಕಂಟಕನಾಗಿದ್ದ ಹಿರಣ್ಯಾಕ್ಷನನ್ನು ಮಹಾವಿಷ್ಣು ಕ್ಷಣಮಾತ್ರದಲ್ಲಿ ವರಾಹಾವತಾರದಲ್ಲಿ ಕೊಂದುಹಾಕಿದನು.

ತನ್ನ ಸೋದರ ಹಿರಣ್ಯಾಕ್ಷನನ್ನು ಕೊಂದ ವಿಷ್ಣುವಿನ ಮೇಲೆ ಕಡುಕೋಪದಿಂದ ಹಿರಣ್ಯಕಷಿಪು ನಾರಾಯಣನ ಬಗೆಗೆ ವಿಪರೀತ ಕೋಪೋದ್ರಿಕ್ತನಾಗಿ ದಿನದಿಂದ ದಿನಕ್ಕೆ ವ್ಯಾಘ್ರನಾಗುತ್ತಾ ಬೆಳೆದನು. ಉಗ್ರರೂಪದ ನರರಾಕ್ಷಸ ದೇವಮಾನವರಿಗೂ ಸಿಂಹಸ್ವಪ್ನ ವಾಗುವುದಲ್ಲದೆ ತನ್ನ ಸೋದರನನ್ನು ಕೊಂದ ಮಹಾವಿಷ್ಣುವಿನ ಮೇಲೆ ನಿರಂತರ ಹಗೆತನ ಸಾಧಿಸಿದನು. ತಾನಷ್ಟೇ ಅಲ್ಲ, ತನ್ನ ಪರಿಸರ, ಪರಿವಾರದವರು ಯಾರೇ ಆಗಲಿ ನಾರಾಯಣನ ಹೆಸರನ್ನೇ ಹೇಳುವಂತಿಲ್ಲ. ಶ್ರೀಹರಿಯ ಹೆಸರು ಎತ್ತಿದರೆ ಅಂಥವರಿಗೆ ಉಗ್ರಶಿಕ್ಷೆ, ಹಿಂಸೆ ಕೊಡಲಾರಂಭಿಸಿದನು ಮಾತ್ರವಲ್ಲ ನರಸಿಂಹಾವತಾರ ಎತ್ತುವುದಕ್ಕೆ ಪ್ರೇರಕನೂ ಆದನು, ಮಹಾವಿಷ್ಣುವನ್ನು ನರಸಿಂಹನ ರೂಪದಲ್ಲಿ ಪ್ರತ್ಯಕ್ಷವಾಗಿ ನೋಡಿದ ರಾಕ್ಷಸ ರಾಜ. ಈತನ ಮಗನೇ ಮಹಾ ಹರಿಭಕ್ತ ಪ್ರಹ್ಲಾದ.

ಹಿರಣ್ಯಕಶಿಪು ಕಯಾದು ಎಂಬುವವಳೊಂದಿಗೆ ವಿವಾಹವಾದನು. ಮಹಾವಿಷ್ಣು ವರಾಹಾವತಾರ ತಾಳಿ ತನ್ನ ತಮ್ಮ ಹಿರಣ್ಯಾಕ್ಷನನ್ನು ಕೊಂದುದರಿಂದ ಆತನ ಮೇಲೆ ಸೇಡು ತೀರಿಸಿಕೊಳ್ಳಲು ಬ್ರಹ್ಮನನ್ನು ಮೆಚ್ಚಿಸಲು ಉಗ್ರತಪಸ್ಸನ್ನಾಚರಿಸಿದನು. ಕಾಡಿನಲ್ಲಿ ಕುಳಿತಿರುವಾಗ ದೇವಾನುದೇವತೆಗಳು ಒಂದುಗೂಡಿ ಹಿರಣ್ಯಕಶಿಪುವಿನ ರಾಜ್ಯವೂ ಸೇರಿದಂತೆ ರಾಕ್ಷಸರ ಸಂಹಾರಕ್ಕೆ ನಿಂತರು. ಹೋರಾಟ ಬಿರುಸಾಗಿಯೇ ನಡೆದು ದೇವತೆಗಳು ಸೋತುಹೋದರು. ಜೊತೆಗೆ ಇಂದ್ರನೂ ಸೋತು ಹಿಂತಿರುಗುವಾಗ ಹಿರಣ್ಯಕಶಿಪುವಿನ ಹೆಂಡತಿಯಾದ ಕಯಾದುವನ್ನು ಬಲವಂತವಾಗಿ ಅಪಹರಿಸಿಕೊಂಡು ಹೋದನು. ಕಯಾದು

ಗರ್ಭಿಣಿಯಾಗಿದ್ದು ಸಾತ್ವಿಕೆಯೂ, ಭಕ್ತೆಯೂ ಆಗಿದ್ದಳು. ಇಂದ್ರನಿಂದ ಅಪಹರಣಕ್ಕೆ ಒಳಗಾಗಿ ರೋಧಿಸಿದಳು. ಈಕೆಯ ಆರ್ತನಾದವನ್ನು ಕೇಳಿದ ನಾರದ ಮಹರ್ಷಿ ದೇವೇಂದ್ರನಿಂದ ಕಯಾದುವನ್ನು ಬಿಡಿಸಿ ಕೆಲವು ಸಮಯ ತಮ್ಮ ಆಶ್ರಮದಲ್ಲಿಯೇ ಇರಿಸಿಕೊಂಡರು. ಈ ವೇಳೆಗೆ ಕಯಾದು ತುಂಬು ಗರ್ಭಿಣಿಯಾಗಿದ್ದು ದೇವಮಾನವರ ಕತೆ, ಉಪಾಸನೆಯಲ್ಲಿ ಹೆಚ್ಚು ಅನುರಕ್ತಳಾದಳು. ತನ್ನ ಆಶ್ರಮದಲ್ಲಿದ್ದ ಕಯಾದುವಿಗೆ ನಾರದರು ವೇದ, ನೀತಿಶಾಸ್ತ್ರ, ತರ್ಕ, ಆಧ್ಯಾತ್ಮಿಕ ವಿಚಾರಗಳನ್ನು ಬೋಧಿಸಿದರು. ಕಯಾದುವಿನ ಗರ್ಭದಲ್ಲಿದ್ದ ಮಗು (ಪ್ರಹ್ಲಾದ) ನಾರದ ಬೋಧಿಸಿದ ನೀತಿಕತೆಗಳನ್ನು ಆಲಿಸಿತು.

ಹಿರಣ್ಯಕಶಿಪು ಮಹಾತಪಸ್ಸು ಆಚರಿಸಿ ಮರಳಿ ಅರಮನೆಗೆ ಬಂದನು. ಹೆಂಡತಿ ಕಯಾದು ನಾರದನ ಆಶ್ರಮದಲ್ಲಿರುವ ಸಂಗತಿ ತಿಳಿದು ಅಲ್ಲಿಗೆ ಹೋಗಿ ಆಕೆಯನ್ನು ಕರೆದುಕೊಂಡು ಬಂದನು. ದಂಪತಿಗಳು ಮತ್ತೆ ಒಂದುಗೂಡಿದರು. ಇವರಿಗೆ ಹುಟ್ಟಿದವನೇ ಪ್ರಹ್ಲಾದ. ಈತನೇ ನರಸಿಂಹಸ್ವಾಮಿಯ ಅವತಾರಕ್ಕೆ ಪ್ರೇರಕನಾದನು.

ಹಿರಣ್ಯಕಶಿಪು-ಕಯಾದು ಈ ದಂಪತಿಗಳಿಗೆ ಪ್ರಹ್ಲಾದ, ಸಂಹ್ಲಾದ, ಅನುಹ್ಲಾದ, ಶಿಬಿ ಮತ್ತು ಬಾಷ್ಕಲ ಎಂಬ ಐದು ಮಂದಿ ಮಕ್ಕಳು ಜನಿಸಿದರು. ಇವರಲ್ಲಿ ಪ್ರಹ್ಲಾದ ವಿದ್ಯೆ, ಬುದ್ಧಿಯಲ್ಲಿ, ಸಾಹಸ ಗುಣದಲ್ಲಿ ಪ್ರಬಲನೆಂಬುದನ್ನು ಹಿರಣ್ಯಕಶಿಪು ಗಮನಿಸಿದನು. ಪ್ರಹ್ಲಾದನಿಗೆ ಸಕಲ ವಿದ್ಯೆಯನ್ನು ನೀಡುವ ಮೂಲಕ ನನ್ನ ರಾಜ್ಯದಲ್ಲಿ ನಾರಾಯಣನ ಹೆಸರೇ ಇಲ್ಲದಂತೆ ಮಾಡಬೇಕೆಂದು ನಿರ್ಧಾರ ಮಾಡಿದನು. ಅದರಂತೆ ಪ್ರಹ್ಲಾದನನ್ನು ಗುರುವಿನ ಬಳಿಗೆ ಕರೆದುಕೊಂಡು ಹೋಗಿ, ಗುರುಗಳು ಪ್ರಹ್ಲಾದನನ್ನು ತನ್ನ ಮನೆಯಲ್ಲಿಯೇ ಇಟ್ಟುಕೊಂಡು ಸಕಲ ವಿದ್ಯಾಭ್ಯಾಸ ಮಾಡಿಸುವಂತೆ ಕೋರಿದನು. ಜೊತೆಗೆ 'ಹಿರಣ್ಯಾಯ ನಮಃ' ಎಂದು ಮಾತ್ರ ಹೇಳಬೇಕು. ಅಪ್ಪಿತಪ್ಪಿಯೂ 'ನಾರಾಯಣಾಯ ನಮಃ' ಎಂದು ಉಚ್ಛರಿಸದಂತೆ ನೋಡಿಕೊಳ್ಳಬೇಕೆಂದು ಗುರುಗಳಿಗೆ ತಾಕೀತು ಮಾಡಿದನು. ಈ ಮೂಲಕ ನಾರಾಯಣ ಎಂಬ ಹೆಸರು ರಾಜ್ಯದಲ್ಲಿ ಯಾರೂ ಹೇಳದಂತೆ ಸೂಚಿಸಿದನು. ಇದಾದ ಕೆಲವು ಸಮಯದ ನಂತರ ಪ್ರಹ್ಲಾದ ತನ್ನ ಗುರುವಿನೊಡಗೂಡಿ ತನ್ನ ತಂದೆಯ ಅರಮನೆಗೆ ಬಂದನು. ಮೊದಲು ತಂದೆಗೆ ನಮಸ್ಕರಿಸಿದನು. ಗುರುಗಳೊಂದಿಗೆ ಬಂದು ವಿನೀಭೂತನಾಗಿ ನಮಸ್ಕರಿಸಿದ ಮಗನ ಬಗೆಗೆ ಕಶ್ಯಪನಿಗೆ ಸಂತೋಷವಾಯಿತು. ಮಗನನ್ನು ಪ್ರೀತಿಯಿಂದ ಕೈ ಹಿಡಿದು ಮೇಲಕ್ಕೆ ಎತ್ತಿದನು. ಗುರುಗಳಿಂದ ಇದುವರೆಗೆ ಕಲಿತ ಉತ್ತಮ ಗುಣಗಳ ಬಗೆಗೆ ಚರ್ಚೆ, ಅವುಗಳನ್ನು ಹೇಳುವಂತೆ ಕೇಳಿದನು. ಪ್ರಹ್ಲಾದನಿಗೂ ಇದು ಸಂತೋಷವಾಯಿತು. ಧೈರ್ಯದಿಂದಲೇ ತಾನು ಕಲಿತ ವಿದ್ಯೆಯನ್ನು ತಂದೆಗೆ ಒಪ್ಪಿಸಲು

ಸಿದ್ಧನಾಗಿ ಕೈಮುಗಿದು ನಿಂತು ಹೀಗೆ ಹೇಳಿದನು 'ಭವವಿಲ್ಲದ, ಆದಿ ಮಧ್ಯ ಅಂತ್ಯವಿಲ್ಲದಂಥ, ಕಣ್ಣಿಗೆ ಕಾಣುವ ಸಕಲರಿಗೂ ಗುರುವಾದ, ಅಗೋಚರ ಮತ್ತು ಗೋಚರ ಈ ಎರಡೂ ರೂಪದಲ್ಲಿ ಕಾಣುವ ಭಗವಂತನಾದ ಶ್ರೀ ಮಹಾವಿಷ್ಣುವಿಗೆ ನಾನು ಮೊದಲು ನಮಿಸುತ್ತೇನೆ' ಎಂದು ಹೇಳಿದನು. ಶ್ರೀಹರಿಯ ಹೆಸರಿನ ಮಾತುಗಳನ್ನು ಕೇಳಿದ ಹಿರಣ್ಯಕಶಿಪುವಿಗೆ ಆಕಾಶವೇ ಕಳಚಿ ಮೇಲೆ ಬಿದ್ದಂತಾಯಿತು. ಕಣ್ಣುಗಳು ಕೆಂಪಾದವು, ಮೈನಡುಗತೊಡಗಿತು, ತುಟಿ ಅದುರಿದವು. ಸಿಡಿಲು ಬಡಿದ ಅನುಭವವಾಯಿತು. ಕೋಪಗೊಂಡು, ವಿದ್ಯೆ ಬುದ್ಧಿ ಹೇಳಿಕೊಟ್ಟ ಗುರುಗಳ ಕಡೆಗೆ ನೋಡಿದನು. ಗುರುವಿಗೆ ಅಪರಾಧವಾದುದರ ಬಗ್ಗೆ ತಿಳಿಯಿತು, ನಡುಗಿದನು. ಆದರೂ ಆ ಗುರು ನಾರಾಯಣನ ಸ್ಮರಣೆ ಮಾಡದಿದ್ದರೂ ಪ್ರಹ್ಲಾದ ಹೇಗೆ ಕಲಿತುಕೊಂಡನು ಎಂಬ ಶಂಕೆ ಆರಂಭವಾಯಿತು. ಪ್ರಹ್ಲಾದ ಮಾಡಿದ ತಪ್ಪನ್ನು ರಾಜನಿಗೆ ತಿಳಿಸುತ್ತಾ ನಾನು ಎಂದೂ ಪ್ರಹ್ಲಾದನಿಗೆ ಶ್ರೀಹರಿಯ ಬಗ್ಗೆ ಹೇಳಿಲ್ಲ ಎಂದು ಹೇಳಿ ಪ್ರಹ್ಲಾದನನ್ನು ಕುರಿತು 'ಯಾರು ಹೇಳಿಕೊಟ್ಟರು ನಿನಗೆ' ಎಂದು ಕೇಳಿದನು. ಅದಕ್ಕೆ ಪ್ರಹ್ಲಾದ ಧೈರ್ಯವಾಗಿ 'ಈ ಎಲ್ಲವನ್ನೂ ಮಹಾವಿಷ್ಣುವೇ ನನಗೆ ಹೇಳಿಕೊಟ್ಟ ವಿದ್ಯೆ' ಎಂದು ಮತ್ತೆ ನಾರಾಯಣನ ಬಗೆಗೆ ಭಕ್ತಿ ಪ್ರದರ್ಶಿಸಿದನು. ಇದರಿಂದ ರೋಸಿಹೋದ ಹಿರಣ್ಯಕಶಿಪು ಗುರುಗಳನ್ನು ಕುರಿತು ಹೀಗೆ ಹೇಳಿದನು 'ಈತನಿಗೆ ಇನ್ನು ಮುಂದೆ ಎಂದಿಗೂ ಯಾವ ಸಂದರ್ಭದಲ್ಲೂ ಯಾವುದೇ ಕಾರಣಕ್ಕೂ ನಾರಾಯಣನ ಸ್ಮರಣೆ ಮಾಡದಂತೆ ತಿದ್ದಿ ಪಾಠ ಹೇಳುವುದು. ನಾನು ಕರೆದಾಗ ಬಂದು ಮಗ ಕಲಿತ ವಿದ್ಯೆಯನ್ನು ಪ್ರದರ್ಶಿಸಬೇಕು' ಎಂದು ಆಜ್ಞೆ ಮಾಡಿದನು.

ಗುರುಗಳು ಪ್ರಹ್ಲಾದನ ಬಗೆಗೆ ಎಚ್ಚರ ವಹಿಸಿದರು. ಪ್ರಹ್ಲಾದನು ಸಕಲವಿದ್ಯಾ ಪಾರಂಗತನಾದನು. ಅನಗತ್ಯವಾಗಿ ನಾರಾಯಣನ ನಾಮಸ್ಮರಣೆ ಮಾಡದೆ ಸಾಂದರ್ಭಿಕವಾಗಿ ಮಹಾವಿಷ್ಣುವಿನ ಸ್ಮರಣೆ, ಉಚ್ಚರಣೆ ಮಾಡುತ್ತಿದ್ದನು. ಹೀಗೆ ಬಹಳ ಕಾಲ ಕಳೆಯಿತು. ಒಂದು ದಿನ ಮಗನನ್ನು ಅರಮನೆಗೆ ಗುರುಗಳೊಂದಿಗೆ ಕರೆತರಲಾಯಿತು. ತುಂಬಿದ ಸಂಖ್ಯೆಯಲ್ಲಿ ವಿರಾಜಮಾನರಾಗಿದ್ದ ಹಿರಣ್ಯಕಶಿಪುವಿಗೆ ಮಗ ಬಂದದ್ದು ಹರ್ಷ ತಂದಿತು. ಕುಶಲ ಸಮಾಚಾರವನ್ನು ವಿಚಾರಿಸಿದನು. ನಂತರ 'ನೀನು ಕಲಿತಿರುವ ಉತ್ತಮ ಗುಣಗಳನ್ನು ಪ್ರದರ್ಶಿಸು' ಎಂದನು. ಆಗ ಪ್ರಹ್ಲಾದ ಎಂದಿನಂತೆ ವಿನೀತನಾಗಿ 'ನಾರಾಯಣಾಯ ನಮಃ' ಎಂದು ಹೇಳಿ ಮಹಾವಿಷ್ಣುವಿನ ಶ್ಲೋಕಗಳನ್ನು ಹೇಳಿದನು. ಇದರಿಂದ ಕೆರಳಿದ ಹಿರಣ್ಯ ಕಶಿಪು ಪ್ರಹ್ಲಾದನನ್ನು ಕೊಲ್ಲುವಂತೆ ತನ್ನ ಸೇವಕರಿಗೆ ಆಜ್ಞೆ ಮಾಡಿದನು. ಆ ದೈತ್ಯ ರಾಕ್ಷಸರು ಬಲವಾದ ಆಯುಧಗಳಿಂದ ಹೊಡೆದರು. ಇದರಿಂದ ಏನೂ ತೊಂದರೆಯಾಗದೆ, ಪ್ರಹ್ಲಾದನು ನಗುನಗುತ್ತಲೇ ಇದ್ದನು. ಜೊತೆಗೆ ದೈತ್ಯರಾಕ್ಷಸರನ್ನು ಕುರಿತು ಹೀಗೆ ಹೇಳಿದನು 'ನಿಮ್ಮ ಆಯುಧವೂ ಸೇರಿದಂತೆ ನಿಮ್ಮಲ್ಲಿ, ನನ್ನಲ್ಲಿ ಮಹಾವಿಷ್ಣು

ಕೂಡಿಕೊಂಡಿದ್ದಾನೆ. ಆತನ ಕೃಪೆ ಇರುವವರೆಗೆ ಯಾರೂ ಏನನ್ನು ಮಾಡಲೂ ಸಾಧ್ಯವಿಲ್ಲ' ಎಂದನು. ಆಯುಧಗಳಿಂದ ಹೊಡೆದರು, ಗಧೆಯಿಂದ ಚಚ್ಚಿದರು, ಚೂಪಾದ ಆಯುಧದಿಂದ ತಿವಿದರು. ಏನೂ ಆಗದೆ ಪ್ರಹ್ಲಾದ ನಗುನಗುತ್ತಲೇ ಓಡಾಡಿದನು. ಇದನ್ನು ಕೇಳಿದ ಹಿರಣ್ಯಕಶಿಪು ಮತ್ತೂ ವ್ಯಗ್ರನಾಗಿ ವಿಷಪೂರಿತ ಕಾಳಸರ್ಪ ಕಚ್ಚಿ ಸಾಯಿಸಲು ಯೋಜಿಸಿದನು. ಹಾವುಗಳು ಮೈಕೈ ಸುತ್ತುವರಿದರೂ ಅವುಗಳೊಂದಿಗೆ ಆಟವಾಡಿದ ಪ್ರಹ್ಲಾದ. ಕೊನೆಗೆ ಕಚ್ಚಿದ ಸರ್ಪಗಳ ಬಾಯಿಂದ ಕೋರೆಹಲ್ಲುಗಳು ಉದುರಿ ಹೋದವು. ಕೆಲವು ಸರ್ಪಗಳ ಹೆಡೆಮಣಿ ಸಿಡಿದು ಹೋದವು. ಇದರಿಂದ ಸರ್ಪಗಳಿಗೂ ಪ್ರಾಯಶ್ಚಿತ್ತವಾಗಿ ಪಶ್ಚಾತ್ತಾಪಪಟ್ಟುಕೊಂಡವು.

ಇಷ್ಟಕ್ಕೂ ಸುಮ್ಮನಾಗದ ಹಿರಣ್ಯಕಶಿಪು ಪ್ರಹ್ಲಾದನನ್ನು ಕೊಲ್ಲುವುದಕ್ಕೆ ಬಲವಾದ ಆನೆಗಳನ್ನು ಕಳುಹಿಸಿದನು. ಅವುಗಳ ಕಾಲಿನಿಂದ ತುಳಿಸಿದನು, ಕೋರೆ ದಂತಗಳಿಂದ ಸೀಳಿಸಿದನು, ಸೊಂಡಿಲಿನಿಂದ ಚೆಂಡಾಟದಂತೆ ಎಸೆದಾಡಲ್ಪಟ್ಟನು. ಇದರಿಂದ ನಗುನಗುತ್ತಲೇ ಬಂದ ಪ್ರಹ್ಲಾದನಿಗೆ ಏನೂ ಆಗದೆ ಆನೆಗಳ ದಂತ, ಕೋರೆಹಲ್ಲುಗಳು ಉದುರಿಹೋದವು. ಇದರಿಂದ ಹೆದರಿದ ರಾಜ ಹಿರಣ್ಯಕಶಿಪು, ರಾಜಪುರೋಹಿತರಿಂದ ಅಭಿಪ್ರಾಯಪಡೆದು ಮಗನ ಪರಿವರ್ತನೆಗಾಗಿ ಮತ್ತೊಮ್ಮೆ ರಾಜಗುರುಗಳೊಂದಿಗೆ ವಿದ್ಯಾಭ್ಯಾಸಕ್ಕೆ ಕಳುಹಿಸಿ ಕೊಟ್ಟನು.

ಈ ಆಶ್ರಮದಲ್ಲೂ ಹಲವು ವಟುಗಳಿದ್ದರು. ಪ್ರಹ್ಲಾದನು ಅವರೊಂದಿಗೆ ಕೂಡಿಕೊಂಡನು. ಅವರೆಲ್ಲ ವಿಷ್ಣುನಾಮ ಜಪದಿಂದ ದೂರವಿದ್ದರು. ಪ್ರಹ್ಲಾದ ಅವರಿಗೂ ನಾರಾಯಣನ ನಾಮಸ್ಮರಣೆ, ಜಪದ ಮಹಿಮೆ ತಿಳಿಸಿದನು. ಅವರೆಲ್ಲ ಕದ್ದು ಮುಚ್ಚಿ ನಾರಾಯಣನ ಭಕ್ತರಾದರು. ಈ ಸಂಗತಿ ನಿಧಾನವಾಗಿ ಹಿರಣ್ಯಕಶಿಪುವಿಗೆ ತಿಳಿಯಿತು. ದಾರಿ ಕಾಣದೆ ಬೆಂಕಿಯ ಜ್ವಾಲೆಯ ಆಕೃತಿಯುಳ್ಳ ಭಯಂಕರವಾದ ಭೂತವನ್ನು ಸೃಷ್ಟಿಸಿ, ಆ ಬೆಂಕಿಯ ಜ್ವಾಲೆಯಿಂದ ದಹಿಸಿಹೋಗುವಂತೆ ಮಾಡಿದನು. ಆದರೆ ಭೂತದಿಂದ ಏನೂ ಮಾಡಲಾಗಲಿಲ್ಲ. ರಾಜಪುರೋಹಿತರೇ ಕೂಡಿಕೊಂಡು ಅತಿ ಎತ್ತರದ ಪರ್ವತದಿಂದ ಕೆಳಗೆ ತಳ್ಳಿಸಿದರು. ಭೂದೇವಿ ಪ್ರತ್ಯಕ್ಷಳಾಗಿ ತನ್ನೆರಡು ಕೈಚಾಚಿ ಮಗುವನ್ನು ತಬ್ಬುವಂತೆ ತಬ್ಬಿಕೊಂಡಳು.

ಇಂಥ ಹಲವು ಪವಾಡ, ಶಕ್ತಿ ಪ್ರದರ್ಶನಗಳಿಂದ ಪ್ರಹ್ಲಾದನ ವ್ಯಕ್ತಿತ್ವ ತಿಳಿದರೂ ಕ್ರೂರಿಯಾದ ಹಿರಣ್ಯಕಶಿಪು ಪ್ರಹ್ಲಾದನ ಬಗೆಗಿನ ವೈರತ್ವ, ದ್ವೇಷ, ಹರಿಸ್ಮರಣೆ ಹೆಚ್ಚಾಗುತ್ತಲೇ ಹೋಯಿತು. 'ಶಂಬರಾಸುರ' ಎಂಬ ರಾಕ್ಷಸನನ್ನು ಕೊಲ್ಲಲು ಕಳುಹಿಸಿದನು. ಆತನಿಂದಲೂ ಏನೂ ಪ್ರಯೋಜನವಾಗಲಿಲ್ಲ. ವಾಯುದೇವ ಪ್ರಹ್ಲಾದನ ಹೊಟ್ಟೆ ಸೇರಿ ತೊಂದರೆ

ನೀಡಬಹುದೆಂಬ ನಿರೀಕ್ಷೆಯೂ ಹುಸಿಯಾಯಿತು. ಬೇರೆ ಉಪಾಯವೇ ಕಾಣದೆ ಮತ್ತೆ ಗುರುಗಳ ಮೊರೆಹೋದನು.

ಗುರುಗಳು ಈಗ ಪ್ರಹ್ಲಾದನಿಗೆ ರಾಜತನಕ್ಕೆ ಬೇಕಾದ ವಿದ್ಯೆಗಳನ್ನು ಕಲಿಸತೊಡಗಿದರು. ದಂಡ, ಚಕ್ರ, ಆಯುಧಗಳ ಪರಿಚಯವೂ ಆಯಿತು. ಶುಕ್ರಾಚಾರ್ಯರಿಂದ ರಚಿಸಲ್ಪಟ್ಟ 'ನ್ಯಾಯ ನೀತಿಶಾಸ್ತ್ರ'ಗಳನ್ನು ಬೋಧಿಸಿದರು. ಪ್ರಹ್ಲಾದ ಅವೆಲ್ಲವುಗಳನ್ನು ಅತ್ಯಂತ ನಮ್ರವಾಗಿ ಕಲಿತನು. ಆದರೆ ಆಂತರ್ಯದಲ್ಲಿ ಮಾತ್ರ ನಾರಾಯಣನ ಸ್ಮರಣೆ, ನಿಷ್ಠೆ ಬದಲಾಗಲಿಲ್ಲ.

ಮಗ ಪರಿವರ್ತನೆಯಾಗಿದ್ದಾನೆಂದು ಬಗೆದ ಹಿರಣ್ಯಕಶಿಪು ಗುರುಗಳೊಂದಿಗೆ ಮಗನನ್ನು ಆಸ್ಥಾನಕ್ಕೆ ಕರೆಸಿಕೊಂಡನು. ವಿನಯ, ಗೌರವಗಳಿಂದ ನಡೆದುಕೊಂಡ ಪ್ರಹ್ಲಾದ ವಿಷ್ಣುವಿನ ಮೇಲಿನ ಪ್ರೀತಿಯನ್ನು ಬಿಟ್ಟಿರಲಿಲ್ಲ. ನಾರಾಯಣನ ನಾಮವನ್ನೇ ಜಪಿಸಿದರು. ಇದು ಹಿರಣ್ಯಕಶಿಪುವಿಗೆ ತಡೆಯಲಾರದ ಸಂಕಟವಾಯಿತು. ತೀವ್ರ ಅಸಮಾಧಾನಗೊಂಡು ಮಗನನ್ನು ಕೈಕಾಲು ಕಟ್ಟಿಸಿ, ಸಮುದ್ರಕ್ಕೆ ಎಸೆಯುವ ಮೂಲಕ ಆತನನ್ನು ಸಾಯಿಸಬೇಕೆಂದು ಆಜ್ಞೆ ಮಾಡಿದನು. ದೈತ್ಯ ರಾಕ್ಷಸರು ಪ್ರಹ್ಲಾದನನ್ನು ಸಮುದ್ರಕ್ಕೆ ತಳ್ಳಿದರು. ಮೇಲೆ ಬಾರದಂತೆ ಭೂಮಂಡಲದ ಮೇಲಿನ ಬೆಟ್ಟಗಳನ್ನೆಲ್ಲಾ ಅಡ್ಡಗಟ್ಟಿದರು. ಆದರೆ ಪ್ರಹ್ಲಾದ ವಿಷ್ಣುವಿನ ನಾಮಸ್ಮರಣೆಯಿಂದ ಏನೂ ಆಗದವನಂತೆ ಸಲೀಸಾಗಿ ಮೇಲೆಬಂದನು. ಇದು ಹಿರಣ್ಯಕಶಿಪುವಿಗೆ ಪಿತೃವಾತ್ಸಲ್ಯದ ಅಂತಃಕರಣ ಮಿಡಿದು ಮಗನನ್ನು ತಬ್ಬಿ ಕಣ್ಣೀರು ಸುರಿಸಿದನು.

ಅರಮನೆ, ಗುರುಮನೆಗಳಲ್ಲಿ ಬೆಳೆದ ಪ್ರಹ್ಲಾದ ವಿಷ್ಣುವಿನ ನಾಮಸ್ಮರಣೆ ತೊರೆಯಲಿಲ್ಲ. ಇದರಿಂದ ತಾಯಿ ಕಯಾದು ಏನು ಹೇಳಿದರೂ ಕೇಳಲಿಲ್ಲ. ಒಂದು ಕಡೆ ಮಗನ ಅನನ್ಯ ಹರಿಯ ನಾಮಸ್ಮರಣೆ, ಇನ್ನೊಂದು ಕಡೆ ಗಂಡ ಹಿರಣ್ಯಕಶಿಪುವಿಗೆ ಹರಿಯ ಮೇಲೆ ಉಗ್ರ ಕೋಪ ಇವುಗಳ ನಡುವೆ ಸಿಲುಕಿದ ಕಯಾದು ಕನಲಿದಳು.

ಒಂದು ದಿನ ಪ್ರಾತಃಕಾಲ ಅರಮನೆಯ ಉದ್ಯಾನವನದ ಒಂದು ಬದಿ ಪ್ರಹ್ಲಾದ ಹುಲ್ಲುಹಾಸಿನ ಮೇಲೆ ತಲ್ಲೀನವಾಗಿ ಕುಳಿತು ನಾರಾಯಣನ ಜಪ ಮಾಡುತ್ತಿದ್ದಾನೆ. ಈ ದೃಶ್ಯವನ್ನು ಕಂಡು ಹಿರಣ್ಯಕಶಿಪು ಕೋಪೋದ್ರೇಕ ಗೊಂಡನು. ಮಗನ ಬಳಿಗೆ ನುಗ್ಗಿದವನು ಎಲ್ಲಿದ್ದಾನೆ ನಿನ್ನ ಹರಿ ತೋರು ಎಂದು ಕತ್ತಿಯಿಂದ ಇರಿಯಲು ಮುಂದಾದನು. ಆಗ ಪ್ರಹ್ಲಾದ ಅಂಜದೆ ಧೈರ್ಯವಾಗಿ ನಾರಾಯಣ ಎಲ್ಲೆಲ್ಲಿಯೂ ಇದ್ದಾನೆ. ಈ ಮರ, ಗೋಡೆ, ಕಲ್ಲು, ಅರಮನೆಯ ಕಂಬ ಕಂಬದಲ್ಲೂ ಶ್ರೀವಿಷ್ಣು ಇದ್ದಾನೆಂದು ಹೇಳಿದನು. ಇದು ಹಿರಣ್ಯ ಕಶಿಪುವಿನ ಕೋಪಕ್ಕೆ ಪ್ರತಿ ಸವಾಲಿನಂತಾಯಿತು. ತಡೆಯಲಾರದ ಕೋಪದಿಂದ

ಬಲವಾಗಿ ಗಧೆಯಿಂದ ಅರಮನೆಯ ಕಂಬಕ್ಕೆ ಹೊಡೆದನು. ಕಂಬಕ್ಕೆ ಗಧೆಯ ಹೊಡೆತ ಬಿದ್ದ ಕೂಡಲೇ ಶ್ರೀವಿಷ್ಣುವು ನರಸಿಂಹನ ರೂಪದಲ್ಲಿ ಹೊರಬಂದನು.

ನರಸಿಂಹನ ಕಣ್ಣುಗಳು ಬೆಂಕಿಯಂತೆ ಉರಿಯುತ್ತಿದ್ದವು. ಚೂಪಾದ ನಾಲಿಗೆಯಿಂದ ರಕ್ತ ಜಿನುಗುತ್ತಿತ್ತು. ಬಾಯಿಯ ಎರಡೂ ಕೋರೆಹಲ್ಲುಗಳು ಬಾಲಚಂದ್ರನಂತೆ ಬಾಗಿ ಹೊಳೆಯುತ್ತಿದ್ದವು. ಕಪ್ಪು ಮುಖ, ಮುಳ್ಳುಗಳಂತೆ ಕೂದಲು, ಚೂಪಾದ ಉಗುರುಗಳು, ಸಾವಿರ ತೇಜದ ಕಾಂತಿಯುಳ್ಳ ನರಸಿಂಹ ಮಾನವರಾಗಲಿ, ದಾನವರಾಗಲಿ ನೋಡುವುದಕ್ಕೆ ಅಸಾಧ್ಯವಾಗಿತ್ತು. ಪ್ರಹ್ಲಾದ ಒಬ್ಬ ಮಾತ್ರ ನರಸಿಂಹನ ಮುಂದೆ ನಿಂತು ನೋಡಬಲ್ಲವನಾಗಿದ್ದನು. ನೋಡನೋಡುತ್ತಲೇ ನರಸಿಂಹ ಹಿರಣ್ಯಕಶಿಪುವಿನ ಮೇಲೆ ಎಗರಿದನು. ಕೆಡವಿಕೊಂಡು ಹೊಟ್ಟೆ ಸೀಳಿದನು, ರಕ್ತ ಕುಡಿದನು, ಕರುಳುಗಳನ್ನು ತೆಗೆದು ಅಲಂಕಾರವಾಗಿ ಕೊರಳಿಗೆ ಹಾಕಿಕೊಂಡನು. ಇದೊಂದು ಕ್ಷಣ ನೋಡಲು ಅಸಾಧ್ಯವಾಯಿತು. ಕ್ಷಣಾರ್ಧದಲ್ಲಿ ನರಸಿಂಹ ಮಹಾವಿಷ್ಣುವಾಗಿ ಮಾರ್ಪಾಡು ಹೊಂದಿದನು. ಬಾಲಕ ಪ್ರಹ್ಲಾದನನ್ನು ಬಿಗಿದಪ್ಪಿ ಆಶೀರ್ವದಿಸಿದನು. ಇದೇ ನರಸಿಂಹ, ನರಸಿಂಹ ದೇವರು ಎಂಬ ಹೆಸರುಗಳಿಂದ ಕರೆಯುತ್ತಿರುವ ದೇವರು. ಇದು ಶ್ರೀ ವಿಷ್ಣುವಿನ ಅವತಾರವಾಗಿದ್ದು ಸ್ವಯಂ ವಿಷ್ಣುವೇ ನರಸಿಂಹನ ರೂಪವಾಗಿದೆ. ಸಿಂಹದ ರೂಪದಲ್ಲಿ ಅವತರಿಸಿ ಕ್ರೂರಿಯಾಗಿದ್ದ ಹಿರಣ್ಯಕಶಿಪುವನ್ನು ಸಂಹರಿಸಿ ಶಿಷ್ಟ ರಕ್ಷಣೆ ಪ್ರಹ್ಲಾದನನ್ನು ರಕ್ಷಿಸಿದ ನಾರಾಯಣ, ಸಿಂಹ ಅವತಾರ ನರಸಿಂಹಾವತಾರದ ಕಥೆಯಾಗಿದೆ. ವಿಷ್ಣುವಿನ ನಾಲ್ಕನೆಯ ಅವತಾರವಾಗಿದೆ. ಇದು ಈಗಿನ ವೈವಸ್ವತ ಮನ್ವಂತರದ ನಾಲ್ಕನೆಯ ಕೃತಯುಗದಲ್ಲಿ ನಡೆಯಿತು ಎಂದು ಪುರಾಣದಲ್ಲಿ ಹೇಳಲಾಗಿದೆ.

**ಸೀಬಿ ಜಾತ್ರಾ ಮಹೋತ್ಸವ:**

ಪ್ರತಿ ವರ್ಷ ಮಾಘಮಾಸ ಪುಬ್ಬಾ ನಕ್ಷತ್ರದ ಹಿಂದೆ ಮುಂದೆ ಎಂಟು ದಿನದ ಒಳಗೆ ಸೀಬಿ ನರಸಿಂಹಸ್ವಾಮಿಯ ಬೃಹತ್ ಜಾತ್ರಾ ರಥೋತ್ಸವ ನಡೆಯುತ್ತದೆ. ಒಂಬತ್ತು ದಿನಗಳ ಕಾಲ ಕ್ರಮಬದ್ಧವಾಗಿ ನಡೆಯುವ ಇಲ್ಲಿನ ಜಾತ್ರೆಯಲ್ಲಿ ಕಲ್ಲಿನ ಗಾಲಿಯ ಬೃಹತ್ ತೇರು ಹರಿಯುತ್ತದೆ.

**ಅಂಕುರಾರ್ಪಣ:**

ಇದು ದೇವಾಲಯದ ಅರ್ಚಕ ಬಳಗ, ದೀಕ್ಷಾವ್ರತ ಕೈಗೊಂಡು ಬಲಗೈಗೆ ಅರಿಶಿನ ದಾರ ಕಟ್ಟುವ ಮೂಲಕ ಮನೆಯಲ್ಲಿ, ಹೊರಗಡೆ ಸಹಜವಾಗಿ ನಡೆಯಬಹುದಾದ ಸೂತಕ ಮೊದಲಾದ ವಿಘ್ನಗಳನ್ನೆಲ್ಲಾ ನಿಷೇಧಿಸುವ ರೂಪವಾಗಿ ಅಂಕುರಾರ್ಪಣ, ದೇವರಿಗೆ ಅಭಿಷೇಕ

ಕಾರ್ಯ ನಡೆಯುತ್ತದೆ.

**ಧ್ವಜಾರೋಹಣ:**

ಸೀಬಿ ನರಸಿಂಹಸ್ವಾಮಿಯ ಧ್ವಜ ಗರುಡಧ್ವಜ. ಅಂದು ಪ್ರಾತಃಕಾಲ ಗರುಡಧ್ವಜವನ್ನು ಎತ್ತರದ ಕಂಬಕ್ಕೆ ಕಟ್ಟಿ ಪೂಜಾಕಾರ್ಯ ನೆರವೇರಿಸಿ ಧ್ವಜಾರೋಹಣ ನಡೆಸಲಾಗುವುದು.

**ಗಜೇಂದ್ರಮೋಕ್ಷ:**

ಬಾಣಪೂಜೆ ಎಂದು ಕರೆಯಲ್ಪಡುವ ಈ ದಿನದ ಉತ್ಸವ ಆಕರ್ಷಕವಾಗಿರುತ್ತದೆ. ದೇವಾಲಯದ ಹೊರಗೆ ನರಸಿಂಹಸ್ವಾಮಿಯನ್ನು ಗದ್ದಿಗೆ ಮಾಡಲಾಗುವುದು. ಇಲ್ಲಿ ಪುರಾಣದಲ್ಲಿ ಬರುವ ಗಜೇಂದ್ರ ಮೋಕ್ಷದ ಭಾಗವನ್ನು ಪಠಣ ಮಾಡಲಾಗುವುದು. ನಂತರ ಪುಷ್ಕರಿಣಿಯ ಮುಂಭಾಗದಲ್ಲಿ ಸಿದ್ಧಪಡಿಸಿರುವ ತೆಪ್ಪದ ಮೇಲೆ ಸ್ವಾಮಿಯನ್ನು ಕೂರಿಸಿ ಜಯಘೋಷದೊಂದಿಗೆ ಕಲ್ಯಾಣಿಯ ಮಧ್ಯಭಾಗದಲ್ಲಿರುವ ಪೀಠಕ್ಕೆ ತರಲಾಗುವುದು. ಅಲ್ಲಿ ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯುತ್ತದೆ. ನಂತರ ಜಯಘೋಷದೊಂದಿಗೆ ಮೆರವಣಿಗೆಯಲ್ಲಿ ಮೂಲ ಗದ್ದುಗೆಗೆ ಬಿಜಯಂಗೊಳ್ಳಲಾಗುವುದು.

**ಕಲ್ಯಾಣೋತ್ಸವ:**

ನರಸಿಂಹಸ್ವಾಮಿಗೆ ಮದುವೆ ಸಂಸ್ಕಾರ ಇಂದು ನಡೆಯುತ್ತದೆ. ಇದಕ್ಕಾಗಿ ದೇವಾಲಯದ ಪ್ರಾಂಗಣದಲ್ಲಿ ತೂಗುಮಂಚವನ್ನು ಅಲಂಕಾರಗೊಳಿಸಿ ಇದರಲ್ಲಿ ನರಸಿಂಹಸ್ವಾಮಿಯ ಎಡ-ಬಲಭಾಗದಲ್ಲಿ ಶ್ರೀದೇವಿ, ಭೂದೇವಿಯನ್ನು ಕೂರಿಸಿ, ವಿವಾಹದ ವಿಧಿಗಳನ್ನು ನಡೆಸಲಾಗುವುದು. ನಂತರ ನಡೆಯುವ ಗರುಡೋತ್ಸವದಲ್ಲಿ ನರಸಿಂಹಸ್ವಾಮಿ, ಶ್ರೀದೇವಿ ಭೂದೇವಿಯರನ್ನು ಕೂರಿಸಿ ಮೆರವಣಿಗೆ ನಡೆಸಿ ನಂತರ ದೇವಸ್ಥಾನದಲ್ಲಿ ಗುಡಿದುಂಬಿಸಲಾಗುವುದು.

**ಕಲ್ಲುಗಾಲಿ ರಥೋತ್ಸವ:**

ಸೀಬಿ ಜಾತ್ರೆಯ ಪ್ರಮುಖ ಆಕರ್ಷಣೆ ರಥೋತ್ಸವ. ಲಕ್ಷಾಂತರ ಜನರು ಸೇರುತ್ತಾರೆ. ಅಂದು 50 ಅಡಿ ಎತ್ತರದ ಕಲ್ಲುಗಾಲಿಗಳ ಬೃಹತ್ ರಥವನ್ನು ವೈವಿಧ್ಯವಾಗಿ ಅಲಂಕಾರಗೊಳಿಸಲಾಗುವುದು. ನಂತರ ಬ್ರಾಹ್ಮಣರ ನೇತೃತ್ವದಲ್ಲಿ ವಿಶೇಷ ಹೋಮ, ಪೂಜೆ ನಡೆದು ನಂತರ ರಥೋತ್ಸವ ನಡೆಸಲಾಗುವುದು.

**ಮೃಗಯಾಗ ಯಾತ್ರೆ:**

ಇದು ದೇವರು ಬೇಟೆಗೆ ಹೋಗುವುದು ಎಂದೇ ಪರಿಭಾವಿಸಲಾಗುವುದು. ಅಲಂಕಾರಗೊಂಡ ನರಸಿಂಹಸ್ವಾಮಿ ಕತ್ತಿ ಹಿಡಿದು ವಿಶೇಷವಾಗಿ ಅಲಂಕರಿಸಿದ ಕಂಚಿನ ಕುದುರೆಯ ಮೇಲೆ ಕೂರಿಸಿ, ದೇವಾಲಯದ ಪ್ರಾಂಗಣದಲ್ಲಿ ಮೆರವಣಿಗೆ ವಿಶೇಷ ಉತ್ಸವ ಮಾಡ ಲಾಗುವುದು. ರಾತ್ರಿ ಹನ್ನೆರಡು ಗಂಟೆಯ ನಂತರ ನರಸಿಂಹಸ್ವಾಮಿಯನ್ನು ಗುಡಿದುಂಬಿಸಲಾಗುವುದು.

**ಶ್ರೀ ನರಸಿಂಹಸ್ವಾಮಿ ಸೂಳೆಮನೆಗೆ ಹೋಗುವುದು:**

ನರಸಿಂಹಸ್ವಾಮಿಗೂ ಸೂಳೆಯರ ಸಂಬಂಧ ತಪ್ಪಿಲ್ಲ. ಇದು ಜನಪದದ ನಂಬಿಕೆಯ ರೂಪ. ಜಾತ್ರೆಯ ಸಂದರ್ಭದಲ್ಲಿ ಈ ಆಚರಣೆ ಸದ್ದುಗದ್ದಲವಿಲ್ಲದೆ ನಡೆದುಹೋಗುತ್ತದೆ. ನರಸಿಂಹಸ್ವಾಮಿಗೆ ಲೋಕಮಾತೆ ಎಂಬ ಪ್ರಿಯತಮೆ ಇದ್ದು ಸ್ವಾಮಿ ವರ್ಷಕ್ಕೊಮ್ಮೆ ತಮ್ಮ ಪ್ರೇಮಿಯನ್ನು ಕೂಡುತ್ತಾನೆಂಬ ನಂಬಿಕೆ. ಅದರಂತೆ ನರಸಿಂಹಸ್ವಾಮಿಯನ್ನು ರಾತ್ರಿ ಹನ್ನೆರಡು ಗಂಟೆಯ ಸಮಯದಲ್ಲಿ ಲೋಕಾಂಬಿಕಾ ದೇವಸ್ಥಾನದಲ್ಲಿ ಗದ್ದಿಗೆ ಮಾಡಿ, ಸ್ವಲ್ಪ ಸಮಯದ ನಂತರ ನರಸಿಂಹಸ್ವಾಮಿಯನ್ನು ಅಲ್ಲಿಂದ ತೆಗೆದುಕೊಂಡು ಮೂಲಗುಡಿಯಲ್ಲಿಡಲಾಗುವುದು.

**ಮಂಗಳಸ್ನಾನ:**

ಗಂಗಾಪೂಜೆ ಎಂದೇ ಕರೆಯಲ್ಪಡುವ ಈ ಆಚರಣೆ ಮುತ್ತೈದೆಯರು ಒಟ್ಟುಗೂಡಿ ಭೂದೇವಿ, ಶ್ರೀದೇವಿಯವರುಗಳಿಗೆ ಪುಣ್ಯಸ್ನಾನ ಏರ್ಪಡಿಸಲಾಗುವುದು. ನಂತರ ಗಂಗಾಪೂಜೆ, ಕದಳಿಪೂಜೆ, ಬಾಳೆಹಣ್ಣಿನ ಅಲಂಕಾರ ವಿಶೇಷವಾಗಿ ನಡೆದು ನಂತರ ಆಂಜನೇಯಸ್ವಾಮಿಯ ವಿಶೇಷ ಉತ್ಸವ ನಡೆಯುತ್ತದೆ.

**ದನೋತ್ಸವ:**

ಪುಷ್ಪಿಯಾಗ ಎಂದೇ ಕರೆಯಲ್ಪಡುವ ಈ ಉತ್ಸವ ಜಾತ್ರೆಯ ಕೊನೆಯ ಉತ್ಸವವಾಗಿದೆ. ರಾತ್ರಿ ಬಹಳ ಹೊತ್ತಿನ ತನಕ ನಡೆಯುವ ಈ ಉತ್ಸವ ಜಾತ್ರೆಗೆ ಬಂದಿದ್ದ ಎಲ್ಲ ದೇವರುಗಳನ್ನು ಬೀಳ್ಕೊಡುವುದು. ಈ ಉತ್ಸವದ ವಿಶೇಷ, ಅಂದು ನರಸಿಂಹಸ್ವಾಮಿಯ ಉತ್ಸವಮೂರ್ತಿಯನ್ನು ತೆರೆದ ವಾಹನದಲ್ಲಿ ಕೂರಿಸಿ, ಅಕ್ಕಪಕ್ಕದಲ್ಲಿ ರಾಮಾಯಣ, ಮಹಾಭಾರತ ಪ್ರಸಂಗದ ಗೊಂಬೆಗಳನ್ನು ಅಂದವಾಗಿ ಜೋಡಿಸಿಕೊಂಡು, ದೇವರ ಉತ್ಸವ ಊರಾಡುವುದು. ಅಕ್ಕಪಕ್ಕದ ಗ್ರಾಮಸ್ಥರು ದೂರದೂರುಗಳಿಂದ ಬಂದ ಭಕ್ತರ ಭಾರೀ ಜನಸ್ತೋಮ ಇಂದು ಸೇರುತ್ತದೆ.

**ಜಗತ್ಪ್ರಸಿದ್ಧ ಸೀಬಿ ಭಿತ್ತಿಚಿತ್ರಗಳು:**

ಸೀಬಿ ಒಂದು ಪುಟ್ಟ ಧಾರ್ಮಿಕ ಕೇಂದ್ರವಾದರೂ ದೇಶವಿದೇಶಗಳಲ್ಲಿ ಈ ದೇವಾಲಯದ ಕೀರ್ತಿ ಹಬ್ಬಿದೆ. ಇದಕ್ಕೆ ಪ್ರಮುಖ ಕಾರಣ ಇಲ್ಲಿನ ಜಗತ್ಪ್ರಸಿದ್ಧ ಅಪೂರ್ವ ಕಲಾಕೃತಿಗಳು. ಸೀಬಿ ಭಿತ್ತಿಚಿತ್ರಗಳೆಂದೇ ಹೆಸರುವಾಸಿಯಾಗಿರುವ ಇಲ್ಲಿನ ಚಿತ್ರಕಲೆ ವಿಜಯನಗರ, ಮರಾಠ, ತಂಜಾವೂರು ಮೊದಲಾದ ದಕ್ಷಿಣಭಾರತದ ಸಮ್ಮಿಶ್ರ ಶೈಲಿ ಚಿತ್ರಗಳೆಂದೂ, ಮೈಸೂರು ಮರಾಠ ಶೈಲಿ ಎಂದೂ ಹಲವು ಸಂಶೋಧಕರು ಕರೆದಿದ್ದಾರೆ. ಜೊತೆಗೆ Mural painting of cebi ಎಂಬ ಸಂಶೋಧನೆಯನ್ನು ಡಾ॥ ವೀಣಾ ಶೇಖರ್ ನಡೆಸಿದ್ದಾರೆ. ಅಲ್ಲದೆ ದೇಶಿ, ವಿದೇಶಿ ಹಲವು ವಾಸ್ತುಶಿಲ್ಪ ತಜ್ಞರು ಈ ಭಿತ್ತಿಚಿತ್ರಗಳನ್ನೇ ಕುರಿತು ಸಾಕಷ್ಟು ಸಾಹಿತ್ಯವನ್ನು ಪ್ರಕಟಿಸಿದ್ದಾರೆ.

ದೇವಸ್ಥಾನದ ನವರಂಗ, ಮಹಾದ್ವಾರ ಮತ್ತು ನರಸಿಂಹಸ್ವಾಮಿಯ ಗರ್ಭಗುಡಿಯ ಮೇಲ್ಛಾವಣಿಯಲ್ಲಿರುವ ಭಿತ್ತಿಚಿತ್ರಗಳು ಹೀಗಿವೆ. ದೇವಸ್ಥಾನ ಪ್ರವೇಶಿಸಿದ ಕೂಡಲೆ ಬೃಹದಾಕೃತಿಯ ಕಾಂಪೌಂಡ್ ಮಾದರಿಯ ಪ್ರಾಂಗಣದ ಗೋಡೆ, ಆ ಗೋಡೆಯ ತುಂಬೆಲ್ಲಾ ಕಲಾಕೃತಿಗಳು ಆಕರ್ಷಕವಾಗಿವೆ. ಭಿತ್ತಿಚಿತ್ರಗಳು ಬಲಭಾಗ ದಿಂದ ನೋಡುತ್ತಾ ಹೊರಟರೆ ಹೀಗಿವೆ. ಸೂರ್ಯಮೂರ್ತಿ, ಕಾಮದಹನ ಮೂರ್ತಿ, ಉಮಾಮಹೇಶ್ವರಿ, ಬ್ರಹ್ಮದೇಶ್ವರ ಮೂರ್ತಿ, ಏಕಪಾದಮೂರ್ತಿ, ವಿಷಕಂಠಮೂರ್ತಿ, ಚಂಡೀಶ್ವರ ವರಪ್ರಸಾದ ಮೂರ್ತಿ, ಬುದ್ಧ ಮೂರ್ತಿ, ಈಶಾನ್ಯಮೂರ್ತಿ, ಬೇಡರಕಣ್ಣಪ್ಪ, ಮೋಕ್ಷದಾಯಕ ಮೂರ್ತಿ, ಗಜಾಸುರ ಮರ್ದನ, ಯಜ್ಞೇಶ್ವರ, ವಿಘ್ನೇಶ್ವರ ವರಪ್ರಸಾದ ಮೂರ್ತಿ, ನಂದೀಶ್ವರಮೂರ್ತಿ, ಗಂಗಾಧರ ಮೂರ್ತಿ, ಅರ್ಧನಾರೇಶ್ವರ, ಗಿರಿಜಾಕಲ್ಯಾಣ, ಕುಬೇರ, ಬೃಹಸ್ಪತ್ಯಾಚಾರ್ಯ, ವಿದ್ಯಾಗಣಪತಿ, ಮಲೆಯ ಮಹದೇಶ್ವರ, ಶಿವಗಂಗಾಧರೇಶ್ವರ, ಚಾಮುಂಡೇಶ್ವರಿ, ಶರಭಾವತಾರ, ಅಗಸ್ತೇಶ್ವರ, ತ್ರಿಪುರಾಸುರ ಸಂಹಾರ, ಹರಿಹರೇಶ್ವರ, ಷಣ್ಮುಖ, ರಾಹುಗ್ರಹ ಎಡಭಾಗದಿಂದ ಕ್ರಮವಾಗಿ ಕಂಬವನ್ನು ಸೀಳಿಕೊಂಡು ಹೊರಬರುತ್ತಿರುವ ಕಂಬದ ನರಸಿಂಹ ಭಕ್ತರಿಗೆ ಬೇಡಿದ್ದು ನೀಡುವ ಅಭಯಪ್ರದ ನರಸಿಂಹ, ಶುಕ್ರ, ಅಗ್ನಿ, ಚಂದ್ರಗ್ರಹಗಳು, ಮತ್ಸ್ಯಾವತಾರ, ಕೂರ್ಮಾವತಾರ, ವರಾಹಾವತಾರ, ವಾಮನಾವತಾರ, ಪರಶುರಾಮಾವತಾರ, ಕೋದಂಡಾವತಾರ, ಬಲರಾಮಾವತಾರ, ಕೃಷ್ಣಾವತಾರ, ಕಲ್ಕಿ ಅವತಾರ, ಅಂಗಾರಕ, ನರಸಿಂಹ, ರಾಮಾನುಜಾಚಾರ್ಯ, ಯಮಧರ್ಮರಾಯ, ಕಾಳಿಂಗಮರ್ಧನ, ಜಲಕ್ರೀಡಾ ಕೃಷ್ಣ, ತುಂಬುರರು (ವಸಿಷ್ಠ, ಕಾಮಧೇನು, ವಿಶ್ವಾಮಿತ್ರ), ಗಜಲಕ್ಷ್ಮಿ, ನಿರುಮತಿ, ಈತು, ಪಾಂಡುರಂಗ, ಪಟ್ಟಾಭಿರಾಮ, ಪಂಚಮುಖಿ ಆಂಜನೇಯ, ಬ್ರಹ್ಮ, ಮಧ್ವಾಚಾರ್ಯರು, ಹರಿಹರ, ಪಂಚ ಪಾಂಡವರು, ಸಪ್ತಋಷಿಗಳು, ಗಜೇಂದ್ರವರದ, ಶನೇಶ್ವರ, ವರುಣ,

ಶಂಕರಾಚಾರ್ಯ, ಮಠಮೂಲ ದಕ್ಷಿಣಾಮೂರ್ತಿ, ಪಂಚಮುಖಿ ಪರಮೇಶ್ವರರು, ಷಣ್ಮುಖಾಚಾರ್ಯರು, ಸಪ್ತಮಾತೃಕೆಯರು, ಸಪ್ತವಾರಿಧಿಗಳು, ಸಪ್ತಗೋತ್ರ ಪ್ರವರ್ತಕರು, ದಶಬ್ರಹ್ಮರು, ವೀರಭದ್ರ, ವಾಯುವ್ಯ ಹೀಗೆ ಭಿತ್ತಿಚಿತ್ರಗಳು ಕಣ್ಮನ ಸೆಳೆಯುತ್ತವೆ. ಈ ಚಿತ್ರಗಳಲ್ಲಿ ಮಹಾಭಾರತ, ರಾಮಾಯಣ, ಪುರಾಣ, ಭಾಗವತ ಆಧರಿಸಿದ ಚಿತ್ರಗಳ ಜೊತೆಗೆ ಶಿಲ್ಪಸೂತ್ರಕ್ಕೆ ಅನುಸಾರವಾಗಿ ಆಕರ್ಷಕ ಲೈಂಗಿಕ ಸನ್ನಿವೇಶಗಳನ್ನು ಸೇರಿಸಿದೆ. ನರಸಿಂಹಸ್ವಾಮಿ ಚಂಚುಲಕ್ಷ್ಮಿಗೆ ಮನಸೋತು ಸ್ತ್ರೀವೇಶದಲ್ಲಿ ಆಕೆಯೊಂದಿಗೆ ವಿಹರಿಸುವ ಚಿತ್ರಗಳನ್ನು ಮುಖಮಂಟಪದ ಚೌಕಟ್ಟಿನಲ್ಲಿ ಆಕರ್ಷಕವಾಗಿ ಸೆರೆಹಿಡಿದಿದ್ದಾರೆ. ಗೋಪಿಕಾ ವಸ್ತ್ರಾಪಹರಣ, ರಾಸಲೀಲೆ, ಪ್ರಾಣಿಗಳ ಕಾಮಚೇಷ್ಟೆಯ ವೈವಿಧ್ಯಮಯ ದೃಶ್ಯಾವಳಿ ರೋಚಕವಾಗಿವೆ. ಇಲ್ಲಿನ ಚಿತ್ರಗಳನ್ನೇ ಧಾರ್ಮಿಕ, ಸಾಮಾಜಿಕ, ನೈಸರ್ಗಿಕ, ಚಾರಿತ್ರಿಕ, ಲೈಂಗಿಕ ಹಾಗೂ ವ್ಯಕ್ತಿಗತವಾಗಿಯೂ ವರ್ಗೀಕರಿಸಿ ಅಭ್ಯಾಸ ಮಾಡಬಹುದು. ಹೈದರ್-ಟಿಪ್ಪೂಸುಲ್ತಾನರ ಚಿತ್ರಗಳ ಕೆಳಗಡೆ ಸೀಬಿಯ ಭಿತ್ತಿಚಿತ್ರಗಳಿಗೆ ಕಾರಣೀಭೂತರಾದ ಶ್ರೀ ನಲ್ಲಪ್ಪನವವ ಭಾವಚಿತ್ರವೂ ಇದೆ. ಶೃಂಗೇರಿಯ ಶ್ರೀಗಳು ನಲ್ಲಪ್ಪನವರ ತಾಯಿಗೆ ಆಶೀರ್ವದಿಸುತ್ತಿರುವ ಚಿತ್ರ, ಗಜೇಂದ್ರಮೋಕ್ಷ, ಅರ್ಧನಾರೀಶ್ವರ, ತ್ರಿಪುರಾಸುರ ಸಂಹಾರ ಮೊದಲಾದ ಚಿತ್ರಗಳು ಸೀಬಿಯ ಕಲಾವೈಭವಕ್ಕೆ ನಿದರ್ಶನವಾಗಿವೆ.



# ಜನಪದ ಪ್ರವಾಸಿ ನೆಲೆಗಳು

ಸಿರಾ ಸೀಮೆ ಮೂಲತಃ ಪ್ರಾಕೃತಿಕ ಸೊಬಗಿನಿಂದ ಕೂಡಿದ ಆಕರ್ಷಣೀಯ ಸ್ಥಳ. ಇಲ್ಲಿನ ಪುರಾಣ, ಐತಿಹಾಸಿಕ ನೆಲೆಗಳು ಈ ಜಿಲ್ಲೆಯ ಪ್ರವಾಸೋದ್ಯಮವನ್ನು ಸೃಷ್ಟಿಸಿದೆ. ಆದರೆ ಈ ಜಿಲ್ಲೆಯ ಸಮಗ್ರ ಸಂಸ್ಕೃತಿ ಕೇವಲ ಇತಿಹಾಸವೊಂದರಿಂದಲೇ ಲಭ್ಯವಾಗುವುದಿಲ್ಲ. ಜಿಲ್ಲೆಯಾದ್ಯಂತ ಚೆಲ್ಲಿಕೊಂಡಿರುವ ಅಪೂರ್ವ ಜಾನಪದ ನೆಲೆಗಳೂ ಈ ಜಿಲ್ಲೆಯ ಸಾಂಸ್ಕೃತಿಕ ಸಿರಿವಂತಿಕೆಯನ್ನು ಹೆಚ್ಚಿಸಿವೆ. ಯಾವುದೇ ಒಂದು ಪ್ರದೇಶದ ಸಮಗ್ರ ಚಿತ್ರಣ ಕೊಡಬೇಕೆಂದಾಗ ಹೊರನೋಟಕ್ಕೆ ಎದ್ದು ಕಾಣುವ ಶಿಷ್ಟ ಸಂಸ್ಕೃತಿಯಷ್ಟೇ ಮಾನದಂಡವಾಗ ಬಾರದು. ಇದರ ಒಳಗಡೆ ಜೀವಚೇತನವಾಗಿ ಮಿಳಿತಗೊಂಡಿರುವ ಜಾನಪದ ಸಂಸ್ಕೃತಿಯ ದಾಖಲೆಯೂ ಅಗತ್ಯ. ಜಾನಪದ ಒಂದು ಜೀವಂತ ಪಳೆಯುಳಿಕೆಯಾಗಿದ್ದು ಅದು ಎಂದಿಗೂ ಸಾಯುವುದಿಲ್ಲ. ಹಾಗಾಗಿಯೇ ಜನಪದ ಐತಿಹ್ಯಗಳು ಕೇವಲ ಸ್ಮಾರಕಗಳಾಗಿ ಮಾತ್ರ ಉಳಿಯದೆ ಒಂದು ಸಂಸ್ಕೃತಿಯ ಆಕರಗಳಾಗಿಯೂ ಕೆಲಸ ಮಾಡುತ್ತವೆ. ಮೇಲುಮಟ್ಟಕ್ಕೆ ಆಕರ್ಷಕವಾಗಿ ಕಾಣುವ ದೇವಾಲಯ ಇಂದು ನಿನ್ನೆ ಹುಟ್ಟಿ ದಿಢೀರನೆ ಪ್ರಸಿದ್ಧಿಗೆ ಬಂದ ಗುಡಿ-ಗೋಪುರಗಳಂತೆಯೇ ಸಮಾಧಿ, ಕಟ್ಟೆ, ಕೆರೆ, ಮರ, ಪಾಳು ದೇಗುಲಗಳೂ ಜನಪದರ ಅನನ್ಯ ಪೂಜನೀಯ ಕೇಂದ್ರಗಳಾಗಿರುತ್ತವೆ. ವರ್ಷಕ್ಕೊಮ್ಮೆಯೋ ಇಲ್ಲವೇ ಹಬ್ಬ ಹರಿದಿನಗಳಲ್ಲಿ ಪೂಜೆ ಸಲ್ಲಿಸಿ ಮರೆಯಾಗುವ ಈ ಸಾಕ್ಷಿ ಕಲ್ಲು ಸಮಾಧಿಗಳೂ ಸಂಸ್ಕೃತಿಯ ಸೊಲ್ಲುಗಳು ಎಂಬುದನ್ನು ಮರೆಯುವಂತಿಲ್ಲ. ತುಮಕೂರು ಜಿಲ್ಲೆಯ ಸಿರಾ, ಮಧುಗಿರಿ, ಪಾವಗಡ ತಾಲ್ಲೂಕುಗಳು ಬುಡಕಟ್ಟು ಜನಾಂಗಗಳ ಪ್ರಮುಖ ನೆಲೆಗಳು. ಕಾಡುಗೊಲ್ಲರು. ಬೇಡರು, ಕುರುಬರು, ಕುಂಚಿಟಿಗರು ಈ ಎಲ್ಲವೂ ಮೂಲದಲ್ಲಿ ಬುಡಕಟ್ಟು ಜನಾಂಗಗಳೇ ಆಗಿದ್ದು ನಾಗರೀಕತೆ ಆವರಿಸಿದಂತೆಲ್ಲಾ ಶಿಷ್ಟ ಸಂಸ್ಕೃತಿಗೆ ಪರಿವರ್ತನೆಯಾಗುತ್ತಾ ಬುಡಕಟ್ಟು ಸಂಸ್ಕೃತಿಯ ಲಕ್ಷಣಗಳನ್ನು ಮರೆಮಾಡುತ್ತಾ ಬಂದವರು ಪಶುಪಾಲನೆ, ಬೇಟೆ ಇವರ ಆರಂಭಿಕ ಕಸುಬುಗಳು. ಹಾಗಾಗಿಯೇ ಇಂದಿನ ಬುಡಕಟ್ಟು ಸಂಸ್ಕೃತಿಯ ದಟ್ಟ ಚಿತ್ರಣವನ್ನು ಹೊಂದಿ ಸಂಪ್ರದಾಯ, ನಂಬಿಕೆ, ಆಚಾರ-ವಿಚಾರಗಳಲ್ಲಿ ಅನನ್ಯತೆಯನ್ನು ಕಾಯ್ದುಕೊಂಡು ಬಂದಿರುವ ಕಾಡುಗೊಲ್ಲರ ಹಟ್ಟಿಗಳೆಲ್ಲ ಜನಪದ ಹಾಡು, ಕತೆಗಳ ಆಗರಗಳು, ಪುರಾಣ, ಸಾಂಸ್ಕೃತಿಕ ವೀರರನ್ನು ಕುರಿತು ಆರೇಳು ರಾತ್ರಿ ನಿರಂತರವಾಗಿ ಹಾಡಬಲ್ಲ ಅಪೂರ್ವ ಕಲಾವಿದರಿದ್ದಾರೆ. ಅಂಥ ಕಲಾವಂತಿಕೆಗೆ ಕಾರಣರಾದ ಮೂಲ ಪುರುಷರೂ ಇದ್ದಾರೆ. ಅವರುಗಳ ಕಾರ್ಯಕ್ಷೇತ್ರ, ಪವಾಡಸ್ಥಳ, ಸಮಾಧಿ ಈ ಜನಾಂಗದ ಆರಾಧ್ಯ ಸ್ಥಳವಾದರೆ ಅನ್ಯರಿಗೆ ಕಾಲಕಸವಾಗುತ್ತಿವೆ. ಇದೊಂದು ಸಾಂಸ್ಕೃತಿಕ ದುರಂತವೂ ಹೌದು. ಈ ಬಗೆಯ

ಸ್ಮಾರಕಗಳು ಪ್ರವಾಸೋದ್ಯಮ ಸ್ಥಳವಾದಾಗ ಮಾತ್ರ ನಮ್ಮ ಸಂಸ್ಕೃತಿಯ ಹೆಮ್ಮೆ ಹೆಚ್ಚುತ್ತದೆ. ನಮ್ಮ ಸುತ್ತಮುತ್ತಲಿನ ಬೆಲೆ ಕಟ್ಟಲಾಗದ ಕತೆ, ಪುರಾಣ ಹಾಡುಗಳಿಗೆ ಮೌಲ್ಯ ಬರುತ್ತದೆ.

ಸಿರಾ ಸೀಮೆ ಹಲವು ಧರ್ಮ, ಸಂಸ್ಕೃತಿ, ಆರಾಧನೆಯ ಸಮ್ಮಿಶ್ರ ರೂಪ. ನಗರ-ಗ್ರಾಮೀಣ ಈ ಎರಡೂ ನೆಲೆಯಲ್ಲಿ ದೈವಸಂಬಂಧಿ ಆಚರಣೆ, ದೇವಾಲಯ ಸಾಕಷ್ಟಿವೆ. ಇಲ್ಲೆಲ್ಲಾ ಧಾರ್ಮಿಕ ನಂಬಿಕೆ, ಶ್ರದ್ಧೆಯ ರೂಪವಾಗಿ ಜಾತ್ರೆಗಳು ನಡೆಯುತ್ತವೆ. ವರ್ಷಕ್ಕೊಮ್ಮೆ ಪ್ರತಿ ದೇವಾಲಯದಲ್ಲೂ ಜಾತ್ರೆ, ಪರಿಸೆ, ತೇರು ಈ ಬಗೆಯ ಹೆಸರುಗಳಿಂದ ಉತ್ಸವ ನಡೆಯುತ್ತದೆ. ಅದು ಜನ ಭಕ್ತಿಯ ರೂಪವಾಗಿ ಹರಕೆ ಒಪ್ಪಿಸುವ ಈ ಮೂಲಕ ಪಾಪ ಪಶ್ಚಾತ್ತಾಪದ ಭಾಗವಾಗಿಯೂ ಜಾತ್ರೆಗಳು ನಡೆಯುತ್ತವೆ.

ಮಾನವ ದೇವರು, ಧರ್ಮಗಳಲ್ಲಿನ ನಂಬಿಕೆ, ನಂಬಿಕೆಗೆ ತಕ್ಕ ಆಚರಣೆಯ ಹಿನ್ನೆಲೆಯಲ್ಲಿ ಜಾತ್ರೆ ಪ್ರಮುಖ ಪಾತ್ರ ವಹಿಸುತ್ತವೆ. ಕಾಲಘಟ್ಟದ ಹಲವು ಸ್ಥಿತ್ಯಂತರಗಳಲ್ಲೂ ಧಾರ್ಮಿಕ ಪ್ರಜ್ಞೆ ಜಾಗೃತಗೊಂಡು ಅದೊಂದು ಆಚರಣೆಯಲ್ಲಿ ಪ್ರಕಟವಾಗುತ್ತದೆ. ಒಂದೊಂದು ಜಾತ್ರೆಯೂ ಭಿನ್ನ ಭಿನ್ನ ಆಚರಣೆ, ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನಡೆಯುವುದರಿಂದ ಇದೊಂದು ಗ್ರಾಮ ಸಂಸ್ಕೃತಿಯ ಭಾಗವಾಗಿ ಪ್ರಕಟವಾಗುತ್ತವೆ. ಗ್ರಾಮ ಜೀವನದಲ್ಲಿ ಜಾತ್ರೆಯ ಕಾಲದ ಬದುಕು ಜಾತಿಯ ಸೀಮಿತ ಕಟ್ಟೆ ಒಡೆದು ಅಲ್ಲೊಂದು ಜಾತ್ಯಾತೀತ ನೆಲೆಯಲ್ಲಿ ನಡೆದು ದೈವಸೇವೆಯ ನಂಬಿಕೆಯಲ್ಲಿ ಎಲ್ಲವೂ ಒಂದಾಗುವುದು ಜನಪದ ಜಾತ್ರೆಯ ವಿಶೇಷವಾಗಿದೆ. ಹಾಗಾಗಿ ಇಲ್ಲಿ ಬಡವ-ಶ್ರೀಮಂತ, ಮೇಲು-ಕೀಳು ಎಂಬ ಮಾನವನಿರ್ಮಿತ ತಾರತಮ್ಯತೆಯನ್ನು ಮೀರುವುದು ಈ ಮೂಲಕ ಸೀಮೆಯ ಹೆಸರಲ್ಲಿ ಪರಸ್ಪರ ಧನ್ಯತೆಯ ಭಾವದ ಜೊತೆಜೊತೆಗೆ ಗ್ರಾಮಾಭ್ಯುದಯದ ಕನಸೂ ಇರುತ್ತದೆ. ಸಿರಾ ಸೀಮೆ ಇಂಥೆಲ್ಲಾ ಭಾವನೆಯ ರೂಪವಾಗಿದೆ.

### ಪುರಲೇಹಳ್ಳಿ ಭೂತಪ್ಪ:

ಪುರಲೇಹಳ್ಳಿ ಸಿರಾ ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ನೆಲೆ. ಎಲ್ಲ ವರ್ಗದವರೂ ಈ ಊರಿಗೆ ಒಕ್ಕಲಾಗಿದ್ದಾರೆ. ಸಿರಾ-ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿಯಲ್ಲಿ ತಾವರೆಕೆರೆಯಿಂದ ಬಲಬದಿಗೆ 8 ಕಿ.ಮೀ. ದೂರದಲ್ಲಿದೆ. ಇಲ್ಲಿ ಭೂತಪ್ಪನ ದೇವಾಲಯವಿದೆ. ಸಾಧಾರಣ ಗದ್ದಿಗೆ, ಬೆಣಚುಕಲ್ಲಿನ ಅರ್ಧ ಅಡಿ ಕಲ್ಲಿನ ವಿಗ್ರಹ. ಇತ್ತೀಚೆಗೆ ಈ ಕಲ್ಲು ವಿಗ್ರಹಕ್ಕೆ ಬೆಳ್ಳಿಯ ರೇಖಿನ ವಿಗ್ರಹವನ್ನು ತೊಡಿಸುತ್ತಾರೆ. ಪ್ರತಿ ಶನಿವಾರ ಮತ್ತು ಮಂಗಳವಾರ ವಿಶೇಷ ಪೂಜೆ ನಡೆಯುತ್ತದೆ. ಕಾವಲು ರಂಗನಹಳ್ಳಿಯ ಕುಂಚಿಟಿಗರ ಮನೆತನದವರಿಗೆ ಇಲ್ಲಿನ ಪೂಜಾರಿಕೆಯ ಉಸ್ತುವಾರಿ. ಇದನ್ನು ಪುರಲೇಹಳ್ಳಿ ಎಂದು ಕರೆಯುತ್ತಾರಾದರೂ

ಈಚೆಗೆ ಭೂತಪ್ಪನ ಗುಡಿ ಎಂದೇ ಪ್ರಖ್ಯಾತವಾಗಿದೆ. ಈ ಪುರಲೇಹಳ್ಳಿ ಭೂತಪ್ಪನ ಬಗೆಗೆ ಎರಡು ಕಥೆಗಳಿವೆ. ಮೊದಲನೆಯದು ಜುಂಜಪ್ಪನ ಸೃಷ್ಟಿಯೇ ಭೂತಪ್ಪ. ಕೋಮಲ ಸ್ವಭಾವದ ಜುಂಜಪ್ಪನಿಗೆ ರಕ್ಷಣಭಟನಾಗಿ ಭೂತಪ್ಪ ಹಾಗೂ ಬೇವಿನಹಳ್ಳಿ ಕರಿಯಮ್ಮ ದೇವರುಗಳ ಸೃಷ್ಟಿಯಾಯಿತೆಂದು ಹೇಳಲಾಗುತ್ತಿದೆ. ಜುಂಜಪ್ಪ ಸಸ್ಯಾಹಾರಿಯಾಗಿದ್ದು ಶೈವಪಂಥದ ನೇಮದಂತೆ ಪೂಜೆ ನಡೆಯುತ್ತದೆ. ಸೋಮವಾರ ಜುಂಜಪ್ಪನ ಪೂಜೆಯಾದರೆ, ಮಂಗಳವಾರ ಹಾಗೂ ಶನಿವಾರ ಭೂತಪ್ಪನಿಗೆ ಬಲಿಪೂಜೆ ಇರುತ್ತದೆ.

ಇನ್ನೊಂದು ತಾಳಿದುರ್ಗಿಯ ಕಥೆಗೆ ಸಂಬಂಧಿಸಿದ್ದು. ಜುಂಜಪ್ಪ ಏಳುಗೂಡಿನ ಹಸುಗಳು, ಏಳುಗೂಡಿನ ಹೋರಿಗಳ ಒಡೆಯನಾಗುತ್ತಾನೆ. ಆತನ ಸೋದರಮಾವಂದಿರು ಏನಾದರೂ ಮಾಡಿ ಜುಂಜಪ್ಪನನ್ನು ಬಡವನನ್ನಾಗಿಸುವ ಅಷ್ಟೇ ಅಲ್ಲದೆ, ತಂಗಿಯ ಮಗ ಎಂಬ ಕರುಣೆಯೂ ಇಲ್ಲದೆ, ಜುಂಜಪ್ಪನನ್ನು ಕೊಲ್ಲುವುದಕ್ಕೆ ನಾನಾ ತಂತ್ರ ಹೂಡುತ್ತಾರೆ. ಆದರೆ ಇವರ ಎಲ್ಲ ತಂತ್ರಗಳಿಗೆ ಪ್ರತಿತಂತ್ರ ಹೂಡಿ ಜುಂಜಪ್ಪ ಮೇಲೆ ಬರುತ್ತಾರೆ. ಇದರಿಂದ ಕಂಗಾಲಾದ ಜುಂಜಪ್ಪನ ಮಾವಂದಿರು ಮಾರುವೇಶದಲ್ಲಿ ಜುಂಜಪ್ಪನನ್ನು ಸಾಯಿಸುವ ತಂತ್ರವನ್ನೂ ಮಾಡುತ್ತಾರೆ. ಅದಕ್ಕಾಗಿ ಜುಂಜಪ್ಪನ ದನಗಳು ತಾಳಿದುರ್ಗಿಯ ಕಾವಲಿಗೆ ಮೇಯಲು ಬರುವ ತಂತ್ರ, ಅದರ ಉಸ್ತುವಾರಿಕೆಗಾಗಿ ಸ್ವತಃ ಜುಂಜಪ್ಪನೇ ಬರುವಂತೆ ನೋಡಿಕೊಳ್ಳಲು ತೀರ್ಮಾನಿಸಿ, ಅದರಂತೆ ತಾಳಿದುರ್ಗಿಯ ಬಳಿಗೆ ಹೋಗುತ್ತಾರೆ. ಆ ತಾಳಿದುರ್ಗಿಯ ಆವಾಸಸ್ಥಾನ ಅತ್ಯಂತ ಭಯಾನಕವಾಗಿದ್ದು ತಾಳಿದುರ್ಗಿ ಮಲಗಿದ್ದು ಅವಳು ಕಾಲಿನ ಬಳಿ 500 ಹೆಣಗಳನ್ನು, ಆಕೆಯನ್ನು ಎಬ್ಬಿಸಲು ಗೆಜ್ಜೆಕೋಲು ಮೇಳವನ್ನು ನಡೆಸುತ್ತಾರ. ದೀರ್ಘ ಕಾಲದ ಕೋಲಾಟದ ನಂತರ ತಾಳಿದುರ್ಗಿಗೆ ಎಚ್ಚರವಾಗಿ, ಅವರ ಉದ್ದೇಶವನ್ನು ಕೇಳುತ್ತಾಳೆ. ಆಗ ಜುಂಜಪ್ಪನ ಪರಾಕ್ರಮ, ಪವಾಡಗಳಿಂದ ನಮಗೆ ಆಗುತ್ತಿರುವ ಮಾನಸಿಕ ಹಿಂಸೆಯನ್ನು ವಿವರಿಸಿ ಏನಾದರೂ ಮಾಡಿ ಆತನನ್ನು ಸಾಯಿಸಬೇಕೆಂದು, ಅದಕ್ಕಾಗಿ ತಾಳಿದುರ್ಗಿಗೆ ಮೂರು ಖಂಡುಗ ಅಕ್ಕಿ ಅನ್ನ, 300 ಕುರಿ, 300 ರೂ. ಸೀರೆ ಇವುಗಳನ್ನು ಕೊಡುತ್ತಾರೆ. ತಾಳಿದುರ್ಗಿ ಇವರ ಬಯಕೆಯನ್ನು ಈಡೇರಿಸುವುದಾಗಿ ಒಪ್ಪಿಕೊಳ್ಳುತ್ತಾಳೆ.

ಅದರಂತೆ ಜುಂಜಪ್ಪ ತನ್ನ ಸೋದರರೊಂದಿಗೆ ತಾಳಿದುರ್ಗಿಯ ಕಾವಲಿಗೆ ಹೋಗುತ್ತಾನೆ. ಜುಂಜಪ್ಪನು ಹೆಬ್ಬಾಲದ ಮರದ ಮೇಲೆ ಕುಳಿತುಕೊಂಡು ಆತನ ತಮ್ಮಂದಿರಾದ ಮಾರಣ್ಣ, ಮೈಲಣ್ಣ ಕುಳಿತಿದ್ದರು. ತಾಳೆದುರ್ಗಿಯ ಆರ್ಭಟ ಅತಿಯಾಗತೊಡಗಿದಂತೆಲ್ಲಾ ಜುಂಜಪ್ಪ ಮರದ ಕೊಂಬೆಗಳನ್ನು ಮುರಿದು ತಾಳೆದುರ್ಗಿಯ ಬಾಯಿಗೆ ಹಾಕತೊಡಗಿದನು. ಹೀಗೆ ಹಾಕುವಾಗ ಮರದ ಕೊಂಬೆ, ರೆಂಬೆಗಳೆಲ್ಲವೂ

ಮುಗಿದವು. ನಂತರ ತಾಳೆದುರ್ಗಿ ಕಾವಲಿಗೆ ಬರುವಾಗ ಕಳುವರಹಳ್ಳಿ ಬಯಲಿನ ಸಾಲು ತಗ್ಗಲಿ ಮರದಿಂದ ತಂದಿದ್ದ ಕೆಂಗುರಿ ಮಲ್ಲೇಗೌಡರ ಅರವತ್ತೆಂಟು ಸಾವಿರ ಬಾಣಗಳನ್ನು ಪ್ರಯೋಗಿಸಿದನು. ಆದರೆ ತಾಳೆದುರ್ಗಿ ಜುಂಜಪ್ಪನ ಈ ಎಲ್ಲ ಬಾಣಗಳನ್ನು ಹೊಸಕಿಹಾಕಿದಳು. ತೀವ್ರ ಕೋಪೋದ್ರಿಕ್ತಳಾದ ತಾಳೆದುರ್ಗಿ ದೀರ್ಘವಾಗಿ ಉಸಿರು ಎಳೆದುಕೊಂಡಾಗ ಜುಂಜಪ್ಪ ನೇರವಾಗಿ ಆಕೆಯ ಬಾಯಿಗೆ ಹೋಗಿ, ಆತನ ಎಡಗಾಲಿನ ಹೆಬ್ಬೆರಳು ತಾಳೆದುರ್ಗಿಯ ಬಾಯಲ್ಲಿ ಸಿಕ್ಕಿಕೊಂಡಿತು. ಮೇರೆಗೆ ಭೂತಪ್ಪನ ಸೃಷ್ಟಿಯಾಗುತ್ತದೆ. ಭೂತಪ್ಪ ಕರಿ ಕಂಬಳಿ ಸುತ್ತಿಕೊಂಡು ಮೂರು ಮೂಟೆ ಗಾತ್ರದ ಹೊಟ್ಟೆ ಬಿಟ್ಟುಕೊಂಡು, ಬ್ಯಾಟೆಯೊಂದಿಗೆ, ತಾಳೆದುರ್ಗಿ ಕಾವಲಿಗೆ ಬರುತ್ತಾನೆ. ಬಂದವನೆ ಜುಂಜಪ್ಪನ ಕಾಲನ್ನು ತಾಳೆದುರ್ಗಿ ನುಂಗುತ್ತಿರುವುದು ತಿಳಿದು ಬ್ಯಾಟೆದೊಣ್ಣೆಯಿಂದ ಆಕೆಗೆ ಬಲವಾಗಿ ಬಾರಿಸುತ್ತಾನೆ. ಕ್ರೋಧಗೊಂಡ ತಾಳೆದುರ್ಗಿ ಜುಂಜಪ್ಪನ ಕಾಲು ಬಿಟ್ಟು, ಭೂತಪ್ಪನ ಮೇಲೆ ಯುದ್ಧಕ್ಕೆ ನಿಲ್ಲುತ್ತಾಳೆ. ಭೂತಪ್ಪ ಮೊದಲು ತಾಳೆದುರ್ಗಿಯ ಹದಿನಾರು ಕೈಗಳನ್ನು ಕತ್ತರಿಸಿಹಾಕುತ್ತಾನೆ. ರಕ್ತದ ಕೋಡಿ ಹರಿಯುತ್ತದೆ. ಪ್ರಜ್ಞೆ ತಪ್ಪುತ್ತದೆ. ನಂತರ ಸಾವರಿಸಿಕೊಂಡ ತಾಳೆದುರ್ಗಿ ತಾಳೆಮರದ ಎತ್ತರಕ್ಕೆ ಬೆಳೆಯುತ್ತಾಳೆ. ಇದರಿಂದ ಜುಂಜಪ್ಪನೇ ಹೆದರುತ್ತಾನೆ. ಆದರೆ ಭೂತಪ್ಪ ಹೆದರದೆ, ತಾನು ಅಸಹಾಯಕನಂತೆ ನಟಿಸಿ, ಅವಳ ಬುಡದಲ್ಲಿ ನಿಲ್ಲುತ್ತಾನೆ. ರೋಷದಿಂದ ಬಗ್ಗಿದ ತಾಳೆದುರ್ಗಿ ಭೂತಪ್ಪನನ್ನು ಅಂಗಾತ ಎತ್ತಿಕೊಂಡು ನುಂಗಲು ಮುಂದಾಗುತ್ತದೆ. ತಕ್ಷಣವೇ ಭೂತಪ್ಪ ಎಡಗೈಲೊಂದು ಬಲಗೈಯಲ್ಲೊಂದು ಚೂರಿ ಹಿಡಿದುಕೊಂಡೇ ತಾಳೆದುರ್ಗಿಯ ಬಾಯೊಳಗೆ ಪ್ರವೇಶಿಸುತ್ತಾನೆ. ತಾಳೆದುರ್ಗಿ ನುಂಗಿದಂತೆಲ್ಲಾ ಎರಡು ಚೂರಿಗಳಿಂದ ಆಕೆಯ ಹೊಟ್ಟೆಯನ್ನು ಮೈಯನ್ನು ಇರಿದು ತೂತುಮಾಡುತ್ತಾನೆ. ಮತ್ತು ಇದೇ ರಂಧ್ರದಿಂದ ಹೊರಗೆ ಬರುತ್ತಾನೆ. ತಾಳೆದುರ್ಗಿಯ ದೇಹ ಎರಡು ಭಾಗವಾಗಿ ರಕ್ತ ಕಾಲುವೆಯಾಗಿ ಹರಿಯಿತು. ಇಂದು ಇದೇ ಮಾದರಿಯಲ್ಲಿ ಪುರಲೆಹಳ್ಳಿಯಲ್ಲಿ ಭೂತಪ್ಪನ ಮುಂದೆ ರಕ್ತ ಹರಿಯುತ್ತಿರುತ್ತದೆಂಬ ನಂಬಿಕೆ ಈ ಭಾಗದವರಲ್ಲಿ ವ್ಯಾಪಕವಾಗಿದೆ. ಹೀಗೆ ಸತ್ತ ತಾಳೆದುರ್ಗಿಯನ್ನು ಜುಂಜಪ್ಪ ಉರಿಗಣ್ಣನ್ನು ಬಿಟ್ಟು ಶವ ಸುಟ್ಟು ಬೂದಿಯಾಗುತ್ತದೆ. ಭೂತಪ್ಪ, ಜುಂಜಪ್ಪನ ಕಷ್ಟಕಾಲದಲ್ಲಿ ಮಾಡಿದ ಸಹಾಯಕ್ಕೆ ಸಿರಾ ತಾಲ್ಲೂಕಿನ ಕಾವಲು ರಂಗನಹಳ್ಳಿ ಏಣಿನಲ್ಲಿ ಅಂದರೆ ಪುರಲೇಹಳ್ಳಿಯಲ್ಲಿ ಭೂತಪ್ಪನಿಗೆ ಒಂದು ಗುಡಿಕಟ್ಟಿಸಿ, ಮಂಗಳವಾರ ಮತ್ತು ಶನಿವಾರ ಎರಡೂ ದಿನ ಭೂತಪ್ಪನಿಗೆ ಪೂಜೆಯಾಗಲೆಂದು, ಅಂದು ರಕ್ತಮಾಂಸದ ಔತಣವಾಗಲೆಂದು ಜುಂಜಪ್ಪನೇ ಸಾರುತ್ತಾನೆ. ಆ ನಂಬಿಕೆ ಸಿರಾ ತಾಲ್ಲೂಕಿನಾದ್ಯಂತ ಇದೆ.

ಪ್ರಧಾನವಾಗಿ ಕಾಡುಗೊಲ್ಲರಿಗೆ ಸಂಬಂಧಿಸಿದ ಈ ದೇವತೆಯ ಆರಾಧಕರು ಎಲ್ಲ ವರ್ಗದವರೂ ಇದ್ದಾರೆ. ಕುಂಚಿಟಿಗರು, ಕುರುಬರು, ಬೇಡರು, ಆದಿಕರ್ನಾಟಕ, ಆದಿದ್ರಾವಿಡ

ಹೀಗೆ ಎಲ್ಲರೂ ಭೂತಪ್ಪನ ಒಕ್ಕಲುಗಳಿದ್ದಾರೆ. ಇದರ ನಡತೆ, ಪ್ರಭಾವ ಪ್ರೇರಣೆಗಳಿಂದ ಇಂದು ಕರ್ನಾಟಕ, ಆಂಧ್ರ, ತಮಿಳುನಾಡಿನ ಕಡೆಗಳಿಂದಲೂ ಒಕ್ಕಲುಗಳಾಗುತ್ತಿರುವುದು ವಿಶೇಷ. ಯುಗಾದಿ ಹಬ್ಬದ ಮೊದಲ ದಿನ ಭೂತಪ್ಪನ ಜಾತ್ರೆಯೂ ನಡೆಯುತ್ತದೆ. ಇದಾದ ಮೂರು ದಿನಗಳಲ್ಲಿ ಬೇವಿನಹಳ್ಳಿ ಕರಿಯಮ್ಮನ ಜಾತ್ರೆಯೂ ನಡೆಯುತ್ತದೆ.

## ಪರಸಮ್ಮನ ಕೆರೆ:

ಸಿರಾ ತಾಲ್ಲೂಕಿನ ಹುಯಿಲ್‌ದೊರೆಯಿಂದ ಪೂರ್ವಕ್ಕೆ ಐದು ಕಿ.ಮೀ. ದೂರದಲ್ಲಿರುವ ರಂಗನಾಥಪುರ. ಈ ಗ್ರಾಮದ ಉತ್ತರಕ್ಕೆ ಎತ್ತರವಾದ ದಿಬ್ಬ. ಇದನ್ನು ಮರಡಿಗುಡ್ಡ ಎಂದು ಕರೆಯುತ್ತಾರೆ. ಮರಡಿಗುಡ್ಡದ ಮೇಲಿರುವ ಶ್ರೀ ರಂಗನಾಥಸ್ವಾಮಿಯ ಸಾಲಿಗ್ರಾಮ ವಿಗ್ರಹ ಅದ್ಭುತವಾದುದು. ಗುಡ್ಡದ ಮೇಲೆ ನಿಂತು ನೋಡಿದರೆ ಸಿರಾ ಸೀಮೆಯ ಅರ್ಧ ಪ್ರದೇಶ ಅಚ್ಚುಕಟ್ಟಾಗಿ ಕಾಣುವ ಮರಡಿಗುಡ್ಡದ ಕೆಳಗೆ ಪರಸವ್ವನ ಕೆರೆ ಇದೆ. ಇದು ಕೂಡ ಕಾಡುಗೊಲ್ಲರ ಪರಮ ಪವಿತ್ರ ಸ್ಥಳ. ಇದರ ಬಗೆಗೆ ಎರಡು ಐತಿಹ್ಯಗಳಿವೆ. ಮೊದಲನೆಯದು ಜುಂಜಪ್ಪನ ಪರಾಕ್ರಮ, ಸಾಹಸವನ್ನು ಕೇಳಿದ ಮುಸಲ್ಮಾನರ ಸೇವೆ ಸಿರಾ ಭಾಗಕ್ಕೆ ಬರುತ್ತದೆ. ಸೀರ್ಯಾವನ್ನು ಮುತ್ತಿಗೆ ಹಾಕುತ್ತದೆ. ಆಗ ಜುಂಜಪ್ಪ ಮರಡಿಗುಡ್ಡದ ಚಿಕ್ಕಸಂದ್ರದ ಕಾವಲಿನಲ್ಲಿ ದನ ಕಾಯುತ್ತಿರುತ್ತಾನೆ. ಅಲ್ಲಿಗೆ ಬಂದ ಚಿಕ್ಕ ಚಿತ್ತಯ್ಯನೆಂಬ ಗೆಳೆಯ ಮುಸ್ಲಿಮರ ದಂಡಿನ ವಿಷಯವನ್ನು ಜುಂಜಪ್ಪನಿಗೆ ತಿಳಿಸುತ್ತಾನೆ. ಮುಸಲ್ಮಾನರು ನಿನ್ನ ಶೀಲ, ಸಂಪ್ರದಾಯವನ್ನು ಕೆಡಿಸುತ್ತಾರೆ. ಇದರಿಂದ ನೀನು ತಪ್ಪಿಸಿಕೊಳ್ಳಬೇಕೆಂದು ತಿಳಿಸುತ್ತಾನೆ. ಆದರೆ ಪರಾಕ್ರಮಿಯಾದ ಜುಂಜಪ್ಪ ಚಿಕ್ಕಚಿತ್ತಯ್ಯನ ಮಾತುಗಳನ್ನು ತಿರಸ್ಕರಿಸುತ್ತಾನೆ. ಅಂಥ ದಂಡಿಗಾಗಲಿ ಕಳ್ಳ ಸಾಬೀತಾಗಲೀ ಹೆದರುವವನಲ್ಲ ಎಂದು ತಿಳಿಸುತ್ತಾನೆ. ಕೊನೆಗೆ ಚಿತ್ತಯ್ಯ ಹಾಗೂ ಗೆಳೆಯರೆಲ್ಲರೂ ಸೇರಿ ಜುಂಜಪ್ಪನನ್ನು ಬಲವಂತವಾಗಿ ಹಿಡಿದುಕೊಂಡು ಪರಸವ್ವನ ಕೆರೆಯಲ್ಲಿ ಮುಳುಗಿಸಿಟ್ಟಿದ್ದರೆಂದು ಕಾಡುಗೊಲ್ಲರಲ್ಲಿ ನಂಬಿಕೆ. ಹಾಗಾಗಿಯೇ ಈ ಕೆರೆಯ ನೀರು ಕಾಡುಗೊಲ್ಲರಿಗೆ ತೀರ್ಥವಾಗಿ ಎಲ್ಲಾ ಧಾರ್ಮಿಕ ಕಾರ್ಯಕ್ಕೂ ಬೇಕಾಗುತ್ತದೆ. ಜೊತೆಗೆ ಪ್ರತಿಯೊಂದು ಕಾರ್ಯದ ಪುಣ್ಯಸ್ನಾನವೂ ಇಲ್ಲಿಯೇ ನಡೆಯುವ ಪರಿಪಾಠವಿದೆ. ಕಾಡುಗೊಲ್ಲರಿಗೆ ಸಂಬಂಧಿಸಿದ ದೇವರುಗಳನ್ನು ಹೊಳೆ ತೆಗೆದು ಪುಣ್ಯಸ್ನಾನ ಮಾಡಿಸುವುದು ಸಂಪ್ರದಾಯವಿದೆ.

ಮತ್ತೊಂದು ಐತಿಹ್ಯದ ಪ್ರಕಾರ, ಈ ಕೆರೆ ಪರಸವ್ವನ ಕೆರೆಯಾಗಿದ್ದು ಪರಸವ್ವ ಎಂದರೆ ಚಿನ್ನದ ಅವ್ವ, ಚಿನ್ನದಮ್ಮ ಎಂದು ಕರೆಯಲಾಗಿದೆ. ಅಂದರೆ ಈ ಭಾಗದ ಯಾರೇ ಬಡವ ಬಗ್ಗರು ತಮ್ಮ ಮನೆಗಳಲ್ಲಿ ನಡೆಸುವ ಪುಣ್ಯದ ಕಾರ್ಯಕ್ರಮ, ಮದುವೆ ಮತ್ತಿತರ ಕಾರ್ಯಕ್ರಮಗಳಲ್ಲಿ ಪರಸವ್ವನ ಕೆರೆಯ ಏರಿಯ ಮೇಲೆ ನಿಂತು ಭಕ್ತಿಯಿಂದ ಅವ್ವ

ಒಡವೆ ಕೊಡು ತಾಯೆಂದು ಪ್ರಾರ್ಥಿಸಿದರೆ ಚಿನ್ನದ ಒಡವೆಗಳನ್ನು ಕೊಡುತ್ತಿದ್ದಾಳೆಂದು ಆ ಒಡವೆಗಳನ್ನು ಕೆಲಸ ಮುಗಿದ ಕೂಡಲೇ ಹಿಂತಿರುಗಿಸಬೇಕೆಂಬ ಬಲವಾದ ನಂಬಿಕೆ ಇತ್ತು. ಬಹಳ ಕಾಲದ ತನಕ ಈ ಸಂಪ್ರದಾಯ ನಿರಂತರವಾಗಿದ್ದು ಕೊನೆಗೆ ಅಂಟುಮುಂಟಿನಿಂದ ಪರಸು ಅಂದರೆ ಚಿನ್ನದ ಒಡವೆಗಳು ಬರುವುದು ನಿಂತಿತು. ಅದಕ್ಕೂ ಕಾರಣ ಮಣಿಗಾರನೊಬ್ಬ ಪರಸವ್ವನನ್ನು ಕೆಟ್ಟದಾಗಿ ನಿಂದಿಸಿದನೆಂದೂ, ಅಂದಿನಿಂದ ಪರಸವ್ವ ನೀರಿನಿಂದ ಈಚೆಗೆ ಬರಲಿಲ್ಲವೆಂದು ನಂಬಲಾಗಿದೆ. ಅಂತೂ ಕಾಡುಗೊಲ್ಲರಿಗೆ ಪ್ರಿಯವಾದ ಧಾರ್ಮಿಕ ಸ್ಥಳ ಇದಾಗಿದೆ.

## ಎತ್ತಪ್ಪನಕಟ್ಟೆ:

ಎತ್ತಪ್ಪ ಕಾಡುಗೊಲ್ಲರ ಮತ್ತೊಬ್ಬ ಸಾಂಸ್ಕೃತಿಕ ವೀರ. ಪುರಾಣ ಮೂಲದ ಈತನ ಹುಟ್ಟಿನ ಹಿನ್ನೆಲೆಯಿರುವ ಎತ್ತಪ್ಪ ಹುತ್ತದಲ್ಲಿ ಹುಟ್ಟಿದವನು. ಅಂಬೀರಾಯ-ತುಂಬೀರಾಯ ಎಂಬುವವರು ಈತನನ್ನು ದನ ಕಾಯುವುದಕ್ಕೆ ಸೇರಿಸಿಕೊಂಡರು. ಮುಂದೆ ಕಾಡುಗೊಲ್ಲರ ಹೊನ್ನಬಾಳೇಗೌಡರ ಮಗಳಾದ ಗೆಜ್ಜೆಕಾಲು ಮಲ್ಲಮ್ಮನನ್ನು ಮದುವೆಯಾದನು. ಈತನ ಮದುವೆಯ ಮಹೋತ್ಸವದಲ್ಲಿ ತಮಗೆ ಮಹತ್ವ ಕೊಡಲಿಲ್ಲವೆಂದು ಬೇವಿನಹಳ್ಳಿ ಕರಿಯಮ್ಮ, ಸೋರೆಕುಂಟೆ ಕರಿಯಮ್ಮ ಮತ್ತು ವಡ್ಡಗೆರೆ ನಾಗಮ್ಮ ಈ ಮೂವರು ದೇವತೆಗಳು ಎತ್ತಪ್ಪನ ಮೇಲೆ ಕೋಪಗೊಂಡು ಹಲವು ರೀತಿಯ ಕಿರುಕುಳ ನೀಡುತ್ತಾರೆ. ಜೊತೆಗೆ ದನಗಳಿಗೂ ತೊಂದರೆ ನೀಡುತ್ತಾರೆ. ಎತ್ತಪ್ಪ ಅದನ್ನೂ ನಿವಾರಿಸುತ್ತಾನೆ. ಸಿರಾ-ಧರ್ಮಪುರ ರಸ್ತೆಯ ಲಕ್ಕವ್ವನಹಳ್ಳಿಯಿಂದ ಒಂದೂವರೆ ಕಿ.ಮೀ ದೂರದ ಬಟ್ಟಬಯಲಿನಲ್ಲಿ ಕುರುಚಲು ಕಾಡಿನಲ್ಲಿ ಎತ್ತಪ್ಪನಕಟ್ಟೆ ಇದೆ. ಇದು ಕಾಡುಗೊಲ್ಲರಿಗೆ ಪ್ರಮುಖ ಧಾರ್ಮಿಕ ನೆಲೆ. ವರ್ಷಕ್ಕೊಮ್ಮೆ ಇಲ್ಲಿ ಜಾತ್ರೆ ಸೇರುತ್ತದೆ. ಎತ್ತಪ್ಪ ತನ್ನ ದನಗಳಿಗೆ ಮೈ ತೊಳೆಯಲು, ನೀರು ಕುಡಿಸಲು ಚಿಲುಮೆ ತೋಡಿ ಕಟ್ಟೆ ಹಾಕಿದ್ದನೆಂದು ಹೇಳಲಾಗುತ್ತದೆ. ಇಂದಿಗೂ ಕೊಳವಿದೆ. ಬೇಸಿಗೆ-ಮಳೆಗಾಲ ಯಾವ ಸಮಯದಲ್ಲೂ ಇದು ಬತ್ತುವುದೇ ಇಲ್ಲ, ತಿಳಿಯಾದ ಸಿಹಿನೀರು ಈ ಕಟ್ಟೆಯಲ್ಲಿದೆ.

ಎತ್ತಪ್ಪನಕಟ್ಟೆ ಎಂದರೆ ನೀರು ನಿಲ್ಲುವ ಸ್ಥಳವಲ್ಲ. ಆರು ಅಡಿ ಉದ್ದ ಹಾಗೂ ನಾಲ್ಕು ಅಡಿ ಅಗಲದ ಕಲ್ಲುಕಟ್ಟಿದ ಚೌಕಾಕಾರ ಕಟ್ಟೆ. ಸಿರಾದ ಬೇವಿನಹಳ್ಳಿ, ದ್ವಾರನಕುಂಟೆ ವಿಶೇಷವಾಗಿ ಗೌಡಗೆರೆ, ಹುಲಿಕುಂಟೆ ಹೋಬಳಿಯಲ್ಲಿ ಎತ್ತಪ್ಪನ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಡಿಸೆಂಬರ್ ತಿಂಗಳಲ್ಲಿ ಆಚರಿಸುವ ಈ ಹಬ್ಬ ಗೊಲ್ಲರು, ಕುರುಬರು, ಮ್ಯಾಸಬೇಡರು, ಕುಂಚಿಟಿಗರು ಹಾಗೂ ಇತೆ ಜಾತಿಯವರೆಲ್ಲರೂ ಆಚರಿಸುತ್ತಾರೆ. ಅಂಥ ಸಂದರ್ಭದಲ್ಲಿ ಈ ಭಾಗದ ಎತ್ತಪ್ಪ, ಚಿತ್ತಯ್ಯ, ಕಾಟಂಲಿಂಗ, ಆಂಜನಯ್ಯ, ಬೀರೇಶ್ವರ ಈ

ದೇವರುಗಳು ಈ ಎತ್ತಪ್ಪನ ಕಟ್ಟೆಯ ಮೇಲೆ ಗದ್ದಿಗೆ ಮಾಡುತ್ತಾರೆ. ಗಣೆಕೋಲು, ನಂದಿಧ್ವಜ ಮೊದಲಾದ ಹಲವಾರು ಜಾನಪದ ಕಲಾಪ್ರದರ್ಶನಗಳು ಇಲ್ಲಿ ನಡೆಯುತ್ತವೆ.

## ಚಂಗಾವರದ ಚದುರಂಗದ ಕಾವಲು:

ತುಮಕೂರು ಜಿಲ್ಲೆ ಕಾಡುಗೊಲ್ಲರ ಸಾಂಸ್ಕೃತಿಕ ಧಾರ್ಮಿಕ ಕೇಂದ್ರ. ಕಾಡುಗೊಲ್ಲರ ಮೊದಲ ಸಾಂಸ್ಕೃತಿಕ ವೀರ ಎತ್ತಪ್ಪ ಆದರೂ ತುಮಕೂರು ಜಿಲ್ಲೆಯಲ್ಲಿ ಪ್ರಧಾನವಾಗಿ ಕಂಡುಬರುವುದು ಜುಂಜಪ್ಪನ ಆರಾಧನೆ. ತುಮಕೂರು ಜಿಲ್ಲೆಯಾದ್ಯಂತ ಜುಂಜಪ್ಪನ ಐತಿಹ್ಯ, ಜುಂಜಪ್ಪನ ಗಣೆವಾದ, ಜುಂಜಪ್ಪನ ಬಸವನ ಬಗೆಗಿನ ಐತಿಹ್ಯ ಹೀಗೆ ನಾನಾ ಬಗೆಯಲ್ಲಿ ಜುಂಜಪ್ಪನ ಆಚರಣೆ ಕಂಡುಬರುತ್ತದೆ. ಆದರೂ ಕೆಲವು ಕಡೆ ಎತ್ತಪ್ಪನಿಗೆ ಸಂಬಂಧಿಸಿದ ಐತಿಹ್ಯಗಳು ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕಿನಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಚಂಗಾವರವೂ ಒಂದು. ಸಿರಾದಿಂದ 24 ಕಿ.ಮೀ. ದೂರದಲ್ಲಿರುವ ಚಂಗಾವರ 15-16 ನೇ ಶತಮಾನಕ್ಕೆ ಪಾಳೆಯಗಾರರ ಪ್ರಮುಖ ನೆಲೆ. ಕಾಡುಗೊಲ್ಲರ ಕಟ್ಟೆ ಮನೆಯಾದ ಬೇವಿನಹಳ್ಳಿಗೆ ಸಮೀಪದಲ್ಲಿಯೇ ಇರುವ ಚಂಗಾವರ ಹೆಸರಿನ ಐತಿಹ್ಯ ಕೂಡ ಎತ್ತಪ್ಪನ ಹಿನ್ನೆಲೆಯಲ್ಲಿಯೇ ಬರುವುದು ಎತ್ತಪ್ಪನ ಕಾವ್ಯದಲ್ಲಿ ಪ್ರಕಟವಾಗುತ್ತದೆ.

ಎತ್ತಪ್ಪ ಪಶುಪಾಲನೆಯ ಅಗ್ರಮಾನ್ಯ ವೀರ. ಪಶುಪಾಲನೆಗಾಗಿಯೇ ಒಟ್ಟು ಬದುಕನ್ನು ಮೀಸಲಿಟ್ಟವನು. ವಿವಾಹವಾದರೂ ಸ್ತ್ರೀ ಸಂಬಂಧಿ ಸೂತಕ ಮೊದಲಾದ ಅಂಟುಮುಂಟಿನಿಂದ ತನ್ನ ಗೋವುಗಳಿಗೆ ಬಾಧಕ ಎಂದು ಬಗೆದು ಗೆಜ್ಜೆಕಾಲೀನನಾಗಿ ಎಂಬ ಹೆಂಡತಿಯೊಂದಿಗೂ ಕೂಡದ ಅತ್ಯಂತ ಕಟ್ಟುಪಾಡಿನ ವ್ಯಕ್ತಿ. ಇಂಥ ಎತ್ತಪ್ಪನ ಪಶುವೊಂದರ ಸಾಹಸದ ವಿವರ ನೀಡುವ ಒಂದು ಪ್ರಸಂಗ ಚಂಗಾವರದಲ್ಲಿ ನಡೆಯುತ್ತದೆ.

ಎತ್ತಪ್ಪನಿಗೆ ಚಿಕ್ಕರೆಂಬೆ ಎಂಬ ಹಸು ಇತ್ತು. ಇದು ಗಬ್ಬವಾಗಿತ್ತು. ಎತ್ತಪ್ಪ ಹಸುಗಳನ್ನು ಕೋಡಿಹಳ್ಳಿ, ಎತ್ತಪ್ಪನಕಟ್ಟೆ ಭಾಗಗಳಲ್ಲಿ ಮೇಯಿಸುವಾಗ ಅಜ್ಜೀರ ಬಾಲ ಹಾಗೂ ಹುಲಿಕುಂಟೆಯ ರಂಗಣ್ಣ ಎಂಬ ಪಾಳೆಗಾರರು 'ನಿನ್ನ ಹಸುವನ್ನು ಅರವತ್ತು ಅಡಿ ಎತ್ತರದ ಬೇವಿನಮರದ ಮೇಲಿಂದ ಹಾರಿಸಿದರೆ ನಿಮ್ಮ ಪರಾಕ್ರಮವನ್ನು ಮೆಚ್ಚುತ್ತೇವೆ' ಎಂಬುದಾಗಿ ಹೇಳುತ್ತಾರೆ. ಆಗ ಎತ್ತಪ್ಪನ ಚಿಕ್ಕರೆಂಬೆ ಎಂಬ ಹಸು ಚಂಗಾವರದ ಚದುರಂಗದ ಕಾವಲಿನಲ್ಲಿರುವ ಅರವತ್ತು ಅಡಿ ಎತ್ತರದ ಬೇವಿನ ಮರವನ್ನು ಹಾರುತ್ತದೆ. ಹೀಗೆ ಹಾರಿದ ಹಸು ತನ್ನ ಹೊಟ್ಟೆಯೊಳಗಿದ್ದ ಕರುವನ್ನು ಹೊರಗೆ ಹಾಕುತ್ತ ತಾನು ಸಾಯುತ್ತದೆ. ಈ ಮೂಲಕ ಎತ್ತಪ್ಪನ ಸತ್ಯವನ್ನು ಪ್ರಕಟಿಸುತ್ತದೆ. ಈ ಕಾರಣವಾಗಿಯೇ ಅಲ್ಲಿ ಒಂದು ಬೇವಿನಮರವಿದ್ದು ಎತ್ತಪ್ಪನ ಚದುರಂಗದ ಮರ ಎಂದು ಕರೆಯಲಾಗುತ್ತದೆ. ಜೊತೆಗೆ

ಚದುರಂಗವಾಡಿದ್ದರಿಂದ ಚಂಗಾವರ ಎಂಬ ಹೆಸರು ಈ ಸ್ಥಳಕ್ಕೆ ಬಂದಿದೆ ಎಂದು ಸ್ಥಳೀಯ ಪುರಾಣದ ಜೊತೆಗೆ ಎತ್ತಪ್ಪನ ಕಾವ್ಯದಲ್ಲಿಯೂ ಪ್ರಕಟವಾಗುತ್ತದೆ.

**ಬಿಜ್ಜಂಬೆಳ್ಳ:**

ಸಿರಾ ಹಾಗೂ ಗುಬ್ಬಿ ತಾಲ್ಲೂಕಿನ ಗಡಿ ಭಾಗದಲ್ಲಿ ಸಿರಾದಿಂದ 18 ಕಿ.ಮೀ. ದೂರದಲ್ಲಿರುವ ಬಿಜ್ಜಂಬೆಳ್ಳ ಚಿತ್ರದುರ್ಗ-ಮೈಸೂರು ರಸ್ತೆಯ ಗೋಪಾಲದೇವರಹಳ್ಳಿಯಿಂದ ಬಲಕ್ಕೆ ತಿರುಗಿದರೆ 2 ಕಿ.ಮೀ. ದೂರದಲ್ಲಿದೆ. ಇದೊಂದು ಜುಂಜಪ್ಪನ ಸಾಂಸ್ಕೃತಿಕ ಕೇಂದ್ರ. ಜುಂಜಪ್ಪನ ದೀಪ ಏರಿಸುವುದು ಇಲ್ಲಿನ ಪ್ರಮುಖ ಆಚರಣೆ. ಸೀರ್ಯಾ ಸೀಮೆಗೆ ಬರಗಾಲ ಬರುತ್ತದೆ. ದನಗಳನ್ನು ರಕ್ಷಿಸಲು ಜುಂಜಪ್ಪ ತನ್ನ ತಮ್ಮಂದಿರಾದ ಮಾರಣ್ಣ, ಮೈಲಣ್ಣರೊಂದಿಗೆ ಚೇಳೂರ ಸೀಮೆಗೆ ಹುಲ್ಲು ನೀರಿಗಾಗಿ ಬರುತ್ತಾನೆ. ಚೇಳೂರ ರಂಗಣ್ಣನ ಕಾವಲಿನಲ್ಲಿ ಜುಂಜಪ್ಪ ದನಗಳನ್ನು ಮೇಯಿಸುತ್ತಾನೆ. ಸಮೃದ್ಧವಾಗಿ ಬೆಳೆದಿದ್ದ ಹುಲ್ಲನ್ನು ತಿಂದ ಜುಂಜಪ್ಪನ ದನಗಳು ಅಧಿಕವಾಗಿ ಹಾಲು ಕೊಡುತ್ತವೆ. ಆಗ ಜುಂಜಪ್ಪ ಬೆಣ್ಣೆಯನ್ನು ಮಾಡಿ ಸಿರಾ, ಚೇಳೂರುಗಳಲ್ಲಿ ಮಾರುತ್ತಾನೆ.

ದಿನದಿಂದ ದಿನಕ್ಕೆ ಜುಂಜಪ್ಪನ ಗೋವುಗಳು ಹೆಚ್ಚುವರಿಯಾಗಿದ್ದಕ್ಕೆ ಈತನ ಸೋದರಮಾವಗಳು ದ್ವೇಷಿಸತೊಡಗಿದರು. ಜುಂಜಪ್ಪನ ಸೋದರಮಾವಂದಿರು ಜುಂಜಪ್ಪನಿಗೆ ಏಳು ಕರುಗಳನ್ನು ಕೊಟ್ಟು ತಮ್ಮ ದನಗಳೊಂದಿಗೆ ಕಾಯಿರಿ ಎಂದರು. ಆದರೆ ಜುಂಜಪ್ಪನ ದನಗಳು ಮಾತ್ರ ಹೆಚ್ಚುವಳಿಯಾಗುತ್ತವೆ. ಕಂಬೇರ ದನಗಳು ಹೆಚ್ಚುವಳಿಯಾಗುವುದಿಲ್ಲ. ಇದು ಸೋದರಮಾವಂದಿರಿಗೆ ಅಸಮಾಧಾನ, ಅಸೂಯೆಯಾಗಿ ಮಾರ್ಪಡುತ್ತದೆ. ಜುಂಜಪ್ಪ ನಮ್ಮ ದನಗಳಿಗೆ ಮಾಟ-ಮಂತ್ರ ಮಾಡಿದ್ದಾನೆಂದು ಭಾವಿಸುತ್ತಾರೆ. ಜೊತೆಗೆ ಜುಂಜಪ್ಪನ ವಿರುದ್ಧ ತಿರುಗಿಬೀಳುತ್ತಾರೆ. ಇದೇ ಸಂದರ್ಭದಲ್ಲಿ ಒಂದು ಸಣ್ಣ ಘಟನೆ ನಡೆಯುತ್ತದೆ. ಇದೆ ಜುಂಜಪ್ಪನ ಕಾವ್ಯದಲ್ಲಿ ಪ್ರಮುಖ ಘಟನೆ. ಚೇಳೂರ ಪ್ರಕರಣ ಎಂದೇ ಕರೆಯಲ್ಪಡುವ ಈ ಭಾಗ ಜುಂಜಪ್ಪನ ಶಕ್ತಿ, ಸಾಮರ್ಥ್ಯ ಹಾಗೂ ಕೋಪ-ತಾಪಗಳ ಪ್ರತೀಕದಂತಿದೆ.

ಕಂಬೇರಹಟ್ಟಿಯ ಸೋದರಮಾವಂದಿರು ಜುಂಜಪ್ಪನ ದನಗಳ ಮೇಲೆ ಕಣ್ಣು ಹಾಕಿದ್ದು ಸರಿಯಷ್ಟೇ. ಇದಕ್ಕೆ ಚೇಳೂರಿನ ಪಾಳೆಯಗಾರರ ಕಣ್ಣು ಬೀಳುತ್ತದೆ. ಜುಂಜಪ್ಪನ ಗೋವುಗಳು ಚೇಳೂರ ರಂಗಣ್ಣನ ಕಾವಲಿನಲ್ಲಿ ಮೇಯ್ದು ಚೇಳೂರ ಕೆರೆಯ ನೀರು ಕುಡಿದು ಇರುವಾಗ್ಗೆ ಗೋರಕ್ಷಣೆಯಲ್ಲಿದ್ದ ಜುಂಜಪ್ಪನನ್ನು ಆತನ ಸೋದರಮಾವಂದಿರು ಕುತಂತ್ರ ಮಾಡುತ್ತಾರೆ.

ಏನಮ್ಮ ಚಿನ್ನಮ್ಮ ನಿನ್ನ ಮಕ್ಕಳನ್ನು ನೋಡಕ್ಕೆರಡು ಕಣ್ಣು ಸಾಲವು
ಕೈಗೊಂಡಾಳು ಮೈಗೊಂಡಾಳಲ್ಲೆ ತಾಯಿ ಚಿನ್ನಮ್ಮ
ಕರಕೊಂಡೇ ಬಂದು ನೀರಾನೆ ಹುಯ್ಯಕ್ಕಿಲ್ವ ॥

ಎಂದು ಮರ್ಮಘಾತುಕದ ಮಾತುಗಳನ್ನು ಆಡುತ್ತಾರೆ. ತಂಗಿ ಚಿನ್ನಮ್ಮ ಅಣ್ಣಂದಿರ ಮಾತುಗಳನ್ನು ಕೇಳಿ ಮಗ ಜುಂಜಪ್ಪನನ್ನು ಕರೆಸಿಕೊಂಡು, ದೊಡ್ಡ ಹಂಡೆಯಲ್ಲಿ ನೀರು ಕಾಯಿಸಿ ಪಾಲು ಪಂಚಾಮೃತದ ಅಡಿಗೆಯನ್ನು ಮಾಡುತ್ತಾಳೆ. ಮಾರಣ್ಣ, ಮೈಲಣ್ಣರಿಗೆ ಈ ಘಟನೆಯಿಂದ ಅನುಮಾನ ಬಂತು. ಚೇಳೂರ ದೊರೆಗಳ ಕಣ್ಣು ಜುಂಜಪ್ಪನ ಬಡಮೈಲನ ಮೇಲೆ ಬಿದ್ದಿರುವುದು ತಿಳಿದಿತ್ತು. ಜುಂಜಪ್ಪ ಅತ್ತ ಕಡೆ ಹೋದ ಕೂಡಲೇ ಈತನ ಸೋದರಮಾವಂದಿರು ಬಂದು ಜಾತ್ರೆಯ ತೇರು ಎಳೆಯಲು ಬಡಮೈಲ ಬೇಕು ಎಂದು ಜುಂಜಪ್ಪನನ್ನು ಕೇಳಿದರು. ಅವನು ಹೊಡಕೊಂಡು ಹೋಗಿ ಎಂದನು. ಏನೂ ತಿಳಿಯದೆ ಹುಡುಗರಿಗೆಲ್ಲ ಸುಳ್ಳು ಹೇಳಿ ಬಡಮೈಲನನ್ನು ಕಂಬೇರಗೊಲ್ಲರು ಅಪಹರಿಸುತ್ತಾರೆ. ಸ್ವಲ್ಪ ದೂರ ಹೋದ ಕೂಡಲೇ ಚೇಳೂರ ಪಾಳೆಯಗಾರರು ಹೊಂಚು ಹಾಕಿ ಬಡಮೈಲನ ಮೇಲೆ ಬಿದ್ದು ಹಿಡಿಯುತ್ತಾರೆ. ಜೊತೆಗೆ ಮಾರಣ್ಣ-ಮೈಲಣ್ಣರನ್ನು ಕೈಕಾಲು ಕಟ್ಟಿ ಮರಳಲ್ಲಿ ಕೆಡವುತ್ತಾರೆ.

ಇತ್ತ ಬಡಮೈಲ ಬಗ್ಗಲಿಲ್ಲ
ಇಪ್ಪತ್ತೊಂದಾಳು ಕುದುರೇರು । ಸತ್ತರಿ ಕೇರು
ಎತ್ತ ಹೋರಾಡಿ ಹಿಡಿದಾರೆ ।
ಕರವಿನೇಣಾಗೆ ಕೈಕಾಲು ಕಟ್ಯಾರೆ
ಕಾದ ಮಳಲಾಗೆ ಉಳ್ಳುಬಿಟ್ಟು । ಮಾವಗಳು
ಹೋರಿ ಚೇಳೂರಿಗೆ ಹೊಡೆದಾರೆ ॥

ಚೇಳೂರೆಂಬುದು ಏಳು ಸುತ್ತಿನ ಕ್ವಾಟೆ
ಪಕ್ಸಿ ಹಾರಿದರೆ ಗಳಿರೆಂಬೋ ಕ್ವಾಟೆಗೆ
ಹೊಕ್ಕನಲ್ಲಮ್ಮ ಬಡಮೈಲ ॥

ಹೋರಿಯನ್ನು ಚೇಳೂರಿನ ಕೋಟೆಯ ಒಳಗೆ ಎಳೆದು ತಂದು ಕಲ್ಲುಕಂಬಕ್ಕೆ ಕಟ್ಟಿ ಹಾಕುತ್ತಾರೆ. ಜುಂಜಪ್ಪನಿಗೆ ಮಜ್ಜನಕ್ಕೆ ಸಿದ್ಧವಾಗುತ್ತದೆ. ಆ ಎಣ್ಣೆಯ ಬಟ್ಟಲಿನಲ್ಲಿ ಕಲ್ಲುಕಂಬಕ್ಕೆ ಬಿಗಿದ ಬಡಮೈಲನ ಚಿತ್ರ ಕಾಣುತ್ತದೆ.

ಬೆಳ್ಳಿ ಬಟ್ಟಲದಾಗೆ ಒಳ್ಳೆಣ್ಣೆ ಹುಯಿಕೊಂಡು
ಬಾಲೇರು ಜುಂಜಪ್ಪನಿಗೆ ಉಗುರೆಣ್ಣೆ ಒತ್ತುವಾಗ ।
ಬಲ್ಲಿಗನ ಸುದ್ದಿ ಅರಿದಾವು॥

ಜುಂಜಪ್ಪನಿಗೆ ಕೋಪ ಬಂದಿತು. ನೀರು ಕಾಯಿಸಲು ಹೂಡಿದ್ದ ಒಲೆಯ ಗುಂಡುಗಳನ್ನು ಎರಡೂ ಕೈಗಳಲ್ಲಿ ಹಿಡಿದುಕೊಂಡು ಹೊರಟನು. ಹೀಗೆ ಹೊರಟ ಜುಂಜಪ್ಪ ನೇರವಾಗಿ ಈಗಿನ ಬಿಜ್ಜಂಬೆಳ್ಳದ ಬಂಡೆಯ ಮೇಲೆ ನಿಂತು ತನ್ನ ಪಿಳ್ಳಂಗೋವಿ ಹಿಡಿದು ಹೀಗೆ ಬಡಮೈಲನನ್ನು ಕರೆಯುತ್ತಾನೆ.

ಕಲ್ಲುಕಂಬ ಮುರಿಯೋ । ಕಬ್ಬಿಣದ ಸರಮುರಿಯೋ
ಮುದ್ದು ಚೇಳೂರ ತೆನೆಮುರಿಯೋ । ಬಡಮೈಲ
ಗೆದ್ದು ಬಾರೋ ಚೇಳೂರ ಬಯಲೀಗೆ ॥

ಕಾಲು ಸೋತು, ಒದೆತ ತಿಂದು ಸುಸ್ತಾಗಿದ್ದ ಬಡಮೈಲನಿಗೆ ಜುಂಜಪ್ಪನ ಪಿಳ್ಳಂಗೋವಿಯ ಸಪ್ಪಳ ಕಿವಿಗೆ ಬಿದ್ದುದೇ ತಡ ಬಲವಾಗಿ ಕಂಬಕ್ಕೆ ಕಟ್ಟಿದ ಸರಪಳಿ ಹರಿದು, ಕಲ್ಲುಕಂಬ ಮುರಿದು, ಚಿನ್ನದಂಥ ಕೋಟೆಯ ತೆನೆ ಮುರಿದು ಒಂದೇ ನೆಗೆತಕ್ಕೆ ಚೇಳೂರು ಸಮೀಪದ ಸಣಬನಹಳ್ಳಿ ಬಂಡೆಯ ಮೇಲೆ ಒಂದು ಪಾದ ಊರಿ, ಅಲ್ಲಿಂದ ನೇರವಾಗಿ ಬಿಜ್ಜಂಬೆಳ್ಳಕ್ಕೆ ನೆಗೆಯಿತು ಎಂದು ನಂಬಲಾಗಿದೆ. ಹಾಗಾಗಿಯೇ ಪ್ರತಿ ಕಾರ್ತಿಕ ಮಾಸದಲ್ಲಿ ಇಲ್ಲಿ ವಿಶೇಷ ಪೂಜೆ. ಜುಂಜಪ್ಪನಿಗೆ ದೀಪ ವಿರುತ್ತದೆಂದು ಸಾವಿರಾರು ಭಕ್ತರು ಬಂದು ಸೇರುತ್ತಾರೆ. ಶನಿವಾರ ರಾತ್ರಿಯಿಂದ ಸೋಮವಾರದ ತನಕ ವಿಶೇಷ ಕಾರ್ಯಕ್ರಮವಿರುತ್ತದೆ. ರೈತರು ತಾವು ಬೆಳೆದ ಹರಳು ಮೊದಲಾದ ಎಣ್ಣೆ ಬೀಜವನ್ನು ಜುಂಜಪ್ಪನ ದೇವಸ್ಥಾನದಲ್ಲಿ ಉರಿಯುತ್ತಿರುವ ಅಗ್ನಿಗೆ ಹಾಕುತ್ತಾರೆ. ಪೂಜಾರಿಗಳು ಭಕ್ತರು ತಂದ ಕಾಳುಗಳನ್ನು ತೆಗೆದುಕೊಳ್ಳುತ್ತಾರೆ. ಈ ರೀತಿ ದೇವರಿಗೆ ಕೊಡುವುದರಿಂದ ಹೊಲದ ಬೆಳೆ ಕ್ರಿಮಿಕೀಟಗಳಿಂದ ಪಾರಾಗಿ ಹಾವು, ಚೇಳು ಮೊದಲಾದ ಜಂತುಗಳಿಂದ ಯಾವುದೇ ಉಪಟಳವಿಲ್ಲದೆ ರಕ್ಷಿಸುವ ದೇವತೆಯಾಗಿ ಜುಂಜಪ್ಪ ಇರುತ್ತಾನೆಂದು ಭಾವಿಸಲಾಗಿದೆ. ಹಾಗಾಗಿಯೇ ಇದು ಸರ್ವಜನಾಂಗದ ಪವಿತ್ರ ಯಾತ್ರಾಸ್ಥಳವಾಗಿದೆ. ಇದೇ ಮಾದರಿಯ ಪೂಜೆ, ಆಚರಣೆ ಜುಂಜಪ್ಪನ ಸಮಾಧಿ ಇರುವ ಕಳುವೋರಹಳ್ಳಿಯಲ್ಲಿಯೂ ಕಾಣಬಹುದು. ಜೊತೆಗೆ ಯುಗಾದಿ ಹಬ್ಬವಾದ ಮರುದಿವಸ ಚೇಳೂರಿಗೆ 3 ಕಿ.ಮೀ. ದೂರದ ಮಾರನಹಳ್ಳಿಯ ಬಯಲಿನಲ್ಲಿರುವ ಜುಂಜಪ್ಪನ ಪಾದದ ಬಳಿಯೂ ಜಾತ್ರೆ ವಿಜೃಂಭಣೆಯಿಂದ ಸೇರುತ್ತದೆ. ಬೆಳಿಗ್ಗೆ 7 ರಿಂದ ರಾತ್ರಿ 9 ಗಂಟೆಯ ಒಳಗೆ ಜಾತ್ರೆಯ ವಿಶೇಷವೆಲ್ಲಾ ಮುಗಿದುಹೋಗುತ್ತವೆ. ಒಟ್ಟಾರೆ ತುಮಕೂರು ಜಿಲ್ಲೆಯ ಕಾಡುಗೊಲ್ಲರ

ನೆಲೆಗಳಾದ ಸಿರಾ, ಹಾಗಲವಾಡಿ, ಮಧುಗಿರಿ ಈ ಭಾಗಗಳಲ್ಲಿ ಜುಂಜಪ್ಪನ ಬಗೆಗಿನ ಐತಿಹ್ಯಗಳು ವ್ಯಾಪಕವಾಗಿ ಕಂಡುಬರುತ್ತವೆ.

**ಗಿಡಗನಹಳ್ಳಿ ರಂಗನಾಥ:**

ಸಿರಾ ತಾಲ್ಲೂಕಿನ ಗಿಡಗನಹಳ್ಳಿ ತಾಲ್ಲೂಕು ಕೇಂದ್ರದಿಂದ 15 ಕಿ.ಮೀ. ದೂರದಲ್ಲಿದೆ. ಇಲ್ಲಿ ರಂಗನಾಥನ ಜಾತ್ರೆ ಪ್ರತಿ ವರ್ಷ ಚೈತ್ರ ಮಾಸದಲ್ಲಿ ಹತ್ತು ದಿನಗಳ ಕಾಲ ನಡೆಯುತ್ತದೆ. ಮೊದಲ ದಿನ ಗಂಗಾಪೂಜೆ, ದವನೋತ್ಸವ, ದೊಡ್ಡತೇರು, ಆನೆ ಉತ್ಸವ, ಕುದುರೆ ಉತ್ಸವಗಳು ದಿನಕ್ಕೊಂದರಂತೆ ನಡೆಯುತ್ತವೆ.

**ಕರಿಯಮ್ಮನನ್ನು ಹೊರಡಿಸುವುದು:**

ರಂಗನಾಥನ ತಂಗಿ ಎಂದೇ ಕರೆಯಲ್ಪಡುವ ಕರಿಯಮ್ಮ ದೇವಿಯ ಜಾತ್ರೆಯನ್ನು ಕೊನೆಯ ದಿನ ಏರ್ಪಡಿಸುತ್ತಾರೆ. ರಂಗನಾಥನ ಜಾತ್ರೆಯ ಕೊನೆಯ ದಿನ ಇದಕ್ಕೂ ಬಾನ (ಆರತಿ) ಕೋಣಬಲಿ ಹಾಗೂ ಹಗಲು ಪರಿಷೆಯ ಕಾಲಕ್ಕೆ ಗಾವು ಸಿಗಿಯುತ್ತಾರೆ. ಬೆಳಗಿನ ಜಾವ ಭಕ್ತರು ಹರಕೆಯ ರೂಪದಲ್ಲಿ ಕುರಿ, ಕೋಳಿ ಬಲಿ ಕೊಡುತ್ತಾರೆ.

**ಮರಡಿ ರಂಗನಾಥ:**

ಸಿರಾ ತಾಲ್ಲೂಕಿನ ಪ್ರಮುಖ ಯಾತ್ರಾಸ್ಥಳ ಸಿರಾ-ಬುಕ್ಕಾಪಟ್ಟಣ ರಸ್ತೆಯಲ್ಲಿ ರಂಗನಾಥಪುರದ ಗುಡ್ಡದ ಮೇಲಿದೆ. ಸಾಲಿಗ್ರಾಮ ಶಿಲೆಯ ಶಯನ ರೂಪದ ಭವ್ಯ ರಂಗನಾಥನ ಮೂರ್ತಿ ಆಕರ್ಷಕವಾಗಿದೆ. ಪ್ರತಿ ವರ್ಷ ಚೈತ್ರಮಾಸದಲ್ಲಿ ಜಾತ್ರೆ ನಡೆಯುತ್ತದೆ. ಇಲ್ಲಿ ಭೂತಪ್ಪನ ಗುಡಿಯಿದೆ. ಇಲ್ಲಿಗೆ ಸಮೀಪದ ಪರಸವ್ವನ ಕೆರೆ ಕಾಡುಗೊಲ್ಲರ ಪವಿತ್ರಸ್ಥಳ. ಜುಂಜಪ್ಪ, ಚಿತ್ರದೇವರು ಮೊದಲಾದ ದೇವತೆಗಳಿಗೆ ಇಲ್ಲಿ ಪುಣ್ಯಸ್ನಾನವಾಗುತ್ತದೆ. ಮುಸಲ್ಮಾನರ ದಾಳಿಯಿಂದ ತಪ್ಪಿಸಿಕೊಳ್ಳಲು ಜುಂಜಪ್ಪ ಈ ಕೆರೆಯಲ್ಲಿ ಅಡಗಿದ್ದನೆಂಬ ಐತಿಹ್ಯವಿದೆ.

**ಸಾಕ್ಷಿಹಳ್ಳಿ ಮಣ್ಣೆಮ್ಮ:**

ಸಾಕ್ಷಿಹಳ್ಳಿ ಸಿರಾ ತಾಲ್ಲೂಕಿನ ಬುಕ್ಕಾಪಟ್ಟಣ ಹೋಬಳಿಗೆ ಸೇರಿದ ಒಂದು ಪುಟ್ಟ ಗ್ರಾಮ. ಮಣ್ಣೆಮ್ಮ ಇಲ್ಲಿನ ಗ್ರಾಮದೇವತೆ. ಪ್ರತಿ ವರ್ಷ ಮೇ ತಿಂಗಳಲ್ಲಿ ಒಂದು ವಾರ ಕಾಲ ಬೃಹತ್ ಜಾತ್ರೆ ನಡೆಯುತ್ತದೆ. ಏಳೂರ ದೇವತೆಯಾದ ಮಣ್ಣೆಮ್ಮ, ಪಾತರಾಜ ಇಲ್ಲಿನ ಆಕರ್ಷಣೆ.

**ಮೊದಲ ದಿನ ಗಂಗಾಸ್ನಾನ:**

ಪಕ್ಕದ ಕುರೆಹಳ್ಳಿ ಕೆರೆಯಲ್ಲಿ ದೇವತೆ ಮಜ್ಜನ ಪಕ್ಕದ ಊರುಗಳಿಗೆ ದೇವತೆ ಮಡಿಲಕ್ಕಿಗೆ ಹೋಗುತ್ತದೆ. ಬಾನ: ದೇವತೆಗೆ ಸುತ್ತೇಳು ಹಳ್ಳಿಗಲಿಂದ ಆರತಿ ಬರುತ್ತದೆ. ರಾತ್ರಿ ಬೃಹತ್ ಜಾತ್ರೆಯೂ ಕಲೆಯುತ್ತದೆ. ಆ ದಿನ ಕೋಣ ಬಲಿ, ಬೆಳಿಗ್ಗೆ ಕುರಿ ಮೇಕೆ ಬಲಿಯೂ ನಡೆಯುತ್ತದೆ. ಅಗ್ನಿಕೊಂಡ: ಶುಕ್ರವಾರ ಪ್ರಾತಃಕಾಲ ಅಗ್ನಿಕೊಂಡದ ಸೇವಾಕಾರ್ಯ ಇರುತ್ತದೆ. ಶನಿವಾರ ರಥೋತ್ಸವ ಕಾರ್ಯಕ್ರಮ. ಮರೆ ಹಾಕುವುದು: ದೇವತೆಗೆ ಸೋಮ ಪಾತರಾಜಗಳಿದ್ದು ಗಾಳಿ ಸೋಂಕಿನವರಿಗೆ ಮರೆ ಹಾಕಲು ಇವುಗಳ ಸಹಾಯ ಪಡೆಯುವರು.

**ಮಹಾಸತಿ ಬರಗೂರು ವೀರಮ್ಮ:**

ಬರಗೂರು ತಾಲ್ಲೂಕಿನ ಹಲವು ಸಾಂಸ್ಕೃತಿಕ ಅಧ್ಯಯನಕ್ಕೆ ಆಕರವನ್ನೊದಗಿಸುವ ನೆಲ. ಸಿರಾ ನಗರದಿಂದ ಉತ್ತರಕ್ಕೆ 24 ಕಿ.ಮೀ. ದೂರದ ಈ ಗ್ರಾಮ, ನೆರೆಯ ಹೇಮಾವತಿ ಐತಿಹಾಸಿಕ, ಸಾಂಸ್ಕೃತಿಕ ಬೇರುಗಳಿಗೆ ಭದ್ರವಾದ ನೆಲೆಯನ್ನು ಒದಗಿಸಿದೆ. ಈ ಗ್ರಾಮದ ಹಲವಾರು ದೇವಾಲಯಗಳು ಇಂದಿಗೂ ನೊಳಂಬರ ವಾಸ್ತುಶಿಲ್ಪಕ್ಕೆ ಮಾದರಿಯಾಗಿವೆ. ಇಲ್ಲಿನ ಶ್ರೀ ಕುಮಾರೇಶ್ವರ ದೇವಾಲಯ, ಅದರೊಳಗಣ ಬೃಹದಾಕೃತಿಯ ಶಿವಲಿಂಗ, ಒಂದು ಕಾಲದ ಶೈವ ನೆಲೆಯಾಗಿ ಪ್ರಾಮುಖ್ಯತೆ ಪಡೆದಿರುವುದಕ್ಕೆ ಸಾಕ್ಷಿಯಾಗಿದೆ. ಶೈವರು, ಕುಂಚಿಟಿಗರು, ಹಾಲು ಮತದವರು, ಬೇಡರು ಈ ಗ್ರಾಮದ ಪ್ರಮುಖ ಜನಾಂಗ. ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಕವಾದ ಬಿ.ಎನ್.ರಾಮೇಗೌಡರ ಹುಟ್ಟೂರು. ಸ್ವಾತಂತ್ರ್ಯಾನಂತರ ಮೊದಲ ಬಾರಿಗೆ ಸಿರಾ ವಿಧಾನಸಭಾ ಕ್ಷೇತ್ರವನ್ನು ಎರಡು ಬಾರಿಗೆ ಪ್ರತಿನಿಧಿಸಿ ವಿಜಯಿಯಾದವರು (1952-1957 ಮತ್ತು 1967-71). ಪೂರ್ವಕ್ಕೆ ಆಂಧ್ರದ ಅಂಚಿಗೆ ಹೊಂದಿಕೊಂಡಂತಿದ್ದರೂ ಪ್ರಮುಖವಾಗಿ ಪ್ರಮುಖ ರಾಜಕೀಯ ಸ್ಥಿತ್ಯಂತರವೂ ಸೇರಿದಂತೆ ಸಾಂಸ್ಕೃತಿಕ ಹಿರಿಮೆಗೆ ಕಾರಣವಾಗಿದೆ.  ಆಂಜನೇಯ ಹಾಗೂ ಜ್ಞಾನಜ್ಯೋತಿ ಎಂಬ ಎರಡು ಪದವಿ ಹಾಗೂ ಪದವಿಪೂರ್ವ ಕಾಲೇಜುಗಳಿವೆ.

ಬರಗೂರಿನ ಕೆರೆಯ ಏರಿಯ ಬದಿಗೆ ಹೊಂದಿಕೊಂಡಂತಿರುವ ಒಂದು ಪುಟ್ಟ ಗುಡಿ ವೀರಮ್ಮ ದೇವಾಲಯ. ಇದೊಂದು ಮಹಾಸತಿಯ ಮೂರ್ತರೂಪ. ಈ ಬಗೆಗೆ ಬರಗೂರು ಭಾಗದಲ್ಲಿ ಅಪಾರ ಪ್ರಮಾಣದಲ್ಲಿ ಹಾಡು, ಕಥನ ಗೀತೆಗಳು ಪ್ರಕಟವಾಗುತ್ತಿವೆ. ಇವೆಲ್ಲವೂ ಜನಪದ ವಾಙ್ಮಯದಲ್ಲಿರುವುದರಿಂದ ಸಂಗ್ರಹದ ಕೆಲಸ ಆಗಬೇಕಿದೆ. ಬರಗೂರು ವೀರಮ್ಮನ ಬಗೆಗಿನ ಒಂದು ಕಥೆ ಹೀಗಿದೆ.

ವೀರಮ್ಮ ಗಂಗಣ್ಣ ಎಂಬುವರ ಮಗಳು. ಈಕೆಯ ತವರು ವೀರಬೊಮ್ಮನಹಳ್ಳಿ

ಎಂದು ತಿಳಿಯುತ್ತದೆ. ವೀರಮ್ಮ ಹುಟ್ಟಿ ಬೆಳೆಯುವಾಗ ಹಲವು ಅಪಶಕುನಗಳು ಘಟಿಸುತ್ತವೆ. ಊಟದಲ್ಲಿ ಹಲ್ಲಿ ಬೀಳುವುದು, ಕುಡಿಯುವ ನೀರು ರಕ್ತವಾಗುವುದು ಮುಂತಾದ ಪ್ರಸಂಗಗಳು ತಂದೆ ಗಂಗಣ್ಣನನ್ನು ಘಾಸಿಗೊಳಿಸುತ್ತವೆ. ಚಿಕ್ಕ ಮಗಳಾದರೂ ಬೇಗ ಮದುವೆ ಮಾಡಬೇಕೆಂದು ನಿಶ್ಚಯಿಸಿದ ಗಂಗಣ್ಣ, ವೀರಮ್ಮನನ್ನು ಬರಗೂರಿನ ಬೊಮ್ಮಯ್ಯ ಎಂಬ ಒಕ್ಕಲು ಮಗನಿಗೆ ಕೊಡಲು ತೀರ್ಮಾನವಾಗುತ್ತದೆ. ಮದುವೆಯೂ ಆಗುತ್ತದೆ. ಬಹಳ ದಿನಗಳ ನಂತರ ಆಕೆಗೆ ಒಂದು ಗಂಡುಮಗು ಜನಿಸುತ್ತದೆ. ಒಮ್ಮೆ ಈಕೆಯ ಬದುಕಿನಲ್ಲಿ ದುರ್ಘಟನೆ ಜರುಗುತ್ತದೆ. ತವರು ಮನೆಯಲ್ಲಿ ಪ್ರಥಮ ಬಾಣಂತನ ನಡೆಯುತ್ತಿರುವಾಗಲೇ ವೀರಮ್ಮ ಹೊಲಕ್ಕೆ ಹತ್ತಿ ಬಿಡಿಸಲು ತನ್ನ ಅಕ್ಕನೊಂದಿಗೆ ಹೋಗುತ್ತಾಳೆ. ಮಾಗಿಯ ಬಿಸಿಲಿಗೆ ದಣಿವಾಗಿ ಪಕ್ಕದಲ್ಲಿಯೇ ಇದ್ದ ಹಳ್ಳವೊಂದಕ್ಕೆ ಹೋಗಿ ಅಕ್ಕ ತಂಗಿಯರು ನೀರಿನ ಚಿಲುಮೆ ತೆಗೆಯುತ್ತಾರೆ. ಅಕ್ಕ ತಿಳಿತ ನೀರನ್ನು ಕುಡಿದು ದಣಿವಾರಿಸಿಕೊಳ್ಳುತ್ತಾಳೆ. ನಂತರ ವೀರಮ್ಮ ನೀರು ಕುಡಿಯಲು ಬಗ್ಗಿದಾಗ ಆ ತಿಳಿತ ನೀರಿನೊಳಗೆ ತನ್ನ ಗಂಡನ ರುಂಡ ಮುಂಡ ಬೇರಾದ ಚಿತ್ರವನ್ನು ಕಾಣುತ್ತಾಳೆ. ಚಿಲುಮೆ ನೀರೆಲ್ಲ ರಕ್ತವರ್ಣವೂ ಆಯಿತಂತೆ. ಅದನ್ನು ಜನಪದ ಕಥನಗೀತೆ ಹೀಗೆ ಬಿಚ್ಚಿಕೊಳ್ಳುತ್ತದೆ.

ಅಕ್ಕಯನ್ನ ಸೆಲುಮಾಗೆ ಹಾಲಿನಂಥ ಪನ್ನೀರು
ಚಿಕ್ಕೋಳು ವೀರಮ್ಮ ಶಿಲುಮ್ಯಾಲೆ ರಕ್ತದಾ ಕೆನ್ನೀಕು
ಬೊಮ್ಮಯ್ಯ ನೆತ್ತರವೇ ಕೋಡಿ ಹರಿದಾವೆ ।

ಈ ಗೀತೆ ಗಂಡ ಬೊಮ್ಮಯ್ಯನ ತಲೆ ಕಡಿದು, ರಕ್ತ ಚೆಲ್ಲಿದ ಪ್ರಸಂಗವನ್ನು ವಿವರಿಸುತ್ತದೆ. ಕಥೆ ಹೇಳುವ ಸಂದರ್ಭದಲ್ಲಿ ಅಕ್ಕ ತಂಗಿಯರು ಒಂದೇ ಚಿಲುಮೆಯಲ್ಲಿ ನೀರು ಕುಡಿದರು, ಅಂದಿದ್ದರೆ ಗೀತೆಯಲ್ಲಿ ಅಕ್ಕ ತಂಗಿಯರು ಬೇರೆ ಬೇರೆ ಚಿಲುಮೆ ತೋಡಿ ನೀರು ಕುಡಿದ ಪ್ರಸಂಗವನ್ನು ವಿವರಿಸುತ್ತದೆ. ಇದು ವೀರಮ್ಮನ ದುರಂತ ಬದುಕಿನ ಮುನ್ಸೂಚನೆಯಾಗುತ್ತದೆ. ಹೀಗೆ ಕಂಡ ದೃಶ್ಯವನ್ನು ವೀರಮ್ಮ ಕೇಡೆಂದೆ ಭಾವಿಸಿ ತವರುಮನೆಯಿಂದ ಗಂಡನ ಮನೆಗೆ ಬರುವ ಆತುರ ತೋರುತ್ತಾಳೆ. ತನ್ನ ತೌರ ಬಳಗದಲ್ಲಿ ತಾನು ಕಂಡು ದುಷ್ಕೃತ್ಯವನ್ನು ವಿವರಿಸುತ್ತಾಳೆ. ತವರಿನಲ್ಲಿಯೂ ವೀರಮ್ಮನಿಗೆ ನಾನಾ ಬಗೆಯಲ್ಲಿ ಸಮಾಧಾನ ಮಾಡಲಾಗುತ್ತದೆ. ಹೊಲಮನೆಯನ್ನು ಕೊಡುವ ಪ್ರಸ್ತಾಪವೂ ನಡೆಯುತ್ತದೆ, ಆದರೆ ಸಾಧ್ವಿ ವೀರಮ್ಮ ಅವೆಲ್ಲವನ್ನೂ ತಿರಸ್ಕರಿಸಿ ಬರಗೂರಿಗೆ ಬರುತ್ತಾಳೆ. ಇತ್ತ ಬರಗೂರ ಬೊಮ್ಮಯ್ಯನನ್ನು ಮ್ಯಾಸಬೇಡರು ಆತನು ದನ ಮೇಯಿಸುವಾಗ ದನಗಳನ್ನು ಅಪಹರಿಸಲು ಆತನೊಂದಿಗೆ ಕಾದಾಡುತ್ತಾರೆ. ಆ ಕಾದಾಟದಲ್ಲಿ ಬೊಮ್ಮಯ್ಯನ ತಲೆ ಒಡೆಯುತ್ತಾರೆ. ಅನಿವಾರ್ಯ ಘಟ್ಟದಲ್ಲಿ ಬೊಮ್ಮಯ್ಯನ ಸಾವು ಸಂಭವಿಸುತ್ತದೆ. ಈ

ಸಂಗತಿ ಮಡದಿ ವೀರಮ್ಮನಿಗೆ ಜಲದೃಶ್ಯವಾಗಿ ಕಾಣುವುದು ಜನಪದ ನಂಬಿಕೆಯ ಪ್ರತೀಕವಾಗಿದೆ. ಇದನ್ನು ಕಂಡ ವೀರಮ್ಮ ಗಂಡನೊಂದಿಗೆ ಚಿತೆ ಏರಲು ಸಿದ್ಧವಾಗುತ್ತಾಳೆ. ಸುದ್ದಿ ತೌರಿಗೂ ತಿಳಿಯುತ್ತದೆ. ಅಣ್ಣ ಓಡೋಡಿ ಬರುತ್ತಾನೆ. ತಂಗಿಗಾದ ದುರಂತವನ್ನು ಕಂಡು ಘಾಸಿಯಾಗುತ್ತಾನೆ. ಮತ್ತೆ ತಂಗಿಯನ್ನು ಸಾವಿನಿಂದ ಉಳಿಸಿಕೊಳ್ಳಲು ಪರಿಪರಿಯಾಗಿ ಬೇಡಿಕೊಳ್ಳುತ್ತಾನೆ. ಆದರೆ ವೀರಮ್ಮ ಕೊಡುವ ಉತ್ತರ ಹೀಗೆ ಪ್ರಕಟವಾಗುತ್ತದೆ.

ಗಂಡ ಸತ್ತ ಮೇಲೆ ಕಂದ ಯಾರದಪ್ಪ
ಬಿಂದಿಗೆ ಹೊನ್ನು ನನಗ್ಯಾಕೆ ಅಣ್ಣಯ್ಯ
ಗಂಡನ ಪಾದ ಶಿವಪಾದ । ಗಂಡನಿಂದೆ
ಹೋದಾರೆ ಸಾವಿರದ ಪುಣ್ಯ ಪಡೆದೇನು ॥

ಹೀಗೆ ಕೈಕೂಸನ್ನು ತನ್ನ ವಾರಗಿತ್ತಿಯರ ಬಳಿ ಬಿಟ್ಟು, ಆ ಮಗುವನ್ನು ಜೋಪಾನ ಮಾಡುವಂತೆ ಪ್ರಾರ್ಥಿಸುತ್ತಾಳೆ. ಮನದಲ್ಲಿ ಮಧುಗಿರಿಯ ಮಹಾಲಿಂಗನನ್ನು ಸ್ಮರಿಸುತ್ತಾಳೆ. ತಾಯಿಯನ್ನು ಸ್ಮರಿಸುತ್ತಾ ಗಂಡನೊಂದಿಗೆ ಚಿತೆ ಏರುತ್ತಾಳೆ. ಹೀಗೆ ಗಂಡನೊಂದಿಗೆ ಚಿತೆಗೇರಿ ಸಾಧ್ವಿಯಾದ ವೀರಮ್ಮನ ನೆನಪಿಗೆ ಪುಟ್ಟ ಗುಡಿಯನ್ನು ನಿರ್ಮಿಸಿ, ಇಂದಿಗೂ ಪೂಜೆ ಸಲ್ಲಿಸುವ ಪರಂಪರೆಯ ಜೊತೆಗೆ ಈ ದೇವತೆಯ ಬಗೆಗೆ ಭಕ್ತಿಭಾವದಿಂದ ನಡೆದುಕೊಳ್ಳಲಾಗುತ್ತದೆ. ವೀರ ವನಿತೆಯರ ಸಾಹಸಗಾಥೆಯಾಗಿ ಮಹಾಸತಿ ಆಚರಣೆಗೆ ಇದರ ನಂಬಿಕೆ ನಡಾವಳಿಗೆ ಸಾಕ್ಷಿಯಾಗಿರುವ ಬರಗೂರು ವೀರಮ್ಮ, ಸಿರಾ ತಾಲ್ಲೂಕಿನ ಸಾಂಸ್ಕೃತಿಕ ಅಧ್ಯಯನಕ್ಕೆ ಹೊಸ ಆಕರವಾಗಿರುವ ದೇವತೆ ಎಂಬುದು ಮರೆಯಬಾರದ ಸಂಗತಿ.

**ಬೆಜ್ಜಿಹಳ್ಳಿ:**

ಬೆಜ್ಜಿಹಳ್ಳಿ ಸಿರಾ ತಾಲ್ಲೂಕಿನ ಪ್ರಮುಖ ಧಾರ್ಮಿಕ ನೆಲೆ. ಹಲವು ತಲ್ಲಣಗಳ ನಡುವೆ ಮರೆತಂತಿರುವ ಈ ಕ್ಷೇತ್ರ, ಜಲಧಿ ಬೊಪ್ಪರಾಯ ಎಂಬ ಪೌರಾಣಿಕ ಪುರುಷನ ಕಾರ್ಯನೆಲೆ. ಜೊತೆಗೆ ಸಿರಾ ತಾಲ್ಲೂಕಿನ ಪ್ರಭಾವಿ ಜನಾಂಗವಾದ ಕುಂಚಿಟಿಗರ ಪವಿತ್ರ ಸ್ಥಳವೂ ಆಗಿದೆ. ಕುರುಬರು ಮತ್ತು ಕುಂಚಿಟಿಗರ ಜನಾಂಗಿಕ ಐಕ್ಯತೆ, ಸಮನ್ವಯತೆಗಳ ಮೇಲೆ ಬೆಳಕು ಬೀರುವ ಸಾಂಸ್ಕೃತಿಕ, ಧಾರ್ಮಿಕ ಕ್ಷೇತ್ರವೂ ಹೌದು. ಸಿರಾ ತಾಲ್ಲೂಕು ಕೇಂದ್ರದಿಂದ 46 ಕಿ.ಮೀ. ದೂರದ ದೂರದಲ್ಲಿದೆ.

ಕುಂಚಿಟಿಗರು > ಕುಂಚಿಟಿಗ ಒಕ್ಕಲಿಗರು > ಕುಂಚೊಕ್ಕಲಿಗರು ಎಂದೆಲ್ಲಾ ಕರೆಯುವ ಈ ಜನಾಂಗ ಸಿರಾ ತಾಲ್ಲೂಕಿನ ಪ್ರಭಾವಿ ಜನಾಂಗವೂ ಹೌದು. ರಾಜಕೀಯ, ಆರ್ಥಿಕ,

ಶೈಕ್ಷಣಿಕ. ಧಾರ್ಮಿಕ ಹಾಗೂ ಸಾಮಾಜಿಕವಾಗಿ ಸುಸಂಘಟಿತವಾದ ಜನಾಂಗ. ಈ ಜನಾಂಗದ ಜನಾಂಗಿಕ ವಿವರಣೆ, ಪೌರಾಣಿಕ ಹಿನ್ನೆಲೆ, ವೃತ್ತಿ ವಿಚಾರಗಳನ್ನು, ದೈವ ಸಂಬಂಧಿ ಆಚರಣೆ ನಡಾವಳಿಯನ್ನು ಬೆಜ್ಜಿಹಳ್ಳಿಯ ಜಲಧಿ ಬೊಪ್ಪರಾಯನ ಸಾಂಸ್ಕೃತಿಕ ನಡಾವಳಿಯಲ್ಲಿ ಕಂಡುಬರುತ್ತದೆ. ಈ ಬಗೆಗೆ ಕುಂಚಿಟಿಗರ ಪುರಾಣಗಳೂ ರಚನೆಗೊಂಡಿವೆ. ಮೈಸೂರು ಸಂಸ್ಥಾನದ ಜಾತಿಗಳು ಮತ್ತು ಬುಡಕಟ್ಟುಗಳು ಎಂಬ ಕೃತಿಯನ್ನು ಎಲ್.ಅನಂತಕೃಷ್ಣ ಅಯ್ಯರ್ ಪ್ರಕಟಿಸಿದ್ದಾರೆ. (Cast and tribes in Mysore) ಇದರ ಕಥಾಹಂದರ ಹಿ ೕಗಿದೆ. ಇದರಲ್ಲಿ ಜಲಧಿ ಬೊಪ್ಪರಾಯನೆಂಬ ಕುರುಬರ ಯುವಕನಿಗೂ, ಕುಂಚಿಟಿಗರ ದೆಹಲಿಯ ಉಂಡೆ ಉತ್ತರಾಯನಿಗೂ ಸಮನ್ವಯ ಕಲ್ಪಿಸಲಾಗಿದೆ.

ದೆಹಲಿಯ ಉಂಡೆ ಎತ್ತರಾಯ ವ್ಯಾಪಾರಿಯಾಗಿದ್ದನು. ದೆಹಲಿಯ ಸುಲ್ತಾನರಿಗೆ ಆತ್ಮೀಯನೂ ಆಗಿದ್ದನು. ಜನಪ್ರಿಯ ವ್ಯಕ್ತಿಯಾದ ಈತನಿಗೆ ಅನುಪಮ ಚೆಲುವೆಯಾದ ಮಗಳಿದ್ದಳು. ಈಕೆಯ ಹೆಸರು ಚಿಕ್ಕಬೈರೇದೇವಮ್ಮ. ಈಕೆಯನ್ನು ದೆಹಲಿಯ ಸುಲ್ತಾನ ಮೋಹಿಸುತ್ತಾನೆ. ಮದುವೆಯಾಗಲು ಒಲವು ತೋರುತ್ತಾನೆ. ಅದರಂತೆ ಉಂಡೆ ಎತ್ತರಾಯನೊಂದಿಗೆ ತನ್ನ ಮಗಳು ಚಿಕ್ಕಬೈರದೇವಮ್ಮನನ್ನು ಮದುವೆ ಮಾಡಿಕೊಡುವಂತೆ ಕೇಳಿಕೊಳ್ಳುತ್ತಾನೆ. ಆದರೆ ಸುಲ್ತಾನನ ಈ ಬಗೆಯ ಮೋಹ, ಅನೈತಿಕ ಮಾತುಗಳು ಉಂಡೆ ಎತ್ತರಾಯನಿಗೆ ಜಿಗುಪ್ಸೆಯಾಗುತ್ತದೆ. ಆದರೂ ರಾಜನ ಈ ಧೋರಣೆಯನ್ನು ವಿರೋಧಿಸಲೂ ಆಗದೆ, ಒಪ್ಪಲೂ ಸಾಧ್ಯವಿಲ್ಲದೆ ಚಡಪಡಿಸುತ್ತಾನೆ. ಮಾತ್ರವಲ್ಲ ಸುಲ್ತಾನನ ಸಾಮರ್ಥ್ಯದ ಅರಿವಿದ್ದ ಎತ್ತರಾಯ ದೆಹಲಿ ಬಿಡಲು ತೀರ್ಮಾನಿಸುತ್ತಾನೆ. ದೆಹಲಿ ಸುಲ್ತಾನನಿಗೆ ತಿಳಿಯದಂತೆ ಇಡೀ ಕುಟುಂಬವೇ ದೆಹಲಿಯಿಂದ ದಕ್ಷಿಣ ದೇಶಕ್ಕೆ ಪಲಾಯನ ಮಾಡಲು ತೀರ್ಮಾನಿಸುತ್ತಾನೆ. ಅದರಂತೆ ರಾತ್ರೋ ರಾತ್ರಿ ಹೊರಟು, ಕುಟುಂಬ ಸಮೇತ ದಕ್ಷಿಣ ಭಾರತದ ಕಡೆ ಬರುತ್ತಾನೆ. ಹೀಗೆ ಬಂದವನು ಗೋದಾವರಿ ನದಿಯ ಬಳಿಗೆ ಬಂದಾಗ ನದಿ ಅಡ್ಡಲಾಗಿ, ಮುಂದೆ ಬರಲು ಇವರಿಗೆ ತೊಂದರೆಯಾಗುತ್ತದೆ. ಪಾರಾಗಲು ಹಲವು ಬಗೆಯ ಪ್ರಯತ್ನದಲ್ಲಿ ತೊಡಗುತ್ತಾನೆ. ದೆಹಲಿ ಸುಲ್ತಾನ ಹಿಂಬಾಲಿಸಿಬರುವ ಸಾಧ್ಯತೆಯೂ ಇದ್ದುದರಿಂದ ಮತ್ತೂ ಕಂಗಾಲಾಗುತ್ತಾನೆ. ಆ ವೇಳೆಗೆ ಸಮೀಪದಲ್ಲಿ ಕುರಿ ಮೇಯಿಸುತ್ತಿದ್ದ ಹುಡುಗನೊಬ್ಬ ಇವರ ಕಣ್ಣಿಗೆ ಬೀಳುತ್ತಾನೆ. ಆತನ ಹತ್ತಿರಕ್ಕೆ ಹೋದ ಉಂಡೆ ಎತ್ತಪ್ಪರಾಯ, ತಾನು ನದಿ ದಾಟಬೇಕಾದ ಅನಿವಾರ್ಯ, ದಾಟುವ ವಿಧಾನವನ್ನು ಕುರಿತು ತಿಳಿಸಿಕೊಡುವಂತೆ ಕೇಳಿಕೊಳ್ಳುತ್ತಾನೆ. ಆಗ ಆ ಕುರಿಗಾಯಿ ಯುವಕ ಜಲದಿ ಬೊಪ್ಪಯ, ಉಂಡೆ ಎತ್ತಪ್ಪರಾಯನನ್ನು ಕುರಿತು ಹೀಗೆ ಹೇಳುತ್ತಾನೆ. ನಿಮ್ಮ ಮಗಳು ಚಿಕ್ಕಬೈರದೇವಿಯನ್ನು ನನಗೆ ಕೊಟ್ಟು ವಿವಾಹ ಮಾಡುವುದಾದರೆ ನಾನು ನಿಮ್ಮನ್ನೆಲ್ಲಾ ಈ ಉಕ್ಕಿ ಹರಿಯುವ ನದಿಯಿಂದ ಹೊರಗೆ ದಾಟಿಸುತ್ತೇನೆ ಎನ್ನುತ್ತಾನೆ. ಹೇಗಾದರೂ

ಮುಸ್ಲಿಂನಿಂದ ಮಗಳನ್ನು ರಕ್ಷಿಸಬೇಕೆಂಬ ತೀವ್ರ ಯೋಚನೆಯಲ್ಲಿ ತೊಡಗಿದ್ದ ಉಂಡೆ ಎತ್ತರಾಯ, ಜಲಧಿ ಬೊಪ್ಪರಾಯನ ಶರತ್ತಿಗೆ ಒಪ್ಪಿಕೊಳ್ಳುತ್ತಾನೆ. ನದಿಯನ್ನು ದಾಟಿಸಿದರೆ ತನ್ನ ಮಗಳಾದ ಚಿಕ್ಕಬೈರದೇವಿಯನ್ನು ಕುರುಬರ ಜಲಧಿ ಬೊಪ್ಪರಾಯನಿಗೆ ಕೊಟ್ಟು ವಿವಾಹ ಮಾಡುವುದಾಗಿ ಮಾತು ಕೊಡುತ್ತಾನೆ.

ಇತ್ತ ಜಲಧಿ ಬೊಪ್ಪರಾಯ ತನ್ನ ಮನೆದೇವರಿಗೆ ಕೈಮುಗಿದು, ತನ್ನ ಕೈಯಿಂದಲೇ ತನ್ನ ತಲೆಯನ್ನು ಕಡಿದುಕೊಳ್ಳುತ್ತಾನೆ. ಕತ್ತರಿಸಿದ ರುಂಡವನ್ನು ತನ್ನ ಅಂಗೈಯಲ್ಲಿಟ್ಟುಕೊಂಡು, ತುಂಬಿ ಹರಿಯುತ್ತಿರುವ ಗೋದಾವರಿ ನದಿಗೆ ಮಂಗಳಾರತಿ ಎತ್ತುತ್ತಾನೆ. ಕೂಡಲೇ ನದಿ ಎರಡು ಭಾಗವಾಗಿ ಉಂಡೆ ಎತ್ತಪ್ಪರಾಯ ದಾಟಲು ಅನುಕೂಲ ಮಾಡಿಕೊಡುತ್ತದೆ. ತನ್ನ ಇಡೀ ಕುಟುಂಬದವರೊಂದಿಗೆ ಗೋದಾವರಿ ನದಿಯನ್ನು ದಾಟಿ ಈಚೆಗೆ ಬರುತ್ತಾನೆ.

ಜಲಧಿ ಬೊಪ್ಪರಾಯನಿಗೆ ಕೊಟ್ಟ ಮಾತಿನಂತೆ ಜಲಧಿ ಬೊಪ್ಪರಾಯನ ಮುಂಡಕ್ಕೆ ಚಿಕ್ಕಬೈರದೇವಿಯನ್ನು ಕೊಟ್ಟು ಮದುವೆ ಮಾಡುತ್ತಾನೆ. ಬೊಪ್ಪರಾಯ ಹಾಗೂ ಉಂಡೆ ಎತ್ತಪ್ಪರಾಯ ಇವರಿಬ್ಬರ ವ್ಯಕ್ತಿತ್ವವನ್ನು ಕಂಡು ಮೆಚ್ಚಿದ ಶಿವ, ಮಡದಿ ಪಾರ್ವತಿಯೊಂದಿಗೆ ಪ್ರತ್ಯಕ್ಷನಾಗುತ್ತಾನೆ. ತುಂಡಾಗಿದ್ದ ಜಲಧಿ ಬೊಪ್ಪರಾಯನ ರುಂಡ ಮುಂಡವನ್ನು ಒಂದುಗೂಡಿಸಿ ಜೀವಕಳೆ ನೀಡುತ್ತಾನೆ. ಜೊತೆಗೆ ಬೊಪ್ಪರಾಯ ಕಂಬಳಿ ನೇಯ್ಗೆಯ ಕಾಯಕವನ್ನು ಮಾಡುತ್ತಿದ್ದರಿಂದ ಉಂಡೆ ಎತ್ತಪ್ಪರಾಯನಿಗೆ ಕಂಬಳಿ ನೇಯ್ಗೆಯಲ್ಲಿ ಕುಂಚ ಹೊಡೆಯುವ ಕಾಯಕವನ್ನು ನೀಡುತ್ತಾನೆ. ಮುಂದೆ ಉಂಡೆ ಎತ್ತಪ್ಪರಾಯನ ವಂಶಸ್ಥರೆಲ್ಲರೂ ಕುಂಚಿಟಿಗರಾದರೆಂದು ಇದೇ ಪುರಾಣದಲ್ಲಿ ವಿವರಿಸಲಾಗಿದೆ.

ಕುರುಬರು ಸೀರ್ಯಾ ಸೀಮೆಯಲ್ಲಿ ಮಾತ್ರವಲ್ಲದೆ, ಪಾವಗಡ, ಮಧುಗಿರಿ, ಚಳ್ಳಕೆರೆ, ಹಿರಿ ಯೂರು, ಹೊಸದುರ್ಗ, ಮೈಸೂರು, ಬೆಂಗಳೂರು ಗ್ರಾಮಾಂತರ ಇಲ್ಲೆಲ್ಲಾ ವ್ಯಾಪಕವಾಗಿದ್ದಾರೆ. ಈ ಪ್ರದೇಶಗಳಲ್ಲಿ ಕುಂಚಿಟಿಗರ ಪ್ರಾಬಲ್ಯವೂ ಇದೆ. ಈ ಎರಡೂ ಜನಾಂಗದ ಆಚಾರ, ವಿಚಾರ, ದೈವಸಂಬಂಧಿ ನಂಬಿಕೆಗಳಲ್ಲಿ ಏಕತಾನವಾಗಿರುವುದನ್ನು ಕಾಣಬಹುದಾಗಿದೆ. ಮದುವೆ, ದೇವರ ಉತ್ಸವ, ಶವಸಂಸ್ಕಾರ ಈ ಮುಂತಾದ ಆಚರಣೆಯಲ್ಲಿ ಎರಡೂ ಜನಾಂಗದ ಆಚರಣೆಗಳು ಒಂದೇ ಬಗೆಯಲ್ಲಿರುವುದನ್ನು ಇಂದಿಗೂ ಕಾಣಬಹುದಾಗಿದೆ.

ಕುಂಚಿಟಿಗ, ಕುರುಬ ಈ ಎರಡೂ ಜಾತಿಗಳಲ್ಲೂ ಕಂಬಳಿಗೆ ವಿಶೇಷ ಗೌರವ ಕೊಡುತ್ತಾರೆ. ಮದುವೆಯ ಸಂದರ್ಭಗಳಲ್ಲೂ ಗಂಡು ಕಂಬಳಿಯನ್ನು ಹೆಗಲ ಮೇಲೆ ಹಾಕಿಕೊಂಡು

ಧಾರೆ ಮಂಟಪಕ್ಕೆ ಬರುವುದು ವಾಡಿಕೆಯಾಗಿದೆ. ಮದುವೆಯೂ ಸೇರಿದಂತೆ ಕುರುಬ, ಕುಂಚಿಟಿಗರ ಪ್ರಮುಖ ಧಾರ್ಮಿಕ ಸಂದರ್ಭಗಳಲ್ಲಿ ಎತ್ತುವ ವೀಳ್ಯದ ಕಾರ್ಯದಲ್ಲಿ ಜಲಧಿ ಬೊಪ್ಪರಾಯನ ವೀಳ್ಯ, ಉಂಡೆ ಎತ್ತರಾಯನ ವೀಳ್ಯ, ಗುಡಿಕಾರನ ಒಂದು ವೀಳ್ಯ, ಕುರುಬರ ಬಾಳಯ್ಯನಿಗೆ ಒಂದು ವೀಳ್ಯ (ಜಾಡಯ್ಯ ಎಂದೂ ಕರೆಯಲಾಗುವುದು) ಗೌಡ, ಶ್ಯಾನುಭೋಗ ಹೀಗೆ ಜನಾಂಗಿಕವಾಗಿಯೂ ಗೌರವ ಕೊಡುವ ಈ ಮೂಲಕ ಗ್ರಾಮ ಸಂಸ್ಕೃತಿಯನ್ನು ಗೌರವಿಸುವ ಜೌತಿ, ಕುಲದಾಚೆಯ ಸಮನ್ವಯ ಸಂಸ್ಕೃತಿಯನ್ನು ಈ ಎರಡೂ ಜನಾಂಗಗಳಲ್ಲಿ ಇಂದಿಗೂ ಕಾಣಬಹುದು. ಕುಲಸಂಬಂಧಿ ಬೆಡಗುಗಳು ಈ ಎರಡೂ ಜಾತಿಗಳಲ್ಲಿ ವೈವಿಧ್ಯತೆ ಇದೆ. ಒಂದೇ ಬೆಡಗಿನವರು ಅಣ್ಣತಮ್ಮಂದಿರಾಗಿ ಪರಸ್ಪರ ವೈವಾಹಿಕ ಸಂಬಂಧವನ್ನು ನಿಷೇಧಿಸಲಾಗಿದೆ. ಈ ಬಗೆಯ ಬೆಡಗುಗಳು ಕುಂಚಿಟಿಗರಲ್ಲಿ ಐವತ್ತಕ್ಕೂ ಹೆಚ್ಚು ಕಂಡುಬಂದರೆ, ಕುರುಬರಲ್ಲಿ 250 ಕ್ಕೂ ಹೆಚ್ಚು ಬೆಡಗುಗಳು ಚಾಲ್ತಿಯಲ್ಲಿವೆ. ಇನ್ನೂ ಇವೆ ಎಂದು ಹೇಳಲಾಗುತ್ತಿದೆ. ಕರ್ನಾಟಕದಾದ್ಯಂತ ವಿಸ್ತಾರವಾಗಿ ಚೆಲ್ಲಿಕೊಂಡಿರುವ ಕುರುಬರ ಜನಾಂಗದಲ್ಲಿ ಪ್ರಾದೇಶಿಕ ವೈರುಧ್ಯತೆಗೆ ಅನುಸಾರವಾಗಿ ಬೆಡಗುಗಳ ಪ್ರಮಾಣ ಅಧಿಕವೂ ಆಗಿರಬಹುದು.

ಕುರುಬರು, ಕುಂಚಿಟಿಗರ ಜನಾಂಗಿಕ ಸಾಮ್ಯತೆಯ ಹಿನ್ನೆಲೆಯಲ್ಲಿ ಬೆಡಗುಗಳೂ ಪಾತ್ರ ವಹಿಸಿವೆ. ಅಂಡೆ ಕುರುಬರು, ಕಂಬಳಿ ಕುರುಬರು, ಸಾವಂತೆ ಕುರುಬರು, ಹತ್ತಿ ಕುರುಬರು, ಅರಸನ ಕುರುಬರು ಎಂದು ಕುರುಬರಲ್ಲಿ ಕಂಡುಬಂದರೆ ಇದೇ ಬೆಡಗು ಕುಂಚಿಟಿಗರಲ್ಲಿಯೂ ಬರುತ್ತವೆ. ಅಂಡೇನವರು, ಅರಳೆನವರು, ಕಂಬಳಿಯವರು, ಅಸರನವರು, ಸಾವಂತದವರು ಈ ಬಗೆಯ ಸಮಾನ ಬೆಡಗುಗಳನ್ನು ಕಾಣಬಹುದು. ಇಷ್ಟೊಂದು ಸಾದೃಶ್ಯಗಳು, ಸಮಾನತೆಗಳನ್ನು ಕಂಡಾಗ ಮೂಲತಃ ಕುಂಚಿಟಿಗರು ಕುರುಬರ ಮೂಲದವರೇ ಆಗಿರಬಹುದು. ಈ ಸಂಬಂಧಿ ಜನಾಂಗಿಕ ಗಾದೆ ಒಂದು ತುಮಕೂರು ಜಿಲ್ಲೆಯಲ್ಲಿ ರೂಢಿಯಲ್ಲಿರುವ 'ಕುರುಬ ಕೆಟ್ಟು ಕುಂಚಿಟಿಗನಾದ' ಈ ಬಗೆಗೆ ಸಂಶೋಧನೆಯೂ ನಡೆಯಬೇಕಿದೆ.

**ಮೂಗನಹಳ್ಳಿ ಅಮ್ಮಾಜಿ ಕಾವಲೇಶ್ವರಿ:**

ಮೂಗನಹಳ್ಳಿ ಸಿರಾ ನಗರ ಕೇಂದ್ರದಿಂದ ಮಧುಗಿರಿ ರಸ್ತೆಯಲ್ಲಿ ಹಾದು 8 ಕಿ.ಮೀ. ಕ್ರಮಿಸಿದರೆ ಸಿಕ್ಕುತ್ತದೆ. ಗುಳಿಗೇನಹಳ್ಳಿಯಿಂದ ದಕ್ಷಿಣಕ್ಕೆ ಒಂದು ಕಿ.ಮೀ. ದೂರದ ಪುಟ್ಟ ಹಳ್ಳಿ. ಈ ಗ್ರಾಮದ ಅಧಿದೇವತೆ ಕಾವಲೇಶ್ವರಿ. ಅಮ್ಮಾಜಿ, ಕಾವಲೇಶ್ವರಿ, ಅಮ್ಮಾಜಮ್ಮ ಎಂದೆಲ್ಲಾ ಪರಿಭಾವಿಸುವ ಈ ಶಕ್ತಿದೇವತೆ, ಕುಂಚಿಟಿಗರಲ್ಲಿ ಅಲುಪೇನವರ ಮನೆದೇವತೆ. ಸಪ್ತ ಕನ್ನಿಕೆಯರಲ್ಲಿ ಒಬ್ಬಳಾದ ಅಮ್ಮಾಜಮ್ಮ ಈ ಗ್ರಾಮಕ್ಕೆ ಬಂದು ನೆಲೆಸಿದುದರ ಬಗೆಗೆ

ಸ್ಥಳೀಯ ಐತಿಹ್ಯವೊಂದು ಹೀಗಿದೆ. ಸಪ್ತ ಕನ್ನಿಕೆಯರಲ್ಲಿ ಕೊನೆಯವಳಾದ ಈ ದೇವತೆ ಮಾಗೋಡಿಗೆ ಮೊದಲು ಬಂದು ನೆಲೆಸಿದಳು. ನಂತರ ಮೂಗಣ್ಣನೆಂಬುವವನ ಪ್ರಾರ್ಥನೆ, ಭಕ್ತಿಯ ಅನನ್ಯತೆಯಿಂದಾಗಿ ಈಕೆ ಮೂಗನಹಳ್ಳಿಯ ಕಾವಲಿನ ಹುತ್ತವೊಂದರಲ್ಲಿ ನೆಲೆಸಿದಳು. ಆರಂಭದಲ್ಲಿ ಮೂಗನಿಗೆ ಮಾತು ಬರಿಸಿದ ಈ ದೇವತೆ, ಕೊರವಂಜಿಯ ವೇಷದಲ್ಲಿ ದರ್ಶನ ನೀಡುತ್ತಿದ್ದಳು. ನಂತರ ಹುತ್ತದಲ್ಲಿ ಐಕ್ಯವಾಗಿ ಅಮ್ಮಾಜಿ ಕಾವಲೇಶ್ವರಿ ಎಂಬ ಕೀರ್ತಿ, ಗೌರವಗಳೊಂದಿಗೆ ಪ್ರಖ್ಯಾತಳಾದಳು.

ಮೂಗನಹಳ್ಳಿಯಲ್ಲಿ ಕ್ಯಾತೆದೇವರು, ಬೀರೇದೇವರು, ಗುರು ರೇವಣಸಿದ್ದೇಶ್ವರನ ಮಠ ಈ ಎಲ್ಲವೂ ಇದ್ದು, ವರ್ಷಕ್ಕೊಮ್ಮೆ ಚೈತ್ರಮಾಸದಲ್ಲಿ ಆರು ದಿನಗಳ ಕಾಲ ಬೃಹತ್ ಜಾತ್ರೆ ನಡೆಯುತ್ತದೆ. ಜಲಧಿ ಉತ್ಸವ, ರಥೋತ್ಸವವೂ ನಡೆಯುತ್ತದೆ. ರಾತ್ರಿ ಆರು ದಿನಗಳ ಕಾಲ ಸ್ಥಳೀಯ ಜನಪದ ಕಲಾವಿದರಿಂದ ಜನಪದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಾಡಾಗುತ್ತವೆ. ತಿಮ್ಮಪ್ಪ, ಬಸವಣ್ಣ, ಪಿಳ್ಳಬೋರಮ್ಮ ಈ ಗ್ರಾಮದ ಇತರೆ ದೇವರುಗಳು. ವರ್ಷಕ್ಕೊಮ್ಮೆ ನಡೆಯುವ ಜಾತ್ರೆಯ ಕಾಲದಲ್ಲಿ ಈ ಎಲ್ಲ ದೇವರುಗಳ ಉತ್ಸವವನ್ನು ಏಕಕಾಲದಲ್ಲಿ ಸಮಾನವಾಗಿ ಆಚರಿಸುವುದು, ಈ ಮೂಲಕ ಗ್ರಾಮೈಕ್ಯತೆಯನ್ನು ಸದಾ ಕಾಯ್ದುಕೊಂಡು ಬರುತ್ತಿದ್ದಾರೆ. ಕ್ಯಾತೇದೇವರು ಕಾಡುಗೊಲ್ಲರ ಕುಲದೈವ. ಇದೂ ಸಹ ಮೂಗನಹಳ್ಳಿಯಲ್ಲಿದ್ದು ಇದರ ಪೂಜಾರಿಕೆ, ನಿರ್ವಹಣೆ ಕುಂಚಿಟಿಗರದು. ಇದು ಈ ಗ್ರಾಮದ ಮತ್ತೊಂದು ವಿಶೇಷ. ಇಲ್ಲಿ ಮೇಕೆ ಬಲಿ ನಿಷೇಧ. ಇದನ್ನು ಅಲುಪೇನರು ತಮ್ಮ ಅಜ್ಜಿ ಎಂದು ಭಕ್ತಿ, ಗೌರವದಿಂದ ನಡೆದುಕೊಳ್ಳುತ್ತಾ ಬಂದಿದ್ದಾರೆ.

ವರ್ಷದಲ್ಲಿ ಎರಡು ಬಾರಿ ಮಾತ್ರ ಯುಗಾದಿ ಹಾಗೂ ವಿಜಯದಶಮಿಗಳಂದು ಅಮ್ಮಾಜಿ ಹುತ್ತ ಪೂಜೆ ನಡೆಯುತ್ತದೆ. ಪೂಜಾರಿ ಅಂದು ವಿಶೇಷ ವ್ರತದ ಮೂಲಕ, ಬಾಯಿ, ಕಣ್ಣುಗಳಿಗೆ ಬಟ್ಟೆ ಕಟ್ಟಿಕೊಂಡು ಪೂಜೆಯ ಕೆಲಸ ನಿರ್ವಹಿಸುವುದು ಇಲ್ಲಿನ ವಾಡಿಕೆಯಾಗಿದೆ. ಈ ಸಂದರ್ಭದಲ್ಲಿ ಪಟ್ಟದ ಪೂಜಾರಿ ಮಾತ್ರ ಪೂಜೆಯ ಕಾರ್ಯ ನಿರ್ವಹಿಸುತ್ತಾರೆ. ಶ್ರೀ ನಿತ್ಯಾನಂದ ಸ್ವಾಮಿಗಳು ಪ್ರಸ್ತುತ ಪಟ್ಟದಗುರುಗಳಾಗಿದ್ದು ಧಾರ್ಮಿಕ ಮುಂದಾಳತ್ವ ವಹಿಸುತ್ತಾರೆ. ಇವರನ್ನು ಗುರುಗಳೆಂದೇ ಕರೆಯಲಾಗುವುದು. ಯಜಮಾನ, ಪಟೇಲ ಇವರು ದೇವಾಲಯದ ವ್ಯವಸ್ಥೆ, ಅನ್ನ ದಾಸೋಹ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಅಪಾರ ಒಕ್ಕಲುಗಳನ್ನು ಈ ದೇವಾಲಯ ಹೊಂದಿದೆ.

**ಮೇಲುಕುಂಟೆ ಗೋಪಾಲಕೃಷ್ಣ ದೇವಾಲಯ:**

ಸಿರಾ ತಾಲ್ಲೂಕಿನ ಮೇಲುಕುಂಟೆ ಬುಡಕಟ್ಟು ಗ್ರಾಮ. ಇಲ್ಲಿ ಲೋಕಪ್ರಸಿದ್ಧ ಗೋಪಾಲಕೃಷ್ಣ ದೇವಾಲಯವಿದೆ. ಸಿರಾ ನಗರ ಕೇಂದ್ರದಿಂದ 11 ಕಿ.ಮೀ. ದೂರದಲ್ಲಿ

ಸಿರಾ-ಅಮರಾಪುರ ರಸ್ತೆಯ ತೊಗರಿಗುಂಟೆ ಕ್ರಾಸ್‌ನಿಂದ 3 ಕಿ.ಮೀ. ಪೂರ್ವಕ್ಕೆ ಗೋಪಾಲಕೃಷ್ಣ ಕ್ಷೇತ್ರ ಸಿಕ್ಕುತ್ತದೆ. ರಾಮಾನುಜಾಚಾರ್ಯರ ಶಿಷ್ಯರಾದ ವಾಮನಾಚಾರ್ಯರೇ ಪ್ರತಿಷ್ಠಾಪಿಸಿರುವ ಗೋಪಾಲಕೃಷ್ಣ ಮೂರ್ತಿ ಆಕರ್ಷಕವಾಗಿದೆ. ಈ ದೇವಾಲಯದ ಉತ್ತರ ಗೋಡೆಯ ಮೇಲೆ ಕ್ರಿ.ಶ. 1533 ರಲ್ಲಿನ ಶಾಸನವೊಂದನ್ನು ಹಾಕಲಾಗಿದೆ. ಇದರಲ್ಲಿ ವೀರಬಲ್ಲಾಳನ ಉಲ್ಲೇಖನವಿದೆ. ಮುಂದುವರಿದು ಹರತಿ ಇಮ್ಮಡಿ ರಂಗಪ್ಪನಾಯಕರ ಪ್ರಸ್ತಾಪವೂ ಇದೆ. ಕಾಳಮುದಿಗೌಡ ಹಾಗೂ ಆನೆಗೊಂಡೆ ಕರಿಗಣಿಗಪ್ಪ ಇವರ ನಡುವಣ ಕಲಹ ಮುಂದೆ ಈ ದೇವಾಲಯದ ನಿರ್ವಹಣೆ ಕರಿಗಣಿಗಪ್ಪನವರಿಗೆ ಸೇರತಕ್ಕದ್ದೆಂದು, ಇದಕ್ಕೆ ಹರತಿ ಇಮ್ಮಡಿ ರಂಗನಾಯಕನ ಒಪ್ಪಿಗೆ ಇದೆ ಎಂದು ತಿಳಿಸಲಾಗಿದೆ. ಇದೊಂದು ಸಿರಾ ಪಾಳೆಯಗಾರರ ಇತಿಹಾಸವನ್ನು ಅಭ್ಯಸಿಸುವವರಿಗೆ ಮಹತ್ವದ ಆಕರವಾಗಿದೆ.

ಸುಮಾರು ನಾಲ್ಕು ಎಕರೆ ಪ್ರದೇಶದಲ್ಲಿ ವಿಸ್ತಾರವಾಗಿ ರೂಪುಗೊಂಡಿರುವ ಈ ದೇವಾಲಯ ಸಿರಾ ಸೀಮೆಯ ಪ್ರಾಚೀನ ದೇವಸ್ಥಾನ. ನವಗ್ರಹ, ಗಣಪತಿ, ನರಸಿಂಹ ದೇವರುಗಳ ಮೂರ್ತಿಗಳಿವೆ. ವರ್ಷಕ್ಕೊಮ್ಮೆ ಬೃಹತ್ ಜಾತ್ರೆಯೂ ನಡೆಯುತ್ತದೆ. ಸಭಾಂಗಣ, ಕಲ್ಯಾಣಮಂಟಪ, ಉತ್ತಮ ನೀರಾವರಿ ಸೌಕರ್ಯಗಳಿಂದ ಸುಸಜ್ಜಿತವಾಗಿರುವ ಈ ದೇವಸ್ಥಾನಕ್ಕೆ ಆಂಧ್ರಪ್ರದೇಶ, ತಮಿಳು ನಾಡುಗಳಿಂದ ಭಕ್ತರು ಅಪಾರ ಪ್ರಮಾಣದಲ್ಲಿ ಸೇರುತ್ತಾರೆ. ಸಾರ್ವತ್ರಿಕ ಧಾರ್ಮಿಕ ಸಮಾರಂಭಗಳು, ವಿವಾಹ ಕಾರ್ಯಗಳು ವರ್ಷಪೂರ್ತಿ ನಡೆಯುತ್ತಿರುತ್ತವೆ. ಬ್ರಾಹ್ಮಣ ಐಯ್ಯಂಗಾರ್ ಅವರ ಒಡೆತನ, ಟ್ರಸ್ಟ್ ಮೂಲಕ ದೇವಾಲಯ ಪ್ರಬುದ್ಧ ಸ್ಥಿತಿಯಲ್ಲಿದೆ.

**ಸಿರಾ ತಾಲ್ಲೂಕಿನ ಇತರೆ ಧಾರ್ಮಿಕ ಕೇಂದ್ರಗಳು:**

ಚಂಗಾವರ ಶ್ರೀ ಮಲ್ಲೇಶ್ವರಸ್ವಾಮಿ, ತರೂರು ಶ್ರೀ ವೀರಭದ್ರಸ್ವಾಮಿ, ನಾರಾಯಣಪುರ ಶ್ರೀ ರಂಗನಾಥಸ್ವಾಮಿ, ಸೋರೆಕುಂಟೆ ಶ್ರೀ ಕರಿಯಮ್ಮ ದೇವರು, ಸೀಬಿ ಶ್ರೀ ಈಶ್ವರದೇವರು, ಸೀಬಿ ಅಗ್ರಹಾರ ಶ್ರೀ ಸೀಬಿ ಅಗ್ರಹಾರದಮ್ಮ, ಬಡಮಾರನಹಳ್ಳಿ ಶ್ರೀ ರಾಮೇಶ್ವರಸ್ವಾಮಿ, ಗೌಡಗೆರೆ ಶ್ರೀ ಹನುಮಂತದೇವರು, ಮುದಿಗೆರೆ ಶ್ರೀ ರಂಗನಾಥಸ್ವಾಮಿ, ಹಾರೋಗೆರೆ ಶ್ರೀ ರಂಗನಾಥಸ್ವಾಮಿ, ದೊಡ್ಡ ಅಗ್ರಹಾರ ಶ್ರೀ ಸೋಮೇಶ್ವರಸ್ವಾಮಿ, ಸಿರಾ ಶ್ರೀ ಷಹರ್‌ಗಂಜ್ ಆಂಜನೇಯಸ್ವಾಮಿ, ಸಿರಾ ಶ್ರೀ ನಾರಾಯಣಸ್ವಾಮಿ, ತಾಳಗುಂದ ಶ್ರೀ ರಾಮೇಶ್ವರಸ್ವಾಮಿ, ಚಿಕ್ಕನಹಳ್ಳಿ ಶ್ರೀ ಈಶ್ವರದೇವರು, ಚಿಕ್ಕನಹಳ್ಳಿ ಶ್ರೀ ಆಂಜನೇಯಸ್ವಾಮಿ, ಹುಂಜನಾಳು ಶ್ರೀ ಶಿವಗಂಗಾ ಮಠ, ಕಳ್ಳಂಬೆಳ್ಳ ಶ್ರೀ ವಿರೂಪಾಕ್ಷಸ್ವಾಮಿ, ದೊಡ್ಡಬಾಣಗೆರೆ ಶ್ರೀ ರಂಗನಾಥಸ್ವಾಮಿ, ಸೀಬಿ ಅಗ್ರಹಾರ ಶ್ರೀ ಬಸವಣ್ಣದೇವರು, ಚಂಗಾವರ ಶ್ರೀ

ಆಂಜನೇಯಸ್ವಾಮಿ, ತಾಳಗುಂದ ಶ್ರೀ ಹನುಮಂತದೇವರು, ಯಾದಲಡಕು ಶ್ರೀ ರಂಗನಾಥಸ್ವಾಮಿ, ಬರಗೂರು ಶ್ರೀ ಈಶ್ವರದೇವರು, ಚಿಕ್ಕಹುಲಿಕುಂಟೆ ಶ್ರೀ ರಂಗನಾಥಸ್ವಾಮಿ, ಹಾಲ್‌ದೊಡ್ಡೇರಿ ಶ್ರೀ ತಿರುಮಲಸ್ವಾಮಿ, ಬಾಲೇನಹಳ್ಳಿ ಶ್ರೀ ಆಂಜನೇಯಸ್ವಾಮಿ, ಸಿರಾ ಶ್ರೀ ಚಾವಡಿ ಆಂಜನೇಯಸ್ವಾಮಿ, ಬೆಂಚೆ ಶ್ರೀ ರಾಮೇಶ್ವರಸ್ವಾಮಿ, ಬ್ರಹ್ಮಸಂದ್ರ ಶ್ರೀ ಹನುಮಂತದೇವರು, ರತ್ನಸಂದ್ರ ಶ್ರೀ ರಂಗನಾಥಸ್ವಾಮಿ, ಗೋಪಿಕುಂಟೆ ಶ್ರೀ ಹನುಮಂತದೇವರು, ಹುಲಿಕುಂಟೆ ಶ್ರೀ ಈಶ್ವರದೇವರು, ಮೇಲ್ಕುಂಟೆ ಶ್ರೀ ಗೋಪಾಲಕೃಷ್ಣಸ್ವಾಮಿ, ಹಂದಿಕುಂಟೆ ಶ್ರೀ ಆಂಜನೇಯಸ್ವಾಮಿ, ತರೂರು ಶ್ರೀ ರಂಗನಾಥಸ್ವಾಮಿ ಶ್ರೀ ಆಂಜನೇಯಸ್ವಾಮಿ, ಕುಂಟೇಗೌಡನಹಳ್ಳಿ ಶ್ರೀ ಆಂಜನೇಯಸ್ವಾಮಿ, ಹೊಸೂರು ಶ್ರೀ ನರಸಿಂಹಸ್ವಾಮಿ, ದೇವರಹಳ್ಳಿ (ಮಾರ್ಗಾನಹಳ್ಳಿ ಶ್ರೀ ಹನುಮಂತದೇವರು, ತರೂರು ಶ್ರೀ ಮಲ್ಲೇಶ್ವರಸ್ವಾಮಿ, ದೊಡ್ಡಗೂಳ ಶ್ರೀ ಬನಶಂಕರಮ್ಮ, ಬರಗೂರು ಶ್ರೀ ಮಲ್ಲೇಶ್ವರಸ್ವಾಮಿ, ತಾವರೆಕೆರೆ ಶ್ರೀ ಆಂಜನೇಯಸ್ವಾಮಿ, ಕಳ್ಳಂಬೆಳ್ಳ ಶ್ರೀ ಕೊಡ್ಲಿ ಶೃಂಗೇರಿಸ್ವಾಮಿ, ಬೂವನಹಳ್ಳಿ ಶ್ರೀ ರಂಗನಾಥಸ್ವಾಮಿ, ಸಿರಾ ಶ್ರೀ ವ್ಯಾಸರಾಯರ ಮಠ, ಚಿಕ್ಕಬಾಣಗೆರೆ ಶ್ರೀ ಆಂಜನೇಯಸ್ವಾಮಿ, ದಾಸರಹಳ್ಳಿ ಶ್ರೀ ಹನುಮಂತದೇವರು, ಹಲ್ಕೂರು ಶ್ರೀ ರಾಮೇಶ್ವರಸ್ವಾಮಿ, ಬರಗೂರು ಶ್ರೀ ಆಂಜನೇಯಸ್ವಾಮಿ, ಮುದಿಮಡು ಶ್ರೀ ಕಂಬದ ನರಸಿಂಹಸ್ವಾಮಿ, ಕಾಳೇನಹಳ್ಳಿ ಶ್ರೀ ಹನುಮಂತದೇವರು, ಹೊನ್ನಗೊಂಡನಹಳ್ಳಿ ಶ್ರೀ ಆಂಜನೇಯಸ್ವಾಮಿ, ಸೀಬಿ ಅಗ್ರಹಾರ ಶ್ರೀ ಆಂಜನೇಯಸ್ವಾಮಿ, ಹಾಲೇನಹಳ್ಳಿ ಶ್ರೀ ಆಂಜನೇಯಸ್ವಾಮಿ, ಚಿಕ್ಕಅಗ್ರಹಾರ ಶ್ರೀ ಹನುಮಂತದೇವರು, ರಾಮಲಿಂಗಾಪುರ ಶ್ರೀ ಹನುಮಂತದೇವರು, ಕರೇಕ್ಯಾತನಹಳ್ಳಿ ಶ್ರೀ ಆಂಜನೇಯಸ್ವಾಮಿ, ದೊಡ್ಡಗೂಳ ಶ್ರೀ ಹನುಮಂತದೇವರು, ಬುಕ್ಕಾಪಟ್ಟಣ ಶ್ರೀ ರಂಗನಾಥಸ್ವಾಮಿ, ಸಿರಾ ಶ್ರೀ ಪಾಲೇಶ್ವರಸ್ವಾಮಿ, ದೊಡ್ಡಅಗ್ರಹಾರ ಶ್ರೀ ಆಂಜನೇಯಸ್ವಾಮಿ, ದೊಡ್ಡಗೂಳ ಶ್ರೀ ವೀರಭದ್ರಸ್ವಾಮಿ, ರಾಮಲಿಂಗಾಪುರ ಶ್ರೀ ಭೂತಪ್ಪದೇವರು, ಹಂದಿಕುಂಟೆ ಶ್ರೀ ಕರಿಯಮ್ಮದೇವರು, ಹೆಂದೊರೆ ಶ್ರೀ ಆಂಜನೇಯಸ್ವಾಮಿ, ಕಾಮಗೊಂಡನಹಳ್ಳಿ ಶ್ರೀ ಆಂಜನೇಯಸ್ವಾಮಿ, ದೊಡ್ಡಹುಲಿಕುಂಟೆ ಶ್ರೀ ಆಂಜನೇಯಸ್ವಾಮಿ, ಸಿರಾ ಶ್ರೀ ಭಾಸ್ಕರ ಪೈಲಾರಛತ್ರ, ತಾವರೇಕೆರೆ ಶ್ರೀ ಬಂಡಿರಂಗನಾಥಸ್ವಾಮಿ, ಬೋರಸಂದ್ರ ಶ್ರೀ ಉತ್ತರಾಧಿಮಠ.



# ಅಧ್ಯಾಯ – ಏಳು
# ಜನಪದ ಕಲೆ

## ಅ) ಕುರಿ ಕರೆಯುವುದು

ದೇವರ ಮೆರವಣಿಗೆ, ಜಾತ್ರೆ ಮುಂತಾದ ವಿಶೇಷ ಸಂದರ್ಭದಲ್ಲಿ ನಡೆಸುವ ಜಾನಪದ ಕಲೆಗಳಲ್ಲಿ ಕುರಿ ಕರೆಯುವ ಒಂದು ವಿಶೇಷ ಕಲಾ ಪ್ರಕಾರ. ತುಮಕೂರು ಜಿಲ್ಲೆಯಾದ್ಯಂತ ಬಳಕೆಯಲ್ಲಿದೆ. ವಿಶೇಷವಾಗಿ ಬುಡಕಟ್ಟು ಸಂಸ್ಕೃತಿಯ ಜನಾಂಗವಾದ ಗೊಲ್ಲರು, ಕುರುಬರು, ಕುಂಚಿಟಿಗರು, ಬೇಡರು ಮೊದಲಾದ ಜನಾಂಗದವರು ಪಶುಪಾಲನೆಯ ಜೊತೆಗೆ ಕುರಿ ಪೋಷಣೆಯನ್ನು ಪ್ರಧಾನ ಕಸುಬಾಗಿ ಮಾಡಿಕೊಂಡು ಬಂದಿರುತ್ತಾರೆ. ಅವರು ತಮ್ಮ ಪ್ರೀತಿಪಾತ್ರವಾದ ಪ್ರಾಣಿಗಳನ್ನು ಕಲಾತ್ಮಕವಾಗಿ ಅಲಂಕರಿಸುವ, ಕುಣಿಸುವ, ಕುಸ್ತಿಗೆ ಬಿಡುವ ಹಾಗೂ ಕುರಿಯನ್ನು ಮೆರೆಸುವ ಕಲೆಯನ್ನು ರೂಢಿಸಿಕೊಂಡು ಬಂದಿದ್ದಾರೆ. ದೇವರ ಮೆರವಣಿಗೆ ಊರಿಗೆ ಬಂದು, ಊರೊಳಗೆ ಪ್ರವೇಶಿಸುವಾಗ ಅಥವಾ ಊರಾಡಿ ಹೊರಡುವಾಗ ಕುರಿಯ ಪೋಷಕರು ತಮ್ಮ ಕುರಿಗಳನ್ನು ಹೊಡೆದುಕೊಂಡು ಬರುತ್ತಾರೆ. ಹೀಗೆ ಕುರಿ ಕರೆಯುವಾಗ ಮೂರ್‍ನಾಲ್ಕು ಗುಂಪಿನ ಕುರಿಗಳನ್ನು ಒಟ್ಟುಗೂಡಿಸಿ ಕರೆಯುವುದು ರೂಢಿ. ಕೆಲವು ಬಾರಿ ಒಬ್ಬರೇ ಕುರಿ ಕರೆಯುತ್ತಾರೆ. ಕುರಿ ಕರೆಯುವುದು ಎಂದರೆ ದೇವರ ಮುಂದೆ ಕುರಿಯ ಒಡೆಯ ಗಂಡು ಕುರಿ (ಇದನ್ನು ಟಗರು ಪಟ್ಟಿ ಎಂದು ಕರೆಯುತ್ತಾರೆ) ಅದನ್ನು ಕೈಮೇವು ನೀಡಿ ಬೆಳೆಸುವುದರಿಂದ ತನ್ನ ಒಡೆಯನ ಜೊತೆಯಲ್ಲಿಯೇ ಇರುವುದು ಸಾಮಾನ್ಯ. ಅಂಥ ಟಗರಿನ ಜೊತೆಗೆ ಎಲ್ಲಾ ಕುರಿಗಳನ್ನು ಹೊಡೆದು ತರುತ್ತಾರೆ. ಮಧ್ಯೆ ದೇವರು, ಅದರ ಸುತ್ತ ಜನಗಳು ಹರೆ ವಾದ್ಯಗಳ ಭೋರ್ಗರೆತ. ಮೊದಲು ಕುರಿಯ ಒಡೆಯ ಟಗರಿನೊಂದಿಗೆ ದೇವರ ಅಥವಾ ಗುಡಿಯ ಒಂದು ಸುತ್ತು ಬರುತ್ತಾನೆ. ಅದರ ಹಿಂದೆ ಎಲ್ಲ ಕುರಿಗಳು ಸುತ್ತಲೂ ಸಾಗುತ್ತವೆ. ಗುಬ್ಬಿ ತಾಲ್ಲೂಕಿನ ಚೇಳೂರು ಹೋಬಳಿಯ ಯಣ್ಣೆಕಟ್ಟೆ, ನಿಂಬೆಕಟ್ಟೆ, ಸಿರಾ ತಾಲ್ಲೂ



ಕಿನ ಬೇವಿನಹಳ್ಳಿ, ದ್ವಾರನಕುಂಟೆ ಮೊದಲಾದ ಕಡೆಗಳಲ್ಲಿ ಇಂದಿಗೂ ಕುರಿ ಕರೆಯುವ ಪದ್ಧತಿ ಜಾತ್ರೆ, ದೇವರ ಉತ್ಸವಗಳ ಸಂದರ್ಭದಲ್ಲಿ ಕಂಡುಬರುತ್ತದೆ.

ಸಿರಾ ತಾಲ್ಲೂಕಿನ ಹೊನ್ನಗೊಂಡನಹಳ್ಳಿ ಗೊಲ್ಲರಹಟ್ಟಿಯವರು ಕುರಿ ಕರೆಯುವ ಪದ್ಧತಿಯನ್ನು ವಿಶೇಷವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಪ್ರತಿ ವರ್ಷ ಮಾರ್ಚ್ ತಿಂಗಳಿನಲ್ಲಿ ಈ ಹಟ್ಟಿಯ ಶ್ರೀ ಕದಿರೆ ನರಸಿಂಹಸ್ವಾಮಿ ಜಾತ್ರೆ ನಡೆಯುತ್ತದೆ. ಸರಿ ಸುಮಾರು ರಾತ್ರಿ 12 ಗಂಟೆಗೆ ಕದಿರೆ ನರಸಿಂಹಸ್ವಾಮಿ ರಥೋತ್ಸವ ನಡೆಯುತ್ತದೆ. ಪ್ರಧಾನವಾಗಿ ಗೊಲ್ಲ ಜನಾಂಗದವರೇ ಕೂಡಿ ನಿಯಮಬದ್ಧವಾಗಿ ಆಚರಿಸಿಕೊಂಡು ಬರುತ್ತಿರುವ ಇಲ್ಲಿನ ದೇವಸ್ಥಾನದಲ್ಲಿ ಕುರಿ ಕರೆಯುವ ವಿಶೇಷ ಆಚರಣೆ ಸಂಪ್ರದಾಯಬದ್ಧವಾಗಿ ಸುತ್ತಮುತ್ತಿನ ಹಳ್ಳಿಯ ಕುರಿಗಳೆಲ್ಲವನ್ನು ಹೊಡೆದುತಂದು ಕುರಿ ಕರೆಯುವ ಸಂಪ್ರದಾಯ ಕಾರ್ಯಕ್ರಮ ಆಕರ್ಷಕವಾಗಿ ನಡೆಯುತ್ತದೆ. ತನ್ನ ಒಡೆಯನನ್ನು ಹಿಂಬಾಲಿಸಿ ತೇರಿನ ಸುತ್ತ ವೇಗವಾಗಿ ಓಡುತ್ತವೆ. ಒಂದು ಸುತ್ತು ಬಂದ ಮೇಲೆ ಒಡೆಯ ಒಂದು ಕಡೆ ನಿಲ್ಲುತ್ತಾನೆ. ಆದರೆ ಕುರಿಗಳು 10 ರಿಂದ 15 ನಿಮಿಷಗಳ ಕಾಲ ಒಂದೇ ಸಮನೆ ವೇಗವಾಗಿ ಸುತ್ತುತ್ತವೆ. ಜನಗಳ ಸಿಳ್ಳು, ಕೇಕೆ, ಕೂಗಾಟ ಮುಗಿಲು ಮುಟ್ಟುತ್ತದೆ. ಇದೊಂದು ರೋಚಕ ಕಲೆಯಾಗಿ ಕಂಡುಬರುತ್ತದೆ. ಈ ಸಂದರ್ಭದಲ್ಲಿ ಹೇಳು ಪದ ಹಾಡುವುದೂ ಉಂಟು. ನಂತರ ಶ್ರೀ ಲಕ್ಕಣ್ಣ ಹೊಟ್ಟೆಪ್ಪ, ಹಂಡೆ ಚಿಕ್ಕಣ್ಣ ಇವರಿಂದ ವಿಶೇಷ ಕೋಲು ಮೇಳ ಮತ್ತು ಕರಡಪ್ಪ, ಕೆಂಪಣ್ಣ, ಚಿಕ್ಕರಾಮಣ್ಣ ಇವರಿಂದ ಪಂಢರಿ ಭಜನೆ ಹಾಗೂ ಈರಮ್ಮ, ಮಾರಕ್ಕ, ಕಾಡಮ್ಮ ಇವರಿಂದ ವಿಶೇಷ ಸೋಬಾನೆ ಪದಗಳ ಮೇಳ ನಡೆದು ರಾತ್ರಿಯೆಲ್ಲಾ ಸಾಂಸ್ಕೃತಿಕ ಹಬ್ಬವಾಗಿ ರೂಪುಗೊಳ್ಳುತ್ತದೆ.

ಕುರಿ ಕುರಿಯೇ ಚಂದ
ಕುದುರಿ ಮರಿಯೇ ಚೆಂದ
ಕದಿರಯ್ಯ ನೀ ಕುಣಿಸೋ ಕುದುರೆ ಬಲು ಚಂದ ।

ಹೀಗೆ ಹೇಳುಪದಗಳನ್ನು ಹಾಡುತ್ತಾರೆ. ಮಧ್ಯೆ ಮಧ್ಯೆ ಕೇಕೆ ಹಾಕುತ್ತಾರೆ.

**ಆ) ತಮಟೆ ವಾದ್ಯ ಕಲಾವಿದರು:** ತಮಟೆ ರಣವಾದ್ಯ. ಶುಭ ಮತ್ತು ಅಶುಭ ಎರಡೂ ಕಾರ್ಯಕ್ರಮಗಳಲ್ಲೂ ತಮಟೆಯನ್ನು ಬಾರಿಸುವ ಪದ್ಧತಿ ತುಮಕೂರು ಜಿಲ್ಲೆಯಾದ್ಯಂತ ರೂಢಿಯಲ್ಲಿದೆ. ತುಮಕೂರು ಜಿಲ್ಲೆಯ ಪ್ರತಿ ಗ್ರಾಮಗಳಲ್ಲೂ ತಮಟೆ ಕಲಾವಿದರಿದ್ದು, ತಮ್ಮ ವಿಶಿಷ್ಟ ನುಡಿಸುವಿಕೆ ಅದಕ್ಕೆ ತಕ್ಕ ನೃತ್ಯಗಳಿಂದ ಹೆಸರುವಾಸಿಯಾಗಿದ್ದಾರೆ.

ಸಿರಾ ತಾಲ್ಲೂಕಿನ ಕರಿದಾಸರಹಳ್ಳಿ ಜಾಲಪ್ಪ, ನರಸಪ್ಪ, ಕಣಮಯ್ಯ ತಂಡ ಕಡವಿಗೆರೆ ಮುದ್ದಯ್ಯ, ರಂಗನಾಥಪುರ (ಸಿರಾ) ಹುಚ್ಚಯ್ಯ, ಹನುಮಂತಪ್ಪ, ದುರ್ಗಯ್ಯ, ಬೊಮ್ಮಯ್ಯ, ಗಿಡಗನಹಳ್ಳಿ ರಾಜಣ್ಣ, ಮದಲೂರು ರಂಗಣ್ಣ, ಕಸ್ತೂರಪ್ಪ, ಕ್ಯಾದಿಗುಂಟೆಯ ನರಸಿಂಹಯ್ಯ, ಮಾಗೋಡು ರಂಗಪ್ಪ ಇವರೆಲ್ಲರೂ ಪ್ರಮುಖ ತಮಟೆ ಕಲಾವಿದರು.

ಸಿರಾ ತಾಲ್ಲೂಕಿನ ದ್ವಾರನಕುಂಟೆಯಲ್ಲಿ ಕರ್ನಾಟಕ ಜನಜಾಗೃತಿ ಕಲಾತಂಡ ರೂಪುಗೊಂಡು ಮೂವತ್ತು ಯುವಕರ ತಂಡವಿದೆ. ಶ್ರೀ ಏಳುಕೋಟಪ್ಪ ಅವರ ನೇತೃತ್ವದಲ್ಲಿ ಅಕ್ಷರ ಜಾಗೃತಿ, ಅಸ್ಪ್ರಶ್ಯತೆಯ ಕ್ರಾಂತಿಗೀತೆ ಮೊದಲಾದ ಸರ್ಕಾರ, ಖಾಸಗಿ ಪ್ರಚಾರ ಆಂದೋಲನಗಳೂ ಸೇರಿದಂತೆ ಯುವಜನಮೇಳ, ಜಾನಪದ ಕಲಾಮೇಳಗಳಲ್ಲಿ ಭಾಗವಹಿಸಿ ಸಮರ್ಥವಾದ ಪ್ರದರ್ಶನ ನೀಡುತ್ತಿದ್ದಾರೆ. ಜಯಣ್ಣ ಈ ತಂಡದ ಅತ್ಯುತ್ತಮ ಕಲಾವಿದರಾಗಿದ್ದು, ಪೂಜಾ ಕುಣಿತ, ಅರೆವಾದ್ಯ ಹಾಗೂ ಸೋಮನ ಕುಣಿತವನ್ನು ಆಕರ್ಷಕವಾಗಿ ನಡೆಸಿಕೊಡುತ್ತಾರೆ.

**ಇ) ಚೌಡಿಕೆ ಮೇಳದ ಕಲಾವಿದರು**: ಚೌಡಿಕೆ ಎಂದು ಚರ್ಮವಾದನ. ಸವದತ್ತಿ ಯಲ್ಲಮ್ಮನ ಭಕ್ತರನ್ನು ಚೌಡಿಕೆಯವರು ಎನ್ನುತ್ತಾರೆ. ಚೌಡಿಕೆಯವರಿಗೆ ಎಲ್ಲಮ್ಮನ ಹೆಸರಿನಲ್ಲಿ ದೀಕ್ಷೆಯಾಗಿರುತ್ತದೆ. ಇವರು ಎಲ್ಲಮ್ಮನ ಮಹಿಮೆಯನ್ನು ಪ್ರಸಾರ ಮಾಡುತ್ತಾ ಎಲ್ಲಮ್ಮನ ಪೂಜೆಯಲ್ಲಿ ಭಾಗಿಯಾಗುತ್ತಾ ಆಕೆಯ ಹೆಸರಿನಲ್ಲಿಯೇ ಕಾವ್ಯ ಕಟ್ಟಿ ಹಾಡುವ ಸಂಪ್ರದಾಯ ಎಲ್ಲಮ್ಮನ ಭಕ್ತರದು. ಇವರು ಮಾಡುವ ಕಲಾಮೇಳವೇ ಚೌಡಿಕೆ ಮೇಳ. ಸಿರಾ ಸೀಮೆಯಲ್ಲಿ ಚೌಡಿಕೆ ಮೇಳದ ಹತ್ತಾರು ಕಲಾವಿದರಿದ್ದಾರೆ. ದ್ವಾರನಕುಂಟೆಯ ಪಾತಲಿಂಗಪ್ಪ, ಮಹಾಲಿಂಗಪ್ಪ, ಸಿರಾದ ಶಿವಕುಮಾರ್ (ಶಿವಾಜಿ), ರಂಗಪ್ಪ ಇವರೆಲ್ಲರೂ ಚೌಡಿಕೆಯ ಕಲಾವಿದರು. ಇವರಲ್ಲಿ ಕೆಲವರು ವೃತ್ತಿಗಾಯಕ ಕಲಾವಿದರಾಗಿ ಎಲ್ಲಮ್ಮನ ಕಾವ್ಯ ಹಾಡಿಕೊಂಡು ಊರಾಡುವ ಪದ್ಧತಿಯೂ ಇದೆ. ನಿಡುಗಟ್ಟೆ ರಾಮಣ್ಣ, ಬೆಜ್ಜಿಹಳ್ಳಿಯ ತುಪ್ಪಣ್ಣ ಸಿರಾ ಭಾಗದ ಪ್ರಮುಖ ಚೌಡಿಕೆ ಕಲಾವಿದರು. ಎಲ್ಲಮ್ಮ, ಮಾರಮ್ಮ ಮುಂತಾದ ಗ್ರಾಮದೇವತೆಗಳನ್ನು ಕುರಿತು ಕಥೆ ಮಾಡುವುದಲ್ಲದೆ ವೃತ್ತಿ ಕಲಾವಿದರಾಗಿಯೂ ಎಲ್ಲಮ್ಮನ ಪವಾಡಗಳನ್ನು ಪ್ರಚಾರ ಮಾಡುತ್ತಿದ್ದಾರೆ.

**ಈ) ವೀರಗಾಸೆ ಕಲಾವಿದರು:** ವೀರಗಾಸೆ ಜಾನಪದ ಪರಂಪರೆಯಲ್ಲಿ ಒಂದು ರೋಚಕ ಕಲೆ. ಶೈವ ಪರಂಪರೆಯ ಈ ಕಲೆ ಭಯವನ್ನು ಮೂಡಿಸುವಂತಹದ್ದಾದರೂ ಶಿವನ ಮಹಿಮಾವಳಿಯನ್ನು ಸಾರುವ ಈ ಕಲೆ ವೀರಭದ್ರನ ಹುಟ್ಟಿನ ಹಿನ್ನೆಲೆಯನ್ನು ಸಾರುತ್ತದೆ. ವೀರಭದ್ರನ ಕುಣಿತ, ಲಿಂಗದ ಬೀರರ ಕುಣಿತ, ಖಡ್ಗ ಕುಣಿತ ಹೀಗೆ ನಾನಾ ಹೆಸರುಗಳಿಂದ ಕರೆಯಲ್ಪಡುವ ವೀರಗಾಸೆ ಕಲಾವಿದರು ತುಮಕೂರು ಜಿಲ್ಲೆಯಾದ್ಯಂತ ಹರಡಿಕೊಂಡಿದ್ದಾರೆ.

ಸಂಖ್ಯೆಯಲ್ಲಿ ಕಡಿಮೆ ಇದ್ದರೂ ಕಲಾ ಪ್ರೌಢಿಮೆಯಲ್ಲಿ ಪ್ರಬಲರಾಗಿದ್ದಾರೆ. ಪೌರಾಣಿಕ ಕಥಾ ಪ್ರಸಂಗಗಳನ್ನು ಜಾನಪದ ಕಲೆಗಳ ಮೂಲಕ ಹಾಡಿ ಕುಣಿಯುವ ಸಂಪ್ರದಾಯ ಆಯಾ ಪ್ರಾಂತ್ಯಗಳ, ನಂಬಿಕೆಗಳ ಹಿನ್ನೆಲೆಯಲ್ಲಿ ನಾಡಿನಾದ್ಯಂತ ಪ್ರಚಲಿತವಾಗಿದೆ. ಅಂತಹ ಒಂದು ಅಪರೂಪದ ಕಲೆ ವೀರಭದ್ರ ನೃತ್ಯ ಅಥವಾ ವೀರಗಾಸೆ. ಬಯಲುಸೀಮೆಯ ಜಾನಪದ ನೃತ್ಯಗಳಲ್ಲಿ ಗಂಡುಕಲೆಯೆಂದು ಪ್ರಸಿದ್ಧವಾಗಿರುವ ವೀರಭದ್ರನ ನೃತ್ಯ, ಹಾಡು, ಕುಣಿತ ಮತ್ತು ವಾದ್ಯ ಈ ಮೂರರ ಸುಮಧುರ ಸಂಗಮ.

ಶಿರದಲ್ಲಿ ಶಿವಲಿಂಗ, ಕಿರೀಟ, ವೀರಲಾಂಛನ ನಾಗಾಭರಣ, ಹಣೆಗೆ ತ್ರಿಪುಂಡ್ರ, ಕಿವಿಯಲ್ಲಿ ರುದ್ರಾಕ್ಷಿ, ನಾಗಕುಂಡಲ, ಕೊರಳಿಗೆ ಕರಡಿಗೆ, ಶಿವದಾರ, ರುದ್ರಾಕ್ಷಿ ಮಾಲೆ, ಚನ್ನವೀರಾಭರಣ, ಸೊಂಟದಲ್ಲಿ ಅಸುರ ರುಂಡಮಾಲೆ, ಕೀರ್ತಿ ಮುಖದರ್ಪಣ, ಸೂರ್ಯ-ಚಂದ್ರ, ಗಂಡಭೇರುಂಡ, ಗಂಟೆ ಸರಪಳಿ, ಬೀಸುವ ಚೌಲ, ಮಂಡಿಯ ಕೆಳಗೆ ಐದು ಜಂಗುಗಳು, ಕಾಲಿಗೆ ಗಗ್ಗರಿ, ಕಿರುಗೆಜ್ಜೆ, ನಿಲುವಂಗಿ, ನಡುಪಟ್ಟಿ, ಖಾದಿ ಪಂಚೆ, ತೋಳಿಗೆ ನಾಗಾಭರಣ, ರುದ್ರಾಕ್ಷಿ ಕಟ್ಟು, ಕಟಿಬಂಧ, ಎಡಗೈಯಲ್ಲಿ ಹಲಗೆ, ಬಲಗೈಯಲ್ಲಿ ಥಳಥಳಿಸುವ ಖಡ್ಗ ಇದು ವೀರಭದ್ರನ ಉಡುಗೆ ತೊಡುಗೆಗಳು. ವೀರಭದ್ರ ಆ ಸಂದರ್ಭದ ರೌದ್ರ-ಭೀಕರ ಮುಖಭಾವದ ಪ್ರತಿಬಿಂಬಕ್ಕೆ ಒಪ್ಪುವಂತಹ ಹುರಿಮಾಡಿದ ಮೀಸೆ, ತಿದ್ದಿದ ಹುಬ್ಬು, ಎದ್ದು ಕಾಣುವ ಕೆಂಗಣ್ಣು ಇವುಗಳ ವೈಭವವನ್ನು ಕಲಾವಿದರ ಮುಖಭಾವದಿಂದಲೇ ಕಾಣಬೇಕು. ಕುಣಿಯುವಾಗ ಆಗುವ ಸದ್ದು, ಆರ್ಭಟ ವೀಕ್ಷಕರ ಎದೆ ಝಲ್ಲೆನ್ನುವಂತೆ ಹೇಳುವ ಒಡಪುಗಳು, ಕಂಚಿನ ಧ್ವನಿಯಂತೆ ಸ್ಪಷ್ಟ.

ಶಿವನಿಲ್ಲದೆ ಬಂದ ದಾಕ್ಷಾಯಿಣಿ ಸಭೆಯಲ್ಲಿ ಆದ ಅಪಮಾನದಿಂದ ಯಜ್ಞಕುಂಡಕ್ಕೆ ಧುಮುಕಿದಳು. ಈ ವಿಷಯ ನಂದಿ, ಭಂಗಿಯ ಮೂಲಕ ಪರಶಿವನಿಗೆ ತಲುಪುತ್ತದೆ. ಶಾಂತಸಾಗರ ಶಿವ ಉಗ್ರ, ವ್ಯಗ್ರ, ಮಹೋಗ್ರ, ಪ್ರಳಯಕಾಲ ರುದ್ರನಾಗಿ ಜಟೆಯನ್ನು ಅಪ್ಪಳಿಸಿದ ಭರದಿಂದ ವೀರಭದ್ರನ ಉದ್ಭವವಾಗುತ್ತದೆ. ಶಿವನ ಆದೇಶದಂತೆ ದಕ್ಷಬ್ರಹ್ಮನ ಯಜ್ಞವನ್ನು ಧ್ವಂಸ ಮಾಡಲು ವೀರಭದ್ರ ರುದ್ರಗಣಗಳೊಂದಿಗೆ ಹೊರಟ ಸನ್ನಿವೇಶವೇ ವೀರಭದ್ರ ನೃತ್ಯ.

ಚಿಕ್ಕನಹಳ್ಳಿ ವೀರಣ್ಣ ವೀರಭದ್ರ ನೃತ್ಯಕ್ಕೆ ಹೊಸ ಆಯಾಮ, ಆಕರ್ಷಣೆ ಕೊಟ್ಟು ಅದನ್ನು ಒಂದು ವಿಶಿಷ್ಟ ಜಾನಪದ ಪ್ರಕಾರವಾಗಿ ರೂಪುಗೊಳಿಸಿ ಪ್ರಚಾರ ಮಾಡುತ್ತಲಿದ್ದಾರೆ. ಇವರ ತಂಡದಲ್ಲಿ 15-20 ಕಲಾವಿದರಿಂದ ಕೇಂದ್ರ ವ್ಯಕ್ತಿ ಚಿಕ್ಕನಹಳ್ಳಿ ವೀರಣ್ಣನವರು, ಎಂಟು ಜನ ಮೇಳದವರು, ಉಳಿದವರು ಸಹಕಲಾವಿದರು. ಕರಡೆ, ಚಮ್ಮಾಳ, ನಗಾರಿ, ದಿಮ್ಮು, ತಾಳ ಮೌರಿ, ಶೃತಿ, ಕಹಳೆ ಇವು ಹಿನ್ನೆಲೆಯ ವಾದ್ಯಗಳು. ಕಾವಿಯ ನಿಲುವಂಗಿ,

ಬಿಳಿ ವೀರಗಚ್ಚೆ, ಹಳದಿ ಪೇಟ, ವಕ್ಷಸ್ಥಳದ ಮೇಲೆ ಕತ್ತರಿಯಾಕಾರದಲ್ಲಿ ಬಿಗಿದು ಸೊಂಟದಿಂದ ಕೆಳಕ್ಕೆ ಸುತ್ತಿ ಕಟ್ಟಿದ ಉತ್ತರೀಯ ಇದು ಸಾಮಾನ್ಯವಾಗಿ ವೀರಭದ್ರ ನೃತ್ಯದಲ್ಲಿ ಮುಖ್ಯ ಕಲಾವಿದ ಮತ್ತು ಸಹಕಲಾವಿದರು ಬಳಸುವ ಉಡುಗೆ.

ಸಿರಾ ತಾಲ್ಲೂಕಿನ ಬುಕ್ಕಾಪಟ್ಟಣದಲ್ಲಿ ಸಮರ್ಥವಾದ ವೀರಗಾಸೆಯ ಒಂದು ಕಲಾತಂಡವಿದ್ದು, ಐವತ್ತು ಕಲಾವಿದರಿದ್ದಾರೆ. ಪಾತಾಳಲಿಂಗೇಶ್ವರ ವೀರಗಾಸೆ ಕಲಾತಂಡ ಎಂಬ ಹೆಸರಲ್ಲಿ ರಾಜ್ಯದ ಪ್ರತಿಷ್ಠಿತ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರದರ್ಶನ ನೀಡಿದ್ದಾರೆ. ಚಿಕ್ಕನಹಳ್ಳಿ ವೀರಣ್ಣ, ಚಿಕ್ಕವೀರಣ್ಣ ಇವರು ಸಿರಾ ಭಾಗದ ಪ್ರಮುಖ ವೀರಗಾಸೆ ಕಲಾವಿದರು. ಹಲವು ಯುವಜನ ಮೇಳಗಳಲ್ಲಿ ಭಾಗವಹಿಸಿ ಆಕರ್ಷಕ ಕಲಾ ಪ್ರದರ್ಶನ ನೀಡಿದ ಹಿರಿಮೆ ಇವರಿಗಿದೆ. ತೆಂಗಿನಕಾಯಿ ಪವಾಡ, ಕಳಸ ಪವಾಡ, ಕತ್ತಿಯ ಪವಾಡ ಹೀಗೆ ವೈವಿಧ್ಯಮಯ ಕಸರತ್ತುಗಳ ಮೂಲಕ ವೀರಗಾಸೆ ಕಲೆಗೆ ಹೊಸ ಆಯಾಮ ತಂದಿದ್ದಾರೆ.

**ಉ) ಮುಖವೀಣೆ ಕಲಾವಿದರು:** ಮುಖವೀಣೆ ಪ್ರಮುಖ ಜಾನಪದ ವಾದನ. ಓಲಗದ ಪೀಪಿಯ ತರಹದ ಈ ವಾದ್ಯ ನುಡಿಸುವಿಕೆಯಿಂದ ನೇರವಾಗಿ ಕಿವಿಗಳಿಗೆ ಅಪ್ಪಳಿಸಿ, ರೋಚಕತೆಯನ್ನುಂಟುಮಾಡುತ್ತದೆ. ಕರ್ನಾಟಕ ಮೂಡಲಪಾಯ ಯಕ್ಷಗಾನ ಬಯಲಾಟ, ಪ್ರಸಂಗಗಳಿಗೆ ಮುಖವೀಣೆ ಪ್ರಮುಖ ಪರಿಕರ. ಸಿರಾ ತಾಲ್ಲೂಕು ಕಡವಿಗೆರೆಯ ದಾಸಣ್ಣ ಪ್ರಮುಖ ಮುಖವೀಣೆ ಕಲಾವಿದ. ಯಕ್ಷಗಾನದ ಬತ್ತೀಸ ರಾಗಗಳಲ್ಲಿ ಅಂದರೆ ಮೂವತ್ತೆರಡು ರಾಗಗಳನ್ನು ನುಡಿಸುವ ವಿಶಿಷ್ಟ ಕಲಾವಂತಿಕೆಯನ್ನು ರೂಢಿಸಿಕೊಂಡಿದ್ದಾರೆ. ಯಕ್ಷಗಾನ ಪ್ರಸಂಗಗಳ ರಾಗ, ಮಟ್ಟುಗಳಿಗೆ ಸಮರ್ಥವಾಗಿ ನುಡಿಸುವ ಈ ಕಲಾವಿದ ಭಾಗವಂತಿಕೆಯಲ್ಲಿಯೂ ಪರಿಶ್ರಮ ಹೊಂದಿದ್ದಾರೆ. ಹರಿಜನ ಜನಾಂಗಕ್ಕೆ ಸೇರಿದ ಈತ ಯಾವುದೇ ಕೀಳರಿಮೆ ಇಲ್ಲದೆ ತನ್ನ ಕಲೆಯನ್ನು ಪ್ರಸರಿಸುತ್ತಿದ್ದಾರೆ. ತನ್ನ ಪೂರ್ವಿಕರಿಂದ ಕಲೆಯನ್ನು ಅಭ್ಯಾಸ ಮಾಡಿರುವ ದಾಸಣ್ಣ ಆಕಾಶವಾಣಿ ಕಲಾವಿದರೂ ಹೌದು. ಇವರ ಮಗ ಮೂಡಲಗಿರಿಯಪ್ಪ ಅವರೂ ಕೂಡ ತಂದೆಯ ಹಾದಿಯಲ್ಲಿ ಸಾಗುತ್ತಿದ್ದು ಉತ್ತಮ ಕಲಾಪ್ರದರ್ಶನ ನೀಡುತ್ತಿದ್ದಾರೆ. ಹಲವಾರು ಯಕ್ಷಗಾನ ಬಯಲಾಟಕ್ಕೆ ಸಮರ್ಥವಾಗಿ ಮುಖವೀಣೆ ಕಲಾವಿದರಾಗಿ ಕೆಲಸ ಮಾಡಿದ್ದಾರೆ. ನಾದೂರು ಗುಡ್ಡದ ದಾಸಪ್ಪ, ಶಾಗದಡು ಕೃಷ್ಣಪ್ಪ ಗಮನಾರ್ಹ ಕಲಾವಿದರು. ಚಿತ್ರದೇವರ ಕಾವ್ಯವನ್ನು ಹಾಡುವ ಮತ್ತೊಬ್ಬ ಕಲಾವಿದ ಲಕ್ಕವ್ವನಹಳ್ಳಿ ದೊಡ್ಡಗೊಲ್ಲರಹಟ್ಟಿಯ ಚಿಕ್ಕಣ್ಣ. ಚಿತ್ರದೇವರ ಕಾವ್ಯ ಹಾಡುವ ಮಾಂತ್ರಿಕ ನಿಂಗಜ್ಜನಿಂದ ಪ್ರೇರೇಪಿತನಾಗಿ ಚಿತ್ರದೇವರ ಕಾವ್ಯ ಹಾಡುವ ಚಿಕ್ಕಣ್ಣ ರೈತಾಪಿ ಬದುಕಿನ ಮನುಷ್ಯ. ತಾರುಣ್ಯದ ಹೊಸ್ತಿಲಲ್ಲಿರುವ ಈತ ಕಾವ್ಯ ಹಾಡುಗಾರಿಕೆಯ ಜೊತೆ ಜೊತೆಗೆ ಕೋಲುಪದ ಬೆಳದಿಂಗಳ ಪದರಗಳನ್ನು ಸುಶ್ರಾವ್ಯವಾಗಿ ಹಾಡುತ್ತಾರೆ.

## ಆ) ಜನಪದ ಕಲಾವಿದರು

### ಗಣೆ ಕಲಾವಿದರು:

**ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿ ನಿಂಗಜ್ಜ:**



ಆಂಧ್ರ-ಕರ್ನಾಟಕ ಗಡಿಗೆ ಗೆರೆ ಕೊಯ್ದಂತಿರುವ ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕಿನ ಲಕ್ಕವ್ವನಹಳ್ಳಿ, ಗೊಲ್ಲರಹಟ್ಟಿ, ನಿಂಗಜ್ಜನ ಕಾಯಕನೆಲೆ. ಇದು ಕರ್ನಾಟಕ ಕಾಡುಗೊಲ್ಲರ ಸಂಸ್ಕೃತಿಯ ಮಾದರಿಯ ರೂಪ. ಕಳೆದ 70 ವರ್ಷಗಳಿಂದಲೂ ಕುರಿ, ಮೇಕೆ ಮೇಯಿಸುತ್ತಲೇ ಕುರುಚಲು ಕಾಡಿನ ಮೃಗಗಳಿಗೆ ದನಿಯಾಗುತ್ತ, ಕುರಿ ಪೋಷಣೆ, ರಕ್ಷಣೆಯ ಧ್ವನಿರೂಪವಾಗಿ ಕಲಿತ ಜನಪದ ಕಾವ್ಯ ಹಾಡುಗಾರಿಕೆ, ನಿಂಗಣ್ಣನ ಭವ್ಯ ಬದುಕಿನಲ್ಲಿ ಮಹಾ ಕಾವ್ಯವಾಗಿ ರೂಪುಗೊಂಡದ್ದು ವಿಶೇಷ. ಕಾಡುಗೊಲ್ಲರ ಪುರಾಣಪುರುಷ, ಆರಾಧ್ಯ ದೈವ ಚಿತ್ರದೇವರು. ಈ ಪುರಾಣ ದೈವವನ್ನು ಕುರಿತು ಮಹಾಕಾವ್ಯ ಹಾಡಬಲ್ಲ ಏಕೈಕ ಕಲಾವಿದ ಶ್ರೀ ನಿಂಗಣ್ಣ. ಒಣ ನೆಲದ ಬದುವಿನ ಮೇಲೆ, ಹೆಗಲ ಮೇಲಣ ಕಂಬಳಿ ಹಾಸಿ, ಬಲ ಕೆನ್ನೆಯ ಮೇಲೆ ಬಲಗೈ ಆನಿಸಿಕೊಂಡು ಹಾಡು ಸುರು ಮಾಡಿದರೆ ಬಯಲು ಗಾನ ಆಲಯವಾಗುತ್ತದೆ, ಕುರಿ ರೊಪ್ಪ ಸಂಗೀತ ಶಾಲೆಯಾಗುತ್ತದೆ. ಅಷ್ಟೊಂದು ಪದಗಳು ಈ ಕಾಡುಗೊಲ್ಲರ ಅಜ್ಜನ ಎದೆಯ ಗೂಡೊಳಗೆ ಗೂಡು ಕಟ್ಟಿವೆ.

ಚಿತ್ರದೇವರನ್ನು ಕುರಿತು ಕಾವ್ಯ ಹಾಡುವವರು ನಿಂಗಜ್ಜನ ಸಮಕಾಲೀನರು ಹಲವರು ಸಿರಾ, ಪಾವಗಡ, ಮಧುಗಿರಿ, ಹಿರಿಯೂರು ಈ ಭಾಗಗಳಲ್ಲಿ ಕಂಡುಬರುತ್ತಾರೆ. ಹಿರಿಯೂರು ತಾಲ್ಲೂಕಿನ ಇಕ್ಕನೂರಿನ ಪೂಜಾರಿ ನಿಂಗಣ್ಣ ಅಂಥವರಲ್ಲಿ ಒಬ್ಬರು. ಆದರೆ ಇವರ್ಯಾರಿಗೂ ಸಮಗ್ರ ಕಾವ್ಯವನ್ನು ಒಂದಿಷ್ಟೂ ಬಿಡದೆ ಹಾಡುವ, ಎಷ್ಟು ಬಾರಿ ಹಾಡಿದರೂ ಒಂದಿಷ್ಟೂ ಬದಲಾವಣೆ ತೋರದೆ, ಯಥಾವತ್ತಾಗಿ ಕಥೆ ಮಾಡುವ ವಸ್ತುನಿಷ್ಠತೆ ಲಭ್ಯವಾಗಿಲ್ಲದಿರುವುದು ನಿಂಗಜ್ಜನ ವಿಶೇಷತೆ.

ನೆರೆಯ ಬೇವಿನಹಳ್ಳಿಯ ಕಾಡುಗೊಲ್ಲರ ನಾಗಣ್ಣನ ಬಾಲ್ಯದ ಸಹವಾಸ, ಕುರಿ ಹುಲ್ಲು ನೀರಿಗಾಗಿ ಪರಸ್ಥಳಕ್ಕೆ ಹೋಗಲೇಬೇಕಾದಾಗ ರಾತ್ರಿ ಕಳ್ಳರು ಕಾಕರಿಂದ ಕುರಿಯನ್ನು ಕಾಯಲು ರಾತ್ರಿಯೆಲ್ಲಾ ಎಚ್ಚರವಾಗಿರಬೇಕಾಗುತ್ತದೆ. ಕನಿಷ್ಠ ಸರದಿಯ ಪ್ರಕಾರವಾದರೂ

ಎದ್ದು ಕುರಿ ಮಂದೆ ಕಾಯಲೇಬೇಕಾಗುತ್ತದೆ. ಇದು ಕುರಿಗಾಹಿಗಳ ನಿತ್ಯನೇಮವಾಗಿದೆ. ನಿಂಗಜ್ಜನಿಗೆ ಕಾವ್ಯ ಒಲಿದ ಬಗೆಯೂ ಇದೇ ಪ್ರಕಾರವಾಗಿಯೇ. ತನ್ನ ಜೀತದ ದಿನಗಳಲ್ಲಿ ಅಂದರೆ ಆರೇಳು ವರ್ಷದ ಬಾಲಕತನದಿಂದಲೇ ಪರಸ್ಥಳಗಳಲ್ಲಿ ವಾಸಿಸುತ್ತಾ ಹಗಲು ಕುರಿ ಕಾಯ್ದು, ರಾತ್ರಿ ಮಂದೆ ಕಾಯುವುದು ಇವರ ನಿತ್ಯ ನೇಮವಾಗಿತ್ತು. ಅಂಥ ಕಾಯಕದೊಳಗೆ ನಿಂಗಜ್ಜ ಗಣೆ ಊದುವುದನ್ನು ಮೊದಲು ಕಲಿತರು. ಕಾವ್ಯ ಹಾಡುವುದಕ್ಕೆ ಗಣೆಯ ಶೃತಿ ಅಗತ್ಯ. ಗಣೆ ಶೃತಿಯ ಮೂಲಕ ಚಿತ್ರದೇವರು ಕಾವ್ಯದ ಪೂರ್ಣಪಾಠವನ್ನು ಸಮಗ್ರವಾಗಿ ಕಲಿತರು. ಬೇವಿನಹಳ್ಳಿಯ ನಾಗಣ್ಣನವರ ಹಾಡುಗಾರಿಕೆಯನ್ನು ಪರಂಪರಾಗತವಾಗಿ ಮುಂದುವರಿಸಿ ಇಂದಿಗೂ ಕಂಠಸ್ಥ ಪರಂಪರೆಯಲ್ಲಿ ಉಳಿಸಿ ಬೆಳೆಸಿಕೊಂಡು ಬಂದಿರುವ, ಏಕೈಕ ಕಲಾವಿದ ಎಂಬುದು ಶ್ರೀ ನಿಂಗಜ್ಜ ಅವರ ಹಿರಿಮೆ.

ನಿಂಗಜ್ಜ ಚಿತ್ರದೇವರ ಭಕ್ತ. ಪೂಜಾರಿಕೆಯ ಮನೆಯವರು ಸಾಮಾನ್ಯವಾಗಿ ಯಾರಾದರೂ ಚಿತ್ರದೇವರ ಕತೆ ಹೇಳುವುದು ವಾಡಿಕೆ. ಆದರೆ ನಿಂಗಜ್ಜ ಪೂಜಾರಿಕೆಗೆ ಹೊರತಾದ ಕಾಯಕ. ಮೇಕೆ, ಕುರಿ ಮೇಯಿಸುವುದು ಇವರ ಪ್ರಧಾನ ಕೆಲಸ. ಆದರೂ ಸಿರಾ, ಹಿರಿಯೂರು, ಪಾವಗಡ, ಮಧುಗಿರಿ ತಾಲ್ಲೂಕುಗಳ ಕಾಡುಗೊಲ್ಲರ ಮನೆಗಳ ಧಾರ್ಮಿಕ ವಿಧಿಗಳಲ್ಲಿ ಗುರುಸ್ಥಾನ ವಹಿಸುತ್ತಾರೆ. ದೇವರ ಪೂಜೆಯ ವಿಧಾನಗಳಿಗೆ ಇವರು ನೆರವಾಗುತ್ತಾರೆ. ಪೂಜೆಯ ನಂತರ ಕಂಬಳಿ ಹಾಸಿಕೊಂಡು, ಅದರ ಮೇಲೆ ಕುಳಿತು, ಚಿತ್ರದೇವರ ಕಾವ್ಯವನ್ನು ಶಾಸ್ತ್ರೀಯವಾಗಿ ಹಾಡುತ್ತಾರೆ. ಸಂದುಸಂಧಿಗೆ ಪೂಜೆ, ಚಿತ್ರದೇವರ ಪ್ರತ್ಯಕ್ಷವಾದ ಸಂದರ್ಭಕ್ಕೆ ವಿಶೇಷ ಪೂಜೆ ಮಾಡಲೇಬೇಕು. ಇದು ನಿಯಮ. ಇವರು ರಾತ್ರಿಯಿಂದ ಬೆಳಗಿನ ತನಕ ಕಾವ್ಯ ಹಾಡಿದರೆ, ಆ ಮನೆಗೆ ಒಳ್ಳೆಯದಾಗುತ್ತದೆಂಬ ಬಲವಾದ ನಂಬಿಕೆ ಕಾಡುಗೊಲ್ಲರಲ್ಲಿ ಇಂದಿಗೂ ಇದೆ. ಜೊತೆಗೆ ಸಿರಾ ಸೀಮೆಯ ಕುರುಬರು, ಕುಂಚಿಟಿಗರು ಶುಭ ಸಂದರ್ಭಗಳಲ್ಲಿ ಚಿತ್ರದೇವರ ಕತೆ ಮಾಡಿಸುವುದು ವಾಡಿಕೆಯಾಗಿದೆ. ಈ ಪರಂಪರೆಯ ಗಾಯಕ ಲಿಂಗಣ್ಣ ಒಬ್ಬರೆ ಎಂಬುದು ವಿಶೇಷವಾಗಿದೆ.

80ರ ಪ್ರಾಯದ ಈ ಹಿರಿಯ ಕಲಾವಿದರ ಚಿತ್ರದೇವರು ಕಾವ್ಯದ ಸಮಗ್ರ ಭಾಗವನ್ನು 1988 ರಲ್ಲಿ ಡಾ.ಚಿಕ್ಕಣ್ಣ ಯಣ್ಣೆಕಟ್ಟೆ ಸಂಗ್ರಹಿಸಿ 'ನಿಂಗಜ್ಜ ಹಾಡಿದ ಚಿತ್ರದೇವರ ಕಾವ್ಯ' ಎಂಬ ಹೆಸರಲ್ಲಿ ಪ್ರಕಟಿಸಿದ್ದಾರೆ. ಜವಗೊಂಡನಹಳ್ಳಿ ಮಹಾಲಿಂಗಯ್ಯ ಎಂಬುವವರು ಈ ಕಾವ್ಯವನ್ನು ಕುರಿತು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಪದವಿ ಪಡೆದು ಪಿಎಚ್‌ಡಿಗಾಗಿ ಸಂಶೋಧನೆಗೆ ತೊಡಗಿದ್ದಾರೆ.

ಅಪಾರ ವಾಙ್ಮ, ಸಂಯಮ ಚಿತ್ತದ ನಿಂಗಜ್ಜನಿಗೆ ಮಕ್ಕಳು ಇಲ್ಲ. ಸಮಾನ ವಯಸ್ಸಿನ ಹೆಂಡತಿ, ಅಜ್ಜನು ಕಾವ್ಯ ಹಾಡುವುದಕ್ಕೆ ಹೊರಗೆ ಹೋದಾಗ ಮೇಕೆ ಮೇಯಿಸುತ್ತಾರೆ.

ಕೇವಲ ಎರಡು ಎಕರೆ ಒಣನೆಲ ಪರಂಪರಾಗತವಾಗಿ ಬಂದದ್ದು. ತನ್ನ ಹಟ್ಟಿಯ ಮದ್ಯೆ ಹುಲ್ಲು ಜೋಪಡಿಯನ್ನು ಬಿಟ್ಟರೆ ಬೇರೆ ಏನನ್ನೂ ಮಾಡಿಕೊಂಡಿಲ್ಲ, ಮಾಡಿಕೊಳ್ಳುವ ಆಸೆ, ಹಂಬಲವೂ ಇಲ್ಲ. ಹುಲ್ಲು ಎಲೆಗಳಿಂದ ಕಟ್ಟಿದ ಈ ಪುಟ್ಟಗೂಡು ಜನಪದ ಸಂಗೀತದ ಮುತ್ತು ರತ್ನದ ಕಣಜ. ಇದೇ ನಿಂಗಜ್ಜನ ನಿಜವಾದ ಆಸ್ತಿ. ಇದೇ ಕಾಡುಗೊಲ್ಲರ ಸಂಸ್ಕೃತಿಯ ವಿಶೇಷ.

ಬುಡಕಟ್ಟು ಸಂಸ್ಕೃತಿಗೆ ಅರ್ಥವಂತಿಕೆ ತಂದಿರುವ ಈ ಅಪೂರ್ವ ಕಲಾವಿದನಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 2004ನೇ ಸಾಲಿನಲ್ಲಿ 'ಸಾಧನಾ' ಗೌರವ ಪ್ರಶಸ್ತಿ ನೀಡಿ ಗೌರವಿಸಿದೆ. ಇದೇ ಇವರ ಬದುಕಿನ ಪ್ರಥಮ ಪ್ರಶಸ್ತಿ, ಗೌರವ ಎಂಬುದು ವಿಶೇಷ. ಈಗ ಇವರು ದಿವಂಗತರು.

**ಮಾಗೋಡು ಜೋಗೀರಣ್ಣ:**

ಸಿರಾ ತಾಲ್ಲೂಕಿನ ಮಾಗೋಡು ಒಂದು ಪುಟ್ಟ ಗ್ರಾಮ. ಇಲ್ಲಿ ರಂಗನಾಥ ಈ ಭಾಗದ ಪ್ರಸಿದ್ಧ ಆರಾಧ್ಯದೈವ. ವರ್ಷಕ್ಕೊಮ್ಮೆ ಮಾಘ ಮಾಸದಲ್ಲಿ ಅದ್ದೂರಿ ಜಾತ್ರೆಯೂ ನಡೆಯುತ್ತದೆ. ಮಾಗೋಡು ರಂಗನಾಥ ಹೂವಿನ ಪರಿಷೆಗೆ ಹೆಸರುವಾಸಿ. ಆಂಧ್ರಪ್ರದೇಶ, ತಮಿಳುನಾಡು ಈ ಭಾಗಗಳ ಅಪಾರ ಭಕ್ತರನ್ನು ಈ ದೇವರು ಹೊಂದಿದೆ.

ಜೋಗೀರಣ್ಣ ಮಾಗೋಡಿನ ರೈತಾಪಿ ಬದುಕಿನ ವ್ಯಕ್ತಿ. ಸುಮಾರು 75 ವರ್ಷ ಪ್ರಾಯದ ಇವರು ಮಾಗೋಡು ರಂಗನಾಥನ ಸಮಗ್ರ ಕಥನವನ್ನು ಕಾವ್ಯದ ಮೂಲಕ ಹಾಡುತ್ತಾರೆ. ಬುಡಕಟ್ಟು ಸಂಸ್ಕೃತಿಯಲ್ಲಿ ಕಾಡುಗೊಲ್ಲರದು ವಿಶಿಷ್ಟ ಸಾಂಸ್ಕೃತಿಕ ವ್ಯಕ್ತಿತ್ವ. ಜನಾಂಗಿಕ ಹಿನ್ನೆಲೆ, ಸಾಂಸ್ಕೃತಿಕ ಪರಿಸರ, ಸಾಂಸ್ಕೃತಿಕ ನಾಯಕರನ್ನು ಕಾವ್ಯ ಕಟ್ಟಿ ಹಾಡುವುದು ಕಾಡುಗೊಲ್ಲರ ವಿಶೇಷ. ಕುರಿಗಾಹಿಗಳಾದ ಇವರು ಕುರಿ ಮೇಯಿಸುತ್ತಾ, ರಾತ್ರಿಯೆಲ್ಲಾ ಕುರಿ ಮಂದೆ ಕಾಯುತ್ತಾ, ತಮ್ಮ ಪಾಡಿಗೆ ತಾವು ಹಾಡುವುದು ಇವರ ವಿಶೇಷ. ಇವರ ಹಾಡುಗಳಲ್ಲಿ ಪುರಾಣ, ಇತಿಹಾಸ ಪುರುಷ



ರನ್ನು ಕುರಿತ ಮಹಾಕಾವ್ಯಗಳು ರೂಪು ಗೊಂಡಿವೆ.

ಜನಪದ ಬುಡಕಟ್ಟು ಕಾವ್ಯ ಪ್ರಕಾರಗಳಲ್ಲಿ ಜುಂಜಪ್ಪನ ಕಾವ್ಯದ ನಂತರ ಅದರಷ್ಟೇ ಗೌರವಾದರಗಳಿಂದ ಭಾವಿಸಲ್ಪಡುವ ಕಾವ್ಯ ಎಂದರೆ ಮಾಗೋಡು ರಂಗನಾಥನ ಕಾವ್ಯ. ಕಂಬದ ರಂಗನ ಕಥೆ, ಕಂಬದರಾಯನ ಕಥೆ, ರಂಗನಾಥನ ಕಾವ್ಯ ಎಂದೆಲ್ಲಾ ಕರೆಯಲ್ಪಡುವ ರಂಗನಾಥನ ಕಥೆ ತುಂಬಾ ವಿಶಿಷ್ಟವೂ, ಮಹಾಕಾವ್ಯ ಸ್ವರೂಪದ್ದೂ ಆಗಿದೆ. ಇಂಥ ಜನಪದ ಸಮಗ್ರ ಕಾವ್ಯವನ್ನು ಹಾಡುವ ಕರ್ನಾಟಕದ ಏಕೈಕ ಕಲಾವಿದ ಎಂದರೆ ಮಾಗೋಡಿನ ಜೋಗೀರಣ್ಣ ಒಬ್ಬರೇ. ಇವರು ಹಾಡಿರುವ ಮಾಗೋಡು ರಂಗನಾಥನ ಕಥೆಯನ್ನು ಡಾ.ಚಿಕ್ಕಣ್ಣ ಯಣ್ಣೆಕಟ್ಟೆ 2002 ರಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಜೋಗೀರಣ್ಣ ಅವರಿಗೆ 75ರ ಪ್ರಾಯ. ಕರಿಯ ಕಂಬಳಿ ಗದ್ದಿಗೆ ಹಾಸಿ, ಗಣೆ ಹಿಡಿದು ಕುಂತರೆ ರಾತ್ರಿ ಪೂರ ರಂಗನಾಥನ ಕಥೆಯನ್ನು ಸಮಗ್ರವಾಗಿ ಹಾಡುತ್ತಾರೆ. ದೇವರ ಬಸವ ಅಥವಾ ದಾಸಯ್ಯ ಎಂದೇ ಕರೆಯಲ್ಪಡುವ ಇವರು ಸಂಪೂರ್ಣವಾಗಿ ಹಾಡುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ರಂಗನಾಥ ದೇವರ ವಕ್ಕಲುಗಳು ದೇವರನ್ನು ಬೇರೆ ಬೇರೆ ಗ್ರಾಮಗಳಿಗೆ ಮೆರವಣಿಗೆ, ಉತ್ಸವಕ್ಕೆ ಕರೆದುಕೊಂಡು ಹೋಗುತ್ತಾರೆ. ರಾತ್ರಿ ದೇವರನ್ನು ಗದ್ದಿಗೆ ಮಾಡಿದ ಮೇಲೆ ದೇವರನ್ನು ಕುರಿತ ಕಥೆಯನ್ನು ಮಾಡಿಸುವುದು ವಾಡಿಕೆಯಾಗಿದೆ. ಈ ಪರಂಪರೆಯನ್ನು ಇಂದಿಗೂ ಅರ್ಥಪೂರ್ಣವಾಗಿ ನಡೆಸಿಕೊಂಡು ಬರುತ್ತಿರುವ ಕಲಾವಿದ ಜೋಗೀರಣ್ಣನವರು. ಶನಿವಾರ ವಿಶೇಷವಾಗಿ ರಂಗನಾಥ ದೇವರ ಪೂಜೆ ಇರುತ್ತದೆ. ಅಂಥ ಸಂದರ್ಭದಲ್ಲೂ ದೇವಸ್ಥಾನದ ಜಗಲಿಯ ಮೇಲೆ ಕುಳಿತು, ದೇವರ ಕಥೆ ಮಾಡುವುದು, ಗಣೆ ನುಡಿಸುವುದು ವಾಡಿಕೆಯಾಗಿದೆ. ಗಣೆ ಹಾಗೂ ಹಾಡುಗಾರಿಕೆ ಎರಡರಲ್ಲೂ ಚಾಕಚಕ್ಯತೆಯ್ನನು ಕಾಯ್ದುಕೊಂಡು ಬಂದಿರುವ ಜೋಗೀರಣ್ಣ, ದೈವನಿಷ್ಠ, ಶೀಲ-ಶೌಚಗಳಲ್ಲಿ ಕಟ್ಟುನಿಟ್ಟುತನವನ್ನು ಕಾಯ್ದುಕೊಂಡು ಬರುತ್ತಿದ್ದಾರೆ.

ಜೋಗೀರಣ್ಣ ಕೂಲಿಮಠದಲ್ಲಿ ಎರಡನೇ ತರಗತಿಯ ತನಕ ಓದಿದ್ದಾರೆ. ಕನ್ನಡ ಓದಲು, ಬರೆಯಲು ಮಾತ್ರ ಬರುತ್ತದೆ. ಆದರೂ ಗಣೆಯನ್ನು ಕೈಲಿಡಿದು, ಕರಿಯ ಕಂಬಳಿಯನ್ನು ಹಾಸಿ ಅದರ ಮೇಲೆ ಕುಳಿತರೆಂದರೆ ರಂಗನಾಥನ ಕಥೆಯ ವಿವರವುಳ್ಳ ಸಮಗ್ರ ಕಾವ್ಯ ಪುಂಖಾನುಪುಂಖ ವಾಗಿ ಹರಿದುಬರುತ್ತದೆ. ಮಹಾಕಾವ್ಯ ಸ್ವರೂಪದ ರಂಗನಾಥನ ಕಾವ್ಯವನ್ನು ವೈವಿಧ್ಯ ರಸಭಾವಗಳೊಂದಿಗೆ ಹಾಡುತ್ತಾ ಸಾಗುವುದು ಈ ಕಲಾವಿದನ ವಿಶೇಷವಾಗಿದೆ. ಆರ್ಥಿಕವಾಗಿ ಅತ್ಯಂತ ದುಃಸ್ಥಿತಿಯಲ್ಲಿದ್ದರೂ, ಕೌಟುಂಬಿಕ ಜಂಜಾಟದಿಂದ ದೂರ ಇರುವುದಾಗಿ ಜೋಗೀರಣ್ಣ ನವರೇ ಹೇಳುತ್ತಾರೆ. ಇಬ್ಬರು ಗಂಡುಮಕ್ಕಳು ಅವರಿಬ್ಬರೂ ಸಂಸಾರದೊಂದಿಗೆ ಬೇರೆ ಬೇರೆ ಕಡೆ ವಾಸಿಸುತ್ತಿದ್ದಾರೆ.

ದೇವಸ್ಥಾನದ ಕೆಲಸ, ಹಾಡುಗಾರಿಕೆಗಾಗಿಯೇ ತಮ್ಮನ್ನು ಸಂಪೂರ್ಣವಾಗಿ ಒಪ್ಪಿಸಿಕೊಂಡು ಕಾವ್ಯಸೇವೆ ಮಾಡುತ್ತಾ ಬರುತ್ತಿದ್ದಾರೆ.

ಜೋಗೀರಣ್ಣನ ಕಲಾಸೇವೆ ಅರವತ್ತು ವರ್ಷಗಳಿಗೂ ಅಧಿಕವಾದುದು. ತಾತ ದಾಸಣ್ಣನಿಂದ ಕಲಿತ ಈ ಕಲೆಯನ್ನು ಇನ್ಯಾರೂ ಕಲಿತಿಲ್ಲ, ಹಾಡುವುದಿಲ್ಲ. ಗೊಲ್ಲರಹಟ್ಟಿಯಲ್ಲಿ ಪುರಾಣ, ಕಥನ, ಸೋಬಾನೆ, ಕೋಲುಪದ ಮಾಮೂಲಿನ ಪ್ರಸಂಗಗಳು. ಜುಂಜಪ್ಪ, ಚಿತ್ರದೇವರು, ಕಾಟಂ ದೇವರು, ಕ್ಯಾತೆ ದೇವರು, ಪಾತೆ ದೇವರು ಈ ಮುಂತಾದ ದೈವಸಂಬಂಧಿ ಕಥನವನ್ನು ರಾತ್ರಿ ಪೂರಾ ಹಾಡುತ್ತಾರಾದರೂ, ಮಾಗೋಡಿನ ರಂಗನಾಥನನ್ನು ವಸ್ತುವನ್ನಾಗಿಸಿಕೊಂಡು ಕಾವ್ಯ ಹಾಡುವ ಜನರೇ ಸಿರಾ ತಾಲ್ಲೂಕಿನಲ್ಲಿ ಇಲ್ಲದಿರುವುದನ್ನು ಕಾಣಬಹುದು. ಅಂಥ ವಿರಳ ಹಾಗೂ ಅಪರೂಪದ ಕಲಾವಿದ ಮಾಗೋಡು ಜೋಗೀರಣ್ಣ. ಮೈಸೂರು, ತಮಿಳುನಾಡು, ಆಂಧ್ರ, ಶಿವಮೊಗ್ಗ, ದಾವಣಗೆರೆ ಇಲ್ಲೆಲ್ಲಾ ಕಾವ್ಯ ಹಾಡುವ ಮೂಲಕ ಅಪಾರ ಜನಮೆಚ್ಚುಗೆ, ದೈವಮೆಚ್ಚುಗೆ ಎರಡಕ್ಕೂ ಪಾತ್ರವಾಗಿರುವ ಇವರು ಮಾಗೋಡು ರಂಗನಾಥನ ಕಾವ್ಯ ಹಾಡಬಲ್ಲ ಏಕೈಕ ಹಾಗೂ ಕೊನೆಯ ಕೊಂಡಿಯಾಗಿರುವುದು ವಿಶೇಷವಾಗಿದೆ.

### ಗಣೆ ವಾದಕ ಈರದೊಡ್ಡಯ್ಯ

ಸಿರಾ ತಾಲ್ಲೂಕು ಬಂಗಾರಿಹಟ್ಟಿಯ ಈರದೊಡ್ಡಯ್ಯ ತುಮಕೂರು ಜಿಲ್ಲೆಯ ಅಪರೂಪದ ಗಣೆವಾದಕ. ತಂದೆ ಬುಡ್ಡದೊಡ್ಡಯ್ಯ, ತಾಯಿ ದೊಡ್ಡಮ್ಮ ಇವರಿಗೆ ಒಬ್ಬ ಗಂಡುಮಗ, ನಾಲ್ವರು ಹೆಣ್ಣುಮಕ್ಕಳು. 80 ವರ್ಷ ವಯಸ್ಸಿನ ಈರದೊಡ್ಡಯ್ಯ ಗಣೆ ಕಲೆಯನ್ನು ಕಲಿತದ್ದು ಬೇವಿನಹಳ್ಳಿ ದೇವರಹಟ್ಟಿ ನಾಗಣ್ಣನವರಿಂದ. ಕುರಿ ಮೇಯಿಸುತ್ತಾ ಊರೂರು ವಲಸೆ ಹೋಗುವಾಗ, ರಾತ್ರಿ ಕುರಿಮಂದೆ ತಡೆಯುವಾಗ, ಕಳ್ಳಕಾಕರ, ಕ್ರೂರ ಪ್ರಾಣಿಗಳಿಂದ ಕುರಿಯ ರಕ್ಷಣೆಯ ಹಿನ್ನೆಲೆಯಲ್ಲಿ ಕಾಡುಗೊಲ್ಲರು ಯಾವುದಾದರೂ ಸಾಂಸ್ಕೃತಿಕ ಚಟುವಟಿಕೆಯ ಮೂಲಕ ರಾತ್ರಿಯೆಲ್ಲಾ ಎದ್ದಿರಲೇ ಬೇಕಾಗುತ್ತದೆ. ಈ ಕಾರಣಕ್ಕಾಗಿಯೇ ಗಣೆವಾದನವನ್ನು ಈರದೊಡ್ಡಯ್ಯ ಅಭ್ಯಾಸ ಮಾಡಿದ್ದಾರೆ. ಈರದೊಡ್ಡಯ್ಯ ತಮ್ಮ 10ನೇ ವಯಸ್ಸಿನಿಂದ ಕೋಲಾಟ, ಯಕ್ಷಗಾನ ಹಾಗೂ ಜನಪದ ಕಾವ್ಯ ಹಾಡುಗಾರಿಕೆಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ನೂರಾರು ಯುವಕರಿಗೆ ಕೋಲಾಟ ಕಲೆಯನ್ನು ಕಲಿಸಿದ್ದಾರೆ. ಕೊರವಂಜಿ ಕೋಲು, ಗಣಮುಖನ ಸ್ತುತಿ, ಜುಂಜ್ಜನ ಕೋಲು, ಚಿತ್ರದೇವರ ಪದ, ಬೇವಿನಹಳ್ಳಿ ಕರಿಯಮ್ಮ, ರಂಗಪ್ಪನ ಮೇಲೆ ಪದ ಕಟ್ಟಿ ಕೋಲುಹಾಡುಗಳಲ್ಲಿ ಹಾಡುವುದು ಈತನ ವಿಶೇಷವಾಗಿದೆ. ಮದುವೆ,

ಜಾತ್ರೆ, ದೇವರ ಉತ್ಸವಗಳಲ್ಲಿ ಊರಿಂದ ಊರಿಗೆ ಹೋಗಿ ಕೋಲುಮೇಳ ನಡೆಸುವುದು ಇವರಿಗೆ ರೂಢಿಯಾಗಿದೆ. ಇವರೊಂದಿಗೆ ಬಂಗಾರಿಹಟ್ಟಿ, ಗಾಣದಹುಣಸೆ, ಎರೆಕಟ್ಟೆ, ಕಿಲಾರದಹಳ್ಳಿ, ಬುಕ್ಕಾಪಟ್ಟಣ ಈ ಮೊದಲಾದ ಕಡೆಯ ಯುವಕರಿಗೂ ಕೋಲಾಟ ಪದಗಳನ್ನು ಕಲಿಸಿಕೊಟ್ಟಿದ್ದಾರೆ. ಇವರ ಶಿಷ್ಯರು ಹಲವಾರು ಕಡೆ ಕೋಲು ಪ್ರದರ್ಶನಕ್ಕೆ ಹೋಗಿ ಬರುವ ಮೂಲಕ ಕಲಾ ಪ್ರದರ್ಶನ ಪ್ರೇರಕರಾಗಿದ್ದಾರೆ. ಇವರು ಕರ್ನಾಟಕ ರಾಜ್ಯೋತ್ಸವ, ಗಣರಾಜ್ಯೋತ್ಸವ ಈ ಮೊದಲಾದ ಸಾಂಸ್ಕೃತಿಕ ಹಬ್ಬದ ಸಂದರ್ಭದಲ್ಲಿ ಶಾಲೆಗಳಿಗೆ ತೆರಳಿ ಗಣ್ಯರ ಮುಂದೆ ಕೋಲುಮೇಳ ನಡೆಸಿ, ಅವರಿಂದ ಸೈ ಅನ್ನಿಸಿಕೊಳ್ಳುವ ವಿಶೇಷತೆಯನ್ನು ದೊಡ್ಡಯ್ಯನವರ ನೇತೃತ್ವದಲ್ಲಿ ನಡೆಯುತ್ತಿದೆ. ಗಣೆವಾದಕರಾದ ದೊಡ್ಡಯ್ಯನವರು ಭಾಗವಂತಿಕೆ, ವೇಷದಾರಿಕೆಯಲ್ಲಿ ಪರಿಣಿತರು. ಸೂತ ಪುತ್ರ, ವಿರಾಟಪರ್ವ, ರಾಮಾಂಜನೇಯ ಯುದ್ಧ ಈ ಮೊದಲಾದ ಯಕ್ಷಗಾನ ಪ್ರಸಂಗಗಳಿಗೆ ಹಿಮ್ಮೇಳ ಭಾಗವತರಾಗಿ, ಪಾತ್ರಧಾರಿಗಳಾಗಿಯೂ ಕಾರ್ಯನಿರ್ವಹಣೆ ಮಾಡಿದ್ದಾರೆ.

ಗಣೆವಾದಕರ ಕೊರತೆ ಎದುರಿಸುತ್ತಿರುವ ಇತ್ತೀಚಿನ ದಿನಗಳಲ್ಲಿ ಜನಪದ ಮಹಾಕಾವ್ಯಗಳ ಹಾಡುಗಾರಿಕೆಗೆ ಆಸರೆಯಾಗಿರುವ ಗಣೆವಾದಕ ಶ್ರೀ ಬಂಗಾರಿಹಟ್ಟಿ ದೊಡ್ಡಯ್ಯ ತಮ್ಮ ಮಗನಿಗೂ ಕೋಲುಪದ ಹಾಡುಗಾರಿಕೆ ಹೇಳಿಕೊಟ್ಟಿದ್ದಾರೆ. ಆದರೆ ಗಣೆವಾದನ ಕಲಿತಿಲ್ಲ. ಗಣೆವಾದನದ ಕಲಿಕೆಯೂ ಕಷ್ಟ. ನಾಭಿಯಿಂದ ಉಸಿರನ್ನು ಬಿಗಿಹಿಡಿದು ನಿಧಾನವಾಗಿ ಗಣೆಯ ರಂಧ್ರದ ಮೂಲಕ ಬಿಡುತ್ತಾ ಆ ಉಸಿರಿಗೆ ನಾದವಾಗಿ ಹಾಡು ಬಾರಿಸುವುದು ತುಸು ಕಷ್ಟದ ಕೆಲಸ. ಇಂಥ ಪರಿಶ್ರಮವಾದುದರಿಂದಾಗಿಯೇ ಇಂದು ಗಣೆ ಕಲೆ ಮಾಯವಾಗುತ್ತಿದೆ. ಇಂಥ ಅಪೂರ್ವ ದೇಶೀಕಲೆಯನ್ನು ಸಮರ್ಥವಾಗಿ ಮುನ್ನಡೆಸುತ್ತಿರುವ ಚಿಕ್ಕದೊಡ್ಡಯ್ಯ ಇಂದು ಹಣ್ಣಾಗಿದ್ದಾರೆ. ಆದರೆ ಗಣೆ ಊದುವ ಉತ್ಸಾಹ ತಗ್ಗಿಲ್ಲ.

**ಮೊದಲೂರು ದಾಸರಹಳ್ಳಿ ದಾಸಪ್ಪ**

ಜುಂಜಪ್ಪನ ಕಾವ್ಯ ಹಾಡುಗಾರರಾದ ಶ್ರೀ ದಾಸಪ್ಪನವರಿಗೆ ಎಪ್ಪತ್ತೈದು ವರ್ಷಗಳ ಪ್ರಾಯ. ಕಾಡುಗೊಲ್ಲರ ಸಂಪ್ರದಾಯ, ನೇಮ-ನಿಷ್ಠೆಗಳನ್ನು ನಿರಂತರವಾಗಿ ಪಾಲಿಸಿಕೊಂಡು ಬರುತ್ತಿರುವ ದಾಸಣ್ಣ ಕಟ್ಟೆಮನೆಯ ದಳವಾಯಿ. ನ್ಯಾಯ ನಿರ್ಣಯಗಳಲ್ಲೂ ಇವರು ಪ್ರಸಿದ್ಧರು. ಕುರಿಗಾರಿಕೆ ಇವರ ಪ್ರಧಾನ ಕಸುಬು.

ಒಬ್ಬ ಗಂಡುಮಗ, ಮೂವರು ಹೆಣ್ಣುಮಕ್ಕಳ ತಂದೆ. ಕುರಿಮಂದೆಯೊಂದಿಗೆ ಪರಸ್ಥಳದ ಬದುಕು. ಜುಂಜಪ್ಪ, ಕಾಟಂಲಿಂಗ ಹಾಗೂ ಚಿತ್ರದೇವರ ಮೇಲೆ ಪದ ಹಾಡುತ್ತಾರೆ. ಗಣೆ

ಊದುತ್ತಾರೆ. ಜುಂಜಪ್ಪನ ಕಾವ್ಯವನ್ನು ಸಮಗ್ರವಾಗಿ ಹಾಡುವ ಈ ಕಲಾವಿದರು ರಾಮಾಯಣ, ಮಹಾಭಾರತ ಕುರಿತ ಕಥನಗೀತೆಗಳನ್ನು ಹಾಡಿದ್ದಾರೆ. ಇವರು ಹಾಡಿರುವ ಗೀತೆಗಳನ್ನು ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ ಸಂಗ್ರಹಿಸಿದ್ದಾರೆ.

ಕರ್ನಾಟಕ ಸರ್ಕಾರ 29.03.2007 ರಲ್ಲಿ ಮಲೆಯ ಮಹದೇಶ್ವರನ ಬೆಟ್ಟದಲ್ಲಿ ಏರ್ಪಡಿಸಿದ್ದ ಜನಪದ ಮಹಾಕಾವ್ಯ ಕುರಿತ ಸಂಶೋಧನಾ ಕಮ್ಮಟದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ಜಾನಪದ ಅಕಾಡೆಮಿಯು ಏರ್ಪಡಿಸಿದ್ದ ಜನಪದ ಕಲೋತ್ಸವಗಳಾದ ಪಾವಗಡ, ಸಿದ್ಧಗಂಗೆ, ಮಡಕಶಿರಾ ಇಲ್ಲಿ ಭಾಗವಹಿಸಿದ್ದಾರೆ.

ಇವರೊಂದಿಗೆ ಕರೆಕಲ್ಲಟ್ಟಿ ದೊಡ್ಡಯ್ಯ, ದಾಸರಹಳ್ಳಿ ಚಿಕ್ಕಣ್ಣ ಗಣೆ ಊದುವ ಕಲಾವಿದರು.

ಕಳುವರಹಳ್ಳಿಯ ತಳವಾರ ತಮ್ಮಣ್ಣ, ಮಣೆಗಾರ ದಾಸಣ್ಣ, ರತ್ನಸಂದ್ರ ಗೊಲ್ಲರಹಟ್ಟಿ ಹಾವಿನಯ್ಯ, ಶ್ರೀರಂಗಯ್ಯ, ಬೇವಿನಹಳ್ಳಿಯ ವಿಭೂತಿ ತಿಮ್ಮಣ್ಣ, ಪದ ಹೇಳುವ ತಿಮ್ಮಣ್ಣ, ದೇವರಹಟ್ಟಿ ನಂಜಪ್ಪಯ್ಯ, ಜುಂಜಪ್ಪನ ಮೇಲೆ ಪದ ಹೇಳುವ ಪ್ರಮುಖ ಕಲಾವಿದರು.

## ಚೌಡಿಕೆ ಮೇಳದ ಕಲಾವಿದರು

**ನಿಡುಗಟ್ಟೆ ರಾಮಣ್ಣ:**




ಸಿರಾ ತಾಲ್ಲೂಕು ಹುಲಿಕುಂಟೆ ಹೋಬಳಿಗೆ ಸೇರಿದ ನಿಡಗಟ್ಟೆ ರಾಮಣ್ಣನವರ ಹುಟ್ಟೂರು. 1940 ರಲ್ಲಿ ಹುಟ್ಟಿದ ಓದು ಬರಹ ಕಲಿಯದ ಆದರೆ ಕಲಿತವರನ್ನು ಮೀರಿಸುವ ಚಮತ್ಕಾರಿಕ ಕತೆ ಹೇಳುವ ಅಪರೂಪದ ಕಲಾವಿದ.

ಚರ್ಮ ಹದಮಾಡುವ ಕಾಯಕದ ಮಾರಣ್ಣನವರಿಗೆ ಹುಟ್ಟಿದ ಇಬ್ಬರು ಗಂಡುಮಕ್ಕಳಲ್ಲಿ ರಾಮಣ್ಣ ಮೊದಲನೆಯವರು. ಮೊದಮೊದಲು ಜೀತಗಾರರಾಗಿ ಬೆಜ್ಜಿಹಳ್ಳಿ ಯಲ್ಲಿದ್ದು, ನಂತರ ಎಲ್ಲಮ್ಮನ ಜೋಗಿಯಾಗಿ ನಿಡುಗಟ್ಟೆಗೆ ಬಂದರು. ತಮ್ಮ ಜೀತಗಾರಿಕೆಯ ಲ್ಲಿದ್ದ ಅವಧಿಯಲ್ಲಿಯೇ ಹಿರಿಯೂರು ಮೂಲದ 'ಹೊನ್ನಾರಪ್ಪ' ಎಂಬ ಗುರುಗಳ ಮೂಲಕ

ರೇಣುಕೆ ಎಲ್ಲಾದೇವಿಯ ಪದಗಳನ್ನು, ಚೌಡಿಕೆ ವಾದ್ಯ ಬಾರಿಸುವುದನ್ನು ಕಲಿತರು. ಒಂದು ಗಂಡು ಎರಡು ಹೆಣ್ಣು ಮಕ್ಕಳಿರುವ ರಾಮಣ್ಣ ಇಂದು ಚೌಡಿಕೆ ರಾಮಣ್ಣನಾಗಿ ರೂಪಾಂತರ ಹೊಂದಿದ್ದಾರೆ. ಜೊತೆಗೆ ಸಿರಾ, ಪಾವಗಡ, ಪರಶುರಾಮಪುರ, ಚಳ್ಳಕೆರೆ, ಹಿರಿಯೂರು ಈ ಭಾಗಗಳಲ್ಲಿ ಚೌಡಿಕೆ ವಾದನದ ಜೊತೆಗೆ ಸೌದತ್ತಿ ಎಲ್ಲಮ್ಮನ ಭಕ್ತರ ಕುಲಗುರುವಾಗಿ ಯೂ ಪವಿತ್ರ ಸ್ಥಾನಮಾನವನ್ನು ಶ್ರೀ ರಾಮಣ್ಣ ಪಡೆದಿದ್ದಾರೆ.

ರಾಮಣ್ಣ ಸೀರ್‍ಯಾದ ರಂಗಣ್ಣ, ಸರ್ಜಪ್ಪನಾಯಕ, ಮದಕರಿನಾಯಕ ಈ ಸಾಂಸ್ಕೃತಿಕ ವೀರರ ಕತೆಗಳನ್ನು ಚೌಡಿಕೆ ವಾದನದೊಂದಿಗೆ ಶೃತಿ ಬೆರೆಸಿ ಮಧುರವಾಗಿ ಹಾಡುತ್ತಾರೆ. ಈ ಬಗೆಗೆ ಬೆಳಗು ಹರಿಯುವವರೆಗೂ ಕತೆ ಮಾಡುತ್ತಾರೆ. ಹೀಗೆ ಪಾಳೇಗಾರಿಕೆ ವೀರ ಕಥನಗಳನ್ನು ಹಾಡುವ ಚೌಡಿಕೆ ಸಂಪ್ರದಾಯದ ಕಲಾವಿದರಲ್ಲಿ ರಾಮಣ್ಣ ತುಂಬಾ ವಿಶಿಷ್ಟವೂ, ಅಪರೂಪವೂ ಆದ ಕಲಾವಿದರು. 'ಅಸಾದಿ' ಕಲೆಯೂ ಇವರಿಗೆ ಸಿದ್ಧಿಸಿದೆ. ಏಳೂರು ಮಾರಿಜಾತ್ರೆಯಲ್ಲಿ ರಾಮಣ್ಣನಿಗೆ ಎಲ್ಲಿಲ್ಲದ ಗೌರವ. ಮಾರಿ ಕರೆಯುವ ಹಾಗೂ ಸಾಗುಹಾಕುವ ವೇಳೆಗೆ ಅಸಾಧಿ ರಾಮಣ್ಣನ ಆವೇಶ, ಕುಣಿತ, ದಣಿವರಿಯದೆ ತಲ್ಲೀನವಾಗಿ ಹಾಡುವ ರೀತಿ ಅದ್ಭುತವಾದುದು. ರಾಮಣ್ಣನ ದೃಷ್ಟಿಯಲ್ಲಿ ಮಾರಮ್ಮ 'ಮಾದಿಗರಿಗೆ' ವಂಚಕಿ. ತಮ್ಮ ಕುಲಪುರುಷರ ವಂಶವನ್ನೇ ನಾಶಮಾಡಿದ ಚಂಡಿ. ಅಂಥ ಮಾರಮ್ಮನ ಮೆರವಣಿಗೆ, ಅಲಂಕಾರ, ಅರಿಶಿನ ಕುಂಕುಮ ಸೌಭಾಗ್ಯ ಏಕೆ ಬೇಕು ಎಂದೇ ದೇವತೆಗೆ ಛೇಡಿಸುತ್ತಾರೆ. ಜೊತೆಗೆ ಮೆರವಣಿಗೆ ಹೊರಟ ದೇವತೆಯ ಮುಂದೆ ನಿಂತು ಚೌಡಿಕೆ ಬಾರಿಸುತ್ತಾ, ವಾಚಾನುವಾಚವಾಗಿ ನಿಂದಿಸುತ್ತಾರೆ. ಹೀಗೆ ನಿಂದಿಸುತ್ತಾ, ಕುಣಿಯುತ್ತಾ ಒಮ್ಮೊಮ್ಮೆ ಅಳುತ್ತಾ ದುಃಖ, ಕೋಪ, ಸಿಟ್ಟು, ತಾಪಗಳ ಆರ್ಭಟಕ್ಕೆ ದೇವರನ್ನು ಹೊತ್ತವರು ಉದ್ರೇಕದಿಂದ ಮುನ್ನುಗ್ಗಿ ಪ್ರೇಕ್ಷಕ ಭಕ್ತರ ಎದುರು ಆವೇಶ, ಕೋಪಗೊಂಡು ರಂಗೇಳುವುದು ಇಲ್ಲಿನ ಸಾಮಾನ್ಯ ಚಿತ್ರ. ದೇವರ ಈ ಬಗೆಯ ರೌದ್ರಾವತಾರದ ಪ್ರೇರಕ ಶಕ್ತಿ ಚೌಡಿಕೆ ರಾಮಣ್ಣ, ಅಂದು ಆಸಾಧಿ ರಾಮಣ್ಣನೆಂಬುದು ವಿಶೇಷವಾಗಿದೆ.

ಚೌಡಿಕೆ ರಾಮಣ್ಣ ಒಂದು ರೀತಿಯಲ್ಲಿ ಬಹುಕಲಾ ವಲ್ಲಭ. ಕೋಲಾಟ, ಯಕ್ಷಗಾನ, ಸಾಮಗಾನ ಈ ಕಲೆಗಳಲ್ಲಿ ಸಮಾನ ಆಸಕ್ತಿ ಬೆಳೆಸಿಕೊಂಡವರು. ಯಕ್ಷಗಾನವೆಂದರೆ ಪ್ರಾಣ ಬಿಡುವಷ್ಟು ಪ್ರೀತಿ ಬೆಳೆಸಿಕೊಂಡಿರುವ ರಾಮಣ್ಣನಿಗೆ ಯಕ್ಷಗಾನದಲ್ಲಿ ಭಾಗವತರೊಂದಿಗೆ ಹಿಮ್ಮೇಳ ಹಾಡುವುದು ಬಹು ಪ್ರಿಯವಾದ ಕೆಲಸ. ಜೊತೆಗೆ, ದ್ರೌಪದಿ ಸ್ವಯಂವರ, ಶ್ರೀಕೃಷ್ಣ ಪಾರಿಜಾತ, ಕರ್ಣಾರ್ಜುನರ ಕಾಳಗ ಇವುಗಳಲ್ಲಿ ದ್ರೌಪದಿಯ ಪಾತ್ರದ ಮೂಲಕ ಅತೀವ ಗಮನ ಸೆಳೆದ ಯಕ್ಷಗಾನ ಕಲಾವಿದರೂ ಹೌದು. ರೇಣುಕಾ ಎಲ್ಲಮ್ಮ, ಮಾರೆಮ್ಮನ ಕತೆಗಳನ್ನು ಸಮಗ್ರವಾಗಿ ಹಾಡುವ ಏಕೈಕ ಕಲಾವಿದರೆಂಬ ಹಿ

ರಿಮೆಗೂ ಪಾತ್ರರಾಗಿರುವ ರಾಮಣ್ಣನಿಗೆ ಇಂದಿಗೂ ಇರಲಿಕ್ಕೆ ಒಂದು ಪುಟ್ಟ ಗುಡಿಸಲೇ ಸೋಪ್ತಿ. ಹಾಡು ಹಾಡುತ್ತಲೇ ಗೂರಲು-ಕಫ ಕಟ್ಟಿಕೊಂಡು ಕಣ್ಣು ಪಿಳಪಿಳನೆ ಬಿಡುತ್ತ ಸ್ವಲ್ಪ ಸಾವರಿಸಿಕೊಂಡು ಧ್ವನಿ ಎತ್ತಿ ಹಾಡುವ ಕಲಾ ಮೋಡಿಗಾರ.

**ದ್ವಾರನಕುಂಟೆ ಪಾತಲಿಂಗಪ್ಪ:**

ತುಮಕೂರು ಜಿಲ್ಲೆ ಸಿರಾ ತಾಲ್ಲೂಕಿನ ಪಾತಲಿಂಗಪ್ಪ ಬಹುಮುಖಿ ವ್ಯಕ್ತಿತ್ವದ ಚೌಡಿಕೆ ಕಲಾವಿದ. ಕಳೆದ 70 ವರ್ಷಗಳಿಂದಲೂ ಚೌಡಿಕೆ ಕಲೆಯನ್ನು ಬದುಕಿನ ಭಾಗವೆಂದು ನಂಬಿ, ವೃತ್ತಿ ಕಲೆಯನ್ನಾಗಿಸದೆ, ಹವ್ಯಾಸಿ ಕಲೆಯನ್ನಾಗಿಸಿ ಕರ್ನಾಟಕದ ಉದ್ದಗಲಕ್ಕೂ ಚೌಡಿಕೆ ಕಲೆಯನ್ನು ಪ್ರಸಾರ ಮಾಡಿದವರು.

ಕೂಲಿಮಠದಲ್ಲಿ ಎರಡನೇ ತರಗತಿಯವರೆಗೆ ಓದಿರುವ ಇವರು, ಅಮರಕೋಶ, ರೇಣುಕೆ ಎಲ್ಲಮ್ಮ, ದೇವಿಪುರಾಣ ಮೊದಲಾದ ಧಾರ್ಮಿಕ ಕಲಾಕೃತಿಗಳನ್ನು ಕುರಿತು ಸಮಗ್ರವಾಗಿ ಹಾಡುವುದು ಇವರ ವಿಶೇಷ. ರೇಣುಕೆ ಎಲ್ಲಮ್ಮನ ಕತೆ ಹಾಡುವುದು ಇವರ ವಿಶೇಷ. ದ್ವಾರನಕುಂಟೆಯ ರೈತ ಕುಟುಂಬದಲ್ಲಿ ಜನಿಸಿದ ಇವರು, ಕಂಬಳಿ ನೇಯ್ಗೆ ಇವರ ಕುಲ ಕಸುಬು. ಕೃಷಿ ಮೂಲ ರೈತಾಪಿ ಬದುಕು. ಆದರೆ ನೇಯ್ಗೆಯ ಜೊತೆಗೆ ಚೌಡಿಕೆಯನ್ನು ಪ್ರಧಾನ ನೆಲೆಯನ್ನಾಗಿ ಮಾಡಿಕೊಂಡು ರಾಜ್ಯಾದ್ಯಂತ ಸುತ್ತಿದವರು.

ಯಕ್ಷಗಾನ, ತತ್ವಪದ, ಕೋಲಾಟ ಪದಗಳನ್ನು ಸೊಗಸಾಗಿ ಹಾಡುವ ಪಾತಲಿಂಗಪ್ಪ, ಯಕ್ಷಗಾನ ಕಲಾವಿದರು. ಮಹಿಷಾಸುರ, ರಾವಣ, ಶ್ರೀರಾಮ, ಭೀಮ ಈ ಮೊದಲಾದ ಪಾತ್ರಗಳಿಂದ ಜನಾದರ ಗಳಿಸಿದ ಹಿರಿಯ ಕಲಾವಿದರು. ಇವರ ಚೌಡಿಕೆ ವಾದನಕ್ಕೆ ಸರಿಜೋಡಿಯಾದವರು ಡಿ.ಕೆ.ಮಹಲಿಂಗಪ್ಪನವರು. ಕರೇರಂಗಪ್ಪ ನವರ ಮಗನಾದ ಮಹಲಿಂಗಪ್ಪ, ಪಾತಲಿಂಗಪ್ಪನವರಿಗೆ ಚೌಡಿಕೆಯ ಶಿಷ್ಯ, ಗೆಳೆಯ, ಸಖ ಎಲ್ಲವೂ ಆಗಿದ್ದರು.

ಕರ್ನಾಟಕ ಸರ್ಕಾರದ ಹಲವು ಸಾಂಸ್ಕೃತಿಕ ಸಭೆ, ಸಮಾರಂಭಗಳಲ್ಲಿ ಆಹ್ವಾನಿತ ಕಲಾವಿದರಾಗಿ ಹಾಡುತ್ತಿದ್ದ ಚೌಡಿಕೆ ಪಾತಲಿಂಗಪ್ಪ, ಸಿರಾ, ಹಿರಿಯೂರು, ಧರ್ಮಪುರ, ಕೊರಟಗೆರೆ, ಮಧುಗಿರಿ, ಪಾವಗಡ ಇಲ್ಲೆಲ್ಲಾ ಎಲ್ಲಮ್ಮದೇವಿಯ ಭಕ್ತರ ಮನೆಯಲ್ಲಿ ರಾತ್ರಿಯಿಂದ ಬೆಳಗಿನ ತನಕ ದೇವಿಕತೆ ಮಾಡುತ್ತಿದ್ದ, ಅಪಾರ ಜನಮೆಚ್ಚಿನ ಕಲಾವಿದರಾಗಿದ್ದರು. ಕಲ್ಪತರು ಉತ್ಸವ ಮಧುಗಿರಿ, ದುರ್ಗದ ಉತ್ಸವ, ಚಿತ್ರದುರ್ಗ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಚಿತ್ರದುರ್ಗ ಜಿಲ್ಲೆ ಹರ್ತಿಕೋಟೆ, ಹಾಗೂ ಚಳ್ಳಕೆರೆ ತಾಲ್ಲೂಕು ಪರಶುರಾಮಪುರ ಹಾಗೂ ಪಾವಗಡದಲ್ಲಿ ನಡೆದ ಗಡಿನಾಡ ಜಾನಪದ ಉತ್ಸವ ಸಮಾರಂಭಗಳಲ್ಲಿ ಭಾಗವಹಿಸಿದ್ದರು. ಇವರ ಹಾಡುಗಳನ್ನು

ಹೆಚ್.ಎಲ್.ನಾಗೇಗೌಡ ಸಂಗ್ರಹಿಸಿದ್ದಾರೆ. ಆದರೆ 'ಪುಸ್ತಕ ರೂಪದಲ್ಲಾಗಲೀ ಅಥವಾ ನನ್ನ ಹೆಸರಿನ ಪದ್ಯವಾಗಲಿ ಬರಲಿಲ್ಲ ಎನ್ನುವುದು, ನನ್ನ ಹಾಡು ವ್ಯರ್ಥ' ಎಂಬ ಕೊರಗು ಸದಾ ವ್ಯಕ್ತಪಡಿಸುತ್ತಲೇ, ಕರೆದಾಗ, ಸಮಯ ಸಿಕ್ಕಷ್ಟು ಕಾಲ ಅತ್ಯಂತ ಸೊಗಸಾಗಿ, ಯಾವುದೇ ಬಿಗುಮಾನ-ಹೆಗ್ಗಳಿಗೆ ಇಲ್ಲದೆ ಹಾಡುವ, ಸಮಯಾನುಸಾರ ಸಂಭಾವನೆಯನ್ನು ನಿರೀಕ್ಷಿಸದೆ ಹಾಡುತ್ತಿದ್ದ ಅಪರೂಪದ ಕಲಾವಿದರು.

ಪಾತಲಿಂಗಪ್ಪನವರು 2006 ನೇ ಜುಲೈನಲ್ಲಿ ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹತ್ತುದಿನಗಳ ಕಾಲ ನಡೆಸಿದ, ಚೌಡಿಕೆ ಕಲಾವಿದರ ಕಮ್ಮಟದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ, ಶಿಬಿರಾರ್ಥಿಗಳಿಗೆ ಚೌಡಿಕೆ ಪದ ಹಾಗೂ ಚೌಡಿಕೆ ವಾದ್ಯ ನುಡಿಸುವುದನ್ನು ಹೇಳಿಕೊಟ್ಟವರು. ಇವರ ಜೊತೆಗೆ ಡಿ.ಕೆ. ಮಹಲಿಂಗಪ್ಪನವರೂ ಭಾಗವಹಿಸಿದ್ದರು.

ಜನಪದಲೋಕ, ದಸರಾ ಉತ್ಸವ, ಆದಿಚುಂಚನಗಿರಿ ಉತ್ಸವ, ಚಿಕ್ಕನಾಯಕನಹಳ್ಳಿ ಚೌಡಿಕೆ ಬಳಗದ ಗೌರವವೂ ಇವರಿಗೆ ಸಂದಿವೆ. ಚೌಡಿಕೆ ನುಡಿಸುತ್ತಲೇ ಏಕಾಂತದಲ್ಲಿ ಏಕಾಂತವಾದ, ಧ್ಯಾನಸ್ಥ ಸ್ಥಿತಿಯ ಪಾತಲಿಂಗಪ್ಪನವರಿಗೆ ಇಬ್ಬರು ಗಂಡುಮಕ್ಕಳು, ಒಬ್ಬಳು ಮಗಳು. ಮಗ ನಾಗರಾಜ್ ಶಿಕ್ಷಕ, ಇನ್ನೊಬ್ಬರು ರೈತಾಪಿ. ಇವರ್ಯಾರೂ ಚೌಡಿಕೆ ಮುಂದುವರಿಸದಿದ್ದುದು ಪಾತಲಿಂಗಪ್ಪ ಅವರಿಗೆ ಅಸಮಾಧಾನ ತಂದಿದೆ. ಸಜ್ಜನಿಕೆ, ಶ್ರದ್ಧೆ, ಸಂಭಾವ್ಯ ಕಲಾವಿದ ಪಾತಲಿಂಗಪ್ಪ 2006ನೇ ಡಿಸೆಂಬರ್ 8ರಂದು ವಿಧಿವಶರಾದರು. ಇವರ ಸಾವಿನ ಸುದ್ದಿ ತಿಳಿದ ಗೆಳೆಯ ಕಲಾವಿದ ಮಹಲಿಂಗಯ್ಯ ವಾರದೊಪ್ಪತ್ತಿನಲ್ಲಿ ಸಾವನ್ನಪ್ಪಿದರು. ಚೌಡಿಕೆ ಕಲೆಯ ಅಪೂರ್ವ ಕಲಾಕುಡಿಗಳು ಒಂದೇ ತಿಂಗಳಲ್ಲಿ ವಿಧಿವಶರಾದದ್ದು ವಿಪರ್ಯಾಸ.

**ಬೆಜ್ಜಿಹಳ್ಳಿ ತುಪ್ಪಣ್ಣನವರು** ಚೌಡಿಕೆ ಕಲಾವಿದರಾಗಿದ್ದು ಚೌಡಿಕೆ ಬಾರಿಸಿಕೊಂಡು ರೇಣುಕಾ ಯಲ್ಲಮ್ಮನ ಕತೆ ಮಾಡುತ್ತಾರೆ.

## ಯಕ್ಷಗಾನ ಕಲಾವಿದರು

### ಭಾಗವತ ಲಕ್ಷ್ಮೀರಾಮೇಗೌಡ

ತುಮಕೂರು ಜಿಲ್ಲೆ ಸಿರಾ ತಾಲ್ಲೂಕಿನ ಶಾಗದಡು ಗ್ರಾಮದ ಲಕ್ಷ್ಮೀರಾಮೇಗೌಡ ಯಕ್ಷಗಾನ ಭಾಗವಂತಿಕೆಯ ಅಪ್ರಮತಿಮ ಕಲಾವಿದ. ಭಾಗವಂತಿಕೆ, ಹಾಡುಗಾರಿಕೆ, ನೃತ್ಯ ಈ ಕಲಾಪ್ರಕಾರಗಳಲ್ಲಿ ಸೈ ಎನ್ನಿಸಿಕೊಂಡಿರುವ ರಾಮೇಗೌಡ ಅವರಿಗೆ ಇದೀಗ 70 ವರ್ಷ




ವಯಸ್ಸು.

ಕಳೆದ ಆರು ದಶಕಗಳಿಂದಲೂ ಯಕ್ಷಗಾನದ ಒಡನಾಡಿಯಾಗಿ ಬೆಳೆದ ಇವರು ಯಕ್ಷಗಾನವನ್ನು ಶಾಸ್ತ್ರೀಯವಾಗಿ ಕಲಿತವರು. ಶಾಗದಡು ಒಂದು ಕಾಲಕ್ಕೆ ಯಕ್ಷಗಾನ ಕಲೆಯ ತೌರು. ಕಾಲುವೇ ರಂಗಪ್ಪ ಎಂಬ ವೈಷ್ಣವ ಜನಾಂಗದ ಆಚಾರ್ಯರು ಸಿರಾ ಸೀಮೆಯ ಹತ್ತಾರು ಯುವಕರಿಗೆ ಯಕ್ಷಗಾನ ಕಲೆಯನ್ನು ಶಾಸ್ತ್ರೀಯವಾಗಿ ಬೋಧಿಸಿದ ಹಿರಿಯ ಗುರು. ಆರು ತಿಂಗಳುಗಳಿಂದ ಹಿಡಿದು ಒಂದು ವರ್ಷದವರೆಗೆ ಆಶ್ರಮ ಶಾಲೆಯ ಮಾದರಿಯಲ್ಲಿ ಮನೆಯೇ ಯಕ್ಷಗಾನ ವಿದ್ಯಾಲಯ. ಊಟ, ವಸತಿ ನೀಡಿ ಯಕ್ಷಗಾನ ಕಲೆಯನ್ನು ಕಲಿಸುತ್ತಿದ್ದ ಕಾಲುವೆ ರಂಗಪ್ಪ, ಸ್ವತಃ ಹಲವು ಯಕ್ಷಗಾನ ಪ್ರತಿಗಳನ್ನು ರಚಿಸಿದ್ದಾರೆ. ಲಕ್ಷ್ಮೀರಾಮೇಗೌಡರು ಇವರ ಶಿಷ್ಯರು.

ಲಕ್ಷ್ಮೀರಾಮೇಗೌಡ ಊರಿನ ಪಾಟೀಲಗಿರಿಯ ಜೊತೆಗೆ ಶ್ಯಾಗದಡು ಶ್ರೀ ರಾಮದೇವರ ದೇವಸ್ಥಾನದ ಅರ್ಚಕ ಪರಂಪರೆಯ ಕಾಯಕವೂ ಇವರದು. ಸಂಗೀತ, ನೃತ್ಯ, ತಾಳ, ಲಯ, ಮಾತು ಅರ್ಥಪೂರ್ಣವಾಗಿ ರೂಢಿಸಿಕೊಂಡಿರುವ ಸಮರ್ಥ ಯಕ್ಷಗಾನ ಕಲಾವಿದರು. ಸಿರಾ, ಹಿರಿಯೂರು, ಚಿಕ್ಕನಾಯಕನಹಳ್ಳಿ ಈ ಭಾಗಗಳಲ್ಲಿ ಇಂದಿಗೂ ತಿರುಗಾಟದ ಯಕ್ಷಗಾನ ಭಾಗವತರಾಗಿ ಕೆಲಸ ನಿರ್ವಹಿಸುತ್ತಿರುವುದು ವಿಶೇಷ. ಬುಡಕಟ್ಟು ವರ್ಗವಾದ 'ಲಂಬಾಣಿ' ಸಮುದಾಯದ ರಂಗನಹಳ್ಳಿ ತಾಂಡದಲ್ಲಿ ಪ್ರತಿವರ್ಷ 'ವಿರಾಟಪರ್ವ' ಯಕ್ಷಗಾನ ಪ್ರಸಂಗವನ್ನು ಕಳೆದ 40 ವರ್ಷಗಳಿಂದಲೂ ಕಲಿಸುತ್ತಾ ಬಂದಿರುವುದು ಇವರ ವಿಶೇಷ. ಲಂಬಾಣಿ ಪುರಾಣ ಪ್ರಸಂಗದ ಭಾಗವತ ಕಥಾಪ್ರಸಂಗವನ್ನು ಅತ್ಯಂತ ಸುಲಲಿತ ಹಾಗೂ ಸಮರ್ಪಕ ನೃತ್ಯದ ಮೂಲಕ ರಾಮೇಗೌಡರು ಭಾಗವಂತಿಕೆ ನೀಡಿರುವುದು ವಿಶೇಷ.

ಲಕ್ಷ್ಮೀರಾಮೇಗೌಡರು 70 ವರ್ಷಗಳ ಹಿರಿಯ ಜೀವ. ಆದರೂ ಇವರ ಹಾಡುಗಾರಿಕೆಯ ಉತ್ಸಾಹ ತಗ್ಗಿಲ್ಲ. ವರ್ಷದಲ್ಲಿ ಕನಿಷ್ಠ ಐದು ಯಕ್ಷಗಾನ ಪ್ರಸಂಗವನ್ನಾದರೂ ಕಲಿಸುವುದು ಇವರ ವಿಶೇಷವಾಗಿದೆ. ಹಾರ್ಮೋನಿಯಂ, ಮೃದಂಗ ಹಾಗೂ ಕರಪಾಲ ಹಾಡುಗಾರಿಕೆಯ ಕಲಾವಿದರೂ ಆಗಿರುವ ರಾಮೇಗೌಡರು, ಕೋಲಾಟ, ಜನಪದ ಸಂಗೀತದಲ್ಲೂ ಸಾಕಷ್ಟು ಪರಿಶ್ರಮ ಹೊಂದಿದ್ದಾರೆ.

6ನೇ ತರಗತಿಯ ತನಕ ವಿದ್ಯಾಭ್ಯಾಸ, ಅದೂ ಕೂಲಿಮಠದಲ್ಲಿ. ಆದರೆ ರಾಮಾಯಣ, ಮಹಾಭಾರತ, ಭಾಗವತಗಳನ್ನು ಸುಲಲಿತವಾಗಿ ಹಾಡುವ, ಅರ್ಥೈಸುವ ಅಪರೂಪತೆ ಇವರದು. ಕಾಲುವೆ ರಂಗಪ್ಪನವರಿಂದ ಶಾಸ್ತ್ರೀಯವಾಗಿ ಯಕ್ಷಗಾನ ಕಲಿತಿರುವ ಇವರು, ತಮ್ಮ ನಾಲ್ಕು ಜನ ಗಂಡು ಮಕ್ಕಳಲ್ಲಿ ಹಿರಿಯ ಮಗ ರಾಮಕೃಷ್ಣಪ್ಪ ಯಕ್ಷಗಾನ ಕಲೆಯಲ್ಲಿ ಭಾಗವಂತಿಕೆ, ಹಾಡುಗಾರಿಕೆಯಲ್ಲಿ ತೊಡಗಿಸಿ ಕೊಂಡಿದ್ದಾರೆ. ಕೊನೆಯ ಮಗ ಮೃದಂಗ, ಜನಪದ ಸಂಗೀತಗಳಲ್ಲಿ ಆಸಕ್ತಿ, ಕರಪಾಲ ಮೇಳ ಕಲೆಯನ್ನು ಅಭ್ಯಾಸ ಮಾಡುತ್ತಾ, ಮಧುಸೂಧನಾಚಾರಿ ಅವರ ಸಂಗಡ ಹಲವು ಕಡೆ ಕರಪಾಲಮೇಳ ಕಲಾ ಪ್ರಸಾರದಲ್ಲಿ ತೊಡಗಿದ್ದಾರೆ. ಮಕ್ಕಳು ಇನ್ನೂ ಯಕ್ಷಗಾನ ಸೇವೆ ಮಾಡಿ, ನನ್ನ, ನನ್ನ ಗುರು ಕಾಲುವೆ ರಂಗಪ್ಪನವರ ಹೆಸರು ಉಳಿಸಬೇಕು, ಯಕ್ಷಗಾನ ಪ್ರಸಾರ ಮಾಡಬೇಕೆಂಬ ಬಯಕೆಯನ್ನು ವ್ಯಕ್ತಪಡಿಸುತ್ತಾರೆ.

ಲಕ್ಷ್ಮೀರಾಮೇಗೌಡರು ಲವಕುಶರ ಕಾಳಗ, ಭಕ್ತ ಸುಧನ್ವನ ಕಾಳಗ, ದುಶ್ಯಾಸನನ ಕಥೆ, ವಿರಾಟಪರ್ವ, ರುಕ್ಮಿಣಿ ಸ್ವಯಂವರ, ಭಕ್ತ ಮಾರ್ಕಾಂಡೇಯ, ಶಿವಜಲಂಧರ, ಐರಾವತ, ಲಂಕಾದಹನ, ದಕ್ಷಯಾಗ ಮೊದಲಾದ ಹತ್ತು ಯಕ್ಷಗಾನ ಪ್ರಸಂಗಗಳಲ್ಲಿ ಪರಿಣಿತರು. ಇವುಗಳನ್ನು ಪುಸ್ತಕ ನೋಡದೆ, ಯಾವುದೇ ಭಾಗವನ್ನಾದರೂ ನೇರವಾಗಿ ತಕ್ಷಣವೇ ಹಾಡಬಲ್ಲ ಸಾಮರ್ಥ್ಯ ಇವರಿಗಿದೆ. ಇದಲ್ಲದೆ ಕಾಲ, ಸಂದರ್ಭಗಳಿಗೆ ಅನುಸಾರವಾಗಿ ಯಾವ ಪ್ರಸಂಗವನ್ನಾದರೂ ಕಲಿಸುವ ಸಾಮರ್ಥ್ಯ ಹೊಂದಿರುವ ರಾಮೇಗೌಡರು, ಕಲಾಸಂಬಂಧಿ ಗೌರವ, ಪುರಸ್ಕಾರಗಳಿಗೂ ಒಳಗಾಗಿದ್ದಾರೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಯಕ್ಷಗಾನ ತಜ್ಞರಾಗಿ ಕೊನೆಹಳ್ಳಿ ಮುಂತಾದ ಕಡೆ ಕೆಲಸ ಮಾಡಿದ್ದಾರೆ. ಅಂತರ್ ವಲಯ ಜಾನಪದ ಕಲಾಮೇಳಗಳಲ್ಲಿ ಭಾಗವತರಾಗಿ ಭಾಗವಹಿಸಿದ್ದಾರೆ. ಕೊನೆಹಳ್ಳಿಯಲ್ಲಿ ನಡೆದ ಮೂಡಲಪಾಯ ಯಕ್ಷಗಾನ ಭಾಗವತರ ಸಮಾವೇಶದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗಿಯಾಗಿದ್ದಾರೆ.

ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಕಲಾವಿದರಾಗಿಯೂ ಭಾಗವಹಿಸಿರುವ ಲಕ್ಷ್ಮೀರಾಮೇಗೌಡ, ಸುವರ್ಣ ಕರ್ನಾಟಕ ತುಮಕೂರು ಜಿಲ್ಲಾ ವಿಶೇಷ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ತಾಲ್ಲೂಕು - ಜಿಲ್ಲಾ ಹಂತಗಳ ಕಲಾವಿದ ಪ್ರಶಸ್ತಿಗಳನ್ನು ಗಳಿಸಿರುವುದು ಇವರ ಕಲಾ ಹಿರಿಮೆಗೆ ಸಾಕ್ಷಿಯಾಗಿದೆ.

**ಬಂದಕುಂಟೆ ಗೋಪಾಲಯ್ಯ:**

ತುಮಕೂರು ಜಿಲ್ಲೆ ಸಿರಾ ತಾಲ್ಲೂಕಿನ ಗೌಡಗೆರೆ ಹೋಬಳಿಗೆ ಸೇರಿದ ಬಂದಕುಂಟೆ ಗೋಪಾಲಯ್ಯನವರ ಹುಟ್ಟೂರು. 1923 ರಲ್ಲಿ ಜನನ. ಕುಂಚಿಟಿಗ ವರ್ಗಕ್ಕೆ ಸೇರಿದ್ದಾರೆ. ಜನಪದ ಸಂಗೀತ, ಯಕ್ಷಗಾನ, ಸಾಮಗಾನ, ಕೋಲುಮೇಳಗಳಲ್ಲೂ ಖ್ಯಾತಿ ಗಳಿಸಿದ್ದಾರೆ.

ರೈತಾಪಿ ಕುಟುಂಬದ ತಿಪ್ಪಣ್ಣ - ಪುಟ್ಟಮ್ಮ ಅವರ ಐದು ಜನ ಗಂಡುಮಕ್ಕಳಲ್ಲಿ ಮೊದಲನೆಯವರು ಗೋಪಾಲಯ್ಯ. ಇಬ್ಬರು ಸೋದರಿಯರೂ ಇದ್ದಾರೆ. ತನ್ನ ಮೊದಲ ಮಗ ವಿದ್ಯಾವಂತನಾಗಬೇಕೆಂಬ ಆಸೆಯಿಂದ ತಿಪ್ಪಣ್ಣ ಗೋಪಾಲಯ್ಯನವರನ್ನು ಕೂಲಿಮಠಕ್ಕೆ ಸೇರಿಸಿದರು. ಜಟ್ಟಿ ಹನುಮಂತಯ್ಯ ಎಂಬ ಮಠ ಮಾಸ್ತರ ಬಳಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿದ ಗೋಪಾಲಯ್ಯ ನಾಲ್ಕನೇ ತರಗತಿಯವರೆಗೆ ಅಭ್ಯಾಸ ಮಾಡಿದರು. ಮುಂದೆ ಶಾಲಾ ಅಭಾವ, ಹಣಕಾಸಿನ ತೊಂದರೆಯಿಂದಾಗಿ ಶಾಲೆ ಬಿಟ್ಟ ಗೋಪಾಲಯ್ಯ ಸಂಗೀತದತ್ತ ವಾಲಿದರು.

ಶಾಗದಡು ಭಾಗವತ ಕಾಲುವೆ ರಂಗಪ್ಪನವರ ಬಳಿ ಎರಡು ವರ್ಷ ಇದ್ದು ಯಕ್ಷಗಾನವನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದರು. ಕಲೆಯನ್ನು ಕೆಲವರು ಸಂಸರ್ಗ, ಪರಿಸರದಿಂದ ಕಲಿಯುತ್ತಾರೆ. ಕೆಲವರು ಶಾಸ್ತ್ರಬದ್ಧವಾಗಿ ಅಭ್ಯಾಸ ಮಾಡುತ್ತಾರೆ. ಆದರೆ ಗೋಪಾಲಯ್ಯ ನುರಿತ ಭಾಗವತ, ಯಕ್ಷಗಾನ ಲೇಖಕ ಶಾಗದಡು ಕಾಲುವೆ ರಂಗಪ್ಪನವರ ಮನೆಯಲ್ಲಿ 2 ವರ್ಷ ಶಿಷ್ಯವೃತ್ತಿ ಮಾಡಿ ಯಕ್ಷಗಾನದ ಮಟ್ಟು, ತಾಳ, ನೃತ್ಯ ಈ ಎಲ್ಲ ಪ್ರಕ್ರಿಯೆಯನ್ನು ಅಭ್ಯಾಸ ಮಾಡಿದವರು.

ಗೋಪಾಲಯ್ಯನವರಿಗೆ ಇದೀಗ 84ರ ಪ್ರಾಯ. ಈ ಇಳಿವಯಸ್ಸಿನಲ್ಲಿಯೂ ಯಕ್ಷಗಾನದ ಗೀಳು ಬಿಟ್ಟಿಲ್ಲ. ಇದುವರೆಗೆ ಒಂದು ಸಾವಿರಕ್ಕೂ ಹೆಚ್ಚು ಯಕ್ಷಗಾನವನ್ನು ಸಿರಾ, ಮಧುಗಿರಿ, ಹಿರಿಯೂರು, ಚಳ್ಳಕೆರೆ, ಪಾವಗಡ ಭಾಗಗಳಲ್ಲಿಯೂ ಕಲಿಸಿದ್ದಾರೆ. ವರ್ಷದಲ್ಲಿ ಏನಿಲ್ಲವೆಂದರೂ 20 ಪ್ರದರ್ಶನವನ್ನು ಏರ್ಪಡಿಸುವ, ಸಾಂದರ್ಭಿಕ ಕಸುಬುಗಾರಿಕೆ ಇವರದು. ರಾಮನವಮಿ, ಯುಗಾದಿ, ಶಿವರಾತ್ರಿ, ಏಕಾದಶಿ, ಶ್ರಾವಣ ಈ ಮುಂತಾದ ಸಾಂದರ್ಭಿಕ ಹಬ್ಬಗಳಂದು ಒಂದೊಂದು ಗ್ರಾಮದಲ್ಲಿ ಒಂದೊಂದು ಪ್ರಯೋಗ ಏರ್ಪಡಿಸುತ್ತಿದ್ದಾರೆ.

ನುರಿತ ಹಾಗೂ ಹಿರಿಯ ಕಲಾವಿದರ ತಂಡವನ್ನು ಪ್ರತಿಯೊಂದು ಗ್ರಾಮದಲ್ಲೂ ಸೃಷ್ಟಿ ಮಾಡಿರುವುದು ಇವರ ವಿಶೇಷವಾಗಿದೆ.

ಗಿರಿಜಾಕಲ್ಯಾಣ, ರಾಜಾ ಸತ್ಯವ್ರತ, ರತಿಕಲ್ಯಾಣ, ಭಕ್ತ ಮಾರ್ಕಾಂಡೇಯ, ರಾಮ ರಾವಣರ ಯುದ್ಧ, ವಿಕ್ರಮ ಚರಿತ್ರೆ, ವಾಲಿ ಸಂಹಾರ, ಐರಾವತ, ಕರ್ಣಾರ್ಜುನರ ಕಾಳಗ, ದಕ್ಷಯಾಗ, ಕುಶಲವರ ಕತೆ, ವಿರಾಟಪರ್ವ, ಇಂದ್ರಜಿತ್ ಕಾಳಗ ಈ ಮೊದಲಾದ 20 ಯಕ್ಷಗಾನ ಪ್ರಸಂಗಗಳನ್ನು ಪ್ಲಾಟ್‌ನ ಸಹಾಯವಿಲ್ಲದೆ ಕಲಿಸುವುದು ಇವರ ವಿಶೇಷವಾಗಿದೆ.

ಅಪ್ಪಟ ಗಾಂಧಿವಾದಿಯೂ ಆಗಿರುವ ಗೋಪಾಲಯ್ಯ, 1942 ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು. ಈಚಲು ಮರ ಕಡಿಯುವ ಮೂಲಕ ಸಿರಾ ಸೀಮೆಯಲ್ಲಿ ಕ್ರಾಂತಿ ಎಬ್ಬಿಸಿ, ಮಧುಗಿರಿ ನಂತರ ಬಳ್ಳಾರಿ ಜೈಲಿಗೂ ಹೋಗಿಬಂದವರು.

ಜನಪದ ಸಂಗೀತ, ಕೋಲುಮೇಳ, ಫಂಡರಾಪುರ ಭಜನೆ, ಪಾಂಡುರಂಗ ಭಜನೆ ಇವರ ಆಸಕ್ತಿಯ ನೆಲೆಗಳು. ಭಜನೆ ತಂಡವೊಂದನ್ನು ಕಟ್ಟಿ ಸಂಘಟನೆಯಲ್ಲಿಯೂ ತೊಡಗಿಸಿಕೊಂಡಿರುವ ಗೋಪಾಲಯ್ಯ ಯಕ್ಷಗಾನ ಕಲೆಯ ಜೀವಚೇತನ ವ್ಯಕ್ತಿ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಏರ್ಪಡಿಸಿದ್ದ ಸಾಣೆಹಳ್ಳಿಯ ಮೂಡಲಪಾಯ ಯಕ್ಷಗಾನ ಭಾಗವತರ ಸಮಾವೇಶದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. 2006 ರಲ್ಲಿ ತಿಪಟೂರಿನಲ್ಲಿ ಜಾನಪದ ಅಕಾಡೆಮಿ ಏರ್ಪಡಿಸಿದ್ದ ಮುಖವೀಣೆ ಪ್ರಾತ್ಯಕ್ಷಿಕೆ ಹಾಗೂ ಯಕ್ಷಗಾನ ಪ್ರದರ್ಶನದಲ್ಲಿ ಇವರ ಭಾಗವಂತಿಕೆಯ ತಂಡ 'ರಾಜಾ ಸತ್ಯವ್ರತ' ಎಂಬ ಯಕ್ಷಗಾನವನ್ನು ಪ್ರದರ್ಶಿಸಿದ್ದು ವಿಶೇಷವಾಗಿತ್ತು. ಇವರ ಭಜನೆ ಪದಗಳನ್ನು ಡಾ.ಚಿಕ್ಕಣ್ಣ ಯಣ್ಣೆಕಟ್ಟೆ ಸಂಗ್ರಹಿಸಿದ್ದಾರೆ.

**ಭಾಗವತ ತಿಪ್ಪೇಸ್ವಾಮಿ:**

ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕು ಕೇಂದ್ರದ ರಂಗನಾಥ ನಗರದ ಆದಿಕರ್ನಾಟಕ ಕೇರಿಯ ವಾಸಿಯಾದ ಶ್ರೀ ತಿಪ್ಪೇಸ್ವಾಮಿ ಯವರು ತಮ್ಮ ಅಪೂರ್ವ ಹಾಡುಗಾರಿಕೆ, ನೃತ್ಯ, ಮಾತುಗಾರಿಕೆಯಿಂದ ಜನಮನ ಸೆಳೆದ ಹಿರಿಯ ಯಕ್ಷಗಾನ ಭಾಗವತರು. ತಂದೆ ರಂಗಶ್ಯಾಮಯ್ಯ ತಾಯಿ ಸಣ್ಣರಂಗಮ್ಮರವರ ಮಗನಾಗಿ 1940 ರಲ್ಲಿ ಜನಿಸಿದ ತಿಪ್ಪೇಸ್ವಾಮಿ, 4ನೇ ತರಗತಿಯ ತನಕ ವ್ಯಾಸಂಗ ಮಾಡಿದ್ದಾರೆ. ಮಗ ಬೇರೆಯವರ ಮನೆಯಲ್ಲಿ ಜೀತಕ್ಕಿರಬಾರದೆಂದು ಓದಿನ ಬಗೆಗೆ ಅಪಾರ ಪ್ರೀತಿ, ವಿಶ್ವಾಸ ತೋರಿದ ರಂಗಶ್ಯಾಮಯ್ಯ ಮಗನನ್ನು ಶಾಲೆಗೆ ಸೇರಿಸಿದರು. ಆಗಿನ್ನೂ ಅಸ್ಪೃಶ್ಯತೆಯ ಬಿಗಿ ವ್ಯಾಪಕವಾಗಿದ್ದರೂ

ಅದು ತನ್ನ ಬಳಿಗೆ ಸುಳಿಯದಂತೆ ನೋಡಿಕೊಂಡು ಸಂಗೀತ ಕಲಿತರು. ಗುರು ಯಜಮಾನ್ ದುರ್ಗಪ್ಪ ಅವರ ಅತೀವ ಉತ್ಸಾಹ, ವಿದ್ಯಾರ್ಥಿ ತಿಪ್ಪೇಸ್ವಾಮಿಯನ್ನು ಶಾಲೆಯಿಂದ ಸಂಗೀತದ ಕಡೆ ಸೆಳೆಯಿತು. ಮನೆ ಮಠಗಳಿಗಿಂತ ಯಕ್ಷಗಾನ, ಬಯಲುಕತೆ, ಸಂಗೀತ ಸಮಾರಂಭಗಳೇ ಆಗ ಇವರಿಗೆ ಪ್ರಿಯವಾದ ವಸ್ತುಗಳಾಗಿಬಿಟ್ಟಿದ್ದವು. ಹಾಗಾಗಿ ಯಕ್ಷಗಾನ ಕಲೆ, ನೋಟ ಅಭ್ಯಾಸಕ್ಕಾಗಿ ಊರೂರು ಅಲೆದದ್ದೂ ಇದೆ. ಕಾಡಿ, ಬೇಡಿ ಶೂದ್ರರನ್ನು ಸಂಘಟಿಸಿ ಯಕ್ಷಗಾನ ಕಲಿಸಿದ್ದೂ ಇದೆ.

ಕುರುಬರು, ಆದಿ ಕರ್ನಾಟಕದವರು, ಬೇಡರು, ಒಕ್ಕಲಿಗರು ಜಾತಿಭೇದ ಮರೆತು ಇವರ ಭಾಗವಂತಿಕೆಯನ್ನು ಪ್ರೀತಿಸಿದ್ದಾರೆ. ಯಕ್ಷಗಾನ, ಭಾಗವಂತಿಕೆ ಗುರುವಾಗಿ ಸ್ವೀಕರಿಸಿದ್ದಾರೆ. ದೇವಿ ಮಹಾತ್ಮೆ, ಲಕ್ಷ್ಮಣ ಮೂರ್ಛೆ ರಾಮಾಯಣ, ರಾಮಾಂಜನೇಯ ಯುದ್ಧ, ಪಾಂಡುವಿಜಯ, ವಿರಾಟಪರ್ವ, ಕುಶ-ಲವರ ಕಾಳಗ, ಶಶಿರೇಖಾ ಪರಿಣಯ ಇವರು ಇಷ್ಟಪಟ್ಟು ಕಲಿಸಿದ ಯಕ್ಷಗಾನ ಪ್ರಸಂಗಗಳು. ಆಂಧ್ರ - ಕರ್ನಾಟಕ ಗಡಿಯ ಭಾಗವಾದ ಸಿರಾ, ಅಮರಾಪುರ, ರೊಳ್ಳೆ, ಅಗಳಿ, ಮಡಕಶಿರಾ ಈ ಭಾಗಗಳಲ್ಲಿ ಯಕ್ಷಗಾನ ಕಲಿಸಿ ಕನ್ನಡ, ತೆಲುಗು ಭಾಷಾ ಪ್ರೇಮಿಗಳಿಗೆ ಕಲಾ ರಸದೌತಣ ನೀಡಿರುವುದು ಇವರ ವಿಶೇಷ.

ಸಿರಾದ ರಂಗನಾಥನಗರದಲ್ಲಿ ಪ್ರತಿ ವರ್ಷವೂ 45 ವರ್ಷಗಳ ಕಾಲ ನಿರಂತರವಾಗಿ ಸಂಪೂರ್ಣ ರಾಮಾಯಣ ಯಕ್ಷಗಾನವನ್ನು ಶ್ರೀರಾಮನವಮಿಯನ್ನು ನೆಪವಾಗಿಟ್ಟುಕೊಂಡು ಪ್ರದರ್ಶಿಸುತ್ತಾ ಭಾಗವಂತಿಕೆಯನ್ನು ಮುಂದುವರಿಸುತ್ತಾ ಬಂದಿರುವ ತಿಪ್ಪೇಸ್ವಾಮಿ ಅವರಿಗೆ ಇದೀಗ ಅರವತ್ತರ ಪ್ರಾಯ. ನಾಲ್ಕು ಜನ ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳ ತಂದೆ. ಮಕ್ಕಳೂ ಕಲಾವಿದರಾಗಬೇಕೆಂಬ ಹಂಬಲ, ನಿರುತ್ಸಾಹ ಕಲಾವಿದನ ಸಧ್ಯದ ಸ್ಥಿತಿ.

**ಭಾಗವತ ಕಡವಿಗೆರೆ ತಿಮ್ಮಯ್ಯ:**

ಮೂಡಲಪಾಯ ಯಕ್ಷಗಾನಕ್ಕೆ ಕಳೆದ 50 ವರ್ಷಗಳಿಂದಲೂ ಸಾರ್ಥಕ ಸೇವೆ ಸಲ್ಲಿಸುತ್ತಾ ಬಂದಿರುವ ಶ್ರೀ ಪಿ.ತಿಮ್ಮಯ್ಯನವರು ತುಮಕೂರು ಜಿಲ್ಲೆ ಸಿರಾ ತಾಲ್ಲೂಕಿನ ಕಡವಿಗೆರೆಯವರು. ತಂದೆ ಸಣ್ಣ ವೆಂಕಟಪ್ಪ. ಅವಿದ್ಯಾವಂತರಾದರೂ ಯಕ್ಷಗಾನ ಕಲಾವಿದರಾಗಿದ್ದರು. ಅವರ ಪ್ರೇರಣೆ, ಪ್ರಭಾವದಿಂದಾಗಿ ತಿಮ್ಮಯ್ಯನವರು ಯಕ್ಷಗಾನ ಕಲೆಯಲ್ಲಿ ವಿಶೇಷ ಆಸಕ್ತಿ ಬೆಳೆಸಿಕೊಂಡು ಬಂದರು. ಗುಬ್ಬಿ ತಾಲ್ಲೂಕಿನ ಚೇಳೂರು ಹೋಬಳಿ ಅಂಕಸಂದ್ರದ ಲಕ್ಷ್ಮೀನಾರಾಯ ಣಪ್ಪ ಎಂಬುವರ ಮಾರ್ಗದರ್ಶನದಲ್ಲಿ ಯಕ್ಷಗಾನ

ಕಲಾವಿದರಾಗಿ, ಭಾಗವಂತಿಕೆಯನ್ನು ಕಲಿತರು. ಭಾಗವಂತಿಕೆ, ಹಾಡುಗಾರಿಕೆ, ಕುಣಿತ ಹಾಗೂ ಮಾತುಗಾರಿಕೆಯನ್ನು ಶ್ರೀಗುರುಗಳಿಂದ ಅಭ್ಯಾಸ ಮಾಡಿದವರು. 10 ವರ್ಷಗಳ ಕಾಲ 3 ಪಲ್ಲ ರಾಗಿಯನ್ನು ಕೊಟ್ಟು ಯಕ್ಷಗಾನವನ್ನು ಗುರುಪರಂಪರೆಯ ಮೂಲಕ ಕಲಿತವರು.

ತಿಮ್ಮಯ್ಯನವರಿಗೆ ಇದೀಗ 75 ವರ್ಷಗಳ ಪ್ರಾಯ. ಐದು ಜನ ಮಕ್ಕಳನ್ನು ಹೊಂದಿದ್ದಾರೆ. ತರಕಾರಿ, ಹೂವು ವ್ಯಾಪಾರ, ಬೆಳೆಯುವ ಕಾಯಕದಲ್ಲಿ ಇಡೀ ಕುಟುಂಬ ನಿರತವಾಗಿದೆ. ವಯಸ್ಸಾದ ರೂ ಕನಿಷ್ಠ ವರ್ಷಕ್ಕೆ ಒಂದನ್ನಾದರೂ ನಾಟಕ ಆಡಿಸಬೇಕೆಂಬ ಅಚಲವಾದ ವಿಶ್ವಾಸ, ಅಭಿಮಾನ ಗಳಿಂದಾಗಿ ಯಕ್ಷಗಾನವನ್ನು ಕಲಿಸುತ್ತಾ ಬರುತ್ತಿರುವುದು ವಿಶೇಷ.

ಐರಾವತ, ಕೃಷ್ಣಾರ್ಜುನರ ಕಾಳಗ, ಬಾಲಕಾಂಡ ರಾಮಾಯಣ, ಮಯೂರಧ್ವಜ, ದೇವಿ ಮಹಾತ್ಮೆ, ಕರಿಬಂಟನ ಕಾಳಗ, ಲವಕುಶರ ಕಾಳಗ ಇವರು ಈ ತನಕ ಕಲಿಸಿರುವ ಯಕ್ಷಗಾನ ಪ್ರಸಂಗಗಳು. ಒಂದು ಪ್ರಸಂಗವನ್ನು ಕನಿಷ್ಟ 10ಕ್ಕೂ ಹೆಚ್ಚುಬಾರಿ ಕಲಿಸಿ ರಂಗಪ್ರಯೋಗ ಮಾಡಿರುವ ತಿಮ್ಮಯ್ಯನವರಿಗೆ ತುಂಬಾ ಪ್ರಿಯವಾದ ಯಕ್ಷಗಾನ ಐರಾವತ ಪ್ರಸಂಗ. ಮಹಾಭಾರತಕ್ಕೆ ಸಂಬಂಧಿಸಿದ ಈ ಕತೆಯಲ್ಲಿ ಗಾಂಧಾರಿ ಗಜಗೌರಿ ಆಚರಣೆಯನ್ನು ಮಾಡುತ್ತಾಳೆ. ಇದಕ್ಕೆ ಎಲ್ಲ ಸಂಬಂಧಿಕರು, ದಾಯಾದಿಗಳನ್ನು ಆಹ್ವಾನಿಸಿದ ಗಾಂಧಾರಿ ಸೋದರಿ ಕುಂತಿ ಹಾಗೂ ಆಕೆಯ ಮಕ್ಕಳನ್ನು ಆಹ್ವಾನಿಸದೆ ಅವಮಾನ ಮಾಡುತ್ತಾಳೆ. ಈ ಸಂಗತಿ ಕುಂತಿಯನ್ನು ಕೆರಳಿಸಿ, ಸ್ವಾಭಿಮಾನಕ್ಕೆ ಧಕ್ಕೆ ತಂದುದಕ್ಕಾಗಿ ವ್ಯಗ್ರಳಾಗುತ್ತಾಳೆ. ತನ್ನ ಮಕ್ಕಳಾದ ವೀರ ಪಾಂಡವರಲ್ಲಿ ಈ ಅವಮಾನ ಪ್ರಸಂಗವನ್ನು ತೋಡಿ ಕೊಂಡಾಗ ಅರ್ಜುನನು ದೇವೇಂದ್ರನ ಬಳಿಯಿದ್ದ ಐರಾವತವನ್ನು ತಂದು ಗಜಗೌರಿ ವ್ರತಕ್ಕೆ ಕುಂತಿಗೆ ನೆರವಾಗುವುದು ಈ ನಾಟಕದ ವಸ್ತು. ಇದಕ್ಕಾಗಿ ನಾಟಕದ ಅಟ್ಟು ಅಥವಾ ಸ್ಟೇಜಿನ ಮೇಲೊಂದು ಸ್ಟೇಜ್ ನಿರ್ಮಿಸಿ ಅಲ್ಲಿ ದೇವೇಂದ್ರನ ದರ್ಬಾರ್ ನಡೆಸುವುದು ವಿಶೇಷ ಇದನ್ನು ಅಟ್ಟಿನ ಮೇಲೆ ಅಟ್ಟು ಎಂದೇ ಕರೆಯಲಾಗುವುದು. ಈ ಬಗೆಯ ವಿಶೇಷ ಆಟಕ್ಕೆ ಹೆಸರುವಾಸಿಯಾದವರು ಪಿ.ತಿಮ್ಮಯ್ಯನವರು.

ತಿಮ್ಮಯ್ಯನವರು ತುಮಕೂರು ತಾಲ್ಲೂಕು ಮಧುಗಿರಿ, ಚೇಳೂರು, ಪಾವಗಡ, ಸಿರಾ ಈ ಭಾಗಗಳಲ್ಲಿ ಯಕ್ಷಗಾನ ಪ್ರದರ್ಶನವನ್ನು ನಡೆಸಿರುತ್ತಾರೆ. ಸಿರಾ ಸೀಮೆಯಲ್ಲಿ ಶ್ರೀರಾಮನವಮಿ ಯಂದು ಕಡ್ಡಾಯವಾಗಿ ಲವಕುಶರ ಕಾಳಗ ನಾಟಕವನ್ನು ಪ್ರದರ್ಶಿಸಿದ ಹಿರಿಮೆ ಇವರಿಗೆ ಸಲ್ಲುತ್ತದೆ. ಹಲವು ಯಕ್ಷಗಾನ ಕಲಾವಿದರನ್ನು ರೂಪಿಸಿದ ಶ್ರೇಯಸ್ಸಿಗೆ ಪಾತ್ರವಾಗಿರುವುದಲ್ಲದೆ ಈಡಿಗರಹಳ್ಳಿ ರಮಾನಂದ, ಕಣುಮಯ್ಯ ಮುಂತಾದ ಯಕ್ಷಗಾನ

ಭಾಗವತರನ್ನು ರೂಪಿಸಿರುವ ಶ್ರೀ ಕಡವಿಗೆರೆ ತಿಮ್ಮಯ್ಯನವರ ಸಾರ್ಥಕ ಭಾಗವಂತಿಕೆಯನ್ನು ರಮಾನಂದ ಸಮರ್ಥವಾಗಿ ಮುಂದುವರಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ತಮ್ಮ ಕುಟುಂಬದಲ್ಲಿ ಭಾಗವತರಾಗಿ ಯಕ್ಷಗಾನ ಸೇವೆ ಮಾಡದಿದ್ದರೂ ಕಲಾವಿದರಾಗಿ ಯಕ್ಷಗಾನದಲ್ಲಿ ಪಾತ್ರ ಮಾಡುವ ಮೂಲಕ ಯಕ್ಷಗಾನ ಕಲಾಸೇವೆಯನ್ನು ಮುಂದುವರಿಸಿರುವುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಬುಡಕಟ್ಟು ವರ್ಗ ತಿಗಳ ಜನಾಂಗಕ್ಕೆ ಸೇರಿದ ತಿಮ್ಮಯ್ಯನವರಿಗೆ ಜಾತಿಯಾಚೆಯ ಕಲಾ ಸಂಘಟನೆಯೇ ಮುಖ್ಯ ಎನ್ನುತ್ತಾರೆ.

**ಭಾಗವತ ಮುಷ್ಟಿಗರಹಳ್ಳಿ ರಂಗಪ್ಪ:**

ದಾಸರ ಪದಗಳ ಜನಕ, ಪೌರಾಣಿಕ ನಾಟಕಗಳ ನಿರ್ದೇಶಕ ಎಂದೆಲ್ಲ ಕರೆಯಲ್ಪಡುವ ಹಿರಿಯ ಯಕ್ಷಗಾನ ಭಾಗವತ ರಂಗಪ್ಪ ಮೂಲತಃ ಆಂಧ್ರ ಕಡೆಯಿಂದ ಬಂದವರು. ಗಂಗೆಗೌರಿ, ಗುಣಸಾಗರಿ, ಬಾಲನಾಗಪ್ಪ ಕಥನ ಗೀತೆಗಳನ್ನು ಹಾಡಿಕೊಂಡು ಮೂಲ ವೃತ್ತಿಯಾದ ತಂಬೂರಿ ಪರಂಪರೆಯವರು. ಸಹವಾಸದಂತೆ ತಂಬೂರಿ ಬಿಟ್ಟು ತಾಳ ಹಿಡಿದು ಭಾಗವತರೆನಿಸಿ ಕೊಂಡರು. ಮೇಳದ ರಂಗಪ್ಪ ಎಂದೇ ಕರೆಯಲ್ಪಡುವ ಇವರಿಗೆ ಇದೀಗ 90 ವರ್ಷಗಳ ಪ್ರಾಯ ಕಣ್ಣು ಮಂದವಾಗಿವೆ, ಕಿವಿ ತನ್ನ ಸ್ಪರ್ಶಗುಣ ಕಳೆದುಕೊಳ್ಳುತ್ತಿದೆ. ಆದರೂ ಕಲೆ, ಕಲಾವಿದರ ಬಗೆಗೆ ಅನನ್ಯ ಗೌರವ ಭಾವನೆಯನ್ನು ಹೊಂದಿರುವ ಸಿರಾ ಸೀಮೆಯ ಹಿರಿಯ ಯಕ್ಷಗಾನ ಭಾಗವತರು. ಇವರ ಮೂಲದವರು ಆಂಧ್ರದ ಕರೇದಾಸರಹಳ್ಳಿಯವರೆಂದು ಹೇಳಲಾಗುತ್ತಿದೆ. ತಂದೆ ನರಸಿಂಹಯ್ಯ, ತಾಯಿ ರಂಗಮ್ಮ. ತಂದೆಯಿಂದ ಗಂಗೆಗೌರಿ, ಶಿವಲೀಲಾವತಿ ಪುರಾಣ ಕಲಿತರು. ಸಿರಾ ತಾಲ್ಲೂಕು ಮುಷ್ಟಿಗರಹಳ್ಳಿಯಲ್ಲಿ ಬಂದು ನೆಲೆನಿಂತರು. ಮೊದಲು ರಾಮನವಮಿಯ ಪ್ರಯುಕ್ತ ಶ್ರೀರಾಮ ಲೀಲಾವಳಿ, ಸಂಪೂರ್ಣ ರಾಮಾಯಣ, ಲವಕುಶರ ಕಾಳಗ, ಇಂದ್ರಜಿತ್ ಕಾಳಗ ಈ ಮೊದಲಾದ ಪ್ರಸಂಗಗಳಲ್ಲಿ ಲವ, ಸೀತೆ ಪಾತ್ರಗಳಲ್ಲಿ ಅಭಿನಯಿಸಿದರು. ನಂತರ ಯಕ್ಷಗಾನದಲ್ಲಿ ಹಿಮ್ಮೇಳ ಕಲಾವಿದರಾಗಿ ಭಾಗವಹಿಸಿದರು. ನಂತರ ಪೂರ್ಣಪ್ರಮಾಣದ ಭಾಗವತರಾಗಿ ಸತ್ಯಹರಿಶ್ಚಂದ್ರ, ವಾಲಿ ಸುಗ್ರೀವರ ಕಾಳಗ, ಭಕ್ತ ಸುಧನ್ವ, ಲವಕುಶ, ದುಶ್ಯಾಸನನ ಕಾಳಗ, ಶತಕಂಠ ರಾಮಾಯಣ, ಇಂದ್ರಜಿತ್ ಕಾಳಗ ಈ ಮೊದಲಾದ ಯಕ್ಷಗಾನ ಭಾಗವತರಾಗಿ ಸಮರ್ಥವಾಗಿಯೇ ಬೆಳೆದರು. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಮಡಕಶಿರಾ, ಅಮರಾಪುರ, ರೊಳ್ಳ, ಅಗಳಿ ಈ ಪ್ರದೇಶಗಳಲ್ಲಿ ಯಕ್ಷಗಾನ ಕಲಿಸಿದರು. ಮೂಡಲಪಾಯ ಯಕ್ಷಗಾನದ ಸ್ಪಷ್ಟ ತಿಳುವಳಿಕೆ ಹೊಂದಿಲ್ಲವಾದರೂ ಬಯಲುಕತೆ ಎಂದೇ ಕರೆಯುವ ರಂಗಪ್ಪನವರು ಯಕ್ಷಗಾನ

ನೃತ್ಯಭಂಗಿಗಳಾದ ಉಡನ್, ಜರ್ಪು, ಚೌಕ, ಪಸ್ಕೆ ಮೊದಲಾದ ಆಕರ್ಷಕ ನೃತ್ಯವನ್ನು ಕಲಾವಿದರಿಗೆ ಕಲಿಸಿಕೊಡುವಲ್ಲಿ ಎತ್ತಿದ ಕೈ. ಅಂತೆಯೇ ಯಕ್ಷಗಾನ ಹಾಡುಗಾರಿಕೆಯ ಮಟ್ಟುಗಳಾದ ನಾಟಿ, ಗೌಳ, ಮಾರವಿ, ಮೋಹನ, ರೇಗುಪ್ತಿ ಈ ಯಕ್ಷಗಾನ ಗೀತ ಪ್ರಕಾರಗಳನ್ನು ಶಾಸ್ತ್ರೀಯವಾಗಿ ಕಲಿತಿರುವ, ಕಲಿತಿದ್ದನ್ನು ಕಲಾವಿದರಿಗೆ ಹೇಳಿಕೊಡುವ ಅಂತಃಕರಣಪೂರ್ವಕ ಕಲಾಶಿಕ್ಷಕರಾಗಿದ್ದರು.

ಸಿರಾ ತಾಲ್ಲೂಕಿನ ರಂಗನಹಳ್ಳಿ, ಹನುಮನಹಳ್ಳಿ, ಕಂಬಾರಹಳ್ಳಿ, ವೀರಗಾನಹಳ್ಳಿ ಈ ಕಡೆಗಳಲ್ಲಿ ಯಕ್ಷಗಾನ ಕಲಿಸಿದ್ದಾರೆ. ವೇಷಧಾರಿ, ವಸ್ತು ತಯಾರಿಕೆ, ವೇಷಬೂಷಣ ಹಾಗೂ ಪೌರಾಣಿಕ ನಾಟಕಗಳಲ್ಲಿ ಅಭಿನಯ ನೀಡಿದ್ದಾರೆ. ತೊಂಬತ್ತರ ಈ ಇಳಿವಯಸ್ಸಲ್ಲೂ ತಲೆತುಂಬಾ ಯಕ್ಷಗಾನದ ಗೀಳು ಹಿಡಿಸಿಕೊಂಡಿರುವ ಅಪರೂಪದ ಹಿರಿಯ ಕಲಾವಿದರು.

**ಭಾಗವತ ಕರಿರಾಮನಹಳ್ಳಿ ಕಣಿಮಣ್ಣ:**

ಶ್ರೀ ಭಾಗವತ ಕಣುಮಣ್ಣನವರು ಬರಗೂರು ಸಮೀಪದ ಕರೇರಾಮನಹಳ್ಳಿಯವರು. ಅಪ್ಪಟ ರೈತಾಪಿ ಕುಟುಂಬದ ಅಪ್ಪ, ಕೂಲಿ ಕಸುಬಿನ ಅಮ್ಮ. ಜೀತಕ್ಕಿರಬೇಕೆಂಬ ತಂದೆಯ ಒತ್ತಾಯ, ಶಾಲೆ ಕಲಿಯಬೇಕೆಂದು ತಾಯಿಯ ಬಯಕೆ. ಶಾಲೆ ಸಂಗೀತ ಆಲಯವಾದುದು ಕಣುಮಣ್ಣನವರ ವಿಶೇಷ. 1943 ರಲ್ಲಿ ಜನಿಸಿದ ಕಣುಮಣ್ಣ, ಬರಗೂರಿನ ಕೂಲಿಮಠದಲ್ಲಿ ಅಕ್ಷರಾಭ್ಯಾಸ. ಕನ್ನಡ ಓದುಬರಹ ಮಾತ್ರ ಬಲ್ಲರು. ನಂತರ ಶಾಲೆ ಬಿಟ್ಟು ಅಪ್ಪನೊಂದಿಗೆ ಕೂಲಿ ಕಸುಬಿಗೆ ನೇಮಕ. ತನ್ನೂರಿನಲ್ಲಿ ರಾತ್ರಿಯಾದಂತೆ ನಡೆಯುತ್ತಿದ್ದ ಯಕ್ಷಗಾನ ಭಾಗವಂತಿಕೆಯ ಪದ, ನೃತ್ಯ ಬಾಲಕನನ್ನು ಅತೀವವಾಗಿ ಸೆಳೆಯಿತು. ರಾತ್ರಿಯೆಲ್ಲ ಯಕ್ಷಗಾನ ಕುಣಿತ ನೋಡುವುದು, ಹಗಲೆಲ್ಲ ಕೃಷಿ ಕೆಲಸ. ಆರಂಭದಲ್ಲಿ ಮಾಲೀಕರಿಂದ ಬೈಗುಳವೂ ಆಯಿತು. ನಿದ್ದೆಗೆಟ್ಟರೆ ಕೆಲಸ ನಡೆಯುವುದಿಲ್ಲ. ಕೆಲಸಕ್ಕೆ ಬರಬೇಡ ಅಂದೆಲ್ಲಾ ಬೆದರಿಕೆ. ಹೊಟ್ಟೆಪಾಡಿಗಾಗಿ ಕದ್ದು, ತಪ್ಪಿಸಿ ಯಕ್ಷಗಾನ ಕಲಿತರು.

ಹುಡುಗನ ಕಲೆಯ ಬಗೆಗಿನ ಆಸಕ್ತಿಯನ್ನು ಮೊದಲು ಗಮನಿಸಿದವರು ಇದೇ ಗ್ರಾಮದ ಕುಂಚಿಟಿಗ ಮತಸ್ಥರಾದ ಭಾಗವತ ನರಸಪ್ಪನವರು. ಹುಡುಗನಿಗೆ ಭಾಗವಂತಿಕೆ ಪದಗಳನ್ನು ಹೇಳಿಕೊಟ್ಟರಲ್ಲದೇ ಹಾಡುವುದಕ್ಕೆ ಪ್ರೋತ್ಸಾಹದಾಯಕವಾಗಿ ಹಿಮ್ಮೇಳ, ತಾಳ, ಮೃದಂಗ ಬಾರಿಸಿದರು. ಉಳಿದೆಲ್ಲ ಕಲಾವಿದರಿಗಿಂತ ತುಸು ಚೆನ್ನಾಗಿ ಹಾಡುತ್ತಿದ್ದ ರೀತಿ, ಶಾರೀರಿಕ ಭಾವಗಳಿಂದ ನರಸಪ್ಪನವರು ತಮ್ಮ ಮತ್ತು ಗಾನ ಕಲಿಯುತ್ತಿದ್ದ ಕಲಾವಿದರಿಗೆ ಬಾಲಕ ಕಣುಮಣ್ಣನವರ ಮಾದರಿ ತೋರಿಸುತ್ತಿದ್ದರು. ನಂತರ ಇದೇ ಗ್ರಾಮದ ವಾಲ್ಮೀಕಿಮತಸ್ಥರಾದ ದಾರಮಾದಣ್ಣ ನವರು ಇವರಿಗೆ ಯಕ್ಷಗಾನದ ವಿವಿಧ ಮಟ್ಟುಗಳನ್ನು,




ಕುಣಿತದ ಒಂದೆರಡು ಮಾದರಿಗಳನ್ನು ಹೇಳಿಕೊಟ್ಟರು.

ಒಂದು ಹಂತಕ್ಕೆ ಬಂದ ಈ ಕಲಾವಿದರು ಮೊದ ಮೊದಲು ಯಕ್ಷಗಾನದಲ್ಲಿ ವೇಷಧಾರಿಗಳಾಗಿ ಕಾಣಿಸ ತೊಡಗಿದರು. ದುಶ್ಯಾಸನ ಕಥೆಯಲ್ಲಿ ದುಶ್ಯಾಸನನಾಗಿ, ಐರಾವತದಲ್ಲಿ ಭೀಮನಾಗಿ, ಪಂಚವಟಿ ರಾಮಾಯಣದಲ್ಲಿ ರಾವಣನಾಗಿ ಅಭಿನಯಿಸಿದರು. 1967 ರಿಂದ ಸ್ವತಃ ಯಕ್ಷಗಾನ ಭಾಗವತರಾದರು. ಇವರು ಹೈದರಾಬಾದ್ ಪ್ರಾಂತ್ಯದ ಅನಂತಪುರ ಜಿಲ್ಲೆಯ ಮಡಕಶಿರಾ, ರೊಳ್ಳೆ, ಅಮರಾಪುರ ಇಲ್ಲಿ ಮೊದಲಿಗೆ ಯಕ್ಷಗಾನ ಕಲಿಸಿದರು. ಮಡಕಶಿರಾ ತಾಲ್ಲೂಕಿನ ರೊಳ್ಳೆ ಗ್ರಾಮದ ಭಾಗವತ ಚನ್ನಪ್ಪನವರು ತೆಲುಗು, ಕನ್ನಡ ಎರಡೂ ಭಾಷೆಗಳಲ್ಲಿ ಯಕ್ಷಗಾನ ಕಲಿಸುತ್ತಿದ್ದುದರಿಂದ ಆರಂಭದಲ್ಲಿ ಚನ್ನಪ್ಪನವರ ಸಹಾಯ ಪಡೆದರು.

ಲವಕುಶರ ಕಾಳಗ, ಶಶಿರೇಖೆ ಪರಿಣಯ, ವಿರಾಟಪರ್ವ, ಊರ್ವಶಿ ಶಾಪವಿಮೋಚನೆ, ಸೌಗಂಧಿಕಾ ಪುಷ್ಪಹರಣ ಈ ಯಕ್ಷಗಾನಗಳನ್ನು ಕರ್ನಾಟಕ ಆಂಧ್ರ ಗಡಿ ನೆಲದಲ್ಲಿ ಪ್ರಯೋಗಿಸಿ ಯಕ್ಷಗಾನದ ಕಂಪನ್ನು ಬೀರಿದರು. ಕರ್ನಾಟಕದ ಬರಗೂರು, ಪ.ನಾ. ಹಳ್ಳಿ, ಕರಿರಾಮನಹಳ್ಳಿ ಹಾಗೂ ಸಿರಾ ತಾಲ್ಲೂಕಿನ ಬಹುತೇಕ ಹಳ್ಳಿಗಳಲ್ಲಿ ದುಶ್ಯಾಸನ ಕಥೆ, ಐರಾವತ, ರಾಮಾಂಜನೇಯ ಯುದ್ಧ, ರತಿಕಲ್ಯಾಣ, ಪಂಚವಟಿ ರಾಮಾಯಣ, ಶನಿಮಹಾತ್ಮೆ ಈ ಮೊದಲಾದ ಹತ್ತು ಯಕ್ಷಗಾನ ಪ್ರಸಂಗಗಳನ್ನು ಯಾವುದೇ ಹಸ್ತಪ್ರತಿಯ ನೆರವಿಲ್ಲದೆ ಕಲಿಸುವ ಸಾಮರ್ಥ್ಯ ಹೊಂದಿದ್ದಾರೆ.

ಕಣುಮಣ್ಣನವರಿಗೆ ಒಬ್ಬನೇ ಗಂಡುಮಗ. ಅವರು ಯಕ್ಷಗಾನ ಕಲಾವಿದ. ಹತ್ತಾರು ಯಕ್ಷಗಾನ ಪ್ರಸಂಗಗಳಿಗೆ ಘೋರಪಾತ್ರದ ಮೂಲಕ ಆಕರ್ಷಕ ಅಭಿನಯ ನೀಡಿದ್ದಾರೆ. ಹಿಮ್ಮೇಳ ಕಲಾವಿದ ರಾಗಿಯೂ ಭಾಗವಹಿಸುತ್ತಿದ್ದಾರೆ. 70 ವಸಂತಗಳನ್ನು ಪೂರೈಸಿರುವ ಕಣುಮಣ್ಣ ಅನಾರೋಗ್ಯ, ಆರ್ಥಿಕ ದುಃಸ್ಥಿತಿಯ ನಡುವೆಯೂ ಸರ್ಕಾರದ ಯಾವುದೇ ಸಹಾಯಕ್ಕೆ ಪ್ರಯತ್ನಿಸದೆ, ಪ್ರತಿ ವರ್ಷವೂ ರಾಮಾಂಜನೇಯ ಯುದ್ಧವನ್ನು ತಪ್ಪದೆ ಕಲಿಸುತ್ತಾ ಬರುತ್ತಿರುವುದು ಇವರ ವಿಶೇಷ

**ಹೆಮ್ಮೆಯ ಕಲಾವಿದ ಬಸವನಹಳ್ಳಿ ರಂಗಪ್ಪ:**



ಜನಪದ ಗೀತೆ, ತತ್ವಪದ, ಸಾಮಗಾನ (ಹಾರ್ಮೋನಿಯಂ) ಸಂಗೀತದಲ್ಲಿ ಮಹಾನ್ ಕಲಾವಿದರಾಗಿದ್ದ ಶ್ರೀ ಬಿ.ರಂಗಪ್ಪನವರು ಸಿರಾ ತಾಲ್ಲೂಕು ಹುಲಿಕುಂಟೆ ಸಮೀಪದ ಬಸವನಹಳ್ಳಿ ಯವರು.

ದಿನಾಂಕ 16.06.1936 ರಲ್ಲಿ ಜನಿಸಿದ ಇವರು ಭಾರತ ಸ್ವಾತಂತ್ರ್ಯ ಚಳುವಳಿಯ ಕಾವು ತೀವ್ರವಾಗಿದ್ದ ಕಾಲದಲ್ಲಿ, ಸ್ವಾತಂತ್ರ್ಯವೀರರ ಕಾರ್ಯ ಚಟುವಟಿಕೆಯನ್ನು ಹತ್ತಿರದಿಂದ ಕಂಡವರು. ಬರಗೂರು ರಾಮೇಗೌಡ, ಟಿ.ಮರಿಯಪ್ಪ ಮೊದಲಾದ ಸಮರವೀರರು ಗಾಂಧೀಜಿಯವರ ಗ್ರಾಮಸ್ವರಾಜ್ಯ, ಚಲೇಜಾವ್ ಚಳುವಳಿ ಮೊದಲಾದ ಚಳುವಳಿ ನಡೆಸುತ್ತಿದ್ದಾಗ, ರಂಗಪ್ಪನವರು ತಮ್ಮ ಬಾಲಕತನದಿಂದಲೂ ಈ ಚಳುವಳಿಯಲ್ಲಿ ಭಾಗವಹಿಸಿದ ಹೆಮ್ಮೆಯ ಯುವಕ. ಹುಡುಗ ಇಲ್ಲಿದ್ದರೆ ಚಳುವಳಿ ಅಂತ ತಲೆಕೆಡಿಸಿಕೊಂಡು ಕೆಟ್ಟು ಹೋಗಬಾರದೆಂದು, ಹೆತ್ತವರು ಇವರನ್ನು ಸಿದ್ಧಗಂಗಾ ಮಠಕ್ಕೆ ಸೇರಿಸಿದರು. ಸಿದ್ಧಗಂಗಾ ಮಠದ ವಿದ್ಯಾರ್ಥಿಯಾಗಿ ಪ್ರೌಢಶಿಕ್ಷಣ ಮುಗಿಸಿ ಮಾಧ್ಯಮಿಕ ಶಾಲಾ ಶಿಕ್ಷಕರಾಗಿ ನೇಮಕವಾದರು. ಮೂವತ್ತಾರು ವರ್ಷಗಳ ಕಾಲ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಲೇ, ಗ್ರಾಮಾಂತರ ಪ್ರದೇಶಗಳಲ್ಲಿ ಜನಪದ ಸಂಗೀತ, ಕೋಲುಪದ, ಕೋಲಾಟ, ತತ್ವಪದಗಳನ್ನು ಹಾಡುತ್ತಾ ಜನಪದ ಸಂಸ್ಕೃತಿಯನ್ನು ಬಿತ್ತಿ ಬೆಳೆದವರು. 'ಭಜನೆ ಪದಗಳ ಸರದಾರ' ಎಂದೇ ಖ್ಯಾತರಾಗಿದ್ದ ಈ ಮೇಷ್ಟ್ರು, ಅನ್ಯಾಯ, ವಂಚನೆ, ಮೋಸದ ಪ್ರಸಂಗಗಳನ್ನು ಕಂಡನೆ ಸಿಡಿದೇಳುತ್ತಿದ್ದುದು ಇವರ ವಿಶೇಷ. ಅಷ್ಟರಮಟ್ಟಿಗೆ ಗಾಂಧಿ ಅನುಯಾಯಿಯಾಗಿ ಬಾಳಿದವರು.

ಬೇವಿನಹಳ್ಳಿ, ಹೊಸೂರು, ಸಿರಾ, ಹೊಸಹಳ್ಳಿ, ನಾದೂರು ಇಲ್ಲೆಲ್ಲಾ ಶಾಲಾ ಶಿಕ್ಷಕರಾಗಿ, ಮುಖ್ಯ ಶಿಕ್ಷಕರಾಗಿ ಕಾಯಾ-ವಾಚಾ-ಮನಸಾ ಕಾರ್ಯನಿರ್ವಹಿಸಿದ ಕಲಾವಿದ ರಂಗಪ್ಪ. ತಾವು ಕೆಲಸ ಮಾಡಿದ ಕಡೆಯಲ್ಲೆಲ್ಲಾ ಯಕ್ಷಗಾನ, ಸಾಮಗಾನ ಪ್ರಸಂಗಗಳನ್ನು ಶ್ರದ್ಧೆಯಿಂದ ಕಲಿಸುತ್ತಿದ್ದರು. 'ಕಲಿಯುವ ಆಸಕ್ತಿಯೊಂದೇ ಸಾಕು, ಕಲಾ ಸಂಭಾವನೆ ಯಾಕೆ ಬೇಕು?' ಎಂದು ಪ್ರಶ್ನಿಸುವ ಮೂಲಕ ಸರ್ಕಾರ ನೀಡುವ ಶಿಕ್ಷಕ ವೃತ್ತಿಯ ಸಂಬಳವೇ ಸಾಕೆಂದು ರಾತ್ರಿಯ ಬಿಡುವಿನ ಸಮಯದಲ್ಲಿ, ಕಲಾಸೇವೆಗೆ ತಮ್ಮನ್ನು ಸಂಭಾವನೆ ಇಲ್ಲದೆಯೇ ಅರ್ಪಿಸಿಕೊಂಡವರು.

ಇಂದ್ರಜಿತ್ ಕಾಳಗ, ಲಂಕಾದಹನ, ಶ್ರೀಕೃಷ್ಣಪಾರಿಜಾತ, ಮೂರೂವರೆ ವಜ್ರ, ಶ್ರೀಕೃಷ್ಣ ಸಂಧಾನ, ಇವರು ಗ್ರಾಮಾಂತರ ಪ್ರದೇಶಗಳಲ್ಲಿ ಕಲಿಸಿದ ನಾಟಕ, ಯಕ್ಷಗಾನ ಪ್ರಸಂಗಗಳು. ಬಿ. ರಂಗಪ್ಪನವರಿಗೆ ಮೂವರು ಗಂಡು, ಎರಡು ಹೆಣ್ಣುಮಕ್ಕಳು. ಹೆಣ್ಣುಮಕ್ಕಳಿಗೂ ಸಮಾನ ಶಿಕ್ಷಣ ಕೊಡಿಸಬೇಕೆಂಬುದು ಇವರ ಪ್ರಮುಖ ವಾದ. ಅದರಂತೆಯೇ ಇವರ ಮೊದಲ ಮಗಳು ಬಿ.ಆರ್.ಭಾನುಮತಿ ಶಿಕ್ಷಕಿ, ಎರಡನೇ ಮಗಳು ಬಿ.ಆರ್.ಧನಲಕ್ಷ್ಮಿ ಎಂ.ಎ. ಪದವೀಧರೆ, ಪೌರಾಯುಕ್ತ ಅಧಿಕಾರಿ. ಮೂವರು ಗಂಡುಮಕ್ಕಳಲ್ಲಿ ಮೊದಲ ಮಗ ಬಿ.ಆರ್.ಶ್ರೀನಿವಾಸ್ ಉತ್ತಮ ಕಲಾಸಕ್ತರು. ತಂದೆಯಂತೆಯೇ ದೇಶೀಸಂಸ್ಕೃತಿ, ಜನಪದ ಸಂಗೀತ ಉಳಿಸುವ, ಪ್ರಸಾರ ಮಾಡುವ ಹಂಬಲವುಳ್ಳವರು. ಸಾಂಸ್ಕೃತಿಕ ವೀರ ಜುಂಜಪ್ಪನನ್ನು ಕುರಿತು, ಧ್ವನಿಸುರುಳಿಯನ್ನು ಮೊದಲಿಗೆ ತಂದವರು. 'ಸ್ವಾಮಿ ಆಡಿಯೋ' ಹೆಸರಿನಲ್ಲಿ ಸಿರಾ ಸೀಮೆಗೆ ಅತ್ಯುತ್ತಮ ಜನಪದ ಗೀತೆಗಳನ್ನು, ಧ್ವನಿಸುರುಳಿಗಳ ಮೂಲಕ ಪರಿಚಯಿಸಿದ ಹಿರಿಮೆ ಇವರದು. ಹೇಮಾವತಿ, ಸೋಬಾನೆ ಪದಗಳು, ಜುಂಜಪ್ಪ ಇವರು ಹೊರತಂದ ಪ್ರಮುಖ ಕ್ಯಾಸೆಟ್‌ಗಳು. ಇದಲ್ಲದೆ ಮಧುರ ಅಲೆ, ಮುತ್ತಿನುಂಗುರ, ಸ್ವಪ್ನಸ್ವರ, ದೊಡ್ಡ ರಂಗೇಗೌಡರ ಗೀತೆಗಳು ಮೊದಲಾದ ಭಾವಗೀತೆಗಳ ಧ್ವನಿಸುರುಳಿಯನ್ನು ಹೊರತಂದಿದ್ದಾರೆ. ದೇವಿ ಮಹಾತ್ಮೆ ಮೊದಲಾದ ಯಕ್ಷಗಾನ ಪ್ರಸಂಗಗಳನ್ನು ಧ್ವನಿಸುರುಳಿಗೆ ಅಳವಡಿಸಿದ ಹಿರಿಮೆ ಸ್ವಾಮಿ ಆಡಿಯೋದ ಶ್ರೀ ಬಿ.ಆರ್.ಶ್ರೀನಿವಾಸ ಅವರದ್ದು.

ಶಿಕ್ಷಕ, ಹಾಡುಗಾರ, ಸಂಗೀತ ಶಿಕ್ಷಕ, ರಂಗ ಸಂಘಟಕ, ಇವೆಲ್ಲಕ್ಕೂ ಮಿಗಿಲಾಗಿ ಮಾನವೀಯತೆಯ ಸಾಕಾರ ಮೂರ್ತಿಯಾಗಿದ್ದ ಬಿ.ರಂಗಪ್ಪನವರು ಲೌಕಿಕ ಬದುಕಿನಿಂದ ಹೊರಗೆ ನಿಂತು ಸಿರಾದ ಜ್ಯೋತಿನಗರ ಪ್ರದೇಶದಿಂದ ಹೊರಗೆ ಒಂಟಿ ಮನೆ ನಿರ್ಮಿಸಿ, ಮನೆಯ ಮೇಲ್ಭಾಗದ ಮಹಡಿಯನ್ನು ಸಂಪೂರ್ಣ ಕಲಾಕೇಂದ್ರವನ್ನಾಗಿಸಿಕೊಂಡಿದ್ದರು. ಹತ್ತಾರು ವಾದನಗಳೇ ಅವರ ಒಡನಾಡಿ. ಸದಾ ಸಂಗೀತ ಹಾಡುವುದು, ವಾದ್ಯ ನುಡಿಸುವುದೇ ಇವರ ಅಂತರಂಗದ ಸುಖಿತನ. ಅತ್ತ ಕಲ್ಲುಕೋಟೆ ಇತ್ತ ಜ್ಯೋತಿನಗರ, ನಡುವೆ ಒಂಟಿ

ಮನೆ. ಮನೆಯನ್ನು ಸಂಗೀತದ ಆಲಯವಾಗಿಸಿದ್ದರು. ಯೋಗಾಯೋಗ ಇವರ ಮನೆಯ ಪರಿಸರದಲ್ಲೇ ಪ್ರೆಸಿಡೆನ್ಸಿ ಶಾಲೆಯೂ ಸೇರಿದಂತೆ ಇಂದು ಇದೊಂದು ಪ್ರತಿಷ್ಠಿತ ಬಡಾವಣೆಯಾಗಿದೆ. ಸಂಗೀತ, ಪರಿಸರ ಸ್ವಚ್ಛತೆ, ಸದಾ ಒಳ್ಳೆಯದನ್ನೇ ಕಾಣುತ್ತಿದ್ದ ಕಲಾವಿದ ರಂಗಪ್ಪನವರು 06.06.2011 ರಂದು ಬೆಳಗಿನ ಸ್ನಾನ, ಪ್ರಾರ್ಥನೆ, ಪೂಜೆಯ ನಂತರ, ಹಾಡು ಹಾಡುತ್ತಲೇ ಮರಳದ ಲೋಕಕ್ಕೆ ಪ್ರಯಾಣಿಸಿದರು. ಈ ಕಲಾವಿದ ಸದಾ ಉಪಕಾರಿಯಾಗಿಯೇ ಬಾಳಿದವರು. ಸಿದ್ಧಗಂಗಾ ಮಠದ ಡಾ|| ಶಿವಕುಮಾರ ಸ್ವಾಮೀಜಿಗಳ ಆದರ್ಶವನ್ನು ಜೀವನವಿಡೀ ಪಾಲಿಸುತ್ತಾ, ಸಮಯ ಸಿಕ್ಕರೆ ಅವರ ತತ್ವಾದರ್ಶವನ್ನು ಬೋಧಿಸುತ್ತಿದ್ದರು. ತಾವೂ ಕಲಾವಿದರಾಗಿ, ತಮ್ಮ ಮಕ್ಕಳನ್ನು ಸುಸಂಸ್ಕೃತರನ್ನಾಗಿ ಮಾಡಿ ಕಲಾಕ್ಷೇತ್ರಕ್ಕೆ ಧ್ವನಿಸುರುಳಿ ಮೂಲಕ ಮರೆಯಬಾರದ ಕಾಣಿಕೆ ನೀಡಿದ ಶ್ರೀ ಬಿ.ರಂಗಪ್ಪ ಅವರ ಕಲಾದರ್ಶ, ಜೀವನಾದರ್ಶ 75 ರ ತುಂಬು ಬದುಕಿನಲ್ಲೂ ಬತ್ತದ ಜೀವನೋತ್ಸವ ಅನುಕರಣೀಯವಾದುದು, ಮಾರ್ಗದರ್ಶಿಯಾದುದು.

## ಮುಖವೀಣಿ ಕಲಾವಿದರು

**ಕಡವಿಗೆರೆ ಮೂಡಲಗಿರಿಯಪ್ಪ:**

ಮೂಡಲಗಿರಿಯಪ್ಪ ತುಮಕೂರು ಜಿಲ್ಲೆ, ಸಿರಾ ತಾಲ್ಲೂಕಿನ ಕಡವಿಗೆರೆಯವರು. ಆದಿದ್ರಾವಿಡ ಜನಾಂಗಕ್ಕೆ ಸೇರಿದ ಇವರದ್ದು ಮುಖವೀಣೆ ಕಲಾ ಕುಟುಂಬಕ್ಕೆ ಸೇರಿದ ಬದುಕು. ತಾತ, ತಂದೆಯವರ ಕಾಲದಿಂದಲೂ ಜನಪದ ವಾದ್ಯಗಳಾದ ಮುಖವೀಣೆ, ಚಿಟ್ಟಿಮೇಳ, ಆರೆವಾದ್ಯ, ಕಹಳೆ ಈ ವಾದ್ಯ ಪ್ರಕಾರಗಳನ್ನು ಕಲಿಸುತ್ತಾ, ನುಡಿಸುತ್ತಾ ಬಂದ ಗೌರವಾನ್ವಿತ ಕಲಾ ಪರಂಪರೆಗೆ ಸೇರಿದವರು.

ಮೂಡಲಗಿರಿಯಪ್ಪನವರಿಗೆ ಇದೀಗ 65ರ ಪ್ರಾಯ. ಇವರು ಕಳೆದ ಒಂದು ದಶಕದಿಂದಲೂ ಆಕಾಶವಾಣಿ ಕಲಾವಿದರಾಗಿಯೂ ಕೆಲಸ ಮಾಡಿದ್ದಾರೆ. ಇವರು ನುಡಿಸಿರುವ ಹಲವು ಯಕ್ಷಗಾನ ಪ್ರಸಂಗಗಳು ಆಕಾಶವಾಣಿಯಲ್ಲಿ ಪ್ರಸಾರವಾಗಿವೆ, ಆಗುತ್ತಲೂ ಇವೆ. ಕಡವಿಗೆರೆ ಮೂಡಲಗಿರಿ ಯಪ್ಪನವರು ಇಂದು ತುಂಬಾ ಬಿಜಿಯಾದ ಮುಖವೀಣೆ ಕಲಾವಿದರು. ವರ್ಷವಿಡೀ ಕಲಾ ಪ್ರದರ್ಶನವಿದ್ದೇ ಇರುತ್ತದೆ. ಆಂಧ್ರಪ್ರದೇಶ, ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಕಲಾ ಪ್ರದರ್ಶನಕ್ಕೆ ಮೇಲಿಂದ ಮೇಲೆ ಕರೆ ಬರುತ್ತಿದೆ. ಅನಂತಪುರ, ಮಡಕಶಿರಾ, ಅಗಳಿ, ಅಮರಾಪುರ, ವಿಜಯವಾಡ, ರಾಯಲಸೀಮೆ ಪ್ರದೇಶಗಳಲ್ಲೂ ನಾಗಸ್ವರ ವಾದ್ಯಕ್ಕೆ ತುಂಬಾ ಗೌರವ. ಹಾಗಾಗಿ ಇವರ ನಾಗಸ್ವರ ವಾದ್ಯಕ್ಕೆ ಮೇಲಿಂದ ಮೇಲೆ ಕರೆ ಬರುವುದು ಆ ಭಾಗಗಳಲ್ಲಿ ಹೆಚ್ಚು ಎಂಬುದು

ಮೂಡಲಗಿರಿಯಪ್ಪ ನವರ ಅಭಿಮತವಾಗಿದೆ.

ನಾಗಸ್ವರ, ಚಿಟ್ಟಿಮೇಳ, ಕಹಳೆ, ಆರೆ ಈ ವಾದ್ಯವಿಶೇಷಗಳಲ್ಲಿಯೂ ಸಮಾನ ಆಸಕ್ತಿ ಇರಿಸಿಕೊಂಡಿರುವ ಮೂಡಲಗಿರಿಯಪ್ಪ ಅವರಿಗೆ ಹೆಚ್ಚು ಜನಪ್ರಿಯತೆ ತಂದುಕೊಟ್ಟಿರುವುದು ಮುಖವೀಣೆ ಕಲೆ. ಸಿರಾ, ಮಧುಗಿರಿ, ಪಾವಗಡ, ತುರುವೇಕೆರೆ, ಚಿಕ್ಕನಾಯಕನಹಳ್ಳಿ ಈ ತಾಲ್ಲೂಕುಗಳಲ್ಲಿನ ಯಕ್ಷಗಾನ ಭಾಗವಂತಿಕೆಗೆ ದಾಸಪ್ಪನವರ ಮುಖವೀಣೆ ವಾದ್ಯ ಬೇಕೇಬೇಕು. ಅಷ್ಟರ ಮಟ್ಟಿಗೆ ಪ್ರಖ್ಯಾತರು. ಇಂದಿಗೂ 15 ಶಿಷ್ಯರಿಗೆ ಮುಖವೇಣಿ ಕಲೆಯನ್ನು ಕಲಿಸುತ್ತಿರುವ ದಾಸಪ್ಪನವರಿಗೆ ತಮಗೆ ಗಂಡುಮಕ್ಕಳಿಲ್ಲದೇ ಹೋದರೂ ಅಣ್ಣನ ಮಗನನ್ನು ಮಗನೆಂದೇ ಸಾಕುತ್ತಿದ್ದಾರೆ. ಆತನಿಗೂ ಮುಖವೇಣಿ ಕಲೆಯನ್ನು ಕಲಿಸುತ್ತಿರುವುದಾದರೂ ಆತನಿಗೆ ಮುಖವೇಣಿ ಕಲೆಯ ಬಗೆಗೆ ಅಷ್ಟಾಗಿ ಆಸಕ್ತಿ ಇಲ್ಲ ಎಂಬ ಕೊರಗನ್ನು ತೋಡಿಕೊಳ್ಳುತ್ತಿದ್ದಾರೆ. ಪರಂಪರಾಗತ ಕಲಾವಂತ ಕುಟುಂಬ. ತಾತ ಮುತ್ತಾತರ ಕಾಲದಿಂದಲೂ ಈ ಕಲಾ ಸರಸ್ವತಿಯ ಸೇವೆಯನ್ನು ಮಾಡುತ್ತಾ ಬಂದಿದ್ದೇವೆ. ನನ್ನ ಕಾಲಕ್ಕೆ ಈ ಕಲೆ ನಿಲ್ಲಬಾರದು ಎಂದು ತೀರಾ ಕೊರಗಿನಿಂದ ನೊಂದು ನುಡಿಯುವ, ಮೂಡಲಗಿರಿಯಪ್ಪ ಕಲೆಗಾಗಿ ಎಂದೂ ಚೌಕಾಸಿ ಮಾಡಿದವರಲ್ಲ. ತನ್ನ ತಂದೆ 10 ರೂ. ಸಂಭಾವನೆ ಪಡೆದು ಕಲಾ ಪ್ರದರ್ಶನ ನೀಡುತ್ತಿದ್ದರು. 10 ರೂ.ನಿಂದ 200 ರೂ.ವರೆಗೆ ಅವರ ಸಂಭಾವನೆ ಇತ್ತು. ಆದರೆ ನಾನಿಂದು 500 ರೂ. ಸಂಭಾವನೆ ಪಡೆಯುತ್ತೇನೆ. ಮೊದಮೊದಲು 100 ರೂ. ಸಂಭಾವನೆ ಪಡೆಯುತ್ತಿದ್ದೆ. ಈಗ ಅವರೇ ಕೊಡುವಾಗ ಪಡೆಯುತ್ತೇನೆ, ಆದರೆ ಇಷ್ಟೇ ಕೊಡಬೇಕೆಂದು ಹಟ ಹಿಡಿಯುವುದಾಗಲೀ, ಚೌಕಾಸಿ ಮಾಡುವುದಾಗಲೀ ಇಲ್ಲವೇ ಇಲ್ಲ.

ತನ್ನ ಹುಟ್ಟೂರು ಕಡವಿಗೆರೆಯಲ್ಲಿ ಪ್ರತಿ ವರ್ಷವೂ ಐರಾವತ ನಾಟಕವನ್ನು ಪ್ರದರ್ಶಿಸುತ್ತಾ ಬಂದಿದ್ದಾರೆ. ಇಲ್ಲಿ ಕಲಾ ಪ್ರದರ್ಶನಕ್ಕೆ ಸಾಂಕೇತಿಕವಾಗಿ 10 ರೂ. ಪಡೆದು ಕಲಾ ಸಂಭಾವನೆ ನೀಡುತ್ತಾರೆ. ಹೇಗಾದರೂ ಯಕ್ಷಗಾನ ಉಳಿಯಬೇಕು. ಇದು ಸರಸ್ವತಿಯ ರೂಪ ಎಂದು ಮುಗ್ಧ ಭಾವನೆಯೊಂದಿಗೆ ಯಕ್ಷಗಾನ ಕಲೆಯ ಉಳಿಯುವಿಕೆಗಾಗಿ ಪ್ರಯತ್ನಿಸುತ್ತಿರುವ ಕಲಾ ಸಂಘಟಕರಾಗಿಯೂ ಮೂಡಲಗಿರಿಯಪ್ಪನವರ ಸಾಧನೆ ಅಪರಿಮಿತವಾದುದು.

ಲವಕುಶರ ಕಥೆ, ದಕ್ಷಯಾಗ, ಐರಾವತ, ಮಯೂರಧ್ವಜ, ಭಕ್ತ ಸುಧನ್ವ, ಸುಂದರಕಾಂಡ ರಾಮಾಯಣ, ರಾಜಾ ಸತ್ಯವ್ರತ ಈ ಮೊದಲಾದ ಯಕ್ಷಗಾನ ಪ್ರಸಂಗಗಳನ್ನು ಬಾಯಿಂದಲೇ ಹೇಳಬಲ್ಲ. ಭಾಗವಂತಿಕೆಯ ಕೌಶಲವನ್ನು ರೂಢಿಸಿಕೊಂಡಿಸಿರುವ, ಮೂಡಲಗಿರಿಯಪ್ಪ ಅವರಿಂದಾಗಿ ಸಿರಾ, ಮಧುಗಿರಿ, ಪಾವಗಡ ಈ ಭಾಗಗಳಲ್ಲಿ ಮೂಡಲಪಾಯ, ಯಕ್ಷಗಾನ

ಕನಿಷ್ಠ ವರ್ಷಕ್ಕೊಂದಾ ವರ್ತಿಯಾದರೂ ಪ್ರದರ್ಶನಕ್ಕೆ ಒಳಗಾಗುತ್ತ, ತನ್ನ ಕಲಾಪ್ರೌಢಿಮೆಯನ್ನು ಉಳಿಸಿಕೊಂಡು ಬರುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

**ನಾದೂರು ಗುಡ್ಡದ ದಾಸಪ್ಪ:**

ಮುಖವೀಣೆ, ಕಹಳೆ, ಚಿಟ್ಟಿಮೇಳ, ಜನಪದ ಸಂಗೀತ ಈ ನಾಲ್ಕು ಪ್ರಕಾರಗಳಲ್ಲಿಯೂ ಹೆಸರು ಮಾಡಿರುವ 80 ವರ್ಷದ ದಾಸಪ್ಪ, ಸ್ವಾತಂತ್ರ್ಯ ಹೋರಾಟಗಾರರೂ ಹೌದು. ಸಿರಾ ತಾಲ್ಲೂಕು ಗೌಡಗೆರೆ ಹೋಬಳಿಗೆ ಸೇರಿದ ನಾದೂರು ದಾಸಪ್ಪ ತಮ್ಮ 20ನೇ ವಯಸ್ಸಿನಿಂದಲೇ ಮುಖವೀಣೆ ಕಲಿತವರು. ಸಿರಾ ತಾಲ್ಲೂಕು ಶ್ಯಾಗದಡು ಗ್ರಾಮದ ಭಾಗವತ ಕಾಲುವೆ ರಂಗಪ್ಪನವರ ಭಾಗವಂತಿಕೆ ಸಿರಾ ಸೀಮೆಯಲ್ಲಿ ಕಲಾ ಶಾಲೆಯಾಗಿ ಕೆಲಸ ಮಾಡುತ್ತಿದ್ದು, ಅಲ್ಲಿಗೆ ಸಿರಾ, ಮಧುಗಿರಿ, ಹಿರಿಯೂರು ಕಡೆಗಳಿಂದ ಭಾಗವಂತಿಕೆ ಕಲಿಯಲು ವಿದ್ಯಾರ್ಥಿಗಳು ಬರುತ್ತಿದ್ದರು. ಅಲ್ಲಿ ಕಡವಿಗೆರೆಯ ದಾಸಪ್ಪ ಸಮರ್ಥವಾಗಿ ಮುಖವೀಣೆ ಕಲಾವಿದರಾಗಿದ್ದರು. ಅವರಿಂದ ಪ್ರೇರಣೆ ಪಡೆದ ದಾಸಪ್ಪ ಮುಖವೀಣೆ ಅಭ್ಯಾಸ ಮಾಡಿದರು. ಅವರೇ ನಿಜವಾದ ಗುರು ಎಂದು ಹೇಳುವ ದಾಸಪ್ಪ ಪರಂಪರಾಗತವಾಗಿ ಬಂದಿದ್ದ ಚಿಟ್ಟಿಮೇಳ ಕಲಿತರು. ತಾತ, ತಂದೆ, ದೊಡ್ಡಪ್ಪನವರ ಜೊತೆಗೂಡಿ ಚಿಟ್ಟಿಮೇಳ ಸಂಘವನ್ನು ಮಾಡಿಕೊಂಡು ಕಾರ್ಯಕ್ರಮ ನೀಡುತ್ತಿದ್ದರು. ಆರೇಳು ಜನರ ಒಂದು ಕಲಾತಂಡಕ್ಕೆ 100 ರೂ. ಸಂಭಾವನೆ ಪಡೆದು ದೇವರ ಉತ್ಸವಗಳಲ್ಲಿ ಚಿಟ್ಟಿಮೇಳ, ಓಲಗ, ಅರೆವಾದ್ಯ ನುಡಿಸುತ್ತಿದ್ದರು. ಅಲ್ಲಿಂದ ಓಲಗದವರ ಮನೆ ಎಂದೇ ಕರೆಯಲು ಆರಂಭಿಸಿದರು.

ಸಿರಾ ತಾಲ್ಲೂಕು ಪಟ್ಟನಾಯಕನಹಳ್ಳಿಯ ಶ್ರೀ ನಂಜಾವಧೂತ ಆಶ್ರಮದ ಶ್ರೀ ಓಂಕಾರೇಶ್ವರ ಸ್ವಾಮಿಯ ಜಾತ್ರೆ ಹತ್ತು ದಿನಗಳ ಕಾಲ ನಿರಂತರವಾಗಿ ನಡೆಯುತ್ತಿದ್ದು, ಆ ಜಾತ್ರೆಯ ವಾದ್ಯ ವಿಶೇಷವನ್ನು ದಾಸಪ್ಪನವರ ಕುಟುಂಬ ಎರಡು ತಲೆಮಾರುಗಳ ಕಾಲ ನಿರಂತರವಾಗಿ ನಡೆಸುತ್ತಾ ಬಂದಿದೆ.

ನಮ್ಮ ಪೂರ್ವಿಕರ ಪರಂಪರೆಯುನ್ನು ನೊಳಂಬರ ಇತಿಹಾಸದೊಂದಿಗೆ ಸರಿಹೊಂದಿಸುವ ದಾಸಪ್ಪ ಪೂರ್ವಿಕರು ಹೇಮಾವತಿ ಸಂಸ್ಥಾನದ ಆಸ್ಥಾನದ ವಾದ್ಯವಿದ್ವಾಂಸರಾಗಿದ್ದರು. ನಾದೂರು ಹಾಗೂ ಬರಗೂರುಗಳಲ್ಲಿ ಕುಮಾರೇಶ್ವರ ದೇವಸ್ಥಾನ ಆರಂಭವಾದ ಮೇಲೆ ದಾಸಪ್ಪನವರ ಕುಟುಂಬದ ಒಬ್ಬ ಸದಸ್ಯರು ನಾದೂರಿಗೆ ಬಂದು ನೆಲೆಸಿ, ಇಲ್ಲಿನ ಕುಮಾರೇಶ್ವರ ದೇವಸ್ಥಾನ, ಬರಗೂರಿನ ಶ್ರೀ ಬಸವೇಶ್ವರ ಹಾಗೂ ಪಟ್ಟನಾಯಕನಹಳ್ಳಿಯ ಶ್ರೀ ಓಂಕಾರೇಶ್ವರ ದೇವಸ್ಥಾನಗಳ ಪೂಜಾಕಾಲದಲ್ಲಿ ವಾದ್ಯ

ನುಡಿಸುವ ಕಾಯಕದ ಹಿನ್ನೆಲೆಯಲ್ಲಿ ಬಂದವರೆಂದೂ, ಅದಕ್ಕಾಗಿ ದೇವಸ್ಥಾನದ ವತಿಯಿಂದ ಜಮೀನೂ ಇದ್ದು, ಅದರಿಂದ ಸಂಭಾವನೆ ಪಡೆಯುತ್ತಿದ್ದುದಾಗಿ ದಾಸಪ್ಪ ಹೇಳುತ್ತಾರೆ. ಮುಖವೀಣೆ ದಾಸಪ್ಪ, ಕಹಳೆ ವಾದ್ಯಗಾರರೂ ಹೌದು. ಯಾವುದೇ ಸಭೆ, ಸಮಾರಂಭಗಳಲ್ಲಿ ಸಮರ್ಥವಾಗಿ ಕಹಳೆ ವಾದ್ಯ ನುಡಿಸುತ್ತಾರೆ.

ಹೇಳುಪದ, ಲಾವಣಿ ಪದಗಳನ್ನು ಸೊಗಸಾಗಿ ಹೇಳುವ ದಾಸಪ್ಪ, ಉತ್ತಮ ಕಲಾವಿದರೂ ಹೌದು. ಪೌರಾಣಿಕ ಬಯಲು ಕತೆಗಳಲ್ಲಿ ಕರ್ಣ, ಶಕುನಿ, ಅರ್ಜುನ ಈ ಪಾತ್ರಗಳಲ್ಲಿಯೂ ಅಭಿನಯಿಸಿದ್ದಾರೆ. ಪ್ರಧಾನವಾಗಿ ಯಕ್ಷಗಾನ, ಬಯಲಾಟಗಳಿಗೆ ಮುಖವೀಣೆ ಕಲಾವಿದರಾಗಿ ಹೆಸರು ಮಾಡಿರುವ, ತುಮಕೂರು ಹಾಗೂ ಕರ್ನಾಟಕಾಂಧ್ರ ಗಡಿಗ್ರಾಮಗಳಾದ ಹೇಮಾವತಿ, ಅಗಳಿ, ಬ್ಯಾಡಗೆರೆ, ಅಮರಾಪುರ, ಮಡಕಶಿರಾ, ರೊಳ್ಳೆ, ಹಿಂದೂಪುರ ಇಲ್ಲಿ ಯಕ್ಷಗಾನ ಪ್ರದರ್ಶನಕ್ಕೆ ಮುಖವೀಣೆ ಕಲಾವಿದರಾಗಿ ಕೆಲಸ ಮಾಡಿದ್ದಾರೆ.

ದುಶ್ಯಾಸನ ಕಥೆ, ವಿರಾಟಪರ್ವ, ಕುಶಲವರ ಕಾಳಗ, ದಶಕಂಠ ರಾಮಾಯಣ ಇವರು ಕಲಿಸಿರುವ ಪ್ರಮುಖ ಯಕ್ಷಗಾನ ಪ್ರಸಂಗಗಳು. ಡಾ|| ರಾಜ್‌ಕುಮಾರ್ ಅವರ ನಿಕಟ ಸಂಪರ್ಕ ಹೊಂದಿದ್ದ ಇವರು ಗಾಜನೂರಿನ ಡಾ.ರಾಜ್‌ಕುಮಾರ್ ಅವರ ಹಳೆಮನೆಯಲ್ಲಿ ಒಂದು ವಾರಗಳ ಕಾಲ ಮುಖವೀಣೆ ನುಡಿಸಿದ ಹಿರಿಮೆ ನನ್ನದು ಎನ್ನುತ್ತಾರೆ. ಇವರು ಸನಾದಿ ಅಪ್ಪಣ್ಣ ಚಿತ್ರದಲ್ಲಿ ಮುಖವೀಣೆ ಕಲಾವಿದರಾಗಿಯೂ ಕೆಲಸ ಮಾಡಿದ್ದಾರೆ. ಮಗ ಗೋಪಾಲ್ ಇಂದು ಮುಖವೀಣೆ ಕಲಾವಿದರಾಗಿದ್ದಾರೆ. ಹತ್ತು ಜನಕ್ಕೆ ಮುಖವೀಣೆ ಕಲಿಸಿದ್ದಾರೆ.

**ಮುಖವೀಣೆ ಕೃಷ್ಣಪ್ಪ:**

ಸಿರಾ ತಾಲ್ಲೂಕು, ಬುಕ್ಕಾಪಟ್ಟಣ ಹೋಬಳಿಗೆ ಸೇರಿದ ಶಾಗದಡು ಒಂದ ಅಪ್ಪಟ ಬುಡಕಟ್ಟು ಗ್ರಾಮ. ಜನಪದ ಕೋಲಾಟ, ಮ್ಯಾಸಬೇಡರ ಕುಣಿತ, ಪಾಳೇಗಾರರ ವೇಷ ಮೊದಲಾದ ಜನಪದ ಕಲೆಗಳ ಸಮೃದ್ಧ ನೆಲೆ. ಸ್ವತಃ ಯಕ್ಷಗಾನದ ಪ್ಲಾಟ್ (ಯಕ್ಷಗಾನ ಪ್ರತಿಗಳನ್ನು) ತಯಾರಿಸಿ ಚಿತ್ರದುರ್ಗ, ಕೋಲಾರ, ಹಾಸನ, ತುಮಕೂರು ಈ ಜಿಲ್ಲೆಗಳ ಯಕ್ಷಗಾನ ಭಾಗವಂತಿಕೆಗೆ ಪ್ರೇರಕ ಶಕ್ತಿಯಾಗಿದ್ದ ಭಾಗವತ ಕಾಲುವೆ ರಂಗಪ್ಪ ಇದೇ ಗ್ರಾಮದವರು. ಇವರು ತಮ್ಮ ಪೂರ್ಣ 90 ವರ್ಷಗಳ ಆಯಸ್ಸನ್ನು ಯಕ್ಷಗಾನ ಪ್ರತಿ ತಯಾರಿಸುವ ಕೆಲಸದಲ್ಲಿಯೇ ಕಳೆದವರು. ಇವರ ಗರಡಿಯಲ್ಲಿ ಬೆಳೆದವರು ಛಲವಾದಿ ಕೃಷ್ಣಪ್ಪ.

ಶಾಗದಡು ಲಿಂಗಪ್ಪ, ಪುಟ್ಟಮ್ಮ ಇವರ ನಾಲ್ವರು ಮಕ್ಕಳಲ್ಲಿ ಕೃಷ್ಣಪ್ಪ ಎರಡನೆಯವರು. ಶಹನಾಯಿ, ಅರೇವಾದ್ಯ, ಚಿಟ್ಟಿಮೇಳ, ದೋಣು ಈ ಮೊದಲಾದ ಜನಪದ ಕಲೆಗಳನ್ನು ಧಾರ್ಮಿಕ ಅಚರಣೆ, ದೇವರ ಉತ್ಸವಗಳಲ್ಲಿ ತಪ್ಪದೇ ಪ್ರದರ್ಶಿಸುತ್ತಾ ಬಂದ ಕುಳವಾಡಿ ಕುಟುಂಬ ಇವರದು. ತಂದೆ ಲಿಂಗಪ್ಪನವರ ಕಲೆ ಹಿರಿಮೆಯನ್ನು ರೂಢಿಸಿಕೊಳ್ಳುವುದರ ಜೊತೆಗೆ ಯಕ್ಷಗಾನ ಪಂಡಿತ ಕಾಲುವೆ ರಂಗಪ್ಪನವರ ಒಡನಾಟ, ಶಿಷ್ಯತ್ವದಿಂದಾಗಿ ಮುಖವೀಣೆ ಕಲೆಯನ್ನು ಸತತವಾಗಿ ಹತ್ತು ವರ್ಷ ಅಭ್ಯಾಸ ಮಾಡಿದರು. ತಮ್ಮ 10ನೇ ವರ್ಷದಿಂದ ಮುಖವೀಣೆ ಕಲಿಯುವುದಕ್ಕೆ ಆರಂಭಿಸಿದ ಕೃಷ್ಣಪ್ಪ ತಮ್ಮ 20ನೇ ವಯಸ್ಸಿನಲ್ಲಿ ಮೂಡಲಪಾಯ ಯಕ್ಷಗಾನ ಕಲೆಗೆ ಮುಖವೀಣೆ ನುಡಿಸುವುದನ್ನು ಆರಂಭಿಸಿದರು. ಮೂಡಲಪಾಯ ಯಕ್ಷಗಾನಗಳಿಗೆ ಸಂದರ್ಭಗಳಿಗೆ ಅನುಸಾರವಾಗಿ ಕಂದ, ಶ್ಲೋಕ, ಭಾವಗಳಿಗೆ ವಿವಿಧ ತಾಳ, ಲಯ ಮತ್ತು ರಾಗಗಳಲ್ಲಿ ಸೊಗಸಾಗಿ ಮುಖವೀಣೆ ನುಡಿಸುವುದು ಇವರ ವಿಶಿಷ್ಟ ಕಲೆಯಾಗಿದೆ.

ಮುಖವೀಣೆ ಕಲೆಯನ್ನು ಶಾಸ್ತ್ರಬದ್ಧವಾಗಿ ಕಲಿತಿರುವ ಇವರು ಸಾದಿ, ಶಿವರಂಜಿನಿ, ಗೌಳ, ಕೊರವಂಜಿ, ಸಾವೇರಿ, ಬಳಹರಿ ಈ ರಾಗಗಳನ್ನು ಅಕರ್ಷಕವಾಗಿ ನುಡಿಸಬಲ್ಲ ಅಪರೂಪದ ಕಲಾವಿದರು. 1970ನೇ ಇಸವಿಯಿಂದ ಸತತವಾಗಿ ಮೂಡಲಪಾಯ ಯಕ್ಷಗಾನದ ಮುಖವೀಣೆ ಭಾಗವತರಾಗಿ ಕಾರ್ಯನಿರ್ವಹಿಸುತ್ತಿರುವ ಕೃಷ್ಣಪ್ಪನವರು ಬಭ್ರುವಾಹನ ಕಾಳಗ, ಸುಧನ್ವನ ಕಾಳಗ, ರತಿ ಕಲ್ಯಾಣ, ಕನಕಾಂಗಿ ಪರಿಣಯ, ಸುಭದ್ರಾ ಪರಿಣಯ, ಕರಿಭಂಟ, ವಿರಾಟಪರ್ವ, ಐರಾವತ, ದ್ರೌಪದಿ ವಸ್ತ್ರಾಪಹರಣ, ಲವಕುಶರ ಕಾಳಗ, ಶನಿಮಹಾತ್ಮೆ, ಗಜಗೌರಿ ವ್ರತ, ಕರ್ಣಾರ್ಜುನರ ಕಾಳಗ ಈ ಮೊದಲಾದ ಪ್ರಸಂಗಗಳಿಗೆ ಮುಖವೀಣೆ ಕಲಾ ಪ್ರದರ್ಶನ ನೀಡಿದ್ದಾರೆ, ನೀಡುತ್ತಿದ್ದಾರೆ. ಈ ಕಲೆಯ ಪ್ರದರ್ಶನಕ್ಕಾಗಿ ಪ್ರತಿ ಯಕ್ಷಗಾನಕ್ಕೆ ಕೇವಲ 100 ರೂ. ಸಂಭಾವನೆಯಿಂದ ಆರಂಭಿಸಿ ಇಂದು 1000 ವನ್ನೂ ಮೀರಿ ಗೌರವ ಸಂಭಾವನೆ ಪಡೆಯುವ ಹಂತ ತಲುಪಿರುವ ಕೃಷ್ಣಪ್ಪ ಯಕ್ಷಗಾನ ಕ್ಷೇತ್ರದಲ್ಲಿ ಹಲವು ಬಗೆಯ ಚಮತ್ಕಾರ, ವೈವಿಧ್ಯತೆ, ರಾಗ ಸಂಯೋಜನೆಯಂತಹ ಹಲವು ವೈವಿಧ್ಯತೆಯನ್ನು ಹೊಂದಿದೆ ಎಂಬುದನ್ನು ತೋರುವ ವಿಶಿಷ್ಟ ಕಲಾವಿದರು ಕೃಷ್ಣಪ್ಪನವರು.

ಕೃಷ್ಣಪ್ಪ ಮುಖವೀಣೆ ಕಲೆಯ ಜೊತೆಗೆ ಇತರೆ ಜನಪದ ವಾದನಗಳಾದ ಶಹನಾಯಿ, ಅರೇವಾದ್ಯ, ಚಿಟ್ಟಿಮೇಳದ ದೋಣು ಹಾಗೂ ಕಹಳೆಯನ್ನು ಸಮರ್ಥವಾಗಿ ನುಡಿಸಬಲ್ಲ ಕಲಾವಿದರು. ಈ ಬಗೆಗೆ ಒಂದು ಸಂಘಟನೆಯನ್ನು ಮಾಡಿಕೊಂಡು ಕಲಾವಿದರ ಸಂಘಟನೆಯಲ್ಲಿಯೂ ತೊಡಗಿರುವುದು ವಿಶೇಷ ಸಂಗತಿಯಾಗಿದೆ.

ಇವರ ಮಗ ಶ್ರೀ ಮಹೇಶ್ ಕೂಡ ಅಪ್ಪನ ಈ ಮುಖವೀಣೆ ಕಲೆಯನ್ನು ಕಲಿತು, ಸಾರ್ಥಕವಾಗಿ ಪ್ರದರ್ಶನ ನೀಡುತ್ತಿರುವುದು ಈ ಕಲೆಯ ಮುಂದುವರಿಕೆಗೆ ಇವರು ನೀಡಿರುವ ಕೊಡುಗೆಯಾಗಿದೆ. ಜಿಲ್ಲಾ, ತಾಲ್ಲೂಕು ಹಂತದ ಹಲವು ಸಭೆ ಸಮಾರಂಭಗಳಲ್ಲಿ ಗೌರವಕ್ಕೆ ಒಳಗಾಗಿರುವ ಕೃಷ್ಣಪ್ಪ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸಾಣೆಹಳ್ಳಿಯಲ್ಲಿ ಏರ್ಪಡಿಸಿದ್ದ ಮೂಡಲಪಾಯ ಯಕ್ಷಗಾನ ಭಾಗವತರ ಸಮಾವೇಶದಲ್ಲಿ ಹಾಸನದಲ್ಲಿ ಏರ್ಪಡಿಸಿದ್ದ ಜನಪದ ರಂಗೋತ್ಸವ ಹಾಗೂ ತಿಪಟೂರಿನಲ್ಲಿ ಏರ್ಪಡಿಸಿದ್ದ ಮುಖವೀಣೆ ಪ್ರಾತ್ಯಕ್ಷಿಕೆ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ಕಲಾವಿದರಾಗಿ ಭಾಗವಹಿಸಿದ್ದರು.

## ಸೋಮನ ಕುಣಿತ ಕಲಾವಿದರು

**ಲಿಂಗೇಗೌಡ ಶ್ಯಾಗದಡು:**

ಸೋಮನಕುಣಿತ ಕಲೆಯ ಜೀವಂತ ದುಡಿಮೆಗಾರ, ಶ್ಯಾಗದಡು ಲಿಂಗೇಗೌಡ. ಬುಡಕಟ್ಟು ಪಂಗಡವಾದ ಬೇಡರ ಜನಾಂಗಕ್ಕೆ ಸೇರಿದ ಲಿಂಗೇಗೌಡ ಶ್ರೀ ಶಿವರಾಮೇಗೌಡ-ಕರಿಯಮ್ಮ ಇವರ ಮೂರೇ ಮಗ. ಈ ದಂಪತಿಗಳ ಮೊದಲ ಮಗ ಭಕ್ತ ರಾಮೇಗೌಡ. ಸಾಹಿತ್ಯದ ಸ್ನಾತಕೋತ್ತರ ವಿದ್ಯಾರ್ಥಿ. ಕೆ.ಎ.ಎಸ್. ಅಧಿಕಾರಿಯೂ ಹೌದು. ತಾಯಿ ಕರಿಯಮ್ಮ ಅತ್ಯುತ್ತಮ ಜನಪದ ಹಾಡುಗಾರ್ತಿ, ಗಾದೆ, ಒಗಟುಗಳ ಭಂಡಾರ. ಗ್ರಾಮದೇವತೆ ಕರಿಯಮ್ಮ, ಕೊಲ್ಲಾಪುರದಮ್ಮ ಈ ದೇವತೆಗಳ ಬಗೆಗೆ ಕಥನಗೀತೆಗಳನ್ನು ಹಾಡುತ್ತಾರೆ. ಕುಲದೇವತೆ ಗೌರಸಂದ್ರದ ಮಾರಮ್ಮ. ಮಾರಮ್ಮ ಸಿರಾ, ಹಿರಿಯೂರು, ಚಳ್ಳಕೆರೆ ತಾಲ್ಲೂಕುಗಳಲ್ಲಿ ಪ್ರಸಿದ್ಧ ದೇವತೆ. ಕಾಡುಗೊಲ್ಲರ ಸಾಂಸ್ಕೃತಿಕ ವೀರ ಜುಂಜಪ್ಪ ಹುಟ್ಟಿದ್ದು ಇದೇ ಗೌರಸಂದ್ರದ ಮಾರಮ್ಮನ ವರದಿಂದ. ಈ ಸಂಬಂಧಿ ಜನಪದ ಕಾವ್ಯಪ್ರಕಾರದಲ್ಲಿ ಜುಂಜಪ್ಪನ ಕಾವ್ಯ ಪ್ರಾದೇಶಿಕವಾಗಿ ಮಹತ್ವ ಪಡೆದಿದೆ. ಶ್ರೀಮತಿ ಕರಿಯಮ್ಮ ಜುಂಜಪ್ಪನ ಪದಗಳನ್ನು ವಿಶೇಷವಾಗಿ ಹಾಡುತ್ತಾರೆ.

ಲಿಂಗೇಗೌಡ ಇದೇ ಜಾಡಿನಲ್ಲಿ ಬಂದವರು. ಗ್ರಾಮದೇವತೆ ಕರಿಯಮ್ಮನ ಉತ್ಸವ, ಪ್ರತಿ ಮಂಗಳವಾರ ಏರ್ಪಡುತ್ತದೆ. ಕರಿಯಮ್ಮನ ಒಕ್ಕಲುಗಳಲ್ಲಿ ಯಾರಾದರೂ ಕರಿಯಮ್ಮನ ಉತ್ಸವ ಏರ್ಪಡಿಸುತ್ತಾರೆ. ಅಂಥ ಸಂದರ್ಭದಲ್ಲಿ ದೇವತೆಗೆ ಮುನ್ನ ಸೋಮನ ಪ್ರವೇಶ, ಕುಣಿತ, ಆರ್ಭಟ. ಕೆಂಪುಸೋಮ, ಕರಿಯ ಸೋಮ, ಚೆಂಚರಾಯ, ಸೋಮಪ್ಪ ಹೀಗೆ ನಾಲ್ಕು ಸೋಮನ ಮುಖವಾಡಗಳಿವೆ. ಈ ಸೋಮನ ಕುಣಿತವನ್ನು ಗುರುಪರಂಪರೆಯಲ್ಲಿ ಕಲಿಸುತ್ತಾ ಇಂದಿಗೂ ಮುಂದುವರಿಸುತ್ತಿರುವ ಹಿರಿಯ ಕಲಾವಿದ

ಲಿಂಗೇಗೌಡ. ಈಗ ಇವರಿಗೆ 60 ವರ್ಷ. ಸಾಕ್ಷಿಹಳ್ಳಿ ಮಣ್ಣಮ್ಮ, ಸೋರೇಕುಂಟೆ ಕರಿಯಮ್ಮ, ಪುರಲೇಹಳ್ಳಿ ಭೂತಪ್ಪ, ಬೇವಿನಹಳ್ಳಿ ಕರಿಯಮ್ಮ ಈ ದೇವರುಗಳು ಜಾತ್ರೆ ಸಿರಾ ತಾಲ್ಲೂಕಿನಲ್ಲಿ ವರ್ಷಕ್ಕೊಮ್ಮೆ ನಡೆಯುತ್ತದೆ. ಆ ಸಂದರ್ಭದಲ್ಲಿ ಲಿಂಗೇಗೌಡ ಮತ್ತವರ ತಂಡದವರಿಂದ ಸೋಮನ ಕುಣಿತದ ಕಲಾಪ್ರದರ್ಶನ ಇದ್ದೇ ಇರುತ್ತದೆ.

ದೇವರು ಧರ್ಮಕ್ರಿಯೆಗಳಲ್ಲಿ ಅಪಾರ ನಂಬಿಕೆ, ಆಚರಣೆಯನ್ನು ಮುಂದುವರಿಸುತ್ತಿರುವ ಜನತೆ ತಮ್ಮ ಮೇಲಿನ ದೋಷಪರಿಹಾರ, ಮಕ್ಕಳ ಫಲಾಪೇಕ್ಷೆ, ಕಾಯಿಲೆಗಳ ನಿವಾರಣೆಯೂ ಸೇರಿದಂತೆ ಮಕ್ಕಳ ಆರೋಗ್ಯ ಸಂಬಂಧ ಸೋಮನಿಂದ ಮರೆ ಹಾಕಿಸುವ ಪದ್ಧತಿಯಿದೆ. ದೇವರ ಮೆರವಣಿಗೆಯ ಸಂದರ್ಭದಲ್ಲಿ ಸಾಲುಗಟ್ಟಿ ಬೀದಿಯಲ್ಲಿ ಕುಳಿತ ಭಕ್ತರನ್ನು ಸೋಮನ ಕುಣಿತದವರು ವಿವಿಧ ಭಂಗಿಯಲ್ಲಿ ಕುಣಿಯುತ್ತಾ ಬಂದು ಚಾಟಿಯಿಂದ ಬಾರಿಸುವುದು, ಆ ಭಕ್ತರು ಸೋಮನ ಕಾಲಿಗೆ ಬಿದ್ದು ಓಡುವುದು ಸಾಮಾನ್ಯ ಪ್ರಕ್ರಿಯೆ. ಇದೆಲ್ಲಾ ಒಂದು ಅತ್ಯುತ್ತಮ ಮನರಂಜನೆಯಾಗಿ ಕಾಣುತ್ತದೆ. ಆ ವಿಶಿಷ್ಟ ಕಲೆಯನ್ನು ಲಿಂಗೇಗೌಡರು ಆಕರ್ಷಕವಾಗಿ ಪ್ರದರ್ಶಿಸುತ್ತಾರೆ.

**ಲಿಂಗದಬೀರರ ಚಿಕ್ಕನಹಳ್ಳಿ ವೀರಣ್ಣ:**

ಲಿಂಗದ ಬೀರರ ಕಲೆಯನ್ನು ಸಮರ್ಥವಾಗಿ ಪ್ರಸಾರ ಮಾಡುತ್ತಾ, ಕಲೆಯ ಉಳಿವಿಗಾಗಿ ಶ್ರಮಿಸುತ್ತಿರುವ ಹಿರಿಯ ಕಲಾವಿದ ಚಿಕ್ಕನಹಳ್ಳಿ ವೀರಣ್ಣ, ಸಿರಾ ತಾಲ್ಲೂಕು ಕಳ್ಳಂಬೆಳ್ಳ ಹೋಬಳಿಗೆ ಸೇರಿದ ಚಿಕ್ಕನಹಳ್ಳಿಯಲ್ಲಿ ಹುಟ್ಟಿದ್ದು 12ನೇ ಆಗಸ್ಟ್ 1939 ರಲ್ಲಿ. ತಂದೆ ಶ್ರೀ ವೀರಭದ್ರಯ್ಯ ದೇವಾಲಯದ ಅರ್ಚಕ ವೃತ್ತಿಯ ಜೊತೆಗೆ ವಂಶಪಾರಂಪರ್ಯ ವೀರಗಾಸೆ ಕಲೆಯನ್ನು ಧಾರ್ಮಿಕ ಆಚರಣೆಯಾಗಿ ಧಾರ್ಮಿಕ ಸಭೆ ಸಮಾರಂಭಗಳೂ ಸೇರಿದಂತೆ ವಿಶೇಷ ಸಂದರ್ಭಗಳಲ್ಲೂ ನಡೆಸುತ್ತಾ ಬಂದವರು. ಇವರಿಗೆ ಒಪ್ಪುವ ಮಡದಿ ಶ್ರೀಮತಿ ಗೌರಮ್ಮ.

ವೀರಭದ್ರನ ಕುಣಿತ, ಲಿಂಗದಬೀರರ ಕುಣಿತ ಎಂದೇ ಪರಿಭಾವಿಸುವ ವೀರಗಾಸೆ ಅತ್ಯಂತ ರೋಚಕ ಕಲೆ. ಸ್ವಯಂ ವೀರಭದ್ರನೇ ಧರೆಗಿಳಿದು ಬಂದ ರೀತಿಯಲ್ಲಿ ಆರ್ಭಟಿಸುವುದು ಈ ಕಲೆಯ ವಿಶೇಷ. ವೀರಗಾಸೆಗಿಂತ ಕೊಂಚ ಭಿನ್ನವಾಗಿ, ಕೈಯಲ್ಲಿ ನೀಳವಾದ ಖಡ್ಗ, ತಲೆಯಲ್ಲಿ ನಾಗಾಭರಣ ಕಿರೀಟ, ಉದ್ದನೆಯ ಕೆಂಪಂಗಿಯ ಕಷಾಯ, ಹಸಿರು ಬಣ್ಣದ ಧೋತ್ರ ಅಥವಾ ಪೈಜಾಮ, ಸೊಂಟಕ್ಕೆ ರುಂಡಮುಂಡಗಳ ಕಂಚಿನ ಫಲಕ, ತೋಳಬಂಧಿ, ನಾಗಾಭರಣ, ಮುಡಿಗೆ ಕೃತಕವಾಗಿ ತಯಾರಿಸಿರುವ ಉದ್ದನೆಯ ಬಿಳಿ ಕೂದಲಿನ ಟೋಫನ್, ಕಾಲಲ್ಲಿ ಗೆಜ್ಜೆ, ಕೊರಳಲ್ಲಿ ರುದ್ರಾಕ್ಷಿಸರ, ಹಣೆ ತುಂಬಾ

ವಿಭೂತಿ, ಕೊರಳಲ್ಲಿ ರುದ್ರಾಕ್ಷಿಯ ಜೊತೆಗೆ ಹೂವಿನ ಹಾರ ಇವು ವೀರಭದ್ರನ ವೇಶಭೂಷಣಗಳು. ವೀರಶೈವ ಧಾರ್ಮಿಕ ವಿಧಿ ವಿಧಾನಗಳಲ್ಲಿ ಕಡ್ಡಾಯವಾಗಿ ಬಳಸುವ, ಆಚರಿಸುವ ಈ ಕುಣಿತ, ದೇವರ ಮೆರವಣಿಗೆ, ನಂದಿಧ್ವಜಗಳೊಂದಿಗೆ ಇರಬೇಕೆಂಬುದು ಜನಪದರ ಬಲವಾದ ನಂಬಿಕೆ. ಚಿಟ್ಟಿಮೇಳದ ವಾದ್ಯಮೇಳಕ್ಕೆ ತಕ್ಕನಾಗಿ ಹೆಜ್ಜೆ ಹಾಕುತ್ತ, ಆವೇಶಭರಿತವಾಗಿ ಕುಣಿಯುವ ಈ ಕಲೆ ವೀರಗಾಸೆ ಕಲೆಗಿಂತ ತೀರಾ ಭಿನ್ನವಾದುದು. ಇಂಥ ಇಲ್ಲವಾಗುತ್ತಿರುವ ಲಿಂಗದಬೀರರ ಕಲಾ ಪರಂಪರೆಯನ್ನು ಸಮರ್ಥವಾಗಿ ಉಳಿಸಿ ಬೆಳೆಸುತ್ತಿರುವುದು ಶ್ರೀ ವೀರಣ್ಣನವರ ವಿಶೇಷ. ತುಮಕೂರು ಜಿಲ್ಲೆಯ ಬೆಳ್ಳಾವೆ ವೀರಣ್ಣ, ಹೆಚ್.ಎಸ್.ನೀಲಕಂಠಪ್ಪ, ಗುಬ್ಬಿಯ ಚಂದ್ರಪ್ಪ, ಕುಣಿಗಲ್ ತಾಲ್ಲೂಕು ಯಡೆಯೂರಿನ ಹೊಸಳ್ಳಯ್ಯ ಈ ಮೊದಲಾದ ಕೆಲವೇ ಕೆಲವು ಕಲಾವಿದರು ಮಾತ್ರ ಲಿಂಗದ ಬೀರರ ಕಲೆಯನ್ನು ಬೆಳೆಸುತ್ತಿರುವ ಕಲಾವಿದರು. ವೃತ್ತಿ ಕಲಾವಿದರಾಗಿರುವುದ ರಿಂದಾಗಿ ಮಾತ್ರ ಈ ಕಲೆ ಉಳಿದಿದೆ ಎಂಬ ಜೀಶಂಪ ಅವರ ಮಾತಿಗೆ ಅರ್ಥಪೂರ್ಣ ಆಚರಣೆಯಾಗಿ ವೀರಶೈವ ಪರಂಪರೆಯಲ್ಲಿ ಉಳಿದು ಬೆಳೆದು ಬರುತ್ತಿದೆ.

ಚಿಕ್ಕನಹಳ್ಳಿ ವೀರಣ್ಣನವರು ಲಿಂಗದಬೀರ ಕಲೆಯ ಸಂಘಟನೆಗಾಗಿ ಜಗಜ್ಯೋತಿ ವೀರಭದ್ರೇಶ್ವರ ನೃತ್ಯ ಲಿಂಗದಬೀರರ ಕಲಾಸಂಘ ಎಂಬ ಸಂಘವನ್ನು ಆರಂಭಿಸಿ, ಈ ಮೂಲಕ ಈ ಕಲೆಯ ಉಳಿಯುವಿಕೆಗಾಗಿ ಶ್ರಮಿಸುತ್ತಿದ್ದಾರೆ. ಇವರ ಇಬ್ಬರು ಮಕ್ಕಳೂ ಈಗಾಗಲೇ ಈ ಕಲೆಯನ್ನು ಪ್ರಸಾರ ಮಾಡುತ್ತ, ತಂದೆಯೊಂದಿಗೆ ಕಲಾ ಪ್ರದರ್ಶನ ನೀಡುತ್ತಿರುವುದು. ಇಡೀ ಕುಟುಂಬ ಪರಂಪರಾಗತವಾಗಿ ಕಲಾ ಪ್ರಸಾರದಲ್ಲಿ ನಿರತವಾಗಿರುವುದು ಅಭಿನಂದನಾರ್ಹ ಸಂಗತಿಯಾಗಿದೆ.

ವೀರಣ್ಣನವರು ಪ್ರಬುದ್ಧ ಕಲಾವಿದರಾಗಿ, ಲೌಕಿಕ-ಅಲೌಕಿಕ ಈ ಎರಡೂ ಪರಂಪರೆಯಲ್ಲಿ ಪ್ರದರ್ಶನ ನೀಡುತ್ತಾರೆ. ರುದ್ರನ ಲಾಂಛನ ತೆಗೆದು ಕಲಾಪ್ರದರ್ಶನ ನೀಡುವುದು ಲೌಕಿಕ ಕಲಾ ಪ್ರದರ್ಶನ. ಹೀಗಾಗಿ ಧಾರವಾಡ, ಹಾನಗಲ್ಲು, ಕೊಪ್ಪಳ, ಚಿಕ್ಕಮಗಳೂರು, ಸಿಂಧನೂರು, ಬೆಂಗಳೂರು ಈ ಕಡೆಗಳಲ್ಲಿ ಪ್ರದರ್ಶಿಸಿದ್ದಾರೆ.

ಸರ್ಕಾರದ ವಿವಿ ಸಮಾರಂಭಗಳಲ್ಲಿ ಆಹ್ವಾನಿತ ಕಲಾವಿದರಾಗಿ ತಾರುಣ್ಯದ ದಿನಗಳಲ್ಲಿ ಯುವಜನ ಮೇಳಗಳಲ್ಲಿ ಭಾಗವಹಿಸಿದ್ದಾರೆ. ಇವರ ಸಾರ್ಥಕ ಕಲಾಸೇವೆಗೆ ಸಂದ ಗೌರವಗಳೂ ಅಪಾರ. 1989 ರಲ್ಲಿ ತುಮಕೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, 1995ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಕಲಾಪ್ರಶಸ್ತಿ, 1997ರಲ್ಲಿ ನಾಲ್ಕನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪ್ರದರ್ಶನ ಪ್ರಶಸ್ತಿ ಮುಖ್ಯವಾದವುಗಳು. ವೀರಭದ್ರನ ಪವಾಡಸದೃಶ, ತೆಂಗಿನಕಾಯಿ ಒಡೆಯುವುದು, ತೂರಿಬರುವ ನಿಂಬೆಹಣ್ಣು ಕತ್ತರಿಸುವುದು ಮೊದಲಾದ ಹಲವು

ಪವಾಡಗಳನ್ನು ವೀರಣ್ಣನವರು ಪ್ರದರ್ಶಿಸುತ್ತಾರೆ. ವೀರಭದ್ರನ ಒಡಪುಗಳನ್ನು ಹೇಳುವುದು ಇವರ ಮತ್ತೊಂದು ವಿಶೇಷವಾಗಿದೆ.

**ದೊಡ್ಡಬಾಣಗೆರೆ ಮಾರಕ್ಕ ಮುತ್ತಕ್ಕ:**

ಮೌಖಿಕ ಕಾವ್ಯ ಪರಂಪರೆಯಲ್ಲಿ ಪುರುಷರೇ ಪ್ರಧಾನ ಪಾತ್ರ. ಆಯಾ ದೇವರ ಹೆಸರಲ್ಲಿ ಗೀತೆ, ತತ್ವಪದಗಳನ್ನು ಹೆಂಗಸರು ಹಾಡುತ್ತಾರಾದರೂ ಒಂದು ಸಮಗ್ರ ಕಾವ್ಯವನ್ನು ಹೆಂಗಸೊಬ್ಬಳು ಹಾಡುವುದು ಅಪರೂಪದ ಪ್ರಸಂಗ. ಇಂತಹ ಅಪರೂಪದ ಪ್ರಸಂಗಗಳಲ್ಲಿ ಸಿರಾ ತಾಲ್ಲೂಕಿನ ದೊಡ್ಡಬಾಣಗೆರೆಯ ಮಾರಕ್ಕ-ಮುತ್ತಕ್ಕ ಸೋದರಿಯರು ವಿಶಿಷ್ಟವಾದವರು. ಮಾರಕ್ಕ ಕಾಡುಗೊಲ್ಲರ ಜನಾಂಗದ ಹೆಣ್ಣುಮಗಳು. ಕಾಡುಗೊಲ್ಲರ ಪುರಾಣ ಪುರುಷ ಚಿತ್ರದೇವರು ಹಾಗೂ ಜನಾಂಗದ ಸಾಂಸ್ಕೃತಿಕ ವೀರರಾದ ಎತ್ತಪ್ಪ, ಜುಂಜಪ್ಪ ಇವರ ಬಗೆಗೆ ತುಮಕೂರು, ಚಿತ್ರದುರ್ಗ, ಕೋಲಾರ ಜಿಲ್ಲೆಗಳಲ್ಲಿ ಅಪಾರ ಜನಪದ ವಾಙ್ಮಯವಿದೆ. ಈ ಭಾಗದ ಎಲ್ಲಾ ಗೊಲ್ಲರಹಟ್ಟಿಗಳಲ್ಲಿ ಜುಂಜಪ್ಪನ ಕಾವ್ಯವನ್ನು ಹಾಡುವ ಪರಂಪರೆಯಿದೆ. ಕೆಲವರು ಸಮಗ್ರವಾಗಿ ಹಾಡಿದರೆ ಕೆಲವರು ಸಂದುಗಳಲ್ಲಿ ಕೆಲವನ್ನು ಮಾತ್ರ ಹಾಡುತ್ತಾರೆ. ಮಾರಕ್ಕ ಅಪರೂಪದ ಜನಪದ ಗಾಯಕಿ ಜುಂಜಪ್ಪನ ಕಾವ್ಯವನ್ನು ಸಮಗ್ರವಾಗಿ ಹಾಡುತ್ತಾರೆ. ಜೊತೆಗೆ ಸೋಬಾನೆ ಪದ, ವೊಸಗೆ ಪದಗಳನ್ನು ಸೊಗಸಾಗಿ ಹಾಡುತ್ತಾರೆ. ಗೊಲ್ಲ ಜನಾಂಗದ ಶುಭ ಕಾರ್ಯಕ್ರಮಗಳಲ್ಲಿ ಆಹ್ವಾನಿತರಾಗಿ ಹಾಡುವ ಮಾರಕ್ಕ ಮಧುರಕಂಠಕ್ಕೆ ಹೆಸರಾದವರು. ಗಣೆಪದ, ಕೋಲುಪದಗಳ ಜೊತೆಗೆ ಭಜನೆಯ ಪದಗಳೆಂಬ ಹೆಸರಲ್ಲಿ ತತ್ವಪದಗಳನ್ನು ಹಾಡುತ್ತಾರೆ. ಎಂಬತ್ತರ ಅಂಚಿನಲ್ಲಿರುವ ಈ ಹಿರಿಯ ಕಲಾವಿದೆ ತಮ್ಮ ಸಂಪ್ರದಾಯನಿಷ್ಠೆಯ ಜೊತೆಗೆ ಹಾಡುಗಾರಿಕೆಯ ನಿಷ್ಠೆಯನ್ನು ಯಥಾವತ್ತಾಗಿ ಕಾಯ್ದುಕೊಂಡು ಬಂದಿದ್ದಾರೆ. ಮನೆ ತುಂಬಾ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳನ್ನು ಹೊಂದಿರುವ ಮಾರಕ್ಕ ತಮ್ಮ ಮಕ್ಕಳು ಪದ ಕಲಿಯುತ್ತಿಲ್ಲವೆಂಬ ಕೊರಗಿದೆ. ಇವರಿಗೆ 2008 ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಪ್ರಶಸ್ತಿಯೂ ಲಭ್ಯವಾಗಿದೆ.

**ಬರಗೂರು ಲಕ್ಷ್ಮಮ್ಮ:**

ಬರಗೂರು ಲಕ್ಷ್ಮಮ್ಮ ಜನಪದ ಹಾಡುಗಾರ್ತಿ. ಪಾವಗಡ ತಾಲ್ಲೂಕು ಮದ್ದೆ ಗ್ರಾಮದ ಆದಿಕರ್ನಾಟಕ ಮನೆತನದ ಓಬಣ್ಣನವರ ಮಗಳು. ಈಕೆಯನ್ನು ಸಿರಾ ತಾಲ್ಲೂಕು ಬರಗೂರು ಗ್ರಾಮದ ಮೈಲಾರ ಲಿಂಗೇಶ್ವರ ದೇವಸ್ಥಾನದ ಪೂಜಾರಿ ಭೂತಣ್ಣನವರಿಗೆ ಕೊಟ್ಟು ಮದುವೆ ಮಾಡಲಾಗಿದೆ. ತನ್ನ ತಾಯಿ ಹನುಮಕ್ಕಳಿಂದ ಕಲಿತ ಪದಗಳೇ ರಾಶಿ

ರಾಶಿ, ಹಗಲೂ ರಾತ್ರಿ ಎರಡು ಹೊತ್ತೂ ಒಂದೇ ಸಮನೆ ಹಾಡುತ್ತೇನೆ ಎಂಬ ದಾಷ್ಟಿಕತೆ ಈಕೆಯದು. ಎರಡು ಹೆಣ್ಣು, ಎರಡು ಗಂಡುಮಕ್ಕಳನ್ನು ಬೆಳೆಸಿರುವ ಇವರು ಇಂದಿಗೂ ಕೂಲಿಯಿಂದ ಜೀವಿಸುತ್ತಿದ್ದಾರೆ.

ಲಕ್ಷ್ಮಮ್ಮ ಸೊಗಸಾದ ಹಾಡುಗಾರ್ತಿ. ಮೈಲಾರಲಿಂಗನ ಪದ, ದೇವಿ ಸ್ವಾರಮ್ಮನ ಪದ, ಚಿತ್ರದೇವರ ಪದ, ದೇವರು ಕರೆಯುವ ಪದಗಳನ್ನು ಹಾಡುವುದು ಈಕೆಯ ವಿಶೇಷ. ಸೋಬಾನೆ ಲಕ್ಷ್ಮಮ್ಮ ಎಂಬ ಹಿರಿಮೆಗೂ ಪಾತ್ರವಾಗಿದ್ದಾರೆ. ಬೆಂಗಳೂರು ಆಕಾಶವಾಣಿಯಲ್ಲಿ 1990 ರಿಂದಲೂ ಸೋಬಾನೆ ಪದಗಳನ್ನು ಹಾಡುತ್ತಿದ್ದಾರೆ. ಇವರೊಂದಿಗೆ ನಿಂಗಮ್ಮ ಎಂಬ ಇನ್ನೊಬ್ಬರು ಕಲಾವಿದೆ ಇವರಿಗೆ ಹಿಮ್ಮೇಳಗಾರರಾಗಿ ಸಾತಿ ನೀಡಿದ್ದಾರೆ. ನಂಜಮ್ಮ, ಲಕ್ಷ್ಮಮ್ಮ ಇವರ ಜೋಡಿ ಸಂಗೀತ ಈ ಭಾಗದಲ್ಲಿ ಜನಪ್ರಿಯವಾಗಿದೆ. ರಾಮನಗರದ ಜನಪದಲೋಕ ಇವರ ಹಾಡುಗಳನ್ನು ಧ್ವನಿಮುದ್ರಿಸಿಕೊಂಡಿದೆ. ಜೊತೆಗೆ 2002 ರಲ್ಲಿ ಜನಪದ ಲೋಕ ಪ್ರಶಸ್ತಿ ನೀಡಿ ಪುರಸ್ಕರಿಸಲಾಗಿದೆ.ಶಿರಾ-ಪಾವಗಡ ಸಾಂಸ್ಕೃತಿಕ ವೇದಿಕೆಗಳ ಸನ್ಮಾನಗಳು ಇವರಿಗೆ ಸಂದಾಯವಾಗಿವೆ.

ಬರಗೂರು ವೀರನಾಗಮ್ಮ, ಜುಂಜಪ್ಪ, ಮದ್ದೆಯ ಸ್ವಾರಮ್ಮ ದೇವಿಯ ಸಮಗ್ರ ಬದುಕು ಕುರಿತು ಕಾವ್ಯ ಹಾಡುತ್ತಾರೆ. ತನ್ನ ಅಜ್ಜಿ ನರಸಮ್ಮರಿಂದ ಸ್ವಾರಮ್ಮ ದೇವಿಯ ಕಾವ್ಯ ಹಾಡುವುದನ್ನು ಕಲಿತಿರುವ ಇವರು ಕುಟ್ಟುವ, ಬೀಸುವ, ದೇವರು ಕರೆಯುವ, ಬೇರೆ ಬೇರೆ ದೇವತೆಗಳ ಮೇಲೂ ಪದ ಹಾಡುತ್ತಾರೆ. ಸೋಬಾನೆ ಇವರ ವಿಶಿಷ್ಠ ಕಲಾಪ್ರಕಾರ. ಈ ಭಾಗದ ಯಾವುದೇ ಸಾಂಸ್ಕೃತಿಕ, ಶುಭ ಸಮಾರಂಭವಿರಲಿ ಅಲ್ಲಿ ಹಾಜರಾಗಿ ಪದ ಹಾಡುತ್ತಾರೆ. ಸಂಭಾವನೆ, ಗೌರವ ಈ ಬಗೆಯ ಯಾವುದೇ ಸೌಲಭ್ಯ ಬಯಸುವುದಿಲ್ಲ. ಸ್ವಯಂಪ್ರೇರಿತವಾಗಿ ಹಾಡುತ್ತಾ ಬರುತ್ತಿರುವುದು ಇವರೊಂದಿಗೆ ಹತ್ತು ಜನ ಹೆಣ್ಣುಮಕ್ಕಳನ್ನು ಸೋಬಾನೆ ಹಾಡುಗಾರಿಕೆಗೆ ತಯಾರು ಮಾಡಿರುವುದು ಇವರು ಸೋಬಾನೆ ಸಂಪ್ರದಾಯವನ್ನು ಬಿತ್ತುವ ಕಾಯಕವನ್ನು ಸದ್ದಿಲ್ಲದೆ ನಡೆಯುತ್ತಾ ಬಂದಿದೆ. ಯಾವುದೇ ಬಿರುದು, ಗೌರವ, ಪ್ರಶಸ್ತಿಯ ಹಂಗಿಗೆ ಬೀಳದೆ, ತನ್ನ ಪಾಡಿಗೆ ತಾನು ಬದುಕಿನ ಮಧ್ಯ ಹಾಡುತ್ತಾ, ಗಡಿ ನೆಲದಲ್ಲಿ ಕನ್ನಡ ಜಾನಪದ ಸಂಸ್ಕೃತಿಯನ್ನು ಪ್ರಸಾರ ಮಾಡುತ್ತಾ, ಕೂಲಿ ಕಾಸಿನಲ್ಲಿ ಬದುಕು ಸವೆಸುತ್ತಿರುವ ಲಕ್ಷ್ಮಮ್ಮ ನಮ್ಮೊಳಗಣ ಮುಗ್ಧ ಕಲಾವಂತಿಕೆಗೆ ಸಾಕ್ಷಿಯಾಗಿದ್ದಾರೆ.

**ಹೇರೂರು ರುದ್ರಮ್ಮ:**

ಹೇರೂರು ರುದ್ರಮ್ಮನವರು ಜನಪದ ಹಾಡುಗಾರ್ತಿ. ತಮ್ಮ ಜೊತೆಯವರನ್ನು



**ಕರ್ನಾಟಕ ಸರ್ಕಾರದ, ಜಾನಪದ ಕಲಾವಿದೆ ಪುರಸ್ಕಾರ ಸ್ವೀಕರಿಸುತ್ತಿರುವ ಸಿರಾ ಕುರುಬರಹಟ್ಟಿಯ ಶ್ರೀಮತಿ ಯಣ್ಣೆಕಟ್ಟೆ ಹನುಮಕ್ಕ. ದೇಜಗೌ, ಕೆರೆಮನೆ ಶಂಭು ಹೆಗಡೆ ಅವರೊಂದಿಗೆ**

ಹುರಿದುಂಬಿಸುತ್ತಾ, ಹಾಡತೊಡಗಿದರೆ ನಿರಂತರವಾಗಿ ಹಾಡುತ್ತಾರೆ. ಹಾಡುಗಳ ವೈವಿಧ್ಯಕ್ಕೆ ಬೆರಗಾಗಲೇಬೇಕು. ಆದಿ ಕರ್ನಾಟಕ ಜನಾಂಗಕ್ಕೆ ಸೇರಿದ ಇವರು ಬಾಲ್ಯದಲ್ಲಿಯೇ ತಮ್ಮ ಗಂಡನನ್ನು ಕಳೆದುಕೊಂಡವರು. ರೈತಾಪಿ ಬದುಕಿನೊಂದಿಗೆ ಮುಖಾಮುಖಿಯಾಗು ತ್ತಲೇ ಕಲೆ, ಕಲಾವಿದರ ಸಂಘಟನೆಗೆ ತಮ್ಮನ್ನು ತೊಡಗಿಸಿಕೊಂಡ ತಮ್ಮ ಅರವತ್ತು ವರ್ಷಗಳ ಈ ವಯಸ್ಸಿನಲ್ಲೂ ಕಂಠಸಿರಿ ಬತ್ತಿಲ್ಲ, ಉತ್ಸಾಹ ಕುಗ್ಗಿಲ್ಲ. ಸಿರಾ, ಹಿರಿಯೂರು, ಚಳ್ಳಕೆರೆ ಈ ಭಾಗಗಳಲ್ಲಿ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮವಿದ್ದರೂ ತಪ್ಪದೇ ಹಾಜರಾಗಿ ಅವಕಾಶ ಪಡೆದು ಒಂದು ಹಾಡು ಹಾಡಿದಾಗಲೇ ಈಕೆಗೆ ಸಮಾಧಾನ. ಅಷ್ಟೊಂದು ಪ್ರೀತಿಯನ್ನು, ಸಾಂಸ್ಕೃತಿಕ ಚಟುವಟಿಕೆಗಳ ಬಗೆಗೆ ತೋರುತ್ತಾರೆ. ಸಿರಾ ತಾಲ್ಲೂಕಿನ ಗಡಿಗ್ರಾಮ ಹೇರೂರು ರುದ್ರಮ್ಮನವರು ಹುಟ್ಟಿದ ಸ್ಥಳ. ಅಲ್ಲಿಯೇ ಬೆಳೆದರು. ಕಾಡುಗೊಲ್ಲರು, ವ್ಯಾಸಬೇಡರು, ಕುರುಬರು, ಕುಂಚಿಟಿಗರು ಇವರುಗಳೊಂದಿಗೆ ಆತ್ಮೀಯವಾಗಿ ಬೆರೆಯುತ್ತಾ ಸೋಬಾನೆ ಪದ ಹಾಡುವುದನ್ನು ಕಲಿತರು. ಯಾರದೇ ಹೊಸಗೆ, ಮದುವೆ, ದೇವರ ಕಾರ್ಯಗಳಂಥ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮವಿದ್ದಲ್ಲಿ ತಪ್ಪದೆ ಹಾಜರಾಗಿ ರಾತ್ರಿಯೆಲ್ಲಾ ಹಾಡುತ್ತಾರೆ. ಹಾಡಿಗಾಗಿ ಸಂಭಾವನೆ ಬಯಸುವುದಿಲ್ಲ. ಕೊಟ್ಟರೆ ಶಿವನ ಜೋಳಿಗೆ ಶಿವಭಿಕ್ಷೆ ಎಂದೆಲ್ಲಾ ಸಂಭಾವ್ಯದಿಂದ ತೆಗೆದುಕೊಳ್ಳುತ್ತಾರೆ. ಹೇರೂರು ರುದ್ರಮ್ಮ

ನವರು ಬಸವೇಶ್ವರರನ್ನು ಕುರಿತು ಪದ ಹಾಡುತ್ತಾರೆ. ಮಾತಂಗ ಗುರುಗಳ ಮೇಲೂ ಪದ ಹಾಡುವುದುಂಟು. ಹೇರೂರಲ್ಲಿ ಜನಪದ ಕಲಾವಿದರ ತಂಡವನ್ನು ಸಮರ್ಥವಾಗಿ ಕಟ್ಟಿ ನಡೆಸಿಕೊಂಡು ಬರುತ್ತಿದ್ದಾರೆ. ಶಾರದಮ್ಮ ಮೊದಲಾದ ಆಸಕ್ತ ಕಲಾವಿದರನ್ನು ತಮ್ಮ ಜೊತೆಗಾರ್ತಿಯರನ್ನಾಗಿಸಿ ಕೊಂಡು ವಾರದಲ್ಲೊಂದು ದಿನ ವಿಶೇಷವಾಗಿ ಪೂರ್ಣಿಮೆಯ, ಅಮಾವಾಸ್ಯೆಯ ದಿನಗಳಂದು ಭಜನೆ ಪದಗಳನ್ನು ತಪ್ಪದೇ ಏರ್ಪಡಿಸುತ್ತಾರೆ. ಸುತ್ತಲಿನ ಭಜನೆ ಕಲಾವಿದರು ಆಗಮಿಸಿ, ರಾತ್ರಿಯೆಲ್ಲಾ ಕಾರ್ಯಕ್ರಮ ನೀಡುತ್ತಾರೆ. ಸಿರಾ ತಾಲ್ಲೂಕು ಆಡಳಿತ ಸುವರ್ಣ ಕರ್ನಾಟಕ ರಾಜ್ಯೋತ್ಸವ ಗಡಿನಾಡ ಜಾನಪದ ಸಂಪರ್ಕಾಧ್ಯಯನ ಪ್ರತಿಷ್ಠಾನ, ಭೂಮಿ ಬಳಗ ಮೊದಲಾದ ಸಾಂಸ್ಕೃತಿಕ ಸಂಘಗಳು ಸಂಘಟಿಸಿದ ಪ್ರತಿಷ್ಠಿತ ಜನಪದ ಕಲಾಪ್ರದರ್ಶನ, ಹಾಡುಗಾರಿಕೆ ಸಮಾರಂಭಗಳಲ್ಲಿ ಭಾಗವಹಿಸಿ ಕಲಾ ಪ್ರದರ್ಶನ ನೀಡಿದ್ದಾರೆ. ಬಡತನ, ಒಂಟಿತನದ ನಡುವೆಯೂ ಕಲಾ ಶ್ರೀಮಂತಿಕೆಯನ್ನು ಪ್ರದರ್ಶಿಸುತ್ತಾ ಬಂದಿರುವ ಹೇರೂರು ರುದ್ರಮ್ಮ ಗ್ರಾಮೀಣ ಕುಸುರಿ ಕಾಯಕದ ಜಾನಪದ ಪ್ರತಿಭೆ. ಇವರಿಗೆ ಪ್ರೇರಣೆ, ಪೋಷಕರು ಹೆಂದೊರೆ ಗ್ರಾಮದ ರಂಗಜ್ಜಿ. 90 ವರ್ಷದ ಅಪೂರ್ವ ಹಾಡುಗಾರ್ತಿ. ತನ್ನ 10ನೇ ವಯಸ್ಸಿನಲ್ಲಿಯೇ ಹನುಮಂತಪ್ಪ ಎಂಬುವವರನ್ನು ಮದುವೆಯಾಗಿ ಗಂಡನಮನೆ, ತವರುಮನೆ ಎರಡೂ ಒಂದೇ ಆಗಿರುವ ರಂಗಜ್ಜಿ ಹಾಡುಗಳ ಕಣಜ. ಸೋಬಾನೆ, ಕಥನಗೀತೆ, ಬೀರಪ್ಪ ದೇವತೆಯ ಕಥನ ಮೊದಲಾದವುಗಳನ್ನು ಹಾಡುವುದಲ್ಲದೆ ಹೆಂದೊರೆಯ ಗುಣ್ಣಾಂಜಿನಯನ ಕಥನನವನ್ನೂ ಹಾಡುತ್ತಾರೆ. ಈ ಭಾಗದ ನೂರಾರು ಹೆಂಗಸರಿಗೆ ಹಾಡನ್ನು ಕಲಿಸಿಕೊಟ್ಟಿದ್ದಾರೆ.

ಸಿರಾದ ರಂಗನಾಥನಗರದ ನಾಗಮ್ಮ, ನಾಗಜ್ಜಿಗುಡ್ಲು ರಂಗಮ್ಮ, ಬರಗೂರಿನ ನಿಂಗಮ್ಮ, ಶಾಸಮರು ಸಣ್ಣಮ್ಮ, ಹೊಸೂರು ದಿ|| ಓಬಜ್ಜಿ ನರಸಮ್ಮ ಮೊದಲಾದವರು ಜನಪದ ಸಂಗೀತ ಪ್ರಕಾರಗಳಾದ ಸೋಬಾನೆ, ದೇವರಪದ, ಜರಿಯುವ ಪದಗಳನ್ನು ಸೊಗಸಾಗಿ ಹಾಡುತ್ತಾರೆ. ಇದರ ಆಚೆಗೂ ಕಾಡುಗೊಲ್ಲರ, ಕುರುಬರ, ಆದಿಕರ್ನಾಟಕ, ಆದಿ ದ್ರಾವಿಡ ಜನಾಂಗದ ಹಲವು ಹಳ್ಳಿಗಳು ಜನಪದ ಸೋಬಾನದ ತವನಿಧಿಗಳಂತಿವೆ. ಇಂಥವರ ಬಗೆಗೆ ಒಂದೊಂದು ಪ್ರತ್ಯೇಕ ಪುಸ್ತಕ ಸಿದ್ಧಪಡಿಸಬಹುದಾದ ಸರಕಿದೆ.

# ಅಧ್ಯಾಯ – ಎಂಟು
# ಕೃಷಿ ಸಂಬಂಧಿ ಜಾನಪದ

ಆರಂಭ, ಬೇಸಾಯ, ಒಕ್ಕಲುತನ, ರೈತಾಪಿ ಕಸುಬು ಹೀಗೆ ನಾನಾ ಹೆಸರುಗಳಿಂದ ಕರೆಯಲ್ಪಡುವ ಕೃಷಿ ಬದುಕು ಅದ್ಭುತ. ಸಕಲ ಜೀವರಾಶಿಗೆ ಜೀವತ್ರಾಣವಾಗುವ, ಅನ್ನ ನೀಡುವ ಪರಮ ಪವಿತ್ರ ಕಾಯಕ, ತುಮಕೂರು ಜಿಲ್ಲೆ ಪ್ರಧಾನವಾಗಿ ಕೃಷಿ ಬದುಕನ್ನು ಅವಲಂಬಿಸಿದ ಪ್ರದೇಶ, ಗುಬ್ಬಿ, ತಿಪಟೂರು, ತುರುವೇಕೆರೆ, ಚಿಕ್ಕನಾಯಕನಹಳ್ಳಿ ಇಲ್ಲಿ ಪ್ರಧಾನವಾಗಿ ರಾಗಿ, ಭತ್ತ ಹಾಗೂ ತೆಂಗನ್ನು ವ್ಯಾಪಾರಿ ಬೆಳೆಯಾಗಿ ಬೆಳೆಯಲಾಗುತ್ತದೆ. ವಿಶೇಷವಾಗಿ ತಿಪಟೂರನ್ನು ತೆಂಗಿನ ಸೀಮ ಎಂದೇ ಕರೆಯುವ ರೂಢಿ ಬಳಕೆಯಲ್ಲಿದೆ. ಪಾವಗಡ, ಮಧುಗಿರಿ ಹಾಗೂ ಸಿರಾ ತಾಲ್ಲೂಕುಗಳಲ್ಲಿ ಸರಾಸರಿ ಮಳೆಯ ಪ್ರಮಾಣದಲ್ಲಿ ಅತಿ ಕಡಿಮೆ ಬೀಳುವ ಪ್ರದೇಶಗಳು. ಕಡ್ಲೇಕಾಯಿ ಇಲ್ಲಿನ ಪ್ರಮುಖ ವಾಣಿಜ್ಯ ಬೆಳೆ. ಕೊರಟಗೆರೆ, ಕುಣಿಗಲ್, ತುಮಕೂರು ಈ ಭಾಗಗಳು ರಾಗಿ, ಅವರೆ, ತೆಂಗು, ರೇಷ್ಮೆ ಬೆಳೆಗಳ ಸಮ್ಮಿಶ್ರ ಪ್ರದೇಶವಾಗಿದೆ. ಒಟ್ಟು ತುಮಕೂರು ಜಿಲ್ಲೆಗೆ ಯಾವುದೇ ನದಿಮೂಲದ ನೀರಾವರಿ ಸೌಲಭ್ಯಗಳಿಲ್ಲ. ಕುಣಿಗಲ್, ಕಡಬಾ, ನೊಣವಿನಕೆರೆ, ನಿಟ್ಟೂರು, ಕಳ್ಳಂಬೆಳ್ಳ ಈ ಊರುಗಳ ಹೆಸರಿನಲ್ಲಿ ಬೃಹತ್ ಪ್ರಮಾಣದ ಕೆರೆಗಳಿದ್ದರೂ ತುಂಬುವುದೇ ಅಪರೂಪ. ಚೆನ್ನಾಗಿ ಮಳೆ ಬಂದರೆ ತುಂಬುವ ಈ ಕೆರೆಗಳು ಮಳೆಗಾಲದಲ್ಲಿ ಮಾತ್ರ ಬೆಳೆಗಳಿಗೆ ನೀರು ಕೊಡಲು ಸಾಧ್ಯವಾಗುತ್ತವೆ. ಅದರ ಹೊರತು ಇತರೆ ಯಾವುದೇ ನೀರಾವರಿ ಸೌಲಭ್ಯಗಳು ಇಲ್ಲದೆ ಮಳೆಯ ನೀರನ್ನೇ ಆಶ್ರಯಿಸಿ ಬೆಳೆಯುವ ಇಲ್ಲಿನ ರೈತರು ಉತ್ಸಾಹಶೀಲರು, ಶ್ರಮಿಕರು, ಭೂಮಿ ತಾಯಿಯನ್ನು ನಂಬಿ ಬದುಕುವ ಕಾಯಕಶೀಲತನ ಇಲ್ಲಿನ ಅನುವಂಶೀಯ ಗುಣವಾಗಿದೆ. ಬೇಸಾಯಕ್ಕೆ ಸಂಬಂಧಿಸಿದ ಹಲವಾರು ಆಚರಣೆಗಳು ಜನಪದದಲ್ಲಿ ರೂಢಿಯಲ್ಲಿದೆ. ಜಾನಪದ ನಂಬಿಕೆ ಹಾಗೂ ಆಚರಣೆಯ ಹಿನ್ನೆಲೆಯಲ್ಲಿ ಬೆಳೆದು ಬಂದಿರುವ ಕೃಷಿ ಜಾನಪದವನ್ನು ಹೀಗೆ ಗ್ರಹಿಸಬಹುದು.

**ಹೊನ್ನಾರು:**

ಮುಂಗಾರು ಮಳೆಯ ಮೊದಲ ಹನಿ ನೆಲಕ್ಕೆ ಬಿದ್ದವೆಂದರೆ ರೈತರಿಗೆ ಎಲ್ಲಿಲ್ಲದ ಉತ್ಸಾಹ. ದಗೆ ಎದ್ದ ಭೂತಾಯಿ ನೀರುಂಡು ಲೋಕಕ್ಕೆ ತಂಪನ್ನು ನೀಡುವುದು ಇದೇ ಸಂದರ್ಭ. ಸಕಲ ಜೀವರಾಶಿಗೆ ಮೈ ಮನಗಳಿಗೆ ಮುದ ನೀಡುವ ಕಾಲ. ಮಳೆಬಿದ್ದ ಕೂಡಲೇ ತಮ್ಮ ತಮ್ಮ ಇಷ್ಟಕ್ಕೆ ಆರು ಕಟ್ಟುವುದಿಲ್ಲ. ಊರಿನ ರೈತರೆಲ್ಲಾ ಸೇರಿ ಆ

ವರ್ಷದಲ್ಲಿ ಯಾರ ಹೆಸರಿನ ಬಲ ಚೆನ್ನಾಗಿದೆ ಎಂದು ಜ್ಯೋತಿಷ್ಯ ಕೇಳಿ, ಅವರು ಸ್ನಾನ ಮಾಡಿ ಮಡಿಬಟ್ಟೆ ಉಟ್ಟು ನೇಗಿಲನ್ನು ತೊಳೆದು ಆರು ಹೂಡುವ ಎತ್ತುಗಳ ಮೈ ತೊಳೆದು, ನೇಗಿಲು ಕಟ್ಟುತ್ತಾನೆ. ನೇಗಿಲಿಗೆ, ಬಸವಣ್ಣಗಳಿಗೆ ವಿಭೂತಿ ಕುಂಕುಮವಿಟ್ಟು, ಸಗಣಿಯ ಉಂಡೆಗೆ ಗರಿಕೆಯ ಪತ್ರೆ ಇಟ್ಟು, ತೆಂಗಿನಕಾಯಿ ಒಡೆದು, ಊದುಬತ್ತಿ ಹಚ್ಚಿ ಪೂಜಿಸುತ್ತಾನೆ. ನೆನೆಯಕ್ಕಿ ನೆನೆಗಡಲೆಯ ಪ್ರಸಾದವನ್ನು ಎಡೆಮಾಡುತ್ತಾರೆ. ಹೊನ್ನಾರು ಹೂಡುವ ಜಾಗಕ್ಕೆ ಊರ ರೈತರು ಹಿರಿಯರು, ಮಕ್ಕಳೆಲ್ಲರೂ ಬರುತ್ತಾರೆ. ದೇವರ ಹೆಸರೇಳಿ ಮೊದಲು ಮೂರು ಗೆರೆ ಹೊಡೆಯುತ್ತಾನೆ. ನಂತರ ಚರ್ಪಿನ ವಿನಿಮಯವಾಗುತ್ತದೆ. ಹಿರಿಯರಿಗೆ ಎಲೆ-ಅಡಿಕೆಯ ವಿನಿಮಯವಾಗುತ್ತದೆ. ಜಯಘೋಷದೊಂದಿಗೆ ಆರಂಭವಾಗುವ ಹೊನ್ನಾರು ಪೂಜೆ ಊರಿನ ಕಿರಿಯರಿಗೆ ಜಾತಿ, ಮತಭೇದ ಮರೆತ ಸಡಗರದ ಉತ್ಸವ.

ತುಮಕೂರು ಜಿಲ್ಲೆಯಾದ್ಯಂತ ಹೊನ್ನಾರು ಸೇವೆ ಬಳಕೆಯಲ್ಲಿದೆ. ಸಿರಾ, ಮಧುಗಿರಿ, ಪಾವಗಡ ಈ ಭಾಗಗಳಲ್ಲಿ ಮಡಕೆ ಪೂಜೆ ಎಂಬ ಹೆಸರಲ್ಲಿ ಹೊನ್ನಾರಿನ ಉತ್ಸವ ನಡೆಯುತ್ತದೆ. ಕುಣಿಗಲ್, ತಿಪಟೂರು, ಗುಬ್ಬಿ, ತುರುವೇಕೆರೆ, ಚಿಕ್ಕನಾಯ್ಕನಹಳ್ಳಿ ಈ ಭಾಗಗಳಲ್ಲಿ ಹೊನ್ನಾರು ಎಂದೇ ಕರೆಯುತ್ತಾರೆ.

**ಬಿತ್ತನೆ ಪೂಜೆ:**

ಸಿರಾ ಭಾಗದ ತಾಲ್ಲೂಕುಗಳಲ್ಲಿ ಹೆಚ್ಚಾಗಿ ರಾಗಿ, ಭತ್ತ, ಅವರೆ, ಹೆಸರು ಧಾನ್ಯಗಳನ್ನು ಹೇರಳವಾಗಿ ಬೆಳೆಯುತ್ತಾರೆ. ಮಳೆ ಬಿದ್ದು ಭೂಮಿಯನ್ನು ಎರಡರಿಂದ ಮೂರು ಬಾರಿ ಉತ್ತು, ಗೊಬ್ಬರ ಮಿಶ್ರಮಾಡಿ, ಬೀಜ ಹದ ಮಾಡುತ್ತಾರೆ. ಯಾವುದೇ ದವಸವನ್ನು ಬಿತ್ತುವಾಗ ಅವುಗಳನ್ನು ಹೊಲಗಳಲ್ಲಿ ಬಿತ್ತುವ ಮೊದಲು ದೇವರ ಎಡೆ ಆಗಬೇಕೆಂಬ ನಿಯಮವಿದೆ. ಒಂದು ಗೂಡೆಯಲ್ಲಿ ರಾಗಿಯನ್ನು ತುಂಬಿ, ಅದಕ್ಕೆ ವಿಭೂತಿ ಇಟ್ಟು, ಅದರ ಮೇಲೆ ಸಗಣಿ ಉಂಡೆ ಇಟ್ಟು, ಅದಕ್ಕೆ ಎರಡು ಎಸಳು ಗರಿಕೆಯನ್ನು ಸಿಕ್ಕಿಸಿ ಕಾಯಿ ಒಡೆದು, ಕಡ್ಡಿ ಹಚ್ಚಿ ಪೂಜಿಸುತ್ತಾರೆ. ತುಂಬಿದ ಗೂಡೆಯ ಒಳಗಿರುವ ಬೆನವಣ್ಣನನ್ನು ಹಾಗೆಯೇ ಬಿಟ್ಟು ಒಂದು ಬೊಗಸೆ ಬಿತ್ತುವ ಬೀಜವನ್ನು ತೆಗೆದುಕೊಂಡು, ಬಂದು ಊರ ದೇವರ ಗುಡಿಯ ಮುಂದೆ ಹಾಕುವುದು ಇಲ್ಲಿನ ಸಂಪ್ರದಾಯವಾಗಿದೆ. ಜೊತೆಗೆ ಹೊಲದಲ್ಲಿ ಬಿತ್ತುವಾಗ ಬೀಜ ತುಂಬಿದ ಗೂಡೆಯಲ್ಲಿದ್ದ ಬೆನವಣ್ಣನನ್ನು ತೆಗೆದು, ಹೊಲದ ಒಂದು ಮೂಲೆಗೆ ಇಟ್ಟು ನಮಸ್ಕರಿಸಿದ ನಂತರವೇ ಹೊಲ ಬಿತ್ತುವ ಕೆಲಸ ಆರಂಭವಾಗುತ್ತದೆ.

ಸಿರಾ, ಪಾವಗಡ ಈ ಭಾಗಗಳಲ್ಲಿ ಸಾಮಾನ್ಯವಾಗಿ ಕಡಲೇಕಾಯಿ ಪ್ರಧಾನ ಬೆಳೆ. ಇಲ್ಲಿ ಬೀಜ ಬಿತ್ತುವಾಗ ಪ್ರತಿ ಮನೆಯ ಗೃಹಬಲವಿರುವ ವ್ಯಕ್ತಿಯೇ ಮೊದಲು ಪೂಜೆ

ಮಾಡಿ, ಬೀಜವನ್ನು ಮೂರು ಗುಡ್ಡೆ ಮಾಡಿ ಒಂದು ಭಾಗವನ್ನು ದೇವಸ್ಥಾನಕ್ಕೆ ತೆಗೆದುಕೊಂಡು ಹೋಗಿ ಅಲ್ಲಿಯೂ ಬೆನವಣ್ಣನನ್ನು ಇಟ್ಟು ಎರಡನೇ ಗೂಡೆಯ ಬೀಜವನ್ನು ಇಡುತ್ತಾರೆ. ಮೂರನೇ ಗುಡ್ಡೆಯ ಬೀಜವನ್ನು ಬಿತ್ತಲಾಗುತ್ತದೆ. ಹೀಗೆ ಮೊದಲು ಬೀಜ ಬಿತ್ತುವ ಮಹಿಳೆ ಅಥವಾ ಪುರುಷರು ಕನಿಷ್ಠ ಮೂರು ಸಾಲನ್ನಾದರೂ ಕೂರಿಗೆಯ ಸಹಾಯದಿಂದ ಬಿತ್ತಲೇಬೇಕೆಂಬ ಸಂಪ್ರದಾಯವಿದೆ.

**ಕುರಿ ತುಳಿಸುವುದು:**

ಹೊಲವನ್ನು ಬಿತ್ತಿದ ಎರಡು ದಿನಗಳಲ್ಲಿ ಬಿತ್ತಿದ ಹೊಲಗಳಿಗೆ ಕುರಿಯನ್ನು ತುಳಿಸುವ ಸಂಪ್ರದಾಯವಿದೆ. ಮಣ್ಣು ಹಗುರವಾಗಿ, ಬೀಜ ಮೊಳೆಯಲು ಸಾಧ್ಯವಾಗುವುದಿಲ್ಲ ಎಂಬ ನಂಬಿಕೆ ಇಲ್ಲಿ ಪ್ರಧಾನವಾಗಿ ಕೆಲಸ ಮಾಡುತ್ತದೆ. ಇದರಿಂದ ಮಣ್ಣು ಬಿಗಿ ಬಂದು ಕಾಳು ಬೇಗ ಮೊಳೆಯಲು ಕಾರಣವಾಗುತ್ತದೆ. ಕುರಿಯ ತುಳಿತದಿಂದ ಭೂಮಿ ಬಿಗಿ ಬಂದು ಬೀಜ ಬೇಗ ಹುಟ್ಟುತ್ತದೆ ಎಂಬ ನಂಬಿಕೆ ಜನಪದರದ್ದು.

**ಹೊಲಕ್ಕೆ ಎಡೆ ಇಡುವುದು:**

ಬೆಳೆದ ಹೊಲವನ್ನು ಕಂಡು ಆನಂದಿಸುವುದು ರೈತಾಪಿ ಬದುಕಿನ ಸಹಜ ಕ್ರಿಯೆ. ಗೌರಿ, ಮಾರ್ನವಮಿಗೆ ಪೈರು ಬೆಳೆದು ನಿಂತು ದುಂಡಾಗುವ ಕಾಲ. ಆಗ ರೈತರು ಹೊಲಕ್ಕೆ ಎಡೆ ಇಡುವ ಆಚರಣೆಯನ್ನು ಮಾಡುತ್ತಾರೆ. ತುಮಕೂರು ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ಈ ಆಚರಣೆ ಬಳಕೆಯಲ್ಲಿದೆ. ಮನೆಯಲ್ಲಿಯೇ ತಯಾರಿಸಿದ ಶ್ಯಾವಿಗೆ ಅಥವಾ ಮೊಸರು ಅನ್ನವನ್ನು ಸಂಜೆಯ ಕಾಲದಲ್ಲಿ ಹೊಲದ ಮಧ್ಯದಲ್ಲಿ ಹಸಿರು ಚಪ್ಪರದ ಸಣ್ಣ ಗೂಡು ಮಾಡುತ್ತಾ, ಮೂರು ಅಥವಾ ಐದು ಬೆಣಚುಕಲ್ಲನ್ನು ಹಸಿಯ ಮಣ್ಣನ್ನು ಕಲೆಸಿ, ಅದಕ್ಕೆ ಪುಟ್ಟ ಗದ್ದಿಗೆಯ ಆಕೃತಿ ಮಾಡಿ, ಬೆನಕನನ್ನು ಇಟ್ಟು, ಅರಿಶಿನ, ಕುಂಕುಮ ಹಾಗೂ ಬಳೆ-ಬಂಗಾರ ಬಿಚ್ಚೋಲೆಯನ್ನು ಇಟ್ಟು ಅದರ ಮುಂದೆ ಮೊಸರನ್ನವನ್ನು ಎಡೆಯಾಗಿಡುತ್ತಾರೆ. ನಂತರ ಹೊಲಗಳಿಗೆ ಅದೇ ಎಡೆಯನ್ನು ಎರಚುತ್ತಾರೆ. ದೀಪ ರಾತ್ರಿಯಲ್ಲಿ ಹೊಲದಲ್ಲಿ ಉರಿಯುತ್ತಿರುತ್ತದೆ. ಹೀಗೆ ಎರಚಿದ ಅನ್ನಕ್ಕೆ ಬೆಳಕು ಹರಿದ ಕೂಡಲೇ ಹಾಗೆ ಗೊರವಂಕ ಮೊದಲಾದ ಪ್ರಾಣಿಗಳು ತಿನ್ನಲು ಬರುತ್ತವೆ. ಆಗ ಹೊಲದಲ್ಲಿದ್ದ ಸಣ್ಣ ಸಣ್ಣ ಹುಳುಗಳು ಪಕ್ಷಿಗಳ ಕಣ್ಣಿಗೆ ಬಿದ್ದು ಮುಂದೆ ಪಕ್ಷಿಗಳು ಹೊಲದಲ್ಲಿರುವ ಹುಳುಗಳನ್ನು ಸುಲಭವಾಗಿ ತಿನ್ನಲು ಇದೊಂದು ಸರಳ ತಂತ್ರವಾಗಿಯೂ ಬಳಸಲಾಗುತ್ತದೆ. ಒಟ್ಟಾರೆ ಹುಳುವನ್ನು ಕೊಲ್ಲುವುದು ರೈತರ ಆಶಯವಿದ್ದಂತೆ ಕಾಣದೆ ಪ್ರಧಾನವಾಗಿ ಈ ಆಚರಣೆ ಹಿಂದೆ ಭೂದೇವಿಗೆ ಶಾಂತಿ ಮಾಡುವ ಭಕ್ತಿಭಾವ ಎದ್ದು ಕಾಣುತ್ತದೆ.

**ಹೊಲದ ದೇವರು:**

ಹೊಲದ ದೇವರು ಮತ್ತು ಇದೇ ಮಾದರಿಯ ಮುನಿಯಪ್ಪ ಈ ಎರಡೂ ಆಚರಣೆಗಳು ತುಮಕೂರು ಜಿಲ್ಲೆಯಾದ್ಯಂತ ಕಂಡುಬರುತ್ತವೆ. ಆದರೆ ಹೊಲದ ದೇವರು ಹಾಗೂ ಮುನಿಯಪ್ಪನ ಆಚರಣೆಯಲ್ಲಿ ವ್ಯತ್ಯಾಸವನ್ನು ಕಾಣಬಹುದು. ಹೊಲದ ದೇವರು ಆಚರಣೆಯಲ್ಲಿ ಹೊಲದ ಪೈರು ಕಾಳು ಬಲಿಯುವ ಕಾಲದಲ್ಲಿ ಹೊಲದ ಮಧ್ಯೆ ಅಥವಾ ಬದುವಿನಲ್ಲಿ ಪುಟ್ಟ ಚಪ್ಪರ ಹಾಕಿ, ಬೆನಕನನ್ನು ಇಟ್ಟು ದೀಪ ಹಚ್ಚುತ್ತಾರೆ. ಕುರಿ ಅಥವಾ ಮೇಕೆಯನ್ನು ಆ ದೇವರ ಮುಂದೆ ಕತ್ತರಿಸಿ ಅದರ ರಕ್ತವನ್ನು ಮನೆಯಿಂದಲೇ ತಯಾರಿಸಿಕೊಂಡು ಬಂದಿರುವ ಅನ್ನಕ್ಕೆ ಬಸಿಯುತ್ತಾರೆ. ನಂತರ ಅದನ್ನು ಕಲೆಸಿ, ಮೊದಲು ದೇವರ ಗದ್ದಿಗೆಯ ಮುಂದೆ ಎಡೆ ಇಟ್ಟು, ನಂತರ ಹೊಲಕ್ಕೆ ಆ ರಕ್ತಮಿಶ್ರಿತ ಅನ್ನವನ್ನು ಎರಚುತ್ತಾರೆ. ನಂತರ ಕತ್ತರಿಸಿದ ಪ್ರಾಣಿಯನ್ನು ಮನೆಗೆ ತಂದು ಕತ್ತರಿಸಿ ಅಡಿಗೆ ಮಾಡಿಕೊಂಡು ಊಟ ಮಾಡುತ್ತಾರೆ. ಇದರಲ್ಲಿ ನೆಂಟರು, ಆಪ್ತರು ಮಾತ್ರ ಭಾಗಿಯಾಗುತ್ತಾರೆ. ಇದು ಊರೂಟ ಅಥವಾ ಕುಲದೂಟವಾಗುವುದಿಲ್ಲ.

**ಮುನಿಯಪ್ಪನ ಆಚರಣೆ:**

ಮುನಿಯಪ್ಪ ಆಚರಣೆಯೂ ತುಮಕೂರು ಜಿಲ್ಲೆಯಾದ್ಯಂತ ಬಳಕೆಯಲ್ಲಿದೆ (ಮಾಂಸಾಹಾರಿಗಳಲ್ಲಿ ಪ್ರಾಣಿ ಬಲಿಯಾದರೆ, ಸಸ್ಯಾಹಾರಿಗಳಲ್ಲಿ ಸಿಹಿ ಊಟದ ಬಳಕೆಯಲ್ಲಿದೆ). ಬೆಳೆ ಸಮೃದ್ಧಿಯಾಗಿ ಬಂದಂತಹ ಸಂದರ್ಭ, ಬೆಳೆಯನ್ನು ಕೊಯ್ದು ಬಣವೆ ಹಾಕುವ ಮೊದಲು ಅಥವಾ ನಂತರ ಮುನಿಯಪ್ಪನ ಆಚರಣೆ ಮಾಡುತ್ತಾರೆ. ಸಾಮಾನ್ಯವಾಗಿ ಹೊಲದ ಯಾವುದೋ ಒಂದು ಮೂಲೆ ಅಥವಾ ಬದುವಿನ ನಡು ಅಥವಾ ಮರ-ಗಿಡ ಬೆಳೆದ ಜಾಗವನ್ನು ಮುನಿಯಪ್ಪನ ಗುಡಿ ಅಥವಾ ಗದ್ದಿಗೆ ಎಂದು ಮೊದಲೇ ಗುರುತಿಸಿಕೊಂಡಿರುತ್ತಾರೆ. ಸಾಮಾನ್ಯವಾಗಿ ಇಂಥ ಕಡೆ ಹುತ್ತ ಬೆಳೆದಿರುತ್ತದೆ ಇಲ್ಲದೇ ಇರಲೂಬಹುದು. ಅಂಥಾ ಜಾಗಗಳಲ್ಲಿ ಆಚರಣೆಯ ದಿನ ಮೊದಲು ಹಸಿರು ಚಪ್ಪರವನ್ನು ಹಾಕುತ್ತಾರೆ. ಮೊದಲೇ ನೆಟ್ಟಿದ್ದ ಕರಿ ಅಥವಾ ಬೆಣಚುಕಲ್ಲು ಇದ್ದು ಅದನ್ನು ಶುದ್ಧವಾದ ನೀರಿನಿಂದ ತೊಳೆದು ಅದರ ಪಕ್ಕದಲ್ಲಿ ಮತ್ತೆ ಕಲೆಸಿದ ಹಸಿಯ ಮಣ್ಣಿನಿಂದ ಸಣ್ಣ ಗದ್ದಿಗೆ ಮಾಡಿ, ಅದರ ಮೇಲೆ ಮೂರು ಅಥವಾ ಐದು ಕಲ್ಲುಗಳನ್ನು ಇಟ್ಟು, ಅದರ ಮುಂದೆ ಸಗಣಿಯುಂಡೆಯನ್ನು ಇಟ್ಟು ಅದಕ್ಕೆ ಗರಿಕೆ, ಪತ್ರೆಯನ್ನು ಇಡುತ್ತಾರೆ. ಬಳೆಬಂಗಾರ, ಬಿಚ್ಚೋಲೆ, ಅರಿಶಿನ, ಕುಂಕುಮ ಇಟ್ಟು ಹೊಸ ಪಂಚೆ ತೊಡಿಸುತ್ತಾರೆ. ನಂತರ ಕಾಯಿ ಒಡೆದು ಪೂಜಿಸುತ್ತಾರೆ. ಆಮೇಲೆ ಹರಕೆಗಾಗಿ ತಂದಿರುವ ಕುರಿ ಅಥವಾ ಮೇಕೆಯನ್ನು ಆ ದೇವರ ಮುಂದೆ ಕತ್ತರಿಸಲಾಗುತ್ತದೆ. ಹೀಗೆ ಕತ್ತರಿಸಿದ ಪ್ರಾಣಿಯನ್ನು ಮನೆಗೆ ತರುವುದಿಲ್ಲ.

ಅಲ್ಲಿಯೇ ಅಡಿಗೆ ಮಾಡುತ್ತಾರೆ. ಸಂಜೆ 4-5 ಗಂಟೆಯ ಸುಮಾರಿಗೆ ಊರಿನವರಿಗೆ, ನೆಂಟರುಗಳಿಗೆಲ್ಲಾ ಅಲ್ಲಿಯೇ ಊಟದ ಏರ್ಪಾಡು ನಡೆಯುತ್ತದೆ. ಯಾವುದೇ ಕಾರಣದಿಂದ ಅಲ್ಲಿ ಉಳಿದ ಅಡಿಗೆಯನ್ನು ಗ್ರಾಮದೊಳಗೆ ತರುವುದಿಲ್ಲ. ಗ್ರಾಮಸ್ಥರಿಗೆ ಊಟ ಹಾಕುವುದಕ್ಕಿಂತ ಮೊದಲು ಎರಡನೇ ಬಾರಿ ಮುನಿಯಪ್ಪನನ್ನು ಪೂಜಿಸಲಾಗುವುದು. ವಿಶೇಷವಾಗಿ ತಯಾರಿಸಿದ ಮಾಂಸದ ಅಡಿಗೆಯನ್ನು ಮುನಿಯಪ್ಪನಿಗೆ ಎಡೆ ಮಾಡಲಾಗುತ್ತದೆ. ಹೀಗೆ ಮಾಡುವುದರಿಂದ ತಮ್ಮ ಹೊಲದಲ್ಲಿ ಚೆನ್ನಾಗಿ ಬೆಳೆ ಬರುತ್ತದೆಂಬ ನಂಬಿಕೆಯೊಂದಿಗೆ ಮನೆಗೆ ಶಾಂತಿ, ಸಮೃದ್ಧಿಯನ್ನು ದೇವರು ನೀಡುವನೆಂಬ ನಂಬಿಕೆ ಇದೆ. ಮುನಿಯಪ್ಪನ ಆಚರಣೆ ಎಲ್ಲಾ ರೈತರಲ್ಲೂ ಇಲ್ಲ. ಕೆಲವರು ಪೂರ್ವಿಕರಿಂದ ಪಾಲಿಸಿಕೊಂಡು ಬಂದುದನ್ನು ಮುಂದುವರಿಸುತ್ತಾರೆ.

**ಕೊಯಿಲುಶಾಸ್ತ್ರ ಅಥವಾ ಮೊದಲು ಶಾಸ್ತ್ರ:**

ವರ್ಷವಿಡೀ ಉತ್ತು, ಬಿತ್ತಿ ಬೆಳೆದ ಬೆಳೆ ಕೈಹತ್ತುವುದು ರೈತರ ಸುಕೃತ ಫಲ ಎಂದೇ ಭಾವಿಸಲಾಗಿದೆ. ಬೆಳೆ ಬಂದಾಗ ಅದನ್ನು ಯಾವಾಗ ಬೇಕಾದರೂ ಕತ್ತರಿಸಬಹುದಾದರೂ ಮೊದಲು ಮಾಡುವ ಶಾಸ್ತ್ರವನ್ನು ಮಾಡಲೇಬೇಕು. ತುಮಕೂರು ಜಿಲ್ಲೆಯ ಪ್ರಮುಖ ಬೆಳೆಯಾದ ರಾಗಿ, ಭತ್ತ, ಕಡ್ಲೆಕಾಯಿ ಅಥವಾ ಜೋಳದ ಬೆಳೆಯನ್ನು ಕಟಾವು ಮಾಡುವಾಗ ಒಂದು ಒಳ್ಳೆಯ ದಿನ ನೋಡಿ ಕೊಯ್ಯುವ ಶಾಸ್ತ್ರ ಮಾಡಿಸುತ್ತಾರೆ. ಇದನ್ನು ಮೊದಲು ಮಾಡುವುದು ಎಂದೇ ಕರೆಯಲಾಗುವುದು. ಕಟಾವಿಗೆ ಬಂದ ಹೊಲಕ್ಕೆ ಹೋಗಿ ಕುಡುಗೋಲುಗಳನ್ನು ಇಟ್ಟು ಬೆನಕನನ್ನು ಇಟ್ಟು ಕಾಯಿ ಒಡೆದು ಹಾಲು, ತುಪ್ಪ ಎರೆಯುತ್ತಾರೆ. ನಂತರ ಒಂದೆರಡು ಅಡಿ ಉದ್ದದ ಬೆಳೆಯನ್ನು ಕೊಯ್ಯುವ ಮೂಲಕ ಆಯುಧಪೂಜೆ ನಡೆಯುತ್ತದೆ. ಇದಾದ ಮೇಲೆ ಎಂದು ಬೇಕಾದರೂ ಹೊಲ ಕೊಯ್ಯಬಹುದು.

**ಕಣ ಮಾಡುವುದು:**

ರೈತ ಸಮೃದ್ಧವಾಗಿ ಬೆಳೆದ ರಾಗಿ, ಭತ್ತ, ಜೋಳ, ಹುರುಳಿ ಮೊದಲಾದ ಧಾನ್ಯಗಳನ್ನು ಹುಲ್ಲಿನಿಂದ ಕಾಳುಗಳನ್ನು ಬೇರ್ಪಡಿಸುವುದು ಅಗತ್ಯ. ಆದರೆ ಹಾಗೆ ಕಾಳುಗಳನ್ನು ಹೇಗೆಂದರೆ ಹಾಗೆ ಬೇರ್ಪಡಿಸಲಾಗುವುದಿಲ್ಲ. ತೆನೆಯಿಂದ ಕಾಳುಗಳನ್ನು ಬೇರ್ಪಡಿಸುವ ಕೆಲಸ ಕಣದಲ್ಲಿ ಮಾತ್ರ ಸಾಧ್ಯ. ಬೆಳೆಯನ್ನು ಕೊಯಿಲು ಮಾಡಿದ ಸ್ಥಳದಲ್ಲಿ ಮೊದಲು ಕಳೆಯನ್ನು ಕೆತ್ತಿ ನೀರು ಹಾಕುತ್ತಾರೆ. ನಂತರ ನೀರು ಹಾಕಿ ಕೆಸರು ಮಾಡಿ, ಕುರಿ-ದನ ತುಳಿಸುವ ಮೂಲಕ ಕೆಸರನ್ನು ಆವಿ ಮಾಡುತ್ತಾರೆ. ನಂತರ ಹೊಂಗೆಸೊಪ್ಪಿನಿಂದ ಸಾರಿಸಿ, ಒಂದು ವಾರ ಒಣಗಿಸಿದರೆ ಕಣ ಸಿದ್ಧವಾಗುತ್ತದೆ. ನಂತರ ಕಣಕ್ಕೆ ಹುಲ್ಲು ಹಾಕುವ ಮುನ್ನ ಸಗಣಿ

ಬಗ್ಗಡವನ್ನು ಹಾಕಿ ಸಾರಿಸುತ್ತಾರೆ. ಹೀಗೆ ಸಾರಿಸುವ ಸಗಣಿಯನ್ನು ಒಂದು ಬಗ್ಗಡದ ಗುಂಡಿಗೆ ಹಾಕಿ ಕೊಳೆಸಬೇಕಾಗುತ್ತದೆ. ಅಂಥ ಸಗಣಿಯಿಂದ ಸಾರಿಸಿದರೆ ನೆಲ ಗಟ್ಟಿಯಾಗಿರುತ್ತದೆಂದು ಭಾವಿಸಲಾಗಿದೆ. ಸಗಣಿ ಹಾಕಿ ಸಾರಿಸಿದ ಒಂದು ದಿನ ಬಿಟ್ಟು ನಂತರ ಹುಲ್ಲು ಹಾಕುತ್ತಾರೆ. ಅಂದರೆ ಕಣದಲ್ಲಿ ಹುಲ್ಲು ಹಾಸಿ, ಗುಂಡುಕಲ್ಲಿಗೆ ಎತ್ತುಗಳನ್ನು ಹೂಡಿ ಹುಲ್ಲಿನ ಮೇಲೆ ತಿರುಗಿಸುತ್ತಾರೆ. ಇದನ್ನು ರೋಣಗಲ್ಲು ಎಂತಲೂ ಕರೆಯುತ್ತಾರೆ.

**ರಾಶಿ ಪೂಜೆ:**

ರೈತರು ರಾಶಿಪೂಜೆಯ ಬಗೆಗೆ ಇನ್ನಿಲ್ಲದ ಗೌರವ ತೋರಿಸುತ್ತಾರೆ. ಇದು ರೈತರ ಸಂತೃಪ್ತಿಯ ಆಚರಣೆ. ಐದಾರು ತಿಂಗಳು ಉತ್ತು ಬಿತ್ತು ಬೆಳೆದ ಪೈರಿನ ಕಾಳುಗಳನ್ನು ಬೇರ್ಪಡಿಸಿಕೊಂಡು ಊಟ ಮಾಡುವ ಹರ್ಷದ ಹಂತ. ರೈತರು ತಾವು ಬೆಳೆದ ಬೆಳೆಯನ್ನು ಕಣದಲ್ಲಿ ರಾಶಿ ಮಾಡುತ್ತಾರೆ. ಎಷ್ಟು ದಿವಸವಾದರೂ ರಾಶಿ ಪೂಜೆಯಾಗದೆ ಮನೆಗೆ ತರುವುದಿಲ್ಲ. ರಾಶಿ ಪೂಜೆಯ ದಿನ ಕಣವನ್ನು ಮತ್ತೆ ಸಾರಿಸುತ್ತಾರೆ. ಕಣದ ತುಂಬಾ ಹರಡಿಕೊಂಡಿದ್ದ ದವಸ, ಉಬ್ಬಲು-ಹುಲ್ಲು ಹೀಗೆ ಮೂರು ಭಾಗ ಮಾಡಿ, ಈ ಮೂರು ಗುಡ್ಡೆಗಳಿಗೂ ಮಾವಿನಸೊಪ್ಪು, ಕಣಗಲೆ ಹೂವು ಇಟ್ಟು ಅವುಗಳ ಮುಂದೆ ಒಂದು ಅಡಿ ಅಗಲ ನೆಲವನ್ನು ಸಾರಿಸುತ್ತಾರೆ. ಬಾಳೆ ಎಲೆ ಹಾಕಿ ಅದರ ಮುಂದೆ ಮೊಸರು, ಅನ್ನ, ಬೆಲ್ಲ ಹಾಗೂ ವಿಶೇಷವಾಗಿ ತಯಾರಿಸಿದ ಅಡಿಗೆಯನ್ನೆಲ್ಲಾ ಎಡೆ ಹಾಕಿ ತೆಂಗಿನಕಾಯಿ ಒಡೆದು ಪೂಜೆ ಮಾಡುತ್ತಾರೆ. ನಂತರ ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡುತ್ತಾರೆ. ಇದನ್ನು ಕಣದ ದೇವರು ಎಂತಲೂ ಕರೆಯುತ್ತಾರೆ.

ಎಲ್ಲರ ಊಟವಾದ ನಂತರ ರಾಶಿಯನ್ನು ಅಳೆಯುವ ಕೆಲಸ ಆರಂಭವಾಗುತ್ತದೆ. ತುಮಕೂರು ಜಿಲ್ಲೆಯ ಗುಬ್ಬಿ, ತಿಪಟೂರು, ಚಿಕ್ಕನಾಯ್ಕನಹಳ್ಳಿ, ಕುಣಿಗಲ್, ತುರುವೇಕೆರೆ ಈ ಭಾಗಗಳಲ್ಲಿ ಇಂದಿಗೂ ದವಸ ಅಳತೆ ಮಾಡಲು ಅಂದು ಸೇರನ್ನು ಬಳಸುವುದಿಲ್ಲ. ಇಬ್ಬಳಿಗೆ ಎಂಬ ನಾಲ್ಕು ಸೇರಿನ ಕಬ್ಬಿಣದ ಕೊಳಗವನ್ನು ಬಳಸುತ್ತಾರೆ. ಲೆಕ್ಕ ಹಾಕುವ ಪರಿಪಾಠವೂ ಮಾಮೂಲಿಗಿಂತ ಭಿನ್ನವಾಗಿರುತ್ತದೆ. ಒಂದು ಎಂದು ಹೇಳುವುದಿಲ್ಲ, ಬದಲಿಗೆ ಹೆಚ್ಚಲಿ ಎಂದೇ ಆರಂಭಿಸುತ್ತಾರೆ. ಏಳು ಎನ್ನದೆ ಬದಲಿ ಎಂದು ಕರೆಯುತ್ತಾರೆ. ಹೀಗೆ ಅಳೆಯುವ ಕೆಲಸ ಬಹಳ ಹೊತ್ತಿನ ತನಕ ನಡೆಯುತ್ತದೆ. ನಂತರ ಗಾಡಿಗಳಲ್ಲಿ ರಾಗಿಯನ್ನು ಮನೆಗಳಿಗೆ ಸಾಗಿಸುವ ಕೆಲಸ ಅಲ್ಲಿ ಕಣಜ ಅಥವಾ ಹಗೇವು ಎಂಬ ದವಸವನ್ನು ಸಂಗ್ರಹಿ ಸುವ ಜಾಗದಲ್ಲಿ ಹಾಕುತ್ತಾರೆ.

ಕಣವನ್ನು ಪೂರ್ತಿಗೊಳಿಸುವ ಮುನ್ನ ಇಲ್ಲಿಗೆ ದಾಸಪ್ಪ, ಜೋಗಪ್ಪ, ಕೆಲವೊಮ್ಮೆ

ಮಡಿವಾಳ, ಕ್ಷೌರಿಕರುಗಳಿಗೆ ಅಡದಿ ಎಂಬ ವರ್ಷದ ಕೂಲಿಯನ್ನು ದವಸದ ರೂಪದಲ್ಲಿ ಕೊಡುವ ಸಂಪ್ರದಾಯವೂ ಇದೆ. ಜೊತೆಗೆ ಭಿಕ್ಷುಕರಿಗೆ ಇಲ್ಲಿಯೇ ದವಸವನ್ನು ದಾನದ ರೂಪದಲ್ಲಿ ಕೊಡಲಾಗುತ್ತದೆ. ಪೂಜೆ ಹಾಗೂ ಅಳತೆ ತಡವಾಗುವ ಸಂದರ್ಭದಲ್ಲಿ ಆ ಕಣದಲ್ಲಿ ಆಗುತ್ತದೆ. ಆ ಕಣದಲ್ಲಿ ಆಗುತ್ತದೆ ಎಂದು ತಾರಾಡುವ ಸಂದರ್ಭವನ್ನು ಗಮನಿಸಿಯೇ ಗಾದೆಯೊಂದು ಹುಟ್ಟಿಕೊಂಡಿದೆ. ಎರಡು ಕಣ ಕಾದು ದಾಸಯ್ಯ ಕೆಟ್ಟ ಎಂಬ ಗಾದೆಯ ಮಾತಿನ ಅರ್ಥವೂ ಇದೇ ಬಗೆಯದು.

## ಕೃಷಿಗೆ ಸಂಬಂಧಿಸಿದ ಹಬ್ಬಗಳು:

### ಬಸವನಹಬ್ಬ:

ತಾಲ್ಲೂಕಿನಾದ್ಯಂತ ಕಾರಬ್ಬ ಹಾಗೂ ದೀಪಾವಳಿ ಹಬ್ಬಗಳನ್ನು ಕೃಷಿಯ ಹಬ್ಬವಾಗಿ ಆಚರಿಸಲಾಗುತ್ತದೆ. ಈ ಹಬ್ಬದಂದು ಕೃಷಿ ಕೆಲಸಕ್ಕೆ ಬಿಡುವು. ಹೊಲವನ್ನು ಉಳುವುದೇ ಆಗಲಿ, ಬಂಡಿ ಕಟ್ಟುವುದೇ ಆಗಲಿ ಮಾಡುವುದಿಲ್ಲ ಅಂದು ಬಸವನ ಹಬ್ಬವಾದುದರಿಂದ ಬಸವನ ಕೊರಳಿಗೆ ನೊಗ ಹಿಡಿಯಬಾರದೆಂದೇ ಭಾವಿಸುತ್ತಾರೆ. ಬೆಳಿಗ್ಗೆ ದನಗಳನ್ನು ಕೆರೆ, ಬಾವಿಯ ಬಳಿಗೆ ಹೊಡೆದುಕೊಂಡು ಹೋಗಿ ಮೈತೊಳೆಯುತ್ತಾರೆ. ನಂತರ ಮನೆಗಳಿಗೆ ಹೊಡೆದುಕೊಂಡು ಬಂದು ಕೋಡುಗಳಿಗೆ ನೀಲಿ ಬಣ್ಣವನ್ನು ಸವರುತ್ತಾರೆ. ಕೆಲವರು ಸುನಾರಿ ಪೇಪರನ್ನು ಬಣ್ಣಬಣ್ಣದ ರೂಪದಲ್ಲಿ ಕತ್ತರಿಸಿ ಅಂಟಿಸುತ್ತಾರೆ. ಜೊತೆಗೆ ಕೋಡುಗಳಿಗೆ ಬಣ್ಣಬಣ್ಣದ ಟೇಪುಗಳನ್ನು ಕಟ್ಟುತ್ತಾರೆ. ಗಾಡಿ, ನೇಗಿಲು, ನೊಗ ಮೊದಲಾದ ಕೃಷಿ ಮೂಲದ ಆಯುಧಗಳನ್ುನ ತೊಳೆದು ಮನೆಯ ಹೊರಭಾಗದಲ್ಲಿಟ್ಟು ನೀಲಿ, ವಿಭೂತಿ, ಕುಂಕುಮವಿಟ್ಟು ಅಲಂಕಾರ ಮಾಡುತ್ತಾರೆ. ಸಂಜೆಗೆ ಬಸವನಪೂಜೆ, ಹಲಸಿನಹಣ್ಣಿನ ತೊಳೆ, ಅನ್ನ ಅಥವಾ ವಿಶೇಷವಾಗಿ ತಯಾರಿಸಿದ ಸಿಹಿ ಅಡಿಗೆಯನ್ನು ಬಸವನಿಗೆ ಎಡೆಯ ರೂಪದಲ್ಲಿ ನೀಡುತ್ತಾರೆ. ಬಸವನ ಪೂಜೆಯ ನಂತರ ಮನೆಯವರೆಲ್ಲರೂ ಊಟ ಮಾಡುತ್ತಾರೆ.

### ಕಾರಬ್ಬ:

ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಆಚರಣೆಯಲ್ಲಿರುವ ಕಾರಹಬ್ಬ ಕೃಷಿ ಪ್ರಧಾನ ಹಬ್ಬ. ಸಾಮಾನ್ಯವಾಗಿ ಜುಲೈ ಕೊನೆಯ ವಾರದಲ್ಲಿ ಆಚರಿಸುವ ಈ ಹಬ್ಬ ರೈತಾಪಿ ಬದುಕಿನ ಒಂದು ಹಂತದ ಮುಕ್ತಾಯದ ಹಬ್ಬ. ರಾಗಿ, ಭತ್ತ, ನವಣೆ, ಅವರೆ, ಹೆಸರು, ತೊಗರಿ ಈ ಧಾನ್ಯಗಳನ್ನು ಹಾಗೂ ಪ್ರಮುಖ ಬೆಳೆಯಾದ ಸೇಂಗಾದ ಬಿತ್ತನೆಯ ಕೆಲಸ ಮುಗಿದಿರುತ್ತದೆ. ಕಾರಬ್ಬದ ದಿನ ದನ, ಗಾಡಿ, ನೇಗಿಲು, ನೊಗ, ಸೆಡ್ಡೆ, ಅಲೆಬೆ,

ಕುಂಟೆ ಮೊದಲಾದ ಕೃಷಿ ಉಪಕರಣವನ್ನು ತೊಳೆದು ಮನೆಯ ಹೊರಗೆ ಇಡಲಾಗುತ್ತದೆ. ಸಂಜೆ ಬಸವಣ್ಣನ ಕೋಡಿಗೆ ನೀಲಿ ಅಥವಾ ಸುನಾರಿ ಪಟ್ಟೆ ಬಳಿದು, ಎಣ್ಣೆ ಹಚ್ಚಿ, ಟೇಪು ಕಟ್ಟಿ ಅಲಂಕಾರಗೊಳಿಸುತ್ತಾರೆ. ಕೃಷಿ ಉಪಕರಣಗಳಿಗೆ ವಿಭೂತಿ, ಕುಂಕುಮವಿಟ್ಟು ಮಾವಿನ ಸೊಪ್ಪು ಮುಡಿಸಿ ಅಲಂಕಾರಗೊಳಿಸಿ ಮನೆಯಲ್ಲಿ ವಿಶೇಷವಾಗಿ ತಯಾರಿಸಿದ ಕಿಚ್ಚಡಿ ಅಥವಾ ಪಾಯಸ, ಶ್ಯಾವಿಗೆ ಈ ಸಿಹಿ ಅಡಿಗೆಯನ್ನು ಬಸವಗಳಿಗೆ ಎಡೆ ಇಡಲಾಗುತ್ತದೆ. ಸಂಜೆಗೆ ದೇವರುಗಳಿಗೆ ವಿಶೇಷ ಪೂಜೆ ಏರ್ಪಾಡಾಗಿರುತ್ತದೆ. ದೇವಸ್ಥಾನದ ಮುಂದೆ ಬೆಂಕಿಯನ್ನು ಹೊತ್ತಿಸಲಾಗುತ್ತದೆ. ಜಾನಪದ ವಾದ್ಯಗಳಾದ ತಮಟೆ, ಹರೆ, ನಗಾರಿ ಬಾರಿಸಲಾಗುತ್ತದೆ. ಎತ್ತರಕ್ಕೆ ಬೆಂಕಿಯನ್ನು ಹೊತ್ತಿಸಿ ಅದರ ಮೇಲೆ ದನಗಳನ್ನು ಓಡಿಸಲಾಗುವುದು. ಇದನ್ನು ಕಿಚ್ಚು ಹಾರಿಸುವುದು ಎಂದು ಕರೆಯಲಾಗುವುದು. ಯುವಕರು ಮನರಂಜನೆಗಾಗಿ ಕೋಲಾಟ, ಪಟಾ ಕುಣಿತ, ದೇವರನ್ನು ಹೊರಡಿಸುವುದು, ತಮಟೆ ಕುಣಿತ ಮೊದಲಾದ ಜಾನಪದ ಕಲಾಪ್ರದರ್ಶನದ ಏರ್ಪಾಡು ಸಾಮಾನ್ಯವಾಗಿರುತ್ತದೆ.

**ದೀವಣಿಗೆ ಹಬ್ಬ:**

ತುಮಕೂರು ಜಿಲ್ಲೆಯಾದ್ಯಂತ ರೂಢಿಯಲ್ಲಿರುವ ದೀವಣಿಗೆ ಹಬ್ಬ ಕೃಷಿ ಹಿನ್ನೆಲೆ ಯಿಂದಲೇ ಬಂದಿರುವುದು ವಿಶೇಷ. ವರ್ಷವಿಡೀ ರೈತರು ಶ್ರಮಪಟ್ಟು ಮಾಡಿದ ಕೃಷಿ ಕೈಗೆ ಬರುವ ಸಂಭ್ರಮದ ಕಾಲ. ಹಾಗೆಯೇ ಈ ಹಬ್ಬದಲ್ಲಿ ಹೊಸ ಬೆಳೆಗಳ ಪೂಜೆ, ಆಹಾರ ದೇವರ ನೈವೇದ್ಯ ನಡೆಯುತ್ತದೆ. ಕೊರಟಗೆರೆ, ಮಧುಗಿರಿ, ಸಿರಾ, ಪಾವಗಡ ಈ ಭಾಗಗಳಲ್ಲಿ ವಿಶಿಷ್ಟವಾದ ರೀತಿಯ ಆಚರಣೆ ಜಾರಿಯಲ್ಲಿದೆ. ದೀವಣಿಗೆ ಹಬ್ಬವನ್ನು ಆಚರಿಸುವ ಹಿಂದಿನ ಮೂರು ದಿನಗಳ ಕಾಲ ದನಕಾಯುವ ಹುಡುಗರು ಅಥವಾ ಕೆಲಸದವರು ಕಾಡಿನಲ್ಲಿ ಬೆಳೆದಿರುವ ತಂಗಟಿ ಹೂಗಳನ್ನು ತಂದು ಗ್ರಾಮದ ಮನೆಗಳ ಮುಂದೆ ಎರಚುವರು. ಹೀಗೆ ಮೂರು ದಿನ ನಡೆಯುತ್ತದೆ. ಕೊನೆಯ ದಿನ ಮನೆಯವರು ಮನೆಯ ಮುಂದೆ ದನದ ಸಗಣಿಯಿಂದ ತಿಪ್ಪೆ ಮಾಡಿ, ಅದಕ್ಕೆ ಹುಚ್ಚೆಳ್ಳು ಮತ್ತು ಚೆಂಡು ಹೂ ಮುಡಿಸುವರು. ಹೊಸದಾಗಿ ಬೆಳೆದ ಅವರೆ, ರಾಗಿ, ಭತ್ತದ ಕಾಳು ತುಂಬಿದ ಗೊನೆಗಳನ್ನು ತಂದು ಹೊಸ್ತಿಲ ಬಳಿ ಇಟ್ಟು ಪೂಜೆ ಮಾಡುವರು. ಸಂಜೆ ದನಗಳನ್ನು ಮೈತೊಳೆದು ಅಲಂಕಾರ ಮಾಡಿ, ಊರ ದೇವಸ್ಥಾನದ ಮುಂದೆ ಕಿಚ್ಚು ಹಾರಿಸುವ ವಿಶೇಷ ಕಾರ್ಯಕ್ರಮ. ಎತ್ತರವಾಗಿ ಬೆಂಕಿ ಹಾಕಿ, ಅದರ ಮೇಲೆ ದನಗಳನ್ನು ಓಡಿಸುವುದು ಈ ಭಾಗಗಳಲ್ಲಿ ಮಹತ್ವದ ಆಚರಣೆಯಾಗಿ ಕಂಡುಬರುತ್ತದೆ.

## ಮಳೆ ಸಂಬಂಧಿ ಜನಪದ:

### ಮಳೆದೇವರು

ಮಳೆ ರೈತರ ಪ್ರಾಣ. ಸಕಲ ಜೀವರಾಶಿಗೂ ಜೀವಧಾತು. ನೀರಿಲ್ಲದೆ ಯಾರೂ ಬದುಕಿ ಉಳಿಯಲಾರರು. ಜೀವದ ಸಂಕೇತವಾಗಿ ಮಳೆಯನ್ನು ವಿಶ್ವದ ಎಲ್ಲಾ ಕಡೆಗಳಲ್ಲೂ ಗೌರವಿಸಲಾಗುತ್ತದೆ. ಜನರು ನ್ಯಾಯ ಪರವಾಗಿ ಬಾಳಿದರೆ, ನಡೆದುಕೊಂಡರೆ, ಮಳೆ ಬೆಳೆಯಾಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ ಎಂಬ ನಂಬಿಕೆ ಜನಪದರಲ್ಲಿ ದಟ್ಟವಾಗಿದೆ. ಮಳೆ ಸರಿಯಾದ ಕಾಲಕ್ಕೆ ಬಾರದೇ ಹೋದಾಗ ಬರಗಾಲ ಆರಂಭ. ಇದಕ್ಕೆ ಗೊಟ್ಟು ಕಾಲ ಎಂತಲೂ ಕರೆಯುತ್ತಾರೆ. ಇಂಥ ಸಂದರ್ಭದಲ್ಲಿ ಮಳೆಯನ್ನು ಬರಿಸುವುದಕ್ಕಾಗಿ ಈ ಮೂಲಕ ವರುಣನನ್ನು ಒಲಿಸಿಕೊಳ್ಳುವುದ್ಕಾಗಿ ಹಲವಾರು ಆಚರಣೆಯನ್ನು ಪ್ರಪಂಚದಾದ್ಯಂತ ಪಾಲಿಸಿಕೊಂಡು ಬಂದಿದ್ದಾರೆ. ಭಾರತದಲ್ಲೂ ಈ ಸಂಬಂಧಿಸಿದ ಆಚರಣೆಗಳನ್ನು ಕಾಣಬಹುದು.

ಸಿರಾ ತಾಲ್ಲೂಕಿನ ಎಲ್ಲಾ ಭಾಗಗಳಲ್ಲೂ ಮಳೆಗೆ ಸಂಬಂಧಿಸಿದ ಆಚರಣೆ ರೂಢಿಯಲ್ಲಿರುವುದನ್ನು ಕಾಣಬಹುದು. ಮಳೆ ಬಾರದೇ ಹೋದ ಸಂದರ್ಭದಲ್ಲಿ ಸಾಮಾನ್ಯವಾಗಿ ಆಗಸ್ಟ್-ಸೆಪ್ಟೆಂಬರ್ ತಿಂಗಳುಗಳಲ್ಲಿ ಮಳೆರಾಯನ ಆಚರಣೆ ಮಾಡುತ್ತಾರೆ. ಇದನ್ನು ಮಳೆದೇವರು ಎಂತಲೂ ಕರೆಯುತ್ತಾರೆ. ಸಾಮಾನ್ಯವಾಗಿ ಯುವಕರೇ ಸೇರಿ ಆಚರಿಸುವ ಮಳೆದೇವರು ಮೊದಲು ಮೂರು ಕೆರೆಗಳ ಜೇಡಿಮಣ್ಣನ್ನು ತಂದು, ತುಂಬಿದ ಕೊಡದ ನೀರಿನ ಸಹಾಯದಿಂದ ಮನುಷ್ಯಾಕೃತಿಯನ್ನು ಮಾಡಲಾಗುವುದು. ಇದು ದೇವೇಂದ್ರನ ಪ್ರತಿರೂಪು. ಆದುದರಿಂದ ದೇವೇಂದ್ರನ ಹಾಗೆಯೇ ಗೊಂಬೆ ಮಾಡುತ್ತಾರೆ. ಈ ಗೊಂಬೆ 10 ರಿಂದ 20 ಕೆಜಿ ತೂಕವುಳ್ಳದ್ದಾಗಿರುತ್ತದೆ. ಹಸಿಯ ಮಣ್ಣಿನಿಂದ ತಯಾರಿಸಿದ ದೇವೇಂದ್ರನ ಮೂರ್ತಿಯನ್ನು 2 ಅಡಿ ಉದ್ದ, 1½ ಅಡಿ ಅಗಲದ ಮರದ ಹಲಗೆಯ ಮೇಲೆ ಇಡಲಾಗುತ್ತದೆ. ಹಸಿಯ ಜೇಡಿಮಣ್ಣು ಹಲಗೆಗೆ ಅಂಟಿಕೊಳ್ಳುವ ಹಾಗೆ ಮಾಡಲಾಗುತ್ತದೆ. ನಂತರ ನಾಲ್ಕು ಮೂಲೆಗೂ ರಂಧ್ರ ಕೊರೆದು ದೆಬ್ಬೆಯಿಂದ ಮಂಟಪ ಮಾಡಿ, ಬಾಳೆಯ ಕಂದು, ಮಾವಿನ ತೋರಣ ಹಾಗೂ ಕಣಗಲೆ ಹೂಗಳಿಂದ ಅಲಂಕಾರ ಮಾಡಲಾಗುತ್ತದೆ. ನಂತರ ಈ ಮೂರ್ತಿಯನ್ನು ಗ್ರಾಮಗಳಲ್ಲಿರುವ ದೇವಸ್ಥಾನದಲ್ಲಿ ಇಡಲಾಗುತ್ತದೆ. ವಿವಾಹವಾಗದ ಯುವಕ ಮೊದಲು ಪೂಜೆ ಮಾಡುತ್ತಾನೆ. ನೆನೆಯಕ್ಕಿ, ನೆನೆಗಡಲೆ, ಬೆಲ್ಲ, ತೆಂಗಿನಕಾಯಿ ತುರಿಯನ್ನು ಬೆರೆಸಿ ಫಲಹಾರ ತಯಾರಿಸುತ್ತಾರೆ. ಪೂಜೆಯಾದ ನಂತರ ಮಳೆದೇವರನ್ನು ಒಬ್ಬ ವ್ಯಕ್ತಿಯ ತಲೆಯ ಮೇಲೆ ಕೂರಿಸುತ್ತಾರೆ. ಜೊತೆಗೆ 20 ರಿಂದ 30 ಜನರ ಮೆರವಣಿಗೆ ಹೊರಡುತ್ತದೆ. ಕೆಲವೊಮ್ಮೆ ಹೆಚ್ಚು ಕಡಿಮೆ

ಇರುತ್ತದೆ. ಪ್ರತಿದಿನ ಸಂಜೆ ಸಮೀಪದ ಊರುಗಳಿಗೆ ಮೆರವಣಿಗೆ ಹೊರಡುತ್ತದೆ. ಆ ಸಂದರ್ಭದಲ್ಲಿ ಒಬ್ಬರು ಮಳೆದೇವರನ್ನು ಕುರಿತು ಪದ ಹೇಳಿಕೊಡುತ್ತಾರೆ, ಉಳಿದವರು ಹಿಮ್ಮೇಳ ದ ಮಾದರಿಯಲ್ಲಿ ಹಾಡುತ್ತಾರೆ. ಕೆಲವೊಮ್ಮೆ ತಾಳ, ಹಾರ್ಮೋನಿಯಂ ಹಾಗೂ ಮೃದಂಗ ವಾದ್ಯಗಳನ್ನೂ ಬಳಸುತ್ತಾರೆ.

ಬಾರೋ ಬಾರೋ ಮಳೆರಾಯ
ಬಂದುಯ್ಯೋ ದೇವೇಂದ್ರ
ನೀನು ಬಂದಂತಾ ಕಾಲಕ್ಕೆ ಬದುಕೇವೋ ಬಾಳೇವು
ಬಾರೋ ಬಾರೋ ಮಳೆರಾಯ ಬಾಳೆ ಗಿಡಕೆ ನೀರಿಲ್ಲ
ಹುಯ್ಯೋ ಹುಯ್ಯೋ ಮಳೆರಾಯ
ಹೂವಿನ ಗಿಡಕೆ ನೀರಿಲ್ಲ

ಮೊದಲಾದ ಹಾಡುಗಳನ್ನು ಮುಮ್ಮೇಳ ಹಾಗೂ ಹಿಮ್ಮೇಳವಾಗಿ ಹಾಡಲಾಗುತ್ತದೆ. ಹೀಗೆ ಮನೆ ಮನೆಗೆ ಬಂದ ಮಳೆದೇವರನ್ನು ಪ್ರತಿ ಮನೆಯ ಬಾಗಿಲಲ್ಲಿ ನಿಲ್ಲಿಸಿ, ತುಂಬಿದ ಕೊಡದಿಂದ ನೀರನ್ನು ಮಳೆದೇವರ ಮೇಲೆ ಸುರಿಯಲಾಗುತ್ತದೆ. ನಂತರ ಅರಿಶಿನ, ಕುಂಕುಮ, ಹೂ ಇಟ್ಟು ತೆಂಗಿನಕಾಯಿ ಒಡೆದು ಪೂಜೆ ಮಾಡುತ್ತಾರೆ. ಕೆಲವು ಅನುಕೂಲಸ್ಥ ಮನೆಯವರು ಬಂದಂಥ ಮಳೆದೇವರ ಹುಡುಗರಿಗೆ ಊಟವನ್ನು ಹಾಕುತ್ತಾರೆ. ಸಾಮಾನ್ಯವಾಗಿ ಮೊರದಲ್ಲಿ ದವಸಗಳಾದ ರಾಗಿ, ಅಕ್ಕಿಯನ್ನು ಕೊಡುತ್ತಾರೆ. ಹೀಗೆ ಊರಾಡಿದ ಮಳೆದೇವರ ಭಕ್ತರು ಅರ್ಧರಾತ್ರಿಯ ವೇಳೆಗೆ ತಮ್ಮ ಊರು ಸೇರಿ ದೇವಸ್ಥಾನದಲ್ಲಿ ಮಳೆದೇವರನ್ನು ಕೂರಿಸಿ, ಅವರವರ ಮನೆಗಳಿಗೆ ಹೋಗಿ ಮಲಗುತ್ತಾರೆ. ಹೀಗೆ 7 ರಿಂದ 11 ದಿನಗಳ ಕಾಲ ಸುತ್ತಲ ಊರುಗಳಲ್ಲಿ ಮಳೆರಾಯನ ಮೆರವಣಿಗೆ ಮಾಡಿ ರಾಗಿ, ಅಕ್ಕಿ, ಕಾಳು ಹೀಗೆ ದವಸಗಳನ್ನು ಸಂಗ್ರಹಿಸಿ ಕೊನೆಯ ದಿನ ಊರ ಹೊರಗಿನ ದೇವಸ್ಥಾನ ಹಾಗೂ ಯಾವುದಾದರೂ ಮರದ ನೆರಳಲ್ಲಿ ವಿಶೇಷ ಅಡಿಗೆಯನ್ನು ತಯಾರಿಸುತ್ತಾರೆ. ಮಳೆದೇವರನ್ನು ಮಾಡುವ ಗ್ರಾಮಸ್ಥರಿಂದ ಮೇಲು ದವಸವನ್ನು ಪಡೆಯುತ್ತಾರೆ. ಸಂಜೆ 4 ರಿಂದ 6 ಗಂಟೆಯೊಳಗೆ ಮಳೆದೇವರನ್ನು ಪ್ರತಿಷ್ಠಾಪಿಸಿರುವ ಜಾಗದಲ್ಲಿ ಮಾವಿನ ಸೊಪ್ಪಿನ ತೋರಣ, ಬಾಳೆಕಂದುಗಳನ್ನು ಕಟ್ಟಿ ವಿಶೇಷ ರೀತಿಯಲ್ಲಿ ಅಲಂಕಾರ ಮಾಡಿರುತ್ತಾರೆ. ಆಯಾಯಾ ವರ್ಗದ ಧಾರ್ಮಿಕ ವ್ಯಕ್ತಿಗಳನ್ನು ಪೂಜೆಗಾಗಿ ಕರೆಸಲಾಗುತ್ತದೆ. ಗೊರವಯ್ಯ, ಜಂಗಮ, ದಾಸಯ್ಯ ಹೀಗೆ ಅವರವರ ಅನುಕೂಲಕ್ಕೆ ತಕ್ಕಂತೆ ಧಾರ್ಮಿಕ ಪೂಜೆ ನಡೆದು ಮಳೆದೇವರಿಗೆ ಅಡಿಗೆ ನೈವೇದ್ಯ ನಡೆಯುತ್ತದೆ. ನಂತರ ಆ ಮಳೆದೇವರನ್ನು ಆ ಊರಿನ ಗಡಿಯಿಂದ ಆಚೆಗೆ ಒಂದು ಹುತ್ತದ ಬುಡ ಅಥವಾ ಮರದ ಬಳಿ ಇಟ್ಟು

ಹಿಂತಿರುಗಿ ನೋಡದೆ ಬರುತ್ತಾರೆ. ಇದಕ್ಕೆ ಮಳೆದೇವರ ಸಾಗಹಾಕುವಿಕೆ ಎಂದು ಕರೆಯುತ್ತಾರೆ. ನಂತರ ಬಂದ ಜನರಿಗೆಲ್ಲಾ ಊಟದ ಸಮಾರಾಧನೆ ನಡೆಯುತ್ತದೆ. ಮಳೆದೇವರ ಆಚರಣೆ ತುಮಕೂರು ಜಿಲ್ಲೆಯಂತೆ ಮಂಡ್ಯ, ಮೈಸೂರು, ಹಾಸನ, ಕೋಲಾರ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಬಳಕೆಯಲ್ಲಿದ್ದು ಹೆಚ್ಚು ಕಡಿಮೆ ಈ ಎಲ್ಲಾ ಆಚರಣೆಯ ವಿಧಿ ವಿಧಾನಗಳೂ ಏಕರೂಪದಲ್ಲಿರುತ್ತವೆ.

**ಪರೇವು:**

ಮಳೆದೇವರಿಗಾಗಿ ಮಾಡುವ ಈ ಪರೇವು ಆಚರಣೆ ಬಯಲುಸೀಮೆಗಳಲ್ಲಿ ಇಂದಿಗೂ ಬಳಕೆಯಲ್ಲಿದೆ. ಮಳೆ ಬಾರದೇ ಹೋದಾಗ ಶ್ರಾವಣಮಾಸದ ಸಂದರ್ಭದಲ್ಲಿ ಮಳೆಯ ಹೆಸರಲ್ಲಿ ಪರೇವು ಮಾಡಲಾಗುವುದು. ಪರೇವು ಅಂದರೆ ಅನ್ನ ಸಂತರ್ಪಣೆ. ಊರ ಗ್ರಾಮಸ್ಥರೆಲ್ಲರೂ ಕೂಡಿ ಪರೇವು ಮಾಡುವ ದಿನವನ್ನು ನಿಗದಿಮಾಡಿ ಒಂದು ಸೋಮವಾರ ಊರಿನ ಹೊರಕ್ಕೆ ನೀರು ಇರುವ ಜಾಗಕ್ಕೆ ಹೋಗುತ್ತಾರೆ. ಅಲ್ಲಿ ಒಂದು ಜಾಗದಲ್ಲಿ ಹಸಿರುಚಪ್ಪರ ಹಾಕಿ, ಒಂದು ಕಲ್ಲಿಟ್ಟು ಹೊಸ ಪಂಚೆ ವಸ್ತ್ರವನ್ನು ತೊಡಿಸಲಾಗುತ್ತದೆ. ಬೆಳಗಿನ ಪೂಜೆ, ಸಂಜೆಯ ಪೂಜೆ ಎಂದು ಎರಡು ವಿಧದಲ್ಲಿ ಆಚರಿಸುವ ಪರೇವು ಆಚರಣೆಯಲ್ಲಿ ಸಂಜೆ ಅಕ್ಕಪಕ್ಕದ ಗ್ರಾಮಸ್ಥರೂ ಸೇರಿದಂತೆ ಊರಿನವರಿಗೆಲ್ಲಾ ಊಟ ಹಾಕಲಾಗುತ್ತದೆ. ಅನ್ನದಾನದ ಹೆಸರಲ್ಲಿ ಪರೇವು ಎಂದೇ ಕರೆಯುವ ಈ ಸಂಪ್ರದಾಯದ ಆಶಯ ಮಳೆ ಬಂದು ಹಸಿದ ಹೊಟ್ಟೆಯನ್ನು ತಣ್ಣಗಾಗಿಸುವುದೇ ಆಗಿದೆ.

**ಬರಗಲ್ಲು ಸಾಗಿಸುವುದು:**

ಬರಗಲ್ಲು ಎಂದರೆ ಆರೇಳು ಅಡಿ ಉದ್ದ ಹಾಗೂ 2 ಅಡಿ ಅಗಲದ ಚಪ್ಪಟೆ ಕಲ್ಲು. ಅದರಲ್ಲಿ ಮನುಷ್ಯ ಆಕೃತಿಯ ಅಥವಾ ಚಂದ್ರ, ಸೂರ್ಯ, ನಕ್ಷತ್ರಗಳ ಆಕೃತಿಯನ್ನು ಕೆತ್ತಲಾಗಿರುತ್ತದೆ. ಇದೊಂದು ತಕ್ಷಣದಲ್ಲಿ ಮಾಡಿಸಿರುವ ಕಲ್ಲು ಅಲ್ಲ. ಇದರಲ್ಲಿ ಬರೆದಿರುವ ಚಿತ್ರಗಳನ್ನು ಗಮನಿಸಿದರೆ ಇದೊಂದು ಹಳೆಯ ಮಾದರಿಯೆಂದು ತಿಳಿಯುತ್ತದೆ. ಬರಗಲ್ಲು ಇರುವ ಎಲ್ಲೆಯ ಒಳಗೆ ಮಳೆ ಬೀಳುವುದಿಲ್ಲ ಎಂಬ ದಟ್ಟ ನಂಬಿಕೆ ಕರ್ನಾಟಕದ ಹಲವು ಪ್ರದೇಶಗಳಲ್ಲಿ ಇದೆ. ಅದೇ ನಂಬಿಕೆ ತುಮಕೂರು ಜಿಲ್ಲೆಯಾದ್ಯಂತ ಬಳಕೆಯಲ್ಲಿದೆ. ಇಂಥ ಸಂದರ್ಭಗಳಲ್ಲಿ ಕಲ್ಲನ್ನು ಪತ್ತೆ ಮಾಡಿ, ಒಂದು ಗೋಣಿಚೀಲದಲ್ಲಿ ಮುಚ್ಚುತ್ತಾರೆ. ಈ ಕಲ್ಲಿನಾಕೃತಿಯಲ್ಲಿಯೇ ಗೋಣಿತಾಟನ್ನು ಹರಿದು ಸೇರಿಸಿ ಹೊಲಿಯುತ್ತಾರೆ. ನಂತರ ಯಾರಿಗೂ ಗೊತ್ತಾಗದ ಹಾಗೆ ಎತ್ತಿನ ಬಂಡಿಯಲ್ಲಿ ಹಾಕಿಕೊಂಡು ಕನಿಷ್ಠ 10 ರಿಂದ 15 ಕಿ.ಮೀ. ದೂರದವರೆಗೆ ಸಾಗಿಸಿ ಬರುತ್ತಾರೆ. ಅಂದರೆ ಆ ಗ್ರಾಮದ ಗಡಿಯನ್ನು

ಬದಲಿಸುವುದಾಗಿದೆ. ಕೆಲವೊಮ್ಮೊ ರೈಲುಗಾಡಿಯಲ್ಲಿ ಹಾಕಿ ಹಾಗೆ ಬಿಟ್ಟು ಬರುವ ಸಂಪ್ರದಾಯವೂ ಇದೆ. ಒಟ್ಟಾರೆ ಬರಗಲ್ಲು ಇದ್ದರೆ ಬರ ಗ್ಯಾರಂಟಿ ಎಂದು ನಂಬಿ ಅದನ್ನು ಸಾಗಿಸುವ ಸಂಪ್ರದಾಯ ಜನಪದರಲ್ಲಿದೆ.

**ಹೂತ ಶವ ಸುಡುವುದು:**

ವ್ಯಕ್ತಿ ಸತ್ತಾಗ ಸಹಜವಾಗಿ ಆತನನ್ನು ಹೂಳುವುದು ಸಹಜ. ಬ್ರಾಹ್ಮಣ, ವೈಶ್ಯ ಜಾತಿಗಳಲ್ಲಿ ಮಾತ್ರ ಸುಡುವ ಸಂಪ್ರದಾಯವಿದ್ದು ಇತರೆ ವರ್ಗಗಳಲ್ಲಿ ಹೂಳುವ ಪದ್ಧತಿ ಇದೆ. ಕೆಲವೊಮ್ಮೆ ಈ ಹೂಳುವ ಪದ್ಧತಿಯ ವ್ಯಕ್ತಿಗಳನ್ನು ತೊನ್ನು ರೋಗ ಇದ್ದು ಅಂಥವರನ್ನು ಹೂತರೆ ಮಳೆ ಬರುವುದಿಲ್ಲ ಎಂದು ನಂಬಲಾಗಿದೆ. ಒಂದು ವೇಳೆ ಅಂಥ ಶವವನ್ನು ಹೂತು, ಮಳೆ ಬಾರದೇ ಹೋದರೆ ಅದನ್ನು ಗ್ರಾಮದ ಹಾಗೂ ಅಕ್ಕಪಕ್ಕದವರು ವಿಶೇಷ ಅರ್ಥ ಕಲ್ಪಿಸಿ ಮಾತನಾಡುತ್ತಾರೆ. ಜೊತೆಗೆ ಇದರಿಂದಲೇ ಮಳೆ ಬಾರದಿರುವುದು ಎಂದು ನಂಬಲಾಗಿದೆ. ಆಗ ಪರಸ್ಪರ ಉತ್ಸಾಹಗೊಂಡು ಹೂತ ಶವವನ್ನು ಹೊರತೆಗೆದು ಸುಡುವ ಸಂಪ್ರದಾಯ ತುಮಕೂರು ಜಿಲ್ಲೆಯಲ್ಲಿ ಬಳಕೆಯಲ್ಲಿದೆ. ಹಾಗೆಯೇ ಗರ್ಭಿಣಿ ಸ್ತ್ರೀ ಸತ್ತಾಗಲೂ ಆಕೆಯನ್ನು ಶವಸಂಸ್ಕಾರ ಮಾಡುವ ಸಂದರ್ಭದಲ್ಲಿ ಹೊಟ್ಟೆಯನ್ನು ಸೀಳುವ ಸಂಪ್ರದಾಯವಿದೆ. ಹೀಗೆ ಮಾಡದೇ ಹೋದಲ್ಲಿ ಮಳೆ ಬರದೆ ಬರಗಾಲ ಬರುವುದೆಂಬ ದಟ್ಟ ನಂಬಿಕೆ ಇದೆ. ಕರ್ನಾಟಕದಾದ್ಯಂತ ಬಳಕೆಯಲ್ಲಿರುವಂತೆ ತುಮಕೂರು ಜಿಲ್ಲೆಯಲ್ಲಿಯೂ ಪ್ರಸ್ತುತದಲ್ಲಿದೆ.

**ಕತ್ತೆ ಮೆರವಣಿಗೆ:**

ಮಳೆ ಬಾರದೇ ಇರುವ ಸಂದರ್ಭಗಳಲ್ಲಿ ಕತ್ತೆಗಳನ್ನು ಊರ ಬೀದಿಯಲ್ಲಿ ಮೆರವಣಿಗೆ ಹೊರಡಿಸುವುದು ತುಮಕೂರು ಜಿಲ್ಲೆಯ ಕೆಲವು ಭಾಗದಲ್ಲಿ ಪ್ರಚಲಿತದಲ್ಲಿದೆ. ಈ ಸಂದರ್ಭದಲ್ಲಿ ಕತ್ತೆಗಳ ಕೊರಳಿಗೆ ಹಾರ ಹಾಕಿ, ಖಾಲಿ ಕೊಡಗಳನ್ನು ಹಿಡಿದು ಮೆರವಣಿಗೆ ಹೊರಡುವುದು, ಕತ್ತೆಗಳಿಗೆ ಮದುವೆ ಮಾಡಿಸುವುದು ಬಳಕೆಯಲ್ಲಿದೆ. ಈ ಮೆರವಣಿಗೆಗಳ ಸಂದರ್ಭದಲ್ಲಿ ಸಾಮಾನ್ಯವಾಗಿ ಕಂಡುಬರುವ ಪ್ರದರ್ಶನವಾಗಿದೆ. ತಮಟೆ, ಉರುಮೆ, ಓಲಗಗಳ ಸಂಗೀತ ಸಂಯೋಜನೆಯೂ ಮೆರವಣಿಗೆಗೆ ರಂಗು ತಂದು ಆಕರ್ಷಕವಾಗಿರುತ್ತದೆ. ಈ ಮೆರವಣಿಗೆಯಲ್ಲಿ ಮಳೆರಾಯನನ್ನು ಕುರಿತು ಯಾಚಿಸುತ್ತ ಗೋಳಿಡುವುದೂ ಉಂಟು.

## ಜನಪದ ಅಡಿಗೆ ಪ್ರಕಾರಗಳು

ತುಮಕೂರು ಭೌಗೋಳಿಕವಾಗಿ ಮೂರು ವಿಧದ ಲಕ್ಷಣಗಳನ್ನು ಗುರುತಿಸಬಹುದು. ಪಾವಗಡ ತುಮಕೂರು ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟರೂ ಆಹಾರ, ಭಾಷೆ, ಆಚಾರ ವಿಚಾರಗಳಲ್ಲಿ ನೆರೆಯ ಆಂಧ್ರಪ್ರದೇಶದ ಆಚಾರ ವಿಚಾರಗಳನ್ನು ರೂಢಿಸಿಕೊಂಡಿದೆ. ಸಿರಾ, ಮಧುಗಿರಿ, ತೆಲುಗು ಭಾಷಾ ಸೊಗಡನ್ನು ಸಾಧಾರಣವಾಗಿ ರೂಢಿಸಿಕೊಂಡಿದ್ದರೂ ಪಾವಗಡಕ್ಕಿಂತ ಭಿನ್ನ ರೀತಿಯ ಜನಜೀವನ, ಆಹಾರ ಪದಾರ್ಥಗಳನ್ನು ಕಾಣಬಹುದು. ಉಳಿದಂತೆ ತುಮಕೂರು, ಗುಬ್ಬಿ, ತಿಪಟೂರು, ಚಿಕ್ಕನಾಯಕನಹಳ್ಳಿ, ತುರುವೇಕೆರೆ, ಕುಣಿಗಲ್, ಕೊರಟಗೆರೆ ಈ ತಾಲ್ಲೂಕುಗಳ ಆಹಾರ ಕ್ರಮ ಏಕತಾನತೆಯಿಂದ ಕೂಡಿದೆ.

**ರಾಗಿಮುದ್ದೆ:**

ತುಮಕೂರು ಜಿಲ್ಲೆಯ ಪ್ರಧಾನ ಹಾಗೂ ಅತಿಮುಖ್ಯ ಆಹಾರ ರಾಗಿಮುದ್ದೆ. ಬಡವ-ಬಲ್ಲಿದ, ನಗರ-ಗ್ರಾಮಗಳೆಂಬ ತಾರತಮ್ಯಗಳಿಲ್ಲದೆ ಎಲ್ಲಾ ಕಾಲದಲ್ಲೂ ಸಂದರ್ಭಗಳಲ್ಲೂ ಯಾವುದೇ ಎಗ್ಗುಸಿಗ್ಗುಗಳಿಲ್ಲದೆ ಬಳಸುವ ಆಹಾರ ರಾಗಿಮುದ್ದೆ.

ರಾಗಿಯನ್ನು ಬೀಸುವ ಕಲ್ಲಿನಿಂದ ಅಥವಾ ಮಿಲ್ಲುಗಳಿಂದ ಹಿಟ್ಟು ಮಾಡಿಸಿಕೊಂಡು ಬಿಸಿನೀರನ್ನು ಕುದಿಸಿ, ಅದಕ್ಕೆ ಹಿಟ್ಟನ್ನು ಹಾಕಿ ಹದವಾಗಿ ಬೇಯಿಸಿ, ಮುದ್ದೆ ಕೋಲಿನಿಂದ ತಿರುವಿ, ಗಂಟುಗಳಿಲ್ಲದೆ ಮೇಣದ ಹಾಗೆ ಮಾಡಿ ನಂತರ ಮುದ್ದೆ ಕಟ್ಟುತ್ತಾರೆ. ಇದನ್ನು ಹಿಟ್ಟು ಎಂತಲೂ ಕರೆಯುತ್ತಾರೆ. ಮುದ್ದೆ ಅವರೆ, ಹುರುಳಿ, ತೊಗರಿ, ಅಲಸಂಧಿ ಕಾಳುಗಳ ಅಥವಾ ಬೇಳೆಯ ಸಾರನ್ನು ತಯಾರಿಸಿಕೊಂಡು ಮುದ್ದೆಯೊಂದಿಗೆ ಊಟ ಮಾಡುತ್ತಾರೆ. ತರಕಾರಿ ಸಾರೂ ಇರುತ್ತದೆ. ಒಬ್ಬರು ಒಂದರಿಂದ ಎರಡು, ಎರಡೂವರೆ ಮುದ್ದೆ, ಮೇಲಿಷ್ಟು ಅನ್ನ ಊಟ ಮಾಡುವ ಸಂಪ್ರದಾಯವಿದೆ. ಮಾಂಸಾಹಾರ ಸಂದರ್ಭಗಳಲ್ಲಿ ಮುದ್ದೆ ಕಡ್ಡಾಯವಾಗಿ ಇರಲೇಬೇಕು.

**ರಾಗಿರೊಟ್ಟಿ:**

ಸಿರಾ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಬೆಳಗಿನ ಉಪಆಹಾರವಾಗಿ ರಾಗಿರೊಟ್ಟಿಯನ್ನು ಬಳಸುತ್ತಾರೆ. ರಾಗಿರೊಟ್ಟಿಯ ಜೊತೆಗೆ ನೆಂಚಿಕೆಯಾಗಿ ತೆಂಗಿನಕಾಯಿ, ಕಡ್ಲೆಬೀಜ, ಹುರುಳಿಕಾಳಿನ ಚಟ್ನಿಯನ್ನು ಬಳಸುತ್ತಾರೆ. ಇದನ್ನು ಖಾರ ಎಂದು ಕರೆಯುತ್ತಾರೆ. ರೈತಾಪಿ ಜನರು ತಿಂಡಿಯನ್ನು ಹೆಚ್ಚಾಗಿ ಇಷ್ಟಪಡುವುದಿಲ್ಲ. ವಿಶೇಷವಾಗಿ ಕುರಿ, ಮೇಕೆ, ದನಗಳನ್ನು ಮೇಯಿಸುವುದಕ್ಕೆ ಹೋಗುವವರು ಬೆಳಗಿನ ಊಟವನ್ನೇ ಇಂದಿಗೂ ಅವಲಂಬಿಸಿದ್ದಾರೆ.

ರಾಗಿಮುದ್ದೆ ಮೇಲಿಷ್ಟು ಅನ್ನ ಊಟ ಮಾಡಿ ಹೋದರೆ ಸಂಜೆ 6-7 ಗಂಟೆಗೆ ಹಿಂತಿರುಗುವುದು. ನಂತರ ದನ-ಕರುಗಳಿಗೆ ಮೇವು ಹಾಕಿದ ನಂತರ ಊಟದ ಕಾರ್ಯ. ಗಾಡಿ ಕೆಲಸ, ಹೊಲ ಗದ್ದೆಗಳಲ್ಲಿ ದುಡಿಯುವ ಕೆಲವರು ಬೆಳಗಿನ ತಿಂಡಿ ಹಾಗೂ ಮಧ್ಯಾಹ್ನದ ಊಟವನ್ನು ಬಯಸುತ್ತಾರೆ. ಇದು ಇತ್ತೀಚಿನ ಕ್ರಮವಾಗಿದೆ. ನಗರ ಪ್ರದೇಶಗಳಲ್ಲಿ ಇಡ್ಲಿ, ಉಪ್ಪಿಟ್ಟು, ಚಿತ್ರಾನ್ನ, ದೋಸೆ ಮೊದಲಾದ ತಿಂಡಿಗಳ ಉಪಯೋಗ ಬಳಕೆಯಲ್ಲಿದೆ.

**ಸಿಹಿ ಅಡಿಗೆಗಳು:**

ಮದುವೆ, ನಾಮಕರಣ, ಹಬ್ಬಗಳ ಜೊತೆ ಜೊತೆಗೆ ವಿಶೇಷ ದಿನಗಳಲ್ಲಿ ಸಿಹಿ ಅಡಿಗೆ ಭೋಜನ ರೂಢಿಯಲ್ಲಿದೆ. ಇಂಥ ಸಂದರ್ಭದಲ್ಲಿ ಹೋಳಿಗೆ, ಪಾಯಸ, ಕಡುಬು, ಶ್ಯಾವಿಗೆ, ಬೂಂದಿ, ಲಾಡು, ಜಿಲೇಬಿ ಈ ಮೊದಲಾದ ಸಿಹಿ ತಿಂಡಿಯನ್ನು ತಯಾರಿಸುತ್ತಾರೆ. ಪಾಯಸ ಸಾಮಾನ್ಯವಾದ ಊಟ. ಪಾಯಸದಲ್ಲಿ ರವೆ, ಅಕ್ಕಿ ನುಚ್ಚಿಗೆ ಬೆಲ್ಲ ಇಲ್ಲವೇ ಸಕ್ಕರೆ ಬೆರೆಸಿ ತೆಂಗಿನ ತುರಿ, ಗಸಗಸೆಯಿಂದ ಸೊಗಸಾದ ಪಾಯಸ ತಯಾರಿಸುತ್ತಾರೆ. ಕೆಲವರು ತೆಂಗಿನಕಾಯಿಯ ರಸದಿಂದ ಅಥವಾ ಹಸುವಿನ ಹಾಲಿನಿಂದ ಹಾಲುಖೀರು ಎಂದೇ ಕರೆಯುವ ಪಾಯಸ ತಯಾರಿಸುತ್ತಾರೆ.

ಶ್ಯಾವಿಗೆ ಹಳ್ಳಿಗರಿಗೆ ಪ್ರಿಯವಾದ ಊಟ. ಹೊಲ-ಗದ್ದೆಗಳಲ್ಲಿ, ಕಣ ಗೊಬ್ಬರದ ಕೆಲಸಗಳಲ್ಲಿ ನಿರತರಾದವರು ಎದೆಯ ಕಫ ಕಳೆಯಲು ಅಥವಾ ಎದೆಯ ನೋವಿಗೆ ಒಳ್ಳೆಯದೆಂಬ ಭಾವನೆಯಿಂದ ಶ್ಯಾವಿಗೆ ಉಪಯೋಗಿಸುತ್ತಾರೆ. ಹದವಾಗಿ ಬೆಂದ ಮುದ್ದೆಯನ್ನು ಶ್ಯಾವಿಗೆ ಒರಳಿಗೆ ಇಟ್ಟು ಮೇಲಿಂದ ಮರದ ತುಂಡಿನಿಂದ ಬಲವಾಗಿ ಒತ್ತುವುದು. ಇದನ್ನು ಕೊಂತ ಎಂದು ಕರೆಯುತ್ತಾರೆ. ಹೀಗೆ ಒತ್ತಿದ ಶ್ಯಾವಿಗೆಯನ್ನು ಬಾಳೆಯ ತೊಗಟೆ ಅಥವಾ ಅಡಕೆ ಪಟ್ಟೆಯಿಂದ ಕೆಳಗೆ ಹಿಡಿದುಕೊಂಡು ಪಾತ್ರೆಗೆ ಹಾಕುತ್ತಾರೆ. ಬಡಿಸುವಾಗ ಆ ಶ್ಯಾವಿಗೆಯ ಎಸಳು ಮುರಿಯದ ಹಾಗೆ ತಟ್ಟೆಗೆ ಬಡಿಸುತ್ತಾರೆ. ಅದಕ್ಕೆ ತೆಂಗಿನಕಾಯಿಯಿಂದ ತಯಾರಿಸಿದ ಕಾಯಿರಸವನ್ನು, ಅದರ ಮೇಲೆ ಕಡ್ಲೆಹಿಟ್ಟು, ಹುಚ್ಚೆಳ್ಳು ಪುಡಿಯನ್ನು ಬೆರೆಸಿ ಸೇವಿಸುವ ಪದ್ಧತಿ ಇದೆ. ಈ ರೀತಿಯ ಹಿಟ್ಟಿಗೆ ಮಾಲಧಿ ಎಂದು ಕರೆಯುತ್ತಾರೆ.

ಗೌರಿ, ದೀವಳಿಗೆ ಹಬ್ಬಗಳಲ್ಲಿ ಹಸಿರು ಹೊಲಗಳಿಗೆ ಎಡೆ ಇಟ್ಟು ನಂತರ ಶ್ಯಾವಿಗೆಯನ್ನು ಹೊಲಗಳಿಗೆ ಎರಚುತ್ತಾರೆ. ಇದರಿಂದ ಹೊಲದಲ್ಲಿದ್ದ ಹುಳಹುಪ್ಪಟೆಗಳು, ಶ್ಯಾವಿಗೆ ತಿನ್ನಲು ಬಂದ ಹಕ್ಕಿ ಪಕ್ಷಿಗಳ ಕಣ್ಣಿಗೆ ಬಿದ್ದು ಹೊಲದ ಕ್ರಿಮಿ ಕೀಟಗಳನ್ನು ಹಿಡಿದು ತಿನ್ನುತ್ತವೆ. ಇದೊಂದು ರೈತರ ಒಳ್ಳೆಯ ಕೀಟನಾಶಕ ತಂತ್ರವಾಗಿದೆ. ಕೆಲವರು ಮೊಸರು ಅನ್ನವನ್ನು

ಬಳಸುತ್ತಾರೆ. ಹಿರಿಯರಿಗೆ ಎಡೆ ಇಡುವ ಸಂದರ್ಭಗಳಲ್ಲೂ ಸಸ್ಯಾಹಾರಿಗಳು ಈ ಬಗೆಯ ಅಡಿಗೆಯನ್ನು ತಯಾರಿಸುತ್ತಾರೆ.

ಮೊಳಕೆ ಕಟ್ಟಿದ ಹುರುಳಿಕಾಳನ್ನು ಸಾಮಾನ್ಯವಾಗಿ ಜಿಲ್ಲೆಯಾದ್ಯಂತ ಸಾರಿಗೆ, ಪಲ್ಯಕ್ಕೆ ಬಳಸುತ್ತಾರೆ. ಅಂತೆಯೇ ಬಾಳೆಯಕಾಯಿ, ಹಲಸಿನಕಾಯಿ (ಕಿತ್ತಲಸಿನಕಾಯಿ ಪಲ್ಯ, ಹುಳಿ)ಯಿಂದ ಸಾರು ಮಾಡುತ್ತಾರೆ. ಕರ್ನಾಟಕದ ಎಲ್ಲಾ ಭಾಗದಲ್ಲೂ ದೊರೆಯುವ ದಂಟು, ಮೆಂತ್ಯ, ಚಕ್ಕೋತ, ಕೀರೆ, ಅರುವೆ ಮೊದಲಾದ ಸೊಪ್ಪನ್ನು ಪಲ್ಯ, ಹುಳಿಗಳಲ್ಲಿ ಬಳಸುತ್ತಾರೆ. ಬದನೆ, ಅವರೆ, ನುಗ್ಗೆ, ಬೆಂಡೆ, ಮೂಲಂಗಿ, ಟೊಮೇಟೋ, ಪಡುವಲ, ಚಪ್ಪರದ ಅವರೆ, ತಿಂಗಳು ಹುರುಳಿಕಾಯಿ ಈ ತರಕಾರಿಗಳನ್ನು ಜಿಲ್ಲೆಯಾದ್ಯಂತ ಬೆಳೆಯುತ್ತಾರೆ. ಹಾಗೆಯೇ ಅಡುಗೆಗೆ ಬಳಸುತ್ತಾರೆ. ಕ್ಯಾರೆಟ್, ಆಲೂಗಡ್ಡೆ, ಸುವರ್ಣಗೆಡ್ಡೆಯನ್ನು ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಹುಳಿ, ಪಲ್ಯಗಳೆರಡಕ್ಕೂ ಬಳಸುತ್ತಾರೆ. ರಾಗಿಮುದ್ದೆ ಸೊಪ್ಪಿನ ಸಾರು ಜಿಲ್ಲೆಯ ಜನಪ್ರಿಯ ಊಟ. ಬಡವರ, ಶ್ರೀಮಂತರ ಸಹಜ ಊಟ.

**ಮಾಂಸಾಹಾರ:**

ತುಮಕೂರು ಜಿಲ್ಲೆಯಲ್ಲೂ ಮಾಂಸಾಹಾರಿಗಳು, ಸಸ್ಯಾಹಾರಿಗಳೆಂಬ ಭೇದವಿದೆ. ವೀರಶೈವರು ಅಧಿಕ ಸಂಖ್ಯೆಯಲ್ಲಿರುವ ತಿಪಟೂರು, ಗುಬ್ಬಿ, ತುಮಕೂರು ಈ ತಾಲ್ಲೂಕುಗಳಲ್ಲಿ ಮಾಂಸಾಹಾರಿಗಳೂ ಅಧಿಕವಾಗಿದ್ದಾರೆ. ಶುಭ ಸಮಾರಂಭಗಳೂ ಸೇರಿದಂತೆ ವಿಶೇಷ ಸಂದರ್ಭಗಳಲ್ಲಿ ಮಾಂಸಾಹಾರವನ್ನು ಕದ್ದುಮುಚ್ಚಿ ತಿನ್ನುವ ಸಂಪ್ರದಾಯವಿದೆ. ಆದರೆ ಕುಣಿಗಲ್, ತುರುವೇಕೆರೆ, ಚಿಕ್ಕನಾಯಕನ ಹಳ್ಳಿ, ಸಿರಾ, ಮಧುಗಿರಿ, ಪಾವಗಡ ಈ ತಾಲ್ಲೂಕುಗಳಲ್ಲಿ ಮಾಂಸಾಹಾರ ಪ್ರಧಾನವಾಗಿಯೇ ನಡೆಯುತ್ತದೆ. ಹೆಣ್ಣುಮಕ್ಕಳು ಋತುಮತಿಯಾದಾಗ ಒಂದರಿಂದ ಐದರವರೆಗೆ ಮರಿ ಕಡಿದು ಅಡಿಗೆ ತಯಾರಿಸುತ್ತಾರೆ. ಯಾವುದೇ ಎಗ್ಗುಸಿಗ್ಗಿಲ್ಲದೆ ಜನ ಊಟದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾರೆ.

ತುಮಕೂರು ಜಿಲ್ಲೆಯಲ್ಲಿ ಜನರು ಸಾಮಾನ್ಯವಾಗಿ ಮಾಂಸಾಹಾರಿಗಳು. ಮಾಂಸವನ್ನು ಅವರವರ ದೇವರ ವಾರದ ದಿನ ಮತ್ತು ಸೋಮವಾರ ತಿನ್ನುವುದಿಲ್ಲ ಮತ್ತು ಮನೆಯ ಸಾಮಾನ್ಯ ಒಲೆಯ ಮೇಲೆ ಮಾಂಸವನ್ನು ಬೇಯಿಸುವುದಿಲ್ಲ. ಮನೆಯ ಹೊರಗಡೆ, ಬಚ್ಚಲುಮನೆ, ದನದ ಮನೆ ಅಥವಾ ಮನೆಯ ಮುಂದೆ ಗುಂಡು ಹೂಡಿ ಅಡಿಗೆ ತಯಾರಿಸಿ ಊಟ ಮಾಡಿ, ಕೈಕಾಲು ತೊಳೆದುಕೊಂಡು ಒಳಗೆ ಬರುವ ಸಂಪ್ರದಾಯವಿದೆ. ಮುಸ್ಲಿಮರನ್ನು

ಹೊರತುಪಡಿಸಿ ಹಿಂದೂ ಮಾಂಸಾಹಾರಿಗಳಲ್ಲಿ ಸಹಜವಾಗಿ ಈ ಪದ್ಧತಿ ಇದೆ.

ಕುರಿ, ಕೋಳಿ, ಮೇಕೆ, ಹಂದಿ, ಜಿಂಕೆ, ಮೊಲ, ಕಾಡುಕೋಳಿ, ಕಾಡುಬೆಕ್ಕು, ಕಾಡು ಇಲಿ (ಬೆಳ್ಳಿಲಿ), ಉಡ, ಆಮೆ, ಮುಂಗುಸಿ ಈ ಪ್ರಾಣಿಗಳನ್ನು, ಹೀರೇಹಕ್ಕಿ, ಸೆರೆಲೆಹಕ್ಕಿ, ಗೋಜಿನಹಕ್ಕಿ, ಪಾರಿವಾಳ, ಬಳವನಹಕ್ಕಿ ಮೊದಲಾದ ಪಕ್ಷಿಗಳನ್ನು ಬೇಟೆಯಾಡಿ ತಿನ್ನುತ್ತಾರೆ. ಮೀನು ಜಿಲ್ಲೆಯ ಎಲ್ಲಾ ಮಾಂಸಾಹಾರಿಗಳ ಸಹಜ ಆಹಾರ.

**ಹಂದಿ ಮಾಂಸ:**

ಹಂದಿಮಾಂಸದ ಆಹಾರವನ್ನು ಸಿರಾ ತಾಲ್ಲೂಕಿನಾದ್ಯಂತ ಮಾಂಸಾಹಾರಿಗಳು ವಿಶೇಷವಾಗಿ ಬಳಸುತ್ತಾರೆ. ಪುಟ್ಟ ಪುಟ್ಟ ಹಳ್ಳಿಗಳಲ್ಲಿ ಒಂದು ಹಂದಿ ತಂದು ಊರಿನ ದೇವತೆಗೆ ಬಲಿ ಕೊಟ್ಟು ಅದರ ಮಾಂಸವನ್ನು ಕಡಿದು, ಭಾಗ ಹಾಕಿಕೊಂಡು (ಗುಡ್ಡೆ ಮಾಂಸ) ತಿನ್ನುವ ಸಂಪ್ರದಾಯವಿದೆ. ಕಾಡುಹಂದಿಯ ಬೇಟೆ ದಟ್ಟವಾಗಿ ಕಂಡುಬರುತ್ತದೆ. ಸೇಂಗಾ ಬೆಳೆಯುವ ಈ ಭಾಗಗಳಲ್ಲಿ ಕಾಡುಹಂದಿಯ ಬೇಟೆ ಸಾಮಾನ್ಯವಾಗಿದೆ. ಹಂದಿ ಮಾಂಸವನ್ನು ಎರಡು ವಿಧದಲ್ಲಿ ಬಳಸುತ್ತಾರೆ. ಅವೆಂದರೆ - ಹುರಿದ ಮಾಂಸ, ಬೇಯಿಸಿದ ಸಾರು.

**ಹುರಿದ ಮಾಂಸ:**

ಹುರಿದ ಮಾಂಸದಲ್ಲಿ ಹಂದಿಯ ಬಾರು (ಚರ್ಮ) (ಇದನ್ನು ಕಡಿ ಎಂದು ಕರೆಯುತ್ತಾರೆ), ಈ ಬಾರನ್ನು ಸಾರಿನೊಂದಿಗೆ ಬೆರೆಸಿದರೆ ಸಾರು ವಿಪರೀತ ಕೊಬ್ಬಾಗಿ ಊಟ ಮಾಡುವುದಕ್ಕೆ ಆಗುವುದಿಲ್ಲ ಅಥವಾ ಹೆಚ್ಚಿಗೆ ತಿಂದರೆ ಭೇದಿಯಾಗುವ ಸಂದರ್ಭವೂ ಉಂಟು. ಹಾಗಾಗಿ ಸಾಮಾನ್ಯವಾಗಿ ಹಂದಿ ಮಾಂಸದಲ್ಲಿ ಹುರಿದ ಮಾಂಸವೇ ಇರುತ್ತದೆ. ಇದರಲ್ಲಿ ಬಾರು, ಕೊಬ್ಬಿನ ಭಾಗವನ್ನೆಲ್ಲಾ ಪ್ರತ್ಯೇಕಿಸಿ ಒಂದು ಪಾತ್ರೆಯಲ್ಲಿ ಹಾಕಿ ಬಿಸಿ ಮಾಡುತ್ತಾರೆ. ನೀರು ಹಾಕುವುದಿಲ್ಲ. ಹೀಗೆ ಬಿಸಿಯಾದ ಪಾತ್ರೆಯಲ್ಲಿ ಬಾರಿನಿಂದ ತುಪ್ಪ ಬಿಡುತ್ತದೆ. ಹೀಗೆ ಬಂದ ಕೊಬ್ಬಿನ ತುಪ್ಪವನ್ನು ಬೇರೊಂದು ಪಾತ್ರೆಗೆ ಬಸಿದುಕೊಳ್ಳುತ್ತಾರೆ. ಅರ್ಧ ಪಾವು ತುಪ್ಪವನ್ನಾದರೂ ಇದರಿಂದ ಬಸಿಯಲಾಗುವುದು. ತುಪ್ಪ ಬಸಿದ ಮಾಂಸಕ್ಕೆ ಸ್ವಲ್ಪ ಕೊತ್ತಂಬರಿ, ಮಸಾಲೆ ಪುಡಿಯನ್ನು ಹಾಕಿ ನೀರು ಹಾಕದೇ ಬೇಯಿಸುತ್ತಾರೆ. ಹೀಗೆ ಬೇಯಿಸಿದ ಮಾಂಸವೇ ಹುರಿದ ಮಾಂಸ. ಇದನ್ನು 2-4 ದಿನಗಳ ಕಾಲ ಇಟ್ಟುಕೊಂಡು ನಂತರ ಸಾರು ಮಾಡಿಕೊಂಡು ಊಟ ಮಾಡುವ ಪದ್ಧತಿ ಇದೆ. ಬಸಿದ ತುಪ್ಪವನ್ನು ಕುರಿ, ಮೇಕೆ, ದನಗಳಿಗೆ ಬರುವ ವಿವಿಧ ಖಾಯಿಲೆಗಳಿಗೆ ಔಷಧಿಯಾಗಿ ವರ್ಷಪೂರ್ತಿ ಬಳಸುತ್ತಾರೆ.

**ತಲೆ ಮಾಂಸ:**

ಕುರಿ ಅಥವಾ ಮೇಕೆಯ ತಲೆ ಮತ್ತು ನಾಲ್ಕು ಕಾಲುಗಳನ್ನು ಬೆಂಕಿಯಲ್ಲಿ ಸುಡಲಾಗುತ್ತದೆ. ಸುಟ್ಟ ತಲೆನ್ನು ನೀರಿನಲ್ಲಿ ನೆನೆಸಿ ನಂತರ ರಾಗಿ ಹಿಟ್ಟು, ಸುಣ್ಣ ಬೆರೆಸಿ ಚೆನ್ನಾಗಿ ತಿಕ್ಕಿ ತೊಳೆಯುತ್ತಾರೆ. ಹೀಗೆ ತೊಳೆದಾಗ ಬೆಂಕಿಯಿಂದ ಸೀದು ಕಪ್ಪಗಾಗಿದ್ದ ತಲೆ ಬೆಳ್ಳಗಾಗುವುದು. ಅದನ್ನು ಕತ್ತರಿಸಿ ಪ್ರತ್ಯೇಕವಾಗಿಯೇ ಬೇಯಿಸಲಾಗುತ್ತದೆ. ಮೂಳೆಗಳೇ ತುಂಬಿರುವ ತಲೆ ಮಾಂಸ ಇತರೆ ಮಾಂಸದ ಸಾರಿಗಿಂತ ಹೆಚ್ಚು ರುಚಿಯಾಗಿರುತ್ತದೆ. ಖಾಯಿಲೆ-ಕಸಾಲೆಗಳಿಂದ ಸವೆದವರಿಗೆ, ಬಾಣಂತಿಯರಿಗೆ, ಕೈಕಾಲು ಮುರಿದು ಕಟ್ಟಿಸಿಕೊಂಡವರಿಗೆ ವಾರದಲ್ಲಿ ಕನಿಷ್ಠ ಒಂದು ದಿನವಾದರೂ ತಲೆ ಮಾಂಸದ ಊಟ ಯುಕ್ತವಾದುದೆಂದು ಭಾವಿಸಲಾಗಿದೆ. ಅದರಂತೆ ಬಳಸುತ್ತಾರೆ ಕೂಡ. ತಲೆ, ಕರಕಾಲಿನ ಸೂಪನ್ನು ಹೊತ್ತಾರೆ ಎದ್ದ ಕೂಡಲೇ ಕುಡಿಯುವ ಸಂಪ್ರದಾಯವೂ ಉಂಟು.

**ಒಣಬಾಡು:**

ಒಣಬಾಡನ್ನು ಹಬ್ಬ, ಜಾತ್ರೆಗಳ ಸಂದರ್ಭದಲ್ಲಿ ಕಡಿದ ಕುರಿ ಅಥವಾ ಮೇಕೆಯ ಮಾಂಸದಲ್ಲಿ ಒಂದಿಷ್ಟು ಭಾಗವನ್ನು ಎತ್ತಿ ಬಿಸಿಲಿಗೆ ಇಟ್ಟು ಒಣಗಿಸಲಾಗುತ್ತದೆ. ಮೂರು ನಾಲ್ಕು ದಿನಗಳ ಕಾಲ ಚೆನ್ನಾಗಿ ಒಣಗಿಸಿದ ಮಾಂಸಕ್ಕೆ ಒಣಬಾಡು ಎಂದು ಕರೆಯುತ್ತಾರೆ. ಹೀಗೆ ಒಣಗಿಸಿದ ಬಾಡನ್ನು ಒಂದು ಪಾತ್ರೆಯಲ್ಲಿ ತುಂಬಿಟ್ಟುಕೊಳ್ಳುವರು. ವರ್ಷಪೂರ್ತಿ ಸಂದರ್ಭಾನುಸಾರ ಸಾರು ಮಾಡುತ್ತಾರೆ. ಒಣಗಿದ ಬಾಡನ್ನು ಮೊದಲೇ ನೀರಿನಿಂದ ನೆನೆಸಿ ಚೆನ್ನಾಗಿ ತೊಳೆಯುತ್ತಾರೆ. ಅವರೇಬೇಳೆ, ಬದನೆಕಾಯಿಯೊಂದಿಗೆ ಬೆರೆಸಿ ಮಾಡಿದ ಸಾರು ಅಪೂರ್ವವಾಗಿರುತ್ತದೆ. ಹಸಿಯ ಮಾಂಸ ರುಚಿಯಂತಿರುತ್ತದೆ.

**ಕರಿಮೀನು:**

ತುಮಕೂರು ಜಿಲ್ಲೆಯಾದ್ಯಂತ ಸಣ್ಣ ಪುಟ್ಟ ಕೆರೆಗಳಿದ್ದು ಮೀನು ಬೇಟೆ, ಏಡಿ ಬೇಟೆ ವರ್ಷಪೂರ್ತಿ ಇರುತ್ತದೆ. ಮೀನನ್ನು ಎರಡು ವಿಧದಲ್ಲಿ ಬಳಸುತ್ತಾರೆ. ಹಸಿ ಮೀನನ್ನು ಒಣಗಿಸಿ ಇಟ್ಟುಕೊಂಡು ವರ್ಷಪೂರ್ತಿ ಸಂದರ್ಭಾನುಸಾರ ಉಪಯೋಗಿಸುವುದು ಇನ್ನೊಂದು ಬಗೆಯದು. ಮುಂಗಾರು ಮಳೆ ಬಂದು ಕೆರೆ ಕಟ್ಟೆ ತುಂಬಿದ ಮೊದಲಲ್ಲಿ ಹರಿದು ಬರುವ ನೀರಿಗೆ ಕೊಡಿಮೆ ಹಾಕಿ ಮೀನು ಹಿಡಿಯು ವುದು ಒಂದು ಬಗೆಯಾದರೆ, ತುಂಬಿದ ಕೆರೆಗೆ ಬಲೆ ಬೀಸಿ ಮೀನು ಹಿಡಿಯುವುದು ಇನ್ನೊಂದು ಬಗೆ. ಹೀಗಾಗಿ ಮೀನು ಶಿಕಾರಿ ವರ್ಷದುದ್ದಕ್ಕೂ ಚಾಲ್ತಿಯಲ್ಲಿರುತ್ತದೆ.

ಒಣಗಿಸಿದ ಮೀನನ್ನು ಸಾಂದರ್ಭಿಕವಾಗಿ ಸಾರು ಮಾಡುವಾಗ ಮೊದಲು ಅವನ್ನು ಹುರಿಯಲಾಗುತ್ತದೆ. ಹೀಗೆ ಹುರಿದಾಗ ಮೀನಿನ ಹೊರಭಾಗದ ಹೊಲಸು ಹೋಗಿ ಶುದ್ಧವಾಗುತ್ತದೆ. ನಂತರ ನೀರಿನಲ್ಲಿ ನೆನೆಹಾಕಲಾಗುತ್ತದೆ. ಮೊದಲೇ ಕುದ್ದ ನೀರಿಗೆ ಉಂಡವರೆಕಾಳು, ಕಡಲೆಕಾಳು, ತೊಗರಿಕಾಳಿನ ಜೊತೆಗೆ ಬದನೇಕಾಯಿ, ಆಲೂಗಡ್ಡೆಗಳನ್ನು ಕೊಯ್ದು ಹಾಕಿ ಅವುಗಳ ಜೊತೆಗೆ ಕರಿ ಮೀನು ಹಾಕಿ ಸಾರು ಮಾಡುತ್ತಾರೆ. ಹಾಗೆಯೇ ಸೀಗಡಿ ಸಾರನ್ನು ವಿಶೇಷವಾಗಿ ತಯಾರಿಸುತ್ತಾರೆ.

**ಸೀಗಡಿ ಪಲ್ಯ:**

ಒಣಗಿದ ಸೀಗಡಿಯನ್ನು ಹುರಿದು ಇಟ್ಟುಕೊಂಡು ಅದಕ್ಕೆ ಹೆಸರು ಹಾಗೂ ವಿವಿಧ ಬಗೆಯ ತರಕಾರಿಯನ್ನು ಹಾಕಿ, ಇಲ್ಲವೇ ಮೊಟ್ಟೆ ಹಾಕಿ ಪಲ್ಯ ಮಾಡುತ್ತಾರೆ. ಊಟ, ಚಪಾತಿ, ರೊಟ್ಟಿಗೆ ನೆಂಚಿಕೆಯಾಗಿಯೂ ಬಳಸುತ್ತಾರೆ.

ಸಿರಾ ತಾಲ್ಲೂಕಿನ ಕುಂಚಿಟಿಗ ಜನಾಂಗದ ಉಪಪಂಗಡದವರಲ್ಲಿ ಅಲುಪೆ ಎಂಬ ಕುಂಚಿಟಿಗರಲ್ಲಿ ಮೇಕೆ ಮಾಂಸವನ್ನು ನಿಷೇಧಿಸಲಾಗಿದೆ. ಇವರು ಅಮ್ಮಾಜಿ ಒಕ್ಕಲಾಗಿದ್ದು ಮೇಕೆ ಈ ಜನಾಂಗದ ಅಜ್ಜಿ ಎಂದು ಭಾವಿಸುವುದರೊಂದಿಗೆ ಇದರ ಬಗೆಗೆ ಪೂಜ್ಯ ಭಾವನೆಯೂ ಇದೆ.

**ಏಡಿ ಸಾರು**

ಕೆರೆಯ ದಡದಲ್ಲಿ ಬಿಲ ಕೊರೆದು ಅದರಲ್ಲಿ ವಾಸಿಸುವ ಏಡಿ ರುಚಿಯಾಗಿದ್ದು ಆರೋಗ್ಯಕರ ಎಂಬ ಭಾವನೆಯೂ ಇದೆ. ಬಾಣಂತಿಯರಿಗೆ, ಗೂರಲು ಕಾಯಿಲೆಯವರಿಗೆ ಏಡಿ ಸಾರಿನ ರಸ ಕುಡಿಸುತ್ತಾರೆ. ಏಡಿಯನ್ನು ಶುಚಿಗೊಳಿಸಿ, ಹಸಿ ಅವರೆ, ತೊಗರಿ, ಅಲಸಂದಿ ಕಾಳುಗಳ ಜೊತೆ ಹುಳಿ ಮಾಡುತ್ತಾರೆ. ಕೆಲವೊಮ್ಮೆ ಮೀನಿನ ಹುಳಿಗೂ ಏಡಿಯನ್ನು ಬಳಸುತ್ತಾರೆ.

**ಅಣಬೆ ಸಾರು**

ಮುಂಗಾರು ಮಳೆ ಆರಂಭವಾದ ಒಂದೆರಡು ತಿಂಗಳಲ್ಲಿ ಹೊಲಗಳಲ್ಲಿ ಹುಟ್ಟುವ ಅಣಬೆ ಒಂದು ಸಸ್ಯಾಹಾರ. ತುಮಕೂರು ಜಿಲ್ಲೆಯಲ್ಲಿ ಮಾಂಸಾಹಾರಿಗಳು ಮಾತ್ರ ಬಳಸುತ್ತಾರೆ. ಅಣಬೆಯು ಒಂದು ನಿರ್ದಿಷ್ಟವಾದ ಸ್ಥಳದಲ್ಲಿ ವರ್ಷಕ್ಕೊಮ್ಮೆ ಏಳುತ್ತವೆ. ಅಣಬೆ ಎಲ್ಲರಿಗೂ ಕಾಣಿಸಿಕೊಳ್ಳುವುದಿಲ್ಲ. ಅದು ರಾಹುಗಣ್ಣಿನವರಿಗೆ ಮಾತ್ರ ಕಾಣಿಸಿಕೊಳ್ಳುತ್ತದೆ ಎಂಬ ನಂಬಿಕೆ ಇದೆ. ಅಣಬೆಯ ಬಗೆಗೆ ಒಂದು ಐತಿಹ್ಯವೂ ಇದೆ.

ಪಾಂಡವರು ತಮ್ಮ ವನವಾಸದ ದಿನಗಳಲ್ಲಿ ತಂಗುತ್ತಿದ್ದ ಸ್ಥಳಗಳಲ್ಲಿ ಹಾಲು-ಮೊಸರಿನ ಮಡಕೆಯನ್ನು ಜನ ತುಳಿಯಬಾರದೆಂಬ ಕಾರಣದಿಂದ ನೆಲದಲ್ಲಿ ಹೂಳಿದ್ದರು. ಆ ಹಾಲು-ಮೊಸರೇ ಅಣಬೆ ಎಂಬ ನಂಬಿಕೆ ಇದೆ. ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ಏಳುವ ಅಣಬೆ ಶ್ರೇಷ್ಠ ಪೌಷ್ಠಿಕ ಆಹಾರ. ಅವರೇಬೇಳೆ, ಆಲೂಗೆಡ್ಡೆ, ಟೊಮೋಟೋ ಜೊತೆಗೆ ಹುಳಿ ಸಾರು ಮಾಡುತ್ತಾರೆ. ರಾಗಿ ಮುದ್ದೆಗೆ ತುಂಬಾ ರುಚಿ ಇರುತ್ತದೆ. ಮಾಂಸದ ರುಚಿಯನ್ನು ಹೋಲುತ್ತದೆ. ಅಣಬೆಯಲ್ಲಿ ಬೇರಣಬೆ, ಹುಲ್ಲಣಬೆ, ಕಾಶಿ ಮೊಟ್ಟೆ, ಮೊಟ್ಟೆ ಅಣಬೆ, ಹುತ್ತು ಹೂವು, ತುಪ್ಪಣಬೆ ಇವುಗಳಲ್ಲಿ ಬೇರಣಬೆ ಹೆಚ್ಚು ರುಚಿ. ಎಲ್ಲರೂ ಬಳಸುತ್ತಾರೆ. ಹೊಲಗಳಲ್ಲಿ, ಹುತ್ತದ ಸುತ್ತಮುತ್ತ ಕಾಡಿನ ಪ್ರದೇಶಗಳಲ್ಲೂ ಅಣಬೆ ಬೆಳೆಯುತ್ತವೆ. ಭೂಮಿಗೆ ಬಂದ ಎರಡು ದಿನಗಳಲ್ಲಿ ನಾಶವಾಗುತ್ತವೆ. ಅಷ್ಟರ ಒಳಗೆ ಜನರ ಕಣ್ಣಿಗೆ ಬಿದ್ದರೆ ಸಾರಿಗೆ ಬಳಸುತ್ತಾರೆ. ಅರಳಿದ ಅಣಬೆಗಿಂತ ಮೊಗ್ಗು ಹೆಚ್ಚು ರುಚಿಯಾಗಿರುತ್ತದೆ.



# ಅಧ್ಯಾಯ – ಒಂಬತ್ತು
# ಸಿರಾ ನಗರ ಸಂಬಂಧಿ ಜನಪದ

ಸಿರಾ ಪಟ್ಟಣವೆಂಬ ಭಾವುಕ ನೆಲೆಯ ನಡುವೆಯೂ ನೆಲಮೂಲ ಸಂಸ್ಕೃತಿಯನ್ನು ಯಥಾವತ್ತಾಗಿ ಕಾಯ್ದುಕೊಳ್ಳುತ್ತಾ ಬರುತ್ತಿದೆ. ಅನೇಕ ತೊರೆ, ಕಿರು ಹಳ್ಳಗಳ ನೀರು ಸಮುದ್ರ ಸೇರುವಂತೆ ಜನ ಇಂದು ನಗರಮುಖಿಯಾಗುತ್ತಿದ್ದಾರೆ. ಇಂದು ಗ್ರಾಮೀಣ ಸಂಸ್ಕೃತಿಯಲ್ಲಿ ನಾಳೆ ನಾಡಿದ್ದರೊಳಗೆ ನಗರವಾಗಿಬಿಡುವ ಮೊಬೈಲ್, ಸ್ಕೂಟರ್, ಪ್ಯಾಕೆಟ್ ಹಾಲಿನ ಸಂಪರ್ಕವನ್ನು ಪಡೆಯುತ್ತಿರುವುದು ಹಳ್ಳಿ ಎಂದರೆ ಹಳ್ಳಿ ಹೆಸರಿನ ನಗರ ಎಂದಾಗಿಸಿಬಿಡುತ್ತದೆ. ಸ್ಪೂನ್, ಕರೆಂಟ್, ರೋಡ್, ಕರೆನ್ಸಿ, ಟಿ.ವಿ, ಸ್ಕೂಲ್, ಕಾನ್ವೆಂಟ್, ಬಸ್, ಟಿಕೆಟ್, ಫ್ಯಾನ್, ಲೇಬರ್, ಬೋರ್‌ವೆಲ್ ಈ ಬಗೆಯ ಆಂಗ್ಲಪದಗಳು ನಮಗರಿವಿಲ್ಲದಂತೆ ನಮ್ಮ ಹಳ್ಳಿಯ ಅಡಿಗೆಮನೆ ಪ್ರವೇಶಿಸಿವೆ ಮಾತ್ರವಲ್ಲ ಇವುಗಳಿಗೆ ಕನ್ನಡ ಭಾಷಿಕ ನೆಲೆಯಲ್ಲಿ ಪರ್ಯಾಯ ಪದಗಳು ಇಲ್ಲವೇನೋ ಅನ್ನುವ ಮಟ್ಟಿಗೆ ಅನ್ಯಮೂಲ ಶಬ್ದಗಳನ್ನು ನಮ್ಮವನ್ನಾಗಿಸಿಕೊಂಡು ಅಷ್ಟರಮಟ್ಟಿಗೆ ನಾಗರೀಕರೆಂಬ ಪೋಜಿನಲ್ಲಿ ನಮ್ಮ ಗ್ರಾಮೀಣ ಬದುಕು ಬೆಳೆಯುತ್ತಿದೆ. ಇನ್ನು ಪಟ್ಟಣಿಗರು ಇತ್ತ ನವನಾಗರೀಕತೆಯ ಸೌಲಭ್ಯ, ವೇಷಭೂಷಣ ಪಡೆದರೂ ತಮ್ಮ ಪಾರಂಪರಿಕ ನಂಬಿಕೆ,



ಶಿರಾ ನಗರದ ದುರ್ಗಮ್ಮನ ಉತ್ಸವ

ಸಂಪ್ರದಾಯಗಳ ಗಡಿಯನ್ನು ಮೀರಲಾಗುತ್ತಿಲ್ಲ. ಹಾಗಾಗಿ ನಮ್ಮ ಬದುಕಿನ ಭಾಗವೆಂದೇ ಭಾವಿಸಿರುವ ನಮ್ಮ ಜನಪದ ನಂಬಿಕೆ ಮತ್ತು ನಂಬಿಕೆಗೆ ತಕ್ಕ ಆಚರಣೆ ಯಥಾವತ್ತಾಗಿ ನಗರ-ಗ್ರಾಮೀಣ ಈ ಎರಡೂ ನೆಲೆಗಳಲ್ಲಿ ಏಕತಾನವಾಗಿರುವುದು. ಸಿರಾ ಇದಕ್ಕೆ ಹೊರತಾಗಿಲ್ಲ.



ಬನ್ನಿ ಕಡಿಯಲು ಹೊರಟ ತಹಸೀಲ್ದಾರ್ ಪಾತರಾಜು

ಸಿರಾ ಬಹು ಸಂಖ್ಯೆಯ, ಬಹು ಸಂಸ್ಕೃತಿಯ, ಬಹು ದೈವಗಳ ಸಂಕೀರ್ಣ ನಗರ. ತಾಲ್ಲೂಕು ಕೇಂದ್ರವಾಗಿ, ಜನಸಂಖ್ಯಾ ಬಾಹುಳ್ಯದಿಂದಾಗಿ ನಗರಸಭೆಯ ಸ್ಥಾನಮಾನವನ್ನು ಪಡೆದಿದೆ. ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ಶಾಲಾ ಕಾಲೇಜುಗಳು, ತಾಂತ್ರಿಕ ಸಂಸ್ಥೆಗಳು, ವಾಣಿಜ್ಯ ವಹಿವಾಟು ವ್ಯಾಪಕವಾಗಿದೆ. ನೀರು-ನೆರಳು ಒಂದು ಪ್ರದೇಶದ ಅಭಿವೃದ್ಧಿಗೆ ಪ್ರೇರಕ ಸಾಧನೆ. ಇಂದು ಸಿರಾಕ್ಕೆ ಈ ಎರಡೂ ವರವಾಗಿ ಪರಿಣಮಿಸಿದೆ. ಸೀರ್‍ಯಾ ಸೀಮೆಗೆ ಮಳೆ ಬರಲಿ, ಬರದಿರಲಿ ಪ್ರಾಕೃತಿಕ ವಿಸ್ಮಯವೆಂಬಂತೆ ಸಿರಾಕ್ಕೆ ಪೂರ್ವಕ್ಕಿರುವ ಕೆರೆ ತನಗೆ ತಾನೇ ತುಂಬಿ ಕೆರೆ ಅಲ್ಲ ಸಮುದ್ರದ ಸ್ವರೂಪವನ್ನು ಪಡೆಯುತ್ತದೆ. ಇದಕ್ಕೆ ಹೇಮಾವತಿ ಕಾಲುವೆಯ ಕೃಪಾ ಕಟಾಕ್ಷವೂ ಕಾರಣವಾಗಿದೆ. ಹಾಗಾಗಿ ಇಲ್ಲಿ ಜನವೂ ಹೆಚ್ಚು, ಸೌಕರ್ಯವೂ ಹೆಚ್ಚು. ಜನಪದರು ನಂಬುವ ಕುಲಮೂಲದಿಂದಲೇ ಒಟ್ಟು ನಗರವನ್ನು ವರ್ಗೀಕರಿಸಿದಂತೆ, ಕುರುಬರಹಟ್ಟಿ, ಮಾದಿಗರಹಟ್ಟಿ, ನಾಯಕರಹಟ್ಟಿ, ಮುಚ್ಚಿಗರಹಟ್ಟಿ, ಸಾಬ್ರಹಟ್ಟಿ, ಸೊಪ್ಪಿನಹಟ್ಟಿ (ವಿಶೇಷವಾಗಿ ಬಲಜಿಗ ಜನಾಂಗದ ವಾಸಸ್ಥಳ), ವಡ್ರಹಟ್ಟಿ ಈ ಬಗೆಯ ಭಾವನಾತ್ಮಕ ವರ್ಗೀಕರಣದ ಹಿಂದೆ ಜನಪದ ಸಂಸ್ಕೃತಿ ಅರ್ಥಪೂರ್ಣವಾಗಿ ಕೆಲಸ ಮಾಡುತ್ತದೆ.

ಸಿರಾದ ಜನಪದೀಯ ಆಲೋಚನೆ, ತಮ್ಮ ದೈನಂದಿನ ಬದುಕಿನ ಒಂದು ಭಾಗವಾಗಿಯೇ ಪ್ರಕಟವಾಗುತ್ತದೆ. ಧಾರ್ಮಿಕ ಶ್ರದ್ಧೆ, ನಂಬಿಕೆ, ನಡಾವಳಿ ಇಲ್ಲಿ ಅಧಿಕವಾಗಿಯೇ ಇದೆ. ಸಿರಾ ಕೋಟೆಗೆ ಹೊಂದಿಕೊಂಡಂತೆ ಮಧುಗಿರಿ ರಸ್ತೆಯ ಆಂಜನೇಯನ ಗುಡಿಯಿಂದ ಸಿರಾದ ಪಶ್ಚಿಮದ ಗಡಿಯ ಕಾಡಜ್ಜನ ಪಾಳ್ಯದ ಬದಿಗಿರುವ ಹೆಸರಾಂತ ಹೆದ್ದಾರಿ

ಆಂಜನಯ್ಯನ ಗುಡಿಯ ತನಕ ಈ ದೇವಾಲಯಗಳ ಹಾಸು ವಿಸ್ತಾರಗೊಂಡಿದೆ. ಕೊಳದಪಲೆ ಈಶ್ವರ, ಕಲ್ಲುಕೋಲೆ ಮೈಲಾರಲಿಂಗೇಶ್ವರ ಸಿರಾ ನಗರ ಕೇಂದ್ರಿತವಾಗಿರುವ ಕನ್ನಿಕಾ ಪರಮೇಶ್ವರಿ, ವೆಂಕಟೇಶ್ವರ, ಕಾಳಿಕಾಂಭ, ಶ್ರೀ ಸತ್ಯನಾರಾಯಣ, ಕೋಟೆ ಆಂಜನೇಯ, ಅಂಬಾ ಭವಾನಿ, ಕೊಲ್ಲಾಪುರದಮ್ಮ, ಭೂತಪ್ಪ, ತಿಮ್ಮಪ್ಪ, ಸಿದ್ದಪ್ಪ, ರೇವಣಸಿದ್ದೇಶ್ವರ, ಶ್ರೀರಾಮ, ಗಣಪತಿ, ಪಾಂಡುರಂಗ, ಮೈಲಾರಲಿಂಗ, ಚಳ್ಳಕೆರೆಮ್ಮ, ಒಳಗಿನ ದುರ್ಗಮ್ಮ, ಹೊರಗಿನ ದುರ್ಗಮ್ಮ, ಬಂಡೆ ಆಂಜನೇಯ, ಏಕನಾಥೇಶ್ವರಿ, ರಂಗನಾಥ, ಮುನಿಯಪ್ಪ, ಚೌಡಮ್ಮ, ರಂಗನಾಥನಗರದ ದುರ್ಗಮ್ಮ, ರಂಗನಾಥ ಹೀಗೆ ಸಿರಾದ ದೇವಸ್ಥಾನಗಳ ಯಾದಿ ತೆರೆದುಕೊಳ್ಳುತ್ತದೆ. ಜೊತೆಗೆ ಸಿರಾದ ಗ್ರಾಮದೇವತೆ ಎಂದೇ ಪರಿಭಾವಿಸಿರುವ ಕೋಟೆ ಮಾರೆಮ್ಮನ ಉಪಶಾಖೆ ಎಂಬಂತೆ ಕುರುಬರಹಟ್ಟಿ ಮಾರೆಮ್ಮ, ಸೊಪ್ಪಿನಹಟ್ಟಿ ಮಾರೆಮ್ಮ, ರಂಗನಾಥನಗರದ ಮಾರೆಮ್ಮ, ಮಲ್ಲಿಕಾಪುರಹಟ್ಟಿ ಮಾರೆಮ್ಮ, ಸಂತೇಪೇಟೆ ಮಾರೆಮ್ಮ ಹೀಗೆ ವಿವಿಧ ಬಡಾವಣೆಗೊಂದೊಂದು ಮಾರಿ ಗುಡಿಗಳಿವೆ, ಗದ್ದಿಗೆಗಳಿವೆ. ಪೂರಕವೆಂಬಂತೆ ಮಲ್ಲಿಕ್ ರೆಹಾನ್‌ದರ್ಗಾ, ಜುಮ್ಮಾ ಮಸೀದಿ, ಬುರಾಕಿ, ಚಿನ್ನದ ಗೋರಿ, ಮಸ್ಜಿದ್-ಎ-ಎರಾಸ್ ಮಸೀದಿ, ರಾಗಿಕಲ್ಲು ಗೋರಿ, ಈದ್ಗಾ ಮೈದಾನ ಮೊದಲಾದ ಮೊಘಲ್ ಸಂಸ್ಕೃತಿ ಸಾರುವ ಪವಿತ್ರ ನೆಲೆಗಳಾಗಿ ಮಸೀದಿಗಳೂ ಇವೆ.

ಒಂದು ನಾಗರಿಕ ನಗರ ತನ್ನೆಲ್ಲಾ ಪ್ರಭುತ್ವದ ಒಳಗೆ ವೈಜ್ಞಾನಿಕ ಆಲೋಚನೆ ಬೆಳವಣಿಗೆಯ ನಡುವೆಯೂ ಹೇಗೆ ಮತ್ತದೇ ತಾನು ನಂಬಿದ ಪರಂಪರೆಗೆ ಮುಖಾಮುಖಿಯಾಗಿ ಬೆಳೆಯುತ್ತದೆ, ಆಧುನಿಕ ಸೌಲಭ್ಯ-ಸಾಧನಗಳ ನಡುವೆಯೂ ತಮ್ಮ ದೈವೀ ಮನಸ್ಸು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಸಿರಾ ನಗರಮುಖಿ ಸಂಸ್ಕೃತಿಯ ಒಳಗೂ ನಿಚ್ಚಳವಾಗಿ ಗುರುತಿಸಬಹುದು. ಪ್ರತಿ ವರ್ಷಕ್ಕೊಮ್ಮೆ ಆಷಾಢಮಾಸದಲ್ಲಿ ಜರುಗುವ ಮಾರಿ ಜಾತ್ರೆ ನೂರಾರು ಪ್ರಾಣಿ ಬಲಿಯ ರಕ್ತದೋಕುಳಿ, ಗಾವು ಸಿಗಿಯುವ ಕ್ರಮ, ಸೆರಗ ಹಾಕುವುದು ಮೊದಲಾದ ಧಾರ್ಮಿಕ ವಿಧಿ ವಿಧಾನಗಳು, ಮಾರಿ ಸಾರಿನಿಂದ ಆರಂಭಗೊಳ್ಳುವ ಮಡ್ಲಕ್ಕಿ ಯಾತ್ರೆ, ಗೌಡ, ತಳವಾರ, ಕೋಲಕಾರ, ಪೂಜಾರಿಗಳ ರಿವಾಜು, ಹರಕೆ ವಿಧಾನ, ಜನಪದ ಪರಂಪರೆಯ ಮುಂದುವರಿಕೆಯ ರೂಪವಾಗಿದೆ. ಮಾರಿ ಜಾತ್ರೆಯ ಸಾರಿಗೆ (ಜಾತ್ರೆ ಮಾಡಬೇಕೆಂಬ ಹೇಳಿಕೆ) ಸಿಕ್ಕರೆ ಅಂಥವರು ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಜಾತ್ರೆಗೆ ಬಂದೇ ಬರಬೇಕೆಂಬ ನಂಬಿಕೆ, ಗಾಳಿ ಸೋಂಕು ಪೀಡೆಗಳಿಗೆಲ್ಲಾ ದಿವ್ಯ ಔಷಧಿಯಾಗಿ ಮಸೀದಿಗಳಿಗೆ ಸಕ್ಕರೆ ಓದಿಸುವುದು, ಸಕ್ಕರೆ ತಿದ್ದುವುದು, ದುರ್ಗಮ್ಮನ ಆರತಿ, ಆಂಜನಯ್ಯನ ಆರತಿ ಜಾತ್ರೆ, ಸಿರಾದ ಪರಂಪರಾಗತ ಧಾರ್ಮಿಕ ನಂಬಿಕೆ, ನಡಾವಳಿಯ ಪ್ರತೀಕವಾಗಿವೆ. ಪ್ರತಿ ವರ್ಷವೂ ವಿಜೃಂಭಿಸುವ ಗಣಪತಿ ಉತ್ಸವ, ಸಿರಾ ನಗರ ಒಂದರಲ್ಲೇ ಹತ್ತಕ್ಕೂ ಅಧಿಕ ಸ್ಥಳಗಳಲ್ಲಿ ಗಣಪತಿ ಇಟ್ಟು ಜಾತ್ರೆಯ ಸಡಗರ

ತೋರಲಾಗುತ್ತದೆ. ಪ್ರಧಾನವಾಗಿ ಸಿರಾದ ಗಣಪತಿ ದೇವಸ್ಥಾನದ ದೊಡ್ಡಗಣಪತಿ ಉತ್ಸವ, ಊರ ಹಬ್ಬವಾಗಿ, ಸಾಂಸ್ಕೃತಿಕ ಹಬ್ಬವಾಗಿಯೂ ನಡೆಯುತ್ತದೆ. ಶ್ರಾವಣ ಮಾಸದ ಆರಂಭದ ಶನಿವಾರದಿಂದ ಕೊನೆಯ ಶನಿವಾರ-ಸೋಮವಾರದ ತನಕ ನಡೆಯುವ ಶನಿ ಮಹಾತ್ಮ ದೇವಾಲಯದ ಪೂಜೆ, ಆಚರಣೆ, ಪುಣ್ಯಕ್ಷೇತ್ರಗಳನ್ನು ಮೀರಿ ನಿಲ್ಲುತ್ತದೆ. ಸಂಕೀರ್ಣ ನಗರದ ಒಳಗೂ ಶ್ರಾವಣ ಮಾಸದಲ್ಲಿ ಭಕ್ತರು ಅವರವರ ಇಷ್ಟಾನುಸಾರ ನಡೆಸುವ ದೇವೀ ಪಾರಾಯಣ, ಕಥೆ ಹೇಳಿಸುವುದು, ದೇವರು ಕರೆಸುವುದು ಈ ತೆರನಾದ ಆಚರಣೆ ಕೇವಲ ಗ್ರಾಮ್ಯ ನೆಲಕ್ಕೆ ಮಾತ್ರ ಸೀಮಿತವಾಗಿಲ್ಲ. ಹಳ್ಳಿಯನ್ನು ಮೀರಿ ನಿಂತ ಭಕ್ತರ ಧಾರ್ಮಿಕ ಶ್ರದ್ಧೆ, ಭಕ್ತಿ ನಡಾವಳಿ ನಮ್ಮ ಜನಪದಾಸಕ್ತ ಮನಸ್ಸನ್ನು ಯಾವ ಪರಂಪರೆಯ ವೈಭವವೂ ಮರೆಮಾಚುವುದಿಲ್ಲ ಎಂಬುದನ್ನು ಪುಷ್ಟೀಕರಿಸುತ್ತದೆ.

ಸಿರಾದ ದಸರಾ ಮರೆಯಬಾರದ ಸಾಂಸ್ಕೃತಿಕ ಹಬ್ಬ. ಜನಪದ ಸಂಸ್ಕೃತಿಯ ಅಪ್ಪಟ ರೂಪ. ಆಶ್ವಯುಜ ಶುದ್ಧ ಪಾಡ್ಯದಿಂದ ಆರಂಭವಾಗಿ ದಶಮಿಯವರೆಗೆ ಹತ್ತು ದಿನಗಳ ಕಾಲ ನಡೆಯುವ ದುರ್ಗಮ್ಮನ ಉತ್ಸವ, ಸಿರಾದ ಜನಪದ ಹಬ್ಬ. ದಶಹರ, ದಶರಾತ್ರಿ, ನವರಾತ್ರಿ ಎಂದು ಶಿಷ್ಟ ಜನವರ್ಗ ಕರೆಯುತ್ತಾರೆ. ದಾನವರಿಗೂ ದೇವತೆಗಳಿಗೂ ನಡೆದ ಯುದ್ಧದಲ್ಲಿ ದೇವತೆಗಳಿಗೆ ಉಂಟಾದ ವಿಜಯವನ್ನು ಆಚರಿಸುವ ಪದ್ಧತಿಯಾಗಿ ಬೆಳೆದುಬಂದ ಈ ಹಬ್ಬವನ್ನು ನಾಡಹಬ್ಬವನ್ನಾಗಿಯೂ ಆಚರಿಸಲಾಗುತ್ತಿದೆ. ಶ್ರೀರಾಮ ಲಂಕೆಯ ಮೇಲೆ ದಂಡೆತ್ತಿ ಹೋಗಿ, ರಾವಣನನ್ನು ಸದೆಬಡಿದು, ವಿಜಯ ಸಾಧಿಸಿ, ದಾನವತ್ವದ ನಾಶ, ದೈವೀಶಕ್ತಿಯ ಮೇಲುಗೈ ಪಡೆಯುವ ಸಂಕೇತವಾಗಿಯೂ ಈ ಹಬ್ಬವನ್ನು ಆಚರಿಸಲಾಗುತ್ತದೆ. ಕೆಲವು ಕಡೆ ಈ ಹಬ್ಬವನ್ನು ಶಕ್ತಿಪೂಜೆ ಹಬ್ಬ ಎಂದು ಕರೆಯಲಾಗುತ್ತದೆ. ಹಿರಿಯರ ಹಬ್ಬ ಎಂದು ಗಡಿ ಭಾಗಗಳಲ್ಲಿ, ಹೊಲೆಯರ ಹುಣ್ಣಿಮೆ ಎಂದು (ಇಲ್ಲಿ ಹೊಲೆಯರ ಹುಣ್ಣಿಮೆ ಎಂದರೆ ಗತಿಸಿದ ನಮ್ಮ ಪೂರ್ವಿಕರಿಗೆ ಎಡೆ ಇಡುವ ಹಬ್ಬ) ಕರೆಯಲಾಗುವುದು. ಈ ಹಬ್ಬದ ದಿನ ಪ್ರತಿಯೊಂದು ಕುಟುಂಬವೂ ಅವರವರ ಪೂರ್ವಿಕರ ಸಮಾಧಿಗಳಿಗೆ ಹೊಸ ಬಟ್ಟೆ ಹಾಕುವ, ಎಡೆ ಇಡುವ ಆಚರಣೆ ಇದೆ. ಸಮಾಧಿ ಪೂಜೆ, ಹಿರಿಯರ ಪೂಜೆ, ಗುಡ್ಡೆ ಪೂಜೆ ಎಂದು ಕರೆದು ಆಚರಿಸುವ ಈ ಆಚರಣೆಗೆ ಗುಡ್ಡೆ ಅಂದು ಸೂತಕವಲ್ಲ, ಸಾವಿನ ಸಂಕೇತವೂ ಅಲ್ಲ. ಬದಲಿಗೆ ತಮ್ಮೆಲ್ಲ ಏಳಿಗೆಗೆ, ಬೆಳವಣಿಗೆಗೆ ಹಿರಿಯ ಆಶೀರ್ವಾದ, ಹರಕೆ ಕಾರಣ. ಅಂಥವರು ದಶಮಿಯಂದು ತಮ್ಮ ತಮ್ಮ ಮನೆಗಳಿಗೆ ಬಂದು ಮಕ್ಕಳು-ಮರಿಗಳನ್ನು ಹರಸುತ್ತಾರೆಂಬುದು ಜನಪದರ ನಂಬಿಕೆ.

ಸಿರಾ ಸೀಮೆಯಲ್ಲಿ ಇಂದು ನಾಗರಹಬ್ಬ ಮಾಡುವ, ಹುತ್ತ, ನಾಗವಿಗ್ರಹಗಳಿಗೆ ಹಾಲು-ತುಪ್ಪದ ತನಿ ಎರೆಯುವ ಸಂಪ್ರದಾಯವೂ ಇದೆ. ಈ ಸಂದರ್ಭದಲ್ಲಿ ಒಂದು

ಬುಡಕಟ್ಟಿನ, ಕಟ್ಟೆ ಮನೆಯ ಗೋತ್ರದವರೂ ಒಂದೆಡೆ ಕಲೆಯುವ, ಅಡಿಗೆ ತಯಾರಿಸಿ ದೇವರ ತಳಿಗೆ, ನೈವೇದ್ಯದ ನಂತರ ಸಾಮೂಹಿಕ ಭೋಜನದ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗುತ್ತಿದೆ. ಉದ್ಯೋಗ ಮತ್ತಿತರೆ ಕಾರಣಗಳಿಂದ ದೂರದ ಊರುಗಳಲ್ಲಿದ್ದರೂ ಈ ಸಂದರ್ಭದಲ್ಲಿ ನಾಗರಪೂಜೆ, ಹಿರಿಯರ ಪೂಜೆಯಲ್ಲಿ ಶ್ರದ್ಧೆಯಿಂದ ಭಾಗವಹಿಸುತ್ತಾರೆ.

ಸಿರಾದ ದಸರಾ ಮನಸೆಳೆಯುವ ಹಬ್ಬ. ಅಧಿದೇವತೆ ದುರ್ಗಮ್ಮ ಗ್ರಾಮ ಸಂಸ್ಕೃತಿಯ ಪರಂಪರಾಗತ ನಂಬಿಕೆ, ನಡಾವಳಿಯ ರೂಪವಾಗಿ ದಸರೋತ್ಸವ ನಡೆಯುತ್ತದೆ. ನವಮಿಯ ಅಂಗವಾಗಿ ದೇವರನ್ನು ಪಟ್ಟಕ್ಕೆ ಕೂರಿಸುವುದರಿಂದ ಆರಂಭಗೊಳ್ಳುತ್ತದೆ. ಈ ಒಂಭತ್ತು ದಿನಗಳ ಉತ್ಸವ ಪೂಜಾ ವಿಧಿ ವಿಧಾನ ಆಕರ್ಷಕವಾಗಿರುತ್ತದೆ. ಮುಂದುವರಿದ ಈ ಧಾರ್ಮಿಕ ಉತ್ಸವ ಒಂಭತ್ತನೆಯ ದಿನ ಮೈದುಂಬಿ ವಿಜೃಂಭಿಸುತ್ತದೆ. ವಿಜಯದಶಮಿಯ ಉತ್ಸವಕ್ಕೆ ಕಳಸ ಹೊರಡಿಸುವ ಕ್ರಮ, ಕೋರುಮಗಳು ಕಳಸ ಹೊರುವ ಪರಂಪರೆ, ಕಳಸ ಕನ್ನಡಿಯೊಂದಿಗೆ ನಡೆಮುಡಿಯ ಮೇಲೆ ಕಳಸ ಬರುವ ರೀತಿ, ಕೊಮ್ಮಾರ ಚಿಕ್ಕಮಲ್ಲಯ್ಯನವರ ಕುಟುಂಬದ ಚಾಟಿ ಸೇವೆ, ಪೂರಕವಾಗಿ ಹೇಳುವ ದೇವರ ಮೇಲಿನ ಪದ, ಮಂಗಳವಾದ್ಯ ವಿಶೇಷಗಳಿಂದ ಆ ಸಂದರ್ಭ ದುರ್ಗಮ್ಮನ ದೇವಾಲಯದ ಆವರಣ ಜನಸಾಗರವಾಗಿ ಪರಿಣಮಿಸುತ್ತದೆ.

ಅಕ್ಕ ದುರ್ಗಮ್ಮ ಬಟ್ಟಲ ಕಣ್ಣಿನ ಚೆಲುವೆ
ಬಂಡಾರ ಹಿಡಿದಾಳೆ ಬಲಗೈಲಿ । ಸೀರ್‍ಯಾದ
ಹೂವಿನಾರತಿ ಬಂದಾವೆ

ಇದೇ ಮಾದರಿಯ ಪದಗಳು ದೇವಿ ದುರ್ಗಮ್ಮನ ಸುತ್ತ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಕಳಸ-ಕನ್ನಡಿ, ಛತ್ರಿ-ಚಾಮರ, ದಿಬ್ಬಣದ ಗೂಡೆ, ಬಂಡಾರದವರು, ಹೂವಿನ ಬುಟ್ಟಿಯೊಂದಿಗೆ ದೇವಿ ದುರ್ಗಮ್ಮನ ದೇವಾಲಯದ ಮುಂದೆ ಜಮಾವಣೆಯಾಗುತ್ತದೆ. ಮಧ್ಯಾಹ್ನ ಎರಡು ಗಂಟೆಯ ಸುಮಾರಿಗೆ ಹೊರಡುವ ಕಳಸೋತ್ಸವ, ಆ ಸಂಬಂಧಿ ಆಚರಣೆ, ಉತ್ಸವ ಸಂಜೆ ಆರು ಗಂಟೆಯ ಸುಮಾರಿಗೆ ಸಿರಾದ ದುರ್ಗಮ್ಮನ ದೇವಸ್ಥಾನದಿಂದ ಬನ್ನಿಮಂಟಪದ ತನಕ ಹೊರಡುವ ಯಾತ್ರೆ ನಿಜವಾದ ಜನವೈಭವವಾಗಿ ಪರಿಣಮಿಸುತ್ತದೆ.

ಬನ್ನಿಮಂಟಪ ಸಿರಾ ನಗರದ ಉತ್ತರಕ್ಕಿರುವ ಬನ್ನಿನಗರ ಬಡಾವಣೆಯಲ್ಲಿದೆ. ಒಂದು ಕಾಲದಲ್ಲಿ ನಗರದಿಂದ ಹೊರಗೆ ಉಳಿದಿದ್ದ ಬನ್ನಿಮರ, ಬನ್ನಿಮಂಟಪದ ಆವರಣ ಇಂದು ಮನೆಗಳಿಂದ ಆವೃತವಾಗಿದೆ. ಮಾತ್ರವಲ್ಲ ಇದರಾಚೆಗೂ ಭವಾನಿನಗರ, ಬೋವಿ ಕಾಲೋನಿ, ಆನೆಗೋರಿ ಬಡಾವಣೆ ಇನ್ನೂ ಮುಂದುವರಿಯುತ್ತಿದೆ. ಬನ್ನಿಮಂಟಪದ ವಿಶಾಲ ಪ್ರಾಂಗಣ,

ಬನ್ನಿಮರ, ಪುಟ್ಟ ಪುಟ್ಟ ದೇವರ ಗದ್ದಿಗೆಗಳು ಕಣ್ಮನ ಸೆಳೆಯುತ್ತವೆ. ವಿಜಯದಶಮಿಯ ದಿನ ಪ್ರಾತಃಕಾಲದಿಂದ ಸಿರಾ ನಗರದಲ್ಲಿರುವ ವಾಹನಗಳನ್ನು ಸವಾರರು ಅಲಂಕೃತಗೊಳಿಸಿಕೊಂಡು ಬನ್ನಿ ಮಂಟಪಕ್ಕೆ ಬಂದು ಒಂದು ಸುತ್ತು ಹಾಕಿಕೊಂಡು, ಬನ್ನಿಪತ್ರೆ ಸ್ವೀಕರಿಸಿ ಮುನ್ನಡೆಯುವುದು ಪರಂಪರಾಗತ ಸಂಪ್ರದಾಯವಾಗಿದೆ.

ಸಂಜೆ ಆರು ಗಂಟೆಯ ಸುಮಾರಿಗೆ ಬನ್ನಿನಗರ ಜನಸಾಗರದ ಜಾತ್ರೆಯಾಗಿ ಮಾರ್ಪಾಡಾಗುತ್ತದೆ. ಸಿರಾ ನಗರದಲ್ಲಿರುವ ಪ್ರಮುಖ ದೇವರುಗಳೆಲ್ಲವೂ ಮೆರವಣಿಗೆಯ ಮೂಲಕ ಬನ್ನಿಮಂಟಪಕ್ಕೆ ಬಿಜಯಂಗೈಯುತ್ತವೆ. ದಾರಿ ಉದ್ದಕ್ಕೂ ಭಕ್ತರಿಂದ ಮಂಗಳಾರತಿ, ಹಣ್ಣು-ಕಾಯಿ ಸೇವೆ ನಡೆಯುತ್ತದೆ. ಮೊದಲ ಪೂಜೆ ಶ್ರೀ ನಾರಾಯಣಸ್ವಾಮಿಯದು. ಬನ್ನಿ ಮಂಟಪದ ಬಳಿ ಬನ್ನಿಮರಕ್ಕೆ ಎದುರಾಗಿ ಪೂರ್ವಾಭಿಮುಖವಾಗಿ ದೇವರ ಗದ್ದಿಗೆ ಮಾಡಲಾಗುವುದು. ನಂತರ ಬನ್ನಿ ಮಂತ್ರ ಪಠಣ, ಜಯಕಾರ, ಪೂಜೆ ನಡೆಯುತ್ತದೆ. ನಾರಾಯಣಸ್ವಾಮಿ ಮುಜರಾಯಿ ದೇವರಾಗಿರುವುದರಿಂದ ತಾಲ್ಲೂಕು ಆಡಳಿತದ ಅಡಿಯಲ್ಲಿ ಬನ್ನಿಪೂಜೆ ನಡೆಯುತ್ತದೆ. ತಹಸೀಲ್ದಾರ್ ನವ ವರನ ಉಡುಗೆಯಲ್ಲಿ ದೇವರ ಸನ್ನಿಧಿಯಲ್ಲಿ ಕುಳಿತು ನಂತರ ದೀಕ್ಷಾವಿಧಿ ಸ್ವೀಕರಿಸಿ, ಬನ್ನಿ ಮರಕ್ಕೆ ಪೂಜೆ ಸಲ್ಲಿಸಿ ಕೈಗೆ ಕತ್ತಿ ತೆಗೆದುಕೊಂಡು ಬನ್ನಿಮರದ ಕೊಂಬೆಯ ಜೊತೆಗೆ ಬಾಳೆಕಂದು ಜೋಡಿಸಿ ನೆಟ್ಟಿರುವ ಜಾಗಕ್ಕೆ ಬಂದು ಮೂರು ಸುತ್ತು ಹಾಕಿ ನಮಿಸಿ ನಂತರ ಕತ್ತರಿಸಲಾಗುತ್ತದೆ. ಹೀಗೆ ಕತ್ತರಿಸಿದ ಬನ್ನಿ ಕೊಂಬೆಯಿಂದ ಬನ್ನಿ ಪತ್ರೆಯನ್ನು ತೆಗೆದುಕೊಳ್ಳಲು ಭಕ್ತರು ಮುಗಿಬೀಳುತ್ತಾರೆ. ಪತ್ರೆ ಪಡೆದವರು ಬನ್ನಿ ಪತ್ರೆಯನ್ನು ಪರಸ್ಪರ ಹಂಚುವ, ವಿನಿಮಯ ಮಾಡಿಕೊಳ್ಳುವ ಕಾರ್ಯ ನಡೆಯುತ್ತದೆ. ಹಿರಿಯರ ಪಾದಗಳಿಗೆ ನಮಸ್ಕಾರ ಮಾಡುವ ಪದ್ಧತಿಯೂ ಇದೆ. ನಂತರ ಒಂದೊಂದಾಗಿ ಬನ್ನಿ ಆವರಣಕ್ಕೆ ಇತರೆ ದೇವರುಗಳನ್ನು ಮೆರವಣಿಗೆಯ ಮೂಲಕ ಕರೆತರಲಾಗುವುದು. ಸಿದ್ದಪ್ಪ, ತಿಮ್ಮಪ್ಪ, ರೇವಣಸಿದ್ದೇಶ್ವರ, ಭೂತಪ್ಪ ಹೀಗೆ ಸಿರಾ ನಗರದಲ್ಲಿ ಸ್ಥಾಪನೆಗೊಂಡಿರುವ ಬಹುತೇಕ ದೇವರುಗಳನ್ನು ಮೆರವಣಿಗೆ ಮೂಲಕ ಕರೆತಂದು ಬನ್ನಿಮಂಟಪದಲ್ಲಿ ಗದ್ದಿಗೆ ಮಾಡಲಾಗುವುದು. ನಂತರ ವಿಶೇಷ ಪೂಜೆ, ಬನ್ನಿ ಮುಡಿಯುವುದು ಮೊದಲಾದ ಪಾರಂಪರಿಕ ಪೂಜೆ ಪುನಸ್ಕಾರ ಮಾಡಲಾಗುತ್ತದೆ.

ಈ ವೇಳೆಗೆ ಪ್ರಮುಖ ಜನಪದ ಕಲೆಗಳ ಆಕರ್ಷಕ ಪ್ರದರ್ಶನ ರಂಗುಗೊಳ್ಳುತ್ತದೆ. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಕ್ತರು, ಪ್ರೇಕ್ಷಕರು, ಕಲಾಸಕ್ತರು ಸೇರುತ್ತಾರೆ. ಸಿರಾದ ಹೊಸ ಬಸ್ ನಿಲ್ದಾಣದಿಂದ ಬನ್ನಿನಗರದ ರಸ್ತೆ ಸಂಪೂರ್ಣ ಜನಜಂಗುಳಿಯಾಗಿ ತಿರುಗಾಡುವುದಕ್ಕೆ ಸ್ಥಳವಿಲ್ಲದಂತಹ ವಾತಾವರಣ ನಿರ್ಮಾಣವಾಗುತ್ತದೆ. ಇಲ್ಲಿನ ವ್ಯವಸ್ಥೆಯಲ್ಲಿ ಬನ್ನಿ ಯುವಕ ಸಂಘದ ಪರಿಶ್ರಮ, ಸಂಘಟನೆ ವ್ಯವಸ್ಥೆಯ ಅಚ್ಚುಕಟ್ಟುತನ

ಎದ್ದು ಕಾಣುತ್ತದೆ. ವಿಶೇಷ ದೀಪಾಲಂಕಾರ, ಮೋಹಕ ಶೃಂಗಾರ, ಕಣ್ಮನ ಸೆಳೆಯುವ ಸುಡುಮದ್ದು, ಪಟಾಕಿಗಳ ಪ್ರದರ್ಶನ, ಆಕರ್ಷಕ ಕಲೆಗಳ ಪ್ರದರ್ಶನ ಬನ್ನಿ ಉತ್ಸವ ಜನೋತ್ಸವ, ಕಲೋತ್ಸವವಾಗಿ ಪರಿಣಮಿಸುತ್ತದೆ.

ಬನ್ನಿಮಂಟಪಕ್ಕೆ ಮೆರವಣಿಗೆಯಲ್ಲಿ ಬರುವ ಉತ್ಸವ ದೇವರುಗಳಿಗೆ ಕಟ್ಟುವ ವಾನ ವಿಶೇಷವಾಗಿ ಗಮನ ಸೆಳೆಯುತ್ತದೆ. ದುರ್ಗಮ್ಮ ದೇವರ ವಾನದಲ್ಲಿ ಸೆಟೆದು ನಿಂತ ಹುಲಿಯಾಗಿ, ಹುಲಿಯ ಮೇಲೆ ಕುಳಿತು ದುರ್ಗಮ್ಮ ದಯಮಾಡಿಸುತ್ತಾಳೆ ಎಂಬ ಭಾವನೆ ಭಕ್ತರದು. ಕಾಳಿದಾಸನಗರದ ರೇವಣಸಿದ್ದೇಶ್ವರನ ವಾಹನ ರಾವಣ. ಹತ್ತು ತಲೆ, ಹದಿನಾರು ಭುಜದ ರಾವಣ, ಗದೆ ಹಿಡಿದು ನಿಂತ ಭಂಗಿ ಅದರ ಹಿಂದೆ ಸಾಲಂಕೃತ ಗದ್ದಿಗೆಯಲ್ಲಿ ಕುಳಿತ ರೇವಣರ ವಿಗ್ರಹ ಹೀಗೆ ನಂದಿ, ಬಸವ ಮೊದಲಾದ ದೇವರುಗಳ ವಾನ ಬನ್ನಿ ಉತ್ಸವದಲ್ಲಿ ಮೇಳೈಸುತ್ತದೆ. ಹೀಗೆ ಇಡೀ ದಿನ ಜನಸಂದಣಿಯ ಕೇಂದ್ರವಾಗಿ ದುರ್ಗಮ್ಮ ಕಾಣಿಸಿಕೊಂಡರೆ ಮೌಖಿಕ ಪರಂಪರೆಯ ನಂಬಿಕೆ, ನಂಬಿಕೆಗೆ ತಕ್ಕ ಆಚರಣೆಯ ರೂಪವಾಗಿ ಸಿರಾ ಎಂಬ ನಗರ ಸಂಸ್ಕೃತಿಯ ಈ ನೆಲವೂ ಭಾವುಕ ನೆಲೆಯ ಜನಪದೀಯ ಚಟುವಟಿಕೆ ದಟ್ಟವಾಗಿಯೇ ಪ್ರಕಟವಾಗುತ್ತವೆ. ಇದು ಧಾರ್ಮಿಕ ಮನಃಸ್ಥಿತಿಯ ಒಂದು ಭಾಗವಾಗಿ ಪ್ರಕಟವಾದರೆ ಮಾಂತ್ರಿಕತೆ, ಜಾಡು, ಕಾಲು ಧೂಳು, ಕಣ್ಣೆಸರು ಈ ಬಗೆಯ ಶರೀರಕ್ಕೆ ಸಂಬಂಧಿಸಿದ ಖಾಯಿಲೆ, ಸಣ್ಣ-ಪುಟ್ಟ ಸಮಸ್ಯೆಗೆ ಪರಿಹಾರವಾಗಿ ಮಾಡುವ ಜನಪದ ವೈದ್ಯಕೀಯ, ಆ ಸಂಬಂಧಿ ಆಚರಣೆಗಳು ಗ್ರಾಮ ನೆಲೆಗಿಂತ ಭಿನ್ನವಾಗಿರುವುದಿಲ್ಲ. ಅಮಾವಾಸ್ಯೆ, ಹುಣ್ಣಿಮೆಯ ದಿನಗಳಂದು ಮೂರು ದಾರಿ ಕೂಡುವ ಸ್ಥಳದಲ್ಲಿ ನಿಂಬೆಹಣ್ಣು ಕತ್ತರಿಸಿ ಹಾಕಿಸುವ, ಹಳೆಯ ಮೊರ, ಹಿಟ್ಟಿನ ಕಾವಟಿಕೆ, ಮಡಿಕೆ-ಹಣದೊಂದಿಗೆ ವೀಳ್ಯದೆಲೆ, ಕಸಪೊರಕೆ ಕೆಲವೊಮ್ಮೆ ಜೇಡಿಮಣ್ಣಿನ ಸಣ್ಣ ಸಣ್ಣ ಗೊಂಬೆಗಳನ್ನು ಬೀದಿ ಬದಿಯಲ್ಲಿ ಪೂಜಿಸಿ ಹಾಗೆಯೇ ಬಿಟ್ಟು ಬಂದಿರುವುದನ್ನು ಸಿರಾ ನಗರದ ಒಳಗೂ ಹೊರಗೂ ಕಾಣಬಹುದಾಗಿದೆ.

ಪ್ರತಿ ಹಬ್ಬದ ಆಚರಣೆಯೂ ಪರಂಪರಾಗತವಾಗಿ ವ್ಯವಸ್ಥಿತವಾಗಿ ನಡೆಯುತ್ತದೆ. ಗೌರಿಪೂಜೆ, ಗಣಪತಿ, ಶ್ರೀರಾಮನವಮಿ, ದೀಪಾವಳಿ, ಯುಗಾದಿ, ಕಾರ್ತೀಕ, ಶ್ರಾವಣಮಾಸ ಇವುಗಳ ಹಿಂದಿನ ಸಾಂಪ್ರದಾಯಿಕ ನಂಬಿಕೆ, ಆಚರಣೆಗಳ ವಿಧಿ ವಿಧಾನ ಹಳ್ಳಿಗರಿಗಿಂತ ಭಿನ್ನವೇನಿಲ್ಲ. ಇತ್ತೀಚೆಗೆ ಕನಕಜಯಂತಿ, ಅಂಬೇಡ್ಕರ್ ಜಯಂತಿ, ಬಸವ ಜಯಂತಿ, ಮಹಾವೀರ ಜಯಂತಿ, ವಾಲ್ಮೀಕಿ ಜಯಂತಿ ಈ ಬಗೆಯ ರಾಷ್ಟ್ರೀಯ ಸಾಂಸ್ಕೃತಿಕ ನಾಯಕರ ಹೆಸರಿನ ಆಚರಣೆಗಳೂ ಮೌಖಿಕ ನೆಲೆಯಿಂದ ಬಂದವುಗಳಾಗಿದ್ದು ಅವುಗಳ ಆಚರಣೆಯಲ್ಲಿನ ಬಳಸುವ ಕಲಾ ಮೆರವಣಿಗೆ, ವಾದ್ಯ ವಿಶೇಷಗಳು ನಮ್ಮ ಪರಂಪರಾಗತ

ನಂಬಿಕೆಯ ರೂಪಗಳಾಗಿವೆ.

ವಾಸವಿ ಜಯಂತಿ, ಪಾಂಡುರಂಗ ಉತ್ಸವ, ಕಾಳಿಕಾಂಬ ಆಚರಣೆ ಹಿತಮಿತವಾಗಿ ಪಾವಿತ್ರ್ಯ ನೆಲೆಯ ದೈವಸಂಬಂಧಿ ನೆಲೆಯ ರೂಪವಾಗಿ ಪ್ರಕಟಗೊಳ್ಳುತ್ತವೆ. ಸಿರಾದ ಯಾವುದೇ ಮನೆಗಳಲ್ಲಿ ದೇವೀಪಾರಾಯಣ, ಕಥಾಶ್ರವಣದ ಸಂದರ್ಭದಲ್ಲಿ ಭಜನಾ ಕಾರ್ಯ, ಸಣ್ಣ ಮಕ್ಕಳು ಹಾಡುವ ದೇವರ ಪದ, ಮಂಗಳಾರತಿ ಇವುಗಳ ಜೊತೆಗೆ ಸಿರಾದ ರಂಗನಾಥನಗರ ಬಡಾವಣೆಯಲ್ಲಿ ಪ್ರತಿ ವರ್ಷ ಅಭಿನಯಿಸುವ ಯಕ್ಷಗಾನ-ಭಾಗವತ ಪ್ರಸಂಗ, ತಮಟೆ ಕಾರ್ಯಕ್ರಮ ಸಿರಾದ ಸುಣ್ಣಕಲ್ಲರ ಹಟ್ಟಿಯಲ್ಲಿ ಪ್ರತಿ ವರ್ಷ ಗಣಪತಿ ಹಬ್ಬದ ಮುಂದೆ ನಡೆಸುವ ಜೋಕುಮಾರ ಉತ್ಸವ, ಕಾಳಿದಾಸನಗರದ ಕೊಂತೆಮ್ಮ-ಗೌರಮ್ಮ ಆಚರಣೆ ನಮ್ಮ ಸಂಸ್ಕೃತಿಯ ಭಾಗವಾಗಿ ಮೌಖಿಕವಾಗಿ ನಿರಂತರಗೊಳ್ಳುತ್ತಿರುವುದರ ರೂಪವಾಗಿದೆ.



**ಗೊರವರ ಕುಣಿತ**

# ಆ) ಸಿರಾ ಕೋಟೆ ಸಂಬಂಧಿ ಜನಪದ

ಸಿರಾ ಬಹು ಸಂಸ್ಕೃತಿಯ ಜನಸಮುದಾಯಗಳ ಸಂಕೀರ್ಣ ನಗರ. ಹಾಗಾಗಿ ಇಲ್ಲಿ ಬಹು ರಾಜರ, ಮನೆತನಗಳ ಆಳ್ವಿಕೆಯೂ ನಡೆದಿದೆ. ಅರಸುತನಕ್ಕೆ ತಕ್ಕ ಕೋಟೆಯೂ ಸಿರಾದ ಸ್ಮಾರಕವಾಗಿದೆ. ಪೂರಕ ಮಂದಿರ, ಮಸೀದಿ, ಚರ್ಚ್‌ಗಳೂ ಇವೆ. ಈ ಬಗೆಯ ಬಹು ಸಂಸ್ಕೃತಿಯ ನೆಲೆಗಳ ಒಳಗೂ, ನೆಲಮೂಲ ಸಂಸ್ಕೃತಿಯನ್ನು ಅರಗಿಸಿಕೊಂಡು ನೆಲಮೂಲತನಕ್ಕೆ ತಕ್ಕ ಹಾಗೆ ಒಗ್ಗಿಸಿಕೊಂಡು ಸೌಹಾರ್ದಯುತ ಬದುಕು ಸವೆಸುತ್ತಿರುವುದು ಈ ನೆಲದ ವಿಶೇಷ. ಇಂಥ ಸೌಹಾರ್ದ, ಸ್ನೇಹ ಬಾಂಧವ್ಯ ಸಾರುವ, ಸಾಂಸ್ಕೃತಿಕ ಹಿರಿಮೆ ಗರಿಮೆಗೆ ಪಾತ್ರವಾಗಿರುವ ಇಲ್ಲಿನ ಕಸ್ತೂರಿ ರಂಗಪ್ಪನಾಯಕ ಹೆಸರಿನ ಕೋಟೆ ಅಪೂರ್ವ ಜಾನಪದ ವಾಙ್ಮಯವನ್ನು ಹೊಂದಿದೆ. ನೆಲದುರ್ಗದ ಕೋಟೆ ಎಂಬ ವಿಶೇಷತೆಗೆ ಕಾರಣೀಭೂತವಾಗಿರುವ ಈ ಕೋಟೆ ಸಿರಾದಿಂದ ಮಧುಗಿರಿ ಕಡೆಗೆ ಹೋಗುವ ಮುಖ್ಯರಸ್ತೆಗೆ ಹೊಂದಿಕೊಂಡಂತಿದೆ. ಕೋಟೆಯ ಪೂರ್ವದ ಬದಿಗೆ ದೊಡ್ಡಕೆರೆ ಸದಾ ತುಂಬಿ ನಿಲ್ಲುತ್ತದೆ. ಕೋಟೆಯ ಕಟ್ಟಡದ ವಿನ್ಯಾಸ, ಕಂದಕ ನಿರ್ಮಾಣ ಆಧಾರ ಸ್ತಂಭಗಳ ಮೇಲಿನ ಸುಂದರ ಕೆತ್ತನೆಯ ಕುಸುರಿ ಕೆಲಸ, ಕೋಟೆಯ ಒಳಬಾಗಿಲಿನ ಬದಿಯ ಗಣಪತಿ, ಆಂಜನೇಯ, ಗಜಲಕ್ಷ್ಮಿ, ದಿಕ್ಪಾಲಕರ ವಿಗ್ರಹ, ಕಲಾವಿನ್ಯಾಸ ಇವುಗಳು ಹಿಂದೂ ಧಾರ್ಮಿಕ ಮನಃಸ್ಥಿತಿಯನ್ನು ನಿಚ್ಚಳವಾಗಿ ಸಾರುತ್ತವೆ.


ಕೋಟೆಯ ಆರಂಭದಲ್ಲಿಯೇ ಆಳವಾದ ಕಂದಕ ತೋಡಿ ನೀರನ್ನು ಸಂಗ್ರಹಿಸಲು, ಈ ಮೂಲಕ ಶತ್ರುಗಳು ಒಳ ಸುಳಿಯದಂತೆ ಎಚ್ಚರ ವಹಿಸಲಾಗಿದೆ. ನಂತರ ಕೋಟೆಯ ಹೊರಗೋಡೆ ಇರುವ ಸ್ಥಳೀಯ ಕಲ್ಲು ಮಣ್ಣುಗಳಿಂದ ನಿರ್ಮಿಸಿರುವ ಗೋಡೆ. 2 ನೇ ಗೋಡೆ ದಿಡ್ಡಿಬಾಗಿಲು. ಇದೊಂದು ಸುಂದರವಾದ ಕಟ್ಟಡ. ಗಾರೆ ಹಾಗೂ ಕಲ್ಲುಗಳಿಂದ ನಿರ್ಮಿಸಲಾಗಿದೆ. ಇದರ ದ್ವಾರಬಾಗಿಲ ಬಳಿ ಒಂದು ಮಂಟಪವಿದ್ದು ಅದು ಹದಿನಾರು ಆಧಾರ ಸ್ತಂಭಗಳ, ಕರಿ ಕಲ್ಲಿನ ಸುಂದರ ಮಂಟಪ. ಈ ಆಧಾರ ಸ್ತಂಭಗಳ ಮೇಲೆ ಚಕ್ರಾಕಾರವಾಗಿ ಸುಂದರವಾದ ಕೆತ್ತನೆಯ ವಿನ್ಯಾಸವನ್ನು ಮಾಡಲಾಗಿದೆ. ಮೂರನೇ ಬಾಗಿಲು ಸದೃಢವಾಗಿದ್ದು ಕಾವಲುಗಾರನು ನಿಲ್ಲುವ ಪ್ರತ್ಯೇಕ ಗೂಡಿನ ಮಾದರಿಯನ್ನು ಕೋಟೆಯ ಒಳಬದಿಯ ಗೋಡೆಗೆ ಹೊಂದಿಕೊಂಡಂತೆ ಮಾಡಲಾಗಿದೆ. ಕೋಟೆಯ ಮೇಲ್ಭಾಗ ವಿಶಾಲವಾಗಿದ್ದು ಹನ್ನೆರಡು ಅಡಿಗಳಷ್ಟು ಅಗಲವಾಗಿದೆ. ಕೋಟೆಯ ಮೇಲೆ ಸೈನಿಕರು ಓಡಾಡಲು, ಕುದುರೆ ಸವಾರಿ, ಮದ್ದುಗುಂಡು ದಾಸ್ತಾನಿಗೂ, ಸಂಗ್ರಹಕ್ಕೂ ಜಾಗ ಕಲ್ಪಿಸಿದೆ.

ಕೋಟೆಯ ಗೋಡೆಯ ನಾಲ್ಕು ದಿಕ್ಕಿನಲ್ಲಿ ನಾಲ್ಕು ಬೃಹತ್ ಬುರುಜು, ಅದಕ್ಕೆ ಹೊಂದಿಕೊಂಡಂತೆ ಉಪಬುರುಜುಗಳೂ ಇವೆ. ಕೋಟೆಯ ಗೋಡೆಗೆ ಅಲ್ಲಲ್ಲಿ ರಂಧ್ರ ಮಾಡಲಾಗಿದ್ದು ಇವುಗಳ ಮೂಲಕ ಶತ್ರುಗಳನ್ನು ದೂರದಿಂದಲೇ ಗುರುತಿಸುವ ಮತ್ತು ಬಂದೂಕುಗಳನ್ನು, ಫಿರಂಗಿಗಳನ್ನು ಈ ರಂಧ್ರದ ಮೂಲಕ ಇಟ್ಟು ಶತ್ರುಗಳಿಗೆ ಹೊಡೆಯುವ ಜನಪದ ತಂತ್ರಗಾರಿಕೆ ಪರಿಣಾಮಕಾರಿಯಾಗಿ ಕೆಲಸಮಾಡಿದೆ. ಸಿರಾ ಪರಿಸರವನ್ನು ಕುರಿತು ಮಾತನಾಡುವಾಗ ಪ್ರತಿಯೊಬ್ಬರೂ ಉಲ್ಲೇಖಿಸುವುದು ಸಿರಾದ ಕಸ್ತೂರಿ ರಂಗಪ್ಪನ ಕೋಟೆಯನ್ನು ಈ ಬಗೆಗೆ ಚಾರಿತ್ರಿಕ ಸಂಗತಿಗಳಿಗಿರುವಂತೆ ಜಾನಪದೀಯವಾಗಿಯೂ ಅಪಾರ ವಾಙ್ಮಯವಿದೆ. ಕೋಲುಪದ, ಹೇಳುಪದ, ಮಂಗಳಾರತಿ ಪದಗಳಲ್ಲಿಯೂ ಸಿರಾ ಕೋಟೆಯನ್ನು ಕುರಿತ ಹಾಡುಗಳಿವೆ. ಕಳೆದ ದಿನಗಳ ಐತಿಹಾಸಿಕ ವೈಭವವನ್ನು ಅರ್ಥಮಾಡಿಕೊಡುವ ಈ ಕಥನ ಗೀತೆಗಳು ಚಾರಿತ್ರಿಕ, ಸಾಂಸ್ಕೃತಿಕ ಅಧ್ಯಯನಕ್ಕೆ ಅತ್ಯುತ್ತಮ ಆಕರವಾಗಿವೆ.

**ಪಾಳೆಯಗಾರರು:**

ರಕ್ಕಸತಂಗಡಿಯ ಯುದ್ಧದ ತರುವಾಯ ವಿಜಯನಗರದ ಸಾಮ್ರಾಜ್ಯ ಕುಸಿಯತೊಡಗಿತು. ಆಗ ವಿಜಯನಗರದ ಅರಸರು ತಮ್ಮ ಆಶ್ರಿತರಾಗಿದ್ದ ಸಾಮಂತರು, ಮಾಂಡಲಿಕರು, ಪಾಳೆಯಗಾರರು, ಹಲವು ಹಂತದ ವೀರರು, ಅಧಿಕಾರಿ ವರ್ಗಕ್ಕೆ ತಮ್ಮ ತಮ್ಮ ಒಡೆತನದ ಭೂಮಿ, ಗ್ರಾಮಗಳನ್ನು ಉಂಬಳಿ ನೀಡಿದರು. ಜೊತೆಗೆ ಆಗಿನ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಸಾಮಂತವಾಡಿ, ಪಾಳೆಯಪಟ್ಟುಗಳನ್ನು; ಆಯಾಯ ಪಾಳೆಯಗಾರರಿಗೆ ಬಿಟ್ಟುಕೊಟ್ಟರು. ಈ ಅವಕಾಶದಲ್ಲಿ ಮದ್ದಗಿರಿ, ನಿಡುಗಲ್ಲು, ಹೊಳವನಹಳ್ಳಿ, ಹಾಗಲವಾಡಿ, ಹೆಬ್ಬೂರು ಇವುಗಳು ಪಾಳೆಯಪಟ್ಟಿನ ಸಂಸ್ಥಾನಗಳಾದವು. ಇವುಗಳಲ್ಲಿ ಸಿರಾ; ಹರ್ತಿಕೋಟೆ ಸಂಸ್ಥಾನಕ್ಕೆ ಸೇರಿದ್ದು, ಇದರ ಪಾಳೆಯಗಾರನಾಗಿ ತಿಮ್ಮಪ್ಪನಾಯಕನಿದ್ದನು. ತಿಮ್ಮಪ್ಪನಾಯಕನಿಗೆ ಏಳುಜನ ಗಂಡುಮಕ್ಕಳಿದ್ದು, ಆತನ ಮರಣಾನಂತರ ಅವರೆಲ್ಲರೂ ಒಬ್ಬೊಬ್ಬರಂತೆ ಏಳು ಪ್ರಾಂತ್ಯಗಳಿಗೂ ಪಾಳೆಯಗಾರರಾದರು. ಇವರಲ್ಲಿ ತಿಮ್ಮಣ್ಣನಾಯಕ ನಿಡುಗಲ್ ಪ್ರಾಂತ್ಯದ ನಾಯಕನಾಗಿದ್ದನು. ಇಷ್ಟಾದರೂ ತಿಮ್ಮಪ್ಪನಾಯಕನ ಮಗ ಮಾಕೆಯ ನಾಯಕ, ಹೊಯ್ಸಳ ವೀರಬಲ್ಲಾಳನ ಸಾಮಂತನಾಗಿದ್ದನೆಂದು, ಈತನೇ ಸಿರಾದ ಪ್ರಥಮ ಪಾಳೆಯಗಾರನಾಗಿರಬೇಕೆಂಬ ಅಭಿಪ್ರಾಯವೂ ಇದೆ. ಕ್ರಿ.ಶ.1337 ರ ಸಿರಾ ಶಾಸನ 10 ರಲ್ಲಿ; ಈ ಬಗೆಗೆ ಉಲ್ಲೇಖವಿದೆ. ಒಂದಂತೂ ಸ್ಪಷ್ಟ ವಿಜಯನಗರ, ಹೊಯ್ಸಳ ಈ ಎರಡೂ ಪರಂಪರೆಯ ಮಾಂಡಲಿಕ ಪಾಳೆಯಗಾರರು; ಈ ಸಾಮ್ರಾಜ್ಯಗಳ ಪತನದ ತರುವಾಯ ಕರ್ನಾಟಕದಲ್ಲಿ ಪಾಳೆಯಗಾರರಾಗಿ ತಲೆ ಎತ್ತಿದರು, ಸ್ವತಂತ್ರ ರಾಜರಾಗಿ

ಆಳ್ವಿಕೆ ಮಾಡಿದರು.




ಕ್ರಿ.ಶ.1592ರ ಮಧುಗಿರಿ ಶಾಸನ 10 ಸಿರಾದಲ್ಲಿ ಆಳ್ವಿಕೆ ಮಾಡಿದ ಪಾಳೆಯಗಾರರನ್ನು ಗುರುತಿಸಲು ಉಳಿದೆಲ್ಲಾ ಆಕರಗಳಿಗಿಂತ ಹೆಚ್ಚು ಸಹಕಾರಿಯಾಗುತ್ತದೆ. ಈ ಶಾಸನದ ಪ್ರಕಾರ ಹರತಿಯ ಲಕ್ಷ್ಮಿಪತಿನಾಯಕರಿಗೆ ವಿಜಯನಗರದ ಅರಸರುಗಳು ಉಂಬಳಿಯಾಗಿ ಸಿರಿಯಾ, ಅಗಳಿ, ದೊಡ್ಡೇರಿ ಈ ಸೀಮೆಗಳನ್ನು ಕೊಟ್ಟಿರುವುದನ್ನು ಉಲ್ಲೇಖಿಸಿದೆ. ಆದುದರಿಂದ ಹರತಿ ಮೂಲದ, ಲಕ್ಷ್ಮೀಪತಿ ನಾಯಕನ ವಂಶವೇ, ಸಿರಾದ ಪಾಳೆಯಗಾರರಾಗಿ ಆಳ್ವಿಕೆ ಮಾಡಿದವರೆಂದು ಭಾವಿಸಬಹುದಾಗಿದೆ.

ಇದು ಸಿರಾವನ್ನಾಳಿದ ಪಾಳೆಗಾರರ ವಂಶಾವಳಿಯಾಗಿದ್ದು, ಇದರ ಪ್ರಕಾರ; ಲಕ್ಷ್ಮೀಪತಿ ನಾಯಕನ ಮಕ್ಕಳಾದ ರಂಗಪ್ಪನಾಯಕ; ಸಿರಾದಲ್ಲಿ ಆಳ್ವಿಕೆ ಮಾಡಿದನು. ಇನ್ನೊಬ್ಬ ಮಗ ಚಿಕ್ಕರಂಗಪ್ಪನಾಯಕ; ಹರ್ತಿಕೋಟೆಯಲ್ಲಿ ಪಾಳೆಯಗಾರನಾಗಿರುತ್ತಾನೆ. ಸಿರಾ ಶಾಸನ 64ರ ಪ್ರಕಾರ; ಸಿರಾ ಪಾಳೆಯಗಾರರ ಇತಿಹಾಸ; ಮತ್ತೊಂದು ತಿರುವು ಪಡೆದುಕೊಳ್ಳುತ್ತದೆ. ಇದರ ಪ್ರಕಾರ, ಸಮ್ಮೇಟ ಸರಜ ಕೃಷ್ಣಪ್ಪನಾಯಕನು, ಸಿರಾವನ್ನು ಆಳಿದ ಪಾಳೆಯಗಾರರಲ್ಲಿ ಮೊದಲಿಗನೆಂದೂ, ಅವನ ಮಗ ರಂಗಪ್ಪರಾಜ. ಈತನಿಗೆ ಕಸ್ತೂರಿರಂಗಪ್ಪರಾಜ ಎಂಬ ಮಗನಿದ್ದು, ಈತನು ಕ್ರಿ.ಶ.1621 ರವರೆಗೆ ಸಿರಾದ ಪಾಳೆಯಗಾರನಾಗಿದ್ದನೆಂದು ಹೇಳಿದೆ. ಇಷ್ಟಾದರೂ ಹೊನ್ನೇನಹಳ್ಳಿ, ಹುಯಿಲ್‌ದೊರೆ, ಬುಕ್ಕಾಪಟ್ಟಣ ಹಾಗೂ ಗಾಣದಹುಣಸೆ ಇವು ಸಿರಾದಿಂದ ಬೇರ್ಪಟ್ಟು ಹಿರಿಯೂರು ಸಂಸ್ಥಾನಕ್ಕೆ ಸೇರಿದ್ದವು. ಇದರ ಪಾಳೆಯಗಾರನಾಗಿ ಕೆಂಚಣ್ಣನಾಯಕ ಎಂಬುವನು ಆಳ್ವಿಕೆ ಮಾಡುತ್ತಿದ್ದನು. ಈತನೂ ಸಹ ಹರತಿ ಪಾಳೆಯಗಾರರ ವಂಶದವನು ಎಂದಿದೆ. ಆಗ ಬುಕ್ಕಾಪಟ್ಟಣ ಹಿರಿಯೂರಿನ ಉಪಕೇಂದ್ರವಾಗಿತ್ತು. ಇದಕ್ಕೆ ಪೂರಕ ಮಾಹಿತಿ ಎಂಬಂತೆ ಶ್ರೀ ಎಂ.ಎಸ್.ಪುಟ್ಟಣ್ಣನವರು

ಚಿತ್ರದುರ್ಗದ ಪಾಳೆಯಗಾರರು, ಎಂಬ ಗ್ರಂಥವನ್ನು 1924 ರಲ್ಲಿ ಪ್ರಕಟಿಸಿದ್ದು, ಇದರಲ್ಲಿ ಸಿರಾ ಪಾಳೆಯಗಾರರಿಗೆ ಸಂಬಂಧಿಸಿದ ಮಹತ್ವದ ಮಾಹಿತಿಯನ್ನು ಒದಗಿಸುತ್ತಾರೆ. ಇದರ ಪ್ರಕಾರ ಕ್ರಿ.ಶ.1638 ರಲ್ಲಿ ಸಿರಾದ ರಂಗಪ್ಪನಾಯಕನು ಹಿರಿಯೂರಿನ ಕೆಂಚಣ್ಣನಾಯಕನ ಮೇಲೆ ಯುದ್ಧಕ್ಕೆ ಹೋದನು. ಈಗಿನ ಕಸ್ತೂರಿರಂಗಪ್ಪನ ಹಳ್ಳಿಯಲ್ಲಿ ನಡೆದ ಕದನದಲ್ಲಿ ಸಿರಾದ ರಂಗಪ್ಪನಾಯಕನು ಸೋತನು ಮಾತ್ರವಲ್ಲ ರಂಗಪ್ಪನಾಯಕನ ಸಾವು ಸಂಭವಿಸುತ್ತದೆ. ಇದಕ್ಕೆ ಕೆಂಚಪ್ಪನಾಯಕ, ಚಿತ್ರದುರ್ಗದ ನಾಯಕ ಕಸ್ತೂರಿರಂಗಪ್ಪನಾಯಕನ ಸಹಾಯ ಅದರ ಸ್ಮಾರಕವಾಗಿ ಕಸ್ತೂರಿರಂಗಪ್ಪನಾಯಕನ ಹಳ್ಳಿ ಎಂದು ಹೆಸರು ಬರಲು ಕಾರಣವಾಗಿದೆ. ಇದಕ್ಕೆ ಪೂರಕ ಎಂಬಂತೆ ಕ್ರಿ.ಶ1637 ರಲ್ಲಿ ಸಿರಾವನ್ನು ಬಿಜಾಪುರದ ಸುಲ್ತಾನರು ವಶಪಡಿಸಿಕೊಂಡ ಸಂಗತಿ, 'ಬಿಜಾಪುರದ ಸುಲ್ತಾನರ ಇತಿಹಾಸ' ಪುಟಗಳಿಂದ ವ್ಯಕ್ತವಾಗುತ್ತದೆ. ಪರ್ಶಿಯನ್ ಶಾಸನವೂ ಈ ಅಂಶವನ್ನು ಪುಷ್ಟೀಕರಿಸುತ್ತದೆ.

ಎಂ.ಎಸ್.ಪುಟ್ಟಣ್ಣನವರು 'ಚಿತ್ರದುರ್ಗದ ಪಾಳೆಯಗಾರರು' ಕೃತಿಯಲ್ಲಿ ಸರ್ಜೀರಾಯನ ಪರಾಕ್ರಮ ಎಂದು ಬಣ್ಣಿಸಿ, ಸಿರಾದ ಬಗೆಗೆ ಒಂದಿಷ್ಟು ಐತಿಹಾಸಿಕ ಅಂಶಗಳನ್ನು ನೀಡುತ್ತಾರೆ. ಈ ಪ್ರಕಾರ ಚಿತ್ರದುರ್ಗದ ಕಸ್ತೂರಿ ರಂಗಪ್ಪನಾಯಕನು, ತನ್ನ ಮಗಳಾದ ಓಬವ್ವೆಯನ್ನು ಸೀರ್ಯದ ರಂಗಪ್ಪನ ಕೃಷ್ಣಪ್ಪನಿಗೆ ಕೊಟ್ಟು ವೈವಾಹಿಕ ಸಂಬಂಧ ಬೆಳೆಸಿದ್ದನು. ಆದರೆ 1636 ರಲ್ಲಿ ಅಳಿಯ ಕೃಷ್ಣಪ್ಪನು, ಒಳಸಂಚು ಮಾಡಿ, ಚಿತ್ರದುರ್ಗದವರ ಮೇಲೆ ಯುದ್ಧದ ಕಸರತ್ತು ಮಾಡಿದನು. ಚಿತ್ರದುರ್ಗದ ಮದಕರಿನಾಯಕನು, ಸಿರಾದ ಕೃಷ್ಣಪ್ಪನ ಈ ಸಂಚನ್ನು ವಿಫಲಗೊಳಿಸಿ ಆತನನ್ನು ಸೋಲಿಸಿದನು. ಇದನ್ನು ಸರ್ಜೀರಾಯನ ಪರಾಕ್ರಮ ಎಂದು ಬಣ್ಣಿಸಲಾಗಿದೆ.

ಸಿರಾದ ಪಾಳೆಯಗಾರರಲ್ಲಿ ಹೆಚ್ಚಿನವರು ರಂಗಪ್ಪನಾಯಕ ಎಂಬ ಹೆಸರಿನವರಾಗಿದ್ದಾರೆ. ರಂಗಪ್ಪನಾಯಕನ ಪರಂಪರೆಯನ್ನು ಹಲವು ದಾಖಲೆಗಳಲ್ಲಿ ಉಲ್ಲೇಖಿಸಿದೆ. ರಂಗಪ್ಪನಾಯಕನ ಪರಂಪರೆಗೆ ಇಮ್ಮಡಿ ರಂಗಪ್ಪನಾಯಕ ಮತ್ತು ಮುಮ್ಮಡಿ ರಂಗಪ್ಪನಾಯಕ ಎಂದು ಶಾಸನಗಳೂ ಉಲ್ಲೇಖಿಸಿವೆ. ಆದುದರಿಂದ ಸಿರಾವನ್ನು ಆಳಿದವರು ಹರತಿ ಮೂಲದ ದುಂಡಪ್ಪನಾಯಕನ ವಂಶದವರಾದ ಲಕ್ಷ್ಮೀಪತಿನಾಯಕನ ಸಂತತಿ. ರಂಗಪ್ಪನಾಯಕ ಎಂಬುದು ಹೆಚ್ಚು ನಿಖರವಾದ ಅಂಶವಾಗಿದೆ. ಕ್ರಿ.ಶ.1638 ರಲ್ಲಿ ರಂಗಪ್ಪ ನಾಯಕನು, ಸೀರ್ಯಾ ಸೀಮೆಯ ಪ್ರಬಲ ನಾಯಕನಾಗಿದ್ದು, ಈತನ ಸೈನ್ಯದಲ್ಲಿ ಹನ್ನೆರಡು ಸಾವಿರ ಕಾಲಾಳು, ಮೂರು ಸಾವಿರ ಕುದುರೆ ಇದ್ದವೆಂದು ಎಂ.ಎಸ್.ಪುಟ್ಟಣ್ಣನವರು, ಅಭಿಪ್ರಾಯ ಪಡುತ್ತಾರೆ. ಸಿರಾ ಭಾಗದಲ್ಲಿ ಪ್ರಕಟವಾಗಿರುವ ದಾಖಲೆಗಳಲ್ಲಿ ಸಿರಾ ನಗರವನ್ನು

ಆಳಿದ ಪಾಳೆಯಗಾರರಲ್ಲಿ ರಂಗಪ್ಪನಾಯಕ ಅತ್ಯಂತ ಪರಾಕ್ರಮಿಯಾಗಿದ್ದು, ಆತನ ಕಾಲದಲ್ಲಿಯೇ ಸಿರಾದ ಕೋಟೆಯು ನಿರ್ಮಾಣವಾದುದೆಂದು ಹೇಳಲಾಗಿದೆ.

ಸಿರಾದ ಸುಲ್ತಾನರ ಇತಿಹಾಸದಲ್ಲಿಯೂ ಸಿರಾ ಪಾಳೆಯಗಾರರ ಪ್ರಸ್ತಾಪ ಪ್ರಕಟವಾಗಿದ್ದು, ಇದರಲ್ಲಿ ಕಸ್ತೂರಿ ರಂಗಪ್ಪನಾಯಕನ ಸಾಹಸಗಾಥೆಯೂ ಬರುತ್ತದೆ. ಇವುಗಳ ಪ್ರಕಾರ ಕ್ರಿ.ಶ. 1637 ರಲ್ಲಿ ಬಿಜಾಪುರ ಸುಲ್ತಾನ ಅಫಜಲ್‌ಖಾನ್, ಸಿರಾದ ಮೇಲೆ ಮುತ್ತಿಗೆ ಹಾಕಿದಾಗ, ಕಸ್ತೂರಿ ರಂಗಪ್ಪನಾಯಕ ಆತನನ್ನು ಎದುರಿಸಿದನೆಂದೂ ಸಿರಾ-ತುಮಕೂರು ರಸ್ತೆಯ ಗುಮ್ಮನಹಳ್ಳಿ ಬಯಲಲ್ಲಿ ಭೀಕರ ಕಾಳಗ ನಡೆದು, ಈ ಕಾಳಗದಲ್ಲಿ ರಂಗಪ್ಪನಾಯಕ ಮಡಿದನೆಂದು ಇತಿಹಾಸಕಾರರೂ ಹೇಳುತ್ತಾರೆ. ಮೌಖಿಕ ಪರಂಪರೆಯೂ ಇದನ್ನೇ ಸಮರ್ಥಿಸುತ್ತದೆ.

ಆಚೆ ಕೊತ್ತಲಬಿದ್ದು ಈಚೆ ಕೊತ್ತಲ ಬಿದ್ದು  
ಜಂಗಿಸಿ ಹೋದಾನ ತಲೆ ಬಿದ್ದು । ರಂಗಣ್ಣನ  
ಅಂಗಿ ಬಿದ್ದಾವೆ ಕಣದಾಗೆ ।

ಇದೇ ಮಾದರಿಯ ಮೂರ್‍ನಾಲ್ಕು ಪದಗಳಲ್ಲಿ ರಂಗಣ್ಣನ ಯುದ್ಧದ ವರ್ಣನೆ, ಕುದುರೆಯ ವರ್ಣನೆ, ಆಯುಧಗಳು ಕೆಳಗುರುಳಿಸಿದ ಬಗೆ, ಉಡುಗೆ ಚೆಲ್ಲಾಡಿದ ರೀತಿ, ತಲೆ ಹಾರಾಡಿದ, ಮಡಿದ ಚಿತ್ರಗಳ ಭಾವಪೂರ್ಣ ವರ್ಣನೆಯನ್ನು ಜನಪದ ಗೀತೆಗಳು ಹೇಳುತ್ತವೆ.

ನಂತರ ಸಿರಾ ನೇರವಾಗಿ ಬಿಜಾಪುರ ಸುಲ್ತಾನರ ವಶವಾಗುತ್ತದೆ. ಖಾಸಿಂಖಾನ್ ಎಂಬುವವನು ಸಿರಾದ ಸುಬೇದಾರನಾಗಿ ಸಿರಾದ ನೆಲಕೋಟೆಯನ್ನು ವಿಸ್ತರಿಸಿದನೆಂದು ಹೇಳಲಾಗಿದೆ. ಈ ಬಗೆಯ ಐತಿಹಾಸಿಕ ಸಂಗತಿಗಳೇನೇ ಇರಲಿ ಸಿರಾ ಕೋಟೆ ಕಸ್ತೂರಿ ರಂಗಪ್ಪನ ಕೋಟೆ ಎಂದು ಜನಪದರು ಭಾವಪೂರ್ಣವಾಗಿ ಕರೆಯುತ್ತಾರೆ. ಕಸ್ತೂರಿ ರಂಗಪ್ಪನ ಕೋಟೆ ಜಾನಪದ ಐತಿಹ್ಯವಾಗಿಯೂ ಉಳಿದಿದೆ.

ಹತ್ತೀತತ್ತಿತು ಕೋಟೆ । ಚಕ್ರ ತಿರುವಿದ ಕೋಟೆ  
ಹತ್ತೀತೀ ಕೋಟೆ ಮುಗಿಲುದ್ದ । ತಿಮ್ಮೋಜಮ್ಮನ  
ಮೂವಾದ ಮಗನ ಬಸಿರೀಲಿ

ಕೋಲುಪದದ ಧಾಟಿಯಲ್ಲಿ ಹಾಡುವ ಈ ಗೀತೆ ಸಿರ್‍ಯಾದ ಕೋಟೆ ನಿರ್ಮಾಣದ ವಿವರ ನೀಡುತ್ತದೆ. ಆ ಕಾಲದಲ್ಲಿ ಸಿರಾ ಪಾಳೆಯಗಾರರ ಆಳ್ವಿಕೆಯಲ್ಲಿದ್ದು ರಂಗಪ್ಪನಾಯಕ



ಈ ಪ್ರಾಂತ್ಯಕ್ಕೆ ಅರಸನಾಗಿದ್ದನು, ಈತನನ್ನು ಕಸ್ತೂರಿ ರಂಗಪ್ಪನಾಯಕ ಎಂದೇ ಜನಪದರು ಪರಿಭಾವಿಸಿ ಕಸ್ತೂರಿ ರಂಗಪ್ಪನಾಯಕನ ಕೋಟೆ ಎಂದೇ ಕರೆಯಲಾಗುತ್ತದೆ. ಆದರೆ ಕಸ್ತೂರಿ ರಂಗಪ್ಪನಾಯಕ ಹುಟ್ಟುವುದಕ್ಕೆ ಮುಂಚೆ ಸಿರಾ ಕೋಟೆ ನಿರ್ಮಾಣವಾಗಿತ್ತು ಎಂಬುದನ್ನು ಈ ಪದ್ಯ ನಿರೂಪಿಸುತ್ತದೆ. ಕೋಟೆಯ ವಿಸ್ತಾರ, ಅದ್ಭುತವನ್ನು ವಿವರಿಸುವ ಜನಪದ ಕವಿ ತಿಮ್ಮಾಜಮ್ಮನ ಮೂವಾದ ಮಗನ ಬಸಿರೀಲಿ ಎಂದು ಕರೆಯುವ ಮೂಲಕ, ಕಸ್ತೂರಿ ರಂಗಪ್ಪನಾಯಕನ ತಂದೆ ರಂಗಪ್ಪನಾಯಕ ಸಿರಾ ಕೋಟೆಯನ್ನು ನಿರ್ಮಿಸಿದನೆಂದೂ ಈ ಗೀತೆ ಹೇಳುತ್ತದೆ. ಇತಿಹಾಸಕಾರರ ಅಭಿಮತವೂ ಇದೇ ಬಗೆಯದಾಗಿದ್ದು ಪಾಳೆಯಗಾರರ ಕಾಲದಿಂದ ಆರಂಭವಾಗಿ ಬಿಜಾಪುರ ಸುಲ್ತಾನರು, ಹೈದರ್‌ವರೆಗೆ ಸಿರಾದ ಕೋಟೆಯ ನಿರ್ಮಾಣದ ಕಾರ್ಯ ನಡೆದಿರುವುದಾಗಿ ಹೇಳಲಾಗುತ್ತದೆ. ಈ ಜನಪದ ಗೀತೆ ಈ ಹೇಳಿಕೆಯನ್ನು ಸಮರ್ಥಿಸುವಂತಿರುವುದು ವಿಶೇಷ.

ಸಿರಾ ಕೋಟೆಯ ವರ್ಣನೆ, ನವಾಬರೊಂದಿಗಿನ ಯುದ್ಧ, ದಾಯಾದಿ ಕಲಹ ವರ್ಣನೆ ಪ್ರಕಟವಾಗಿದೆ. ರಾಯದುರ್ಗದ ಪುವಾಗಲದ ಕೆಂಗಣ್ಣನೊಂದಿಗೆ ರಾಯಪಗಡೆಯಾಡುವುದು, ಇದಕ್ಕೆ ಪಣವಾಗಿ ಸಿರ‍್ಯಾದ ರಂಗಣ್ಣ ತನ್ನ ತಂಗಿಯನ್ನು ಪಣವಾಗಿ ಇಟ್ಟು ಆಡಬೇಕೆಂದು ಪೂವಾಗಲದ ರಂಗಣ್ಣ ಬೇಡಿಕೆಯನ್ನಿಡುವುದು, ಇದನ್ನು ಸವಾಲಾಗಿ ಸ್ವೀಕರಿಸಿದ ಸಿರಾದ ರಂಗಪ್ಪನಾಯಕ ತನ್ನ ದಾಯಾದಿ ಎದುರಾಳಿಗೆ ತಂಗಿಯ ಉಚ್ಚೆ ಕುಡಿಸುವುದು ಪ್ರಕಟವಾಗುತ್ತದೆ. ಈ ಮೂಲಕ ಸಿರಾದ ರಂಗಪ್ಪನಾಯಕನ ಶೌರ್ಯ, ಪರಾಕ್ರಮಗಳ ಜೊತೆಗೆ ಎದುರಿಸಿದ ದಾಯಾದಿ ಕಲಹವನ್ನು ವಿವರಿಸಿ ಈ ಬಗೆಯ ಮತ್ಸರಗಳ ಕುತಂತ್ರದಿಂದಲೇ ರಂಗಪ್ಪನಾಯಕ ನಾಶವಾದ ರೀತಿಯನ್ನು ಜನಪದ ಗೀತೆ ವಿವರಿಸುತ್ತದೆ.

ಅಕ್ಕನ ಮಗನೆ ಸೀರ‍್ಯಾದ ರಂಗ
ರೊಕ್ಕ ಹೆಚ್ಚಾಗಿ ಅವನಿಗೆ
ಸೊಕ್ಕ ನಾನೆಂಗೆ ಮುರಿಯಲಿ ॥

ಈ ಪದ್ಯವು ದಾಯಾದಿ ಕಲಹ, ಹಗೆತನ, ಅಸೂಯೆಗಳಿಂದ ಸಿರಾದ ಪಾಳೆಯಗಾರರು ಕಂಗಾಲಾಗಿದ್ದರು. ಇದೂ ಕೂಡ ಹೊರಗಿನವರು ಸಲೀಸಾಗಿ ಸಿರಾ ಪಾಳೆಯಗಾರರ ಮೇಲೆ ಆಕ್ರಮಣ ಮಾಡಲು ಪ್ರಮುಖ ಕಾರಣವಾಯಿತು. ಮುಂದೆ ಸೋದರಮಾವ ಪೂವಾಲಿಗದ ರಂಗಣ್ಣನೊಂದಿಗೆ ರಾಯಪಗಡೆ ಆಡಿ ಸೋತು, ನಯ ವಿನಯದಿಂದಲೇ ತನ್ನ ಅರಮನೆಗೆ ಕರೆತಂದು

ತಂಗಿ ರಂಗಮ್ಮನ ಕರೆದಾನೆ ರಂಗಪ್ಪ
ಹಿಡಿಯಮ್ಮ ನಿನ್ನ ಮೈನೀರ । ರನ್ನದಿ
ಬನ್ನಿರಿ ಮಾವಯ್ಯ ಕುಡಿಯಿರಿ । ಕಾಶಿ ಈಶ್ವರನ ತೀರುತ

ವಂಚಕ ಕೆಂಗಣ್ಣನಿಗೆ ರಂಗಪ್ಪನಾಯಕ ತನ್ನ ತಂಗಿಯನ್ನು ಕೊಡುವುದರ ಬದಲಿಗೆ ಆಕೆಯ ಉಚ್ಚೆ ಕುಡಿಸಿದ ಬಗೆ ಸ್ವಾರಸ್ಯಕರವಾಗಿದೆ. ಇದು ವೈರತ್ವ ಇಮ್ಮಡಿಸಿ ಶತ್ರುಗಳೊಂದಿಗೆ ಸ್ನೇಹ ಸಾಧಿಸಿ, ಸಿರಾ ಕೋಟೆ ವಶಪಡಿಸಿಕೊಳ್ಳಲು ಪ್ರಮುಖ ಪ್ರೇರಣೆಯಾಯಿತು ಎಂತೆಂಬ ಒಳಸುಳಿವುಗಳನ್ನು ಜಾನಪದೀಯ ನೆಲೆಯಲ್ಲಿ ಕಟ್ಟಿಕೊಡುವ ಈ ಗೀತೆ ಮುಂದೆ ಕಸ್ತೂರಿ ರಂಗಪ್ಪನಾಯಕನಿಗೂ ಸುಲ್ತಾನರಿಗೂ ನಡೆದ ಕದನ, ಅದರಲ್ಲಿ ರಂಗಪ್ಪನ ಶೌರ್ಯ, ಕುದುರೆ ಮುಂತಾದ ರಣಪಡೆಯ ಸಾಹಸಗಳನ್ನು ಸೊಗಸಾಗಿ ವಿವರಿಸುತ್ತದೆ.

ತುರುಕರ ದಂಡು ಬಂದು ತುದಿಗಾಲ್ಕೈದಾರೆ
ಸೊಬಕ ತತ್ತಾರೆ ಹಡದಮ್ಮ । ತುರುಕರ ಕೂಟ
ಒಂದೇ ಮಾತಾಡಿ ಬರುತೀನಿ

ಇದು ಬಿಜಾಪುರ ಸುಲ್ತಾನರ ಸೈನ್ಯ ಸಿರ್ಯಾದ ಪಟ್ಟಣವನ್ನು ಮುತ್ತಲು ಬಂದಾಗಿನ ಸೂಚನೆಯನ್ನು, ಅದಕ್ಕೆ ಸನ್ನದ್ಧವಾದ ರಂಗಪ್ಪನಾಯಕ ತನ್ನ ತಾಯಿಯಿಂದ ಆಶೀರ್ವಾದ ಬೇಡಿ ಸುಲ್ತಾನರೊಂದಿಗೆ ರಾಜಿ ಸಂಧಾನಕ್ಕೆ ಹೊರಟ ಬಗೆಯನ್ನು ವಿವರಿಸಿದರೆ, ತಾಯಿ ತಿಮ್ಮಾಜಮ್ಮ ಸುಲ್ತಾನರೊಂದಿಗೆ ಸ್ನೇಹ, ಸಲುಗೆ, ರಾಜಿ ಸಂಧಾನ ಒಳ್ಳೆಯದಲ್ಲ. ಅವರು ಮೋಸದಿಂದ ಮಗನನ್ನು ಸಾಯಿಸಬಹುದೆಂಬ ಇಂಗಿತ ವ್ಯಕ್ತಪಡಿಸುತ್ತಾಳೆ.

ಮೀಸೆ ತುರುಕರು ಕಾಸಿಗೆ ತರವಲ್ಲ
ಸಾಪಕಲ್ಲಾಗೆ ಒಲೆ ಹೂಡಿ । ತಿಮ್ಮಾಜಮ್ಮನ
ಭಾಷೆ ರಂಗಣ್ಣಾಗೆ ತಿಳಿಯಾದು ॥ ರನ್ನದಿ॥

ತಾಯಿ ತಿಮ್ಮಾಜಮ್ಮಳ ಮಾತು ರಂಗಪ್ಪ ನಾಯಕನಿಗೆ ತಿಳಿಯಲಿಲ್ಲ. ಅದೇನೂ

ಅಲ್ಲ, ತಾಯಿ ಹೃದಯ. ಸುಲ್ತಾನರೊಂದಿಗಿನ ಯುದ್ಧ, ದಾಯಾದಿ ಮತ್ಸರ ಬೇರೆ. ಈ ಎಲ್ಲವುಗಳ ಅರಿವಿದ್ದ ತಿಮ್ಮಾಜಮ್ಮಗೆ, ಮಗ ಯುದ್ಧಕ್ಕೆ ಹೋಗುವುದು ಇಷ್ಟವಿರಲಿಲ್ಲ. ಹಾಗಾಗಿ ಯುದ್ಧ ವಿಮುಖರಾಗುವಂತೆ ಮಗನಿಗೆ ಮನವಿ ಮಾಡಿರಬಹುದು. ಆದರೆ ಸ್ವಾಭಿಮಾನಿ ಸಿರಾದ ರಂಗಪ್ಪನಾಯಕ ಕೇಳಬೇಕಲ್ಲ. ಛಲದಿಂದ ಯುದ್ಧಮುಖಿಯಾಗುತ್ತಾನೆ. ಆತ ಯುದ್ಧಕ್ಕೆ ಸನ್ನದ್ಧವಾದ ಚಿತ್ರವನ್ನು ಜನಪದ ಕವಿ ಹೀಗೆ ಕಟ್ಟಿಕೊಟ್ಟಿದ್ದಾನೆ.

ಮಾವಿನ ಹಣ್ಣು ತಂದು ತಾಯಿಯ ಕೈಗೆ ಕೊಟ್ಟು
ತಾಯಿ ತಿಮ್ಮಾಜಮ್ಮ ಬಿಡುತನ್ನಿ । ತುರುಕರ
ಕೂಟೆ ಎರಡೇ ಮಾತಾಡಿ ಬರುತೀನಿ

ಎಂದು ತಾಯಿಯಿಂದ ದೋಷ ಪರಿಹಾರ, ದೇವರ ಕರುಣೆಯ ಮೂಲಕ ಅಮಂಗಳ ನಿವಾರಣೆಯಾಗಿ ನನ್ನ ರಾಜ್ಯಕ್ಕೆ ಒಳಿತು ಸಂದಾಯವಾಗಲಿ. ಅದಕ್ಕೆ ತಾಯಿಯ ಆಶೀರ್ವಾದ ಬೇಡುತ್ತಾನೆ. ಆದರೆ ವಿರೋಧಿಯಾದ ತಿಮ್ಮಾಜಮ್ಮಗೆ ತಾನು ಯುದ್ಧಕ್ಕೆ ಹೋಗುವುದಿಲ್ಲ, ಬದಲಿಗೆ ವೈರಿಗಳ ಜೊತೆ (ತುರುಕರ ಕೂಡೆ) ಎರಡೇ ಮಾತಾಡಿ ಬರುತೀನಿ ಅನ್ನುವುದು ಸ್ವಾರಸ್ಯಕರವಾಗಿದೆ. ಶಾಂತಿಯನ್ನೇ ಬಯಸುವ ತಾಯ್ತನದ ಮುಂದೆ, ಹಿಂಸೆಯ ಪ್ರಸ್ತಾಪ ಪ್ರಕಟವಾಗದೆ ಶಾಂತಿ ಸಂಧಾನದ ಮೂಲಕ ಸುಲ್ತಾನರ ಆಶಯವೂ ಏಕಕಾಲಕ್ಕೆ ಪ್ರಕಟವಾಗುತ್ತದೆ. ಹೀಗೆಯೇ ರಂಗಪ್ಪನಾಯಕ ತನ್ನ ಮಡದಿ, ಸೋದರಿ ಇವರಿಂದಲೂ ತನಗೆ ಒಳಿತು ಹಾರೈಸೆಂದು ಕೇಳಿಕೊಳ್ಳುತ್ತಾನೆ. ತಂಗಿಗೆ ತೆಂಗಿನಕಾಯಿ ಮುಟ್ಟಿಸಿ ಒಳಿತು ಬೇಡಿದರೆ, ಮಡದಿಯಿಂದ ಹಲಸಿನಹಣ್ಣು ಮುಟ್ಟಿಸಿ ಬಿಡುಗಡೆ ಮಾಡುವ ಪ್ರಾರ್ಥನೆ ಮುಂದಿಡುತ್ತಾನೆ.

ಹೀಗೆ ಯುದ್ಧಸಂಬಂಧಿ ತುಡಿತ ಇನ್ನೊಂದೆಡೆ ದೋಷ ಪರಿಹಾರದ ನಂಬಿಕೆ, ತಕ್ಕ ಆಚರಣೆಗಳಿಂದ ಶುಭ್ರ ಮನಃಸ್ಥಿತಿಯ ಕಸ್ತೂರಿ ರಂಗಪ್ಪನಾಯಕ ಯದ್ಧಕ್ಕೆ ಹೊರಡುತ್ತಾನೆ. ಹಾಗೆ ಹೊರಟ ಸಂದರ್ಭವನ್ನು ಜನಪದರು ಹೀಗೆ ಕಟ್ಟಿಕೊಡುತ್ತಾರೆ.

ಮಚ್ಚಾಕಿದ ಕುದುರೆ ಮತ್ತೆಲ್ಲಿ ಕುಣಿದಾವು
ಚಿಕ್ಕ ಗುಮ್ಮನಹಳ್ಳಿ ಬೈಲಾಗೆ । ರಂಗಣ್ಣನ
ಜೂಲಾಕಿದ ಕುದುರೆ ಕುಣಿದಾವು

ಇಂಥ ಕುದುರೆಗಳೂ ಅಪಾಯಕಾರಿ ಬೆಳವಣಿಗೆಯಿಂದ, ರಂಗಣ್ಣನಿಗೆ ಹತೋಟಿಗೆ ಬರದೆ ಮದವೇರಿದ ಪ್ರಸಂಗ ಕುತೂಹಲಕಾರಿಯಾಗಿದೆ.

ಅಪ್ಪ ರಂಗಣ್ಣನ ಒಪ್ಪಾದ ಸೇಜುಗಳು
ಸಕ್ಕ ಮಡ್ಡೆ ಕುಡಿದು ಮದವೇರಿ ಬಣ್ಣದಾಗ
ಸೊಪ್ಪು ಮಾರೋಳೆ ಕಡೆಗೇಳೆ ।

ಹಾಗೂ

ಅಣ್ಣ ರಂಗಣ್ಣನ ಬಣ್ಣದ ಸೇಜಿಗಳು
ಎಣೆ ಮಡ್ಡಿ ಕುಡಿದು ಮದವೇರಿ ಬರುವಾಗ
ಹಣ್ಣು ಮಾರೋಳೆ ಕಡೆಗೇಳೆ ।

ಈ ಎರಡೂ ಪದ್ಯಗಳಲ್ಲಿ ರಂಗಣ್ಣನ ಕುದುರೆಗಳು ಸೊಕ್ಕು ಬರುವ ಪಾನೀಯ ಕುಡಿದಿರುವ ಉಲ್ಲೇಖಗಳಿವೆ. ಅಂದರೆ ಕುದುರೆಗಳಿಗೆ ಹುಳಿ ಹೆಂಡ ಕುಡಿಸಿರಬಹುದಾದ ಸಾಧ್ಯತೆ. ಇದು ಯಾರ ಕೃತ್ಯ? ಕಸ್ತೂರಿ ರಂಗಪ್ಪನಾಯಕನಿಗೆ ಸೋಲಾಗಲೆಂದೇ ಹಿತಶತ್ರುಗಳ ಒಳತಂತ್ರವೋ ಅಥವಾ ಕುದುರೆಗಳನ್ನು ಉತ್ತೇಜಿಸಲು ಅಕಾಲದ ಅಶ್ವಪಡೆಯ ಒಂದು ಆಹಾರ ಪದ್ಧತಿಯೆ? ಎಂಬುದು ಚರ್ಚಾಸ್ಪದವಾದ ಸಂಗತಿಯಾಗಿದೆ. ಅಂತೂ ಕುದುರೆಗಳು ರಂಗಣ್ಣನ ಹಿಡಿತಕ್ಕೆ ಸಿಕ್ಕಲಿಲ್ಲ. ದಿಕ್ಕಾಪಾಲಾಗಿ ರಂಗುರಂಗಾಗಿ ಕುಣಿಯತೊಡಗಿದವು, ಓಡ ತೊಡಗಿದವು. ಇದು ರಂಗಣ್ಣನಿಗೆ ಮಾತ್ರವಲ್ಲ ಪ್ರಜೆಗಳಿಗೂ ಭಯಾನಕವಾಗಿ ಕಂಗೊಳಿಸಿತು. ಆದುದರಿಂದಲೇ ಕುದುರೆ ಕಾಲುಗಳಿಗೆ ಸಿಗಬೇಡಿರೆಂದು ಸೊಪ್ಪು ತರಕಾರಿ ಮಾರುವವರಿಗೆ ಹಣ್ಣು ಮಾರುವವರಿಗೂ ಸ್ಪಷ್ಟ ಸೂಚನೆಯನ್ನು ಕೊಡುವುದು ಆಶ್ಚರ್ಯಕರವಾಗಿದೆ. ಮಾತ್ರವಲ್ಲ, ಕಸ್ತೂರಿ ರಂಗಪ್ಪನಾಯಕನ ದುರಂತ ಸೋಲಿಗೂ ಇದೇ ಪ್ರಕರಣ ಕಾರಣವಾಗಿರಬಹುದೆಂಬ ಒಳಸುಳಿವು, ಇದಕ್ಕೆ ಶತ್ರುಗಳ ಕರಾಮತ್ತು ಕಾರಣವಾಗಿರಬಹುದೆಂಬ ನಂಬಿಕೆಯೂ ಜನಪದರ ಭಾವಪುಟದಲ್ಲಿ ಇಂದಿಗೂ ಪ್ರಕಟವಾಗುತ್ತದೆ. ಅಂತೂ ಸಿರ್ಾದ ರಂಗಪ್ಪನಾಯಕನಿಗೆ ದುರಂತ ಮರಣ ಬಂದೊದಗಿತು. ಅದು ಶತ್ರುಗಳ ಕುತಂತ್ರ, ತಮ್ಮವರ ವಂಚಕತನ ಎಂಬುದನ್ನು ವಿವರಿಸುವ ಜನಪದರು ರಂಗಪ್ಪನಾಯಕನ ಅಂತ್ಯದ ಸ್ಥಿತಿಯನ್ನು ಹೀಗೆ ಕಟ್ಟಿಕೊಡುತ್ತಾರೆ.

ಆಚೆ ಕೊತ್ತಲ ಬಿದ್ದು ಈಚೆ ಕೊತ್ತಲ ಬಿದ್ದು
ಜಂಗಿಸಿ ಹೋದಾನ ತಲೆಬಿದ್ದು ರಂಗಣ್ಣನ
ಅಂಗಿ ಬಿದ್ದಾವೆ ರಣದಾಗೆ

ಇದು ರಂಗಪ್ಪನಾಯಕನ ವೀರ ಹೋರಾಟ, ಹತನಾದ ಬಗೆಯನ್ನು ಅಂಗಿ ಬಿದ್ದಾವೆ ರಣದಾಗೆ ಎಂಬ ಒಂದು ಶಬ್ದ ಶಕ್ತವಾಗಿ ಹಿಡಿದುಕೊಟ್ಟರೆ ಮತ್ತೊಂದು ಮಾತು

ನೇರವಾಗಿಯೇ ರಂಗಣ್ಣನ ಸಾವನ್ನು ಪ್ರಸ್ತಾಪಿಸುತ್ತದೆ. ಇದು ಮತ್ತೂ ಮುಂದುವರಿದು

ಹಿಂದಲ ಕೊತ್ತಲ ಬಿದ್ದು । ಮುಂದಲ ಕೊತ್ತಲ ಬಿದ್ದು
ದಾಟಿ ಹೋದಾನ ತಲೆ ಬಿದ್ದು । ರಂಗಣ್ಣನ
ಬಾಕು ಬಿದ್ದಾವೆ ರಣದಾಗೆ

ಈ ಪದ್ಯ ಕಸ್ತೂರಿ ರಂಗಪ್ಪನಾಯಕ ಸುಲಭವಾಗಿ ಸೋತಿಲ್ಲ, ಶತ್ರುಗಳ ಪಡೆ ಕೋಟೆಯ ಎಲ್ಲ ದಿಕ್ಕುಗಳಿಂದಲೂ ಮುತ್ತಿದೆ. ಬಲವಾದ ಸೇವಾಪಡೆಯೂ ಆಗಿದ್ದು ಕೋಟೆಯ ಮುಂಭಾಗ-ಹಿಂಭಾಗವೆಲ್ಲವನ್ನೂ ನಾಶ ಮಾಡಿದ ಬಗೆಯನ್ನು ಹೇಳುತ್ತದೆ. ಅಂಥ ರಣಭಯಂಕರ ಸಂದರ್ಭವನ್ನು ರಂಗಣ್ಣ ಏಕಾಂಗಿಯಾಗಿಯೇ ಎದುರಿಸಿದ ಪರಿ, ಆತನು ಹೆದರದೆ ಶತ್ರುಗಳಿಗೆ ಮುಖಾಮುಖಿಯಾಗಿ ವೀರಮರಣ ಹೊಂದಿದ ಪರಿಸ್ಥಿತಿಯನ್ನು ಜನಪದರು ಸೊಗಸಾಗಿ ನಿರೂಪಿಸುತ್ತಾರೆ. ಒಂದು ಪದ್ಯ ರಂಗಣ್ಣನ ಉಡುಗೆ ತೊಡುಗೆಗಳು ಚೂರು ಚೂರಾಗಿ ಬಿದ್ದ ಬಗೆಯನ್ನು ಚಿತ್ರಿಸಿದರೆ ಮತ್ತೊಂದು ಆಯುಧಗಳು ಕೆಳಗುರುಳಿದ ಅಂದರೆ ಬಾಕು ಬಿದ್ದಾವೆ ರಣದಾಗೆ ಎನ್ನುತ್ತದೆ.



**ಕೋಟೆ ಕುರಿತು ಪದ ಹಾಡುವ ಮೋರುಬಾಗಿಲು ಸೋಬಾನೆ ಈರಣ್ಣ**

ಗೀತೆಗಳು : ಬಂಡಿ ಬಂದಾವೆ ಬಾಳೆ ವನದಾಗೆ - ಡಾ. ಚಿಕ್ಕಣ್ಣ ಯಣ್ಣೆಕಟ್ಟೆ

ಕಸ್ತೂರಿ ರಂಗಪ್ಪನಾಯಕನು ಯುದ್ಧಕ್ಕೆ ಹೊರಟಾಗ ತಡೆದ ತಾಯಿ ತಿಮ್ಮಾಜಮ್ಮ, ಹೆಂಡತಿ ನರಸೋಜಮ್ಮ, ಅಕ್ಕ ಕೃಷ್ಣಮ್ಮ, ತಂಗಿ ರಂಗೋಜಮ್ಮ ಇವರ ಚಿತ್ರ ಜನಪದ ಗೀತೆಗಳಲ್ಲಿ ಪ್ರಕಟವಾಗುತ್ತದೆ. ಇವರೆಲ್ಲರೂ ರಂಗಪ್ಪನಾಯಕನ ಬಗೆಗೆ ತೋರಿರುವ ಕಾಳಜಿ, ಪ್ರೀತಿ ಎದ್ದುಕಾಣುತ್ತದೆ.

ಕ್ರಿ.ಶ.1637 ರಲ್ಲಿ ಬಿಜಾಪುರ ಸುಲ್ತಾನ ಅಫ್‌ಜಲ್ ಖಾನ್ ಬಲವಾದ ಆಕ್ರಮಣ ಮಾಡುತ್ತಾನೆ. ಈತನಿಗೆ ಸಹಕರಿಸಿದ ತರೀಕೆರೆಯ ಪಾಳೆಯಗಾರರು, ಚಿತ್ರದುರ್ಗದ ಪಾಳೆಯಗಾರರು ಅಲ್ಪತೃಪ್ತಿಯಿಂದ ಬೀಗಿದರೂ ಪಾಳೆಯಗಾರರ ಅವನತಿಗೆ ಇದೇ ಪಾಳೆಯಗಾರರು ದಾಳ ರೂಪಿಸಿದ್ದು ಇತಿಹಾಸದ ದುರಂತ. ಕಸ್ತೂರಿ ರಂಗಪ್ಪನಾಯಕನ ಮರಣಾನಂತರ ಸಿರಾ ಸಂಪೂರ್ಣವಾಗಿ ಬಿಜಾಪುರ ಸುಲ್ತಾನರ ವಶವಾಯಿತು. ಸಿರಾವನ್ನು ಸಮರ್ಥವಾಗಿ ಆಳಿದ, ಕೋಟೆ ಕಟ್ಟಿದ ಕಸ್ತೂರಿ ರಂಗಪ್ಪ ನಾಯಕನ ಧೀರೋದ್ದಾತ್ತ ಬದುಕನ್ನು ಮೌಖಿಕ ಪರಂಪರೆ ಕೊಂಡಾಡುತ್ತಾ, ಜನಪದ ಇತಿಹಾಸ ಸೃಷ್ಟಿಸಿರುವುದು ಈ ಕೋಟೆಯ ವಿಶೇಷ.

# ಅಧ್ಯಾಯ – ಹತ್ತು
# ಅನುಬಂಧ

## ಅನುಬಂಧ-1 : ಸಿರಾ ಸೀಮೆಯ ಗಾದೆಗಳು:

* ಹಸಿದವರ ಮಧ್ಯೆ ಅನ್ನ ತಂದಂಗೆ
* ಸೊಸೆ ಸತ್ತರೆ ಸೋಬಾನ, ಮಗ ಸತ್ತರೆ ಮನೆ ಅಳು
* ಹಂಗೇ ಕುಣಿಯೋ ಮಾರಮ್ಮಗೆ ಹರೆ ಬಡಿದರೆ ನಿಂತಾಳ
* ಅವರವರೇ ಚಂದ ಅವರ ಗೊನೆಯೇ ಚಂದ
* ಗಂಗಳ ಹೋದುದಕ್ಕೆ ಚೆಂಬು ಕೊಟ್ಟು ಕಣಿ ಕೇಳಿದಂಗೆ
* ಕೆಂಪು ಡೊಂಕು ಕಪ್ಪು ಕಸ್ತೂರಿ
* ಹೊಲಸಿಗಾಡಿ ಕೆಲಸಗೇಡು
* ಕೊಕ್ಕರೆಗೆ ಒಂದು ಕೆರೆಯಲ್ಲ, ದಾಸಯ್ಯನಿಗೆ ಒಂದು ಊರಲ್ಲ
* ಕುರುಬ ಕೆಟ್ಟು ಕುಂಚಿಟಿಗನಾದ
* ಅಲಲ ಎಂಬ ಅರಳಿ ನಂಬಿದರೂ ಮಳ್ಳಿ ಅಂತ ಕಳ್ಳಿ ನಂಬಬಾರ್ದು
* ಎಳೆಬಿಸಿಲು ಕಾಯಿಸಬೇಡ, ಹರೇದುಡುಗಿ ಕೆಣಕಬೇಡ
* ಹೆಣ್ಣು ಹೆಚ್ಚಿದ ಮನೆ ಹಾಳು, ಏಡಿ ಹೆಚ್ಚಿದ ಕೆರೆ ಹಾಳು
* ಕಳ್ಳನ ಮನಸ್ಸು ಹುಳ್ಳುಹುಳ್ಳಗೆ
* ಬಾಳಲಾರದವರು ಬಾವಿಗೆ ಬಿದ್ದರೆ ಆಳಿಗೊಂದು ಕಲ್ಲು
* ಮಗು ಮುದ್ದೆ ತಿಂತು, ಕರು ಹೊರೆ ತಿಂತು
* ಕುಂಟನಿಗೆ ಒಂದು ಚೇಷ್ಟೆ, ಕುರುಡನಿಗೆ ನಾನಾ ಚೇಷ್ಟೆ
* ಅಯ್ಯೋ ಅಂದರೆ ಆರು ತಿಂಗಳು ಪಾಪ
* ಹಾವು ಕಚ್ಚಿದರೆ ಒಬ್ಬರು ಸತ್ತರೆ, ಹಾರುವ ಕಚ್ಚಿದರೆ ಮನೆ ಮಕ್ಕಳೆಲ್ಲ ಸಾವು
* ಅನ್ನ ಹಾಕೋ ಮನೆ ಕೆಡೋಲ್ಲ, ಗೊಬ್ಬರ ಹಾಕಿದ ಹೊಲ ಕೆಡೋಲ್ಲ
* ಹಸ್ತ ಚಿತ್ತೆ ಎರಡೂ ಹುಯ್ದರೆ ನಮ್ಮತ್ತೆ ಸಮಕೆ ನಾನೂ ಬೆಳೆದೇನು
* ಭರಣಿ ಮಳೆ ಆದ್ರೆ ಧರಣೆಲ್ಲ ಫಲ
* ಕುದ್ದವನಿಗೆ ಕೂಳಿಲ್ಲ, ಕೊಟ್ಟವನಿಗೆ ಕೇಡಿಲ್ಲ
* ತಾನೆಂಗಸಾಗಿ ರಾಗಿ ರೊಟ್ಟಿ ಬಯಸಿದಂಗೆ
* ಕಿವಿ ಕಿತ್ತರೂ ಕಿರಿಮಗ ಪ್ರೀತಿ

* ಕೂಡಿದವಳಿಗೆ ಕ್ವಾಣ ಮುದ್ದು, ಹೆತ್ತವಳಿಗೆ ಹೆಗ್ಗಣ ಮುದ್ದು
* ಆಸೆಕಂತೆ ದಾಸಪ್ಪ ಉದರಿದಷ್ಟೆ ಗೋವಿಂದ
* ಎರಡು ಕಣ ಕಾದು ದಾಸಪ್ಪ ಕೆಟ್ಟ
* ಕಾಲ ಕೆಟ್ಟು ಕಾಗೆ ರಾಗಿ ತಿಂತು
* ಸೊಸಲಾಡಿ ಗಿರಿಲಿಗೆ ತಂತು ಸಂಚಕಾರ
* ಅಂಬಲಿ ಕುಡಿಯೋನಿಗೆ ಮೀಸೆ ತಿರುವಾಕೆ ಒಬ್ಬ
* ಏಡಿಯಂಥ ಸಾರಿಲ್ಲ, ಬುಗುಡಿ ಅಂಥ ಒಡವೆ ಇಲ್ಲ
* ನೆರೆ ಆಡಿದಂಗೆ ಆಡೆ ಸಲೆ ಹಾದರಗಿತ್ತಿ

## ಅನುಬಂಧ-2 :
## ಒಗಟುಗಳು

* ಗೋಡೆ ಗುದ್ದಣ್ಣ - ತಿಗಣೆ
* ವಲ್ಲಿ ಹೊದಿಯಣ್ಣ - ಕೂರೆ
* ಕುವಾಲಿ ಮಲ್ಲಣ್ಣ - ಹೇನು
* ಆಕಾಶದಾಗೆ ಹಾರೋ ಗಿಣಿ ಉಂಬಾಕೋಗಾನ ಬಾರೋ ಗಿಣಿ - ಬಾಳೆ ಎಲೆ
* ಹೋಗ್ತಾ ಬಾಣಂತಿ ಬರ್ತಾ ಬಸಿರಿ - ಬಿಂದಿಗೆ
* ತುಂಬಿದ ಕೆರೆಯಾಗಿ ನಿಂಬೆಹಣ್ಣು ತೇಲುತ್ತೆ - ಮಜ್ಜಿಗೆ ಬೆಣ್ಣೆ
* ಅಕ್ಕನ ಸಿಂತಾಕ ಇಕ್ಕಾಕೆ ಬರುತ್ತೆ, ತೆಗೆಯಾಕೆ ಬರೋಲ್ಲ - ಅರಿಶಿನ ಕುಂಕುಮ
* ಒಂಟಿಕಾಲು ಕೊಕ್ಕರೆ ಒಂಬೈನೂರು ಮಟ್ಟೆ - ಅಡಿಕೆ ಮರ
* ಸುತ್ತಲೂ ಸುಣ್ಣದ ಗೋಡೆ ಎತ್ತ ನೋಡಿದರೂ ಬಾಗಿಲಿಲ್ಲ - ಮೊಟ್ಟೆ
* ಕತ್ತಲು ಮನೆಯಾಗೆ ಕತ್ತಿ ಬೀಸುತ್ತೆ - ದನದ ಬಾಲ
* ಉದ್ದದ ಆಳಿಗೆ ನೆರಳಿಲ್ಲ - ದಾರಿ
* ಒಂದು ಗುಂಡೆಗೆ ಒಂಬತ್ತು ಕೊರವ - ಮುದ್ದೆ
* ಚೋಟುದ್ದ ಹುಡುಗನಿಗೆ ಮೋಟುದ್ದ ಕುಲಾವಿ - ಜೋಳದ ಅವಲು
* ಚೋಟುದ್ದ ಹುಡುಗ ಪೇಟ ಸುತ್ತೈತೆ - ಬೆಂಕಿಕಡ್ಡಿ
* ಮನೆಗೊಂದು ನೆಲಸಿಕ್ಕೋ ದೇವರು - ಪೊರಕೆ
* ಉಂಡ ಎದ್ದ ನಿಂತಿದ್ದೋಳನ್ನ ಕೆಡವಿಕೊಂಡ - ಚಾಪೆ
* ಹಗ್ಗ ಹಾಸೈತೆ ಕೋಣ ಮಲಗೈತೆ - ಕುಂಬಳಕಾಯಿ
* ಕಪ್ಪಗಿದೆ ಕಾಗೆ ಅಲ್ಲ, ತಲೆ ದಪ್ಪ ಆನೆಯಲ್ಲ, ನಡು ಸಣ್ಣ ಸಿಂಹವಲ್ಲ, ಮರ ಹತ್ತಿ ಇಳಿಯುತ್ತೆ ಮಂಗವಲ್ಲ - ಗೊದ್ದ
* ಗುಂಪಿನ ಗಿಡದಾಗೆ ಕೆಂಪಣ್ಣ ಕುಂತವನೆ - ಮೆಣಸಿನಹಣ್ಣು
* ಹೊಟ್ಟೆ ಮೇಲೊಂದು ಹೊಟ್ಟೆ - ರಾಗಿ ಕಲ್ಲು
* ಅಳೋದು ಕರ್ರಾದು ಅರ್ಧಂಬರ್ಧ ಹೋದಾಗ, ನಗೋದು ನಲಿಯಾದು ಪೂರ್ತಿ ಹೋದಾಗ - ಬಳೆ ತೊಡಿಸುವುದು
* ತಾಯಿ ತರ್‌ಕಿ, ಮಗಳು ಬೋಡಿ, ಮೊಮ್ಮಗಳು ಕಮಗಡಲೆ - ಹಲಸಿನ ಹಣ್ಣು
* ಬಚ್ಚಲು ಮನೆಯಾಗೆ ಕೋಣನ ಕೊಯ್ಯುತ್ತಾರೆ - ಹಲಸಿನಹಣ್ಣು ಬಿಡಿಸುವುದು

## ಅನುಬಂಧ - 3 :

## ನಂಬಿಕೆಗಳು

* ಮೋಡ ಕಟ್ಟಿದರೆ ಮಳೆ ಬರುತ್ತೆ
* ಪಯಣಕ್ಕೆ ಹೊರಟಾಗ ನರಿ ನೋಡಿದರೆ ಒಳ್ಳೆಯದಾಗುತ್ತೆ
* ಭಾನುವಾರ ಮೂಡುಗಡೆ ಪ್ರಯಾಣ ಒಳ್ಳೆಯದಲ್ಲ
* ಸೋಮವಾರ ಮಾಂಸದ ಊಟ ಶ್ರೇಯಸ್ಕರವಲ್ಲ
* ಹಂದಿ ಮಾಂಸ ಮನೆಯ ಒಳಗಡೆ ಬೇಯಿಸಬಾರದು
* ಹೊನ್ನಾರು ಹೂಡದೆ ಹೊಲ ಉಳುವಂತಿಲ್ಲ
* ಕನಸಿನಲ್ಲಿ ವಿಧವೆಯ ಕಂಡರೆ ಮಾರಮ್ಮ ಎಂಬ ನಂಬಿಕೆ
* ಕುರಿಗಳು ಮೇಯದೆ ನಿಂತಿದ್ದರೆ ಮಳೆ ಬರುವ ಸೂಚನೆ
* ನಾಯಿ ಮನುಷ್ಯರ ಹತ್ತಿರ ಬಂದು ಮೂಸಿ ಮೈ ಕೊಡವಿದರೆ ಶುಭವಾಗುತ್ತೆ
* ಶುಭ ಕಾರ್ಯಕ್ಕೆ ಹೊರಟಾಗ ಬಳೆ ಮಲ್ಲಾರ ಬಂದರೆ ಒಳ್ಳೆಯದು
* ಕನಸಿನಲ್ಲಿ ಜೇನು, ಹೆಂಡದ ಗಡಿಗೆ ಕಂಡರೆ ಮಳೆ ಬರುತ್ತೆ
* ಶವ ಎದುರಿಗೆ ಬಂದರೆ ದೇವರ ದರ್ಶನ ಎಂಬ ನಂಬಿಕೆ
* ಗುದ್ದಲಿ, ಸೌದೆ ಹೊರೆ, ವಿಧವೆ, ಕತ್ತೆ, ಬೆಕ್ಕು ಎದುರಿಗೆ ಬರಬಾರದು
* ನರಿ, ಪಕ್ಷಿ ಕೂಗು ಕೇಳಿಸಿಕೊಂಡು ಹೊರಟರೆ ಕಾರ್ಯ ಶುಭವಾಗುತ್ತದೆ
* ಮೂರು ಜನ ಒಟ್ಟಿಗೆ ಶುಭಕಾರ್ಯಕ್ಕೆ ಹೋಗಬಾರದು

## ಅನುಬಂಧ - 4

## ಜನಪದ ಬೈಗುಳಗಳು:

* ನಿಮ್ಮಮ್ಮನಾಡ
* ಮೆಟ್ಟಿನಾಗೆ ಹೊಡೀತೀನಿ
* ಪೋಕರಿ
* ಪರದೇಶಿ
* ಹಲಾಲಕೋರ
* ಹಲಕ
* ಲೌಡಿ
* ದಗಡಿ
* ರೆಂಡೆ
* ಮುಂಡೆ
* ಕತ್ತೆಮುಂಡೆ
* ತಾಟಗಿತ್ತಿ
* ತಿಕಾರಕ
* ಬೋಸುಡಿಕೆ
* ದೆಂಗಲಾಡಿ
* ಕೊರಮ
* ನೀಚ
* ಸವತಿ
* ಮಿಂಡರಗಾಳೆ
* ಓಡೋದವಳೆ
* ಕಿತ್ತಾಕಿದವಳೆ
* ಮೂರೂ ಬಿಟ್ಟವಳೆ
* ಮಳ್‌ಮುಂಡೆ
* ದರವೇಶಿ
* ದನ ಕಾಯೋನು
* ಮುಂಗಸಿ ಅಂತೋನು
* ಮಿಂಡರಿಗೆ ಹುಟ್ಟಿದ ನನ್ನ ಮಗ
* ಮಾದಿಗುಟ್ಟಿದವನು
* ನಿಮ್ಮಕ್ಕನಾಡ
* ನಿಮ್ಮನ ಅಡಿಯ
* ಇಸಪಾತಕ
* ಜೀನ
* ಕಿರುಪಾತಕ
* ಕೊಳಕ
* ತರಲೆ
* ಅಪಾಪೋಲಿ
* ಅನ್ಯಾಯಕಾರ
* ಪರಪಂಚಕಾರ
* ಬಿನ್ನಾಣಗಾರ
* ಬೇಕೂಫ
* ಬೇವರ್ಸಿ
* ಹಿಟ್ಟಿನಯ್ಯ
* ಹೆಸರಿನಯ್ಯ
* ಕೈಲಾಗದ ನನ್ಮಗ
* ಹೇತಲಾಡಿ ನನ್ಮಗ
* ಸೋಗಲಾಡಿ ನನ್ಮಗ
* ಬಿಕನಾಸಿ ನನ್ಮಗ
* ಹಲ್ಲು ಮುರೀತೀನಿ
* ಎಂಕೆ ಮುರೀತೀನಿ
* ನಿನ್ನ ದವಲತ್ತು ದಪ್ಪನೆ ಬಿದ್ದೋಗ

* ಹೋದದಾರೆಗೆ ಹಿಂದಿರುಗದ ಹಾಗೆ ಹೋಗ
* ನಿನ್ನ ಮನೆ ಹಾಳಾಗೋಗ
* ನಿನ್ನ ವಂಶ ನಾಶವಾಗ
* ನಿನ್ನ ನೀರು ನೆರಳಿಲ್ಲದ ತವ ತಲೆಹೊಯ್ಯು
* ನಿನ್ನ ಮನೆಗೆ ಕೆಂದನ ಕೂಡ
* ನಿನ್ನ ಕೈ ಬಿದ್ದೋಗ
* ನಿನ್ನ ಬಾಯಾಗೆ ಮಣ್ಣಾಕ
* ನಿನ್ನ ಸುಳಿ ನಾಶವಾಗ
* ನಿನ್ನ ನಾಲಾರ ಮೇಲೆ ಕಾಲು ಹಾಕಿಕೊಂಡೋಗ
* ನಿನ್ನ ಅನ್ಯಾಯ ಆಳಾಗ
* ನಿನ್ನ ಹೊಟ್ಟೆ ಒಡೆದುಹೋಗ
* ನೀನು ಏನೂ ಕಾಣದಂಗೆ ಹೋಗ
* ನಿನ್ನ ಕೈಗೆ ಕರೆನಾಗರಹಾವು ಕಡಿಯ
* ನಿನ್ನ ನಾಲಿಗೆ ಹುಳಬೀಳ
* ನಿನ್ನ ನಾಲಿಗೆ ಸೇದಿಹೋಗ
* ನಿನ್ನ ನೆಲಪಟ್ಟು ಬಡಿದುಹೋಗ
* ನಿನ್ನ ಕೈ ಕ್ವಾಷ್ಮತ್ತ
* ನೀನು ನೆಗೆದು ಬಿದ್ದು ಸಾಯ
* ನೀನು ನೆಗೆದು ಬಿದ್ದು ನೆಲ್ಲಿಕಾಯಾಗ
* ನಿನಗೆ ಬರಬಾರದು ಬಂದೋಗ
* ಊರಿಗೆ ಹುಗ್ಗ ಹಾಕೋ ಮುಂಡೆ
* ಗತಿ ಕೆಟ್ಟ ನನ್ಮಗ
* ನಾಮರ್ದ ನನ್ಮಗ

# ಅನುಬಂಧ - 5

## ಸಿರಾ ಸೀಮೆಯ ವಿಶಿಷ್ಟ ಶಬ್ದಕೋಶ

| | | |
|---|---|---|
| * | ಜಂಗಲ್ಲ | ಎಟುಕುವುದಿಲ್ಲ |
| * | ಗಬ್ಬಾಗಿದೆ | ಪ್ರಾಣಿಗಳು ಮರಿ ಹಾಕುವ ಹಂತ |
| * | ಪುರುಸೊತ್ತಿಲ್ಲ | ಬಿಡುವಿಲ್ಲ |
| * | ಅದೆ | ಇದೆ |
| * | ಸಣ್ಣಪ್ಪಯ್ಯ | ಚಿಕ್ಕಪ್ಪ |
| * | ದೊಡ್ಡಪ್ಪಯ್ಯ | ದೊಡ್ಡಪ್ಪ |
| * | ಸಣ್ಣಮ್ಮಯ್ಯ | ಚಿಕ್ಕಮ್ಮ |
| * | ಮಡಿಕೆ | ನೇಗಿಲು |
| * | ಬೇಸಾಯ ಹೂಡು | ನೇಗಿಲು ಹೂಡುವುದು |
| * | ತಣಿಗೆ | ಊಟದ ತಟ್ಟೆ |
| * | ಪರಮ | ಮರಿ ಹಾಕದೇ ಇರುವ ಕುರಿ |
| * | ಬಿಮ್ಮನ್ಸಿ | ಬಸುರಿ ಹೆಂಗಸು |
| * | ಕದರಾಕು | ಮನೆ ಮುಂದೆ ಸಾರಿಸುವುದು |
| * | ಇಡೀ ಗುಂಡಿ | ಕೆರೆಯ ನೀರು ಕಡಿಮೆಯಾದಾಗ ಮೀನು ಹಿಡಿಯಲು ತೋಡುವ ಗುಂಡಿ |
| * | ಕೋರು | ಎರಡು ಭಾಗ |
| * | ಸರಿಪಾಲು | ಎರಡು ಭಾರ (ಪ್ರಾಣಿಗಳನ್ನು ಬೇರೆಯವರಿಗೆ ಕೊಟ್ಟು ಹುಟ್ಟಿದ ಮರಿಗಳನ್ನು ಹರಿಸಿಕೊಳ್ಳುವುದು) |
| * | ಕಂದು ಹಾಕುವುದು | ಪ್ರಾಣಿಗಳು ಸತ್ತ ಕರು ಹಾಕುವುದು |
| * | ಮೈ ಇಳಿಯುವುದು | ಹೆಂಗಸರು ಹೆರಿಗೆ ಅವಧಿಗೆ ಮುನ್ನ ಸತ್ತ ಮಗು ಹೆರುವುದು |
| * | ಮೈನೀರು | ಉಚ್ಚೆ |
| * | ಹಿಡಿಗಲು | ಪೊರಕೆ |
| * | ಬೆನವ | ಪೊಳ್ಳೆರಾಯ ಸಗಣಿ ಹುಡಗೆ ಕರಿಕೆ ಕುಡಿ ಸಿಕ್ಕಿಸುವುದು |
| * | ಸಾಗಹಾಕು | ಕಳಿಸಿ ಕೊಡುವುದು |
| * | ಸೂತುವಾಗುವುದು | ಹೆಂಗಸರು ಮುಟ್ಟಾಗಿ ಹೊರಗೆ ಇರುವುದು |

* ಮರಿಮಾಡುವುದು ಹೊಲಕ್ಕೆ ಮರಿ ಬಲಿಕೊಡುವುದು
* ಹಳಸುವುದು ಆಹಾರ ಪದಾರ್ಥ ಕೆಟ್ಟಿರುವುದು
* ಎಸರು ಸಾರು ಮುದ್ದೆಗೆ ನೀರು ಇಡುವುದು
* ಮನೆವಾಳ್ತನ ಮನೆಯ ಅಳಿಯ ಮಾವನ ಮನೆಯಲ್ಲಿಯೇ ಇರುವುದು
* ಕೋಲುಕಾರ ಕುಲದ ಸಮಾಚಾರ ತಿಳಿಸುವವನು
* ಕುಳವಾಡಿ ಬೇಸಾಯ ಮಾಡುವವನು (ರೈತ)
* ಸದರ ಹೀನಾಯವಾಗಿ ಕಾಣುವುದು
* ಹಿಡಿಹುಲ್ಲು ಬಡಿಯುವುದು - ಭತ್ತವನ್ನು ಹುಲ್ಲಿನಿಂದ ಬೇರೆ ಮಾಡುವುದು
* ಗೊಡ್ಡು ಮಕ್ಕಳಾಗದವರು, ಬಂಜೆತನ
* ಪಿಳ್ಳೆ ಹೆಣ್ಣುಮಕ್ಕಳಿಗೆ ಕರೆಯುವ ಹೆಸರು
* ತಾವಲಿಲ್ಲ ಅವಕಾಶವಾಗಲಿಲ್ಲ
* ಚೆಂಬು ಕಡೆ ಹೋಗುವುದು - ಕಕ್ಕಸ್ಸಿಗೆ ಹೋಗುವುದು
* ಉಂಬಾದು ತಿನ್ನುವುದು
* ಅಜ್ಜ ಪ್ರೀತಿಯಿಂದ ಹುಡುಗರನ್ನು ಕರೆಯುವುದು
* ಅಮ್ಮಣ್ಣಿ ಹೆಣ್ಣುಮಗಳಿಗೆ ಕರೆಯುವ ಹೆಸರು (ತಂಗಿ)
* ಬರಗಾಲ ಮಳೆ ಬಾರದೇ ಇರುವುದು
* ದವಸ ಕಾಳುಗಳು
* ಪರ ಅನ್ನ ಸಂತರ್ಪಣೆ
* ಗೊಟ್ಟು ಬರಗಾಲ
* ರೋಣಗಲ್ಲು ರಾಗಿಯನ್ನು ಕಾಳಿನಿಂದ ಬೇರ್ಪಡಿಸುವ ಸಾಧನ
* ಇಬ್ಬಳಿಗೆ ದವಸ ಅಳೆಯುವ ಕಬ್ಬಿಣದ ಪಾತ್ರೆ
* ಬದಲಿ ಇನ್ನೊಂದು
* ಹೆಚ್ಚಲಿ ಜಾಸ್ತಿ
* ವೈನಾಗಿ ಚೆನ್ನಾಗಿ

## ಅನುಬಂಧ - 6
## ಮಾಹಿತಿ ನೀಡಿದವರು

ಶ್ರೀಮತಿ ಪುಟ್ಟರಂಗಮ್ಮ, ನಾಯಕರಹಳ್ಳಿ, ಸಿರಾ

ಶ್ರೀ ದೇವಣ್ಣ, ರತ್ನಸಂದ್ರ

ಶ್ರೀ ಪಾತಲಿಂಗಪ್ಪ, ದ್ವಾರನಕುಂಟೆ

ಶ್ರೀ ಏಳುಕೋಟಪ್ಪ, ದ್ವಾರನಕುಂಟೆ

ಶ್ರೀ ಬಿ.ಕೆ. ಬಡೀರಣ್ಣ, ವಿಭೂತಿ ತಿಮ್ಮಣ್ಣ, ಬೇವಿನಹಳ್ಳಿ

ಶ್ರೀ ಲಕ್ಕೋನಹಳ್ಳಿ ಗೊಲ್ಲರಹಟ್ಟಿ ನಿಂಗಣ್ಣ

ಶ್ರೀ ಮೊ.ದಾ. ಹಳ್ಳಿ ದಾಸಣ್ಣ

ಶ್ರೀ ಯ|| ಚೌಡಪ್ಪ, ಕಾಳಿದಾಸನಗರ, ಸಿರಾ

ಶ್ರೀ ಸಿರಾ ಎಲ್.ರಂಗನಾಥ್, ಕೆರೆಹಿಂದಲಹಟ್ಟಿ, ಸಿರಾ

ಶ್ರೀ ಗೋವರ್ಧನಹಳ್ಳಿ ಮಂಜುನಾಥ್, ಸಿರಾ

ಶ್ರೀ ಗೊರವಯ್ಯ ನಿಂಗಪ್ಪ, ಕಾಳಿದಾಸನಗರ, ಸಿರಾ

ಶ್ರೀ ಎಸ್.ಕೆ. ಸಿದ್ದಣ್ಣ, ಕಾಳಿದಾಸನಗರ, ಸಿರಾ

ಶ್ರೀ ಕೆ.ಬೊಮ್ಮಲಿಂಗಯ್ಯ, ನಿವೃತ್ತ ಇಂಜಿನಿಯರ್, ಸಿರಾ

ಶ್ರೀ ತಳವಾರ ತಮ್ಮಣ್ಣ, ಮಣೆಗಾರ ಕದುರಪ್ಪ, ಕಳುವರಹಳ್ಳಿ

ಶ್ರೀ ಹನುಮಂತಪ್ಪ, ನಾಗಮ್ಮ ರಂಗನಾಥನಗರ, ಸಿರಾ

ಶ್ರೀ ಸೋಬಾನೆ ಈರಣ್ಣ, ಮೊರಬಾಗಿಲು, ಸಿರಾ

ಶ್ರೀ ಕಡವಿಗೆರೆ ಗಂಗಣ್ಣ, ಕೃಷ್ಣಮೂರ್ತಿ ಕಡವಿಗೆರೆ

ಶ್ರೀ ಲೋಕೇಶ್, ಲಕ್ಷ್ಮೀಪತಯ್ಯ, ಮಾಗೋಡು

ಶ್ರೀ ಚಿಕ್ಕೋಬನಾಯಕ, ದೊಡ್ಡಬಾಣಗೆರೆ

ಶ್ರೀ ಗಂಗಾಧರಾಚಾರ್, ಜ್ಯೋತಿನಗರ, ಸಿರಾ

# ಅನುಬಂಧ - 7
## ಆಕರ ಗ್ರಂಥಗಳು


1. ಕರ್ನಾಟಕ ಗೆಜೆಟಿಯರ್, ನಂ.9
2. ತುಮಕೂರು ಜಿಲ್ಲಾ ದರ್ಶನ, ದಿ|| ಸಿ.ಎನ್. ಭಾಸ್ಕರಪ್ಪ
3. ಸಿರಾ ಸೀಮೆ ಇತಿಹಾಸ ಮತ್ತು ಸಂಸ್ಕೃತಿ, ಡಾ. ಚಿಕ್ಕಣ್ಣ ಯಣ್ಣೆಕಟ್ಟೆ
4. ಚಿತ್ರದೇವರ ಕಾವ್ಯ, ಡಾ. ಚಿಕ್ಕಣ್ಣ ಯಣ್ಣೆಕಟ್ಟೆ
5. ತುಮಕೂರು ಜಿಲ್ಲೆ, ಜಾನಪದೀಯ ಅಧ್ಯಯನ, ಡಾ. ಚಿಕ್ಕಣ್ಣ ಯಣ್ಣೆಕಟ್ಟೆ
6. ಬಂಡಿ ಬಂದಾವು ಬಾಳೆ ವನದಾಗೆ, ಡಾ. ಚಿಕ್ಕಣ್ಣ ಯಣ್ಣೆಕಟ್ಟೆ
7. ಕಂಬದ ರಂಗನ ಕಾವ್ಯ, ಸಂ.ಡಾ. ಚಿಕ್ಕಣ್ಣ ಯಣ್ಣೆಕಟ್ಟೆ
8. ಸೀಬಿ ಕ್ಷೇತ್ರದರ್ಶನ, ಡಾ. ಚಿಕ್ಕಣ್ಣ ಯಣ್ಣೆಕಟ್ಟೆ
9. ತುಮಕೂರು ಜಿಲ್ಲಾ ಜಾತ್ರೆಗಳು, ಡಾ. ಚಿಕ್ಕಣ್ಣ ಯಣ್ಣೆಕಟ್ಟೆ

# ಅನಿಸಿಕೆ – ಅಭಿಪ್ರಾಯ

ತುಮಕೂರು ಜಿಲ್ಲೆ ಜಾನಪದೀಯ ಅಧ್ಯಯನ ಹಾಗೂ ಚಿತ್ರದೇವರ ಕಾವ್ಯ ಈ ಎರಡೂ ಕೃತಿಗಳ ಮೂಲಕ ತುಮಕೂರು ಜಿಲ್ಲಾ ಜಾನಪದ ಅಧ್ಯಯನಕ್ಕೆ ಮಾದರಿ ಆಕರ ಗ್ರಂಥಗಳನ್ನು ನೀಡಿರುವಿರಿ. ಒಂದು ಜಿಲ್ಲೆಯ ಜಾನಪದರ ಸಮಗ್ರ ದಿಕ್ಕು, ಮಾರ್ಗಗಳನ್ನು ನಿಮ್ಮಷ್ಟು ಚೆನ್ನಾಗಿ ಮಾಡಿರುವ ಕೃತಿ ನನ್ನ ಗಮನಕ್ಕೆ ಬಂದಿಲ್ಲ. ನೀವು ಇಷ್ಟು ಒಳ್ಳೆಯ ಕೆಲಸ ಮಾಡಿರುವುದು ನನಗೆ ಅಭಿಮಾನದ ಸಂಗತಿಯಾಗಿದೆ.

ಚಿತ್ರದೇವರ ಕಾವ್ಯ ಒಳ್ಳೆಯ ಕಾವ್ಯ. ನಿಂಗಜ್ಜ ಪ್ರತಿಭಾವಂತ ಹಾಡುಗಾರ ಎಂಬುದು ನಿಮ್ಮ ಕಾವ್ಯದಿಂದ ತಿಳಿಯಿತು. ಇದು ಬುಡಕಟ್ಟು ಅಧ್ಯಯನಕ್ಕೆ ದೊಡ್ಡ ಕೊಡುಗೆ. ಎತ್ತಪ್ಪನ ಕಾವ್ಯ ಸಂಪ್ರದಾಯದ ಅಧ್ಯಯನ ಮಾಡುವವರಿಗೆ ಇದರಿಂದ ಪ್ರಯೋಜನವಾಗುತ್ತದೆ. ನಿಮ್ಮೀ ಸಾರ್ಥಕ ಸಾಧನೆಗೆ ಅಭಿನಂದನೆಗಳು. ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನದನ್ನು ನಾನು ನಿರೀಕ್ಷಿಸುತ್ತಾ ಶುಭ ಹಾರೈಸುತ್ತೇನೆ. ಈ ಕಡೆ ಬಂದಾಗ ಮನೆಗೆ ಬನ್ನಿ.

**- ಪ್ರೊ|| ತೀ.ನಂ. ಶಂಕರನಾರಾಯಣ,**

ನಿರ್ದೇಶಕರು, ಕನ್ನಡ ಭಾರತಿ ಕುವೆಂಪು ವಿಶ್ವವಿದ್ಯಾಲಯ

ಚಿಕ್ಕಣ್ಣನಂಥ ಜನಪದ ಕ್ಷೇತ್ರದಲ್ಲಿ ಕ್ರಿಯಾಶೀಲರಾಗಿ ತೊಡಗಿರುವವರು ಅಪರೂಪ. ಒಂದೊಂದೇ ಭಾಗವನ್ನು ಆಯ್ದುಕೊಂಡು ಕೆಲಸ ಮಾಡುತ್ತಿರುವುದು ದಾಖಲಾರ್ಹ ಸಾಧನೆ. ಹಾಗಾಗಿಯೇ ಸಿರಾ ಸೀಮೆಯ ಜಾನಪದ ಚಿಕ್ಕಣ್ಣನಂಥವರಿಂದ ದಾಖಲಾರ್ಹ ಪ್ರಮಾಣದಲ್ಲಿ ಉಲ್ಲೇಖಗೊಳ್ಳುತ್ತಿದೆ. ಈ ಬಗೆಯ ಜನಪದ ಸಂಬಂಧಿ ನಿಷ್ಠೆ, ದುಡಿಮೆಯಲ್ಲಿ ತೊಡಗಿಸಿಕೊಂಡವರು ಕರ್ನಾಟಕದ ಇತ್ತೀಚಿನ ಜಾನಪದ ಕ್ಷೇತ್ರದಲ್ಲಿ ವಿರಳ ಉದಾಹರಣೆ. ಚಿಕ್ಕಣ್ಣನವರಿಂದ ಗಡಿನಾಡಿನ ಅಪೂರ್ವ ಕಾವ್ಯಸಂಗ್ರಹ, ಸಂಸ್ಕೃತಿ ಅಧ್ಯಯನ ಆಗಿದೆ. ಹೀಗಾಗಿ ಚಿಕ್ಕಣ್ಣ ಯಣ್ಣೆಕಟ್ಟೆ ನಮ್ಮಂಥ ಜಾನಪದಾಸಕ್ತರಿಗೆ ಮರೆಯಬಾರದ ವ್ಯಕ್ತಿಯಾಗಿದ್ದಾರೆ.

**- ಡಾ|| ಮೀರಾಸಾಬಿಹಳ್ಳಿ ಶಿವಣ್ಣ,**

ಹಿರಿಯ ಜಾನಪದ ವಿದ್ವಾಂಸರು, ಬೆಂಗಳೂರು

ತಮ್ಮ ಹುಟ್ಟು ಜಿಲ್ಲೆಯಾದ ತುಮಕೂರನ್ನು ಕೇಂದ್ರವಾಗಿಟ್ಟುಕೊಂಡು, ಅಲ್ಲಿಯ ಜಾನಪದದ ವಿವಿಧ ಮಗ್ಗುಲುಗಳನ್ನು ಪ್ರಾಮಾಣಿಕವಾಗಿ ವೀಕ್ಷಿಸುವ, ಸಂಗ್ರಹಿಸುವ,

ವಿವೇಚಿಸುವ ಮತ್ತು ನಿರೂಪಿಸುವ ಕಾರ್ಯವನ್ನು ತುಂಬು ನಿಷ್ಠೆಯಿಂದ ಮಾಡಿದ್ದಾರೆ. ತುಮಕೂರು ಜಿಲ್ಲೆಯ ಸಮಗ್ರ ಜಾನಪದವನ್ನು ಕಣ್ಣಳತೆಯಲ್ಲಿ ಹಿಡಿದಿಡುವ ಪ್ರಾಮಾಣಿಕ ಪ್ರಯತ್ನ ಇಲ್ಲಿನ ಪ್ರತಿಯೊಂದು ಅಧ್ಯಾಯಗಳಲ್ಲೂ ಎದ್ದು ಕಾಣುತ್ತದೆ. ಇವರ ಪರಿಶ್ರಮ ಸಾರ್ಥಕವಾಗಿದೆ. ಹಲವು ಸಂಶೋಧನೆಗೂ ಮಾರ್ಗಸೂಚಿಯಾಗಿರುವ ಈ ಗ್ರಂಥದ ಮೂಲಕ ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ ನಮ್ಮ ಜಾನಪದ ಲೋಕದ ಮುಖ್ಯ ಲೇಖಕರಲ್ಲಿ ಒಬ್ಬರಾಗಿ ಬಿಡುತ್ತಾರೆ.

**- ಡಾ॥ ಎಚ್.ಜೆ. ಲಕ್ಕಪ್ಪಗೌಡ**

ವಿಶ್ರಾಂತ ಕುಲಪತಿಗಳು, ಮೈಸೂರು

ತುಮಕೂರು ಜಿಲ್ಲೆಯ ಜಾನಪದ ಸಂಸ್ಕೃತಿಯನ್ನು ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಹೀಗಾಗಿ ತುಮಕೂರು ಜಿಲ್ಲೆಯ ಜಾನಪದ ಬದುಕಿನ ಒಂದು ನೀಲಿನಕ್ಷೆ ನೀಡಿದ್ದಾರೆ. ಯಾವುದೇ ಸದ್ದು ಗದ್ದಲವಿಲ್ಲದೆ ಉತ್ಸಾಹ, ಮುತುವರ್ಜಿಯಿಂದಲೇ ಇಂಥದೊಂದು ಉಪಯುಕ್ತ ಕೃತಿ ಕೊಟ್ಟಿದ್ದಾರೆ.

**- ಜಿ.ವಿ. ಆನಂದಮೂರ್ತಿ** (ಪ್ರಜಾವಾಣಿ)

ಸಿರಾ ಸೀಮೆ ಇತಿಹಾಸ ಮತ್ತು ಸಂಸ್ಕೃತಿ ಗ್ರಂಥ ಒಂದು ಪ್ರದೇಶದ ಕಲೆ, ಇತಿಹಾಸ, ಸಂಸ್ಕೃತಿಯನ್ನು ಹೇಗೆ ಗ್ರಹಿಸಬಹುದು. ಅಧ್ಯಯನದ ದಿಕ್ಕು, ಮಾರ್ಗಗಳನ್ನು ಅತ್ಯಂತ ಸೊಗಸಾಗಿ ನಿರೂಪಿಸಿರುವ ಗ್ರಂಥ. ಇದೊಂದು ಆಸಕ್ತಿಯ ಗ್ರಂಥವಾದರೂ ಯಾವ ಸಂಶೋಧನಾ ಪ್ರಬಂಧಕ್ಕೂ ಕಡಿಮೆ ಇಲ್ಲ. ಪ್ರಾದೇಶಿಕ ಅಧ್ಯಯನಕ್ಕೆ ಸದಾ ಮಾರ್ಗದರ್ಶಿಯಾಗುಳಿಯುತ್ತದೆ. ನನ್ನ ಹಲವು ಗೆಳೆಯರು ಪ್ರೀತಿಯಿಂದಲೇ ಇದೇ ಅಭಿಪ್ರಾಯ ವ್ಯಕ್ತಪಡಿಸಿದರು ಎಂದು ತಿಳಿಸಲು ಹೆಮ್ಮೆ ಪಡುತ್ತೇನೆ.

**- ಡಾ॥ ಅಂಕನಹಳ್ಳಿ ಪಾರ್ಥ,** ಪ್ರಾಧ್ಯಾಪಕ, ರಾಮನಗರ

ಡಾ॥ ಚಿಕ್ಕಣ್ಣನವರೆ, ತಮಗೆ ಕರ್ನಾಟಕ ಜಾನಪದ ಅಕಾಡೆಮಿಯ ಪುಸ್ತಕ ಬಹುಮಾನ ಸಂದಿರುವುದು ನಮಗೂ ಆನಂದವಾಗಿದೆ. ನೀವು ಜಾನಪದ ಅಕಾಡೆಮಿಯಿಂದ ಸಾಣೆಹಳ್ಳಿಯಲ್ಲಿ ಏರ್ಪಡಿಸಿದ್ದ ಎರಡು ದಿನಗಳ ಮೂಡಲಪಾಯ ಯಕ್ಷಗಾನ ಕಾರ್ಯಕ್ರಮ ಇಂದಿಗೂ ನಮ್ಮ ಮನದಲ್ಲಿದೆ. ಈ ಕಾರ್ಯಕ್ರಮ ನಮ್ಮ ಕ್ಷೇತ್ರದಲ್ಲಿ ನಡೆದರೂ, ಅದರ ಯಶಸ್ಸೆಲ್ಲವೂ ನಿಮಗೇ ಸಲ್ಲಬೇಕು. ಏಕೆಂದರೆ ನೀವೇ ಕಾರ್ಯಕರ್ತರಾಗಿ ಎಲ್ಲ ಕೆಲಸವನ್ನು

ಮಾಡಿದ್ದೀರಿ. ನಮ್ಮ ಜನಪ್ರತಿನಿಧಿಗಳೂ ಸೇರಿದಂತೆ ಎಲ್ಲ ಕಾರ್ಯಕರ್ತರು ನಿಮ್ಮಂತೆ ಸೇವಾ ಮನೋಭಾವ ಬೆಳೆಸಿಕೊಂಡರೆ, ಏನೆಲ್ಲ ಅದ್ಭುತ ಸಾಧಿಸಿ ತೋರಬಹುದು. ನಿಮ್ಮ ಬಹುಮಾನಿತ ಕೃತಿಯನ್ನು ಇತ್ತಕಡೆ ಬಂದಾಗ ತನ್ನಿ. ಅಭಿನಂದನೆಗಳು.

ಇತ್ಯಾಶಿಷಃ

**ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು,**

ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಾಣೇಹಳ್ಳಿ

ಡಾ|| ಚಿಕ್ಕಣ್ಣನವರೆ, ನೀವು ಚಿತ್ರದುರ್ಗ, ತುಮಕೂರು ಹಾಗೂ ದಾವಣಗೆರೆ ಜಿಲ್ಲೆಗಳ ಜನಪದ ಕಲಾವಿದರನ್ನು ಪರಿಚಯಿಸಿರುವ ಜನಪದ ಕಲಾವಿದರ, ಈ ಮೂರೂ ಪುಸ್ತಕಗಳನ್ನು ಓದಿದೆ. ಜಿಲ್ಲೆ ಕೆಲವೊಮ್ಮೆ ಮರೆತಿದ್ದ ಕರ್ನಾಟಕ ಜಾನಪದ ಲೋಕದ ಕಲಾವಿದರನ್ನು ತುಂಬು ಮುತುವರ್ಜಿಯಿಂದ ಪರಿಚಯಿಸಿದ್ದೀರಿ. ಪ್ರವಾಸಕ್ಕೆ ಹೋದ ಸಂದರ್ಭದಲ್ಲೂ ಈ ಕಲಾವಿದರ ಪರಿಚಯ ಮಾಡಿಕೊಳ್ಳಬೇಕೆನಿಸುತ್ತದೆ. ಇದರಲ್ಲಿ ಕೆಲವರು ದಿವಂಗತರಾದರೂ ಅವರ ಕಲಾಪರಂಪರೆ ತುಂಬಾ ಚೆನ್ನಾಗಿ ಪ್ರಕಟವಾಗಿದೆ. ಒಳ್ಳೆಯ ಕೆಲಸ ಮಾಡಿದ್ದೀರಿ. ಕಲಾ ಲೋಕ ಎಂದಿಗೂ ನಿಮ್ಮನ್ನು ಸ್ಮರಿಸುತ್ತದೆ. ತಮ್ಮ ಅಮೂಲ್ಯ ಗ್ರಂಥಗಳು ಶ್ರೀಮಠದ ಭಂಡಾರದಲ್ಲಿರಲಿ. ಉಳಿದ ಪುಸ್ತಕಗಳನ್ನು ನೀಡಿದರೆ ಒಳ್ಳೆಯದು.

ಶುಭಾಶಯಗಳು

**ಶ್ರೀ ಶ್ರೀ ಈಶ್ವರಾನಂದಪುರಿ ಸ್ವಾಮಿಗಳು**

ಶ್ರೀ ಕಾಗಿನೆಲೆ ಕನಕಗುರುಪೀಠ, ಹೊಸದುರ್ಗ

ನಿಮ್ಮ 'ಬಂಡಿ ಬಂದಾವು ಬಾಳೆ ವನದಾಗೆ' ಜಾನಪದ ಕೃತಿಗೆ 2010 ನೇ ಸಾಲಿನ ಶ್ರೇಷ್ಠ ಪುಸ್ತಕವೆಂದು ಪದ್ಯ ಪ್ರಾಕಾರದಲ್ಲಿ, ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಲಭಿಸಿರುವುದಕ್ಕೆ ಮೊದಲಿಗೆ ಅಭಿನಂದನೆ. ಜಾನಪದವನ್ನು ಒಂದು ಶಿಸ್ತಾಗಿ ಅಧ್ಯಯನಕ್ಕೆ ತೊಡಗಿಸಿಕೊಂಡಿರುವ ನಿಮಗೆ, ಆ ಕ್ಷೇತ್ರ ಚೆನ್ನಾಗಿಯೇ ಪಳಗಿದೆ. ಇದೇ ಕ್ಷೇತ್ರದಲ್ಲಿ ಮುನ್ನಡೆಯಿರಿ. ಶುಭಾಶಯಗಳು.

**- ಡಾ|| ಶ್ರೀಕಂಠ ಕೂಡಿಗೆ,**

ಹಿರಿಯ ಜಾನಪದ ವಿದ್ವಾಂಸ, ಶಿವಮೊಗ್ಗ

ಬಂಡಿ ಬಂದಾವು ಬಾಳೆ ವನದಾಗೆ ನಿಮ್ಮ ಜಾನಪದ ಕಥನ ಗೀತೆಗಳ ಕೃತಿಯನ್ನು ಕುತೂಹಲಕ್ಕೆ ಅವಲೋಕಿಸಿದೆ. ಕ್ಷೇತ್ರಕಾರ್ಯ ನಿಂತೇ ಹೋಗಿದೆ, ಹೊಸ ಸಂಗ್ರಹವೇ ಬರುತ್ತಿಲ್ಲ ಅನ್ನುವವರ ನಡುವೆ, ನೀವೆಷ್ಟು ಎತ್ತರದಲ್ಲಿ ನಿಲ್ಲುತ್ತೀರಿ. ತುಂಬಾ ಅಚ್ಚುಕಟ್ಟಾಗಿ, ಅಪಾರ ಶ್ರದ್ಧೆಯಿಂದ ಸಂಗ್ರಹಿಸಿದ್ದೀರಿ. ಇಲ್ಲಿನ ಕೆಲವು ಗೀತೆಗಳು ನನ್ನನ್ನು ಇನ್ನೂ ಐವತ್ತು ವರ್ಷ ಹಿಂದಕ್ಕೆ ಕರೆದುಕೊಂಡು ಹೋಯಿತು. ಹಾಡುವ, ಕುಣಿಯುವ ಮನಸ್ಥಿತಿ ತಂದೊದಗಿಸಿತು. ಚಿಕ್ಕಣ್ಣ ನಿಜಕ್ಕೂ ಒಳ್ಳೆಯ ಕೆಲಸ ಮಾಡಿರುವಿರಿ. ಶಹಭಾಷ್

- **ಡಾ|| ಎಂ.ಪಿ. ಮಂಜಪ್ಪ ಶೆಟ್ಟಿ,** ಜಾನಪದ ವಿದ್ವಾಂಸರು, ಮೈಸೂರು

## ದಶಕದ ಹಿರಿಮೆ

ಜುಂಜಪ್ಪನ ಕಾವ್ಯದ ನೆಲೆ ಸಿರಾ ತಾಲ್ಲೂಕು ಬಯಲು ಸೀಮೆ, ಈ ನೆಲ ಅಪರೂಪದ ಜುಂಜಪ್ಪನ ಕಾವ್ಯನ್ನೇ ಸೃಷ್ಟಿಸಿದೆ, ಎಂದರೆ ಮತ್ತೆಷ್ಟು ಜಾನಪದ ಸತ್ವ, ಸಿರಿಸಂಪತ್ತು ಈ ನೆಲದಲ್ಲಿದ್ದೀತು, ಎಂಬುದಕ್ಕೊಂದು ಪುರಾವೆ ಈ ಬಗೆಯ ಅಪೂರ್ವ ಜನಪದ ಕಾವ್ಯಗಳೇ ಸಾಕ್ಷಿ. ಮಾಗೋಡು ರಂಗನಾಥನ ಕಾವ್ಯ, ಚಿತ್ರದೇವರ ಕಾವ್ಯ, ವಿವಿಧ ಜಾನಪದ ಆಚವಣೆ, ನಂಬಿಕೆ, ಒಗಟು ಹೀಗೆ ಅನೇಕ ಜನಪದ ಸಂಸ್ಕೃತಿ, ಸಿರಾ ತಾಲ್ಲೂಕಿನಲ್ಲಿ ಹಾಸುಹೊಕ್ಕಾಗಿದೆ. ಇಂಥ ಜಾನಪದ ಸಂಸ್ಕೃತಿ ನೆಲದಲ್ಲಿ ಅದಕ್ಕೊಂದು ಅಧ್ಯಯನ, ಪ್ರದರ್ಶನ, ಪ್ರವಾಸದ ಅವಕಾಶ ಮಾಡಿಕೊಟ್ಟ ಸಂಸ್ಥೆ, ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ, 1998 ರ ಆಗಸ್ಟ್ 20 ರಂದು ಈ ಪ್ರತಿಷ್ಠಾನ ಅಸ್ತಿತ್ವಕ್ಕೆ ಬಂದು, ತುಮಕೂರು ಜಿಲ್ಲೆಯ ಹಲವು ಜನಪದ ಕಲಾವಿದರನ್ನು, ರಾಷ್ಟ್ರಮಟ್ಟದ ಪ್ರಸಾರ, ಪ್ರದರ್ಶನಕ್ಕೆ ವೇದಿಕೆ ಒದಗಿಸಿದ ಹಿರಿಮೆ ಈ ಸಂಸ್ಥೆಗಿದೆ. ದೆಹಲಿ, ಮುಂಬಯಿ, ಕೊಟ್ಟಾಯಂ, ಹೈದರಾಬಾದ್ ಮತ್ತಿತರ ಕಡೆ ಬೇರೆ ಬೇರೆ ಸಾಂಸ್ಕೃತಿಕ ಸಂಸ್ಥೆ, ಸರ್ಕಾರದ ಯೋಜನೆಗಳಲ್ಲಿ ಸಿರಾ ಸೀಮೆಯ ಕಲಾವೈಭವ ವಿಜೃಂಭಿಸಲು ಪ್ರೇರಕವಾಗಿದೆ.

ಪ್ರತಿವರ್ಷ ಗಡಿನಾಡ ಜಾನಪದ ಸಂಪನ್ನ ರಾಷ್ಟ್ರೀಯ ಪ್ರಶಸ್ತಿ, ಪುರಸ್ಕಾರ ನೀಡುತ್ತಾ ಕಲಾವಿದರನ್ನು ಉತ್ತೇಜಿಸುತ್ತಿರುವ, ಈ ಅಪರೂಪದ ಜಾನಪದ ಕೇಂದ್ರ ಪ್ರಧಾನವಾಗಿ ಸಂಶೋಧನಾ ಕೇಂದ್ರವಾಗಿದೆ. ಬುಡಕಟ್ಟು ಸಂಸ್ಕೃತಿಗೆ ಸಂಬಂಧಿಸಿದ ಅಲಕ್ಷಿತ, ಅಪರೂಪದ ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು, ಈ ಸಂಸ್ಥೆ ಪ್ರಕಟಿಸಿರುವುದು ಸಾಂಸ್ಕೃತಿಕ, ಲೋಕ ಮರೆಯಬಾರದ ಸಾಧನೆ. ಇದೆಲ್ಲದರ ರೂವಾರಿ, ಪ್ರಾಧ್ಯಾಪಕ ಜಾನಪದ ತಜ್ಞ ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ. ಈ ಕೇಂದ್ರದ ಮೂಲಕ, ಸಿರಾ ಸೀಮ ಮರೆಯಬಾರದ ಕೊಡುಗೆ ನೀಡಿದ್ದಾರೆ.

- **ಪಿ.ಮಂಜುನಾಥ್**, ಪ್ರಜಾವಾಣಿ, 24.07.2011

ಸಿರಾ

# ಚಾರಿತ್ರಿಕ ಮಹಾ ಗದ್ಯ ಕಥನ

ಜುಂಜಪ್ಪ ಸಮಗ್ರ ಕಥಾವಳಿ ದೇಶೀ ಸಂಸ್ಕೃತಿಯ ಅದ್ಭುತ ಅನನ್ಯ ಸಂಕಥನ. ಕರ್ನಾಟಕ ಜನಪದ ಮಹಾಕಾವ್ಯ ಪರಂಪರೆಯಲ್ಲಿ ಈ ತನಕ ಪ್ರಕಟವಾಗಿರುವ ಜನಪದ ಕಾವ್ಯಗಳೆಲ್ಲವೂ ಪದ್ಯಗಂಧಿ ಕಾವ್ಯಮಾದರಿಯವು. ಆದರೆ ಡಾ|| ಚಿಕ್ಕಣ್ಣ ಯಣ್ಣೆಕಟ್ಟೆಯವರ ಜುಂಜಪ್ಪನ ಈ ಕಥಾವಳಿ ಹೆಸರೇ ಹೇಳುವಂತೆ ಗದ್ಯಮಾದರಿ. ಇದೊಂದು ಕರ್ನಾಟಕ ಕನ್ನಡ ಜನಪದ ಕಾವ್ಯಲೋಕದ ಹೊಸ ಪ್ರಯತ್ನ. ಮೊದಲ ಸಾಧನೆಯೂ ಹೌದು.

ನನಗೆ ತಿಳಿದಂತೆ ದೇವನೂರು ಮಹಾದೇವರನ್ನು ಬಿಟ್ಟರೆ ಒಂದು ಪ್ರಾದೇಶಿಕ ಭಾಷೆಯನ್ನು ಗದ್ಯದಲ್ಲಿ ಇಷ್ಟೊಂದು ಚೆನ್ನಾಗಿ ಕಟ್ಟಿಕೊಟ್ಟಿದ್ದು ಇತ್ತೀಚಿನ ಸಂದರ್ಭದಲ್ಲಿ ಇದೇ ಮೊದಲು. ದಕ್ಷಿಣ ಕರ್ನಾಟಕದ ತುಮಕೂರು ಪರಿಸರದ ಭಾಷೆಯನ್ನು ಬಹು ನೆಲೆಯಲ್ಲಿ ಕಟ್ಟಿಕೊಟ್ಟ ಪ್ರಯತ್ನ. ಆ ಯಶಸ್ಸು ರೋಮಾಂಚನಕಾರಿ, ಅದ್ಭುತ ಪ್ರಯೋಗ. ಜನಪದ ಭಾಷಾ ಸೊಗಡನ್ನು ಆಯಾಯ ಪಾತ್ರಗಳ ಹಿನ್ನೆಲೆಯಲ್ಲಿಯೇ ಸೆರೆಹಿಡಿದ ರೀತಿ ಈ ಕಥನವನ್ನು ಬಹುಬೇಗ ಓದಿ ಮುಗಿಸುವ ತಂತ್ರ ಕುತೂಹಲಕಾರಿಯಾಗಿದೆ. ಓದುಗರಲ್ಲಿಯೂ ರೋಮಾಂಚನವನ್ನುಂಟುಮಾಡುತ್ತದೆ.

**- ಪ್ರೊ|| ಶ್ಯಾಮಸುಂದರ ಕೋಚಿ,**
ಪ್ರಾಂಶುಪಾಲರು, ಗ್ರೇಡ್-2,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಾ